
ಡಾ. ಎಂ. ಎಂ. ಕಲಬುರ್ಗಿ
ಸಮಗ್ರ ಸಾಹಿತ್ಯ

ಸಂಪುಟ ೨೪

ಕಾವ್ಯ ಸಾಹಿತ್ಯ : ಭಾಗ-೩



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೨೪ : ಅನ್ಯ ಸಾಹಿತ್ಯ : ಭಾಗ-[illegible]

- [illegible]
- [illegible]

❖

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. [illegible]

ಧಾರವಾಡ

[illegible] ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ
ವಿಜಯಪುರ
[illegible]

[illegible]

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ–೨೪ : ಕಾವ್ಯ ಸಾಹಿತ್ಯ : ಭಾಗ–೬

❖

- ಹೊಸ ಕುಮಾರರಾಮನ ಸಾಂಗತ್ಯ
- ಹಳೆಯ ಕುಮಾರರಾಮನ ಸಾಂಗತ್ಯ

❖

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. ಹನುಮಂತ ಮೇಲಿನಮನಿ

ಧಾರವಾಡ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೧೯

COMPLETE WORK OF DR. M.M.KALBURGI

VOLUME - 24 : KAVYA SAHITY : BHAGA-6

Edited by : Dr. Hanumant Melinamani, Dharwad

Published by : Dr. P.G. Halakatti Research Centre
B.L.D.E. Association, Vijayapur, Karnatak

First Edition : 2019
Pages : xxxvi + 722=758

Copies: 1000
Price Rs: 400/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Sarsawatidevi Bhagawati, Dharwad.
Printer : The PrintPoint, No. 9/8 6th Cross, 4th Main, Rajajinagar, Industrial Town, Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೨೪-ಕಾವ್ಯ ಸಾಹಿತ್ಯ : ಭಾಗ-೬

ಸಂಪಾದಕರು : ಡಾ. ಹನುಮಂತ ಮೇಲಿನಮನಿ, ಧಾರವಾಡ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ

ಪ್ರಥಮ ಮುದ್ರಣ: ೨೦೧೯
ಪುಟಗಳು: xxxvi + ೭೨೨=೭೫೮

ಪ್ರತಿಗಳು: ೧೦೦೦
ಬೆಲೆ ರೂ: ೪೦೦/-

❖❖

ಮುಖಪುಟ ವಿನ್ಯಾಸ: ಕೆ. ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಮುದ್ರಣ: **ಪ್ರಿಂಟ್ ಪಾಯಿಂಟ್**, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ, ಇಂಡಸ್ಟ್ರಿಯಲ್ ಟೌನ್, ಬೆಂಗಳೂರು-೫೬೦೦೪೪. ಫೋನ್ : ೯೭೩೯೦ ೬೭೩೫೯

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಲಹಾ ಸಮಿತಿ

❖

ಗೌರವಾಧ್ಯಕ್ಷರು

ಡಾ. ಎಂ. ಬಿ. ಪಾಟೀಲ, ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

ಶ್ರೀ ಜಿ. ಕೆ. ಪಾಟೀಲ, ವಿಜಯಪುರ

ಕಾರ್ಯದರ್ಶಿಗಳು

ಡಾ. ಎಂ. ಎಸ್. ಮದಭಾವಿ, ವಿಜಯಪುರ

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ, ಧಾರವಾಡ

ಯೋಜನಾ ಸಂಯೋಜಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

❖

ಸಲಹಾ ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಶ್ರೀ ಶ್ರೀವಿಜಯ ಕಲಬುರ್ಗಿ, ಧಾರವಾಡ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು

❖❖

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಂಪಾದಕ ಸದಸ್ಯರು

❖

ಡಾ. ಗುರುಲಿಂಗ ಕಾಪಸೆ, ಧಾರವಾಡ

ಡಾ. ವೀರಣ್ಣ ರಾಜೂರ, ಧಾರವಾಡ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

ಡಾ. ಬಿ.ವ್ಹಿ. ಶಿರೂರ, ಹುಬ್ಬಳ್ಳಿ

ಡಾ. ಎಂ.ಎಸ್. ಮದಭಾವಿ, ವಿಜಯಪುರ

ಡಾ. ಎಸ್.ಕೆ. ಕೊಪ್ಪಾ, ಇಂಡಿ

ಡಾ. ಗುರುಪಾದ ಮರಿಗುದ್ದಿ, ಸಂಕೇಶ್ವರ

ಡಾ. ಕೆ. ರವೀಂದ್ರನಾಥ, ಹಂಪಿ

ಡಾ. ಎಫ್. ಟಿ. ಹಳ್ಳಿಕೇರಿ, ಹಂಪಿ

ಡಾ. ವಿ. ಎಸ್. ಮಾಳಿ, ಹಾರೂಗೇರಿ

ಡಾ. ಪಿ. ಕೆ. ರಾಠೋಡ, ಧಾರವಾಡ

ಡಾ. ಮಲ್ಲಿಕಾರ್ಜುನ ಮೇತ್ರಿ, ವಿಜಯಪುರ

ಶ್ರೀ ಶಶಿಧರ ತೋಡ್ಕರ, ಧಾರವಾಡ

ಡಾ. ವಿ. ಡಿ. ಐಹೊಳ್ಳಿ, ವಿಜಯಪುರ

ಡಾ. ಸರಸ್ವತಿದೇವಿ ಭಗವತಿ, ಧಾರವಾಡ

ಡಾ. ಹನುಮಂತ ಮೇಲಿನಮನಿ, ಧಾರವಾಡ

❖❖

*

ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು–ನುಡಿ–ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ–ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ–ಅದ್ವಿತೀಯ–ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ–ಪಾಂಡಿತ್ಯ–ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

ಜೀವನ–ಸಾಧನೆ :

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ–ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ

ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು

ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟೀಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

ಸಾಹಿತ್ಯ ರಾಶಿ :

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ–ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ–ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ–ನಡುಗನ್ನಡ–ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ ಸಂಶೋಧನೆ, ವಿಮರ್ಶೆ, ನಾಡು–ನುಡಿ–ಸಂಸ್ಕೃತಿ–ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ–ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ–ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ–ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ

ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ' ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ-೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ-ಧಾರ್ಮಿಕ-ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ-೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ-ವ್ಯಾಪ್ತಿ-ವಿಧಾನ-ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು, ವ್ಯಾಖ್ಯಾನಮುಖಿ

ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು-ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ-ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ, ೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೪೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ-ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

ಸೃಜನ ಸಾಹಿತ್ಯ

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :

ಶಾಸನ ಸಾಹಿತ್ಯ

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

ಶಾಸ್ತ್ರ ಸಾಹಿತ್ಯ

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ.

ಸಂಶೋಧನ ಸಾಹಿತ್ಯ

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ–೧, ೧೮. ಶಾಸನ ವ್ಯಾಸಂಗ–೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ–ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

ಜಾನಪದ ಸಾಹಿತ್ಯ

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜನಪದ ಮಾರ್ಗ.

ಲೇಖನ ಸಂಪುಟ

೩೦. ಮಾರ್ಗ–೧, ೩೧. ಮಾರ್ಗ–೨, ೩೨. ಮಾರ್ಗ–೩, ೩೩. ಮಾರ್ಗ–೪, ೩೪. ಮಾರ್ಗ–೫, ೩೫. ಮಾರ್ಗ–೬, ೩೬. ಮಾರ್ಗ–೭, ೩೭. ಮಾರ್ಗ–೮.

ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):

ಶಾಸನ ಸಾಹಿತ್ಯ

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

ದಾಖಲು ಸಾಹಿತ್ಯ

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧.

ವಚನ ಸಾಹಿತ್ಯ

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ–೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ–೨, ೫೦. ವಚನ ಸಂಕಲನ ಸಂಪುಟ–೪, ೫೧. ವಚನ ಸಂಕಲನ ಸಂಪುಟ–೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ–೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

ಕಾವ್ಯ ಸಾಹಿತ್ಯ

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ-೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ-೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ-೩.

ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):

ಲೇಖನ ಸಂಗ್ರಹಗಳು :

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ-೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ-೨, ೯೧. ಬಸವ ಮಾರ್ಗ-೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧-೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

ಜೀವನ ಚರಿತ್ರೆಗಳು

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ-೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು-ಬರೆಹ, ೧೦೭. ಶಿವಾನುಭವ ಪತ್ರಿಕೆ.

ಅಭಿನಂದನ ಗ್ರಂಥಗಳು

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

ಇತರೆ

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ-ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದ ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ-ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಜೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ

ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ–ಕರ್ನಾಟಕ ಸರ್ಕಾರದ ಧನ ಸಹಾಯದಿಂದ–ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀ ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪-೭-೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ–ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩-೯-೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ–ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಸಾಮೂಹಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ-ವರದಿಗಳು, ಆಡಿಯೋ-ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

I. ಸ್ವತಂತ್ರ ಕೃತಿ ಸಂಪುಟಗಳು

ಸಂಪುಟ ೧ : ಶಾಸನ ಸಾಹಿತ್ಯ **–ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

ಸಂಪುಟ ೨ : ಶಾಸ್ತ್ರ ಸಾಹಿತ್ಯ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

ಸಂಪುಟ ೩ : ಸಂಶೋಧನ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

ಸಂಪುಟ : ೪ ಜನಪದ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ

೨. ಜನಪದ ಮಾರ್ಗ

ಸಂಪುಟ : ೫ ಸೃಜನ ಸಾಹಿತ್ಯ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ನೀರು ನೀರಡಿಸಿತ್ತು (ಕವನ ಸಂಕಲನ)

೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)

೩. ಕೆಟ್ಟಿತ್ತು ಕಲ್ಯಾಣ (ನಾಟಕ)

೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)

೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

II. ಸಂಪಾದಿತ ಕೃತಿ ಸಂಪುಟಗಳು

ಸಂಪುಟ ೬ : ಶಾಸನ ಸಾಹಿತ್ಯ **–ಸಂ. ಡಾ. ಎಸ್. ಕೆ. ಕೊಪ್ಪಾ**

೧. ಶಾಸನ ಸಂಪದ

೨. ಧಾರವಾಡ ಜಿಲ್ಲೆಯ ಶಾಸನ ಸೂಚಿ

೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ

೪. ಧಾರವಾಡ ತಾಲೂಕಿನ ಶಾಸನಗಳು

೫. ಶಾಸನ ಸೂಕ್ತಿಸುಧಾರ್ಣವ

ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧ **–ಸಂ. ಡಾ. ಪಂಡಿತ ರಾಠೋಡ**

೧. ಕರ್ನಾಟಕದ ಕೈಫಿಯತ್ತುಗಳು

ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨ **–ಸಂ. ಡಾ. ಪಂಡಿತ ರಾಠೋಡ**

೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
ಜೈನ ಬಸದಿ ಹಸ್ತಪ್ರತಿಸೂಚಿ

೨. ವಚನ ಸಾಹಿತ್ಯ ಆಕರ ಕೋಶ

೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

ಸಂಪುಟ : ೯ ವಚನ ಸಾಹಿತ್ಯ : ಭಾಗ–೧ **–ಸಂ. ಡಾ. ವೀರಣ್ಣ ರಾಜೂರ**

೧. ಬಸವಸ್ತೋತ್ರದ ವಚನಗಳು

೨. ಬಸವಣ್ಣನವರ ವಚನ ಸಂಪುಟ

ಸಂಪುಟ : ೧೦ ವಚನ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಲಿಂಗ ಕಾಪಸೆ**

೧. ಚೆನ್ನಬಸವಣ್ಣನವರ ಷಟ್ಸ್ಥಲವಚನ ಮಹಾಸಂಪುಟ

೨. ಸಿದ್ಧರಾಮಯ್ಯದೇವರ ವಚನಗಳು

ಸಂಪುಟ : ೧೧ ವಚನ ಸಾಹಿತ್ಯ : ಭಾಗ–೩ **–ಸಂ. ಡಾ. ವೀರಣ್ಣ ರಾಜೂರ**

೧. ಸಂಕೀರ್ಣ ವಚನ ಸಂಪುಟ

ಸಂಪುಟ : ೧೨ ವಚನ ಸಾಹಿತ್ಯ : ಭಾಗ–೪ **–ಸಂ. ಡಾ. ವೀರಣ್ಣ ರಾಜೂರ**

೧. ವಚನ

ಸಂಪುಟ : ೧೩ ವಚನ ಸಾಹಿತ್ಯ : ಭಾಗ–೫ **–ಸಂ. ಡಾ. ವೀರಣ್ಣ ರಾಜೂರ**

೧. ಶೂನ್ಯಸಂಪಾದನೆ

ಸಂಪುಟ : ೧೪ ವಚನ ಸಾಹಿತ್ಯ : ಭಾಗ–೬ **–ಸಂ. ಡಾ. ವೀರಣ್ಣ ರಾಜೂರ**

೧. ಪರಮಾನಂದ ಸುಧೆ

೨. ಏಕೋತ್ತರಶತಸ್ಥಲ

ಸಂಪುಟ : ೧೫ ವಚನ ಸಾಹಿತ್ಯ : ಭಾಗ–೭ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೧

ಸಂಪುಟ : ೧೬ ವಚನ ಸಾಹಿತ್ಯ : ಭಾಗ–೮ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೨

ಸಂಪುಟ : ೧೭ ವಚನ ಸಾಹಿತ್ಯ : ಭಾಗ–೯ **–ಸಂ. ಶಶಿಧರ ತೋಡ್ಕರ**

೧. ವಚನ ಸಂಕಲನ–೪

೨. ವಚನ ಸಂಕಲನ–೬

೩. ವಚನ ವರ್ಷ

ಸಂಪುಟ : ೧೮ ವಚನ ಸಾಹಿತ್ಯ : ಭಾಗ–೧೦ **–ಸಂ. ಡಾ. ವೀರಣ್ಣ ರಾಜೂರ**

೧. ವಚನಶಾಸ್ತ್ರಸಾರ(ಸಂಪುಟ–೧)

ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ–೧ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೧

ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೨

ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ–೩ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಮಲ್ಲಿನಾಥ ಪುರಾಣ ಸಂಗ್ರಹ

೨. ಶಬ್ದಮಣಿದರ್ಪಣ ಸಂಗ್ರಹ

೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ

೪. ಆದಯ್ಯನ ಲಘುಕೃತಿಗಳು

೫. ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ–೪ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ಷಟ್‌ಸ್ಥಲ ಶಿವಾಯಣ

೨. ಶಿವಯೋಗ ಪ್ರದೀಪಿಕಾ

ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ–೫ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ತಗರ ಪವಾಡ

೨. ಸಿದ್ಧಮಂಕ ಚರಿತೆ

೩. ಗುಂಡಬಸವೇಶ್ವರ ಪುರಾಣ

೪. ಕೊಡೆಕಲ್ಲ ವಚನ ವಾಕ್ಯ

ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ–೬ **–ಸಂ. ಡಾ. ಹನುಮಂತ ಮೇಲಿನಮನಿ**

೧. ಹೊಸ ಕುಮಾರರಾಮನ ಸಾಂಗತ್ಯ

೨. ಹಳೆಯ ಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ–೭ **–ಸಂ. ಡಾ. ಹನುಮಂತ ಮೇಲಿನಮನಿ**

೧. ಕೊಮಾರ ರಾಮಯ್ಯನ ಚರಿತ್ರೆ

೨. ಬಾಲರಾಮನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ–೮ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಸಿರುಮಣ ನಾಯಕನ ಸಾಂಗತ್ಯ

೨. ಸಿರುಮನ ಚರಿತೆ

೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ–೯ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ
೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ–೧೦ **–ಸಂ. ಡಾ. ಎಂ ಎಸ್. ಮದಭಾವಿ**

೧. ಕಿತ್ತೂರ ಸಂಸ್ಥಾನ ಸಾಹಿತ್ಯ–೧
೨. ಕಿತ್ತೂರ ಸಂಸ್ಥಾನ ಸಾಹಿತ್ಯ–೨
೩. ಕಿತ್ತೂರ ಸಂಸ್ಥಾನ ಸಾಹಿತ್ಯ–೩

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ–೧ **–ಸಂ. ಡಾ. ಎಂ ಎಸ್. ಮದಭಾವಿ**

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ
೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ
೩. ಮಡಿವಾಳಪ್ಪ ಸಾಸನೂರ ಬರೆಹ–ಬದುಕು

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ–೨ **–ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ**

೧. ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ–೩ **–ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ**

೧. ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ–೪ **–ಸಂ. ಡಾ. ವಿ.ಎಸ್. ಮಾಳಿ**

೧. ಅರಟಾಳ ರುದ್ರಗೌಡರ ಚರಿತ್ರೆ

III. ಲೇಖನ ಸಾಹಿತ್ಯ ಸಂಪುಟಗಳು(ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ–೧ **–ಸಂ. ಡಾ. ಕೆ. ರವೀಂದ್ರನಾಥ**

ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ–೨ **–ಸಂ. ಡಾ. ಕೆ. ರವೀಂದ್ರನಾಥ**

ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ–೩ **–ಸಂ. ಡಾ. ಕೆ. ರವೀಂದ್ರನಾಥ**
ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ–೪ **–ಸಂ. ಡಾ. ಕೆ. ರವೀಂದ್ರನಾಥ**
ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ–೫ **–ಸಂ. ಡಾ. ಕೆ. ರವೀಂದ್ರನಾಥ**
ವ್ಯಕ್ತಿಚಿತ್ರಣ–ಮುನ್ನುಡಿ–ಬೆನ್ನುಡಿ
ಅರಿಕೆ–ಭಾಷಣ–ಸಂದರ್ಶನ

IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೧ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಚಿತ್ರ **–ಡಾ. ವಿ.ಡಿ. ಐಹೊಳ್ಳಿ**

ಸಂಪುಟ : ೩೯–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೨ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಪತ್ರ–ವರದಿಗಳು **–ಡಾ. ವಿ.ಡಿ. ಐಹೊಳ್ಳಿ**

ಸಂಪುಟ : ೪೦–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೩ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಆಡಿಯೋ–ವಿಡಿಯೋ **–ಡಾ. ವಿ.ಡಿ. ಐಹೊಳ್ಳಿ**

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು, ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ–೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು–ಪುನರುಕ್ತಿಕಾರಣವಾಗಿ– ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ

ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು. ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು–ಅವು ಆಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ–ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು–ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು–ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ–ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ–ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ–ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು

ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ-ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು-ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ-ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ-ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

ಕೃತಜ್ಞತೆಗಳು :

'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ' ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ 'ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ'ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ

ಮಾನ್ಯ ಶ್ರೀ ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ–ವಿಶ್ವಾಸ–ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಶ್ರೀ ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಹಾಗೂ ಈ ಯೋಜನೆಯ ಕಾರ್ಯದರ್ಶಿಗಳಾದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ–ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ–ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲಿಕರಾದ ಬಸವರಾಜ ಪಾಟೀಲ(ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

ಸಂಯೋಜಕರ ನುಡಿ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ–ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.
- ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.
- ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

- ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.
- ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ–ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.
- ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.
- ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.
- ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.
- ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ

ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ, ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ಹನುಮಂತ ಮೇಲಿನಮನಿ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ(ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

ಸಂಪಾದಕರ ನುಡಿ

ಡಾ. ಹನುಮಂತ ಮೇಲಿನಮನಿ

ಡಾ. ಎಂ. ಎಂ. ಕಲಬುರ್ಗಿಯವರು ಸ್ಥಳೀಯ ಚರಿತ್ರೆಯ ಆಕರಶೋಧಕರಲ್ಲಿ ಪ್ರಮುಖರು. ಕನ್ನಡ ನಾಡಿನ ವೀರಮೌಲ್ಯ, ಸಂಸ್ಕೃತಿಯನ್ನು ಪ್ರಸಾರಮಾಡಿದ 'ವ್ಯಕ್ತಿ ಚರಿತ್ರೆ'ಗೆ ಇಮ್ಮಡಿ ಚಿಕ್ಕಭೂಪಾಲ, ಸಿರುಮಣ ನಾಯಕ, ನಿಂಬಸಾಮಂತ, ಕುಮಾರರಾಮನಂಥವರು ವಸ್ತುವಾಗಿ ಪರಿಣಮಿಸಿದ್ದಾರೆ. ಇವರೆಲ್ಲ ಕಾಲನ ಗರ್ಭದಲ್ಲಿ ಕಳೆದು ಹೋಗಬಾರದೆಂಬ ಆಶಯದ ಹಿನ್ನೆಲೆಯಲ್ಲಿ ಇವರನ್ನು ಕುರಿತು ರಚನೆಯಾದ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ(೧೯೭೭), ನಿಂಬಸಾಮಂತ ಚರಿತೆ(೧೯೮೧), ಸಿರುಮಣನಾಯಕನ ಸಾಂಗತ್ಯ(೧೯೮೩), ಸಿರುಮನ ಚರಿತೆ(೧೯೯೧), ಗೊಲ್ಲ ಸಿರುಮನ ಚರಿತೆ(೧೯೯೪), ಹೊಸ ಕುಮಾರರಾಮನ ಸಾಂಗತ್ಯ(೨೦೦೦), ಕೊಮಾರರಾಮಯ್ಯನ ಚರಿತೆ(೨೦೦೧), ಬಾಲಕುಮಾರರಾಮನ ಸಾಂಗತ್ಯ(೨೦೦೭), ಹಳೆಯ ಕುಮಾರರಾಮನ ಸಾಂಗತ್ಯ(೨೦೦೮)ಕೃತಿಗಳನ್ನು ಡಾ. ಕಲಬುರ್ಗಿಯವರು ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಸ್ಥಳೀಯ ಸಾಹಿತ್ಯದ ಬಗ್ಗೆ ಆಸ್ತಕಿ ತಾಳುವ ಮೂಲಕ, ಕರ್ನಾಟಕದ ರಾಜಕೀಯ ಇತಿಹಾಸದ ಕಂದರವನ್ನು ಬಹುಮಟ್ಟಿಗೆ ತುಂಬಲು ಪ್ರಯತ್ನಿಸಿದ್ದಾರೆ.

'ಅಲಕ್ಷಿತ ಸಾಹಿತ್ಯ'ವನ್ನು 'ಲಕ್ಷಿತ ಸಾಹಿತ್ಯ'ವನ್ನಾಗಿಸುವಲ್ಲಿ, ಸ್ಥಳೀಯ ಉಪೇಕ್ಷಿತ ಸಾಹಿತ್ಯದ ಬಗೆಗೆ ಅವರ ಪ್ರಯತ್ನ ವಿಶೇಷವಾಗಿತ್ತು. ಈ ಕೆಲಸಕ್ಕಾಗಿ ನಾಡಿನ ಅನೇಕ ಹಸ್ತಪ್ರತಿಗಳನ್ನು ಅವರು ಶೋಧಿಸಿ-ಸಂಪಾದಿಸಿ-ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಅಂತಹ ಮಹತ್ವದ ಕೃತಿಗಳಲ್ಲಿ ೧. ಕೊಮಾರ ರಾಮಯ್ಯನ ಚರಿತ್ರೆ, ೨. ಬಾಲರಾಮನ ಸಾಂಗತ್ಯ ಪ್ರಮುಖವಾದವು. ಅವುಗಳ ವಿವರ ಹೀಗಿದೆ :

ಕುಮಾರರಾಮ ವೀರನಾಗಿ ಹುಟ್ಟಿ, ವೀರನಾಗಿ ಬೆಳೆದು, ವೀರನಾಗಿ ಮಡಿದ. ಈತ ಕನ್ನಡಿಗರ ಮನಸ್ಸಿನಲ್ಲಿ ಸಾಂಸ್ಕೃತಿಕ ವೀರನಾಗಿ ಬದುಕಿದ್ದಾನೆ. ಈತನ ಚರಿತ್ರೆಗೆ ಸಂಬಂಧಿಸಿ ಐದು ಕೃತಿಗಳು ರಚನೆಗೊಂಡಿವೆ. ಅವು ಹೀಗಿವೆ :

೧. ಹಳೆಯ ಕುಮಾರರಾಮನ ಸಾಂಗತ್ಯ - ಪಾಂಚಾಳ ಗಂಗ

೨. ಹೊಸ ಕುಮಾರರಾಮನ ಸಾಂಗತ್ಯ - ಅನಾಮಧೇಯ ಕವಿ - ೧

೩. ಕೊಮಾರ ರಾಮಯ್ಯನ ಚರಿತ್ರೆ – ಅನಾಮಧೇಯ ಕವಿ – ೨

೪. ಬಾಲರಾಮನ ಸಾಂಗತ್ಯ – ಮಹಾಲಿಂಗಸ್ವಾಮಿ

೫. ರಾಮನಾಥ ಚರಿತೆ – ನಂಜುಂಡ

ಈ ಐದು ಕೃತಿಗಳಲ್ಲಿ ನಾಲ್ಕು ಕೃತಿ(ರಾಮನಾಥ ಚರಿತೆಯನ್ನು ಹೊರತುಪಡಿಸಿ)ಗಳನ್ನು ಡಾ. ಕಲಬುರ್ಗಿಯವರು ಸಂಪಾದಿಸಿ ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಈ ಎಲ್ಲ ಕಾವ್ಯಗಳ ಕಥಾ ವಸ್ತು ಒದೇ ಆಗಿದ್ದರೂ ನಿರೂಪಣೆಯಲ್ಲಿ ವ್ಯತ್ಯಾಸವಿದ್ದು, ಎಲ್ಲವೂ ಸ್ವತಂತ್ರ ಕೃತಿಗಳಾಗಿಯೇ ಮೂಡಿಬಂದಿರುವುದು ವಿಶೇಷ.

***

ಹೊಸ ಕುಮಾರರಾಮನ ಸಾಂಗತ್ಯ :

ಮಧ್ಯಕಾಲೀನ ಕರ್ನಾಟಕದ ವೀರಜೀವನವನ್ನು, ಅದಕ್ಕೆ ಪೂರಕವಾದ ಎಲ್ಲ ಮುಖಗಳನ್ನು ಚಿತ್ರಿಸುವ ಮಹತ್ವದ ಕೃತಿಯಾಗಿದೆ, "ಹೊಸ ಕುಮಾರರಾಮನ ಸಾಂಗತ್ಯ."

೨೦೦೦ರಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಪ್ರಸಾರಾಂಗದಿಂದ ಪ್ರಕಟವಾದ ಇದರಲ್ಲಿ ೧೨ ಸಂಧಿ, ೨, ೪೮೩ ಪದ್ಯಗಳಿವೆ.

ಕುಮಾರರಾಮ ರಾಜಕೀಯ ಕ್ಷೇತ್ರದ ವ್ಯಕ್ತಿ; ಸಾಂಸ್ಕೃತಿಕ ಮೌಲ್ಯ ಸಾರಿದ ವೀರ. ಈತ ಬದುಕಿದ್ದು ವೀರಮೌಲ್ಯ ಪ್ರಸಾರವಾಗುತ್ತಿದ್ದ ಕಾಲದಲ್ಲಿ(೧೨೧೩). ಆ ಕಾಲದಲ್ಲಿ ಸಾಹಿತ್ಯದ ಶ್ರೇಷ್ಠತೆಯ ಮೇಲಿನ ಒತ್ತು ಕಡಿಮೆಯಾಗಿ, ಅದು ಮೌಲ್ಯಪ್ರಸಾರ ಮತ್ತು ಜನಪ್ರಿಯತೆಗಳ ಕಡೆಗೆ ಸರಿಯಿತು.

ಪ್ರಾಚೀನ ಕರ್ನಾಟಕದಲ್ಲಿ ಪುರಾಣ, ಚರಿತ್ರೆ, ಪುರಾಣದ ಚರಿತ್ರೀಕರಣ, ಚರಿತ್ರೆಯ ಪುರಾಣೀಕರಣ ಇತ್ಯಾದಿ ಸಾಹಿತ್ಯಿಕ ಪ್ರಯೋಗಗಳು ಉದ್ದಕ್ಕೂ ನಡೆದುಬಂದಿವೆ. ಆದಿಪುರಾಣವು ಪುರಾಣ, ವಿಕ್ರಮಾರ್ಜುನ ವಿಜಯವು ಪುರಾಣದ ಚರಿತ್ರೀಕರಣ, ಕಂಠೀರವ ನರಸರಾಜ ವಿಜಯವು ಚರಿತ್ರೆ, ಸಿದ್ಧರಾಮ ಚರಿತೆಯು ಚರಿತ್ರೆಯ ಪುರಾಣೀಕರಣ. ಈ ಅಂಶವನ್ನು ಗಮನಿಸಿ ಹೇಳುವುದಾದರೆ ಕುಮಾರರಾಮನ ಕಥೆಯು ಗಂಗ, ಅನಾಮಧೇಯ ಕವಿ–೧ ಇವರಲ್ಲಿ ಚರಿತ್ರೆಯಾಗಿ, ನಂಜುಂಡ, ಅನಾಮಧೇಯ ಕವಿ–೨, ಮಹಾಲಿಂಗಸ್ವಾಮಿಗಳಲ್ಲಿ ಚರಿತ್ರೆಯ ಪುರಾಣೀಕರಣವಾಗಿ ಹುಟ್ಟು ಪಡೆದಿದೆ. ಅಂದರೆ ಕುಮಾರರಾಮನನ್ನು ಮಹಾಲಿಂಗಸ್ವಾಮಿಯಲ್ಲಿ ಪರಶುರಾಮನೊಂದಿಗೆ, ನಂಜುಂಡನಂತೆ ಈ ಅನಾಮಧೇಯ ಕವಿ–೨ರಲ್ಲಿ ಅರ್ಜುನನೊಂದಿಗೆ ಸಮೀಕರಿಸಲಾಗಿದೆ. ಇದರಿಂದ ಕನ್ನಡಿಗರ ಮನಸ್ಸಿನಲ್ಲಿ ಕುಮಾರರಾಮ 'ಲೌಕಿಕ ವೀರನಾಗಿ' ಹುಟ್ಟಿ, 'ಪುರಾಣವೀರನಾಗಿ' ಬೆಳೆದುದು ಸ್ಪಷ್ಟವಾಗುತ್ತದೆ ಎಂದು ಡಾ. ಕಲಬುರ್ಗಿಯವರು ಹೇಳಿದ್ದಾರೆ. 'ಹೊಸಕುಮಾರ ರಾಮನ ಸಾಂಗತ್ಯ'ದ ಕರ್ತೃ ಈವರೆಗೆ ತಿಳಿದುಬಂದಿಲ್ಲ. ಇದರಲ್ಲಿ ಪಾಂಚಾಳ ಗಂಗನ ಕೃತಿಯ ಪದ್ಯಗಳಿದ್ದರು, ಬಹಳಷ್ಟು ಭಿನ್ನವಾಗಿರುವುದರಿಂದ ಇದು ಬೇರೊಬ್ಬನ ಸ್ವತಂತ್ರ್ಯ ಕೃತಿಯಾಗಿದೆ.

ಈ ಕೃತಿಯನ್ನು ಸಂಪಾದಿಸಲು ಎರಡು ಹಸ್ತಪ್ರತಿಗಳ ಸಹಾಯವನ್ನು ಪಡೆದುಕೊಂಡಿದ್ದಾರೆ. ಕಂಪಲಿ ಶ್ರೀ ದೊಡ್ಡನಗೌಡರ ಪ್ರತಿ. ಇದು ೯. ೫" x ೬" ಅಳತೆಯ ದಪ್ಪನೆಯ ಕಾಗದದಪ್ರತಿ. ಪೂರ್ಣ; ಅಕ್ಷರ ಸ್ಪಷ್ಟವಾಗಿವೆ. ಭಾಷೆ ಅಶುದ್ಧವಾಗಿದೆ. ಈಗ ಇದು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಾಂಡಾರದಲ್ಲಿದೆ. ಇದರ ನಂ. ೩೨೪.

ಕಂಪಲಿಯ ಸೋಮೇಶ್ವರ ದೇವಾಲಯ ಪ್ರತಿ. ಇದು ೮. ೫"x ೭" ಅಳತೆಯ ದಪ್ಪನೆಯ ಕಾಗದಪ್ರತಿ, ಅಪೂರ್ಣವಾಗಿದೆ. ಅಕ್ಷರ ಸ್ಪಷ್ಟವಾಗಿದೆ. ಭಾಷೆ ಅಶುದ್ಧವಾಗಿದೆ. ಈಗ ಇದು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಾಂಡಾರದ ನಂ. ೪೧೦ದಲ್ಲಿದೆ.

ಸೋಮೇಶ್ವರ ದೇವಾಲಯ ಪ್ರತಿಯ ವಿಸ್ತೃತ ಪಾಠವೇ ದೊಡ್ಡನಗೌಡರ ಪ್ರತಿಯ ಪಾಠವಾಗಿದೆ. ಹೀಗಾಗಿ ಒಂದರಲ್ಲಿಯ ೧೦ ಸಂಧಿ ಇನ್ನೊಂದರಲ್ಲಿ ೧೨ ಸಂಧಿಯಾಗಿ ಹಿಗ್ಗಿದೆ. ಓರುಗಲ್ಲು ಯುದ್ಧವು, ಓರುಗಲ್ಲ ಪ್ರವೇಶ ಮತ್ತು ಓರುಗಲ್ಲ ಯುದ್ಧವೆಂದು ೨ ಸಂಧಿಗಳಾಗಿ ನಿಂತಿದೆ. 'ಕುಮ್ಮಟದುರ್ಗ ನಿರ್ಮಾಣ' ಸಂಧಿ ಹೊಸದಾಗಿ ಸೇರಿದೆ. (ಹುಳಿಯಾರ ಯುದ್ಧ)ಇತ್ಯಾದಿ ಉಪಘಟನೆಗಳೂ ಇಲ್ಲಿವೆ.

ಹೀಗೆ ಈ ಕೃತಿಯ ಸಂಧಿಸಂಖ್ಯೆ, ಪದ್ಯಸಂಖ್ಯೆ ಎರಡೂ ಹಸ್ತಪ್ರತಿಗಳಲ್ಲಿ ವ್ಯತ್ಯಾಸದಿಂದ ಕೂಡಿವೆ. ಪೂರ್ಣವಾಗಿರುವ ದೊಡ್ಡನಗೌಡರ ಪ್ರತಿಯನ್ನು ಆಧಾರವಾಗಿಟ್ಟುಕೊಂಡು, ಅಪೂರ್ಣವಾಗಿರುವ ಸೋಮೇಶ್ವರ ದೇವಾಲಯ ಪ್ರತಿಯನ್ನು ಪಾಠಾಂತರಕ್ಕಾಗಿ ಬಳಸಿಕೊಳ್ಳಲಾಗಿದೆ. ಇವೆರಡರಲ್ಲಿಯ ಪಾಠವು ಅಧಿಕ ವ್ಯತ್ಯಾಸ, ಅಸ್ತವ್ಯಸ್ಥವಾಗಿರುವುದರಿಂದ ಭಿನ್ನಪಾಠಗಳನ್ನು ಗುರುತಿಸಲು ಹೋಗಿಲ್ಲ. ಆದುದರಿಂದ ಒಂದು ಪ್ರತಿಯನ್ನು, ಇನ್ನೊಂದು ಪ್ರತಿಯ ನೆರವಿನಿಂದ ಪರಿಷ್ಕರಿಸಲಾಗಿದೆ. ಇವೆರಡೂ ಪ್ರತಿಗಳನ್ನು ಸೇರಿಸಿದರೂ ಶುದ್ಧಪಾಠ ನಿರ್ಣಯ ಸಾಧ್ಯವಿಲ್ಲದ ಸಂದರ್ಭದಲ್ಲಿ ಊಹೆಗೆ ಶರಣುಹೋಗಿ, ಚೌಕ ಕಂಸಿನಲ್ಲಿ ಅದನ್ನು ನಮೂದಿಸಲಾಗಿದೆ. ಇದನ್ನು ಮೀರಿಯೂ ಕೆಲವು ಪಾಠಸಮಸ್ಯೆಗಳು ಉಳಿದುಕೊಂಡಿವೆಯೆಂದು ಸಂಪಾದಕರು ತಿಳಿಸಿದ್ದಾರೆ.

ಕುಮಾರರಾಮನನ್ನು ಕುರಿತು ಪಾಂಚಾಳ ಗಂಗನ ಹೆಸರಿನಲ್ಲಿ ಸಿಗುವ (ಹಳೆಯ–ಹೊಸ) ೨೦–೨೫ ಪ್ರತಿಗಳಲ್ಲಿ ಕನಿಷ್ಟ ಎರಡು ಪ್ರತಿಗಳಾದರೂ ಒಂದನ್ನೊಂದು ಹೋಲುವುದಿಲ್ಲ. ಹೀಗಾಗಿ ಇಂದಿನ ಸಂದರ್ಭದಲ್ಲಿ ಇವುಗಳ ಮೂಲಪಾಠವನ್ನು, ಏಕೆ, ಮೂಲಕ್ಕೆ ಸಮೀಪವಾಗಿರುವ ಪಾಠವನ್ನೂ ನಿರ್ಣಯಿಸಲು ಸಾಧ್ಯವಿಲ್ಲವಾಗಿದೆ. ಆದುದರಿಂದ ಈ ಸಂಪಾದನೆಯು, ಎರಡು ಪ್ರತಿಗಳನ್ನು ಬಳಸಿಕೊಂಡು ಪಠ್ಯವು ಅರ್ಥವಾಗುವಂತೆ ಮಾಡಲಾಗಿದೆ.

***

ಗಮನಿಸಬೇಕಾದ ಸಂಗತಿಯೆಂದರೆ ರಾಮಯ್ಯನ 'ಚರಿತ್ರೆ'ಯನ್ನು 'ಪುರಾಣ' ಶಿಲ್ಪದಲ್ಲಿ ಅಳವಡಿಸುವ ಪ್ರಯತ್ನ ಮಾಡಿದುದು. 'ಆಧಾರವಿಡಿದು ಪೇಳಿದನಾಗ ಗಂಗಯ್ಯ' ಎಂಬ ಪದ್ಯದ ಮೂಲಕ ಈ ಧೋರಣೆಯನ್ನು ಸ್ಪಷ್ಟಪಡಿಸಿದ್ದಾನೆ. ಕೈಲಾಸದಲ್ಲಿ ಪಾರ್ವತಿಗೆ ಅಗೌರವ ತೋರಿದ ಅರ್ಜುನ ಗಣನಾಥನು ಕುಮಾರರಾಮನಾಗಿ, ರಂಭೆಯು ರತ್ನಾಜಿಯಾಗಿ ಜನಿಸಿದ 'ಸಮಸ್ತೀಕರಣ' ಪ್ರಯೋಗವಿಲ್ಲಿದೆ. ಪಾರ್ವತಿಯ ಆದೇಶದ ಮೇರೆಗೆ, ರಂಭೆಯು ಕುಮಾರರಾಮನ ಪರನಾರಿ

ಸೋದರವ್ರತ ನಾಶಪಡಿಸಲು ರತ್ನಾಜಿಯಾಗಿ ಹುಟ್ಟಿದಳೆಂಬ ಕಲ್ಪನೆಯು, ಪ್ರಭುಲಿಂಗಲೀಲೆಯ ಮಾಯಾದೇವಿಯ ಜನನದ ಅನುಕರಣೆಯಾಗಿದೆ. ಅದೇನೇ ಇದ್ದರೂ ಲೌಕಿಕ ವೀರನೊಬ್ಬನನ್ನು ಪುರಾಣವೀರನನ್ನಾಗಿಸುವ ಪ್ರಯತ್ನವಿಲ್ಲಿದೆ.

ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರರಾಮನ ಸಾಂಗತ್ಯ, ಕೊಮಾರ ರಾಮಯ್ಯನ ಚರಿತ್ರೆ, ಬಾಲರಾಮನ ಸಾಂಗತ್ಯಗಳಲ್ಲಿ ಸುಮಾರು ೩೦೦ ಪದ್ಯಗಳು ಸಮಾನವಾಗಿವೆ. ಇದಕ್ಕೆ ಸಹೃದಯರಿಗಿಂತ ಸೃಜನಶೀಲ ಕವಿಗಳೇ ಕಾರಣ. ಹೀಗಾಗಿ ಈ ನಾಲ್ಕೂ ಕೃತಿಗಳು ಶೂನ್ಯಸಂಪಾದನೆಯಂತೆ ಪರಿಷ್ಕಾರಗೊಂಡು ಸ್ವತಂತ್ರಕೃತಿ ರೂಪ ಪಡೆದಿವೆ.

***

ಹಳೆಯ ಕುಮಾರರಾಮನ ಸಾಂಗತ್ಯ :

ಜೀವಿತ ಕಾಲದಲ್ಲಿ ವೀರನಾಗಿ ಬಾಳಿ, ಮರಣೋತ್ತರ ಕಾಲದಲ್ಲಿ ಸಾಂಸ್ಕೃತಿಕ ವೀರನಾಗಿ, ಕೊನೆಗೆ ಪುರಾಣ ವೀರನಾಗಿ, ದೇವರಾಗಿ ಬೆಳಗಿದವ, ಬಾಲರಾಮ. ಪಂಚಾಳ ಗಂಗಯ್ಯ ಈತನನ್ನು ಕುರಿತು 'ಹಳೆಯ ಕುಮಾರರಾಮನ ಸಾಂಗತ್ಯ' ಎಂಬ ಕಾವ್ಯ ರಚಿಸಿದ್ದಾನೆ. ಈತನ ವಯುಕ್ತಿಕ ವಿವರಗಳು ಲಭ್ಯವಿಲ್ಲ. ಕವಿಚರಿತೆಕಾರರು ಉಲ್ಲೇಖಿಸಿರುವ ಕ್ರಿ. ಶ. ೧೬೫೦ ಈತನ ಕಾಲವೆಂದು ಸಂಪಾದಕರು ಒಪ್ಪಿಕೊಂಡಿದ್ದಾರೆ.

೨೦೦೮ರಲ್ಲಿ ಬೆಂಗಳೂರಿನ ಸಪ್ನ ಬುಕ್ ಹೌಸ್‌ನಿಂದ ಪ್ರಕಟವಾದ ಈ ಕೃತಿಯಲ್ಲಿ ೧೦ ಸಂಧಿ, ೧೭೭೪ ಪದ್ಯಗಳಿವೆ. ಇದು ಈಗಾಗಲೇ ಪ್ರಕಟವಾದ, ಹೊಸ ಕುಮಾರರಾಮನ ಸಾಂಗತ್ಯ(೨೦೦೦), ಕೊಮಾರ ರಾಮಯ್ಯನ ಚರಿತ್ರೆ(೨೦೦೧), ಬಾಲರಾಮನ ಸಾಂಗತ್ಯ(೨೦೦೭)ಗಳಿಗಿಂತ ಭಿನ್ನವಾಗಿದೆ. ಹತ್ತು ಸಂಧಿಗಳಲ್ಲಿ ನಿರೂಪಿತವಾದ ಕಥೆಯನ್ನು ಕೃತಿಯಾಗಿಸುವ ಧೋರಣೆ ಮುಂದುವರಿದುದನ್ನು ನೋಡಿದರೆ, ಇದು ನೇರವಾಗಿ ಕಥೆಯನ್ನು ಕೃತಿಯಾಗಿಸುವ ಧೋರಣೆ ಹೊಂದಿರುವುದು ಸ್ಪಷ್ಟವಾಗುತ್ತದೆ. ಅಂದರೆ ಎಡಬಲಗಳಲ್ಲಿ ಅಲ್ಲಿಷ್ಟು ಇಲ್ಲಿಷ್ಟು ಬೆಳೆಸಿರುವ ಮುಂದಿನ ಕವಿಗಳಿಗೆ ಅವಶ್ಯವಿರುವ ಕಥಾ ನೀಲನಕ್ಷೆಯನ್ನು ಬರೆದುಕೊಟ್ಟ ಪ್ರಥಮ ಶ್ರೇಯಸ್ಸು ಈ ಕೃತಿಗೆ ಸಲ್ಲುತ್ತದೆ. ಕವಿ ಗಂಗ ಈ ಕೃತಿ ರಚಿಸುವ ಮೊದಲು ಆಕರ ಸಾಮಗ್ರಿಯನ್ನು ಸಂಗ್ರಹಿಸಿದ್ದಾನೆ. ಗುತ್ತಿಯ ಜಗದಪ್ಪ, ಹಳೆಬೀಡ ಬಲ್ಲಾಳ, ಹುಳಿಯಾರ ಮಾರ, ನೇಮಿಖಾನರನ್ನು ರಾಮಯ್ಯ ಸೋಲಿಸಿದುದು, ರಾಮನಿಗೆ ೫ ಜನ ಹೆಂಡಿರಿದ್ದುದು, ದಿಲ್ಲಿಯ ಸುರಿತಾಳ, ಪ್ರತಾಪರುದ್ರ, ಹಮ್ಮೀರರಾಯ, ರಾಮದೇವ, ಪಾಂಡ್ಯರಾಜರನ್ನು ಸೆರೆಹಿಡಿದುದು, ಕಂಪಿಲನು ದೇವಗಿರಿ ಯಾದವರ ಸಾಮಂತನೆಂಬುದು ಇತ್ಯಾದಿ ಸಂಗತಿಗಳು ಈತನಿಗೆ ಗೊತ್ತಿವೆ. ಹೀಗಿದ್ದೂ ಸಂಗ್ರಹಿಸಿದ ಇವೇ ಮೊದಲಾದ ಘಟನೆಗಳಿಂದ ಮುಖ್ಯವಾದವುಗಳನ್ನು "ಆಯ್ಕೆ" ಮಾಡಿಕೊಳ್ಳುವಲ್ಲಿ ಔಚಿತ್ಯವನ್ನು "ಅಭಿವ್ಯಕ್ತಿ"ಯಲ್ಲಿ ಕಲಾನಿಷ್ಠತೆಯನ್ನು ತೋರಿದ್ದಾನೆ. ಮುಂದಿನವರು ತಮ್ಮ ಕಾವ್ಯಗಳನ್ನು ಎಷ್ಟೇ ನವೀಕರಿಸಿದರೂ ಈ ಕೃತಿಯ ಘಟನೆ ಮತ್ತು ಅಭಿವ್ಯಕ್ತಿಗಳಿಗೆ ಋಣಿಯಾಗುತ್ತಲೇ ನಡೆದಿದ್ದಾರೆ ಎಂಬ ಸಂಪಾದಕರು ಮಾತು ಸರಿ ಎನಿಸುತ್ತದೆ.

ಈ ಕೃತಿಯನ್ನು ಸಂಪಾದಿಸಲು "ಸಂಸ್ಕೃತ ಸಂಶೋಧನ ಸಂಸದ"ದ ಏಕೈಕ ತಾಳೆ ಪ್ರತಿಯನ್ನು ಬಳಸಲಾಗಿದೆ. ಈ ಪ್ರತಿಯ ಆಕಾರ ೧೫ "x ೨". ಇದು ತುಂಬ ಜೀರ್ಣವಾಗಿದೆ. ಅಂಚುಗಳು ಮುರಿದಿವೆ. ಗತಿಗಳ ಮೇಲೆ ಕಾಡಿಗೆ ಆವರಿಸಿ, ಅಕ್ಷರ ಮಸುಕಾಗಿವೆ.

ಭಾಷೆ ತುಂಬ ಅಶುದ್ಧ, ಅಕ್ಷರ ತಕ್ಕಮಟ್ಟಿಗೆ ಸುಂದರ, ಬರವಣಿಗೆಯಲ್ಲಿ ಲಿಪಿಕಾರನ ಅಧಿಕ ಹೊಣೆಗೇಡಿತನ ಕಂಡುಬರುತ್ತದೆ. ಅಲ್ಲಲ್ಲಿ ಬರೆದ ಪದ್ಯವನ್ನೇ ಮತ್ತೆ ಬರೆಯಲಾಗಿದೆ. ಕೆಲವೊಮ್ಮೆ ಪದ್ಯಗಳು ಲಿಪಿಕಾರನ ವಿಸ್ಮೃತಿಯಿಂದ ಬಿಟ್ಟು ಹೋದಂತಿದೆ ಎಂದು ಹಸ್ತಪ್ರತಿಯ ವಿವರವನ್ನು ಸಂಪಾದಕರು ನೀಡಿದ್ದಾರೆ.

ಈಗ ಕುಮಾರರಾಮನನ್ನು ಕುರಿತು ಐದು ಕಾವ್ಯಕೃತಿಗಳನ್ನು ಡಾ.ಎಂ.ಎಂ. ಕಲಬುರ್ಗಿಯವರು ಗುರುತಿಸಿದ್ದಾರೆ. ನಾಲ್ಕೂ ಕೃತಿ(ರಾಮನಾಥ ಚರಿತೆ ಹೊರತುಪಡಿಸಿ)ಗಳನ್ನು ಅವರೇ ಸಂಪಾದಿಸಿ ಪ್ರಕಟಿಸಿದ್ದಾರೆ. ಈ ಎಲ್ಲ ಕೃತಿಗಳ ವಸ್ತು ಒಂದೇ ಆದರೂ ಕೃತಿ ಸ್ವರೂಪ, ಕಥಾನಿರೂಪಣೆಯಲ್ಲಿ ವ್ಯತ್ಯಾಸಗಳಿವೆ. ಇವೆಲ್ಲ ಕಾವ್ಯಗಳು ಪಾಠಾಂತರಗಳೆನ್ನದೆ, ರೂಪಾಂತರ ಎಂದು ಕರೆದು, ಇವುಗಳಿಗೆ ಶೂನ್ಯಸಂಪಾದನೆಗಳಂತೆ ಸ್ವತಂತ್ರ ಸ್ಥಾನ ಕೊಡುವುದೇ ಸೂಕ್ತವೆನಿಸುತ್ತದೆ ಎಂದು ಡಾ. ಕಲಬುರ್ಗಿಯವರು ಪ್ರಸ್ತಾವನೆಯಲ್ಲಿ ವಿವರಿಸಿದ್ದಾರೆ.

***

"ಡಾ. ಎಂ.ಎಂ.ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ"ಯ ಅಡಿಯಲ್ಲಿ 'ಡಾ. ಎಂ.ಎಂ.ಕಲಬುರ್ಗಿಯವರ ಸಮಗ್ರ ಸಾಹಿತ್ಯ–ಸಂಪುಟ: ೨೪, ಕಾವ್ಯ ಸಾಹಿತ್ಯ–ಭಾಗ: ೬'ನ್ನು ಸಂಪಾದಿಸುವ ಅವಕಾಶ ದೊರೆತಿರುವುದು ನನ್ನ ಭಾಗ್ಯವೆಂದು ಭಾವಿಸುತ್ತೇನೆ. ಈ ಸಂಪುಟವನ್ನು ಸಂಪಾದಿಸಲು ಅವಕಾಶ ನೀಡಿದ 'ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ'ಯ ಗೌರವ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ, ಅಧ್ಯಕ್ಷರಾದ ಶ್ರೀ ಜಿ.ಕೆ.ಪಾಟೀಲ, ಕಾರ್ಯದರ್ಶಿಗಳಾದ ಡಾ. ಎಂ.ಎಸ್. ಮದಭಾವಿ, ಪ್ರಧಾನ ಸಂಪಾದಕರಾದ ಡಾ. ವೀರಣ್ಣ ರಾಜೂರ, ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ, ಡಾ. ಸರಸ್ವತಿದೇವಿ ಶಂ. ಭಗವತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಎಲ್ಲ ಸದಸ್ಯರನ್ನು ಪ್ರೀತಿಯಿಂದ ನೆನೆಯುತ್ತೇನೆ. ಈ ಸಂಪುಟದ ಅಕ್ಷರ ದೋಷಗಳನ್ನು ಸರಿಪಡಿಸುವಲ್ಲಿ ನೆರವಾದ ವಿದ್ಯಾರ್ಥಿಮಿತ್ರರಾದ ಶ್ರೀ ರಾಮಚಂದ್ರ ಪಡೆಸೂರ, ಶ್ರೀ ಸಂಗಮೇಶ ಕಜ್ಜಿಡೋಣಿ ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

❖❖

*

ಪರಿವಿಡಿ

ಹೊಸ ಕುಮಾರರಾಮನ ಸಾಂಗತ್ಯ

ಸಂಪಾದಕರು
ಎಂ. ಎಂ. ಕಲಬುರ್ಗಿ
ವೀರಣ್ಣ ರಾಜೂರ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ
೨೦೦೦

*

ಪ್ರಸ್ತಾವನೆ

'ಯುದ್ಧ' ಬದುಕಿನ ಅನಿವಾರ್ಯ ಕ್ರಿಯೆ. ಸಾಮ್ರಾಜ್ಯಕ್ಕೆ ಸಂಬಂಧಪಟ್ಟಂತೆ ಮೊದಲಿನಿಂದಲೂ ಕರ್ನಾಟಕದಲ್ಲೂ ಬೆಳೆದು ಬಂದ ಆಂತರಿಕ ಯುದ್ಧ, ಹೊರಗಿನಿಂದ ಬಂದ ಮುಸಲ್ಮಾನರ ದಾಳಿಯಿಂದಾಗಿ ಹೊಸರೂಪ ಪಡೆಯಿತು.

ಏಳನೆಯ ಶತಮಾನದಿಂದಲೂ ಉತ್ತರಭಾರತವನ್ನು ಮನಬಂದಂತೆ ಆಳಿದ ಮುಸಲ್ಮಾನರು, ೧೩ನೆಯ ಶತಮಾನದಲ್ಲಿ ದಕ್ಷಿಣಕ್ಕೂ ಇಳಿದುಬಂದು, ಇಲ್ಲಿಯ ಯಾದವ, ಹೊಯ್ಸಳವೆಂಬ ರಾಜಕೀಯ ಅನೈಕ್ಯತೆಯ ಲಾಭ ಪಡೆದುಕೊಂಡರು. ಈ ದಾಳಿ ಕನ್ನಡಿಗರಿಗೆ ಒಂದು ಹೊಸ ಅನುಭವ. ಈ ಮೊದಲು ಹಿಂದೂ ರಾಜರಲ್ಲಿ ಪರಸ್ಪರ ಜರುಗುತ್ತಲಿದ್ದ ಯುದ್ಧಗಳು 'ರಾಜಕೀಯ ದಾಳಿ' ಸ್ವರೂಪದವುಗಳಾಗಿದ್ದರೆ, ಹಿಂದೂ ಅಹಿಂದೂ ರಾಜರಲ್ಲಿ ಜರುಗಿದ ಈ ಯುದ್ಧಗಳು, ಹೆಚ್ಚಿನದಾಗಿ 'ಸಾಂಸ್ಕೃತಿಕ ದಾಳಿ' ಸ್ವರೂಪಕ್ಕೆ ತಿರುಗಿ, ಕನ್ನಡಿಗರನ್ನು ಕಂಗೆಡಿಸಿದವು. ಇಂಥ ದಾಳಿಗಳ ಅಂಗವಾಗಿ ಮುಸಲ್ಮಾನರಿಂದ ಘಟಿಸಿದ ಹಿಂದುಗಳ ಮತಾಂತರ, ದೇವಾಲಯಗಳ ನಾಶ ಇತ್ಯಾದಿ ಹೊಸ ಬಗೆಯ ದೌರ್ಜನ್ಯಗಳ ಸಂದರ್ಭದಲ್ಲಿ ಕಾಣಿಸಿಕೊಳ್ಳುತ್ತಾನೆ, ಕುಮಾರರಾಮ.

ಅಲ್ಲಾವುದ್ದೀನ್ ಖಿಲಜಿಯಿಂದ ಆರಂಭವಾಗಿ (೧೨೯೬), ಮಹಮ್ಮದ ಬೀನ್ ತುಘಲಕ್‌ನ ಸೇನಾಪತಿ ಮಲ್ಲಿಕ್ ಕಾಫರ್‌ನಿಂದ ಮುಂದುವರಿದ ಅನೇಕ ಸಲದ ಆಕ್ರಮಣಗಳಿಂದ ದಕ್ಷಿಣದ ಮೂರು ಮುಖ್ಯ ಸಾಮ್ರಾಜ್ಯಗಳಾದ ಇಂದಿನ ಮಹಾರಾಷ್ಟ್ರದ ದೇವಗಿರಿ ಯಾದವರು ೧೩೦೭ರಲ್ಲಿ, ಆಂಧ್ರಪ್ರದೇಶದ ಓರುಗಲ್ಲಿನ ಕಾಕತೀಯರು ೧೩೨೮ರಲ್ಲಿ ಕರ್ನಾಟಕದ ದ್ವಾರಸಮುದ್ರದ ಹೊಯ್ಸಳರು ೧೩೧೨ರಲ್ಲಿ ಕುಸಿದುಹೋದರು. ಅಂದರೆ ೧೨೧೨ರ ಹೊತ್ತಿಗೆ ಕನ್ನಡಿಗರಿಗೆ ರಾಜರಕ್ಷಣೆಯಿಲ್ಲದ ಅನಾಥಸ್ಥಿತಿ ಪ್ರಾಪ್ತವಾಯಿತು. ಈ ಮುಂದಿನ ವರ್ಷಗಳಲ್ಲಿ ಹೊಸಮಲೆದುರ್ಗ–ಕುಮ್ಮಟಗಳ ಕಂಪಿಲದೇವರಾಯ, ಮಗ ಕುಮಾರರಾಮ ಅನಾಥರಕ್ಷಣೆಯ ಹೊಣೆ ಹೊತ್ತರು. ಒಂದು ಕಾಲಕ್ಕೆ ದೇವಗಿರಿ ಯಾದವರ ಸಾಮಂತರಾಗಿದ್ದ ಇವರು, ಮೊದಮೊದಲು ಎಡಬಲದ ಹೊಯ್ಸಳ ಕಾಕತೀಯರೊಡನೆ ಹೋರಾಡಿ, ಆ ಎರಡೂ ಮನೆತನಗಳು ನಾಶವಾದ ಬಳಿಕ, ಏಕೈಕ ರಕ್ಷಕರೆಂಬಂತೆ ಉತ್ತರದ ತುಘಲಕ್‌ನೊಂದಿಗೆ ಹೋರಾಟ ಕೈಗೆತ್ತಿಕೊಂಡರು. ಇವರಲ್ಲಿ ವೀರೋಚಿತವಾಗಿ ವರ್ತಿಸಿ,

ಮಾದಿಗಿತ್ತಿಯ ಕೈಯಿಂದ ದುರಂತ ಮರಣದಲ್ಲಿ ಅಸ್ತಂಗತನಾದವ (ಕ್ರಿ. ಶ. ೧೩೨೭) ಕುಮಾರರಾಮ. ಅನಾಥ ರಕ್ಷಣೆಯ ಹೊಣೆ, ದುರಂತ ಮರಣದ ಕೊನೆ ಕಾರಣವಾಗಿ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಚಿರಂಜೀವಿಯೆನಿಸಿರುವ, ಈ ಕುಮಾರರಾಮ.

ಈ ಅವಿಸ್ಮರಣಿಯ ಘಟನೆ ಕನ್ನಡಿಗರ ಮನಸ್ಸನ್ನು ಆಳವಾಗಿ ಕಲಕಿತು. ಆಮೇಲೆ ಅಸ್ತಿತ್ವಕ್ಕೆ ಬಂದ ವಿಜಯನಗರ ಸಾಮ್ರಾಜ್ಯದ ಸಶಬ್ದತೆಯನ್ನೂ ಭೇದಿಸಿ, ಇದು ಅನೇಕ ರೂಪದ ಭೌತಿಕ, ಅಭೌತಿಕ ಆಕರ ಸಾಮಗ್ರಿಗಳಲ್ಲಿ ಬಿಚ್ಚಿಕೊಂಡಿತು. ಹೀಗಾಗಿ ಇವನನ್ನು ಕುರಿತು, ರಾಜಕೀಯ, ಸಾಮಾಜಿಕ, ಆಚರಣಾತ್ಮಕ, ಭಾಷಿಕ ಅವಶೇಷಗಳು ನೂರಾರು ಸಂಖ್ಯೆಯಲ್ಲಿ ಹುಟ್ಟಿಕೊಂಡವು. ಸಮಕಾಲೀನಗೊಳ್ಳುತ್ತಲೂ ಬಂದವು. ಸಾಲದುದಕ್ಕೆ ತೆಲಗು, ತಮಿಳು, ತುಳು ಭಾಷೆಗಳಲ್ಲಿಯೂ ಆಕರಗಳು ಸೃಷ್ಟಿಯಾಗುತ್ತ ಬಂದವು.

ರಾಜಕೀಯ ಅವಶೇಷಗಳನ್ನು ಕುರಿತು ಹೇಳುವುದಾದರೆ ಇಂದಿಗೂ ಕುಮ್ಮಟದುರ್ಗದಲ್ಲಿ ಕೋಟೆ, ರಾಮನ ಡೋಣೆ, ಕಾಟಪ್ಪನ ಗುಡ್ಡ, ಬೊಲ್ಲನ ಗುಂಡು, ಬಾದೂರನ ಬಂಡೆ, ಮಾದಿಗ ಹಂಪಯ್ಯನ ಗುಡ್ಡಗಳನ್ನು, ಹೊಸಮಲೆ ದುರ್ಗದಲ್ಲಿ (ಇಂದಿನ ರಾಮಗಡ) ಕೋಟೆ, ಬೊಲ್ಲನ ಬಂಡೆ, ಟಗತಿನ ಬಯಲು, ಬೊಲ್ಲನ ಹೆಜ್ಜೆ, ಕಾಟಣ್ಣನ ಶಿಲ್ಪ, ಕುಮಾರರಾಮನ ಹಟ್ಟಿ, ಮಾದಿಗ ಹಂಪಯ್ಯನ ಕಲ್ಲು, ಹರಿಯಾಲದೇವಿ ಬಚ್ಚಲು, ರತ್ನಾಜಿ ಮಡಿಲು ಇತ್ಯಾದಿ ಸ್ಮಾರಕಗಳು ಸಿಗುತ್ತವೆ. ಹೊಳಲಗುಂದಿ (ಆದವಾನಿ ತಾಲೂಕು)ಯ ಸಿದ್ಧೇಶ್ವರ ದೇವಾಲಯದ ಗೋಡೆಯ ಮೇಲೆ ಕುಮಾರರಾಮನ ಚೆಂಡಿನಾಟದ ಬಣ್ಣದ ಚಿತ್ರ ಬಿಡಿಸಲಾಗಿದ್ದು, ಇದರ ಕೆಳಗೆ 'ರಾಮಣ್ಣ' ಎಂಬ ಬರಹವೂ ಇದೆ. ಇದು ೧೮ನೆಯ ಶತಮಾನದ ಕಲಾಕೃತಿ.

ಸಾಮಾಜಿಕವಾಗಿ ಹೇಳುವುದಾದರೆ ರತ್ನಾಜಿ ಪರಂಪರೆಯ 'ದೊಂಬರು' ಹೆಸರಿನ ಒಂದು ಜನಾಂಗವೇ ಶಿವಮೊಗ್ಗ ಜಿಲ್ಲೆಯಲ್ಲಿ ಕಂಡುಬರುತ್ತದೆ.

ಆಚರಣೆಗೆ ಬಂದರೆ ಕುಮ್ಮಟ ಮತ್ತು ಹೊಸಮಲೆದುರ್ಗಗಳಲ್ಲಿ ಕುಮಾರರಾಮನ ಗುಡಿಗಳಿವೆ. ದರೋಜಿ ಸಮೀಪದ ರಾಮಪುರ ಮತ್ತು ಕುಮ್ಮಟದುರ್ಗಗಳಲ್ಲಿ ಕುಮಾರರಾಮನ ಜಾತ್ರೆ, ಅನೇಕ ಬಿಡಿ ಆಚರಣೆಗಳು ಕಂಡುಬರುತ್ತವೆ. ಕುಮಾರರಾಮನ ರುಂಡದ ಮೆರವಣಿಗೆ, ಪೂಜೆ, ಯುದ್ಧದ ಅಣುಕು ಇತ್ಯಾದಿಗಳು ಇಲ್ಲಿ ಇನ್ನೂ ಜೀವಂತವಾಗಿವೆ. ನಾಡಿನ ಅನೇಕ ಕಡೆಗಳಲ್ಲಿ ರಾಮಸ್ವಾಮಿ, ಕುಮಾರರಾಮದೇವರು, ರಾಮೇಶ್ವರ ಹೆಸರುಗಳಿಂದ ಈತ ಪೂಜೆಗೊಳ್ಳುತ್ತಲಿದ್ದಾನೆ.

ಭಾಷಿಕ ರಚನೆಗಳು ಅಂದಿನಿಂದ ಇಂದಿನ ವರೆಗೂ ಹುಟ್ಟುತ್ತಲಿವೆ. ಇದು ಮೌಖಿಕ ಮತ್ತು ಲಿಖಿತವೆಂದೂ, ಮೌಖಿಕದಲ್ಲಿ ವದಂತಿಕ, ಸಾಹಿತ್ಯಕವೆಂದೂ, ಲಿಖಿತದಲ್ಲಿ ದಾಖಲಾತ್ಮಕ, ಸಾಹಿತ್ಯಿಕವೆಂದೂ ಬಿಚ್ಚಿಕೊಂಡಿದೆ. ಈ ಎಲ್ಲ ಶಾಖೋಪಶಾಖೆಗಳ ಶೋಧ, ಸಂಗ್ರಹ, ಅಧ್ಯಯನಗಳ ಸಮಗ್ರ ಯೋಜನೆಯೊಂದು ಅಸ್ತಿತ್ವಕ್ಕೆ ಬರಬೇಕಾಗಿದೆ. ಈ ಸಮಗ್ರದ ಒಂದು ಭಾಗವೆಂಬಂತೆ ಕುಮಾರರಾಮನನ್ನು ಕುರಿತು ಲಿಖಿತ ಸಾಹಿತ್ಯ ಕೃತಿಗಳು ಹೀಗೆ ಹುಟ್ಟಿಕೊಂಡಿವೆ.

ಕುಮಾರರಾಮನನ್ನು ಕುರಿತ ಲಿಖಿತ ಸಾಹಿತ್ಯ

ಕುಮಾರರಾಮನನ್ನು ಕುರಿತು ಪ್ರಾಸಂಗಿಕ ಉಲ್ಲೇಖದ ಕಾವ್ಯಗಳು, ಸ್ವತಂತ್ರ ಕಾವ್ಯಗಳೂ ಕಂಡುಬರುತ್ತವೆ. ಚೆನ್ನಬಸವ ಪುರಾಣ, ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ನವರತ್ನ ಮಾಲಿಕೆ ಮೊದಲಾದ ಕೃತಿಗಳಲ್ಲಿ ಕುಮಾರರಾಮನ ಪ್ರಾಸಂಗಿಕ ಪ್ರಸ್ತಾಪ ಬರುತ್ತದೆ.

ನೇರವಾಗಿ ಕುಮಾರರಾಮನನ್ನು ಕುರಿತು ಹುಟ್ಟಿದ ಸ್ವತಂತ್ರ ಕಾವ್ಯಗಳ ಸಂಖ್ಯಾನಿರ್ಣಯ ಇನ್ನೂ ಚರ್ಚೆಯ ವಸ್ತುವಾಗಿ ಉಳಿದಿದೆ. ಈ ವಿಷಯವಾಗಿ ಮೊದಲು ತಲೆ ಕೆಡಿಸಿಕೊಂಡವರು ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು. ಅವರ ಪ್ರಕಾರ ಈತನನ್ನು ಕುರಿತು ಕಾವ್ಯ ಬರೆದವರು ೫ ಜನ. ೧. ನಂಜುಡ, ೨. ಪಾಂಚಾಳ ಗಂಗ, ೩. ಗಂಗ ೪. ನಾಗಸಂಗಯ್ಯ ೫. ಮಹಾಲಿಂಗಸ್ವಾಮಿ. ಈ ಸಮಸ್ಯೆಯನ್ನು ಪಿಎಚ್.ಡಿ. ಅಧ್ಯಯನದ ಮೂಲಕ ಸಮಗ್ರವಾಗಿ ಕೈಗೆತ್ತಿಕೊಂಡ ಡಾ. ವರದರಾಜರಾವ್ ಅವರು, ಪಾಂಚಾಳಗಂಗ, ಗಂಗ, ನಾಗಸಂಗಯ್ಯ ಹೆಸರಿನಲ್ಲಿರುವ ಕೃತಿಗಳು ಒಂದೇ ಪಠ್ಯದ ವಿಸ್ತೃತ, ಸಂಕೋಚ ಆವೃತ್ತಿಗಳೆಂದು ಹೇಳುತ್ತ, ಇವುಗಳ ಸಂಖ್ಯೆಯನ್ನು ೫ ರಿಂದ ೩ಕ್ಕೆ ಇಳಿಸಿದ್ದಾರೆ.

ಇಂಥ ಸಂದರ್ಭದಲ್ಲಿ ಈ ಸಮಸ್ಯೆಗೆ ಕೈ ಹಾಕಿದ ನಮಗೆ ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ನಲ್ಲಿ ಹಳೆಯ 'ಕುಮಾರರಾಮನ ಸಾಂಗತ್ಯ'[೧] ಹೆಸರಿನ ತಾಳೆಗರಿ ಪ್ರತಿ, ಕಂಪಲಿಯ ಶ್ರೀ ದೊಡ್ಡನಗೌಡರ ಮನೆಯಲ್ಲಿ 'ಹೊಸ ಕುಮಾರರಾಮನ ಸಾಂಗತ್ಯ'[೨] ಹೆಸರಿನ ಕಾಗದ ಪ್ರತಿ ಲಭ್ಯವಾದವು. ಇವು ಲಿಪಿಕಾರರು ಬರೆದ ಹೆಸರುಗಳಾಗಿದ್ದು, ಇವೆರಡರ ಸಂಧಿ, ಪದ್ಯ ಸಂಖ್ಯೆ ಮತ್ತು ಅಂತರ್ಗತ ವಿಷಯ ಹೀಗಿದೆ:

ಹಳೆಯ ಕುಮಾರರಾಮನ ಸಾಂಗತ್ಯ

(ಮೇಲುಕೋಟೆ ಸಂಸ್ಕೃತ ಸಂಶೋಧನ ಸಂಸತ್ ಪ್ರತಿ)

ಸಂಧಿ	ಪದ್ಯ ಸಂಖ್ಯೆ
೧. ಹೊಸಮಲೆದುರ್ಗ ವರ್ಣನೆ	೯೩
೨. ಕುಮ್ಮಟದುರ್ಗ ವರ್ಣನೆ	೮೦
೩. ಬಹಾದೂರನು ಕುಮ್ಮಟಕೆ ಬಂದುದು	೮೦
೪. ನೇಮಿಯ ಕಾಳಗ	೧೪೩
೫. ಓರುಗಲ್ಲ ಯುದ್ಧ	೨೫೬
೬. ನೀರಾಟ–ಚಂಡಿನಾಟ–ರತ್ನಾಳ್ವಿನ ಮೋಹ	೪೪೩

---

೧. ಈ ಹಸ್ತಪ್ರತಿಯ ಆರಂಭದಲ್ಲಿ "ಹಳೆ ಕುಮಾರರಾಮನ ಚರಿತೆ" ಎಂಬ ಪಾಠವಿದೆ. ಇದನ್ನು ನಾವು "ಹಳೆಯ ಕುಮಾರರಾಮನ ಸಾಂಗತ್ಯ" ಎಂದು ಇಟ್ಟುಕೊಂಡಿದ್ದೇವೆ.

೨. ಈ ಹಸ್ತಪ್ರತಿಯ ಅಂತ್ಯದಲ್ಲಿ "ಹೊಸ ರಾಮ ಸಾಂಗತ್ಯ", "ಹೊಸ ರಾಮನ ಸಾಂಗತ್ಯ" ಎಂಬ ಪಾಠಗಳಿವೆ. ಇವನ್ನು ನಾವು "ಹೊಸ ಕುಮಾರರಾಮನ ಸಾಂಗತ್ಯ" ಎಂದು ಇಟ್ಟುಕೊಂಡಿದ್ದೇವೆ.

೭.	ನೆಲಮಾಳಿಗೆಯಲ್ಲಿ ಕುಮಾರರಾಮ	೨೦೮
೮.	ನೇಮಿಯ ಕಾಳಗ-ಸೋಲು	೧೬೩
೯.	ಮಾದಿಗಿತ್ತಿ ಕಾಳಗ	೧೮೦
೧೦.	ತೆಲುಗರ ಸಂಚು-ರಾಮನ ಮರಣ	೧೫೪
	ಒಟ್ಟು	೧೮೦೦

ಹೊಸ ಕುಮಾರರಾಮನ ಸಾಂಗತ್ಯ
(ಕಂಪಲಿ ಶ್ರೀ ದೊಡ್ಡನಗೌಡರ ಪ್ರತಿ)

	ಸಂಧಿ	ಪದ್ಯ ಸಂಖ್ಯೆ
೧.	ದೇವಗಿರಿ ಯಾದವರಲ್ಲಿ ಮುಮ್ಮಡಿಸಿಂಗ	೯೯
೨.	ರಾಯದುರ್ಗದಲ್ಲಿ ಮುಮ್ಮಡಿಸಿಂಗ-ಕಂಪಿಲ	೧೦೨
೩.	ಹೊಸಮಲೆಯಲ್ಲಿ ಕಂಪಿಲ	೧೦೩
೪.	ಗುತ್ತಿಯ ಜಗದಪ್ಪನೊಡನೆ ಕಾಳಗ	೮೯
೫.	ಓರುಗಲ್ಲ ಪ್ರವೇಶ	೧೪೭
೬.	ಓರುಗಲ್ಲ ಯುದ್ಧ	೧೩೭
೭.	ಶೂಲದ ಹಬ್ಬ-ರತ್ನಾಜಿ ವ್ಯಾಮೋಹ	೧೧೨
೮.	ಕುಮ್ಮಟದುರ್ಗ ನಿರ್ಮಾಣ	೧೦೦
೯.	ನೀರಾಟ-ಚೆಂಡಿನಾಟ-ರತ್ನಾಳಿ ಮೋಹ	೫೪೦
೧೦.	ನೆಲಮಾಳಿಗೆಯಲ್ಲಿ ಕುಮಾರರಾಮ	೨೫೮
೧೧.	ನೇಮಿಯ ಕಾಳಗ - ಸೋಲು	೪೬೨
೧೨.	ಮಾದಗಿತ್ತಿ ಕಾಳಗ-ರಾಮನ ವೀರಮರಣ	೩೧೩
	ಒಟ್ಟು	೨೪೮೯

ಈ ಎರಡೂ ಯಾದಿಯಿಂದ ಇವುಗಳ ವ್ಯತ್ಯಾಸ ತಕ್ಕಮಟ್ಟಿಗೆ ಸ್ಪಷ್ಟವಾಗುತ್ತದೆ. ಹಳೆಯ ಕುಮಾರರಾಮನ ಸಾಂಗತ್ಯದ ಕಥೆ ನೇರವಾಗಿದೆ. ಹೊಸ ಕುಮಾರರಾಮನ ಸಾಂಗತ್ಯದ ಆರಂಭದಲ್ಲಿ ಮುಮ್ಮಡಿಸಿಂಗ ದೇವಗಿರಿ ಯಾದವರಲ್ಲಿ ರಾಜಸೇವೆಗೆ ನಿಂತನೆಂಬ, ಅಲ್ಲಿಂದ ಮಲೆಪಲ್ಲಿ ದೇಶದ ರಾಯದುರ್ಗದಲ್ಲಿ ಆಳಿದನೆಂಬ ಎರಡು ಸಂಧಿಗಳನ್ನು ಹೊಸದಾಗಿ ಸೇರಿಸುವ ಮೂಲಕ ಕಥೆಯನ್ನು ಒಂದಿಷ್ಟು ಹಿಂದಕ್ಕೆ ಒಯ್ಯಲಾಗಿದೆ. ಬಾದೂರನು ಕುಮ್ಮಟದುರ್ಗಕ್ಕೆ ಬಂದ ವಿವರವನ್ನು ನೇಮಿಯ

ಮೊದಲನೆಯ ಕಾಳಗವನ್ನು ಕೈಬಿಟ್ಟು ಶೂಲದ ಹಬ್ಬದ ವಿವರವನ್ನು ಹೊಸದಾಗಿ ಸೇರಿಸಲಾಗಿದೆ. ಕುಮ್ಮಟದುರ್ಗದ ವರ್ಣನೆ ಹಳೆಯ ಕುಮಾರರಾಮನ ಸಾಂಗತ್ಯದಲ್ಲಿ ೨ನೆಯ ಸಂಧಿಯಾಗಿ ಬಂದರೆ, ಹೊಸ ಕುಮಾರರಾಮನ ಸಾಂಗತ್ಯದಲ್ಲಿ ೮ನೆಯ ಸಂಧಿಯಷ್ಟು ದೂರ ಬಂದಿದೆ. ಇನ್ನೂ ಕೆಲವು ಸಣ್ಣ ಪುಟ್ಟ ಘಟನೆಗಳನ್ನು (ರಾಮದೇವರಾಯನ ಆಸ್ಥಾನದಲ್ಲಿ ಚಾಮಿದೇವನ ಡೊಂಬರಾಟ, ರತ್ನಾಜಿಯ ತವರುಮನೆ ವಿವರ ಇತ್ಯಾದಿ) ಅಲ್ಲಲ್ಲಿ ಹೆಚ್ಚಿಗೆ ಸೇರಿಸಲಾಗಿದೆ. ಸುಮಾರು ೩೦೦ ಪದ್ಯಗಳು ಎರಡಲ್ಲಿಯೂ ಸಮಾನವಾಗಿವೆ. ಹೀಗಿದ್ದೂ ಕೃತಿಶಿಲ್ಪ ಹೊಸಪದ್ಯಗಳ ಪ್ರಮಾಣ ಇತ್ಯಾದಿಗಳನ್ನು ಗಮನಿಸಿದರೆ ಇವೆರಡೂ ಸ್ವತಂತ್ರ ಕೃತಿಗಳೇ ಆಗಿವೆಯೆಂಬುದು ಸ್ಪಷ್ಟವಾಗುತ್ತದೆ.

ಈ ಎರಡೂ ಕೃತಿಗಳಿಗೆ ಕವಿ ಇಟ್ಟ ಹೆಸರೇನು? ಎಂಬುದು ಈಗ ಬಗೆಹರಿಯದ ಸಮಸ್ಯೆಯಾಗಿದೆ. ಆದರೆ ಪ್ರಾಚೀನ ಕಾಲದಲ್ಲಿ ಒಂದನ್ನು "ಹಳೆಯ", ಇನ್ನೊಂದನ್ನು "ಹೊಸ" ವಿಶೇಷಣದಿಂದ ಕರೆಯುವುದು ರೂಢಿಯಲ್ಲಿದ್ದಿತೆಂಬುದು ಕುತೂಹಲದ ಸಂಗತಿಯಾಗಿದೆ.

ಹೀಗೆ ಈ ಕೃತಿಗಳ ನಿಜನಾಮದಂತೆ, ಇವುಗಳ ಕವಿನಾಮವೂ ಚರ್ಚೆಗೆ ಎಡೆಮಾಡಿ ಕೊಡುತ್ತದೆ. ಎರಡರಲ್ಲಿಯೂ

ಕನ್ನಡ ದೇಶಕ್ಕೆ ರನ್ನದ ಪದಜಾತಿ
ಇನ್ನು ಮುನ್ನಿನ ಪಾಂಚಾಳ ।
ಚೆನ್ನ ಭುಜಂಗನ ಪುತ್ರ ಗಂಗಯ್ಯ ಸಂ
ಪನ್ನ ಹೇಳಿದನೀ ಕೃತಿಯ ॥

ಎಂಬ ಪದ್ಯವಿದೆ. ಇದು, ಈ ಎರಡರಲ್ಲಿ ಮೂಲತಃ ಯಾವ ಕೃತಿಗೆ ಸಂಬಂಧಿಸಿದೆ? ಎಂಬುದು ಇಲ್ಲಿಯ ಮುಖ್ಯ ಪ್ರಶ್ನೆ. ಈ ವರೆಗೆ ವಿದ್ವಾಂಸರು ಭಾವಿಸಿದಂತೆ, ಈ ಪದ್ಯದಿಂದ ಇದನ್ನೊಳಗೊಂಡ ಕಾವ್ಯದ ಕರ್ತೃ ಪಾಂಚಾಳಗಂಗನೆಂಬ ಅರ್ಥ ಹೊರಡುವುದಿಲ್ಲ. ಈ ಮೊದಲು ಪಾಂಚಾಳಗಂಗನೆಂಬವನು ಈ (ವಸ್ತುವನ್ನು ಕುರಿತ) ಕೃತಿಯನ್ನು ಹೇಳಿದ್ದಾನೆ. ಎಂಬ ಅರ್ಥಹೊರಡುತ್ತದೆ. ('ಇನ್ನು ಮುನ್ನಿನ' ಗಮನಿಸಿರಿ, ಕೆಲವು ಪ್ರತಿಗಳಲ್ಲಿ 'ಇನ್ನು ಮುನ್ನಿನಲಿ' ಎಂದು ಸ್ಪಷ್ಟವಾಗಿಯೇ ಇದೆ.) ಆದುದರಿಂದ ಇದು ಹೊಸ ಕುಮಾರರಾಮನ ಸಾಂಗತ್ಯಕ್ಕೆ ಸಂಬಂಧಿಸಿದ ಪದ್ಯವೆಂದು ನಮ್ಮ ಭಾವನೆ. ಹಾಗಿದ್ದಲ್ಲಿ ಹಸ್ತಪ್ರತಿಗಳಲ್ಲಿ ಗಂಗವನ್ನು ಪ್ರಸ್ತಾಪಿಸುವ

ಪದ ಜಾತಿಗೆ ಪಾಂಚಾಳ ಗಂಗಯ್ಯನು
ಮುದದಿ ಪೇಳಿದನು ಈ ಕೃತಿಯ ।
ಸುಧೆಯ ಸೊನೆಯಾ x x x x x x x
ಚದುರ ಸೊಬಗಿನಾ ಗರುವ ॥

ಗರಿಯಿಲ್ಲದಂಬನು ಐನೂರು ಎಚ್ಚರೆ
ಗುರಿಯ ತಾಕುವುದೆ ಲೋಕದೊಳು ।

ಗರಿಗಣೆ ಶೂರ ರಾಮನ ಕೃತಿಬಾಣದಿ
ಊರವಿಯೊಳೆಚ್ಚ ಗಂಗಯ್ಯ ॥

ಈ ಪದ್ಯಗಳು ಮಾತ್ರ ಪಾಂಚಾಳ ಗಂಗಯ್ಯ ಬರೆದ ಹಳೆಯ ಕುಮಾರರಾಮನ ಸಾಂಗತ್ಯಕ್ಕೆ ಸಂಬಂಧಿಸಿವೆಯೆಂದು ಹೇಳಬಹುದಾಗಿದೆ. ಈ ವರೆಗಿನ ಚರ್ಚೆಯಿಂದ ಹಳೆಯ ಕುಮಾರರಾಮನ ಚರಿತ್ರೆಯ ಕರ್ತೃ ಪಾಂಚಾಳಗಂಗ, ಹೊಸ ಕುಮಾರರಾಮನ ಸಾಂಗತ್ಯದ ಕರ್ತೃ ಗೊತ್ತಿಲ್ಲವೆಂದು ಒಪ್ಪಿಕೊಳ್ಳಬೇಕಾಗುತ್ತದೆ.[೧] ಅದೇನೇ ಇದ್ದರೂ, ಬಹುಶಃ ಪಾಂಚಾಳ ಗಂಗನನ್ನು ಹೊರತುಪಡಿಸಿ ಎಲ್ಲ ಕವಿಗಳು ವೀರಶೈವರಾಗಿರುವುದು ಒಂದು ವಿಶೇಷ. 'ಪಂಚಾಳ' ಎಂಬುದಕ್ಕೆ ಪಾಠಾಂತರಗಳಿರುವುದರಿಂದ ಶೈವವಾತಾವರಣ ತುಂಬಿಕೊಂಡಿರುವ ಗಂಗನ ಕೃತಿಯೂ, ಅದರ ಕರ್ತೃ ವೀರಶೈವನೆಂಬ ಸೂಚನೆ ನೀಡುತ್ತದೆ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಹೊಸ ಕುಮಾರರಾಮನ ಸಾಂಗತ್ಯದ ಕರ್ತೃವೂ ವೀರಶೈವವೆನ್ನಬೇಕಾಗುತ್ತದೆ.

ಈ ಎರಡು ಕೃತಿಗಳ ಬಗೆಗೆ ಸ್ಪಷ್ಟ ಮಾಡಿಕೊಂಡು ಮುಂದುವರಿಯುವಲ್ಲಿ ಚಿತ್ರದುರ್ಗದ ಪ್ರೊ. ಬಿ. ರಾಜಶೇಖರಪ್ಪ ಅವರಿಂದ ಕುಮಾರರಾಮನನ್ನು ಕುರಿತ ಒಂದು ತಾಳೆಗರಿ ಹಸ್ತಪ್ರತಿ ನಮಗೆ ಲಭಿಸಿತು. ಇದು ಈ ಹಿಂದೆ ಹುಲ್ಲೂರು ಶ್ರೀನಿವಾಸ ಜೋಯಿಸಲು ಹೆಸರಿನಿಂದ ನಾಗಸಂಗಯ್ಯನ ಕೃತಿಯೇ ಆಗಿದೆ. ಇದರ ಇನ್ನೊಂದು ಕಾಗದ ಪ್ರತಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿದೆ. ಮೈಸೂರು ಕಾಗದ ಪ್ರತಿಯಲ್ಲಿಯ

ಆಧಾರವಿಡಿದು ಹೇಳಿದ ನಾಗಸಂಗಯ್ಯ ।
ಈ ಧರೆಯ ವಿದ್ವಾಂಸರೊಳಗೆ ॥
ಸಾಧಿಸಿ ಅವರ ಸೇವಕನಾಗಿ ಪೇಳ್ವೆನು ।
ಯಾದವಸಖ ಪಾರ್ಥ ಕಥೆಯ ॥

ಎಂಬ ಪದ್ಯವನ್ನು ಗಮನಿಸಿ ಹುಲ್ಲೂರ ಅವರು, ಇದು ಸ್ವತಂತ್ರ ಕೃತಿಯೆಂದೂ, ಇದರ ಕರ್ತೃ ನಾಗಸಂಗಯ್ಯನೆಂದೂ ಪ್ರಚುರಪಡಿಸಿದ್ದಾರೆ. ಆದರೆ ಇದು ಗಂಗನ ವಿಸ್ತೃತ ಪಾಠವೇ ಹೊರತು ಸ್ವತಂತ್ರ ಕೃತಿಯಲ್ಲವೆಂದು ಡಾ. ವರದರಾಜರಾವ್ ಹೇಳುತ್ತಾರೆ. ಇಲ್ಲಿ ಒಂದಿಷ್ಟು ಚರ್ಚೆ ಅವಶ್ಯ. ಪ್ರೊ. ರಾಜಶೇಖರಪ್ಪ ಅವರಿಂದ ಬಂದ ತಾಳೆ ಪ್ರತಿಯಲ್ಲಿ "ಆಧಾರವಿಡಿಸು ಹೇಳಿದ ನಾಗಸಂಗಯ್ಯ ಎಂಬುದಕ್ಕೆ ಬದಲು ಆಧಾರವಿಡಿದು ಪೇಳಿದನಾಗ ಗಂಗಯ್ಯ" ಎಂಬ ಪಾಠವಿದೆ. ಗಂಗಯ್ಯನೆಂಬುವನು (ಐತಿಹಾಸಿ) ಆಧಾರಗಳನ್ನವಲಂಬಿಸಿ ಪೂರ್ವ ಕಾಲದಲ್ಲಿ ಕೃತಿಯೊಂದನ್ನು ಬರೆದಿರುವನೆಂದು ಈ ಪದ್ಯ ಸೂಚಿಸುವಂತಿದೆ. ಆತ ಪಾಂಚಾಳ ಗಂಗನೆ ಆಗಿದ್ದನು. "ಅವರ ಸೇವಕನಾಗಿ ಪೇಳ್ವೆನು" ಅಂದರೆ ನಾನು ಆ ಪಾಂಚಾಳ ಗಂಗನ ಸೇವಕನಾಗಿ ಈ ಕೃತಿ ಬರೆಯುತ್ತೇನೆ

೧.ಶ್ರೀ ಎಸ್. ಆರ್. ಕೂಡ್ಲಿಗಿ ಅವರು ಇದರ ಕರ್ತೃ ಗಂಗಾಧರ ಎಂದು ಹೇಳುತ್ತಾರೆ(ಜಯ ಕರ್ನಾಟಕ, ಜೂನ್ ೧೯೪೨.) ಇದಕ್ಕೆ ಆಧಾರ ಕೊಟ್ಟಿಲ್ಲ. ಗಂಗ ಎಂಬುದನ್ನೇ ಗಂಗಾಧರ ಎಂದು ಸುಧಾರಣೆ ಮಾಡಿರುವನೇ? ಕುಮಾರರಾಮನ ಸಾಂಗತ್ಯವನ್ನು ಕುರಿತು ಹಲ್ಲೂರು ಶ್ರೀನಿವಾಸ ಜೋಯಿಸರು ವಾಗ್ಭೂಷಣದಲ್ಲಿ(೧೯೪೮) ಲೇಖನ ಬರೆದಿರುವರೆಂದೂ ಹೆಳಿರುವರೆಂದು ತಿಳಿದುಬರುತ್ತದೆ. ಗಂಗಾಧರ ಮತ್ತು ಬೂದಿಹಾಳ ಇವೆರಡೂ ಪರಿಶೀಲನಾರ್ಹವಾಗಿವೆ.

ಎಂಬುದು ಇಲ್ಲಿಯ ಆಶಯ. ಇವನ ಹೊಸತನವೆಂದರೆ, ಇದರಲ್ಲಿ ಪಾರ್ಥನ ಕಥೆಯನ್ನು ಸಮೀಕರಿಸುತ್ತೇನೆ ಎಂಬುದು ಈ ಹೇಳಿಕೆಯಂತೆ ಅರ್ಜುನನೇ ಕುಮಾರರಾಮನಾಗಿ, ಊರ್ವಶಿಯೇ ರತ್ನಾಜಿಯಾಗಿ ಹುಟ್ಟಿದಳೆಂಬ ತಂತ್ರ ಬಳಸಿ ತನ್ನ ಕಾವ್ಯವನ್ನು ಈತ ಬರೆದಿದ್ದಾನೆ ಆದರೆ ತನ್ನ ಹೆಸರನ್ನು ಎಲ್ಲಿಯೂ ಹೇಳಿಕೊಂಡಿಲ್ಲ, ಕೃತಿನಾಮವನ್ನೂ ನಿರ್ದಿಷ್ಟವಾಗಿ ಉಲ್ಲೇಖಿಸಿಲ್ಲ. ಲಿಪಿಕಾರ ಸೂಚಿಸಿದ "ಕೊಮಾರ ರಾಮಯ್ಯನ ಚರಿತೆ" ಎಂಬುದನ್ನು ನಾವು ಸ್ವೀಕರಿಸಿದ್ದೇವೆ.

ಈ ಮೂರು ಕೃತಿಗಳಲ್ಲದೆ ಹಂಪೆಯ ಮಹಾಲಿಂಗಸ್ವಾಮಿ ಬೇರೊಂದು ಕೃತಿ ಬರೆದುದು ಹಸ್ತಪ್ರತಿಯ ಪ್ರಕಾರ ಇದರ ಹೆಸರು ("ಬಾಲರಾಮನ ಸಾಂಗತ್ಯ") ಎಲ್ಲರಿಗೂ ಗೊತ್ತು, ಇವುಗಳಲ್ಲದೆ ಕುಮಾರರಾಮನನನ್ನು ಕುರಿತು ನಂಜುಂಡ ಬರೆದ ರಾಮನಾಥ ಚರಿತೆ ಸರ್ವಶ್ರುತ, ಆದುದರಿಂದ ಮೇಲೆ ವಿವೇಚಿಸಿದಂತೆ ಈವರೆಗೆ ಕುಮಾರರಾಮನನ್ನು ಕುರಿತು ಹೀಗೆ ೫ ಕೃತಿಗಳು ಹುಟ್ಟಿವೆ.

೧. ಹಳೆಯ ಕುಮಾರ ರಾಮನ ಸಾಂಗತ್ಯ, ಪಾಂಚಾಳ ಗಂಗ

೨. ಹೊಸ ಕುಮಾರ ರಾಮನ ಸಾಂಗತ್ಯ – ?

೩. ಕೊಮಾರ ರಾಮಯ್ಯನ ಚರಿತೆ – ?

೪. ಬಾಲರಾಮನ ಸಾಂಗತ್ಯ – ಮಹಾಲಿಂಗಸ್ವಾಮಿ

೫. ರಾಮನಾಥ ಚರಿತೆ– ನಂಜುಂಡ

ಈ ಐದರಲ್ಲಿ ಈ ವರೆಗೆ ಪ್ರಕಟವಾಗಿರುವುದು, ನಂಜುಂಡನ ಕೃತಿ ಮಾತ್ರ, ಮಿಕ್ಕ ನಾಲ್ಕರಲ್ಲಿ 'ಹೊಸ ಕುಮಾರರಾಮನ ಸಾಂಗತ್ಯ' ಈಗ ಬೆಳಕು ಕಾಣುತ್ತಲಿದೆ.

ಹೊಸ ಕುಮಾರರಾಮನ ಸಾಂಗತ್ಯ

ಈ ಮೊದಲು ಚರ್ಚಿಸಿದಂತೆ 'ಹೊಸಕುಮಾರ ರಾಮನ ಸಾಂಗತ್ಯ'ದ ಕರ್ತೃ ಈವರೆಗೆ ತಿಳಿದುಬಂದಿಲ್ಲ. ಇದರಲ್ಲಿ ಪಾಂಚಾಳ ಗಂಗನ ಕೃತಿಯ ಪದ್ಯಗಳಿದ್ದರು, ಬಹಳಷ್ಟು ಭಿನ್ನವಾಗಿರುವುದರಿಂದ ಇದು ಬೇರೊಬ್ಬನ ಸ್ವತಂತ್ರ್ಯ ಕೃತಿಯೆಂದೇ ಭಾವಿಸಿದ್ದೇವೆ.

ಈ ಕೃತಿಯ ಪರಿಷ್ಕರಣಕ್ಕಾಗಿ ನಾವು ಎರಡು ಕಾಗದ ಪ್ರತಿಗಳನ್ನು ಬಳಸಿದ್ದೇವೆ. ಇವುಗಳಲ್ಲಿ ಆಧಾರ ಪ್ರತಿ ಕಂಪಲಿಯ ಶ್ರೀ ದೊಡ್ಡನಗೌಡರ ಮನೆಯದು, ಇನ್ನೊಂದು ಅದೇ ಕಂಪಲಿಯ ಸೋಮೇಶ್ವರ ದೇವಾಲಯಕ್ಕೆ ಸಂಬಂಧಿಸಿದುದು. ಇವುಗಳ ಸಂಧಿ ಸಂಖ್ಯೆ ಪದ್ಯ ಸಂಖ್ಯೆ ಹೀಗಿದೆ.

ಸಂಧಿ, ಕಂಪಲಿ ಸೋಮೇಶ್ವರ ದೇವಾಲಯ ಪ್ರತಿ	ಪದ್ಯ ಸಂಖ್ಯೆ
೧. ದೇವಗಿರಿ ಯಾದವರಲ್ಲಿ ಮುಮ್ಮಡಿ ಸಿಂಗ	೬೭
೨. ರಾಯದುರ್ಗದಲ್ಲಿ ಮುಮ್ಮಡಿ ಸಿಂಗ– ಕಂಪಿಲ	೬೩
೩. ಕುಮಾರರಾಮನ ಜನನ–ಹೊಸಮಲೆಯಲ್ಲಿ ಕಂಪಿಲ	೯೮
೪. ಗುತ್ತಿ ಜಗದಪ್ಪನೊಂದಿಗೆ ಕಾಳಗ	೮೨
೫. ಓರುಗಲ್ಲು ಪ್ರವೇಶ – ಯುದ್ಧ	೨೪೯

ಸಂಧಿ.	ಕಂಪಲಿ ಶ್ರೀ ದೊಡ್ಡನಗೌಡರ ಪ್ರತಿ	ಪದ್ಯ ಸಂಖ್ಯೆ
೧.	ದೇವಗಿರಿ ಮಾದವರಲ್ಲಿ ಮುಮ್ಮಡಿಸಿಂಗ	೯೯
೨.	ರಾಯದುರ್ಗದಲ್ಲಿ ಮುಮ್ಮಡಿಸಿಂಗ–ಕಂಪಿಲ	೧೦೨
೩.	ಹೊಸಮಲೆಯಲ್ಲಿ ಕಂಪಿಲ	೧೦೩
೪.	ಗುತ್ತಿಯ ಜಗದಪ್ಪನೊಡನೆ ಕಾಳಗ	೮೯
೫.	ಓರಗಲ್ಲು ಪ್ರವೇಶ	೧೪೭
೬.	ಓರಗಲ್ಲ ಯುದ್ಧ	೧೩೭
೭.	ಶೂಲದ ಹಬ್ಬ–ರತ್ನಾಜಿ ವ್ಯಾಮೋಹ	೧೧೨
೮.	ಕುಮ್ಮಟದುರ್ಗ ನಿರ್ಮಾಣ	೧೦೦
೯.	ನೀರಾಟ–ಚೆಂಡಿನಾಟ–ರತ್ನಾಳ ವ್ಯಾಮೋಹ	೫೪೦
೧೦.	ನೆಲಮಾಳಿಗೆಯಲ್ಲಿ ಕುಮಾರರಾಮ	೨೮೫
೧೧.	ನೇಮಿಯ ಕಾಳಗ ಸೋಲು	೪೬೨
೧೨.	ಮಾದಗಿತ್ತಿ ಕಾಳಗ–ರಾಮನ ವೀರಮರಣ	೩೧೩

ಸೋಮೇಶ್ವರ ದೇವಾಲಯ ಪ್ರತಿಯ ವಿಸ್ತೃತ ಪಾಠವೇ ದೊಡ್ಡನಗೌಡರ ಪ್ರತಿಯ ಪಾಠವಾಗಿದೆ. ಹೀಗಾಗಿ ಒಂದರಲ್ಲಿಯ ೧೦ ಸಂಧಿ ಇನ್ನೊಂದರಲ್ಲಿ ೧೨ ಸಂಧಿಯಾಗಿ ಹಿಗ್ಗಿದೆ. ಓರಗುಲ್ಲು ಯುದ್ಧವು, ಓರುಗಲ್ಲ ಪ್ರವೇಶ ಮತ್ತು ಓರುಗಲ್ಲ ಯುದ್ಧವೆಂದು ೨ ಸಂಧಿಗಳಾಗಿ ನಿಂತಿದೆ. 'ಕುಮ್ಮಟದುರ್ಗ ನಿರ್ಮಾಣ' ಸಂಧಿ ಹೊಸದಾಗಿ ಸೇರಿದೆ. (ಹುಳಿಯಾರ ಯುದ್ಧ)ಇತ್ಯಾದಿ ಉಪಘಟನೆಗಳೂ ಇಲ್ಲಿವೆ.

ಹೀಗೆ ಈ ಕೃತಿಯ ಸಂಧಿಸಂಖ್ಯೆ, ಪದ್ಯಸಂಖ್ಯೆ ಎರಡೂ ಹಸ್ತಪ್ರತಿಗಳಲ್ಲಿ ವ್ಯತ್ಯಾಸದಿಂದ ಕೂಡಿವೆ. ನಾವು ಮಾತ್ರ ಪೂರ್ಣವಾಗಿರುವ ದೊಡ್ಡನಗೌಡರ ಪ್ರತಿಯನ್ನು ಆಧಾರವಾಗಿಟ್ಟುಕೊಂಡು, ಅಪೂರ್ಣವಾಗಿರುವ ಸೋಮೇಶ್ವರ ದೇವಾಲಯ ಪ್ರತಿಯನ್ನು ಪಾಠಾಂತರಕ್ಕಾಗಿ ಬಳಸಿಕೊಂಡಿದ್ದೇವೆ. ಇವೆರಡಲ್ಲಿಯ ಪಾಠವು ಅಧಿಕ ವ್ಯತ್ಯಾಸ, ಅಸ್ತವ್ಯಸ್ಥವಾಗಿರುವುದರಿಂದ ಭಿನ್ನಪಾಠಗಳನ್ನು ಗುರುತಿಸುವುದು, ಅಡಿಯಲ್ಲಿ ದಾಖಲಿಸುವುದು ಅಸಾಧ್ಯದ ಮಾತು. ಆದುದರಿಂದ ಒಂದು ಪ್ರತಿಯನ್ನು, ಇನ್ನೊಂದು

ಪ್ರತಿಯ ನೆರವಿನಿಂದ ಪರಿಷ್ಕರಿಸಿದ್ದೇವೆಯೆಂದು ಹೇಳಬಯಸುತ್ತೇವೆ. ಹೀಗೆ ಇವೆರಡೂ ಸೇರಿದರೂ ಶುದ್ಧಪಾಠ ನಿರ್ಣಯ ಸಾಧ್ಯವಿಲ್ಲದ ಸಂದರ್ಭದಲ್ಲಿ ಊಹೆಗೆ ಶರಣುಹೋಗಿ, ಚೌಕ ಕಂಸಿನಲ್ಲಿ ಅದನ್ನು ನಮೂದಿಸಿದ್ದೇವೆ. ಇದನ್ನು ಮೀರಿಯೂ ಕೆಲವು ಪಾಠಸಮಸ್ಯೆಗಳು ಉಳಿದುಕೊಂಡಿವೆಯೆಂದು ತಿಳಿಸಬಯಸುತ್ತೇವೆ.

ದೇಶೀಕಾವ್ಯ ಸಂಪಾದನೆಯನ್ನು ಕುರಿತು ಒಂದು ಮಾತು; ಮಾರ್ಗಕಾವ್ಯ ಸಂಪಾದನೆಗೆ ಹೆಚ್ಚು ಪ್ರತಿ ಬಳಸಿದಷ್ಟು ಪಾಠ ಹೆಚ್ಚು ಶುದ್ಧವಾಗುತ್ತದೆ. ದೇಶೀಕಾವ್ಯ ಸಂಪಾದನೆಗೆ ಹೆಚ್ಚು ಪ್ರತಿ ಬಳಸಿದಷ್ಟೂ ಪಾಠ ಹೆಚ್ಚು ಅಶುದ್ಧವಾಗುತ್ತದೆ. ಈ ಸತ್ಯವನ್ನು ಅರ್ಥ ಮಾಡಿಕೊಳ್ಳದೆ ಈ ವರೆಗೆ ಸಂಪಾದಿಸಿದ ನಂಬಿಯಣ್ಣನ ರಗಳೆ, ಸೋಮನಾಥ ಚಾರಿತ್ರ್ಯ ಮೊದಲಾದ ದೇಶೀಕಾವ್ಯಗಳ ಸಂಪಾದನೆ ಮಿಶ್ರಪಾಠಕ್ಕೆ ಗುರಿಯಾಗಿದೆಯೆಂದೇ ಹೇಳಬೇಕು. ಆದುದರಿಂದ ಇನ್ನು ಮೇಲೆ ಈ ದಾರಿಯನ್ನು ಬಿಟ್ಟು ಕಾಲದೃಷ್ಟಿಯಿಂದ ಪ್ರಾಚೀನ, ಭಾಷಾ ದೃಷ್ಟಿಯಿಂದ ಶುದ್ಧ, ಪ್ರತಿ ದೃಷ್ಟಿಯಿಂದ ಪೂರ್ಣ, ಕಥೆಯ ದೃಷ್ಟಿಯಿಂದ ಸಮಗ್ರವಾಗಿರುವ ಒಂದು ಪ್ರತಿಯನ್ನು ಮಾತ್ರ ಆಯ್ದುಕೊಂಡು, ಸಾಧ್ಯವಿದ್ದಲ್ಲಿ ಲಿಪಿಕಾರನ ಭಾಷಾ ದೋಷಗಳನ್ನು ನಿವಾರಿಸಿ, ಅವಶ್ಯವಿದ್ದಲ್ಲಿ ಬೇರೆ ಒಂದೋ ಎರಡೋ ಹಸ್ತಪ್ರತಿಗಳಿಂದ ಶುದ್ಧಪಾಠ ಸ್ವೀಕರಿಸಬಹುದು. ತೀರ ಅನಿವಾರ್ಯ ಪ್ರಸಂಗದಲ್ಲಿ ಊಹೆ ಮಾಡಬಹುದು. ಇದು ದೇಶೀ ಕಾವ್ಯಗಳ ಸಂಪಾದನೆಯ ಸರಿಯಾದ ಕ್ರಮ. ಇದರಿಂದ ಕೃತಿ ಮಿಶ್ರಪಾಠಕ್ಕೆ ಗುರಿಯಾಗುವುದನ್ನು ತಪ್ಪಿಸಿ, ಕೊನೆಯ ಪಕ್ಷ ಒಂದು ಪ್ರತಿಯನ್ನಾದರೂ ಶುದ್ಧವಾಗಿ ಉಳಿಸಿಕೊಟ್ಟಂತಾಗುತ್ತದೆ. ದುರ್ದೈವದ ಸಂಗತಿಯೆಂದರೆ, ಹೀಗೆ ಒಂದು ಆಧಾರ ಪ್ರತಿ, ಇನ್ನೊಂದು ಸಹಾಯಕ ಪ್ರತಿಯೆಂಬ ನಿಲವನ್ನು ಆಧರಿಸಿದರೂ ನಮ್ಮ ಈ ಸಂಪಾದನೆ ಮಿಶ್ರಪಾಠಕ್ಕೆ ವಾಲಿದೆಯೆಂದು ಹೇಳಬಯಸುತ್ತೇವೆ. ಎರಡೂ ಅಶುದ್ಧ ಅಸ್ತವ್ಯಸ್ಥ ಪ್ರತಿಯಾಗಿರುವುದೇ ಇದಕ್ಕೆ ಕಾರಣ. ಹಾಗೆ ನೋಡಿದರೆ ಕುಮಾರರಾಮನನ್ನು ಕುರಿತು ಇಂದು ಗಂಗನ ಹೆಸರಿನಲ್ಲಿ ಸಿಗುವ (ಹಳೆಯ-ಹೊಸ) ೨೦-೨೫ ಪ್ರತಿಗಳಲ್ಲಿ ಕನಿಷ್ಟ ಎರಡು ಪ್ರತಿಗಳಾದರೂ ಒಂದನ್ನೊಂದು ಹೋಲುವುದಿಲ್ಲ. ಹೀಗಾಗಿ ಇಂದಿನ ಸಂದರ್ಭದಲ್ಲಿ ಇವುಗಳ ಮೂಲಪಾಠವನ್ನು, ಏಕೆ, ಮೂಲಕ್ಕೆ ಸಮೀಪವಾಗಿರುವ ಪಾಠವನ್ನೂ ನಿರ್ಣಯಿಸಲು ಸಾಧ್ಯವಿಲ್ಲವಾಗಿದೆ. ಆದುದರಿಂದ ಈ ಸಂಪಾನೆಯು, ಎರಡು ಪ್ರತಿಗಳನ್ನು ಬಳಸಿಕೊಂಡು ಪದ್ಯವು ಅರ್ಥವಾಗುವಂತೆ ಮಾಡಿದ ಪ್ರಯತ್ನವೆಂದು ಮಾತ್ರ ಹೇಳಬಹುದಾಗಿದೆ.

ಹಸ್ತಪ್ರತಿಗಳ ವಿವರ

ಕಂಪಲಿ ಶ್ರೀ ದೊಡ್ಡನಗೌಡರ ಪ್ರತಿ : ೯. ೫″ x ೬″ ಅಳತೆಯ ದಪ್ಪನೆಯ ಕಾಗದಪ್ರತಿ. ಪೂರ್ಣವಾಗಿದೆ. ಅಕ್ಷರ ಸ್ಪಷ್ಟ. ಭಾಷೆ ಅಶುದ್ಧ, ಈಗ ಇದು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಾಂಡಾರದಲ್ಲಿದೆ. ನಂ. ೩೨೪

ಆದಿ : .... ಪ್ರಸನ್ನ । ಸಿರಿಗೆರೆ ನಾಗನಾಥ ಪ್ರಸನ್ನ । ಪಂಚವಂಣಿಗೆ ಗುರುಶಾಂತದೇವರ ಪ್ರಸಂನ್ನ । ಮಾಘ ಶು. ೫ ಗುರುವಾರ ಕ್ಕೊಮರಾಮ ಹುಟ್ಟಿದ ಮೂಲದ ಆರಂಭ ಪುಸ್ತಕ ಬರವದಕ್ಕೆ ಶುಭಮಸ್ತು । ಶೋಭನಮಸ್ತು । ಆಯುರಾರೋಗ್ಯ ಆಯಿಶ್ಚರ್ಯಮಸ್ತು ಜಯ ಜಯಂನ್ । ಸಂಗತ್ಯ.

ಅಂತ್ಯ : ಪುನರ್ವಸು ನಕ್ಷತ್ರದಲ್ಲಿ .... ವಾಹನ ಶಖ ವರುಷಂ............ ನಮಃಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೆ । ತ್ರೈಲೋಕ್ಯ ನಗರಾಂಭ ಮೂಲಸ್ತಂಬಾಯಶಂಭುವೆ॥ ಸ್ವಸ್ತಿ ಜಯಾಭ್ಯುದಯ ಶಾಲಿವಾಹನ ಶಕ ವರುಷಗಳು ೧೭೫೫ನೇ ರುದ್ರೋದ್ಗಾರಿನಾಮ ಸಂವತ್ಸರದ ವೈಶಾಖ ಶು ॥ ೮ ಭಾರ್ಗವಾರ ಪುಷ್ಯನಕ್ಷತ್ರದಲಿ ಈ ಹೊಸರಾಮ ಸಾಂಗತ್ಯ ಮುಗಿದುಯಿದ್ದಿತು. ಈ ಶಾಸ್ತ್ರ ಬರದಾತ ದಾರುಯೆಂದರೆ ಪ .... ಸಿಮೇಯೊಳಗೆ ಮ ॥ ರಾರವಿ ಓದಿಸುವ ವಿರೂಪಾಕ್ಷಯ್ಯನ ಕುಮಾರ ರುದ್ರಯ್ಯಗಳ .... ನುದ್ಭವ ವಿರೂಪಾಕ್ಷಯ್ಯನು ಬರದು ಇದ್ದಾನು.

ಈ ಶಾಸ್ತ್ರ ಬರಸಿದಾತ ದಾರಯೆಂದರೆ ವಿ........ಯ್ಯ ನಗರಕೆ ಸರನಾಡ ಗೌಡ....... ಕುರಗೋಡು ಸಿರಪೆ ರಾಯದುರ್ಗ ಹಿರೆಯಾಳು........ಂತಪುರ ಕುಡತನಿ ಬಳ್ಳಾರಿ ನಂದಿದುರ್ಗ ಅಲ್ಲಿಪುರ ಲೆನಿ ಸೋಮಲಾಪುರ ಒಂಬತ್ತು.......ಕೆ ಸರನಾಡಗೌಡ ಲಿಂಗನಗೌಡ ಲಕ್ಕನಗೌಡ ಕರಿಗೌಡ ಇವರ ಕುಮಾರ ಮೂರು........ ನ ನಾಗದೇವನ ಮೊಮ್ಮಕ್ಕಳು ಕಲ್ಲಪ್ಪನ ಅರ್ಧಾಂಗಿನಿ ಗೌರಮ್ಮನ ಸುಪುತ್ರರು ದೇವರಯ್ಯ ಲಿಂಗಪ್ಪ ಬಂಡಪ್ಪ ಕೊತ್ತಲದಯ್ಯ ಬಸವಪ್ಪನವರಿಗೆ ಬರಕೊಟ್ಟದ್ದು ಹೊಸ ರಾಮನ ಸಾಂಗತ್ಯ ಪುಸ್ತಕ ಬರಕೊಟ್ಟ ಮೂರ್ತದಲ್ಲಿ ಧನಕನಕ ವಸ್ತು ವಾಹನ ಸಕಲ ಸಾಮ್ರಾಜ್ಯ ಪುತ್ರಪೌತ್ರ ಅಭಿವೃದ್ಧಿ ಹೆಚ್ಚಲೆಂದು ಹರಸಿ ಕೊಟ್ಟುಯಿದ್ದೆವು. ಜಯ ಜಯ ಜಯ.

ಕಂಪಲಿಯ ಸೋಮೇಶ್ವರ ದೇವಾಲಯ ಪ್ರತಿ : ೮.೫''x ೭'' ಅಳತೆಯ ದಪ್ಪನೆಯ ಕಾಗದಪ್ರತಿ, ಅಪೂರ್ಣವಾಗಿದೆ. ಅಕ್ಷರ ಸ್ಪಷ್ಟ, ಭಾಷೆ ಅಶುದ್ಧ, ಈಗ ಇದು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಾಂಡಾರದಲ್ಲಿದೆ. ನಂ. ೪೧೦.

ಆದಿ : ಶ್ರೀ ದಕ್ಷಾರಾತಿ ಪ್ರಸನ್ನ । ಶ್ರೀಮದ್ಗಣೇಶ ಶಾರದಾ.....ನಮಃ ಕೊಮಾರ ರಾಮನ ಪುಸ್ತಕ ಬರೆಯುವುದಕ್ಕೆ ಶೋಭಮಸ್ತು । ಆಯುರಾರೋಗ್ಯ ಐಶ್ವರ್ಯಮಸ್ತು । ಸಂಗತ್ಯ ವರ್ನ ।

ಅಂತ್ಯ : ಪುಟಗಳು ಕಳೆದು ಹೋಗಿರುವುದರಿಂದ ಅಂತ್ಯ ಪ್ರಶಸ್ತಿ ಅಲಭ್ಯವಾಗಿದೆ.

ಕೃತಿ–ಆಕೃತಿ–ಸಂಸ್ಕೃತಿ

ಜೀವನವೆನ್ನುವುದು ಕ್ರಿಯಾ ಸರಣಿಯಾಗಿರುವುದರಿಂದ ಪ್ರತಿಯೊಬ್ಬನ ಜೀವನ ಬೃಹತ್ 'ಕೃತಿ' ಎನಿಸುತ್ತದೆ. ಶಾಸನಗಳಲ್ಲಿ ಕುಮಾರರಾಮನ 'ಜೀವನಕೃತಿ'ಗೆ ಸಂಬಂಧಪಟ್ಟ ವಿವರಗಳು ಕಡಿಮೆ. ಜನಪದ ಸಾಹಿತ್ಯದಲ್ಲಿ ಒಂದಿಷ್ಟು ವಿವರಗಳಿದ್ದರೂ ಅದು ಬಾಯಿಯಿಂದ ಬಾಯಿಗೆ ಬದಲಾಗುತ್ತ ಬಂದ ಪಾಠ. ಆದುದರಿಂದ ಕವಿಯ ಕಾಲದಷ್ಟು ಹಿಂದೆ ದಾಖಲಾಗಿರುವ ಮತ್ತು ತುಂಬ ವಿವರಣಾತ್ಮಕವಾಗಿರುವ ಕಾವ್ಯಗಳಲ್ಲಿ ಮಾತ್ರ ಅದು ವಿಸ್ತಾರವಾಗಿ ಮೂಡಿರುತ್ತದೆ.

ಕೃತಿ : ಕುಮಾರರಾಮನನ್ನು ಕುರಿತು ಹುಟ್ಟಿರುವ ಐದು ಕಾವ್ಯಗಳಲ್ಲಿ ಚರಿತ್ರೆಯ ಚಿತ್ರಣ ಒಂದಿಷ್ಟು ವಿಭಿನ್ನವಾಗಿದೆ. ಕಾವ್ಯವಾಗಿರುವ, ಹೊಸ ಕುಮಾರರಾಮನ ಸಾಂಗತ್ಯ, ತನ್ನ ಅಳವಿಗೆ ಸಿಕ್ಕಷ್ಟು, ನಿಲುವಿಗೆ ತಕ್ಕಷ್ಟು ಸೆರೆ ಹಿಡಿದಿರುವ ಇವನ 'ಜೀವನಕೃತಿ' ಹೀಗಿದೆ:

ಸಂಧಿ : ೧

ಬೇಡ ಜಾತಿಯ ಮುಮ್ಮಡಿ ಸಿಂಗನು ಮಲೆಪಲ್ಲಿ ದೇಶದಲ್ಲಿ ನಾಡ ತಳವಾರನಾಗಿದ್ದನು. ಊರ ಹಂಚಿಕೊಳ್ಳುವ ವಿಷಯವಾಗಿ ದಾಯಾದಿಗಳಾದ ತಿಪ್ಪರಾಜ, ಸೋಮೇಶ್ವರನಲ್ಲಿ ಜಗಳ

ಉದ್ಭವಿಸಿತು. ಮುಖ್ಯಸ್ಥ ಮುಮ್ಮಡಿಸಿಂಗ ಆ ಪ್ರದೇಶವನ್ನು ಬಿಟ್ಟು, ತನ್ನ ಹೆಂಡತಿ ಮಾರಮ್ಮನೊಂದಿಗೆ ಯಾದವ (ಸೇವುಣ) ಅರಸ ರಾಮದೇವರಾಯನ ಸೇವೆಗಾಗಿ ದೇವಗಿರಿಗೆ ಹೋದನು. ಕಟ್ಟಿಗೆ ವಿಕ್ರಮನೆಂಬ ದ್ವಾರಪಾಲಕನೊಂದಿಗೆ ಆಸ್ಥಾನ ಪ್ರವೇಶಿಸಿದ. ಸಿಂಗಿನಾಯಕನನ್ನು ಅಲ್ಲಿಯೇ ಆಟ ಪ್ರದರ್ಶಿಸುತ್ತಲಿದ್ದ ಡೊಂಬರ ಚಾಮಯ್ಯ ಹೊಗಳಿದ. ಸಿಂಗಿನಾಯಕನಿಗೆ ಐವತ್ತು ಹೊನ್ನು ಪಡೆಯುವ ವೃತ್ತಿ ಲಭಿಸಿತು.

ಕಾಲ ಗತಿಸಿತು. ದಿನ ಅವಸ್ಥೆಗಿಳಿದ ದಾಯಾದಿಗಳು ನೆರವು ಕೋರಿ ಸಿಂಗಿನಾಯಕನಲ್ಲಿಗೆ ಹೋದರು. ಸಿಂಗಿನಾಯಕ ಅವರನ್ನು ಮನ್ನಿಸಿದ. ಒಮ್ಮೆ ಎಲ್ಲರೂ ಸೇರಿ ಬೇಟೆಗೆ ಹೋದರು. ಅಟ್ಟಿಸಿಕೊಂಡು ಹೋದ ಬಂಗಾರ ಬಣ್ಣದ ಉಡ ಹುತ್ತವನ್ನು ಹೊಕ್ಕಿತು. ಅದನ್ನು ಅಗಿದರು. ಬಂಗಾರ ಕೊಪ್ಪರಿಗೆ ಕಂಡಿತು. ಸಿಂಗಿನಾಯಕನು ದೇವರಾಯನಿಂದ ಈ ಸ್ಥಳವನ್ನು ತನ್ನ ದಾಯಾದಿಗಳಿಗೆ ಕೊಡುಗೆಯಾಗಿ ಪಡೆದು, ಹುತ್ತನ್ನು ಒಳಗು ಮಾಡಿಕೊಂಡು ಮನೆ ಕಟ್ಟಿಸಿಕೊಂಡನು.

ಮಕ್ಕಳಿಲ್ಲದ ಸಿಂಗಿನಾಯಕ, ಒಂದು ದಿನ ಮನೆದೈವ ಕಂಪಲಿ ಸೋಮೇಶ್ವರನು ಮಾವಿನ ಹಣ್ಣು ನೀಡಿದ ಕನಸು ಕಂಡನು. ಹೆಂಡತಿಗೆ ನವಮಾಸ ತುಂಬಿ, ಜನಿಸಿದ ಕೂಸಿಗೆ ಕಂಪಿಲರಾಯ ಎಂದು ಹೆಸರಿಟ್ಟರು. ವಯಸ್ಸಿಗೆ ಬಂದ ಕಂಪಿಲರಾಯನಿಗೆ ಗುಜ್ಜಲ ನಾಯಕನೆಂಬುವನು ಮಗಳು ಹರಿಯಲದೇವಿಯನ್ನು ತಂದು ಮದುವೆ ಮಾಡಿದರು.

ಒಮ್ಮೆ ರಾಮದೇವರಾಯನೊಂದಿಗೆ ಸಿಂಗಿನಾಯಕ ಬೇಟೆಗೆ ಹೋದನು. ಎಲ್ಲರನ್ನೂ ಅಂಜಿಸಿದ ಹುಲಿಯನ್ನು ಕೊಂದ ಮುಮ್ಮಡಿಸಿಂಗ ರಾಜನಿಂದ ದೊಡ್ಡ ಗೌರವ ಪಡೆದನು.

ಸಂಧಿ : ೨

ದಿಲ್ಲಿಯಲ್ಲಿ ಸುರಿತಾಳ ಒಡ್ಡೋಲಗ ಸಂದರ್ಭ, ನನ್ನನ್ನು ಮೀರಿದ ಒಡೆಯರುಂಟೇ? ಎಂದು ಸುರಿತಾಳ ಕೇಳಿದ. ಈ ಜಗತ್ತಿಗೆ ನಿಮ್ಮನ್ನು ಬಿಟ್ಟರೆ ದೇವರೇ ಒಡೆಯ – ಎಂದು ಮಂತ್ರಿ ಉತ್ತರಿಸಿದ. ಅಷ್ಟರಲ್ಲಿ ಒಬ್ಬನು ಎದ್ದು ನಿಂತು, ದಕ್ಷಿಣದಲ್ಲಿರುವ ರಾಮದೇವರಾಯನೆಂಬುವನು ನಿಮಗಿಂತ ಮಿಗಿಲು ಎಂದು ಹೇಳಿದ. ಇದನ್ನು ಕೇಳಿ ಕಿಡಿಕಿಡಿಯಾದ ಸುರಿತಾಳ ದೇವಗಿರಿ ಮುತ್ತಿ, ಒಂಬತ್ತು ಜನ ರಾಜರನ್ನು ಸೆರೆ ಹಿಡಿದನು. ಸೇತುರಾಮೇಶ್ವರದ ವರೆಗೆ ಆಕ್ರಮಣ ಮಾಡಿ, ಮದುರೆ ಪಟ್ಟಣವನ್ನು ಕಟ್ಟಿ, ಈ ಒಂಬತ್ತು ಜನರನ್ನು ದಿಲ್ಲೆಗೆ ಒಯ್ದನು.

ಈಗ ಮುಮ್ಮಡಿ ಸಿಂಗ ದೇವಗಿರಿ ಬಿಟ್ಟು, ಮಲೆಪಲ್ಲಿ ದೇಶಕ್ಕೆ ಬಂದು, ರಾಯದುರ್ಗದಲ್ಲಿ ಆಳುತ್ತಲಿದ್ದ ಮಲ್ಲರಾಯನ ಕೈಕೆಳಗೆ ನಾಡದಳವಾರನಾದನು. ದಿನ ಗತಿಸಿದವು. ಮಲ್ಲರಾಯ ಮರಣಹೊಂದಿದ. ಅವನ ಅಳಿಯ ಸೋದರಮಲ್ಲ. ಈ ರಾಜ್ಯವನ್ನು ಅತಿಕ್ರಮಿಸಿದ. ಇದನ್ನು ಕೇಳಿದ ಸಿಂಗಿನಾಯಕ ಅಳಿಯ ಸೋದರಮಲ್ಲನನ್ನು ಹೊರಗೆ ಅಟ್ಟಿ, ರಾಜ್ಯಕ್ಕೆ ಒಡೆಯನಾದ. ಮುನ್ನಿನ ಪ್ರಧಾನವಾದ ಬೈಚಪ್ಪ ಇವನಿಗೂ ಪ್ರಧಾನವಾಗಿ ಮುಂದುವರಿದ. ಕಂಪಿಲರಾಯನಿಗೆ ಐದು ಜನ ಸ್ತ್ರೀಯರೊಂದಿಗೆ ಮದುವೆ ಮಾಡಲಾಯಿತು. ಕಂಪಿಲನಿಗೆ ಮಕ್ಕಳು ಜನಿಸಿ, ಬೆಳೆಯತೊಡಗಿದರು. ಹರಿಯಮ್ಮನಿಗೆ ಮಕ್ಕಳಾಗಲಿಲ್ಲ. ಬೇಟೆಗೆ ಹೋದ ಕಂಪಿಲದೇವರಾಯ ಕಂಪಿಲ ಸೋಮೇಶ್ವರ ದೇವತೆಯನ್ನು ಕಂಡು ವರವನ್ನು ಪಡೆದು, ಮರುಳುತ್ತ ಮುಕ್ಕುಂದಿ

ಸಾಲ್ಗುಂದಿಗೆ ಬಂದನು. ಅಲ್ಲಿ ಬೆನ್ನಸಿಡಿ, ಬಾಯಿಬೀಗ, ಅಗ್ನಿಕುಂಡ, ವಗ್ಗಯ್ಯಗಳ ಉಗ್ಗಡಣೆಗಳಿಂದ ರೆಡ್ಡಿಗಳು ಭೈರವನ ಪರ್ವ ಆಚರಿಸುತ್ತಲಿದ್ದರು. ಈ ಪರ್ವ ನೋಡಲು ಬಂದ ರೆಡ್ಡಿ ಕುಲದ ರತ್ನಾಜಿಯನ್ನು ನೋಡಿ ಅರಸು ಮೆಚ್ಚಿದ. ಸಂಬಂಧಿಕರಿಗೆ ಎರಡು ಗ್ರಾಮಗಳನ್ನು ಕೊಟ್ಟು ಅವಳನ್ನು ಕರೆದುಕೊಂಡು ಬಂದ. ಯಲುಮಾರನ ಮಗಳಾದ ರತ್ನಿಯನ್ನು ಕಂಡು ಎಲ್ಲ ಸವತಿಯರು ತಳಮಳಗೊಂಡರು.

ಮಕ್ಕಳಾಗಲಿಲ್ಲವೆಂದು ಹರಿಯಮ್ಮ ಚಿಂತಿಸಿದಳು. ಅಷ್ಟರಲ್ಲಿ ಊಳಿಗದ ನಾಗಿ ಬರಗಾಲ ಕಾರಣವಾಗಿ ವಲಸೆ ಬಂದಿದ್ದ ಬಡ ತಂದೆ ತಾಯಿಗಳ ಮಗನ ಸುದ್ದಿ ಹೇಳಿದಳು. ಹರಿಯಮ್ಮ ಅವರಿಗೆ ಅನುಕೂಲ ಮಾಡಿಕೊಟ್ಟು, ಕಾಟ ಹೆಸರಿನ ಮಗನನ್ನು ಅವರಿಂದ ಪಡೆದಳು. ಕಾಟಣ್ಣ ಬೆಳೆಯತೊಡಗಿದ. ಒಂದು ದಿನ ಕಂಪಿಲನ ಕನಸಿನಲ್ಲಿ ಜಟ್ಟಂಗಿ ರಾಮೇಶ ಕಾಣಿಸಿಕೊಂಡ. ರಜ ಪರಿವಾರದವರೆಲ್ಲ ದೇವರ ದರ್ಶನಕ್ಕೆ ಹೋದರು. ಹರಿಯಮ್ಮ ಮಾವಿನ ಹಣ್ಣ ಪ್ರಸಾದದೊಂದಿಗೆ ರಾಯದುರ್ಗಕ್ಕೆ ಹಿಂತಿರುಗಿದಳು. ವಯೋವೃದ್ಧನಾದ ಸಿಂಗಿನಾಯಕ ಸ್ವರ್ಗಸ್ಥನಾದ.

ಸಂಧಿ : ೩

ಕಂಪಿಲರಾಯನ ಮಿಕ್ಕ ಮಡದಿಯರ ೫೫ ಜನ ಮಕ್ಕಳು ಸುಖದಿಂದ ಬೆಳೆಯತೊಡಗಿದರು. ಇತ್ತ ಹರಿಯಲದೇವಿ ಪರವಾಗಿ ತಂದ ಮಾವಿನ ಹಣ್ಣು ತಿಂದಳು. ಒಂಬತ್ತು ತಿಂಗಳು ಕಳೆದು ಮಗ ಹುಟ್ಟಿದ. ಜಟ್ಟಂಗಿ ರಾಮನ ಹೆಸರಿಟ್ಟರು. ತೊಟ್ಟಿಲಲ್ಲಿ ಪವಡಿಸುತ್ತಿದ್ದ ಕೂಸಿನ ರೂಪಕ್ಕೆ ಮನಸೋತು ರತ್ನಾಜಿ ಗಲ್ಲವನ್ನು ಚಿವುಟಿ ಚುಂಬಿಸಿದಳು. ಹರಿಯಮ್ಮ ತಿಂದು ಎಸೆದ ಮಾವಿನ ತೊಗಟೆಯನ್ನು ತಿಂದ ದಾಸಿಯೂ ಜನ್ಮ ಕೊಟ್ಟ ಮಗುವಿಗೆ ರಾಮ ಎಂದೇ ಹೆಸರಿಡಲಾಯಿತು. ಕಂಪಿಲರಾಯ ತನ್ನ ಮಗ ರಾಮನಿಗೆ ೭೨ ಜನ ಬೋಳುಕರ (ಮಾನ್ಯರ) ಪರಿವಾರವನ್ನು ನೇಮಿಸಿದನು.

ಒಂದು ದಿನ ಕಂಪಿಲರಾಯ ಮತ್ತು ರಾಮಯ್ಯ ಪರಿವಾರದೊಂದಿಗೆ ಹೊಸಮಲೆ ಪ್ರದೇಶಕ್ಕೆ ಬೇಟೆಗೆ ಹೋದರು. ನಾಯಿಯನ್ನೇ ಮೊಲ ಬೆನ್ನಟ್ಟಿದ ಪ್ರಸಂಗ ಜರುಗಿತು. ಇದು ಶಕ್ತಿಭೂಮಿಯೆಂದು ಅರಿತ ಕಂಪಿಲರಾಯ. ಅಲ್ಲಿ ಪಟ್ಟಣವನ್ನು ಕಟ್ಟಿಸಿ, ತನ್ನ ರಾಜಧಾನಿಯನ್ನು ರಾಯದುರ್ಗದಿಂದ ಇಲ್ಲಿಗೆ ವರ್ಗಾಯಿಸಿದ.

ಕುಮಾರರಾಮ, ಬೈಚಪ್ಪ ಸೈನ್ಯದೊಂದಿಗೆ ಏರಿಹೋಗಿ ತೊರಗಲ್ಲು, ಬಾದಾಮಿ ಪ್ರದೇಶ ಗೆದ್ದರು. ಬಾಚಿನಾಯಕನು ಶರಣಾಗತನಾದನು. ಬಳ್ಳಾರಿಪುರ ಪ್ರದೇಶ, ಹಾನುಗಲ್ಲು, ಕಂದನವಳಿ (ಕರ್ನೂಲು) ಪೊನುಗೊಂಡೆ, ಗುಡಿಕೋಟೆ, ಗುತ್ತಿನಾಡು, ನಿಡುಗಲ್ಲದುರ್ಗ, ಮದುರೆ, ಕಂಚಿ, ಬಾಗೂರ, ಉಚ್ಚಂಗಿದುರ್ಗ, ಹರಿಹರ, ಚಂದ್ರಗುತ್ತಿ, ಬೆಳಗಲ್ಲು ಗೆದ್ದು ಹೊಸಮಲೆಗೆ ಮರಳಿದರು.

ಸಂಧಿ : ೪

ಕಂಪಿಲರಾಯ ಒಡ್ಡೋಲಗದಲ್ಲಿದ್ದ ಸಂದರ್ಭ, ಗುತ್ತಿಯ ಜಗತಾಪಿ ಕಳಿಸಿದ ಸ್ಥಾನ ಪತಿಗಳು ಬಂದು, ತಮ್ಮ ರಾಜನಿಗೆ ಶರಣಾಗಿ ನಡೆಯ ಬೇಕೆಂದು ಕೇಳಿದರು. ಕಂಪಿಲನವರಿಂದ ಹೊರನೂಕಿಸಿಕೊಂಡ ಸ್ಥಾನಪತಿಗಳಿಂದ ವಿವರ ಕೇಳಿದ ಜಗತಾಪಿ, ಹೊಸಮಲೆಗೆ ಏರಿ ಬಂದನು.

೧೨ ವರ್ಷದ ರಾಮನಾಥ ಯುದ್ಧಕ್ಕೆ ನಡೆದ, ಜಗತಾಪಿಯನ್ನು ಸೋಲಿಸಿದ. ರಾಮನ ಮನ್ನೆಯರು ಅವನ ಕುದುರೆಗಳನ್ನು ಸೆರೆಹಿಡಿದರು. ಆಗ ಕಂಪಿಲನ ೫ ಜನ ಮಕ್ಕಳು ಮನ್ನೆಯರನ್ನು ಬೆದರಿಸಿ ಕುದುರೆ ಕಸಿದುಕೊಳ್ಳಲು, ರಾಮನಾಥ ಅವರನ್ನು ಗಾಸಿಗೊಳಿಸಿದ. ಮಂತ್ರಿ ಈ ಒಳಜಗಳ ಬಿಡಿಸಿದ.

ರಾಮನಾಥ ಜಗತಾಪಿಯನ್ನು ಸೆರೆಹಿಡಿದು ತಂದೆಗೆ ಒಪ್ಪಿಸಿದ. ತನ್ನನ್ನು ಓಲೈಸುತ್ತ ಬಾಳು ಎಂದು ತಿಳಿಹೇಳಿ, ಕಂಪಿಲ ಜಗತಾಪಿಯನ್ನು ಕಳಿಸಿದ. ಐದೂ ಜನ ಕುಮಾರರು ಬಂದು, ತಮ್ಮ ಹತ್ತು ಕುದುರೆ ಕಾಣೆಯಾದವು, ನಮಗೆ ರಾಮನೊಡನೆ ಬಾಳಲು ಸಾಧ್ಯವಿಲ್ಲ. ಒಂದು ಊರು ಕೊಡು, ಇಲ್ಲಿಂದ ದೂರ ಹೋಗುವೆನೆಂದು ದೂರಿದರು. ಕಂಪಿಲರಾಯ ಅವರಿಗೆ ೧೦ ಕುದುರೆ ಬಿಡಿಸಿಕೊಟ್ಟ, ಅಲ್ಲಿಗೆ ಬಂದ ರಾಮಯ್ಯ, ತನ್ನ ಮನ್ನೆಯರು ಹಿಡಿದ ಕುದುರೆಗಳನ್ನು ಹೀಗೆ ನೀಡಿದುದನ್ನು ಪ್ರತಿಭಟಿಸಿದ. ಆಗ "ನೀನು ಸಮರ್ಥನೇ ಆಗಿದ್ದರೆ (ಓರುಗಲ್ಲಿನ ಪ್ರತಾಪರುದ್ರನ ಮಗ) ಎಪ್ಪತ್ತು ರಾಜನ ಬೊಲ್ಲ ಕುದುರೆಯನ್ನು ಗೆದ್ದು ತೆಗೆದುಕೊಂಡು ಬಾ" ಎಂದು ತಂದೆ ಎಸೆದ ಸವಾಲನ್ನು ಸ್ವೀಕರಿಸಿ, ರಾಮಯ್ಯ ಅದನ್ನು ತರಲು ಸಿದ್ಧನಾದ.

ಸಂಧಿ : ೫

ಕುಮಾರರಾಮನ ತಾಯಿಯ ಆರ್ಶೀವಾದ ಪಡೆದು, ಕಾಟಣ್ಣ ಮತ್ತು ಸೈನ್ಯದೊಂದಿಗೆ ಓರುಗಲ್ಲಿಗೆ ಪ್ರಯಾಣ ಬೆಳೆಸಿದ. ರಾಜಧಾನಿಯ ಹೊರವಲಯದ ಗುಡಿಯಲ್ಲಿ ಬೀಡುಬಿಟ್ಟ. ರಾಮಯ್ಯನ ಸ್ಥಾನಪತಿಯು ಪ್ರತಾಪರುದ್ರನ ಆಸ್ಥಾನಕ್ಕೆ ಹೋಗಿ, ತಂದೆಯೊಡನೆ ಜಗಳಕಾಯ್ದು, ರಾಮಯ್ಯ ಬಂದ ವಿಷಯ ತಿಳಿಸಿದ. ರಾಮಯ್ಯ ಗುಂಡಬ್ರಹ್ಮಯ್ಯ ದೇವರಿಗೆ ನಮಸ್ಕರಿಸಿ ಎಪ್ಪತ್ತು ರಾಜನ ಬೊಲ್ಲ ಕುದುರೆ ಸಿಕ್ಕರೆ "ಶೂಲದ ಹಬ್ಬ" ಆಚರಿಸುವುದಾಗಿ ಹರಕೆ ಹೊತ್ತ. ರಾಮಯ್ಯನ ಕನಸಿನಲ್ಲಿ ಗುಂಡಬ್ರಹ್ಮಯ್ಯ ಬಂದು ವರ ದಯಪಾಲಿಸಿದ.

ಉದಯಕಾಲದಲ್ಲಿ ರುದ್ರರಾಯ ಮಜ್ಜನಮಾಡಿ, ಗುರುಲಿಂಗಜಂಗಮಕೆ ವಂದಿಸಿ, ರಾಸಿಯಾಟಕೆ(?)ಬಂದು, ಪಂಚರತ್ನದ ಕಂತೆ-ಬೆಳ್ಳಿ ಕಂತೆ, ಕಬ್ಬಿಣದ ಕಂತೆ ರುದ್ರಾಕ್ಷಿ ಕಂತೆಯ ಜಂಗಮರಿಗೆ ವಂದಿಸಿದ. ದೀಕ್ಷಾಬೋಧೆ ಓದುತ್ತಲಿದ್ದ ಈ ಷಡುಸ್ಥಲದವರಿಗೆ ಶರಣುಮಾಡಿ, ಓಲಗಕ್ಕೆ ಬಂದು, ಗದ್ದುಗೆಯಲ್ಲಿ ಕುಳಿತು, ರಾಮನನ್ನು ಕರೆತರಲು (ದೇವಿಶೆಟ್ಟಿಯ) ಲಿಂಗವನ್ನು ಕಳಿಸಿದ, ಬಂದ ಲಿಂಗನ ವೈಹಾಳಿಯನ್ನು ನೋಡಿ ರಾಮಯ್ಯ ರಾಮಯ್ಯನ ವೈಹಾಳಿಯನ್ನು ನೋಡಿ ಲಿಂಗ ಪರಸ್ಪರ ಮೆಚ್ಚು ವಿಶ್ವಾಸಿಕರಾದರು. ರಾಮಯ್ಯ ತಾನು ಬಂದ ಕಾರಣ ತಿಳಿಸಿದ. ಈ ಕಾರ್ಯದಲ್ಲಿ ನೆರವಾಗುವುದಾಗಿ ಲಿಂಗಣ್ಣ ಆಶ್ವಾಸನೆ ನೀಡಿದ. ಇಬ್ಬರೂ ಆಸ್ಥಾನಕ್ಕೆ ಹೊರಟರು. ದಾರಿಯುದ್ದಕ್ಕೂ ಹೆಂಗಳೆಯರು ರಾಮನ ರೂಪಕ್ಕೆ ಮರುಳಾದರು. ಇಬ್ಬರೂ ಆಸ್ಥಾನದೊಳಗೆ ಬಂದರು. ತನ್ನ ಮಗ ಎಪ್ಪತ್ತು ರಾಜ ಮತ್ತು ರಾಮಯ್ಯ ಒಂದಾದುದು ತನ್ನ ಸುದೈವವೆಂದು ಭಾವಿಸಿದ ರುದ್ರರಾಜ ರಾಮಯ್ಯನನ್ನು ಸತ್ಕರಿಸುತ್ತಲೇ, ಭಟ್ಟರು ಹೊನ್ನನು ಕೊಟ್ಟು ಕುದುರೆಯ ಕೊಂಬುವಂಥ ಮನ್ನಣೆ ರಾಯರ ಗಂಡ, "ಭೂಮಿಯ ರಾಯರ ಗಂಡ" ಎಂದು ಕಹಳೆ ಧ್ವನಿಯೊಂದಿಗೆ ಬಿರುದನ್ನು ಉಗ್ಗಡಿಸಿದರು. ಕೇಳಿದ ರುದ್ರರಾಜ ಕೋಪತಾಳಿದ. ಲಿಂಗವನ್ನು

ಕರೆಯಿಸಿ "ರಾಮನ ಈ ವರ್ತನೆ ಸರಿಯಲ್ಲ" ಎಂದು ನುಡಿದ. ಇದಕ್ಕೆ ಲಿಂಗ ಸಹಮತ ನೀಡಲಿಲ್ಲ. ರುದ್ರರಾಜ ರಾಮಯ್ಯನ ಮೇಲೆ ಸೈನ್ಯ ಕಳುಹಿಸಿದ. ಲಿಂಗ ತನ್ನ ಭಂಡಾರ, ಸೈನ್ಯದೊಂದಿಗೆ ಓರುಗಲ್ಲು ಬಿಟ್ಟು, ರಾಮಯ್ಯನೊಂದಿಗೆ ಕೂಡಿಕೊಂಡ.

ಸಂಧಿ : ೬

ಈ ಸುದ್ದಿ ಕೇಳಿದ ರುದ್ರರಾಯ ಸೈನ್ಯ ಕಳುಹಿಸಿದ. ಲಿಂಗಣ್ಣ, ರಾಮಯ್ಯ, ವೈರಿಸೈನ್ಯವನ್ನು ಮುರಿದೋಡಿಸಿದರು. ರುದ್ರರಾಯನ ಮಗ ಎಪ್ಪತ್ತುರಾಯ ತನ್ನ ಬೊಲ್ಲ ಕುದುರೆಯನ್ನೇರಿ ಯುದ್ಧಕ್ಕೆ ಬಂದ. "ಕೆಟ್ಟ ದಿನದಂದು ಹಗಲಿನಲ್ಲಿ ಮಂಗಲರಾಯನ ಲಾಯದಲ್ಲಿ ಈ ಬೊಲ್ಲ ಹುಟ್ಟಿತು. ಇದು ಅಪಶಕುನವೆಂದು ಅವನು ದಿಳ್ಳಿಯ ಸುರಿತಾಳನಿಗೆ ಒಪ್ಪಿಸಿದ. ಕೆಟ್ಟ ವೇಳೆಯಲ್ಲಿ ಹುಟ್ಟಿದ ಇದನ್ನು ಮಾರಲು ಸುರಿತಾಳ ಹೇಳಿದ. ಎಪ್ಪತ್ತುರಾಯ ಇದನ್ನು ಖರೀದಿಸಿದ" ಎಂದು ಲಿಂಗಣ್ಣ ರಾಮಯ್ಯನಿಗೆ ಬೊಲ್ಲನ ವೃತ್ತಾಂತ ಹೇಳಿದ. ಯುದ್ಧದಲ್ಲಿ ಎಪ್ಪತ್ತುರಾಯನನ್ನು ಸೆರೆ ಹಿಡಿದು, ರಾಮನು ಬೊಲ್ಲನನ್ನು ಕೈವಶಮಾಡಿಕೊಂಡ. ಲಿಂಗಣ್ಣನ ಮಾತಿನಂತೆ ರಾಮಯ್ಯ ಎಪ್ಪತ್ತುರಾಯನನ್ನು ಬಿಟ್ಟುಕೊಟ್ಟ.

ರಾತ್ರಿ ಗುಂಡಬ್ರಹ್ಮಯ್ಯನ ಗುಡಿಯಲ್ಲಿ ವಸತಿಮಾಡಿ, ಮರುದಿನ ಪಯಣ ಬೆಳೆಸಿದ, ಮದಗಜರೆಡ್ಡಿ, ಮಂಚನ ರೆಡ್ಡಿ, ಕಲ್ಲಿ ರೆಡ್ಡಿ ಮೊದಲಾದ ನವಲಕ್ಷ ತೆಲುಗರು ಬೊಲ್ಲನನ್ನು ಬಿಡಿಸಿಕೊಳ್ಳಲು ರಾಮನನ್ನು ಪ್ರತಿಭಟಿಸಿದರು. ಇವರನ್ನೆಲ್ಲ ಸೋಲಿಸಿ ರಾಮಯ್ಯ "ನವಲಕ್ಷ ತೆಲುಗರ ಗಂಡ" ಎಂಬ ಬಿರುದು ಧರಿಸಿದನು. ದಾರಿಯಲ್ಲಿ ನಾಯ್ಪಿನಾಯಕ, ಹುಳಿಯಾರ ಮಾರಗೊಂಡ ಎದುರಿಸಿದರು. ಮಾರಿಗೊಂಡ ಸೋತು ಎಪ್ಪತ್ತು ಸಾವಿರ ಹಣ, ಗಿಳಿಪಂಜರ, ಎಪ್ಪತ್ತು ಆನೆ, ಖಡ್ಗ ಕಾಣಿಕೆ ನೀಡಿದನು. ರಾಮಯ್ಯ ಬೊಲ್ಲನೊಂದಿಗೆ ಹೊಸಮಲೆದುರ್ಗಕ್ಕೆ ಬಂದು, ತಂದೆಗೆ ಲಿಂಗನ ಪರಿಚಯ ಮಾಡಿಕೊಟ್ಟು, ಕಂಪಿಲನನ್ನು ಸಂತೋಷಪಡಿಸಿದನು.

ಸಂಧಿ : ೭

ರಾಮಯ್ಯನ ಸ್ವಪ್ನದಲ್ಲಿ ಗುಂಡಬ್ರಹ್ಮಯ್ಯ ಕಾಣಿಸಿಕೊಂಡು 'ಶೂಲದ ಮಹಾತ್ಮೆ' ವಿವರಿಸಿದ. ಇದರಿಂದ ಪ್ರಭಾವಿತನಾದ ರಾಮಯ್ಯ ತಂದೆಯ ಬಳಿಗೆ ಬಂದು, ಶೂಲದ ಹಬ್ಬ ಆಚರಿಸುವುದಾಗಿ ತಿಳಿಸಿದ. ಹೊಸಮಲೆದುರ್ಗವನ್ನು ಸಿಂಗರಿಸಿದರು. ಮಾನ್ಯ ಮಾನ್ಯರು ತಮ್ಮ ತಮ್ಮ ಶೂಲಗಳನ್ನು ಅಲಂಕರಿಸಿದರು. ಕಂಪಿಲರಾಯ, ಬೈಚಪ್ಪ ಹಬ್ಬ ನೋಡಲು ಬಂದರು. ರತ್ನಾಜಿಯೂ ಸಿಂಗರಿಸಿಕೊಂಡು ಸೇವಕಿಯರಾದ ನಾಗಿ, ಸಂಗಿಯರೊಡನೆ ಬಂದು ಶೂಲದ ಮೆರವಣಿಗೆ ನೋಡಿದಳು. ಕಾಟಣ್ಣ, ದೇವಿಶೆಟ್ಟಿಯ ಲಿಂಗ, ಭಾವಸಂಗಮ, ಕೊಂಡಿಯ ರಾಜಭೈರವ, ತಳವಾರ ನರಸಯ್ಯನ ಮಗ ಸಿಂಗ, ಉಚ್ಚಂಗಿದುರ್ಗದ ಕಬ್ಬೇರ ನಾಗ, ಬೆಳಗಲ್ಲ ನಾಡಿನ ಬಲವಂತ ಸಿಂಗ, ಗುರ್ಜರ ಕಂಪನ ಮಗ ಬಸವಯ್ಯ, ಗುತ್ತಿಯ ಜಗತಾಪಿ ರಾಯನ ಮಗ, ತೋರಗಲ್ಲನಾಳುವ ಗೊಲ್ಲರ ಬಾಚಿಗ, ಅಗರುಗಂಬಿಯನ್ನಾಳುವ ಬಾಚಿನಾಯಕ, ಕೊಳ್ಳಿಯ ನಾಗ–ಇವರ ಶೂಲಗಳನ್ನು ಒಂದೊಂದಾಗಿ ನಾಗಿ ತೋರಿಸಿದಳು. ಮುಂದುವರಿದು ಹೇಳಿದ ರಾಮನ ವಿವರ ಕೇಳುತ್ತಲೇ, ನೋಡಿ ಅವನ ರೂಪಕ್ಕೆ ರತ್ನಾಜಿ ಸೋತುಹೋದಳು. ಶೂಲದ ಮೆರವಣಿಗೆ ಮುಗಿಯುತ್ತಲೇ

ರತ್ನಾಜಿ ಅರಮನೆಗೆ ಹೋಗಿ ವಿರಹದಲ್ಲಿ ಕುದಿಯತೊಡಗಿದಳು. ಕಾರಣ ತಿಳಿದುಕೊಳ್ಳಲು ಒತ್ತಾಯಿಸಿದ ನಾಗಿಯಿಂದ ಆಣೆ ಪ್ರಮಾಣ ಮಾಡಿಸಿಕೊಂಡು, ತನ್ನ ಒಳತೋಟಿಯನ್ನು ತೋಡಿಕೊಂಡು, ಈ ವಿಷಯವನ್ನು ರಹಸ್ಯವಾಗಿಡುವಂತೆ ಅವಳಿಗೆ ಲಂಚದ ಆಸೆ ತೋರಿದಳು. ಅರಮನೆಯ ಒಳಗೆ, ಹೊರಗಿನ ಉದ್ಯಾನದಲ್ಲಿ ರಾಮನನ್ನು ಹುಚ್ಚಿಯಂತೆ ಹುಡುಕಿದಳು. ಮೈ ಬಣ್ಣ ಗೆಟ್ಟಿತು.

ಸಂಧಿ : ೮

ರಾಮಯ್ಯ ಶೂಲದ ಹಬ್ಬ ಮುಗಿಸಿ ಬೇಟೆಗೆ ಹೊರಟನು. ಮೊಲವೊಂದನ್ನು ರಾಮ ಬೆನ್ನಟ್ಟಿದ. ನಾಯಿಯನ್ನು ಕಚ್ಚಿ ಅದು ಓಡುತ್ತ ಕುಮ್ಮಟಕ್ಕೆ ಬಂದಿತು. ಆ ದುರ್ಗವನ್ನು ಕಂಡು ರಾಮ ಬೆರಗಾದ. ಇದು ತನಗೆ ನೆಲೆಯಾಗಿರಬೇಕೆಂದು ಬಯಸಿದ. ಅಲ್ಲಿಯ ಜೈನರು ಸಿದ್ಧಪಡಿಸಿದ್ದ ಅಡಿಗೆಯನ್ನು ಊಟಮಾಡಿ ಮರಳುವಾಗ ಅಲ್ಲಿ ವಂಕುಟಿಯನ್ನು ಮರೆತನು. ಅದನ್ನು ತರಲು ಹೋದ ಸೇವಕನು "ನೀವು ಊಟಕ್ಕೆ ಕುಳಿತಿದ್ದ ಜಾಗವನ್ನು ಜೈನರು ತೊಳೆದು ಪವಿತ್ರಗೊಳಿಸುತ್ತಲಿದ್ದಾರೆ" ಎಂದು ಹೇಳಿದನು. ಇದನ್ನು ಕೇಳಿದ ರಾಮ ಸಿಟ್ಟಿಗೆದ್ದು ಅಲ್ಲಿಯ ಬಸದಿಗಳಲ್ಲಿ ಕುರಿಕೋಣ ಕೊಯಿಸಿದ. ಇದರಿಂದ ನೊಂದ ಜೈನರು ಅಲ್ಲಿಂದ ಕೊಪ್ಪಳಕ್ಕೆ ಗುಳೆ ಬಂದರು. ರಾಮಯ್ಯ ಕುಮ್ಮಟವನ್ನು ರಾಜಧಾನಿಯನ್ನಾಗಿ ರೂಪಿಸಿಕೊಂಡ, ಓಲೆ ಬರೆದು, ತಂದೆ ಮತ್ತು ಸಕಲ ಪರಿವಾರದವರನ್ನು ಕರೆಸಿದ. ರತ್ನಾಜಿಯೂ ಬಂದಳು ರಾಮನನ್ನು ನೋಡಬೇಕೆಂದು ಅಡಿಯಿಂದ ಮುಡಿಯ ವರೆಗೆ ಶೃಂಗರಿಸಿಕೊಂಡು, ಹಂಪಾಜಿಯ ಹಸ್ತಸಹಾಯದೊಂದಿಗೆ ಉಪ್ಪರಿಗೆ ಏರಿದಳು. ಶಂಭುರಾಯನ ಕುದುರೆಯನ್ನು ತಂದ ಗಡಿಯ ಭೋಗಣ್ಣ, ಗುತ್ತಿಯ ಜಗತಾಪಿಯನ್ನು ಗಾಸಿಮಾಡಿದ. ಕತ್ತಲೆರಾಯನ ಮಗ, ನಾಗ, ಚೌರದ ಗಂಗ, ಲಕ್ಕ, ದೇವಿಶೆಟ್ಟಿಯ ಲಿಂಗ, ಬಾದೂರ ಖಾನ್, ಸಂಗಮ, ಅಕ್ಕಸಾಲೇರ ಚಿಕ್ಕ, ಮಂತ್ರಿಕುಮಾರ, ಹುಳಿಯಾದ ಮಾರಗೊಂಡನ ಮಗ, ಕೊಪ್ಪಳದ ತಿಮ್ಮರಾಜ, ಗುಡಿಕೋಟೆ ತಿಮ್ಮರಾಜ, ದೇವದುರ್ಗದ ರಾಯ ಮಗ ಇವರನ್ನು ಸಂಗಾಜಿ ಒಂದೊಂದಾಗಿ ತೋರಿದಳು, "ಅವರಿವರನು ಬೇಡ, ರಾಮನನ್ನು ತೋರು" ಎಂದು ರತ್ನಾಜಿ ಕೇಳುತ್ತಲೇ ಅವನನ್ನು ಬೆರಳಲಿಟ್ಟು ತೋರಿಸಿದಳು. ಕಾಣುತ್ತಲೇ ರತ್ನಾಜಿ ಮುದಿ ಕಂಪಿಲನನ್ನು ಶಪಿಸಿ, ಯುವ ರಾಮನನ್ನು ಕಣ್ತುಂಬ ನೋಡಿದಳು.

ಸಂಧಿ : ೯

ಒಂದು ದಿನ ಕಂಪಿಲ ಬೇಟೆಗೆಂದು ಅತ್ತ ಹೊಸಮಲೆಗೆ ಹೋದನು. ಇತ್ತ ರಾಮಯ್ಯ ನೀರಾಟವಾಡಲು ಬಯಸಿದ. ಊರೊಳಗಣ ಹರುಗೋಲುಗಳನ್ನು ತರಿಸಿ, ತುಂಗಭದ್ರೆಗೆ ತೆರಳಿದ. ಹಂಪರಾಜ, ಕಂಪರಾಜ, ಕೊಂಡಿಯ ರಾಜ, ಸಂಪಿಗೆರೆಯ ತಿಮ್ಮರಾಜ, ಹಡಪದ ಹೊಲ್ಲುಗ, ಸಂಗಯ್ಯ, ಕಾಟಣ್ಣ, ಬೈಚಪ್ಪನ ಕುಮಾರರೊಂದಿಗೆ ನೀರನ್ನು ಪ್ರವೇಸಿಸಿದ. ಎಲ್ಲರೂ ಸೇರಿ ನೀರಾಟವಾಡಿದರು. ಪರಸ್ಪರರ ಮೇಲೆ ನೀತು ತೂರಿ ಸಂತೋಷಪಟ್ಟರು. ಬಲೆ ಹಾಕಿ ಮೀನು ಹಿಡಿದರು. ಹರಿಗೋಲನ್ನು ಏರಿಬಂದ ನೀರೆಯರೊಡನೆ ಓಕುಳಿಯಾಡಿದರು. ಎಲ್ಲರೂ ತಣಿದು, ದಣಿದು ವಿರೂಪಾಕ್ಷನಿಗೆ ವಂದಿಸಿ, ಕಮ್ಮಟಕ್ಕೆ ಮರಳಿದರು. ರಾಮಯ್ಯ ಮಜ್ಜನಮಾಡಿ, ಉಂಡು, ಮಡದಿಯರೊಡನೆ ತೂಗು ಮಂಚದಲ್ಲಿ ಮಲಗಿದನು. ಎದ್ದು ಕೈಕಾಲು ತೊಳೆದುಕೊಂಡು ಹೊತ್ತು ಹೋಗದು, ಚಂಡನಾಡಬೇಕು ಎಂದು ಬಯಸಿದನು. ಶೃಂಗರಿಸಿಕೊಂಡು ತಾಯಿ

ಹರಿಯಲದೇವಿಯಲ್ಲಿಗೆ ಬಂದು, ಪೆಟ್ಟಿಗೆಯಲ್ಲಿನ ಮುತ್ತಿನ ಚೆಂಡ ಬೇಡಿದನು. "ಇದು ಕೇಡನ್ನುಂಟು ಮಾಡುವ ಚೆಂಡು, ಇದರೊಂದಿಗೆ ಆಟ ಬೇಡ" ಎಂದು ತಾಯಿ ಪರಿ ಪರಿ ಹೇಳಿದಳು. ರಾಮಯ್ಯ ಕೇಳಲಿಲ್ಲ. ಕೊನೆಗೂ ಅದನ್ನು ಪಡೆದುಕೊಂಡು ಗೆಳೆಯರ ಸೂಚನೆಯಂತೆ ರತ್ನಾಜಿ ಅರಮನೆ ಮಗ್ಗುಲಿನ ವಿಶಾಲ ಪ್ರದೇಶಕ್ಕೆ ಹೋದರು. ಚೆಂಡನ್ನು ಪೂಜಿಸಿ, ಆಳುಗಳನ್ನು ಹಂಚಿಕೊಂಡು ಲಗ್ಗೆ ಆಟ ಆರಂಭಿಸಿದರು. ಊರ ಜನರು, ಊರೂರ ಸೂಳೆಯರು ಈ ಆಟ ನೋಡಲು ಕಕ್ಕಿರಿದು ಸೇರಿದರು. ಎಲ್ಲರೂ ರಾಮನ ರೂಪ, ಶಕ್ತಿಗಳಿಗೆ ಬೆರಗಾದರು. ಆಟದ ಸದ್ದು ಕೇಳಿ ರತ್ನಾಜಿ ತನ್ನ ಸೇವಕಿಯರಾದ ನಾಗಾಯಿ, ಸಂಗಾಯಿರೊಂದಿಗೆ ಉಪ್ಪರಿಗೆ ಏರಿದಳು. ರಾಮನಾಡುವ ಚೆಂಡು ತನ್ನ ಮನೆಯಲ್ಲಿ ಬೀಳಲೆಂದು ಹಲವಾರು ದೇವರಿಗೆ ಹರಕೆ ಹೊತ್ತಳು. ಆಟಗಾರರನ್ನು ಒಬ್ಬೊಬ್ಬರಂತೆ ಸಂಗಿ ರತ್ನಾಜಿಗೆ ತೋರಿಸಿದಳು. ಕೊನೆಯಲ್ಲಿ ರಾಮನನ್ನು ತೋರಿಸುತ್ತಲೇ ರತ್ನಾಜಿ ಮೋಹಗೊಂಡು ವಿರಹತಪ್ತೆಯಾದಳು.

ಅಷ್ಟರಲ್ಲಿ ಆಡುವ ಚೆಂಡು ಪುಟ ನೆಗೆದು ರತ್ನಾಜಿಯ ಮನೆಯಲ್ಲಿ ಬಿದ್ದಿತು. ಅದನ್ನು ತರಲು ಮೊದಲು ಕಾಟಣ್ಣನನ್ನು, ಬಳಿಕ ಹಳಬನಾದ ಬೊಲ್ಲನನ್ನು ಕಳಿಸಲಾಯಿತು. ರತ್ನಾಜಿ ಏನೇನೋ ನೆವ ಹೇಳಿ ಅವರನ್ನು ಹಿಂದಿರುಗಿಸಿದಳು. ಕೊನೆಗೆ ಅನಿವಾರ್ಯವಾಗಿ ರಾಮನೆ ಚೆಂಡು ಕೇಳಲು ಹೋದ. 'ಶಯ್ಯಾಗೃಹದಲ್ಲಿದೆ ತೆಗೆದುಕೋ ಹೋಗು' ಎಂದು ಹೇಳಿದಳು. ರಾಮ ಒಳಗೆ ಹೋಗುವುದೇ ತಡ, ಬೆನ್ನ ಹಿಂದೆಯೇ ನಡೆದ ರತ್ನಾಜಿ ಅವನನ್ನು ತಬ್ಬಿಕೊಂಡಳು, ರಾಮಯ್ಯ ಬಿನ್ನವಿಸಿಕೊಂಡ, ಬುದ್ಧಿಹೇಳಿದ, ಸಿಟ್ಟು ಮಾಡಿದ, ರತ್ನಾಜಿ ಕೇಳಲಿಲ್ಲ. ಕಂಪಿಲನಿಂದ ದೊಡ್ಡ ಗೌರವ ಸಿಗುವಂತೆ ಮಾಡುವೆ, ಕಂಪಿಲನನ್ನು ಕೊಲ್ಲಿಸಿ ನಿನಗೆ ಪಟ್ಟಕಟ್ಟುವೆ ಏನೆಲ್ಲ ಹೇಳಿದಳು. ಸಿಟ್ಟಿಗೆದ್ದ ರಾಮ ಅವಳನ್ನು ನೂಕಿ ಹೊರಹೊರಟ. ಪ್ರತಿಯಾಗಿ ಸಿಟ್ಟಿಗೆದ್ದ ರತ್ನಾಜಿ, ಕಲ್ಯಾಣದಲ್ಲಿ ತಳವಾರ ರಾಮನ ರಾಣಿಯ ಪ್ರೀತಿಯನ್ನು ತಿರಸ್ಕರಿಸಿದ ಚಿಕ್ಕಯ್ಯ ಮರಣದಂಡನೆಗೆ ಗುರಿಯಾದುದನ್ನು ನೆನಪಿಸಿಕೊಟ್ಟಳು. ಇದೇನನ್ನೂ ಲೆಕ್ಕಿಸದೆ, ಕುಮಾರರಾಮ ಅವಳನ್ನು ತಳ್ಳಿ ಚೆಂಡಿನೊಂದಿಗೆ ಹೊರಬಂದ. ಅಪಮಾನಿತಳಾದ ರತ್ನಾಜಿ ರಾಮನನ್ನು ಕೊಲ್ಲಿಸಲು ನಿಶ್ಚಯಿಸಿದಳು.

ಸಂಧಿ : ೧೦

ರಾಮನಿಂದ ಅತ್ಯಾಚಾರಕ್ಕೆ ಬಲಿಯಾದವಳಂತೆ ತಲೆಗೂದಲನ್ನು ಹರವಿಕೊಂಡು, ಮೈಮೇಲೆ ಚೂರುಗಾಯ ಮಾಡಿಕೊಂಡು, ಕುಪ್ಪಸ ಸೀರೆ ಸಡಿಲಿಸಿಕೊಂಡು, ದುಃಖ ನಟಿಸುತ್ತ ಮಲಗಿದಳು, ರತ್ನಾಜಿ.

ಕಂಪಿಲರಾಯ ಬೇಟೆಯಿಂದ ಮರಳಿದ. ಹೀಗೆ ಮಲಗಿದ ಮನದನ್ನೆಯನ್ನು ನೋಡಿ ಕಂಗಾಲಾದ. ರಾಮನಿಂದ ಅತ್ಯಾಚಾರಕ್ಕೆ ಗುರಿಯಾದೆನೆಂದು ದುಃಖಿಸುತ್ತ, ವಿವರವಾಗಿ ಹೇಳಿದಳು. ಕೇಳುತ್ತಲೇ ಕಂಪಿಲ ಕ್ರುದ್ಧನಾದ. ಮಂತ್ರಿ ಬೈಚಪ್ಪನನ್ನು ಕರೆಯಿಸಿ, ವಿವರಿಸಿ, ರಾಮನನ್ನು ಕೊಲ್ಲಲು ಆಜ್ಞಾಪಿಸಿದ. ಇದನ್ನು ನಂಬದ ಬೈಚಪ್ಪ, ಒತ್ತಡಕ್ಕೆ ಒಳಗಾಗಿ, ರಾಮನಿಗೆ ವಿವರ ತಿಳಿಸಿ, ಅವನನ್ನು ಅವನ ಐದು ಜನ ಆತ್ಮೀಯರನ್ನು ನೆಲಮಾಳಿಗೆಯಲ್ಲಿ ಬಚ್ಚಿಟ್ಟ. ರಾಮನನ್ನು ಹೋಲುತ್ತಲಿದ್ದ ಖಳರಾಮನ ಶಿರಸ್ಸನ್ನು ಛೇದಿಸಿ ಕಂಪಿಲ, ರತ್ನಾಜಿಯರಿಗೆ ತೋರಿಸಿದ. ಜೊತೆಗೆ ಬಂಧನದಲ್ಲಿದ್ದ

ಕಳ್ಳರ ತಲೆ ಹಾರಿಸಿ ಅವು ರಾಮನೊಂದಿಗೆ ನೆಲಮಾಳಿಗೆಯಲ್ಲಿದ್ದ ಕಾಟ, ಸಂಗ, ಲಿಂಗ, ನಾಗಲಿಂಗ, ಸಿಂಗ ಇವರ ತಲೆಗಳೆಂದು ನಂಬಿಸಿದ. ಸತ್ತ ರಾಮನಿಗಾಗಿ ಕಂಪಿಲ ಮರುಗಿದ, ರತ್ನಿ ಸಂತುಷ್ಟಳಾದಳು.

ಹರಿಯಲ್ಲಮ್ಮ ಹಲುಬಿದಳು, ಅಕ್ಕ ಮಾರಮ್ಮ, ತಂಗಿ ಸಿಂಗಮ್ಮ ಅತ್ತು ಅತ್ತು ಬಳಲಿದರು. ರಾಮನ ರಾಣಿಯರು ದುಃಸ್ವಪ್ನ ಕಂಡರು. ಅಳುತ್ತ ಮಾವನ ಹತ್ತಿರ ಹೋಗಿ 'ಮಾಸ್ತಿ' ಯಾಗುವುದಕ್ಕೆ ಅಪ್ಪಣೆ ಕೇಳಿದರು. ಬೇಡವೆಂದರು ಹಿಡಿದ ಹಟ ಬಿಡಲಿಲ್ಲ. ಐದು ಜನ ರಾಣಿಯರು ರೇಶಿಮೆ ಬಟ್ಟೆ ಉಟ್ಟರು. ಆಭರಣ ತೊಟ್ಟರು. ಬಲಗೈಯಲ್ಲಿ ಕಠಾರಿ, ಎಡಗೈಯಲ್ಲಿ ಕನ್ನಡಿ–ಲಿಂಬೆಹಣ್ಣು, ಕಣಗಿಲ ಕೋಲು ಹಿಡಿದುಕೊಂಡು ಕುದುರೆ ಏರಿ, ಕಿಚ್ಚಿನತ್ತ ನಡೆದರು. ಸಮೀಪ ಬಂದು ಗಂಡನ ರೂಪ, ಶೌರ್ಯ, ಸದ್ಗುಣಗಳನ್ನು ಹಾಡುತ್ತ, ಕುಣಿಯುತ್ತ ಬಂದರು ಕಾಟಣ್ಣನ ಹೆಂಡತಿಯೂ ಜೊತೆಗೂಡಿದಳು. ನೀವು ಚಿತೆ ಹೋದರೆ ಸತ್ತ ರಾಯನ ಸುದ್ದಿ ಇನ್ನು ಖಚಿತವೆಂದು ಭಾವಿಸಲು ಸುರಿತಾಳನಿಗೆ ಅನುವು ಮಾಡಿ ಕೊಟ್ಟಂತಾಗುತ್ತದೆ. ಅದಕ್ಕಾಗಿ ಆರು ತಿಂಗಳು ತಡೆಯಬೇಕೆಂದು ಇವರಿಗೆ ಬೈಚಪ್ಪ ಬುದ್ಧಿ ಹೇಳಿ, ಚಿತಾಪ್ರವೇಶ ತಡೆಗಟ್ಟಿದ.

ಸಂಧಿ : ೧೧

ರಾಮನಾಥ ಸತ್ತ ಸುದ್ದಿ ದಿಲ್ಲಿ ತಲುಪಿತು. ದಂಡೆತ್ತಿಹೋಗಲು ಸುರಿತಾಳನು ನೇಮಿ ಖಾನನಿಗೆ ಆಜ್ಞಾಮಾಡಿದ. ಬೇಹಿನವರನ್ನು ಕಳುಹಿ ಸತ್ತುದನ್ನು ಖಚಿತಪಡಿಸಿಕೊಂಡನು. ಶಾದಿಯಖಾನ್, ಶಕಲಾತಿಖಾನ್, ಬೊಂಬರಖಾನ ಮೊದಲಾದವರೊಡನೆ ನೇಮಿಖಾನ ದಕ್ಷಿಣಕ್ಕೆ ಸೈನ್ಯ ಮುನ್ನಡೆಸಿದ. ಗಂಗಾಸಾಗರ, ಮಿರಜೆ, ಶರಜೆಗಳನ್ನು ದಂಡು ದಾಟಿತು. 'ಅಡ್ಡ ಆರು ಗಾವುದ ಉದ್ದ ಹನ್ನೆರಡು ಗಾವುದ' ಸೈನ್ಯ ಮುನ್ನಡೆಯಿತು. ನೇಮಿಗೆ ದಾರಿಯಲ್ಲಿ ಅಪಶಕುನಗಳಾದವು. ಕಲ್ಯಾಣ, ಸಗರ, ಬಿದಿರೆ, ವಿಜಾಪುರ, ಮಲ್ಲಾಬಾದಿಗಳನ್ನು ದಾಟಿ ಸೈನ್ಯ ಮುನ್ನಡೆಯಿತು. ದಾರಿಯ ಹಳ್ಳಿ ಪಳ್ಳಿಗಳು ಗೂಳೆ ಎತ್ತಿದವು. ಕೆಲವು ಜನ ಅಲ್ಲಲ್ಲಿ ತುರುಕರ ಸೈನ್ಯವನ್ನು ಎದುರಿಸಿದರು.

ನೇಮಿಖಾನನ ಸೈನ್ಯ ಏರಿಬಂದುದನ್ನು ತಿಳಿದ ಕಂಪಿಲ ದುಃಖಿಸಿದ. ಕುಮ್ಮಟದುರ್ಗವು ದಾಳಿಗೆ ಗುರಿಯಾಯಿತು. "ರಾಮನನ್ನು ಕಳೆದುಕೊಂಡು ಮೂರ್ಖತನ ಮಾಡಿದೆ" ಎಂದು ಕಂಪಿಲ ಬೈಚಪ್ಪನ ಮುಂದೆ ಹಲುಬಿದ. ಬೈಚಪ್ಪ ಸೈನ್ಯ ಸಿದ್ಧಪಡಿಸಿದ. ಯುದ್ಧ ಮುನ್ನಡೆಯಿತು. ಕಂಪಿಲನ ಸೈನ್ಯವನ್ನು ಎದುರಿಸಲಾಗದೆ ಸುರಿತಾಳನ ಸೈನ್ಯ ಸಗರದ ವರೆಗೆ ಓಡಿತು. ಮತ್ತೆ ಸಂಘಟಿತರಾಗಿ ತುರುಕರು ರಾತ್ರಿ ಕುಮ್ಮಟವನ್ನು ಮುತ್ತಿದರು. ರಾಣಿಯರು, ಬೈಚಪ್ಪ ಮಂತ್ರಿ ಸೇರಿ, ಕಂಪಿಲ ಮಾಡಿದ ಮೂರ್ಖತನವನ್ನು ಎತ್ತಿ ಆಡಿದರು. ಆಗ ರಾಮನಿಗೆ ಸರಿ ಮಿಗಿಲಾದ ರಾಹುತನನ್ನು ಕರೆತಂದು ಯುದ್ಧ ಮಾಡಿಸುವೆನೆಂದು ಹೇಳಿದ ಬೈಚಪ್ಪ ನೆಲ ಮಾಳಿಗೆಗೆ ಹೋಗಿ ರಾಮನನ್ನು ಪ್ರಕಟಪಡಿಸಿದ ಬೊಲ್ಲನನ್ನೇರಿ ಬಂದ ರಾಮಯ್ಯನನ್ನು "ಕಲ್ಯಾಣದಿಂದ ಬಂದ ರಾಹುತನು" ಎಂದು ಪ್ರಚಾರಮಾಡಿದರು. ಬೈಚಪ್ಪ ಸೈನ್ಯ ಸಂಗ್ರಹಿಸಿದ. ತುರುಕರು ರಾಮನ ಕಾಳಗವನ್ನು ಎದುರಿಸದಾದರು. ಚಾವಡಿಯಲ್ಲಿ ಕುಳಿತ ಕಂಪಿಲನ ಮುಂದೆ ರಾಮನನ್ನು ಕರೆತಂದು, ಬೈಚಪ್ಪ ನಿಲ್ಲಿಸಿದ. ಮಗನನ್ನು ನೋಡಿ ಕಂಪಿನ ತನ್ನ ಅಕಾರ್ಯಕ್ಕೆ ತಾನೇ ಹಳಿದುಕೊಂಡು ಮಗನನ್ನು ಕೊಂಡಾಡಿದ. ಸುದ್ದಿ ತಿಳಿದ ತಾಯಿ ಹರಿಯಮ್ಮ ಹರಿದು ಬಂದು, ಮಗನನ್ನು ಅಪ್ಪಿಕೊಂಡಳು, ಅಕ್ಕ ಮಾರಮ್ಮ, ತಂಗಿ ಸಿಂಗಮ್ಮ ರಾಮನ ರಾಣಿಯರು ಹರ್ಷಿತರಾದರು. ಎಲ್ಲರೂ ಬೈಚಪ್ಪನಿಗೆ

ವಂದಿಸಿದರು. ಸುದ್ದಿ ತಿಳಿದ ರತ್ನಾಜಿ ನೇಣುಹಾಕಿಕೊಂಡು ಸತ್ತಳು. ಕಂಪಿಲ ಅವಳ ಹೆಣವನ್ನು ಕತ್ತೆ ಕಾಲಿಗೆ ಕಟ್ಟಿ ಎಳೆಸಿರಿ ಎಂದು ಅಪ್ಪಣೆಯಿತ್ತನು. ರಾಮಯ್ಯ ಇದಕ್ಕೆ ಒಪ್ಪದೆ ಶವವನ್ನು ಹೂಳಿಸಿದ.

ಸಂಧಿ : ೧೨

ರಾಮನು ಬದುಕಿದ ಸುದ್ದಿ ಸುರಿತಾಳಿಗೆ ಮುಟ್ಟಿತು. ಬೈಚಪ್ಪನ ಸಮಯೋಚಿತ ಬುದ್ಧಿಯನ್ನು ಹೊಗಳಿ, ಕುಮ್ಮಟದುರ್ಗ ಸೇರಿಕೊಂಡಿರುವ ಬಾದೂರಖಾನನನ್ನು ಹಿಡಿತರಿಸಬೇಕೆಂಬ ತನ್ನ ಸಾಹಸ ವ್ಯರ್ಥವಾಗುವುದೆಂದು ಹಳಹಳಿಸಿದ. ಅಷ್ಟರಲ್ಲಿ ಸೋತು ಹಿಂದುರುಗಿದ ನೇಮಿಖಾನ ಸುರಿತಾಳನಲ್ಲಿಗೆ ಬಂದು, ಸೋಲಿನ ವಿವರ ಒಪ್ಪಿಸಿದ.

ಸಿಟ್ಟೆಗೆದ್ದ ಸುರಿತಾಳ, ಮತ್ತೆ ಯುದ್ಧಕ್ಕೆ ಹೋಗಲು ಈಗ ಮಾದಿಗಿತ್ತಿಗೆ ಆಜ್ಞಾಪಿಸಿದ. ಜೊತೆಗೆ ನೇಮಿಖಾನನೂ ನಡೆದ. ಮಾದಿಗಿತ್ತಿ ಸೈನ್ಯ ಮುನ್ನಡೆಸುತ್ತ ಬರುತ್ತಿರುವುದನ್ನು ಗಡಿಯಕೋಟೆಯ ಕಾಟನಾಯಕ ಕಂಪಿಲನಿಗೆ ತಿಳಿಸಿದ. ದಾರಿಯಲ್ಲಿ ಕಬ್ಬಲಿಗ ನಾಗ, ಹೆಬ್ಬುಲಲಿ ಭೈರಣ್ಣ, ಹಬ್ಬಿಯ ನಾಯಕ ಕಾದಿದರು. ಜನಕಲ್ಲ ದುರ್ಗದಲ್ಲಿ ಮಾತಂಗಿ ಬೀಡುಬಿಟ್ಟಳು. ಬಳಿಕ ಸೈನ್ಯ ಕುಮ್ಮಟವನ್ನು ಮುತ್ತಿತು. ರಾಮಯ್ಯ ಯುದ್ಧ ನಿರತನಾದ. ಹಗಲು ರಾತ್ರಿ ಹೋರಾಟ ನಡೆಯಿತು. ರಾಮಯ್ಯ ದುರ್ಗವನ್ನಿಳಿದನು. ಘೋರ ಯುದ್ಧ ಆರಂಭವಾಯಿತು. ರಣರಂಗವೆಲ್ಲ ಹೆಣಮಯವಾಯಿತು. ಮಾತಂಗಿ ಸೋತು ಒಂದು ಗಾವುದ ಹಿಂಜರಿದಳು.

ಅಷ್ಟರಲ್ಲಿ "ನವಲಕ್ಕ ತೆಲುಗರ ಗಂಡ" ಬಿರುದು ತಮಗೆ ಅಪಮಾನವೆಂದು ರಾಮನ ಸೈನ್ಯದ ತೆಲುಗು ನಾಯಕರು ಬಗೆದರು ಒಂದಾಗಿ ಚರ್ಚಿಸಿ, ರಾಮನನ್ನು ಕೊಲ್ಲಿಸಲು ನಿರ್ಣಯಿಸಿದರು. ಕೋಟೆ ಬಾಗಿಲು ತೆಗೆದುಕೊಡುವುದಾಗಿ ಮಾದಿಗಿತ್ತಿಗೆ ಹೇಳಿ ಕಳಿಸಿದರು. ಮಾದಿಗಿತ್ತಿ ಮತ್ತೆ ಸೈನ್ಯ ಸಜ್ಜುಗೊಳಿಸಿಕೊಂಡು, ಏರಿ ಬಂದಳು, ಒಳಕೋಟೆ ಕೈ ಬಿಟ್ಟಿತು. ರಾಮಯ್ಯ ತನ್ನ ಹೆಂಡಿರಿಂದ 'ಮಾಸ್ತಿ'ಯಾಗುವ ಭರವಸೆ ಪಡೆದು, ಕಾಟಣ್ಣನೊಂದಿಗೆ ಯುದ್ಧಕ್ಕೆ ನಡೆದ. ಅಷ್ಟರಲ್ಲಿ ತನ್ನ ಕಡೆಯ ನಲ್ಲ ನಾಗ, ಬಿಲ್ಲ ಸೋಮ, ಮೀನಗ, ಸಿಂಗ, ಬುಕ್ಕಿನಾಯಕ, ಕಲ್ಲುಕೋಟೆಯ ಚಿಕ್ಕ, ಮಾದಿಗರ ಹಂಪ, ಅಕ್ಕಸಾಲೆರ ಚಿಕ್ಕ, ಒಕ್ಕಲಿಗರ ಮುದ್ದ, ಕೊಳ್ಳಿಯ ನಾಗ, ಬೇವಿನ ಸಿಂಗ, ಹೊಲೆಯರ ಬುಳ್ಳ ಸತ್ತುದನ್ನು ಕೇಳಿ ರಣರಂಗದಲ್ಲಿ ಧುಮುಕಿದ, ಮಾದಿಗಿತ್ತಿ ಎದುರಾದಳು. ಪರಸ್ಪರ ಯುದ್ಧ ಕಾವೇರಿತು. ಮಾದಿಗಿತ್ತಿಯ ಪಡೆ ಮುರಿಯಿತು. "ಸಂಗ್ರಾಮದಲ್ಲಿ ಕಾದಿ ಹೆಂಗಸ ಕೊಂದರೆ ಭಂಗ ತಪ್ಪದು ಸ್ವರ್ಗದೊಳಗೆ" ಎಂದು ಅವಳನ್ನು ಬಿಟ್ಟುಕೊಟ್ಟನು. ಅಷ್ಟರಲ್ಲಿ ತುರುಕರು ಏರಿಬಂದು ರಾಮಯ್ಯನ ಮೇಲೆ ಬಾಣದ ಮಳೆ ಸುರಿದರು. ಗೂಗಿಕಲ್ಲು ಮೇಲೆ ನಿಂತು ರಾಮಯ್ಯ ಕಾದಿದ. ಪ್ರಯೋಜನವಾಗಲಿಲ್ಲ. ಬದುಕುವ ಭರವಸೆ ಅಳಿಯಿತು. ಅರಮನೆಗೆ ಹೋಗಿ ಮಡದಿಯರನ್ನು ಕೊಂದು ಬರಲು ಕಾಟಣ್ಣನಿಗೆ ಹೇಳಿದ, ಒತ್ತಾಯಿಸಿದ, ಆಣೆ ಇಟ್ಟ. ಕಾಟಣ್ಣ ಅರಮನೆಗೆ ಹೋದ, ನಿಜಸ್ಥಿತಿ ತಿಳಿದ ಎಲ್ಲರೂ ಗೋಳಿಟ್ಟರು. ನಾರಿಯರೆಲ್ಲ ಮಳಲಗೌರಿಯನ್ನು ಪೂಜಿಸಿದರು. ಓಡಿಬಂದು ಕೊಂಡ ಸುತ್ತಿ, ಕಟ್ಟೆ ಹತ್ತಿ, ರಾಮಯ್ಯನನ್ನು ಹಾಡುತ್ತ ಹೊಗಳುತ್ತ ಕಿಚ್ಚಿನಲ್ಲಿ ಧುಮುಕಿದರು. ಕಾಟಣ್ಣ ಅರಮನೆಗೆ ಬಂದು, ತನ್ನ ಮಡದಿಯರನ್ನು ಕೊಂದು, ರಾಮನಿದ್ದಲ್ಲಿಗೆ ಹೋದನು. ಮೈತುಂಬ ಬಾಣ ನೆಟ್ಟು ರಾಮ ಪ್ರಾಣಬಿಟ್ಟನು. ಅಪ್ಸರೆಯರು ರಾಮನಲ್ಲಿಗೆ ಬಂದರು. ಮರುಜೀವ ಪಡೆದ

ರಾಮ ಎದ್ದು ಬರಲು ಅವರು ಹಿಮ್ಮೆಟ್ಟಿದರು. "ಪರನಾರಿ ಸೋದರ" ಎಂಬ ಬಿರುದು ರಾಮನಿಗೆ ಸಾರ್ಥಕವಾಯಿತು. ಎದ್ದ ಶವವನ್ನು ನೋಡಿ ಮಾದಿಗಿತ್ತಿಯ ಸೈನ್ಯ ಓಡಿಹೋಯಿತು. ಅಷ್ಟರಲ್ಲಿ ಕಾಗೆಯೊಂದು ರಾಮನ ಶರೀರದ ಮೇಲೆ ಕುಳಿತು ಕೊಂಡಿತು. ರಾಮ ಸತ್ತನೆಂದು ಖಚಿತ ಮಾಡಿಕೊಂಡ ವೈರಿಗಳು ಅವನ ತಲೆ ಕತ್ತರಿಸಿದರು. ರಾಮನ ಸಾಹಸ, ಶೌರ್ಯ ಮೆಚ್ಚಿ ಬಾಯಲ್ಲಿ ಮುತ್ತು ಮಾಣಿಕ ರತ್ನ ತುಂಬಿ, ತಲೆಯನ್ನು ಗಂಧ ಕಸ್ತುರಿ ಪುಷ್ಪಗಳಿಂದ ಅಲಂಕರಿಸಿದರು.

ರಾಹುತನೊಂದಿಗೆ ರುಂಡವನ್ನು ಡಿಳ್ಳಿಗೆ ಕಳಿಸಿದರು. ಸುರಿತಾಳ ರುಂಡ ನೋಡಿ ಮರುಗಿದನು. ಅವನ ಮಗಳು ತಾನು ಲಗ್ನವಾಗಲು ಬಯಸಿದ್ದ ರಾಮಯ್ಯನ ಸ್ಥಿತಿಗೆ ದುಃಖಿಸಿ ಇವನನ್ನು ಬಿಡಲಾರೆ–ಎನ್ನುತ್ತ ತಲೆಯ ಮುತ್ತಿನ ಗೊಂಡೆಯನ್ನು ತನ್ನ ತುರುಬಿಗೆ ಮುಡಿದು ಕೊಂಡಳು. ತಲೆಯನ್ನು ತೊಡೆಯ ಮೇಲಿಟ್ಟುಕೊಂಡು ಅಳುತ್ತ, ಉಡಿಯಲ್ಲಿ ರುಂಡ ಕಟ್ಟಿಕೊಂಡು ಕಿಚ್ಚು ಬೀಳುವೆನೆಂದು ತಂದೆಗೆ ಬೇಡಿಕೊಂಡಳು, ತಂದೆ ಸಮಾಧಾನ ಪಡಿಸಿದ. ಮಲ್ಲಿಗೆ, ಸಂಪಿಗೆ, ಕೇದಗೆಗಳಿಂದ ಅಲಂಕರಿಸಿ ರುಂಡವನ್ನು ಊಳಿಗದವರ ಕೈಗಿತ್ತಳು. ಅದನ್ನು ಸೂರಹೊನ್ನಿ ಮರಕ್ಕೆ ಕಟ್ಟಲಾಯಿತು. ಮಧ್ಯರಾತ್ರಿ ಅದ್ಭುತಗಳು ಉದ್ಭವಿಸಿ, ದಿಲ್ಲಿಯ ಜನ ಕಂಗೆಟ್ಟರು. ಮರುದಿನ ತಲೆಯನ್ನು ಕೋಟೆ ಕಂದಕಕ್ಕೆ ಹಾಕಿದರು. ಪಟ್ಟಣ ನಡುಗುವಂತೆ ನಡುರಾತ್ರಿಯಲ್ಲಿ ರುಂಡ ಧ್ವನಿಮಾಡತೊಡಗಿತು. ಜನ ಭಯಭೀತರಾದರು. ಸುರಿತಾಳನ ಅಪ್ಪಣೆಯಂತೆ ರುಂಡವನ್ನು ಕುಮ್ಮಟಕ್ಕೆ ತಿರುಗಿ ಒಯ್ಯಲು ಊಳಿಗದವರು ಪ್ರಯತ್ನಿಸಿದರು. ಅದು ನೆಲ ಬಿಟ್ಟು ಏಳಲಿಲ್ಲ. ಆನೆ ಕಟ್ಟಿ ಜಗ್ಗಿಸಿದರು. ಸಾಧ್ಯವಾಗಲಿಲ್ಲ. ಸುರಿತಾಳನ ಭಟ್ಟ ಕುಮ್ಮಟಕ್ಕೆ ಬಂದು, ನಿಜಸ್ಥಿತಿ ವಿವರಿಸಿದ. ಕಂಪಿಲನ ಭಟ್ಟ ರೂಪಿದೇವಯ್ಯ ದಿಲ್ಲಿಗೆ ಹೋಗಿ ಸುರಿತಾಳನಿಂದ ಗೌರವ ಪಡೆದನು. ರೂಪಿದೇವಯ್ಯನ ಕನಸಿನಲ್ಲಿ ರಾಮಯ್ಯ ಬಂದು "ಡಿಳ್ಳಿಯ ಗಂಡ, ಡಿಳ್ಳಿರಾಯರ ಗಂಡ" ಎಂದು ಮುಂತಾಗಿ ಹೊಗಳಿದರೆ ಮಾತ್ರ ಬರುವೆನೆಂದು ಹೇಳಿದ. ಬೆಳಗಾಗುತ್ತಲೇ ರೂಪಿದೇವಯ್ಯ ಸುರಿತಾಳನಲ್ಲಿಗೆ ಬಂದು ಸ್ವಪ್ನ ವಿಶೇಷ ಹೇಳಿದ. ಸುರಿತಾಳನೂ ರೂಪಿದೇವಯ್ಯನೊಂದಿಗೆ ರುಂಡವಿದ್ದಲ್ಲಿಗೆ ಬಂದನು. ರೂಪಿದೇವಯ್ಯ ಮಧ್ಯದಲ್ಲಿ ರುಂಡವನ್ನಿಟ್ಟು ಮೂತ್ರ ವಿಸರ್ಜನೆಗೆ ಹೋಗಿ ಬರುವಷ್ಟರಲ್ಲಿ, ಅದು ಮರ ಏರಿದ್ದಿತು. ರೂಪಿದೇವಯ್ಯ ಮರಹತ್ತಿ ಶಾಪ ಹಾಕಿದ. ಆಗ ಪ್ರಾಣ ಅಳಿದ ರುಂಡದೊಂದಿಗೆ ಅವನು ಕುಮ್ಮಟಕ್ಕೆ ಬಂದ, ಕಂಪಿಲರಾಯ, ಹರಿಯಮ್ಮ ರುಂಡ ನೋಡಿ ಪರಿಪರಿಯಾಗಿ ಹಲುಬಿದರು. ಪ್ರಜೆ ಪರಿವಾರ ದುಃಖಿಸಿತು. ಕಂಪಿಲರಾಯ ರುಂಡವನ್ನು ವಿಶ್ವನಾಥನ ಪಾದಕ್ಕೆ ಅರ್ಪಿಸಲು ಕಾಶಿಗೆ ಕಳಿಸಿದನು.

ಆಕೃತಿ

ಕವಿಯೊಬ್ಬ, ಜೀವನವೆಂಬ 'ಕೃತಿ'ಯನ್ನು ಒಂದು ಆಕೃತಿವಿನ್ಯಾಸದಲ್ಲಿ ಕಟ್ಟಿಕೊಡುತ್ತಾನೆ. ಈ ಆಕೃತಿ ಪದ್ಯವಾಗಿದ್ದ ಪಕ್ಕದಲ್ಲಿ ಇದು ಕಥಾವಿನ್ಯಾಸದ ಜೊತೆಗೆ ಛಂದೋವಿನ್ಯಾಸವನ್ನೂ ಳಗೊಳ್ಳುತ್ತದೆ.

ಕುಮಾರರಾಮ ರಾಜಕೀಯ ಕ್ಷೇತ್ರದ ವ್ಯಕ್ತಿ. ಈ ಹೊತ್ತಿಗೆ ಕರ್ನಾಟಕದ ಸಾರ್ವಭೌಮತ್ವ ಬಿರುಕುಬಿಟ್ಟು, ರಾಜರನ್ನು ಕುರಿತು ಮಹಾಕೃತಿ ನಿರ್ಮಾಣ ಮಾಡುವ ವಾತಾವರಣ ನಾಶವಾಗಿದ್ದಿತು. ಈ ಕಡೆ ಎತ್ತರ ಪ್ರತಿಭೆಯ ಭಕ್ತಕವಿಗಳು ದೈವತ್ವಕ್ಕೆ ಮುಖಮಾಡಿ ರಾಜತ್ವಕ್ಕೆ ಬೆನ್ನು ತಿರುಗಿಸಿದ್ದರು.

ಇಂಥ ಪರಿಸ್ಥಿತಿಯಲ್ಲಿ ರಾಜರ ಮೇಲೆ ಸಾಮಾನ್ಯ ಕವಿಗಳ ಗಮನ ಮಾತ್ರ ಕೇಂದ್ರೀಕೃತವಾಯಿತು. ಇದಲ್ಲದೆ ಸಾಹಿತ್ಯಕ್ಕೆ ಸಾಮಾನ್ಯರೇ ಸಹೃದಯರಾಗಿದ್ದ ಮತ್ತು ಅವಸರದಿಂದ ವೀರಮೌಲ್ಯ ಪ್ರಸಾರಮಾಡಬೇಕಿದ್ದ ಕಾಲವದು. ಹೀಗಾಗಿ ಸಾಹಿತ್ಯದ ಶ್ರೇಷ್ಠತೆಯ ಮೇಲಿನ ಒತ್ತು ಕಡಿಮೆಯಾಗಿ, ಅದು ಮೌಲ್ಯಪ್ರಸಾರ ಮತ್ತು ಜನಪ್ರಿಯತೆಗಳ ಕಡೆಗೆ ಸರಿಯಿತು. ಇಷ್ಟು ಹಿನ್ನೆಲೆಯಲ್ಲಿ ಕಥಾ ವಿನ್ಯಾಸವನ್ನು ಕುರಿತು ಹೇಳುವುದಾದರೆ, ಪ್ರಾಚೀನ ಕರ್ನಾಟಕದಲ್ಲಿ ಪುರಾಣ, ಚರಿತ್ರೆ, ಪುರಾಣದ ಚರಿತ್ರೀಕರಣ, ಚರಿತ್ರೆಯ ಪುರಾಣೀಕರಣ ಇತ್ಯಾದಿ ಸಾಹಿತ್ಯಿಕ ಪ್ರಯೋಗಗಳು ಉದ್ದಕ್ಕೂ ನಡೆದು ಬಂದಿವೆ. ಆದಿಪುರಾಣವು ಪುರಾಣ, ವಿಕ್ರಮಾರ್ಜುನ ವಿಜಯವು ಪುರಾಣದ ಚರಿತ್ರೀಕರಣ, ಕಂಠೀರವ ನರಸರಾಜ ವಿಜಯವು ಚರಿತ್ರೆ, ಸಿದ್ಧರಾಮ ಚರಿತೆಯು ಚರಿತ್ರೆಯ ಪುರಾಣೀಕರಣ. ಈ ಅಂಶವನ್ನು ಗಮನಿಸಿ ಹೇಳುವುದಾದರೆ ಕುಮಾರರಾಮನ ಕಥೆಯು ಗಂಗ, ಅನಾಮಧೇಯ ಕವಿ-೧ ಇದರಲ್ಲಿ ಚರಿತ್ರೆಯಾಗಿ, ನಂಜುಂಡ, ಅನಾಮಧೇಯ ಕವಿ-೨ ಇದರಲ್ಲಿ ಮಹಾಲಿಂಗಯ್ಯ ಸ್ವಾಮಿಗಳಲ್ಲಿ ಚರಿತ್ರೆಯ ಪುರಾಣೀಕರಣವಾಗಿ ಹುಟ್ಟು ಪಡೆದಿದೆ. ಅಂದರೆ ಕುಮಾರ ರಾಮನನ್ನು ಅರ್ಜುನನೊಂದಿಗೆ, ರತ್ನಾಜಿಯನ್ನು ಊರ್ವಶಿಯೊಂದಿಗೆ ಸಮೀಕರಿಸಲಾಗಿದೆ. ಇದರಿಂದ ಕನ್ನಡಿಗರ ಮನಸ್ಸಿನಲ್ಲಿ ಕುಮಾರರಾಮ "ಲೌಕಿಕ ವೀರನಾಗಿ" ಹುಟ್ಟಿ, "ಪುರಾಣವೀರನಾಗಿ" ಬೆಳೆದುದು ಸ್ಪಷ್ಟವಾಗುತ್ತದೆ. "ದೇವರಾಗಿ" ಅಲ್ಲಲ್ಲಿ ಪೂಜೆಗೊಳ್ಳುತ್ತಲಿರುವುದು ತಿಳಿದ ವಿಷಯವೇ ಆಗಿದೆ.

ಛಂದೋವಿನ್ಯಾಸ ದೃಷ್ಟಿಯಿಂದ ಹೇಳುವುದಾದರೆ, ಸಾವಿರ ವರುಷಗಳ ಇತಿಹಾಸದಲ್ಲಿ ಕನ್ನಡ ಸಾಹಿತ್ಯ ವಿದ್ವಜ್ಜನ ಸಮುದಾಯದಿಂದ ಜನಸಮುದಾಯದತ್ತ ಸಾಗಿಬಂದಿದೆ. ಈ ಪ್ರಕ್ರಿಯೆ ಕಾರಣವಾಗಿ ಅದು ವಾಚನಪಾತಳಿಯಿಂದ ಶ್ರವಣಪಾತಳಿಗೆ ನಡೆಯುತ್ತ ಬಂದಿತು. ಈಗ ಸಹಜವಾಗಿಯೇ ಸಾರ್ವಜನಿಕರು ಕೇಳಲು ಯೋಗ್ಯವಾದ ಗೇಯಬಂಧಗಳನ್ನು ಹುಡುಕುತ್ತ ಬರಲಾಯಿತು. ಇದರ ಫಲವೆಂಬಂತೆ ವಾರ್ಧಕ, ಭಾಮಿನಿಗಳು ಬಿಚ್ಚಿಕೊಂಡವು. ಇನ್ನೂ ಗೇಯತೆಯನ್ನು ಬಯಸಿದಾಗ ಸಾಂಗತ್ಯ ಸಾಕಾರಗೊಂಡು, ನೂರಾರು ಕೃತಿಗಳು ಹುಟ್ಟಿಕೊಂಡವು. ಈ ಪರಂಪರೆಯಲ್ಲಿ ಸಿರುಮನನ್ನು ಕುರಿತು ೩ ಕೃತಿಗಳು, ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ಕಂಠೀರವ ನರಸರಾಜ ವಿಜಯಗಳಂತೆ, ಕುಮಾರರಾಮನನ್ನು ಕುರಿತು ೫ ಕೃತಿಗಳು ಕನ್ನಡದಲ್ಲಿ ಹುಟ್ಟಿಕೊಂಡವು.

ವೀರ, ಪ್ರಾಚೀನ ಕಾಲದಲ್ಲಿ ಬಹುಮುಖ್ಯ ಮೌಲ್ಯವಾಗಿದ್ದಿತು. ವೀರನೊಬ್ಬ ಯುದ್ಧದಲ್ಲಿ ಮಡಿಯುತ್ತಲೇ ಒಂದೆಡೆ ವೀರಗಲ್ಲ ಪೂಜೆ ನಡೆದರೆ, ಇನ್ನೊಂದೆಡೆ ಸಾಹಿತ್ಯ (ಶಿಷ್ಟ ಜಾನಪದ) ಮಾಧ್ಯಮದಲ್ಲಿ ಅವನ ಕೀರ್ತಿ ಪ್ರಸಾರಕಾರ್ಯ ನಡೆಯುತ್ತಿದ್ದಿತು. ಚಕ್ರವರ್ತಿಯಿಲ್ಲದ ಕರ್ನಾಟಕದಲ್ಲಿ ಸಂಭವಿಸಿದ ಚಿಕ್ಕಪುಟ್ಟ ಪಾಳೆಯಗಾರರ ಪರಸ್ಪರ ಘರ್ಷಣೆ ಮತ್ತು ಮುಸಲ್ಮಾನರ ಆಕ್ರಮಣಗಳಿಂದಾಗಿ ಈ ವೀರ ಮತ್ತು ಅದರ ಪ್ರಸಾರ ಇನ್ನೂ ಮಹತ್ವ ಪಡೆದವು. ಸಾಮಾನ್ಯವಾಗಿ "ವೀರನ ಸಾವು ಕತೆಯಾಗಿ ಪರಿದುದು" ಎಂಬ ಶಾಸನ ಮಾತಿನಂತೆ ಸಾವನ್ನು ಸಾಹಿತ್ಯ ಮಾಡುವ ಮತ್ತು ಅದನ್ನು ಸಮಾಜದ ತುಂಬ "ಪರಿಯಿಸುವ" ಸಲುವಾಗಿ ಚಾರಣ ಕವಿಗಳು, ಜಾನಪದ ನೀಲಗಾರನು (ಲೀಲೆಗಾರರು) ಹುಟ್ಟಿಕೊಂಡರು.

ಹೀಗಾಗಿ ಕುಮಾರರಾಮನನ್ನು ಕುರಿತ ಎಲ್ಲ ಕೃತಿಗಳು ಸಾಂಗತ್ಯದಲ್ಲಿಯೇ ಹೆಪ್ಪು ಗಟ್ಟಿದವು. ಇವುಗಳಲ್ಲಿ ನಂಜುಂಡನದು ವಿದ್ವತ್ತು ಕಾರಣವಾಗಿ ಭಾಷಾಲಯ ಒಂದು ಕಡೆ,

ಛಂದೋಲಯ ಇನ್ನೊಂದು ಕಡೆ ನಡೆದು, ಬಹಳಷ್ಟು ಸಲ ಹಿತವಾದ "ಸಾಂಗತ್ಯಪಾಕ" ಅಲ್ಲಿ ಸಿದ್ಧವಾಗಲಿಲ್ಲ. ಮಿಕ್ಕವರು ಜಾನಪದ ಪ್ರಜ್ಞೆಯ ಕವಿಗಳಾದ ಕಾರಣ, ಜಾನಪದ ನೆಲೆಯ ಸಾಂಗತ್ಯದಲ್ಲಿ ಭಾಷಾಲಯ-ಛಂದೋಲಯಗಳು ಬಹುಮಟ್ಟಿಗೆ ಕೈಹಿಡಿದು ನಡೆಯಲು ಸಾಧ್ಯವಾಯಿತು. ಹೊಸ ಕುಮಾರ ರಾಮನ ಸಾಂಗತ್ಯದಲ್ಲಿ ಇದಕ್ಕೆ ನಿದರ್ಶನಗಳು ಸಿಗುತ್ತವೆ. ಕೆಲವೊಮ್ಮೆ ಆಶುಕವಿತ್ವದಂತೆ ಸಾಂಗತ್ಯಪದ್ಯಗಳು ರೂಪುಗೊಳ್ಳುತ್ತ ಹೋಗುತ್ತಲಿರುವುದು ಇಲ್ಲಿಯ ವಿಶೇಷತೆಯಾಗಿದೆ.

ಸಂಸ್ಕೃತಿ

ಸಾಹಿತ್ಯವೆನ್ನುವುದು ಸಮಕಾಲೀನ ವಾಸ್ತವ ಮತ್ತು ಸಾರ್ವಕಾಲೀನ ಆದರ್ಶಗಳ ಪ್ರಸಾರ ಮಾಧ್ಯಮವಾಗಿದೆ. ಸಾಮಾನ್ಯವಾಗಿ ಎಲ್ಲ ಕೃತಿಗಳಲ್ಲಿ ಸಾರ್ವಕಾಲೀನ ಆದರ್ಶ ಚಿತ್ರಿತವಾಗಿದ್ದರೆ, ಕೆಲವು ಕೃತಿಗಳಲ್ಲಿ ಮಾತ್ರ ಸಮಕಾಲೀನ ವಾಸ್ತವ ದಾಖಲಾಗಿ, ಅವು ಸಾಂಸ್ಕೃತಿಕ ಮಹತ್ವ ಪಡೆಯುತ್ತವೆ. ಇಂಥ ಕೃತಿಗಳೆಂದರೆ ವಡ್ಡಾರಾಧನೆ, ಪಂಪಭಾರತ, ಬಸವಣ್ಣನವರ ವಚನ, ಹರಿಹರನ ರಗಳೆ, ಬ್ರಹ್ಮಶಿವನ ಸಮಯ ಪರೀಕ್ಷೆ, ಇತ್ಯಾದಿ. ಈ ಮಾಲಿಕೆಯಲ್ಲಿ ಹೊಸ ಕುಮಾರರಾಮನ ಸಾಂಗತ್ಯ ತಪ್ಪದೇ ಸೇರಿಕೊಳ್ಳುತ್ತದೆ.

ಸಂಸ್ಕೃತಿಯೆನ್ನುವುದು ಸಮೂಹ ಸಮ್ಮತ ಜೀವನಪದ್ಧತಿಯಾಗಿದೆ. ಸಾಮಾನ್ಯವಾಗಿ ಇದು ಪ್ರಕ್ರಿಯಾತ್ಮಕವಾಗಿದ್ದು, ತನ್ನ ಕಾಲದ ಆದರ್ಶ-ವಾಸ್ತವಗಳ ನಿರಂತರ ಕ್ರಿಯೆಯಾಗಿದೆ. ಪ್ರಾಚೀನ ಕಾಲದಲ್ಲಿ ಇದನ್ನು ರೂಪಿಸುತ್ತಿದ್ದ ಮುಖ್ಯ ಶಕ್ತಿಗಳೆಂದರೆ ಧರ್ಮ ಮತ್ತು ರಾಜಧರ್ಮ.

ಧರ್ಮಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಮುಮ್ಮಡಿಸಿಂಗ-ಕಂಪಿಲರಾಯರ ತಲೆಮಾರಿನಲ್ಲಿ ಕಂಪಿಲ ಸೋಮೇಶ್ವರ, ಕಂಪಿಲರಾಯ-ಕುಮಾರರಾಮರ ಕಾಲದಲ್ಲಿ ಜಟ್ಟಂಗಿ ರಾಮೇಶ್ವರ ಈ ಮನೆತನಕ್ಕೆ ಮುಖ್ಯದೇವತೆಗಳೆನಿಸಿದ್ದರು. ಹೀಗಾಗಿ ಈ ಕಾವ್ಯದ ತುಂಬ ಹೆಚ್ಚಾಗಿ ಶಿವಭಕ್ತಿವಾತಾವರಣವೇ ತುಂಬಿದೆ. ಕಂಪಿಲ ಸೋಮೇಶ್ವರನ ಪ್ರಸಾದದಿಂದ ಕಂಪಿಲರಾಯ, ಜಟ್ಟಂಗಿ ರಾಮೇಶ್ವರನ ಪ್ರಸಾದದಿಂದ ಕುಮಾರರಾಮ ಹುಟ್ಟಿದರೆಂಬುದು ಮಕ್ಕಳ ಜನನದ ಬಗೆಗೆ ಜನರಿಗಿದ್ದ ನಂಬಿಕೆಯನ್ನು ದ್ಯೋತಿಸುತ್ತದೆ. ಓರುಗಲ್ಲಿನ ಗುಂಡಬ್ರಹ್ಮಯ್ಯನ ವರದಿಂದ ಯುದ್ಧ ಗೆದ್ದ ಕುಮಾರರಾಮ ಶೂಲದ ಹಬ್ಬ ಆಚರಿಸುವುದು, ಇಲ್ಲಿ ಒಂದು ಸಂಧಿಯನ್ನೇ ವ್ಯಾಪಿಸಿದೆ. ಈ ಹಬ್ಬದಲ್ಲಿ ಭಾಗಿಯಾದ ಮುಖ್ಯರು ಶೂಲ ಮೆರೆಸುವುದು ಇದರ ಲಕ್ಷಣವಾಗಿದೆ. ಕಾಕತೀಯ ಪ್ರತಾಪರುದ್ರನ ಸಂದರ್ಭದಲ್ಲಿ ನೇರವಾಗಿ ವೀರಶೈವ ವಾತಾವರಣ ಮೂಡಿನಿಂತಿದೆ. ರೆಡ್ಡಿ ಜನ ಆಚರಿಸುತ್ತಿದ್ದ ಭೈರವನ ಪರುವದಲ್ಲಿ ಬಾಯಿಬೀಗ, ಬೆನ್ನಸಿಡಿ, ಅಗ್ನಿಕುಂಡ, ವಗ್ಗಯ್ಯಗಳ ಘೋಷಣೆಗಳನ್ನು ಚಿತ್ರಿಸಲಾಗಿದೆ. ಕ್ಷುದ್ರದೇವತೆಗಳಿಗೆ ಕುರಿ, ಕೋಳಿ, ಕೋಣಗಳನ್ನು ಕೊಡುವುದು ಇಲ್ಲಿ ಅನೇಕ ಬಾರಿ ಗೋಚರಿಸುತ್ತದೆ. ಇಷ್ಟಾರ್ಥ ಸಾಧನೆಗಾಗಿ ರತ್ನಾಜಿ ಹಲವು ದೈವಗಳನ್ನು ಹಲವು ಬಗೆಯಲ್ಲಿ ಬೇಡಿಕೊಳ್ಳುವುದು ಇಲ್ಲಿ ಕಂಡುಬರುತ್ತದೆ. ರಾಮಯ್ಯ ಕುಳಿತ ಜಾಗವನ್ನು ಜೈನರು ಶುಚಿಗೊಳಿಸುವುದನ್ನು ಕೇಳಿ, ಅವರ ಬಸದಿಗಳಲ್ಲಿ ಕುರಿ, ಕೋಣ ಬಲಿಕೊಡುವುದು, ಜೈನರು ಜಿಗುಪ್ಸೆಗೊಂಡು ಹೋಗುವುದು, ಜಾತಿ ತಾರತಮ್ಯಕ್ಕೆ ಸಂಬಂಧಿಸಿದ ಮಹತ್ವದ ಅಂಶವೆನಿಸಿದೆ.

ರಾಜಧರ್ಮಕ್ಕೆ ಬಂದರೆ ಅಂದಿನ ರಾಜಸತ್ತಾಯುಗದ ಚಿತ್ರ ಇಲ್ಲಿ ಸ್ಪಷ್ಟವಾಗಿ ಮೂಡಿದೆ. 'ವೀರಭೋಜ್ಯಾ ವಸುಂಧರಾ' ಎಂಬಂತೆ ತೋಳ್ಬಲದ ಮೇಲೆ ಅಂದಿನ ರಾಜ್ಯಭಾರ ನಡೆದಿದ್ದಿತು. ಸಣ್ಣಪುಟ್ಟ ಪಾಳೆಯಗಾರರನ್ನು ಕಂಪಿಲ ಅರಸು ಸೋಲಿಸುವುದು, ದಿಲ್ಲಿ ಸುರತಾಳ–ಕಂಪಿಲರಾಯ–ಓರುಗಲ್ಲು ಕಾಕತೀಯರು ತಮ್ಮ ಪ್ರಭುತ್ವಕ್ಕಾಗಿ ಮೇಲಾಟ ನಡೆಸುವುದು, ಸಮಕಾಲೀನ ಪ್ರಭುಶಕ್ತಿಗೆ ನಿದರ್ಶನವೆನಿಸಿವೆ. "ಸಾರಿದವರ ಕಾಯ್ವ, ಹೋರಿದವರ ಕೊಲ್ವ" ಎಂಬ ನೀತಿ ಅಂದು ಬೆಲೆ ಪಡೆದಿದ್ದ ಕಾರಣ, ಅನೇಕ ಯೋಧರ ವೀರಮರಣ ಇಲ್ಲಿ ಚಿತ್ರಿತವಾಗಿದೆ. ಸ್ತ್ರೀಯರೂ ವೀರಪತ್ನಿಗೆ ನಿದರ್ಶನವೆಂಬಂತೆ "ಮಾಸ್ತಿ"ಯಾಗುವ ವಿವರಗಳು ಇಲ್ಲಿ ದಟ್ಟವಾಗಿ ಮೂಡಿವೆ. ಇಲ್ಲಿ ಎರಡು ಸಲ ಇಂಥ ದೃಶ್ಯಗಳಿವೆ. ಕೈಯಲ್ಲಿ ಕನ್ನಡಿ, ಲಿಂಬೆಹಣ್ಣು, ಕಣಗಿಲು ದಂಟು ಹಿಡಿದು, ಕುದುರೆ ಹತ್ತಿ ಬರುವುದು, ಮಳಲ ಗೌರಿಯನ್ನು ಪೂಜಿಸುವುದು, ಗಂಡನ ಗುಣಗಾನ ಮಾಡುತ್ತ ಕಿಚ್ಚಿನ ಸುತ್ತ ಕುಣಿಯುವುದು, ಕಟ್ಟೆಯೇರಿ ಕಿಚ್ಚಿನಲ್ಲಿ ಧುಮುಕುವುದು ಇತ್ಯಾದಿ ಅಪೂರ್ವ ಚಿತ್ರಗಳು ಇಲ್ಲಿವೆ. ಸೋಲಿನ ಕೊನೆಯ ಹಂತದಲ್ಲಿ ಕಾಟಣ್ಣ ತನ್ನ ಹೆಂಡತಿಯನ್ನು ಕಠಾರಿಯಿಂದ ಇರಿಯುವುದನ್ನೂ ಗಮನಿಸತಕ್ಕ ಸಂಗತಿಯಾಗಿದೆ. ಖಳರಾಯನ ಪ್ರಸಂಗವಂತೂ ವೇಳೆವಾಳಿ ಸಂಪ್ರದಾಯವನ್ನು ನೆನಪಿಸುತ್ತದೆ.

ಯುದ್ಧಕ್ಕೆ ಸಂಬಂಧಪಟ್ಟ ಕೋಟೆ, ಕೊತ್ತಳ, ಅಗಳು ಅನೇಕ ಬಗೆಯ ಆಯುಧಗಳು, ಪೆಟಲು ಹೆಸರಿನ ಮದ್ದು ಉಪಯೋಗಿಸುವ ಬಂದೂಕು ಇತ್ಯಾದಿಗಳು ರಣರಂಗದ ಚಿತ್ರವನ್ನಿಯುತ್ತವೆ. ದಾಳಿ ಸಂದರ್ಭದಲ್ಲಿ ಸಾಮಾನ್ಯ ಕುಟುಂಬಗಳು ಅನುಭವಿಸುತ್ತಲಿದ್ದ ಬವಣೆ, ಗುಳೆ ಹೋಗುತ್ತಲಿದ್ದ ರೀತಿ ದಟ್ಟವಾಗಿ ಮೂಡಿದೆ.

ಮೊರೆ ಹೊಕ್ಕವರ ಕಾಯ್ವದು ರಾಜಸತ್ತಾಯುಗದ ಮುಖ್ಯ ಲಕ್ಷಣ. ಕುಮ್ಮಟದುರ್ಗದ ಯುದ್ಧಕ್ಕೆ ಮುಖ್ಯ ಕಾರಣ ಮೊರೆ ಹೊಕ್ಕ ಬಹಾದ್ದೂರ (ಬಹಾವುದ್ದೀನ್) ನಿಗೆ ಕುಮಾರರಾಮ ರಕ್ಷಣೆ ಕೊಟ್ಟದ್ದು. ಈ ಒಂದು ವಿಷಯ ದಿಲ್ಲಿ ಸುಲ್ತಾನನನ್ನು ಎದುರು ಹಾಕಿಕೊಳ್ಳುವಂತೆ ಮಾಡಿತು. ಒಂದಲ್ಲ ಎರಡಲ್ಲ, ಮೂರು ಸಲ ಯುದ್ಧವೇರ್ಪಟ್ಟು, ಅಭೇದ್ಯ ಕುಮ್ಮಟದುರ್ಗದ ನಾಶಕ್ಕೆ ಇದು ಕಾರಣವಾಯಿತು.

ರಾಜಸತ್ತಾಯುಗದ ಶೌರ್ಯಮೌಲ್ಯಕ್ಕೆ ಮೆರಗು ಬರುವುದು, ಪರಸ್ತ್ರೀ ವಿಷಯದ ಶುಚಿತ್ವದಿಂದ ಎಂದು ನಂಬಿದ್ದ ಕಾಲವದು. ಹೀಗಾಗಿ ಈ ಪೂರ್ವದ ರಾಜರ ಶೌರ್ಯಘಟನೆಗಳಿಗಿಂತ ಶುಚಿಘಟನೆಯನ್ನೂ ಒಳಗೊಂಡ ಕುಮಾರರಾಮನ ಜೀವನ ಕವಿಗಳಿಗೆ ಹೆಚ್ಚು ಇಷ್ಟವಾಯಿತು. ಜನತೆಗೆ ಆದರ್ಶವಾಯಿತು. ಕುಮಾರರಾಮನ ಜೀವನದಲ್ಲಿ ಹೆಣ್ಣು ಮೂರು ರೂಪಗಳಲ್ಲಿ ಕಾಡಿದೆ. ಕಂಪಿಲನ ಕಿರಿಯ ರಾಣಿ ರತ್ನಾಜಿ "ಮುನಿದರೆ ಮಾರಿಯಾಗಿ", ಸುರಿತಾಳನ ಮಗಳು ಬಾಬಮ್ಮ "ವಿಫಲ ಪ್ರೇಮಿಯಾಗಿ" ಏರಿಬಂದ ಮಾದಿಗಿತ್ತಿ "ಜೀವಹಂತಕಿಯಾಗಿ" ಅವನ ಸುತ್ತ ಪಾತ್ರವಾಡಿದ್ದಾರೆ. ಇವರಲ್ಲಿ ಮೊದಲಿನ ಇಬ್ಬರ ವಿಷಯದಲ್ಲಿ ಅವನು ಶುಚಿಮೌಲ್ಯವನ್ನು ಮೆರೆದು, ತನ್ನ ಪರನಾರಿ ಸೋದರ ಬಿರುದಿಗೆ ಅರ್ಥ ತುಂಬಿದ್ದಾನೆ.

ಈತರ ಹೆಸರು ರಾಮ. 'ಕುಮಾರ'ವೆನ್ನುವುದು ವಿಶೇಷಣ. ಇದು ಷಣ್ಮುಖನ ಹೆಸರು. ಬ್ರಹ್ಮಚಾರಿಯಾಗಿರುವ ಷಣ್ಮುಖ ಶುಚಿಯೂ ಹೌದು, ಶೂರನೂ ಹೌದು. ಹೀಗಾಗಿ 'ಕುಮಾರ' ವಿಶೇಷಣವನ್ನು ರಾಮನಿಗೆ ಅಂಟಿಸಲಾಯಿತು. ಕರ್ನಾಟಕದಲ್ಲಿ ಈ ಪರಂಪರೆಗೆ ಕುಮಾರ ರಾಮನೇ ಮೊದಲಿಗನಾದ. ಇದರ ಮುಂದುವರಿಕೆಯೆಂಬಂತೆ ಸಿರುಮನ ಸಾಂಗತ್ಯದಲ್ಲಿ ಕುಮಾರಮಲ್ಲ, ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯದಲ್ಲಿ ಕುಮಾರ ತೋಂಟದರಾಯ ಎಂಬ ಹೆಸರುಗಳು ಕಾಣಿಸಿಕೊಳ್ಳುವುದನ್ನು ಅವಶ್ಯ ಗಮನಿಸಬೇಕು.

ರಾಜರ ಇನ್ನೊಂದು ಲಕ್ಷಣ "ಶೃಂಗಾರ ಜೀವನ." ಕುಮಾರರಾಮನ ಸಾಂಗತ್ಯದಲ್ಲಿ ಕಂಪಿಲರಾಯನು ಹರಿಯಲದೇವಿಯನ್ನು ಹೊರತುಪಡಿಸಿ, ಐದು ಜನರನ್ನು ಮದುವೆಯಾದುದು, ಹೆಚ್ಚಿನದಾಗಿ ತಾನು ವಯೋವೃದ್ಧನಾಗಿದ್ದರೂ ಯುವತಿ ರತ್ನಾಜಿಯನ್ನು ಮನದನ್ನೇಯಾಗಿ ಕರೆತಂದುದು, ಇಲ್ಲಿಯ ಮುಖ್ಯ ಅಂಶವೆನಿಸಿವೆ. ರತ್ನಾಜಿ ಕುಮಾರರಾಮನನ್ನು ಪ್ರೇಮಿಸಿದ ಪ್ರಸಂಗವಂತೂ ಈ ಕಾವ್ಯದ ಮುಖ್ಯ ಆಕರ್ಷಣೆಯೆನಿಸಿದೆ. ಇದಲ್ಲದೆ ಹೊಸಮಲೆದುರ್ಗ, ಕುಮ್ಮಟದುರ್ಗಗಳ ವರ್ಣನೆ, ಚೆಂಡಿನಾಟ, ನೋಡಲು ಬಂದ ಸೂಳೆಯರ ವರ್ಣನೆಗಳು ಇಲ್ಲಿಯ ಶೃಂಗಾರ ಜೀವನದ ಇನ್ನೊಂದು ಮುಖವೆನಿಸಿದೆ.

ಹೀಗೆ ಮಧ್ಯಕಾಲೀನ ಕರ್ನಾಟಕದ ವೀರಜೀವನವನ್ನು, ಅದಕ್ಕೆ ಪೂರಕವಾದ ಎಲ್ಲ ಮುಖಗಳನ್ನು ಚಿತ್ರಿಸುವ ಮಹತ್ವದ ಕೃತಿಯಾಗಿದೆ. "ಹೊಸ ಕುಮಾರರಾಮನ ಸಾಂಗತ್ಯ."

❖❖

*

ಪರಿವಿಡಿ

ಸಂಧಿ : ಒಂದು

❖

ದೇವಗಿರಿಯಲ್ಲಿ ಮುಮ್ಮಡಿಸಿಂಗನಿಂದ ರಾಜಸೇವೆ

ಇಕ್ಷುಚಾಪನ ರಿಪು ಚಕ್ಷು ಮೂರುಳ್ಳನೆ
ಅಕ್ಷಯ ಪದವ ಪಾಲಿಪನೆ ।
ಕುಕ್ಷಿ[ಯೊಳೀ]ರೇಳು ಜಗವ ಪೊತ್ತಿಹ ದೇವ
ರಕ್ಷಿಸು ವಿರುಪಾಕ್ಷಲಿಂಗ ॥೧॥

ಜಂಬುನಾಥನು ಸೋಮೇಶ್ವರದೇವನು
ಅಂಬಿಕೆಪತಿ ವಾಣಿಭದ್ರ ।
ಶಂಭು ಶಂಕರ ಕಿನ್ನರೇಶ್ವರ ದೇವರ
ನಂಬಿ ನಾ ನೆನೆದು ಪೇಳುವೆನು ॥೨॥

ಪಂಚಕ್ರೋಶದ ಮಧ್ಯದೊಳು ಎಸೆದಿ [ರ್ಪನು]
ಪಂಚಮುಖನು ವಿರುಪಾಕ್ಷ ।
ಮುಂಚುವ ಕಾಮಕ್ರೋಧಂಗಳನ ಗೆಲಿದಿಹ
ವಂಚನಿಲ್ಲದೆ ವರ [ವೀವ] ॥೩॥

ಹರಿಹರ ಬಾಣ ಮಯೂರ ಮಲುಹಣದೇವ
ವರರುಚಿ ಕಾಳಿದಾಸನಿಗೆ ।
ಭರದಿಂದಲೆರಗಿ ನಾ ಪೇಳುವೆ ಕೃತಿಯನು
ಕರುಣಿಸಿ ತಿದ್ದಿ ಬಲ್ಲವರು ॥೪॥

ಒಡನೆ ಮಾತುಗಳಾಡಿ ವರನಿತ್ತು ಸಲ [ಹೆನ್ನ]
ಮೃಡಮೂರ್ತಿ ಜಟ್ಟಂಗಿ ರಾಮ ।
ಕಡುಗಲಿ ಕುಮ್ಮಟದರಸು ರಾಮಯ್ಯನ
ದೃಢ ಚರಿತೆಯನು ಪೇಳುವೆನು ॥೫॥

ಜಗದೊಳು ಈ ಕೃತಿ ಹವಣಿಸಬೇಕೆಂದು
ಅಗಜೆಯರಸನ ನಾ ನೆನೆದು ।
ತಗಡೂರ ಕುಂಟೆಲಿ ನೆಲಸಿ ಮೆರೆವನಿವ
ಮಿಗೆ ರೂಪಿನ ವಿಘ್ನರಾಜ ॥೬॥

ಮುತ್ತಿನ ಮುಡಿಯ ಸೂಸಕದಂ [ಡೆ] ಭುಜಕೀರ್ತಿ
ಹಸ್ತಕಡಗ ಮುತ್ತಿನೊಲೆ ।
[ಬಿ]ತ್ತರದಲಿ ಮುದ್ದು ನುಡಿಯಿಂದ ಸರಸ್ವತಿ
ಉತ್ತಮ ಮತಿಯಿತ್ತು ಸಲಹು ॥೭॥

ರಾಮನ ನೆನೆ ಕಂಡೆ [ಮನವೆ ಜಟ್ಟಂಗಿಯ]
ರಾಮನ ನೆನೆ ಕಂಡೆ ತನುವೆ ।
ರಾಮರಾಮಾಯೆಂಬ ನಾಮವ ನೆನೆದರೆ
ಕಾಮಿತ ಫಲವೀವ ರಾಮ ॥೮॥

ಕನ್ನಡದೇಶಕ್ಕೆ ರನ್ನದ ಪದಜಾತಿ
ಇನ್ನು ಮುನ್ನಿನ ಪಂಚಾಳ ।
ಚೆನ್ನ ಭುಜಂಗನ ಪುತ್ರ ಗಂಗಯ್ಯ ಸಂ
ಪನ್ನ ಹೇಳಿದನು ಈ ಕೃತಿಯ ॥೯॥

ಇಂತಪ್ಪ ಕೃತಿಯ ಅಂತಸ್ಥ [ವದೆಂತೆನೆ]
ಸತತ ಮ[ಲೆ]ಪಲ್ಲಿ ದೇಶ ।
ತಿಂಥಿಣಿಯಲಿ ಸರ್ವ, ದಾಯಾದ್ಯರೊಡಗೂಡಿ
ಪಂಥದಲಿಹ ಸಿಂಗಿನಾಯಕ ॥೧೦॥

ಮಲೆಪಲ್ಲಿ ದೇಶದ ನಾಡದಳವಾರನು
ಬಲ್ಲಿದ ಮುಮ್ಮಡಿ ಸಿಂಗ ।
ಎಲ್ಲ ದಾಯಾದ್ಯರು ಏಕವಾಗಿಯೆ ಸುಖ
ದಲ್ಲಿ ಇಹರು ದೇಶದೊಳಗೆ ॥೧೧॥

ಆ ದೇಶದೊಳಗುಳ್ಳ [ವರ] ಸಿಂಗಿನಾಯಕ
ಚದುರೆ ಸತಿಯು ಮಾರಮ್ಮ ।
ಸುದತಿ ಮಾರಮ್ಮನು ಪತಿಭಕ್ತಿ ಹಿತವಾಗಿ
ಮುದದಿಂದ ತಾನಿರುತಿಹಳು ॥೧೨॥

ಸಂತತ ಕಂಪಲಿ ಸೋಮೇಶದೇವರ
ಅತಿಶಯದೊಳು ಪೂಜಿಪರು ।
ಇತ್ತ ಹೀಗಿರುತಿರೆ ಒಂದಾನೊಂದಿನದಲ್ಲಿ
ಮತ್ತೆ ದಾಯಾದ್ಯರು ಸಹಿತ ॥೧೩॥

ಭರದಿಂದ ಊರುಗಳ ಹಂಚಬೇಕೆನುತಲಿ
ಕರೆದರು ಸಿಂಗಿನಾಯಕನ ।
ನೆರೆದು ದಾಯಾದ್ಯರೆಲ್ಲರು ಕೂಡಿ ಮತ್ತಾಗ
ಇರುವ ಊರುಗಳ ಹಂಚುತಲಿ ॥೧೪॥

ಜಗಳ ಬಂದಿತು ತಿಪ್ಪರಾಜ ಸೋಮೇಶಗೆ
ನೆಗಳಿತು ಕೋಪವೆಲ್ಲರಿಗೆ ।
ಅಗಣಿತವಾದ ದಾಯಾದ್ಯರು ತಮ್ಮೊಳು
ಬಗೆಬಗೆ ಊರ ಹಂಚುತಲಿ ॥೧೫॥

ಕೊಟ್ಟರು ನಾಯಕತನವನು ಮತ್ತಾಗ
ಕಟ್ಟಾಳು ಸಿಂಗಿನಾಯಕನಿಗೆ ।
ಹುಟ್ಟಿದ ಜಗಳವ ನೋಡಿ ಮುಮ್ಮಡಿಸಿಂಗ
ಬಿಟ್ಟು ಹೊರಟನು ದೇಶವನು ॥೧೬॥

ಹೊರಟು ಮುನಿದು ಮುಮ್ಮಡಿ ಸಿಂಗಿನಾಯಕ
ಕರೆದು ಕೇಳಿದ ತನ್ನ ಸತಿಯ ।
ಅರಸು ಬಲ್ಲಿದ ರಾಮದೇವರಾಯನುಯೆಂದು
ಇರದೆ ಹೋಗುವ ನಡೆಯೆಂದ ॥೧೭॥

ಕಟ್ಟೆಣಿಲ್ಲದೆ ಪಯಣ ಗತಿಗಳಿಂದಲಿ ಬಂದು
ಬಿ[ಟ್ಟನು ಬೀಡಾರ]ಗಳನು ।
ಕಟ್ಟಾಳು ಮುಮ್ಮಡಿ ಸಿಂಗಿನಾಯಕ ತಾನು
ಬಿಟ್ಟಾನು ದೇವ(ಗಿರಿಯ)ಲಿ ॥೧೮॥

ಅಷ್ಟದಿಕ್ಕಿಗೆ ಐಶ್ವರ್ಯವನೀವುದು
ಸೃಷ್ಟಿಗಧಿಕ ದೇವಗಿರಿಯು ।
ಮುಟ್ಟಿ ಗಗನ ಲಂಘಿಪ ಕೋಟೆ ಕೊತ್ತಲ
ಸುತ್ತಲಿ ಆಳವೇರಿಗಳು ॥೧೯॥

ಗುಂಡು ಗುಂಡುಗಳಿಂದ ಜೆಂಗೆಗಲ್ಲಿನ ಕೋಟೆ
ಡೆಂಡಣಿಸುವ ಕೊತ್ತಳಗಳು ।
ಜಡಿವ ಪಿರಂಗಿ ಪೆಟ್ಟಲು ಬಾಣಗಳಿಂದ
ಮಂಡಲದೊಳಗೆ ರಾಜಿಪುದು ॥೨೦॥

ರಂಜಿಸಿ ಮೆರೆವ ಓಂಕಾರ ಬಾಗಿಲವಾಡ
ರಂಜನೆಗೈವ ಡೆಂಕಣಿಯ ।
ರಂಜಿಪ ದಿಡ್ಡಿ ಹೆದ್ದಾರ ಬಾಗಿಲಿನಿಂಗ
ಮೂಜಗದೊಳು ದೇವಗಿರಿಯು ॥೨೧॥

ಈ ಪರಿಯಲಿ ಪಟ್ಟಣವ ಪ್ರತಿಪಾಲಿಪ
ಭೂಪತಿ ರಾಮದೇವರಾಯ ।
ಕಾಪಾಲಧರನ ಕರುಣದಲಿ ವಾಲಗವಿಹ
ಚಾಪಕೇತನ ಸಮನವನು ॥೨೨॥

ನೊಸಲುಗಣ್ಣಿಂದ ಎಸೆದಿಹ ಕೀರ್ತಿಯ
ಪಶುಪತಿಯವತಾರದವನು ।
ಹೆಸರುಳ್ಳ ಮನ್ನೆಯ ಮಂಡಲಿಕರು ಸಹ
ಕುಶಳ ಕುಳಿತ ವಾಲಗದಿ ॥೨೩॥

ನಿಷ್ಠುಳ್ಳ ರಾಮದೇವರಾಯನೊಳಗದೊಳು
ಕಟ್ಟಾಳು ಸಿಂಗಿನಾಯಕನು ।
ಉಟ್ಟ ಪಟ್ಟೆಯ ದಟ್ಟಿ ಕಟ್ಟಿದೊಂಕುಡಿದಾರ
ದಿಟ್ಟ ಶೃಂಗರಿಸಿದ ಬೇಗ ॥೨೪॥

[ಶಾ]ಲ ಹೊದ್ದನು ದುಪ್ಪಟಿಯ ಹಚ್ಚಡ
ಲೋಲ ನಡೆದ ರಾಯನೆಡೆಗೆ ।
ಮೇಲಾದ ಚೌಕುಳಿ ಮುದ್ರೆಯುಂಗುರನಿಟ್ಟು
ಬಾಲ ನಡೆದನು ಅರ್ತಿಯಲಿ ॥೨೫॥

ಕಿರುಗಂಟಿನ ಬಿಲ್ಲು ಪಿಡಿದು ಮುಮ್ಮಡಿಸಿಂಗ
ಧುರಧೀರ ನಡೆದನೋಲಗಕೆ ।
ಭರದಿಂದ ಕಟ್ಟಿಗೆ ವಿಕ್ರಮ ನಡೆತಂದು
ಕರೆದು ತಂದನು ರಾಯನಡಿಗೆ ॥೨೬॥

ಇದಿರಾಗಿ ವಿಕ್ರಮ ಕರೆತಂದು ನಿಲಿಸಿದ
ಚದುರ ಮುಮ್ಮಡಿ ಸಿಂಗನನು ।
ಮದನ ಕಳೆಯನುಳ್ಳ ಚದುರ ಕರ್ನಾಟಕದ
ಕದನಕಂಠೀರವ ನೀನಾರೋ ॥೨೭॥

ಸ್ವಾಮಿ ಬಿನ್ನಹ ರಾಯರ ದೇವ ಬಿನ್ನಹ
ಭೂಮಿ ಪಾಲಕನೆ ಚಿತ್ತೈಸು ।
ಈ ಮಾತು ಕೇಳುವ ಸಮಯದಿ ಡೊಂಬರು
ಚಾಮಿದೇವರು ಬಂದರವರು ॥೨೮॥

ಹೊಡೆದಾರು ಡೊಳ್ಳು ಕಂಸಾಳೆ ಡಮಾಮಿಯ
ಎಡೆದೆರವಿಲ್ಲ ಹೆಗ್ಗಾಳೆ ।
ಬಿಡದಾಗ ರಾಯರದೇವ ನೀ ನೋಡೆಂದು
ಕೂಡ್ರಿಸಿ ಬ್ರಹ್ಮಾಸನದಿ ॥೨೯॥

ಚಾಮಿದೇವನು ಆಟವಾಡುವ ಸಮಯದಿ
ಸ್ವಾಮಿಕಾರ್ಯಕೆ ಬಂದು ನಿಂದು ।
ಆ ಮಹಾ ಕರ್ನಾಟಕದಿಂದ ಬಂದಾನು
ಕಾಮಸನ್ನಿಭ ಹೊಸಬಂಟ ॥೩೦॥

ಕರೆಕರೆ ಕಟ್ಟಿಗೆ ವಿಕ್ರಮ ನೀ ಹೋಗಿ
ಬರಹೇಳೊ ಹೊಸ ಬಂಟನನೂ ।
ಭರದಿಂದ ವಿಕ್ರಮ ಕರೆತಂದು ನಿಲಿಸಿದ
ಧುರಧೀರ ಸಿಂಗಿನಾಯಕನ ॥೩೧॥

ಕೇಣವಿಲ್ಲದೆ ಬಂದಡಿಗೆ ವಂದನೆ ಮಾಡಿ
ಕಾಣಿಕೆಯಿಟ್ಟನು ಧನುವ ।
ಆಣಿಯ ನೋಡಿ ಆ ಬಿಲ್ಲಿಗೆ ಮೆಚ್ಚಿದ
ಊನವಿಲ್ಲದೆ ಬಂಟನಹುದು ॥೩೨॥

ಅಕ್ಕರದಿಂ ರಾಯ ಸಿಂಗನ ಕೇಳಿದ
ದಿಕ್ಕಾವುದೊ ನಿನ್ನ ದೇಶ ।
ಸಕ್ಕಜವುಳ್ಳುದು ಮಲೆಪಲ್ಲಿಯ ನಾಡು
ಮುಕ್ಕಣ್ಣಭಜಕನೆ ಕೇಳು ॥೩೩॥

ಕೊಟ್ಟನು ಉಡುಗೊರೆಯನು ಮಾಡಿ ಜೀತವ
ಮುಟ್ಟಿ ಸಿಂಗನ ತರ್ಕೈಸಿ ।
ಕಟ್ಟಳೆ ಕಂದಾಯ ಐವತ್ತು ಹೊನ್ನನು
ಪಟ್ಟದ ರಾಯ ಮಾಡಿದನು ॥೩೪॥

ಮನ್ನಿಸಿ ಕಳುಹಿದ ಮುಮ್ಮಡಿಸಿಂಗನ
ನಿನ್ನ ಬಿಡಾರಕೆ ಹೋಗೊ ।
ಮನ್ನಿಸಿ ವೀಳ್ಯವ ಕೊಂಡು ಬಹಷ್ವಕ್ಕೆ
ಚೆನ್ನಾಗಿ ಡೊಂಬ ಹೊಗಳಿದ ॥೩೫॥

ಮಧನನ ಕಳೆಯುಳ್ಳ ಚದುರ ಕರ್ನಾಟಕದ
ಅಧಿಪತಿರಾಯ ನೀನಹುದೊ ।
ಕದನಗಲಿಯು ನೀನಹುದೆಂದು ಡೊಂಬನು
ಮುದದಿಂದ ಕೊಂಡಾಡಿ ಹೊಗಳೆ ॥೩೬॥

ಕೊಟ್ಟ ಭಾಷೆಗೆ ತಪ್ಪುವ ರಾಯರ ಗಂಡ
ಸೃಷ್ಟಿಗಧಿಕ ಸಿಂಗನೆಂದು ।
ಕಟ್ಟಾಳು ಮುಮ್ಮಡಿ ಸಿಂಗ ಭಲರೆಯೆಂದು
ದಿಟ್ಟ ಡೊಂಬನು ಪೊಗಳಿದನು ॥೩೭॥

ಅರಿರಾಯ ಹಿತಕಾರ ಬಿರುದುಳ್ಳ ನಾಯಕ
ಧುರಧೀರ ಮುಮ್ಮಡಿ ಸಿಂಗ ।
ಕರಿಗೆ ಕೇಸರಿ ನೀ ದೊರೆ ಮಾನ್ಯನಹುದೆಂದು
ಕರವೆತ್ತಿ ಹೊಗಳಿದ ಭಟ[ನ] ॥೩೮॥

ಡೊಳ್ಳು ಕಂಸಾಳವ ನಿಲ್ಲದೆ ಹೊಯಿವುತ
ಅಲ್ಲಿ ರಾಯನ ಕೊಂಡಾಡಿದರು ।
ಭೂಲೋಕವನೆಲ್ಲ ತೊಳಲಿ ನಾ ಬಹೆವು
ಶ್ರೀ ಲಕ್ಷ್ಮಿರಮಣ ರಕ್ಷಿಸಲಿ ॥೩೯॥

ಇಂದ್ರಜಾಲ ಮಹೇಂದ್ರಜಾಲವನಾಡಿ
ಚೆಂದಚೆಂದದ ಭಾರಿ ವಿದ್ಯೆ ।
ಅಂದಾಡೆ ರಾಯನು ಡೊಂಬಗೆ ಮೆಚ್ಚಿದ
ಅಂದು ಸದರ ಸೂರೆಗೊಟ್ಟ ॥೪೦॥

ದಟ್ಟಿ ಕಾಬಾಯವ ಕೊಟ್ಟು ಡೊಂಬಗೆ ತೇಣ
ಕಟ್ಟಾಣಿ ಕೊರಳ ಪದಕವ ।
ದಿಟ್ಟ ಮಾನ್ಯನು ತ್ಯಾಗವನಾಗ ಸುರಿದನು
ಒಟ್ಟಿದ ರಾಶಿರಾಶಿಯನು ॥೪೧॥

ಇತ್ತ ಮುಮ್ಮಡಿ ಸಿಂಗ ಡೊಂಬಗೆ ಮೆಚ್ಚುತ
ಕೊಟ್ಟನು ಕೀಲ ನಾಗರನು ।
ಬತ್ತಲೆ ತ್ಯಾಗಿಯಾದನು ಮುಮ್ಮಡಿ ಸಿಂಗ ಇತ್ತ
ನೋಡಿದ ರಾಯನವನು ॥೪೨॥

ಅರ್ತಿಯಿಂದಲಿ ಸಿಂಗ ಕಳುಹಿಸಿಕೊಂಡಾಗ
ನೆಟ್ಟನೆ ನಡೆದನಲ್ಲಿಂದ ।
ಕೊಟ್ಟನೂ ರಾಯರದೇವ ಸಿಂಗನಾಯಕಗೆ
ದಟ್ಟಿ ಕಾಬಾಯ ವೀಳ್ಯಯವ ॥೪೩॥

ಅರ್ತಿಯಿಂದಲಿ ಸಿಂಗಿ ಕಳುಹಿಸಿಕೊಂಡನು
ಇತ್ತಲಿ ತನ್ನ ಬೀಡಿಕೆಗೆ ।
ಅತ್ತ ಮುಮ್ಮಡಿ ಸಿಂಗ ಸತಿಪತಿ ಸುಖದಿರೆ
ಇತ್ತ ಡೊಂಬರು ತಿರುಗಿದರು ॥೪೪॥

ಹಲವು ಕಾಲದಿ ಸಿಂಗಿನಾಯಕನನುಜರು
ಬಲು ದರಿದ್ರಗಳೆಡೆಗೊಂಡು ।
ಒಲುಮೆಯುಳ್ಳವನೆಂದು ತಿಳಿಯದೆ ನಾವೀಗ
ಕಳುಹಿದೆವವನ ಹೋಗಾಡಿ ॥೪೫॥

ಎಂದಿಗೆ ಮೊಗವನು ತೋರದಾದೆವು ನಾವು
ಅಂದವನನು ಭಂಗಬಡಿಸಿ ।
ಮುಂದೆಗಾಣದೆ [ಕೇಡು] ಮಾಡಿಕೊಂಡೆವುಯೆಂದು
ನಿಂದು ಏಕಾಂತವಾಡಿದರು ॥೪೬॥

ಉಣ್ಣದ ಕರುಳನು ಉಣಿಸಿದೆವೆಂದಾಗ
ಬಣ್ಣಗೆಟ್ಟರು ತಮತಮಗೆ ।
ಕಣ್ಣುಮೂರುಳ್ಳನ ಕರುಣವುಳ್ಳವನೆಂದು
ಹಣ್ಣಿಕೊಂಡರು ಪಯಣಗತಿಯ ॥೪೭॥

ಬಿಡದೆ ರಾಮದೇವರಾಯನೊಲಗದೊಳು
ಕಡುಗಲಿ ಸಿಂಗಿ ತಾನಹನೆ ।
ತಡೆಯದೆ ನಾವಿನ್ನು ಹೋಗಬೇಕೆನುತಲಿ
ನಡೆದರಲ್ಲಿಂದವನೆಡೆಗೆ ॥೪೮॥

ಮತ್ತೆ ದಾಯಾದ್ಯರು ನೂರಾರು ಕೂಡಿಯೆ
ಇತ್ತ ಬಂದರು ಸಿಂಗನೆಡೆಗೆ ।
ಅರ್ತಿಯಿಂದಲಿ ಬಂದು ಕಂಡರು ಸಿಂಗನ
ಉತ್ತಮ ಸಂತೋಷಗಳನು ॥೪೯॥

ಕೊಳಲು ತಮಟೆ ಕಹಳೆ ಉಲಿಯುತ ಬರುತಿರೆ
ನಲವಿಂದ ದುರ್ಗವ ಹೊರಟು ।
ಬಲುತೇಜಿಯನೇರಿ ವೈಹಾಳಿ ಮಾಡುತ
ಚೆಲುವ ಸಿಂಗನು ಬೀದಿಯಲಿ ॥೫೦॥

ಸರ್ವ ದಾಯಾದ್ಯರು ಅರುವೆ ಕಾಣದಲಿರೆ
ಇರದೆ ಕಂಡನು ಸಿಂಗಯ್ಯ ।
ಭರದಿ ದಾಯಾದ್ಯರು ನಿಂದು ಶರಣುಮಾಡಿ
ಇರದೆ ಬಿದ್ದರು ಚರಣದಲಿ ॥೫೧॥

ಬಂದ ದಾಯಾದ್ಯರಿಗೆ ನಿಂದು ಮನ್ನಿಸಿ [ತಾನು]
ಚಂದದಿ ಸಿಂಗ ಮನ್ನಿಸಿದ ।
ಅಂದಾಗ ತುಪ್ಪ ಸಕ್ಕರೆ ಬಾಳೆಹಣ್ಣಿಂದ
ಮಿಂದು ಭೋಜನವ ಮಾಡಿಸಿದ ॥೫೨॥

ಕೂಡುಂಡು ವೀಳ್ಯವಿನೋದದಿ ಕೇಳಿದ
ಗಾಢದಿ ಬಂದ ವಿವರವ ।
ಬೀಡಾರ ಸುಖದುಃಖನೊರೆದು ಕೇಳದನಾಗ
ನಾಡೊಳು ಸಿಂಗ ತಾನೊಲಿದು ॥೫೩॥

ಬಂದು ರಾಯನ ಕೈಯ ಜೀತವ ಬರಸಿದ
ನಿಂದರು ಸಂತೋಷದಲ್ಲಿ ।
ಬಂದ ದಾಯಾದ್ಯರು ನಿಂದು ಸುಖದೊಳಿರೆ
ಒಂದಿನ ಬೇಂಟೆಯ ಹೊರಟ ॥೫೪॥

ಹಲವು ಕಾಲದಿ ಸಿಂಗ ನಲವಿಂದಲಿರುತಿರೆ
ಮೊಲಮೃಗ ಬೇಂಟೆಯ ನಡೆದ ।
ಸುಲಲಿತವಾದ ಪರಿವಾರಕ್ಕಲ್ಲಿಕ್ಕುತ
ಗೆಲವಿಂದ ಎಲ್ಲ ಮೃಗಗಳ ॥೫೫॥

ಗಕ್ಕನೆ ಬೇಂಟೆಯನಾಡುತಾಡುತಲಾಗ
ಒಕ್ಕಲಿಕ್ಕುತ ಬರುತಿರುಲು ।
ಸಿಕ್ಕುವ ತೆರದಿ ಹೊಂಬಣ್ಣದ ಉಡು ಬರೆ
ಅಕ್ಕರಿಂದಲಿ ಬೆನ್ನಟ್ಟಿದರು ॥೫೬॥

ಸಂಭ್ರಮವಾಗಿಹ ಹೊಂಬಣ್ಣದುಡುವಾಗ
ಇಂಬುಗೊಂಡಿತ್ತು ಹುತ್ತಿನೊಳಗೆ ।
ತುಂಬಿ ಮುತ್ತಿತ್ತು ಬಡಿಕೋಲು ನಾಯಿಗಳಿಂದ
ಗಂಭೀರವೆಂದ ಹುತ್ತವನು ॥೫೭॥

ಕೆಚ್ಚಿನ ಬಾಳಾಚಿಗಳಲಿ ಅಗುಳುತಲಿರೆ
ಉತ್ಸಾಹದಿಂದ ಹುತ್ತವನು ।
[ಪ್ರತ್ಯಕ್ಷವಾಯಿತು] ಕೊಪ್ಪರಿಗೆಯ ದ್ರವ್ಯ
ಮುಚ್ಚಿದರೇಕಾಂತದಲಲಿ ॥೫೮॥

ಭರದಿಂದ ಬೇಂಟೆಯ ತಿರುಗಿ ಹೊಕ್ಕನು ತಮ್ಮ
ಉರುತರವೆನಿಪ ಪಟ್ಟಣವ ।
ಧುರಧೀರ ಸಿಂಗನಾಯಕ ಬಂದು ರಾಯಗೆ
ಇರದೆ ಬಿನ್ನಹವ ಮಾಡಿದನು ॥೫೯॥

ಬಂದ ದಾಯಾದ್ಯರ ನಿಂದು ತೋರಿಸಿ ಸಿಂಗ
ಮುಂದೆ ರಾಯಗೆ ಬಿನ್ನೈಸಿದನು ।
ಮುಂದೆ ಬೀಡಾರಕ್ಕೆ ಚಂದದಿ ಇಂಬನು
ಅಂದು ಕೇಳಿದ ರಾಯನೊಡನೆ ॥೬೦॥

ಬೇಡು ಮುಮ್ಮಡಿ ಸಿಂಗ ನೀಡುವೆ ಮನದಣಿ
ಬೇಡಿದೂರುಗಳ ನಿನಗೀವೆ ।
ಮೂಡಗಡೆಯಲಿಹ ಕಾಡಭೂಮಿಯ ನೀನು
ನೀಡಿ ಭೂಪಾಲ ಪಾಲಿಪುದು ॥೬೧॥

ಏನ ಬೇಡಿದೆ ಸಿಂಗನಾಯಕ ನೀನೆನ್ನ
ನಿನಗೀವೆನಿನ್ನು ಬೇಡೆಂದ ।
ಕಾನನದಲ್ಲಿಯ ಕಡು ಹೊಲನವ ಈ [ಯೊ]
ಮಾನವಪತಿಯೆ ಕೇಳೊಲಿದು ॥೬೨॥

ಕೊಟ್ಟೆನು ನಿನಗೆ ಮುಮ್ಮಡಿ ಸಿಂಗ ನಾನೆಂದು
ಕಟ್ಟಿಳಿಲ್ಲದೆ ಕಡು ಹೊಲನ ।
ಅಷ್ಟದಿಕ್ಕಿನ ಸೀಮೆ ನಾಡದಳವಾರಿಕೆ
ಕಟ್ಟಾಳು ಮುಮ್ಮಡಿ ಸಿಂಗ ॥೬೩॥

ಅಷ್ಟವಧಾನದಿ ಸೀಮೆಯ ಕಾಯೆಂದು
ಪಟ್ಟದರಸು ಆಡಿದನು ।
ಮುಟ್ಟಿ ಶರಣು ಮಾಡಿ ಅಪ್ಪಣೆ ಇಸಕೊಂಡು
ದಿಟ್ಟ ಸಿಂಗನು ತೆರಳಿದನು ॥೬೪॥

ಒಡೆಯನ ಕೈಯ ಕಳುಹಿಸಿಕೊಂಡು ಸಿಂಗಯ್ಯ
ತಡೆಯದೆ ಊರ ಕಟ್ಟಿಸಿದ ।
ಸಡಗರದಲಿ ತನ್ನ ಬಾಂಧವರೊಡಗೂಡಿ
ಗಡಿದುರ್ಗವನು ಕಟ್ಟಿಸಿದ ॥೬೫॥

ಹುತ್ತಮನೊಳಗು ಮಾಡಿಸಿ ಮುಮ್ಮಡಿಸಿಂಗ
ಚಿತ್ರದ ಅರಮನೆ ರಚಿಸಿ ।
ಅರ್ಥಭಾಂಡಾರಕ್ಕೆ ಕಡೆಯಿಲ್ಲದಿರುತಿರೆ
ಕರ್ತ ಸೋಮೇಶನೊಲ್ಮೆಯಲಿ ॥೬೬॥

ಶಶಿಮುಖಿ ಮಾರಮ್ಮ ಕಾಂತೆ ತಾ ನುಡಿದಳು
ಅಸಮಬಲ್ಲಿದ ಸಿಂಗನೊಡನೆ ।
ಪಶುಪತಿ ಐಶ್ವರ್ಯವನಿತ್ತು ಫಲವೇನು
ಶಿಶು ಬಾಲರಿಲ್ಲದ ಬಾಳ್ವೆ ॥೬೭॥

ನೀಡದನ್ನಗಳಿಲ್ಲ ಮಾಡದ ಫಲವಿಲ್ಲ
ಬೇಡಬಹುದೆ ಸುತರುಗಳ ।
ರೂಢಿಗೀಶನ ಪೂಜೆಮಾಡಿ ಪಡೆಯಲಿಲ್ಲ
ಮಾಡಿದ ಫಲವು ಇಷ್ಟೆಂದು ॥೬೮॥

ಒಂದೊಂದು ಪರಿಯಲ್ಲಿ ಸತಿಪತಿಯರು ತಾವು
ಅಂದು ಪವಡಿ [ಸೆ] ಮಂಚದಲಿ ।
ಬಂದು ಕಂಪಿಲ ಸೋಮೇಶ್ವರ ಸ್ವಪ್ನದಿ
ತಂದುಕೊಟ್ಟನು ಫಲಪಣ್ಣ ॥೬೯॥

ಎಚ್ಚತ್ತು ನಿದ್ರೆತಿಳಿದು ಮುಮ್ಮಡಿ ಸಿಂಗ
ನಚ್ಚಿನ ಸತಿಯ ಎಬ್ಬಿಸಿದ ।
ಉತ್ಸಾಹದಿಂದ ಸೋಮೇಶ್ವರ ಫಲವಿತ್ತ
ಅಚ್ಚ ಮಾವಿನಪಣ್ಣ ನಿನಗೆ ॥೭೦॥

ಘನತರವಾದ ಫಲವನಿತ್ತ ನಮಗೆಂದು
ಅನುರಾಗದಿಂದ ಹೇಳಿದನು ।
ವನಿತೆ ಮಾರಮ್ಮನ ಗರ್ಭದಿ ಶಿಶು ಹುಟ್ಟಿ
ದಿನಕರನಂತೆ ಬೆಳೆಯುತಲಿ ॥೭೧॥

ನವಮಾಸ ತುಂಬಿ [ತು] ಕುಚಕ ಕಪ್ಪೇರಿತು
ಯುವತಿ ಮಾರಮ್ಮನಿಗಾಗ ।
ಭುವನಶರಧಿವೊಲು ಪೆತ್ತಳು ಬಾಲನ
ಭುವನಕ್ಕೆ ತಕ್ಕಂಥ ಮಗನ ॥೭೨॥

ಸುತನ ಉತ್ಸವ ಮಾಡಿ ಮುಮ್ಮಡಿಸಿಂಗ
ಇತ್ತನು ದಾನ ಧರ್ಮವನು ।
ಕರ್ತು ಕಂಪಿಲ ಸೋಮೇಶನ ಪೆಸರಿಟ್ಟು
ಅರ್ತಿಯಿಂದಲಿ ಬಾಳುತಿರಲು ॥೭೩॥

ದಿನದಿನಕೊಂದೊಂದು ಪರಿಯಲಿ ಬೆಳೆದನು
ಮನಸಿಜ ರೂಪ ಕಂಪಿಲನು ।
ತನಯನ ನೋಡಿ ಮುದ್ದಿಸಿ ತಾಯಿತಂದೆಯು
ಕನಕಾಭರಣವ ತೊಡಿಸಿ ॥೭೪॥

ಕಂಪಿಲಲಿಂಗನ ಕರುಣದ ಕಂದನೆ
ಕಂಪಿಲರಾಯ ಬಾರೆಂದು ।
ಸಂಪಗೆಯೆಸಳಂತೆ ದಿನದಿನಕಾಕ್ಷಣ
ಇಂಪಿಲಿ ಬೆಳೆದ ಕಂಪಿಲನು ॥೭೫॥

ಆರೇಳು ವರುಷಕ್ಕೆ ತೋರಿದ ಗುರಿಯನು
ಮೀರಿದ ಸಾಧನೆಮಾಡಿ ।
ಭಾರಿತನದಿ ಓದು ವಿದ್ಯೆವ ಕಲಿತನು
ಮಾರಸಮಾನ ಕಂಪಿಲನು ॥೭೬॥

ನಿತ್ಯ ಬೊಗರಿ ಗಜಗು ಚೆಂಡು ಚಕ್ರವು
ಹೆತ್ತ ತಾಯನು ತಾರೆಂದು ।
ಮುತ್ತಿನ ಚೆಂಡನಾಡುವೆ ಹೊಲಿಸೆಂದನು
ಮತ್ತೆ ಕಂಪಿಲ ತಂದೆಯೊಡನೆ ॥೭೭॥

ಚಿಪ್ಪಿಗ ಬನವನ ಕರೆಸಿ ಮುಮ್ಮಡಿಸಿಂಗ
ಒಪ್ಪುವ ಮುತ್ತಿನ ಚೆಂಡ ।
ತಪ್ಪದೆ ಜಾತಿ ಮುತ್ತುಗಳ ಪವಣಿಸಿದ
ಒಪ್ಪುಳ್ಳ ಚೆಂಡು ಕಂಪಿಲಗೆ ॥೭೮॥

ಆಡಿದ ಮುತ್ತಿನ ಚೆಂಡನು ಕಂಪಿಲ
ನೋಡಿದ ಮುಮ್ಮಡಿ ಸಿಂಗ ।
ಪೊಡವಿಪ ಪುತ್ರನ ನೋಡಿ ಸಂತೋಷದಿ
ಮಡದಿಯ ಮಾಡಬೇಕೆಂದ ॥೭೯॥

ಸರಿದೊರೆ ಗುಜ್ಜಲನಾಯಕನೆಂಬನ
ವರಸುತೆ ಹರಿಯಲದೇವಿ ।
ಭರದಿಂದ ವೀಳ್ಯವನಿತ್ತು ಲಗ್ನವ ಮಾಡಿ
ಇರದೆ ಶೋಭನವ ಮಾಡಿದರೂ ॥೮೦॥

ಮದುವೆಯ ಮಾಡಿ ಮನೆಯ ತುಂಬಿಸಿಕೊಂಡು
ಒದವಿದ ಸಂತೋಷದಿಂದ ।
ಕದನವಿಜಯ ಮುಮ್ಮಡಿಸಿಂಗ ಸುಖವಿರೆ
ಮುದದಿ ಬೇಂಟೆಯ ರಾಯ ಹೊರಟ ॥೮೧॥

ಸರ್ವ ಮನ್ನೆಯರೊಡಗೂಡಿ ರಾಮದೇವ
ಉರ್ವಿಪ ಹೊರಟ ಬೇಂಟೆಯನು ।
ಕರಿ ತುರಗವು ಪರಿವಾರ ರಾಹುತರಾಗ
ನೆರೆದರು ಬೇಂಟೆ ಮಾರ್ಗದಲಿ ॥೮೨॥

ಅಬ್ಬರಿಸುತ್ತಲಾಗ ಬೊಬ್ಬೆಯಬ್ಬರದಿಂದ
ಹಬ್ಬಿದ ಬೇಗೆಯನಿಡುತ ।
ತಬ್ಬಿಬ್ಬಗೊಳಿಸುತ ಮೃಗಗಳ ಕೊಲ್ಲುತ
ಹೆಬ್ಬುಲಿಯಿರೆ ಕಂಡು ಮುಂದೆ ॥೮೩॥

ಕಂಡರು ಹುಲಿಯನು ಕಡುಗಲಿ ಪರಿವಾರ
ತಂಡ ತಂಡದಿ ರಾಯನೊಡನೆ ।
ಮಂಡಲಾಧಿಪ ಬೆಸನ [ವ] ಕೊಡು ಕೊಲುವೆವು
ಗುಂಡಿನ ಮೇಲಿಪ್ಪ ಹುಲಿಯ ॥೮೪॥

ಎಡವಂಕ ಬಲವಂಕ ನಾಯಕರಿಗೆ ರಾಯ
ಕೊಡುತಲಿ ಕರ್ಪೂರ ವೀಳ್ಯ ।
ಕಡುಗಲಿ ಕಲಿಗಳು ಕಂಡು ಬಾಣವ ಬಿಡೆ
ಘಡುಘಡಿಸುತ ಹುಲಿಯಿಳಿದು ॥೮೫॥

ಗಗನಕಾರ್ಭಟಿಸುತ ಹೊಗಲಂಜಿ ಭೂಮಿಯ
ನೆಗೆದು ಮಂದಿಯ ಕೊಲ್ಲುತಿರಲು ।
ಅಗಣಿತವಾದ ಮನ್ನೆಯರ ಮಂಡಲಿಕರ
ವಿಗಡ ಗಾಯದಿ ಇಂಬುಮಾಡಿ ॥೮೬॥

ರಾಯ ಮೂದಲಿಸಿ ಮನ್ನೆಯರ ಮುಖವ ನೋಡೆ
ಬಾಯ ಬಿಡುತ ಹೆರ ಸಾರೆ ।
ಆಯತವಾಗಿ ಮುಮ್ಮಡಿ ಸಿಂಗ ನಡೆತಂದು
ರಾಯನ ಬೆಸನ ಬೇಡಿದನು ॥೮೭॥

ನಿಚ್ಚ ಸಾವಿರ ಹೊನ್ನ ಜೀತವ ಕೊಂಬ [ರ]
ಹುಚ್ಚುಮಾಡಿತು ಹುಲಿ ಹೊಯಿದು ।
ಆಶ್ಚರ್ಯ ನಿನಗೇಕೆ ಬೆಸ ಮುಮ್ಮಡಿಸಿಂಗ
ನಚ್ಚಹುದೇ ಮನ್ನೆಯರ ॥೮೮॥

ಕಡಗಲಿ ಪರಿವಾರದ ಕಾಲದೂಳಿಯು
ದೃಢಗಲಿ ಕಂದ ನಾನೆಂದ ।
ಒಡೆಯ ಚಿತ್ರೈಸು ಬೆಸ ಕೊಟ್ಟು ಕಳುಹೆಂದು
ಅಡಿಗೆರಗಿದ ಸಿಂಗ ಬಂದು ॥೮೯॥

ಬಣ್ಣಿಸಿ ಕಟ್ಟಣಿಲ್ಲದ ಹೊನ್ನ ಕೊಂಬರು
ಹೆಣ್ಣುಗಳಾದರು ಸಿಂಗ ।
ತಣ್ಣನೆ ಇರು ನಮ್ಮ ನಂಬಿ ನೀ ಜೀತವ
ಉಣ್ಣದವ [ನು] ಕೊಲ್ಲಬಹುದೆ ॥೯೦॥

ಹೆಮ್ಮೆ [ಯ] ಲ್ಲವು ದೇವ ಹಲವು ಮಾತಿಲ್ಲವು
ನಮ್ಮಯ್ಯ ಬೆಸನ ಚಿತ್ರೈಸು ।
ಉಮ್ಮಾಯದಲಿ ಬೆಸನ [ವ] ನಿತ್ತ ಸಿಂಗಗೆ
ಒಮ್ಮನದಲಿ ಕಳುಹಿದನು ॥೯೧॥

ವಂಕುಡಿ ಜಮದಾಂಡೆ ಬಿಂಕದ ಕಠಾರ
ಶಂಕೆಯಿಲ್ಲದೆ ಸಿಂಗ ನಡೆದ ।
ಕೊಂಕುಳತನದಲ್ಲಿ ಮುಂಗೈಯ ಹಚ್ಚಡ
ಅಂಕಕ್ಕೆ ನಡೆದನು ಹುಲಿಯ ॥೯೨॥

ನಿಜಗಲಿ ಮುಮ್ಮಡಿ ಸಿಂಗ ಗವಿಯ ಹೊಕ್ಕು
ಗಜರಿ ಗರ್ಜಿಸಿದನು ಬಲಹುಳ್ಳ ಹುಲಿಯ
ತ್ರಿಜಗ ನಡಗುವಂತೆ ಬಲಹುಳ್ಳ ಹುಲಿಬಂದು
ಭುಜಶಕ್ತಿವುಳ್ಳ ಸಿಂಗನನು ॥೯೩॥

ಹೊಯಿದ ಹೊಯಿಲ ತಪ್ಪಿಸಿ ಮುಮ್ಮಡಿ ಸಿಂಗ
ಆಯಿಗಾರ ಇರಿದ ಹೆಬ್ಬುಲಿಯ ।
ಬಾಯಿದೆರೆದು ಹುಲಿ ಗಾಯದಿ [ಕೆಡೆದುದು]
ಆಯ ತಾಕಲು ಅಸುವಳಿದು ॥೯೪॥

ಕೊಂದನು ಹುಲಿಯನ್ನು ಚೆಂದದಿ ಉಗುರನ್ನು
[ತಂ]ದು ರಾಯನ ಮುಂದೆ ನಿಂದ ।
ಚೆಂದಚೆಂದದಿ ಮಚ್ಚಿದ ರಾಮದೇವನು
ಅಂದಳವನು ಅವನಿತ್ತ ॥೯೫॥

ಸಾಸಿರ ಮಂದಿಯ ಕೊಂದ ಹುಲಿಯ ಮೀಸೆ
ಗಾಸಿಯಾಗದೆ ಸಿಂಗ ತಂದೆ ।
ಮೀಸರ ಗಂಡ ಮುಮ್ಮಡಿ ಸಿಂಗನಹುದೆಂದು
ದೇಶಾಧಿಪತಿ ಹೊಗಳಿದನು ॥೯೬॥

ಬಿರಿದೆತ್ತಿಸಿ ರಾಮದೇವನು ಕೊಂಡಾಡಿ
ಧುರಧೀರ ಸಿಂಗಿನಾಯಕನ ।
ತರತರ ಮಂಡಲಿಕರು [ಮುಂದೆ] ನಡೆಯಲು
ತಿರುಗಿ ಹೊಕ್ಕನು ದೇವಗಿರಿ ॥೯೭॥

ಭೂಪತಿ ರಾಮದೇವ[ನು] ಸಿಂಗ ನಡೆತಂದು
ಈ ಪರಿ ಸುಖ ಬಾಳುತಿರಲು ।
ಕಾಪಾಲಧರನ ಕರುಣದಿಂದ ರಾಜ್ಯವ
ಅಪ್ರತಿಮನು ಆಳುತಿದ್ದ ॥೯೮॥

ನೆನೆದು ಸಂತೋಷದಿ ರಾಮದೇವರಾಯನು
ಘನ ಸಂತೋಷದೊಳಿರುತಿರ್ದ ।
ಮನಸಿಜಧ್ವಂಸಿಯ ಕೃಪೆಯೊಳಗಿರಲಾಗಿ
ಅನುರಾಗದಿಗೊಂದು ಸಂಧಿ ॥೯೯॥

ಅಂತು ಸಂಧಿ ೧ ಕ್ಕಂ ಪದನು ೯೯ ಕ್ಕಂ ಮಂಗಳಮಹಾಶ್ರೀ

❖❖

ಸಂಧಿ : ೨

❖

ರಾಯದುರ್ಗದಲ್ಲಿ ಮುಮ್ಮಡಿಸಿಂಗ – ಕಂಪಿಲ

ಕೆಂಜೆಡೆ ಕಪ್ಪುಗೊರಳು ಬಿಂಬ ಸುಲಿಪಲ್ಲು
ಕುಂಜರ ಚರ್ಮಾಂಬರನೆ ।
ಕಂಜಭವನ ಶಿರವರಿದ ಮಹಾತ್ಮನೆ
ನಂಜುಂಡೇಶ್ವರ ರಕ್ಷಿಸೆನ್ನ ॥೧॥

ಸುರಿತಾಲ ಡಿಳ್ಳಿಯಿಂದಲಿ ದೇವಗೆರಿಗೆಯು
ಭರದಿ ಮುತ್ತಿಗೆಯ ಮಾಡಿದನು ।
ಧುರಧೀರ ಸಿಂಗನು ಮಲೆಪಲ್ಲ ದೇಶಕ್ಕೆ
ತೆರಳಿದ ಕಥೆಯನು ಕೇಳಿ ॥೨॥

ಇಂತಪ್ಪ ಸಂಧಿಯ ಕಥೆಯನು ವಿಸ್ತಾರ
ಪಂಥವನೇನ ಬಣ್ಣಿಪೆನು ।
ಕಂತುಸಮನ ರೂಪ ಡಿಳ್ಳಿಯ ಸುರಿತಾಳ
ಸಂತೋಷದಲಿ ಇರುತಿರ್ದ ॥೩॥

ಬಾಳ ಪರಿಯೊಳು ವಾಲಗದೊಳು ಸುರಿತಾಳ
ಕೇಳಿದ ತನ್ನ ಮಂತ್ರಿಯನು ।
ಕಾಳಗದೊಳು ನಮ್ಮಿದಿರಲಿ ನಿಲ್ಲುವ
ಖೂಳ ರಾಯರುಗಳಿನ್ನುಂಟೆ ॥೪॥

ಡಿಳ್ಳಿಯು ಮೊದಲಾದ ಛಪ್ಪನ್ನ ದೇಶಕ್ಕೆ
ಕಲಿಗಳರಸ ನೀನೊಬ್ಬ ।
ಅಲ್ಲಿಂದ ಮೇದಿನಿ ಮೇಲಿಪ್ಪ ರಾಯರಿಗೆ
ಸುಲಲಿತ ಕರ್ತನು ಇಹನು ॥೫॥

ನೀವಿಬ್ಬ[ರ]ಲ್ಲದೆ ರಾಜ್ಯಕೊಡೆಯರಿಲ್ಲ
ಭಾವಿಸಿ ಎನ್ನ ಬಿನ್ನಪವ ।
ಆ ವಾಕ್ಯ ಕೇಳಿ ಮೆಚ್ಚಿದ ಸುರಿತಾಳನು
ತಾ ವಹಿಲದಿ ಹೆರೆ ಸಾರ್ದ ॥೬॥

ಎಡೆಯಿಲ್ಲದೊಲಗದೊಳಗೊಬ್ಬ ನುಡಿದನು
ಒಡೆಯ ಬಿನ್ನಹ ರಾಯರುಂಟು ।
ಪೊಡವಿಯೊಳಗೆ ಟೆಂಕಣ ದೇಶದೊಳಗೊಬ್ಬ
ಕಡುಗಲಿ ರಾಮದೇವನಿಹನು ॥೭॥

ಚೋದ್ಯದ ಮಾತನು ಕೇಳಿದ ಸುರಿತಾಳ
ಮೇದಿನಿಗೊಡೆಯರಿನ್ನುಂಟೆ ।
ಮೂದಲಿಸದೆ ಬಂದಿಕಾನವ ಹಾಕಿಸಿ
[ಉ] ದುರ್ಬಿಳೆ ಕಡಿವೆ ಕಂಡೆಯದಿ ॥೮॥

ರಾಮದೇವರಾಯನೆಂಬಾತನು [ತಾನು]
ಭೂಮಿಯೊಳಗೆ ಬಲ್ಲಿದನೆ ।
ಕಾಮನ ಈಶ್ವರ ಸುಟ್ಟಂತೆ ರಾಯನ
ಧಾಮಧೂಮವ ಮಾಡಿ ಕೊಲ್ವೆ ॥೯॥

ಬರಹೇಳು ಖಾನವಜೀರರನೆಂದಾಗ
ಭರದಿ ಡಂಗುರವ ಹೊಯ್ಸಿದನು।
ಇರದೆ ಬಂದಿತು ನವಲಕ್ಷ ಕುದುರೆ ಮಂದಿ
ಕರ ಬೇಗ ಸುರಿತಾಳನೆಡೆಗೆ ॥೧೦॥

ಬೇಗನೆ ಸುರಿತಾಳ ಸಾಗಿಸಿ ದಂಡನು
ಸಾಗರ ತೆರೆಯಂದದಲಿ ।
ಸಾಗಿಸಿ ತೇಜಿಯಾಕಾಶಕ್ಕೆಯಡರ್ವಂತೆ
ಬೇಗನೆ ಹದಿನೆಂಟು ಲಕ್ಷ ॥೧೧॥

ದಾಳಿಯ ಮಾಡಲು ರಾಮದೇವನ ಮೇಲೆ
ಗೂಳೆವ ತೆಗೆಯೆ ದೇಶದೊಳು ।
ಕೋಳಾಹಳವ ಮಾಡಿ ದೇವಗಿರಿಯ ಮುತ್ತಿ
ಕಾಳಗವನು ಗಂಟ್ಟಿಕ್ಕಿದರು ॥೧೨॥

ಸೃಷ್ಟಿಯ ಹನುಮ ಲಂಕೆಯ ಹಾರಿ ಬಂದಂತೆ
ದಿಟ್ಟರು ದಾಳಿ ಮಾಡಿದರು ।
ಅಷ್ಟದಿಕ್ಕಿನ ರಾಯರೊಂಬತ್ತು ಮಂದಿಯ
ನಿಷ್ಟುಳ್ಳ ಸುರಿತಾಳ [ಹಿ]ಡಿದ ॥೧೩॥

ಒಂಬತ್ತು ಮಂದಿ ರಾಯರನೆಲ್ಲ ಹಿಡಿಕೊಂಡು
ಕುಂಭಿನಿಯೊಳು ಬರುತಿರಲು ।
ಗಂಭೀರ ಸುರಿತಾಳ ಖಂಡೆವ ತೊಳೆದನು
ಶಂಭು ಸೇತುವೆ ರಾಮೇಶ್ವರದಿ ॥೧೪॥

ಬಾದೂರ ಸುರಿತಾಲ ಮುದದಿ ಪಯಣವ ಬಿಟ್ಟು
ಮದುರೆ ಪಟ್ಟಣವ ಕಟ್ಟಿಸಿದ ।
ಕದನದಿ ಸುರಿತಾಳ ಒಂಭತ್ತು ರಾಯರ
ಮುದದಿ ಡಿಳ್ಳಿಗೆ ನಡೆತರಲು ॥೧೫॥

ಅತ್ತಲಿ ಸುರಿತಾಳ ಡಿಳ್ಳಿಗೆ ಹೋಗಲು
ಇತ್ತ ಮುಮ್ಮಡಿ ಸಿಂಗನವನು ।
ಉತ್ತಮ ದೇವರಾಯನು ಸಿಕ್ಕಿದನೆಂದು
ಮತ್ತೆ ಒಕ್ಕಲಕೊಂಡು ನಡೆದ ॥೧೬॥

ನೆನೆದ ಮುಮ್ಮಡಿ ಸಿಂಗ ಘ[ನ] ಮಲೆಪಲ್ಲಿಗೆ
ವಿನಯದಿ ಪಯಣ ನಿಶ್ಚಯಿಸಿ ।
ಅನುಜರಿಗೆಲ್ಲಕ್ಕೆ ಹಿರಿಯ ಮುಮ್ಮಡಿಸಿಂಗ
ತನ್ನ ಬಳಗ ಸಹ ತೆರಳೆ ॥೧೭॥

ಬಂದ ಮುಮ್ಮಡಿಸಿಂಗ ದೇವಗಿರಿಯ ಬಿಟ್ಟು
ಕುಂದದೆ ಹಲವು ಪಯಣದಲಿ ।
ಒಂದು ಪಯಣ ಅರ್ಧ ಪಯಣವ ಮಾಡಿಯೆ
ನಿಂದರು ಎಡೆಯೆಡೆಯಲ್ಲಿ ॥೧೮॥

ಎಲ್ಲ ಗೂಳೆಯ ಕೂಡಿಕೊಂಡು ಮುಮ್ಮಡಿಸಿಂಗ
ಅಲ್ಲಿ ಮನೆಗಳ ಕಟ್ಟಿಸಿದ ।
ಬಲ್ಲಿದ ರಾಯನ ಕಾಣಬೇಕೆನುತಲಿ
ಅಲ್ಲಿಂದ ಹೊರಟ ಬೇಗದಲಿ ॥೧೯॥

ಎರಡು ಸಾವಿರ ಮಂದಿ ಮುನ್ನೂರು ತೇಜವು
ಕಡೆಯ ಬಿರುದಿನ ಮನ್ನೆಯರು ।
ಗಿಡಿಬಿಡಿ ಡಿಂಡಿಮ ಕೊಳಲು ತಪ್ಪಟೆ ಕಹಳ
ಬಿಡದೆರಡಿಲ್ಲ ಎಡಬಲದಿ ॥೨೦॥

ತೆರಳಿ ಮುಮ್ಮಡಿಸಿಂಗ ರಾಯದುರ್ಗಕೆ ಬಂದು
ಅರಮನೆಯನು ಹೊಕ್ಕನಾಗ ।
ಭರದಿಂದ ಕಪ್ಪವನಿಟ್ಟನು ಕುದುರೆಯ
ಧುರಧೀರ ರಾಯ ಮನ್ನಿಸಿದ ॥೨೧॥

ಮನ್ನಿಸಿ ಮುಮ್ಮಡಿಸಿಂಗಗೆ ರಾಯನು
ಉನ್ನತ ಉಡುಗೊರೆಯಿತ್ತು ।
[ತ]ನ್ನ ಮುನ್ನಿನ ನಾಡ ದಳವಾರಿಕೆಯನಿತ್ತ
ಮುನ್ನಿನ ಪೂರ್ವವ ಕೇಳಿ ॥೨೨॥

ಮನ್ನೆಯ ಮುಮ್ಮಡಿಸಿಂಗಗೆ ಮನ್ನಿಸಿ
ಮುನ್ನಿತ್ತನಿಪ್ಪತ್ತು ಗ್ರಾಮ ।
ಚೆನ್ನಾಗಿ ಸುಖಬಾಳು ನಿನ್ನ ವೃತ್ತಿಯನೆಂದು
ಮನ್ನಿಸಿ ರಾಯ ಕಳುಹಿದನು ॥೨೩॥

ಇಂತು ಮುಮ್ಮಡಿ ಸಿಂಗ ಹಲವು ಕಾಲದೊಳಾಗ
ಸಂತೋಷದಿಂದಿರುತಿರಲು ।
ಅಂ [ತು] ವೃದ್ಧಾ [ಪ್ಯಮಾ]ಗಿರೆ ಮಲ್ಲರಾಯನು
ಮುಂಚೆ ಸ್ವರ್ಗಸ್ಥ ತಾನಾದ ॥೨೪॥

ದೊರೆ ಮಲ್ಲರಾಯನು ಮರಣವಾದುದ ಕೇಳಿ
ಧೀರ ಮನ್ನೆಯರು ಕಡಿದಾಡೆ ।
ಧುರಧೀರ ರಾಯನ ಅಳಿಯ ಸೋದರಮಲ್ಲ
ಇರದೆ ಪಟ್ಟವ ಕಟ್ಟಿಕೊಂಡ ॥೨೫॥

ಧುರಧೀರ ಮುಮ್ಮಡಿಸಿಂಗ ಸುದ್ದಿಯ ಕೇಳಿ
ಭರದಿಂದ ಊಟವ ಮಾಡಿ ।
ಇರದೆ ಕೊಟ್ಟದ ಮುನ್ನೆ ನಾಯಕರೆಲ್ಲರು
ನೆರೆದು ಬಂದರು ದುರ್ಗದೆಡೆಗೆ ॥೨೬॥

ಕಟ್ಟಿಳಿಲ್ಲದೆ ಕೋಂಟೆಯ ಕೊಂಡರು ಬೇಗ
ಅಟ್ಟಿದ ಅಳಿಯ ಮಲ್ಲನನು ।
ಪಟ್ಟಕೊಡೆಯನಾಗಿ ಸಮಸ್ತರಾಜ್ಯವನೆಲ್ಲ
ನೆಟ್ಟನೆ ಆಳುತಲಿರ್ದ ॥೨೭॥

ಮೀಸರ ರಾಯರ ಗಂಡ ಮುಮ್ಮಡಿಸಿಂಗ
ದೇಶದೇಶದ ಮನ್ನೆಯರು ।
ಲೇಸಾಗಿ ಕೊಂಡು ಕಪ್ಪವ ತೆತ್ತು ಬಂದರು
ಸಾಸಿರ ಕಾಳೆ ಎತ್ತಿದವು ॥೨೮॥

ಎಡವಂಕ ಬಲವಂಕ ಮನ್ನೆರುಗಳು ಎಲ್ಲ
ಸಡಗರ ವಾಲಗವಿತ್ತು ।
ಒಡೆಯ ಬಿನ್ನಹ ಕೇಳು ಮಂತ್ರೀಶರಿಲ್ಲದೆ
ನಡೆವುದೆ ರಾಜಲಕ್ಷಣವು ॥೨೯॥

ತನ್ನ ಮನದಿ ರಾಯ ಉನ್ನತ ಹರುಷದಿ
ಮುನ್ನಿನ ಪ್ರಧಾನನಹನೆ ।
ಮನ್ನಣೆ ಅರುವುಳ್ಳ ಮಂತ್ರಿ ಶೆಟ್ಟಿಯ ಮಗ
ಚೆನ್ನ ಬೈಚಪ್ಪನ ಕರೆಸಿ ॥೩೦॥

ಉತ್ತಮ ದಿನವ ನೋಡಿಸಿ ಪ್ರಧಾನತ್ವವ
ಪಟ್ಟಾಭಿಷೇಕ ಮಾಡಿದರು ।
ಚಿತ್ರಾಂಬರ ಹಚ್ಚಡವನು ಹೊದ್ದಿಸಿ
ಕರ್ತುಃ ಶಿವಗೆ ಶರಣೆನಿಸಿ ॥೩೧॥

ಚದುರ ರಾಯನ ಸಮನಾಗಿ ಹೋಲುವನವ
ಮೃದುವಾಕ್ಯನುಳ್ಳ ಪ್ರಧಾನ ।
ಒದಗಿ ದಿವಾಣದ ಕಟ್ಟೆಲಲಿ ಕುಳಿತನು
ಮುದದಿಂದ ಮಂತ್ರಿ ಬೈಚಪ್ಪ ॥೩೨॥

ಈ ಪರಿ ಪ್ರಧಾನ ಸುಖದಲ್ಲಿ ಇರುತಿರೆ
ಭೂಪತಿ [ಸಿಂಗನಾಯಕನು] ।
ಭೂಪ ಮನ್ನೆಯರ ಸುತೆಯರನು ತಂದಾಗ
ರೂಪುಳ್ಳ ಕಂಪಿಲಗೆಂದು ॥೩೩॥

ಮದುವೆಯ ಮಾಡಿ ಕಂಪಿಲಗೈವರು ಹೆಣ್ಣು
ಸುದತಿ ಸುಲಲಿತ ಚೆನ್ನೆಯರ ।
ಸದಮದದಿಂದ ಸಂತೋಷದಿಂದಲಿ ರಾಯ
ಮುದದಿಂದ ರಾಜ್ಯ ಪಾಲಿಸುತ ॥೩೪॥

ಷೋಡಶ ಕಳೆಯುಳ್ಳ ಕಂಪಿಲಗೆ ಮಕ್ಕಳ
ರೂಢಿಗಧಿಕ ಬಲ್ಲಿದರು ।
ಅಡಲೇನವರ ಪ್ರತಾಪವ ಶೌರ್ಯವ
ನಾಡೊಳಗಧಿಕ ಬಲ್ಲಿದರು ॥೩೫॥

ಎಳಗನನೇರಿ ವೈಹಾಳಿಯ ತಿರುವುತ
ಬಾಲರ ಕಂಡು ಮನದಲ್ಲಿ ।
ಲಲನೆ ಹರಿಯಮ್ಮನು ಮನದೊಳು ಚಿಂತಿಸಿ
ಅಳಲಿ ಪುತ್ರನ ಬಯಸಿದಳು ॥೩೬॥

ದಿಕ್ಕು ದಿಕ್ಕಿನ ದೈವವ ಬೇಡಿಕೊಂಡಳು
ಮುಕ್ಕಣ್ಣ ಶಿವನೆ ಚಿನ್ಮಯನೆ ।
ದುಃಖದಿ ಎನ್ನಂಥ ಹೆಣ್ಣು ಹುಟ್ಟಲಿ ಬ್ಯಾಡ
ಮಕ್ಕಳ ಪಾಲಿಸೊ ದೇವಾ ॥೩೭॥

ವನಜನಿಲ್ಲದ ಕೊಳನು ಇನಿಯನಿಲ್ಲದ ಸತಿ
ದಿನಕರನಿಲ್ಲದಾಕಾಶ ।
ತನುಜರಿಲ್ಲದ ಮನೆ ದನುಜರ ಮಣಿವಾಡ
ಮನಸಿಜಹರನೆ ಚಿತ್ರೈಸು ॥೩೮॥

ಒಂದೊಂದು ಪರಿಯ ಚಿಂತಿಸುತಿರೆ ಹರಿಯಮ್ಮ
ಕಂದನ ಬೇಡಿ ಮನದೊಳಗೆ ।
ಇಂದುಧರನೆ ಕಂಪಿಲ ಸೋಮೇಶ್ವರ
ಕಂದನ ಪಾಲಿಸು ಎನಗೆ ॥೩೯॥

ನಿಂದು ಹರಕತೆಯ ಮಾಡಿಕೊಂಡಳು ಹರಿಯಮ್ಮ
ಬಂದಳು ತನ್ನರಮನೆಗೆ ।
ಒಂದೊಂದು ನೆನೆದು ಪವಡಿಸಿಕೊಂಡಿರಲಾಗ
ಗಂಡ ಕಂಪಿಲ ಸಹವಾಗಿ ॥೪೦॥

ಉತ್ತಮ ಕಂಪಿಲ ಬೇಂಟೆಯ ನೆವದಿಂದ
ಮತ್ತೆ ಬಂದನು ಸೋಮೇಶ್ವರಗೆ ।
ಕರ್ತು ಸೋಮೇಶಗೆ ತಂದು ಕಾಣಿಕೆಯಿಕ್ಕಿ
ಮತ್ತೆ ನಿಂದನು ಭಕ್ತಿಯಿಂದ ॥೪೧॥

ಕಂಪಿಲ ಸೋಮೇಶ ಸಂಪತ್ತಿಲಿಹೆ ನಾನು
ಪೊಂಪಾಸಾಗರದಯ್ಯ ನೀನು ।
ಕಂಪಿಲರಾನೆಂ [ದೆನಗೆ ಹೆಸರಿಟ್ಟರು]
ಇಂಪಾಗಿ ಎನ್ನ ಪಾಲಿಪುದು ॥೪೨॥

ನಿನ್ನ ಹೆಸರು ನಾನು ಚೆನ್ನ ಕಂಪಿಲರಾಯ
ಎನ್ನ ಸಲಹಿಕೊಂಡಾಳುವುದು ।
ಉನ್ನಂತದಿಂದಲಿ ವರಗಳ ಇಸಕೊಂಡು
ತನ್ನ ಪಟ್ಟಣಕೆ ತೆರಳಿದನು ॥೪೩॥

ಶರಣೆಂದು ಕಂಪಿಲರಾಯನು ಹೊರವಂಟು
ದೊರೆ ರಾಯರುಗಳ ಸಂಭ್ರಮದಿ ।
ಪರಿವಾರ ಸಹವಾಗಿ ಅಲ್ಲಿಂದ ತೆರಳಿದ
ತುರಗವನೇರಿ ವಾದ್ಯದಲಿ ॥೪೪॥

ಬೇಟೆಯನಾಡುತ ದಾಟಿದ ಶರಧಿಯ
ಮೀಟಾದ ಮಾನ್ಯರು ಸಹಿತ ।
ದಾಟಿ ಬಂದನು ಮುರಹರನ ದೇವಾಲಯಕೆ
ನೀಟಾಗಿ ಕರಗಳ ಮುಗಿದು ॥೪೫॥

ಬರುತ ಕಂಡನು ಮುರಹರನ ಶ್ರೀಚರಣಕ್ಕೆ
ಎರಗಿ ನಮಸ್ಕರಿಸಿದನೊಲಿದು ।
ಕಾರುಣ್ಯನಿಧಿಗೆ ವಂದಿಸಿ ಕಾಣಿಕೆಕೊಟ್ಟು
ದುರಿತವಿನಾಶನೆಂದೆನುತ ॥೪೬॥

ಉತ್ತಮ ಮುಕ್ಕುಂದಿ ಸಾಲ್ಗುಂದಿ ಪ್ರಜೆ ಬಂದು
ಮತ್ತೆ ಕಂಪಿಲಗೆರಗಿದರು ।
ಎತ್ತಿ ಕಂಪಿಲ ಮನ್ನಿಸಿ ವೀಳ್ಯವನಿತ್ತು
ಮೊತ್ತದಿ ಕಳುಹಿದನವರ ॥೪೭॥

ಚೆನ್ನಾಗಿ ಭೈರವಲಿಂಗನ ಪೂಜೆಯ
ಅನುವಾಗಿ ಪ್ರಜೆಯೆಲ್ಲ ನೆರೆದು ।
ಬೆನ್ನ ಸಿಡಿಯು ಬಾಯಿಬೀಗವು ಮೊದಲಾದ
ಉನ್ನಂತ ಅಗ್ನಿಕೊಂಡಗಳು ॥೪೮॥

ಬಡಿವ ಡೊಳ್ಳಿನ ರವ ಗಿಡಿಬಿಡಿ ಡಮಾಮಿ
ದೃಢವುಳ್ಳ ವಗ್ಗರುಗ್ಗಡಿಸೆ ।
ಹೊಡೆವ ವಾದ್ಯದ ರಭಸವ ಕೇಳಿ ಕಂಪಿಲ
ಸಡಗರವೆಲ್ಲಿಯದೆಂದ ॥೪೯॥

ದೊರೆ ರಾಯ ಕೇಳಯ್ಯ ರಡ್ಡೇರ ಪರುವನು
ಭೋರಿಟ್ಟು ವಾದ್ಯ ಭೈರವಗೆ ।
ಹರಕೆಯ ಪೂಜೆಯ ಒಪ್ಪಿಸುತಿಹರೆಂದು
ಅರಿಕೆಯ ಮಾಡೆ ಕಂಪಿಲಗೆ ॥೫೦॥

ಅಂದು ಕಂಪಿಲರಾಯ ಭೈರವಲಿಂಗನ
ಇಂದು ನೋಡಲಿಬೇಕುಯೆನುತ ।
ಬಂದು ಶರಣುಮಾಡಿ ನಿಂದನು ಧರಣೀಶ
ಚೆಂದಚೆಂದದಿ ಕರ ಮುಗಿದು ॥೫೧॥

ಸಿಡಿಯನಾಡುವುದನು ನೋಡಿ ಕಂಪಿಲರಾಯ
ಕಡು ಚೆಲುವೆ ರತ್ನಿಯ ಕಂಡ ।
ನೋಡಿ ಕಂಪಿಲರಾಯ ದೃಷ್ಟಿಯನಿಟ್ಟನು
ರೂಢಿಗೆ ಆಶ್ಚರ್ಯವೆಂದ ॥೫೨॥

ಆಟವ ನೋಡುತ ಕೋಟಲೆಗೊಳಗಾದ
ಮೀಟು ಜವ್ವನೆ ಹೆಣ್ಣ ಕಂಡ ।
ಇಟ್ಟನು ಮನವ ರತ್ನಿಯ ಮೇಲೆ ಕಂಪಿಲ
ಊಟಕೆ ಕರೆ ಬಂದರವರು ॥೫೩॥

ಕರೆದರೆ ಅಮೃತಾನ್ನವನುಂಡು ಕಂಪಿಲ
ಒರೆದು ಕೇಳಿದನವರುಗಳ ।
ವನಿತೆಯ ಎನಗೀಯ[ಬೇಕೆಂದು] ಕಂಪಿಲ
ಕರೆದು ಕೇಳಿದನವರೊಡನೆ ॥೫೪॥

ಬೆದರುತ ಮನದೊಳು ಇದಿರಿಲಿ ನಿಂದಾಗ
ಬದನಾಮಿಯೊಳಗಾದೆವೆನುತ ।
ಇದು ಏನು ಮಾತಯ್ಯ ಕುಲದಲ್ಲಿ ರಡ್ಡೇರು
ಹದನವೆ ನೀವು ಬೇಡುವುದು ॥೫೫॥

ಬಿಡೆನು ನಾನೀ ಹೆಣ್ಣನೆಂದು ಕಂಪಿಲರಾಯ
ಜಡಿದು ಮೂದಲಿಸಿದನವರ ।
ಕೊಡಬೇಕು ಈ ಹೆಣ್ಣು ನನಗೆಂದು ಕಂಪಿಲ
ಒಡಂಬಡಿಕೆಯನು ಮಾಡಿದನು ॥೫೬॥

ಭೂಮಿಪಾಲಕ ನೀನು ಆಡಿದರೇನಯ್ಯ
ಪ್ರೇಮವೆ ನಿನಗೆ ಸಮ್ಮತವೇ ।
ನಮ್ಮ ಕುಲದಲ್ಲಿ ಹೊರಹಾಕುವರೆಂದು
ತಮ್ಮ ಹಸ್ತಗಳ ಮುಗಿದರು ॥೫೭॥

ಉಮ್ಮಳಿಗೆಯ ಕೊಡುವೆನೊಂದು ಊರನು
ಗಮ್ಮನೆ ಕರೆದು ತಾರೆನಲು ।
ಪ್ರೇಮದಿ ರತ್ನಿಯ ಚರರು ತಂದಿರಿಸಲು
ಆ ಮಹಾರಾಯ ನಿಟ್ಟಿಸಿದ ॥೫೮॥

ಉಡುಗರೆ ಹೊದ್ದಿಸಿ ಮಾವ ಭಾವದರಿಗೆ
ತಡೆಯದೆರಡೂರ ಪಾಲಿಸಿದ ।
ದೃಢವುಳ್ಳ ಕಂಪಿಲ ಸೋಮ ಪಾಲಿಸಿದನು
ಒಡೆಯ ನಿನಗೆ ಶರಣೆಂಬೆ ॥೫೯॥

ಒಡನೆ ಊಟವಮಾಡಿ ಮಡದಿ ದಂಡಿಗೆಯೇರಿ
ನಡೆದನು ರಾಯರಮನೆಗೆ ।
ತಡೆಯದೆ ರತ್ನಿಯನೊಡಗೊಂಡು ಕಂಪಿಲ
ಒಡೆಯ ಹೊಕ್ಕನು ಪಟ್ಟಣವ ॥೬೦॥

ಅತಿಚೋದ್ಯವಾಗಿ ನೋಡಿದರು ರಾಣಿಯರೆಲ್ಲ
ಯತಿ ಬಂತು ನಮಗೆಂದೆನುತ ।
ಕೃತಕವ ಮಾಡಿದ ಕಂಪಿಲನೆಂದಾಗ
ಸತಿಯರಾಡಿದರು ತಮ್ಮೊಳಗೆ ॥೬೧॥

ಶಶಿಮುಖಿಯರು ಕಂಡು ನಿಂದು ಬೆರಗಾದರು
ಕುಸುಮಗಂಧಿಯರು ಚಿಂತಿಸುತ ।
ವಸುಧೆಪಾಲಕ ಮರೆಮಾಡಿದ ನಮಗೆಂದು
[ಗತ] ಹರುಷದಿ ತಮತಮಗೆ ॥೬೨॥

ಎಲ್ಲಿಯ ಹೆಣ್ಣುಯೆತ್ತಣದೆಂದು ಹರಿಯಮ್ಮ
ಲಲನೆ ಕೇಳಿದಳು ಕಂಪಿಲನ ।
ಚೆಲ್ಲೆಗಂಗಳೆ ಕೇಳು ಯಲುಮಾರ ಮಗಳೀಕೆ
ಚೆಲುವಿಕೆ ನೋಡಿ ನಾ ತಂದೆ ॥೬೩॥

ಈಕೆಯ ತಂದೆನು ಲೋಕವರಿಯೆ ನಾನು
ಬೇಕಾದ ಯಲುಮಾರ ಮಗಳ ।
ಜೋಕೆಲಿ ಇರಿಸೆಂದು ಹರಿಯಲದೇವಿಗೆ
ಲೋಕಪತಿಯು ಹೇಳಿದನು ॥೬೪॥

ವಸುಧೇ ಉತ್ಸವ ಮಾಡಿ ಕಂಪಿಲರಾಯನು
ಪುಸಿಯಲ್ಲಿ ತಾ ಕೂಡಿಕೊಂಡ ।
ಹೆಸರಿಟ್ಟು ರತ್ನಾಜಿಯೆಂಬ ನಾಮದಲಾಗ
ವಿಷ[ಯ] ಸುಖದಿ ಬಾಳುತಲಿ ॥೬೫॥

ಇವಳ ಪೋಲುವ ಹೆಣ್ಣಿಲ್ಲವೆಂದೆನುತಲಿ
ಭುವನೇಶ ಕಂಪಿಲ ನುಡಿದ ।
ಇವಳ ಚೆಲುವಿಕೆ ಪೋಲುವರುಂಟೆ ಸತಿಯರು
ಇವಳ ರೂಪಿಗೆಯೆಣೆಯುಂಟೆ ॥೬೬॥

[ರಮಣಿಯ] ರೂಪಿಂಗೆ ಮನಸೋತು ಕಂಪಿಲ
ರಮಣೀಯರುಗಳನು ಮರೆತ ।
ಕಾಮನ ರಾಣಿಗಿಮ್ಮಡಿ ರತ್ನಿಯರೆ ಕಂಡು
ಸೋಮಧರನು ಕರುಣಿಸಿದ ॥೬೭॥

ಇವಳ ಪೆತ್ತವನಾ[ರೆ ಯಾರು] ಸೋದರುಗಳು
ಇವರು ಭ್ರಮಿಸಿ ಚಿಂತಿಸುವರು ।
[ರಮಣಿ] ಯಿಂದಲಿ ನಮಗೆಯ ಸುಖಮಿಲ್ಲೆಂದು
ಭ್ರಮೆಗೊಂಡು ನುಡಿದರುಯೆಲ್ಲ ॥೬೮॥

ಕಮಲಾಕ್ಷಿ ಹರಿಯಮ್ಮ ಮನದೊಳು ಚಿಂತಿಸಿ
ವಿಮಲ ಸಖಿಯರೊಳಾಡಿದಳು ।
ಅಮರವಂದಿತ ಸೇವೆಯೆಮಗೆ ಪಾಲಿಸಲಿಲ್ಲ
ರಮಣಿಯ ಕೂಡೆ ನುಡಿದಳು ॥೬೯॥

ಇಂದುವದನೆ ಊಳಿಗದ ನಾಗಿ ನುಡಿದಳು
ಬಂದ ಕಂದನ ಸುದ್ದಿಗಳ ।
ಚಂದ್ರನ ಪ್ರಭೆಯಂತೆ ಎಸೆದಿಹ ಕುವರನ
[ತಂ]ದು ರಾಣಿಯರು ತೋರಿದರು ॥೭೦॥

ಗಗನದ ಪ್ರಭೆಯಂತೆ ಎಸೆದು ಶೋಭಿಸುವನು
ವಿಗಡರೂಪಿನ ಕಂದನಮ್ಮ ।
ಬಗೆಯಲ್ಲ ಬಡತನ ತಾಯಿತಂದೆಯರಿಗೆ
ಸುಗುಣೆ ನೀನವರ ಕರೆಸೆನಲು ॥೭೧॥

ಹೇಳಿದ ಮಾತನು ಕೇಳಿ ಹರಿಯಮ್ಮನು
ಊಳಿಗದವರ ಕಳುಹಿದಳು ।
ಕೇಳದೇರು ಕರೆತಂದು ಬಲುಬಡತನವಿದೆ
ನಳಿನಾಕ್ಷಿಯವರ ನೋಡಿದಳು ॥೭೨॥

ಕಂದನ ಎಮಗೆ ಕೊಡುಯೆಂದಳು ಹರಿಯಮ್ಮ
ತಂದೆತಾಯಿಗಳ ಕೇಳಿದಳು ।
ಇಂದು ನೀ ಬಂದ ಕಾರಣವೇನು ಹೇಳೆಂದು
ಬಂದಿತು ದೇಶಕ್ಕೆ ಬರನು ॥೭೩॥

ಸಾಕಿಕೊಂಬೆನು ನಿನ್ನ ಕಂದನ ತೋರೆಂದು
ಆಕೆಯು ಮಗನ ತೋರಿದಳು ।
ಜೋಕೆಯೊಳೆಮ್ಮನು ಸಲುಹಬೇಕೆನುತಲಿ
ಆಕೆ ಬಿದ್ದಳು ಚರಣದಲಿ ॥೭೪॥

ಕರವಿಡಿದೆತ್ತಿಯೆ ಅರಿವೆಗಳನು ಇತ್ತು
ವರಗೃಹಗಳ ಕೊಡಿಸಿದಳು ।
ಗರುವೆ ಹರಿಯಮ್ಮನು ದಿನಚರಿ ಪಡಿಯಿತ್ತು
ಇರಿಸಿದಳವರ ಸನ್ಮತದಿ ॥೭೫॥

ಪುತ್ರನ ಉತ್ಸವ ಮಾಡಿಸಿ ಹರಿಯಮ್ಮ
ವಸ್ತ್ರಾನ್ನ ಗೋದಾನ ಕೊಡಿಸಿ ।
ಕರ್ತು ಕಂಪಿಲ ಸೋಮೇಶನ ಕರುಣದಿ
ಅರ್ತಿಲಿ ತೊಟ್ಲ ಕಟ್ಟಿದಳು ॥೭೬॥

ತನಯನ ಸಾಕೆತ್ತಿಕೊಂಡಳು ಮೂರ್ತದಿ
ತನಗೊಬ್ಬ ಸುತನಾದನೆನುತ ।
ಚಿನುಮಯ ಶಿವನ ಕರಣದಿಂದ ಹರಿಯಮ್ಮ
ತನಯ ಕಾಟನ ಕರೆಸುತಲಿ ॥೭೭॥

ಚೆನ್ನ ಕಾಟನ ಸತಿ ಸಲಹುವುದನು ಕೇಳಿ
ಮಾನ್ಯ ಕಂಪಿಲನು ದಾದೆರಿಗೆ ।
ಉನ್ನಂತವಾದ ವಸ್ತುಗಳ ಭೂಷಣ ಕೊಟ್ಟು
ಸನ್ಮತದೊಳು ಇರುತಿಹಳು ॥೭೮॥

ದಿನಕರನಂತೆ ಕಾಟಣ್ಣನು ಬೆಳದನು
ಮನಸಿಜ ರೂಪ ಕಂಪಿಲನ ।
ಕನಸಿಲಿ ಜಟ್ಟಂಗಿ ರಾಮೇಶ ಬರಲಾಗ
ಜನಪತಿ ನೋಡಬೇಕೆಂದ ॥೭೯॥

ಏಣಾಂಕಧರ [ರಾ]ಮನಡಿಯ ನೋಡುವೆನೆಂದು
ಪ್ರಾಣದ ಮಂತ್ರಿಯ ಕರೆಸಿ ।
ರಾಣಿವಾಸವು ಸಹ ದಾದೇರು ಮೊದಲಾಗಿ
ಕಾಣಬೇಕೆಂದು ನೇಮಿಸಿದ ॥೮೦॥

ಪಲ್ಲಕ್ಕಿ ದಂಡಿಗೆ ಕನಕದ ಚಾಮರ
ಒಳ್ಳೆಯ ರಾಣೀವಾಸಗಳು ।
ಚಲ್ಲೆಂಗಗಳ ರಾಣಿಯರೆಡ ಬಲದಲ್ಲಿ
ಫುಲ್ಲಶರನ ರತಿಯಂತೆ ॥೮೧॥

ಪಟ್ಟದ ರಾಣಿ ಹರಿಯಮ್ಮನ ಪಲ್ಲಕ್ಕಿ
ದಿಟ್ಟ ಕಂಪಿಲನ ಸತಿಯರು ।
ನೆಟ್ಟನೆ ರಾಣಿವಾಸವು ಕೂಡಿನಡೆದರು
ಸೃಷ್ಟಿಗೊಡೆಯ ಜಟ್ಟಂಗೀಶ ॥೮೨॥

ಮಾನ್ಯಮಾಂಡಲಿಕರು ಉನ್ನತ ಹಿರಿಯರು
ಚೆನ್ನ ಕಂಪಿಲನ ಕುವರರು ।
ಉನ್ನಂತ ಮಂತ್ರಿಯು ಬೈಚಪ್ಪ ಮೊದಲಾದ
ಉನ್ನಂತವಾದ ದೇಗುಲಕೆ ॥೮೩॥

ಕಟ್ಟಿಳಿಲ್ಲದೆ ಗಜ ತುರಗವು ಪರಿವಾರ
ಕೊಟ್ಟಿಗೆ ಬೇಳೆ ಬೆಲ್ಲಗಳು ।
ಇಟ್ಟು ಕಣಕ ತುಪ್ಪ ಸಕ್ಕರಿ ಮೊದಲಾದ
ಇಟ್ಟಣಿಸುತ ನಡೆತಂದ ॥೮೪॥

ಸರ್ವಸಂಭ್ರಮದಿಂದ [ಕಂಪಿಲರಾಯ]
ಉರ್ವಿಶ ನಡದನರ್ತಿಯಲಿ ।
ಸರ್ವೇಶ ಸಲಹೆಂದು ಜಟ್ಟಂಗಿರಾಯಗೆ
ಗರ್ವವಿಲ್ಲದೆ ಮೈಯಿಕ್ಕಿದನು ॥೮೫॥

ಕಂಡ ದುರಿತ ಪರಿಹರಮಾಳ್ಪಪ ದೇವನ
ಕಂಡ ದುರಿತ ಹೊಂದದವನ ।
ಕಂಡನು ಭವದ ಲಾವಣ್ಯಕೆ ದೂರನ
ಕಂಡ ಜಟ್ಟಂಗಿ ರಾಮಯ್ಯನ ॥೮೬॥

ಮಜ್ಜನಗಳ ಮಾಡಿ ಪಂಚಾಭಿಷೇಕದಿ
ಪ್ರಜ್ವಲಿಸುವ ಧೂಪದೀಪ ।
ಜಾಜಿ ಮಲ್ಲಿಗೆ ಸುರಹೊನ್ನೆ ಸಂಪಗೆಯಿಂದ
ನಿರ್ಜರಪತಿಯ ಪೂಜಿಸಿದ ॥೮೭॥

ಚಿನಿಪಾಲು ಸಕ್ಕರೆ ಕಣಕ ಕಜ್ಜಾಯವು
ಇನಿಯುಳ್ಳ ಪಾಯಸ ಸವಿದು ।
ಜೇನು ಸಕ್ಕರೆ ರಸದಾಳಿ ನೈವೇದ್ಯವು
ವಿನಿಯದಿ ತಾಂಬೂಲ ಸವಿದು ॥೮೮॥

ಹಿಡಿಹೊನ್ನು ಕಾಣಿಕೆಯನು ಕೊಟ್ಟು ದೇವಗೆ
ಒಡೆಯ ಕಂಪಿಲ ತೆರಳಿದನು ।
ಕಡು ಮಂತ್ರಿ ಮಾನ್ಯರೆಲ್ಲರು ಕಾಣಿಕೆಯಿಟ್ಟು
ನಡೆದರು ಬೀಡಾರದೆಡೆಗೆ ॥೮೯॥

ಬಂದ ರಾಣಿಯವಾಸ ಕಂಡು ಕರವ ಮುಗಿದು
ನಿಂದಡ್ಡ ಬಿದ್ದು ಉತ್ಸಹದಿ ।
ಛಂದಛಂದದಿ ಕಾಣಿಕೆಯಿಟ್ಟು ಹರುಷದಿ
ಚಂದ್ರಧರನ ಬೇಡಿಕೊಳಲು ॥೯೦॥

ಆ ಸಮಯದಿ ಹರಿಯಮ್ಮನು ಶರಣೆಂದು
ಈಶ ಸರ್ವೇಶ ಎನಗಿಂದು ।
ದೇಶ ದೇಶದ ದೈವವ ಬೇಡಿ ವ್ರತಗೆಟ್ಟೆ
ಸಾಸಿರನಯನ ಪೂಜಿತನೆ ॥೯೧॥

ಭೂಮಿಯ ಮೇಲುಳ್ಳ ದೈವವ ನೋಡಿದೆ
ಸೋಮಧರನೆ ಬಳಲಿದೆನು ।
ಕಾಮಹರನೆ ಮಕ್ಕಳ ಕೊಟ್ಟು ಸಲಹು ನಿ
ಸ್ಸೀಮ ಜಟ್ಟಂಗು [ರಾ]ಮೇಶ ॥೯೨॥

ಹೆಜ್ಜೆ ಹೆಜ್ಜೆಗೆ ಹೊನ್ನ ಕಾಣಿಕೆಯಿಕ್ಕುವೆ
ನಿರ್ಜರರೊಡೆಯ ಕೃಪೆಯಾಗು ।
ಸಜ್ಜನ ಶರಣರಿಗೊಲಿದ ಮಹಾತ್ಮನೆ
ಅರ್ಜುನನಂಥ ಕುವರನ ॥೯೩॥

ಅಚ್ಚಮಾವಿನ ಹಣ್ಣು ತೀರ್ಥಪ್ರಸಾದವ
ಅಚ್ಚರಿಯಾಗಿ ಈಡಾಡೆ ।
ಸ್ವಚ್ಚದಿ ಮನದೊಳು ಸಂತೋಷವಾಗುತ
ಉತ್ಸಾಹದೊಳು ತೆರಳಿದಳು ॥೯೪॥

ಶರಣೆಂದು ಹರಿಯಮ್ಮ ತೆರಳಿದಳು ಬೇಗದಿ
ಪರಶಿವನಾತ್ಮದಿ ನೆನೆದು ।
ಶರಣೆಂದು ರಾಣಿವಾಸವುಯೆಲ್ಲರು ಕೂಡಿ
ಕರ ಬೇಗ ಬೀಡಾರದೆಡೆಗೆ ॥೯೫॥

ಜಂಗಮಕೆ ಊಟವ ಮಾಡಿಸಿ ರಾಯನು
ಮಂಗಳುತ್ಸಹದಿಂದ ತೆರಳಿ ।
ಹಿಂಗದೆ ನಡೆತಂದು ರಾಯದುರ್ಗವ ಹೊಕ್ಕ
ಶೃಂಗಾರ ಸೊಬಗು ಲೇಸಾಗಿ ॥೯೬॥

ಬಂದರಮನೆಯೊಕ್ಕನು [ಕಂಪಿಲರಾಯ]
ನಿಂದು ಮಾನ್ಯರ ಕಳುಹಿದನು ।
ಇಂದುಮುಖಿಯರು ಮನೆತುಂಬ ಹರುಷದಿ
ಹೊಂದಿ ಸುಖದಿ ಬಾಳುತಿರಲು ॥೯೭॥

ತಪ್ಪದೆ ರಾಯ ರಾಜ್ಯವ ಪಾಲಿಸುತಿರೆ
ಒಪ್ಪಿದ ಹಲವು ಕಾಲದಲಿ ।
ಸರ್ಪಭೂಷಣನಂತಕನಾಳು ಕಳುಹಿದ
ಭೂಪ ಮುಮ್ಮಡಿಸಿಂಗನಿಗೆ ॥೯೮॥

ಅಸ್ತಮಾನವಾಗೆ ಮುಮ್ಮಡಿ ಸಿಂಗ[ನು]
ಮತ್ತೆ ಮಂತ್ರಿಯು ಬೈಚಪ್ಪಗೆ ।
ವಿಸ್ತರವುಳ್ಳ ಕಂಪಿಲಗೆ ಪಟ್ಟವ ಕಟ್ಟಿ
ಮುಂತೆ ಸ್ವರ್ಗಸ್ಥ ತಾನಾದ ॥೯೯॥

ಸುಗುಣ ಕಂಪಿಲನ ತಂದೆಯ ರಾಣಿವಾಸವು
ಮಿಗಿಲು ದುಃಖದಿ ಗೋಳಿಡಲು ।
ಬಗೆಬಗೆಯಿಂದಲಿ ಸತ್ಕರಿಸಿ ಬೈಚಪ್ಪ
ಅಗಣಿತ ಶೋಕವ ನಿಲಿಸೆ ॥೧೦೦॥

ಗೋದಾನ ಭೂದಾನ ಸರ್ವದಾನವನಿತ್ತು
ಮೇದಿನಿಗೊಡೆಯ ಕಂಪಿಲನು ।
ವೇದವ ಓದಿಸಿ ಹೋಮಕರ್ಮವ ಮಾಡಿ
ಸಾಧನದಿಂದ ಸುಖವಿರಲು ॥೧೦೧॥

ಸುಖವಿರೆ ಕಂಪಿಲ ಸಕಲರಾಜ್ಯವನೆಲ್ಲ
ಅಕಳಂಕಚರಿತ ಪಾಲಿಸುತ ।
ಯುಕುತಿ ಧರ್ಮದಿ ರಾಜ್ಯವನಾಳುತಿರುತಿರೆ
ಅಕಳಂಕ ಸಂಧಿಯು ಎರಡು ॥೧೦೨॥

ಅಂತು ಸಂಧಿ ೨ ಕ್ಕಂ ಪದನು ೨೦೧ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೩

❖

ಹೊಸಮಲೆಯಲ್ಲಿ ಕಂಪಿಲನ ರಾಜ್ಯಭಾರ

ಶ್ರೀಗಿರಿಜಾವರಪ್ರೇಮ ನಿತ್ಯಾನಂದ
ಭಾಗೀರಥಿಯ ಪೊತ್ತವನೆ ।
ನಾಗಕಂಕಣ ಶಿರಮಾಲೆಧರನ ನೀನು
ಸಾಗಿಸು ಜಟ್ಟಂಗಿನಾಥ ॥೧॥

ಸರಸಿಜೋದ್ಭವ ಶಿರವರಿದ ಕಾಪಾಲನೆ
ಹರಿನಯನ ಚರಣಪೂಜಿತನೆ ।
[ವ]ರಮತಿ ಎನಗಿತ್ತು ವರವಿತ್ತು ಪಾಲಿಸು
ವರ ವಿರೂಪಾಕ್ ನೀನೊಲಿದು ॥೨॥

ಜಟ್ಟಂಗಿರಾಮನ ಕರುಣದ ಕಂದನು
ಕಟ್ಟಾಳು ರಾಮಪುಟ್ಟುವುದ ।
ನೆಟ್ಟನೆ ಕಂಪಿಲ ಹೊಸಮಲೆದುರ್ಗವ
ಕಟ್ಟಿಸುವುದ ಕೇಳಿ ಜನರು ॥೩॥

ಆನೆ ಕುದುರೆ ಮಂದಿ ಭಂಡಾರ ಬೊಕ್ಕಸ
ಊನವಿಲ್ಲದೆ ರಾಜ್ಯದೊಡಲ ।
ನಾನಾದೇಶದ ಮಾನ್ಯರನಾಗ ತೋರಿದ
ಜ್ಞಾನುಳ್ಳ ಮಂತ್ರಿ ಬೈಚಪ್ಪ ॥೪॥

ಕಂಪಿಲರಾಯಗೆ ಐವರು ಮಕ್ಕಳು
ಸೊಂಪಿಂದ ಸುಖದಿ ಬೆಳೆಸುತ ।
ಇಂಪುಳ್ಳ ಹರಿಯಮ್ಮ ಮಾಣಿಕವನು ಕಂಡು
ಸಂಪಿಗೆ ಗಂಧಿಯಂತೆಸೆ[ದು] ॥೫॥

ಒಲಿದು ನಾಲ್ಕನೆಯ ದಿನದಿ ಮಜ್ಜನಮಾಡಿ
ಬಿಳಿಯ ದೇವಾಂಗವನುಟ್ಟು ।
ಹೊಳೆವ ಮುತ್ತಿನ ಆಭರಣವ ತೊಟ್ಟಳು
ನಲಿವ ಭಾಪುರ ಭುಜಕೀರ್ತಿ ॥೬॥

ಅಂದಿನಿರುಳು ಸತಿಪತಿ ಸವಿದುಂ[ಡರು]
ಮುಂದೆ ಕರ್ಪುರ ವೀಳ್ಯಯವ ।
ಇಂದುವದನೆ ಹಡಪದ ಸಂಗಿ ಕೊಟ್ಟಳು
ಚಂದದಿ ಸತಿಪುರುಷರಿಗೆ ॥೭॥

ಗಳಹಂಸೆದುಪ್ಪಳ ಸುಪ್ಪತ್ತಿಗೆಯ ತಂದು
ಸೆಳೆಮಂಚದೆಡೆಗೆ ಸಾರ್ಚಿದಳು ।
ಗಿಳಿನುಡಿ ಸ್ತ್ರೀಯಳ ಕಳೆಯೇರಿ ಕಂಪಿಲ
ತಳುವಿಲ್ಲದೊಡಗೂಡಿದನು ॥೮॥

ಉದಯವೇಳ್ಯದೊಳೆದ್ದು ಮದನಸಂಹರನಿಗೆ
ಇದಿರಾಗಿ ಹಸ್ತವ ಮುಗಿದು ।
ಮುದದಿಂದ ಕಾಲ್ಮೋಗದೊಳೆದು ಸತಿಯು ಸಹ
ಮಧುರ ಮಾವಿನಹಣ್ಣು ಮೆದ್ದ ॥೯॥

ಸೃಷ್ಟಿಗೀಶ್ವರ ಕೊಟ್ಟ ಹಣ್ಣನು ತಾ ಮೆದ್ದು
ಬಿಟ್ಟಳು ಅದರ [ತೊಗಟೆ]ಯನು ।
ದೃಷ್ಟಮೂರುತಿಯ ಪ್ರಸಾದದ [ಸಿಪ್ಪೆಯ]
ದಿಟ್ಟೆಯೊರ್ವಳು ಮೆದ್ದಳಾಗ ॥೧೦॥

ಎನ್ನ ಸ್ವಪ್ನದಿ ಬಂದು ಚೆನ್ನ ರಾಮೇಶನು
ಉನ್ನಂತ ಮಾವಿನಹಣ್ಣ ।
ಮನ್ನಿಸಿ ಕೊಟ್ಟನು ಎನಗೆಂದು ಹರಿಯಮ್ಮ
ತನ್ನ ಪುರುಷೆ ಹೇಳಿದಳು ॥೧೧॥

ಕೇಳಿ ಕಂಪಿಲರಾಯ ಹರಿಯಲದೇವಿಗೆ
ಭಾಳಲೋಚನ ಕೃಪೆಯುಂಟು ।
ಪೇಳುವೆ ನಾನೀಗ ಭಾಳಗಣ್ಣವ ಇಂದು
ಲೋಲ ಕುವರನಿತ್ತನೆನುತ ॥೧೨॥

ನೆಲೆಗಂಡು ಗರ್ಭವು ದಿನದಿಕಗ್ಗಳ
ಬಲಿದುದು ರಾಜಸಗುಣದಿ ।
ಕಲಶ ಕುಚಗಳು ಕಪ್ಪೇರಲು ಮುಖವಾಗ
ಕಳೆಯೆಸೆದುದು ಚಂದ್ರನಂತೆ ॥೧೩॥

ಒಪ್ಪುವ ಎಳೆಬಾಳೆ ಬೆಳೆದಂತೆ ಗರ್ಭದಿ
ಕಲ್ಪವೃಕ್ಷದ ಸಸಿಯಂತೆ ।
ತಪ್ಪದೆ ಮಾಯದ ಪಿಂಡವು ಬೆಳೆದುದು
ಕರ್ಪುರಗಂಧಿಯುದರದಿ ॥೧೪॥

ವಸುಧೆಯೊಳ್ಬಡವಗೆ ಭಾಗ್ಯವು ದೊರೆತಂತೆ
ಮಸಿ ಪಾವಡದಿ ರತ್ನದಂತೆ ।
ಬಿಸಜಗಂಧಿಯು ಹರಿಯಮ್ಮನ ಉದರದಿ
ಮಿಸುನಿ ಪುತ್ಥಳಿ ಬೆಳೆದಂತೆ ॥೧೫॥

ಗಗನದಿ ಬಿದಿಗೆ ಚಂದ್ರನು ಬೆಳೆದಂತೆ
ವಿಗಡನು ಬೆಳೆದ ಮಾಯದಲಿ ।
ಒಗೆಮಿಗೆ ಮರುಗದ ಸಸಿಬೆಳೆವಂದದಿ
ಸುಗುಣೆ ಗರ್ಭದಿ ಶಿಶು ಬೆಳೆಯೆ ॥೧೬॥

ನಿಡುಗೇಶ ಕವಲೊಡೆದವು ಹರಿಯಮ್ಮನ
ಬಡನಡು [ಒಡಲ] ಭಾರಕ್ಕೆ ।
ಅಡಿಯಿಟ್ಟು ಗುಜುಮೆಟ್ಟಿ ಬಳಿಕಡಿವಿಡಲಾಗ
ಕುಡಿವಳ್ಳಿ ನಿಲ್ಲಲಾರದಲೆ ॥೧೭॥

ತುಂಬಿತು ನವಮಾಸ ಹರಿಯಲದೇವಿಗೆ
ಅಂಬುಜವದನೆಯುದರದಿ ।
ಸಂಭ್ರಮದಲ್ಲಿ ಕೇದಿಗೆವೊಡೆಯಂದದಿ
ಗಂಭೀರ ಸುತ ಜನಿಸಿದನು ॥೧೮॥

ದಿನಕರ ಕೋಟಿ ಪ್ರಕಾಶದ ಪ್ರಭೆಯಂತೆ
ಮನಸಿಜಸಮ ರಾಮನಾಥ ।
ಜನಿಸಲು ಭೂಮಿಯ ರಾಯರ ಹೃದಯವು
ತನತನಗೊಡೆದು ಜಜ್ಜರಿಸೆ ॥೧೯॥

ಮನಸಿಜರೂಪನು ರಾಮನುದಯವಾಗೆ
ಜನಕ ಕಂಪಿಲರಾಯ ತಾನು ।
ಕನಕೊಸ್ತ್ರದಾನ ಗೋದಾನ ಭೂದಾನವ
ಅನುರಾಗದಿಂದ ಮಾಡಿಸಿದ ॥೨೦॥

ಹರುಷದಿ ನಾಮಕರಣಂಗಳನು ಮಾಡಿ
ತರುಣಿಯರೆಲ್ಲ ಜೋಯೆನುತ ।
ಮೆರೆವ ತೊಟ್ಟಿಲಕೆ ರನ್ನದ ಸರಪಳಿ ಕಟ್ಟಿ
ನೆರೆದಾಗ ತರುಣಿಯರೆಲ್ಲ ॥೨೧॥

ಚೆನ್ನಿಗ ರಾಮನ ತೊಟ್ಟಿಲೊಳಗೆ ತುಂಬಿ
ಕನ್ನೆವೆಣ್ಣುಗಳು ಪಾಡಿದರು ।
ಚಿನ್ಮಯ ರೂಪೆಂದು ಜೋಗುಳ ಪಾಡುತ
ಆ ನರೇಶ್ವರನ ಪಾಡಿದರು ॥೨೨॥

ಜೋ ಜ್ಯೋತಿಲಿಂಗನ ಕರುಣದ ಕಂದನೆ
ಜೋ ಜೋ ನೀ ಭೂಮಿಪಾಲಕನೆ ।
ಜೋ ಜೋ ನೀ ಮೂರುರಾಯರ ಗಂಡನೆಂದಾಗ
ಜೋಯೆಂದು ಪಾಡಿ ಜೋಗುಳವ ॥೨೩॥

ಎಸಳು ಗಂಗಲ ಬಟ್ಟಕುಚದ ಕೋಮಲೆಯರು
ಶಶಿಮುಖ ಪೊಸಜವ್ವನೆಯರು ।
ಅಸಮ ಚೆಲ್ವರ ಗಂಡ ರಾಮಯ್ಯನ [ನು ಆಗ]
ಬಿಸಜಗಂಧಿಯರು ಪೊಗಳಿದರು ॥೨೪॥

ಮದನ ಸನ್ನಿಭರಾಮ ನಿದ್ರೆಗೈದಿರಲಾಗ
ಚದುರತನದ ರತ್ನಾಜಿ ।
ಕದಪಿಗೆ ನಖದಿಂದ ಚೂರಿ ಚುಂಬನಗೊಟ್ಟು
ಚದುರೆ ಪಾಪವನೆಣಿಸುತಲಿ ॥೨೫॥

ಚಿಟ್ಟನೆ ಚೀರಿ ಪಚರಿಸಲು ರಾಮನು
ನೆಟ್ಟನೆ ಬಂದು ಹರಿಯಮ್ಮ ।
[ಥ]ಟ್ಟನೆ ರತ್ನಿಯ ಕರೆದು ಕೇಳಿದಾಗ
ಚಿಟ್ಟನೆ ಚೀರಿದ ಕಂದ ॥೨೬॥

ಚೂರಿಕೊಂಡನು ತನ್ನ ಮುಖವನೆನುತ ರತ್ನಿ
ನಾರಿ ವಹಿಲದಲಿ ಪೇಳಿದಳು ।
ಘೋರ ಪಾತಕಿಯೆಂದು ತನ್ನ ಮನದಿ ನೊಂದು
ನಾರಿ ಬಾಲಕನ ಸಂತೈಸೆ ॥೨೭॥

ಆರು ತಿಂಗಳು ತುಂಬಿತು ರಾಮನಾಥಗೆ
ಮೀರಿದ ಕಳೆಯದೋರಿದನು ।
ವಾರಿಜಗಂಧಿಯರೆಲ್ಲ ವಿಸ್ಮಯವಾಗೆ
ಸಾರ ಹೃದಯನು ಒಪ್ಪಿದನು ॥೨೮॥

ತುಂಬಿತು ಒಂಬತ್ತು ತಿಂಗಳು ರಾಮಗೆ
ಅಂಬೆಗಾಲಿಕ್ಕಿ ನಡೆವಾಗ ।
ಕುಂಭನಿ ರಾಯರ ಎದೆನಡುಗುವಂತೆ
ಅಂಬುಜದೆಲೆಯ ನೀರಂತೆ ॥೨೯॥

ದಟ್ಟಡಿಯಿಡೆ ಕುಮರಕನು ರಾಮಯ್ಯನು
ಸೃಷ್ಟಿರಾಯರು ನಡನಡುಗೆ ।
ನೆಟ್ಟನೆ ಬಿಟ್ಟೋಡುವಂತೆ ಓಡಾಡಿದ
ಕಟ್ಟಾಳು ಏಕಾಂಗವೀರ ॥೩೦॥

ಕಾಲಲಂದುಗೆ ಅಳವಟ್ಟ ಹುಲಿಯುಗುರಿಂದ
ಲಾಲಿತ ಪೊಂಗೆಜ್ಜೆಗಳನು ।
ಲೋಲ ಮಾಗಾಯಿಯರಳೆಲೆ ಉಡೆದಾರವು
ಬಾಲಗೆ ರಾಯ ತೊಡಿಸಿದನು ॥೩೧॥

ಬೆಳೆದನು ರಾಮಯ್ಯ ಕಳೆಗಳುದ್ಭವಿಸಲು
ಘಳಿಲನೆ ತೊದಲ್ನುಡಿ ಕಲಿತ ।
ನಳಿನಗಂಧಿಯು ಹರಿಯಮ್ಮನು ಮುದ್ದಿಸಿ
ಚೆಲುವ ರಾಮನ ಮುಂಡಾಡಿದಳು ॥೩೨॥

ಬಾವನ್ನ ಎಳೆಶಶಿಯಂದದಿ ಬೆಳೆದನು
ಕೋವಿದ ಚೆಲುವ ಕುಮಾರ ।
ಭಾವಜ ಸಮರೂಪ ಆರೇಳು ವರುಷವು
ಕೋವಿದ ಕಂಪಿಲನೊಡನೆ ॥೩೩॥

ತನ್ನ ಮನೆಯ ತೊತ್ತು ತೊಗಟಿಯ ತಿಂದರೆ
ಚೆನ್ನಿಗ ಪುತ್ರನ ಪಡೆದು ।
ಕನ್ನೆ ದಾಸಿಯು ಮತ್ತೆ ಚೆನ್ನಿಗನ ಪಡೆದಳು
ಚೆನ್ನ ಜಟ್ಟಂಗಿ ರಾಮನೆಂದು ॥೩೪॥

ಎಪ್ಪತ್ತೆರಡು ಮಂದಿ ಬೋಳಕರಾಯ[ರ]
ಪುಷ್ಪಬಾಣನ ಸಮನವರ ।
ಒಪ್ಪುವ ಕಂಪಿಲ ತನ್ನ ಕುಮಾರಗೆ
ಒಪ್ಪಿಸಿದನು ಹರುಷದಲಿ ॥೩೫॥

ರತ್ನದ ಹಲ್ಲಣ ಹಾಕಿದ ಎಳಗನ
ಮುತ್ತಿನ ಮುಖರಂಬಯಿಟ್ಟು ।
ಮತ್ತೆ ಚಿನ್ನದ ಕಾಲ ಕಡಗವ ಹಾಕಿದ
ಮತ್ತೇರಿದ ರಾಮನಾಥ ॥೩೬॥

ಚೆಲುವರ ಗಂಡ ಚೆನ್ನಿಗ ರಾಮಯ್ಯನು
ಎಳಗನ ವೈಹಾಳಿ ತಿರುಹೆ ।
ಕಳೆಯುಳ್ಳ ಕಾಟಣ್ಣ ಬಾಲಕರೆಲ್ಲರು
ತಳುವಿಲ್ಲದೇಯರ್ಾಡಿದರು ॥೩೭॥

ಮಗನ ವೈಹಾಳಿಯ ನೋಡಿ ಕಂಪಿಲರಾಯ
ನೆಗೆದು ಸಂತೋಷದಲುಬ್ಬಿ ।
ಬಗೆ ಬಗೆಯಲಿ ಸಾಧನದೋರಬೇಕೆಂದು
ಸುಗುಣ ಅಭ್ಯಾಸಿ ಕರೆಸಿದ ॥೩೮॥

ಹತ್ತು ವರುಷದ ಕುಮಾರ ರಾಮಯ್ಯಗೆ
ಮತ್ತೆ ಸಾಧನೆಗಳ ತೋರಿ ।
ಉತ್ತಮ ಬೇತಾಳದೇವರ ಪೂಜಿಸಿ
ಚಿತ್ರ ಸಾಧನೆಯನು ಕಲಿಸಿ ॥೩೯॥

ಮಲ್ಲ ಸಾಧನೆಗಳ ಗರಡಿ ಸಾಧನೆಗಳ
ಒಳ್ಳೆಯ ತುರಗ ಸಾಧನೆಯ ।
ಬಿಲ್ಲ ಸಾಧನೆ ಹರಿಗೆಯ ಸಾಧನೆಗಳ
ಎಲ್ಲ ಸಾಧನೆಗಳ ತೋರಿ ॥೪೦॥

ಒದಗಿದ ಬತ್ತಿಸಾಯುಧಗಳ ಸಾಧನೆ
ಮುದದಿ ಚೆನ್ನಗರಾಮ ಕಲಿತ ।
ಚೆದುರತನದಲೋದ ಕಲಿಸುತ ರಾಮಗೆ
ಮದನ ಸನ್ನಿಭಗೆ ಬುದ್ಧಿಯನೆ ॥೪೧॥

ಕಂದರ್ಪರೂಪ ರಾಮಯ್ಯನಿಂತೊಪ್ಪಿರೆ
ತಂದೆ ಕಂಪಿಲ ತನ್ನ ಮನದಿ ।
ಚಂದ ಚಂದದ ಬೇಂಟೆ ಒಡೆಯ ಮನ್ನೆಯರೆಲ್ಲ
ಅಂದು ಮಾನ್ಯರ ಕರೆಸಿದನು ॥೪೨॥

ಒಡೆಯ ಕಂಪಿಲರಾಯ ಬೇಟೆಯ ಹೊರಟರೆ
ಎಡದೆರವಿಲ್ಲ ಪರಿವಾರ ।
ಕಡುಗಲಿ ಬೈಚಪ್ಪ ಒಡೆಯ ಮುನ್ನೆಯರೆಲ್ಲ
ನಡೆಯೇ ರಾಮಯ್ಯ ನಡೆಬಲದಿ ॥೪೩॥

ಹಿಡಿವ ಮೇಲಣ ಕೌಜೆ ಕೋಕ[ವ] ಕೊಂಚೆಯ
ಇಡುತ ಕೊಲ್ಲುವ ಬೇಟೆಯನು ।
ಹೊಡೆದ ಹೆಬ್ಬುಲಿ ಕೋಣ ಕರಡಿ ಸಾರಂಗವು
ಕೆಡವುತ ಬರುತಲೈದಿದರು ॥೪೪॥

ದೆಸೆದೆಸೆಯಲಿ ಮೃಗಗಳ ಕೊಲ್ಲುತ ಬರೆ
ಅಸಮಾನ ಗಿರಿಗಹ್ವರದಲಿ ।
ಹೊಸಮಲೆದುರ್ಗಕೆ ತಿರುಗಿದರಾಕ್ಷಣ
ಕುಶಲ ಕಂಪಿಲರಾಯ ತೆರಳೆ ॥೪೫॥

ಹೊಕ್ಕನು ಹೊಸಮಲೆದುರ್ಗವ ಕಂಪಿಲ
ಇಕ್ಕೆಲದಲ್ಲಿ ಬೇಂಟೆಯನು ।
ಗಕ್ಕನೆ ಮೊಲಕೆ ನಾಯಿಗಳನು ಬಿಟ್ಟನು
ಅಕ್ಕರಿಂದಲಿ ಬೆನ್ನಟ್ಟಿದನು ॥೪೬॥

ತಿರುಗಿ ಮಾಯದ ಮೊಲ ನಾಯಿಯ ಅಟ್ಟಲು
ಭರದಿ ರಾಯನು ಬೆರಗಾದ ।
ಕರೆದು ಮಂತ್ರಿಯ ಕೂಡೆ ವಿಸ್ತಾರವಾಗಿಯೆ
ಹರುಷದಿ ರಾಯ ಕೇಳಿದನು ॥೪೭॥

ಕೇಳಿ ಕಂಪಿಲ ತನ್ನ ಪಾಳೆಯ ಬಿಡಿಸಿದ
ಬಾಳ ಪರಿಯ ಗುಡಿ ಹೊಯಿಸಿ ।
ಮೇಳದಿ ಮಂತ್ರಿಯರ ಸಹಿತ ದುರ್ಗವ ನೋಡಿ
ವೀಳ್ಯಯವನುಯಿಟ್ಟು ನಡೆದ ॥೪೮॥

ಸುತ್ತ[ಲಿ] ಬಳಸಿ ನೋಡಿದರಾಗ ದುರ್ಗವ
ಕತ್ತಲೆಗಲ್ಲು ಕಣವಿಗಳು ।
ಎತ್ತನೋಡಿದರತ್ತ ಸರಿಗುಂಡುಗಳಿಂದ
ಚಿತ್ರದ ಹೊಸದುರ್ಗವೆಸೆಯೆ ॥೪೯॥

ಜರಿಗಲ್ಲು ಗವಿಗಳು ಹಿರಿಯ ಡೋಣಿಗಳಿಂದ
ತುರುಗಿದ ಕೊಳನ ಮೊತ್ತಗಳು ।
ಮೆರೆವ ಡೊಂಗರ ಆಶ್ಚರ್ಯದ ದುರ್ಗವ
ಅರಸು ಕಂಪಿಲ ನೋಡಿದನು ॥೫೦॥

ಹೊಗಬಾರದಂಥ ಗುಂಡುಗಳು ಗವಿಗಳು
ಅಗಣಿತ ಜಂಗೆಗಲ್ಲುಗಳು ।
ಬಗೆಬಗೆ ರಾಯರಿಗಳವಲ್ಲ ದುರ್ಗವ
ನೀಗ ಕಂಪಿಲನು ನೋಡಿದನು ॥೫೧॥

ನೋಡಿ ಕಂಪಿಲರಾಯ ಹೊಸಮಲೆದುರ್ಗವ
ಕೂಡಿ ಮಂತ್ರಿಯೊಳು ಇಂತೆಂದ ।
[ದೌಡ] ಕರೆಸು ಕಾಮಾಟದವರನೆಂದು
ರೂಢೀಶ ಒಡೆಯ ಕಂಪಿಲನು ॥೫೨॥

ಕರೆಸಿ ಹನ್ನೆರಡು ಸಾವಿರ ಕಲ್ಲುಕುಟಿಗರ
ಸರಿಗುಂಡುಗಳನೊಡ ಹೊಯಿದು ।
ತರತರದಲಿ ಸೀಳುಗಲ್ಲು ಕೋಂಟೆಯನಿಕ್ಕಿ
ಪರಿಪರಿ ಭಾರಿ ಕೊತ್ತಳವ ॥೫೩॥

ಅಗಳು ಪಾತಾಳ ಕೊಳ್ಳವ ಮಾಡಿ ಗ್ರಾಮವ
ಬಗೆ ಬಗೆ ಹುಲಿಮುಖ ರಚಿಸಿ ।
ಮಿಗಿಲಟ್ಟಳ ಅಂಬುಗಂಡಿ ಆಳ್ವೇರಿಂದ
ಹೊಗಬಾರದಲ್ಲಿ ನೋಡಿದರೆ ॥೫೪॥

ಮತ್ತೇಭರಾಯರ ಕಂಠೀರ[ವೆಂ]ದೆಂಬ
ಸುತ್ತ ಸುತ್ತಲಿ ಹುಲಿಮುಖವು।
ಒತ್ತಿಲಿ ದ್ವಾರವಟ್ಟಗಳ ಅಗುಸೆಗಳಿಂದ
ಚಿತ್ರದುಪ್ಪರಿಗೆಗಳಲ್ಲಿ ॥೫೫॥

ಮೊತ್ತ ಮೊತ್ತದಿ ಶೃಂಗರಿದ ಬೀದಿಯು
ಎತ್ತನೋಡಲು ಅರಮನೆಯು ।
ನೆಟ್ಟನೆ ಚಿನಿವಾಲರುಗಳಂಗಡಿಯಿಂ
ಪಟ್ಟಣ ಇಂತೊಪ್ಪುತಿಹುದು ॥೫೬॥

ಒಪ್ಪುವ ಬಿಳಿಯೆಲೆ ಹೋಳಿನಂಗಡಿಗಳು
ಇಪ್ಪವು ಎಲ್ಲಿನೋಡಿದರೆ ।
ಒಪ್ಪುವ ಅಕ್ಕಿ ಕ[ಳ]ವೆ ಗೋದಿಯಂಗಡಿ
ಲೆಕ್ಕವಿಲ್ಲದ ಸರಕುಗಳು ॥೫೭॥

ಸಕ್ಕರೆ ಎಣ್ಣೆ ತುಪ್ಪದ ಅಂಡಿಗಳಲ್ಲಿ
ಕಿಕ್ಕಿರಿದವು ದುರ್ಗದೊಳಗೆ ।
ಬುಕ್ಕಿಟ್ಟು ಪುಣುಗು ಜವ್ವಾದಿಗಳಿಂದಲಿ
ಲೆಕ್ಕವಿಲ್ಲದೆ ಇಹುದಲ್ಲಿ ॥೫೮॥

ಎಸೆವ ಸೂಳೆರ ಕೇರಿ ಹೊಸಪರಿ ಸಂಭ್ರಮ
ಮಿಸುನಿಗೆಲಸದುಪ್ಪರಿಗೆ ।
ಬಿಸಜಗಂಧಿನಿಯರು ಒಪ್ಪುತಿಹರು ಅಲ್ಲಿ
ಕುಶಲ ವಿಟರ ಕೂಡಿಕೊಳುತ ॥೫೯॥

ಸೆಟ್ಟಿ ಪಟ್ಟಣಸ್ವಾಮಿ ಸೌದರಿ ಮೊದಲಾದ
ನೆಟ್ಟನೆ ಮಿಂಡಗುದ್ದಲಿಯು ।
ದಿಟ್ಟನಲ್ಲಿಗೆ ಛಲವಾದಿಯು ಮೊದಲಾದ
ಕಟ್ಟಾಳು ಕೇರಿ ಕೇರಿಯಲಿ ॥೬೦॥

ಕಡೆಯಿಲ್ಲ ಲೆಕ್ಕವಿಲ್ಲವು ಸೂಳೆಗೇರಿಯು
ಸಡಗರನಾರು ಬಣ್ಣಿಪರು ।
ನುಡಿವರೆನ್ನಳವಲ್ಲ ಮಿಕ್ಕ ಕೇರಿಗಳನು
ಎಡದೆರಪಿಲ್ಲ ನೋಡಿದರೆ ॥೬೧॥

ಎಲ್ಲಿ ನೋಡಿದಡಲ್ಲಿ ಶೃಂಗಾರ ಕೇರಿಯು
ಅಲ್ಲಿ ನೋಡಲು ಭಾಗ್ಯವೆಸೆಯೆ ।
ಒಲ್ಲರು ಪರಧನ ಪರಸತಿಗಳನು
ಬಲ್ಲಿದರಿದ್ದರಾ ಸ್ಥಳದಿ ॥೬೨॥

ಶೃಂಗಾರ ಕೇರಿ ಕೇರಿಗಳೆಸೆದಿಹವಲ್ಲಿ
ಕಂಗಳ ಹಬ್ಬ ನೋಡಿದರೆ ।
ಅಂಗಜ ಸಮರೂಪ ಕಂಪಿಲನರಮನೆ
ಮಂಗಳುತ್ಸವ [ವ]ನೇನೆಂಬೆ ॥೬೩॥

ಸುತ್ತ ಗಗನವನಂಡಲೆವ [ಮ]ಗಿಲುಗಳಿಂದ
ಚಿತ್ರಗೆಲಸದ ದಿವಾಣ ।
ಒತ್ತಿಲಿ ಮೆರೆವ ಮಾರ್ನೌಮಿ ಚಾವಡಿ
ಅರ್ತಿಯಿಂದಲಿ ಕಟ್ಟಿಸಿದ ॥೬೪॥

ಎಸೆಯ ಚಾವಡಿಗೊಪ್ಪುವ ಹೊನ್ನಕಳಸವು
ಹೊಸ ಬೊಂಬೆಗಳ ಸಾಲ್ಗಳೆಸೆಯೆ ।
ವಸುಧೆಗೆ ಹೊಸಪರಿಯೆನಿಸುವ ಚಾವಡಿ
ಕುಶಲಗೆಲಸದ ಲೋವೆಗಳು ॥೬೫॥

ಮುತ್ತಿನ ಚಾವಡಿ ಮುಂದೆ ಬಾಚಾರವು
ಮತ್ತೆ ಮಾನ್ಯರ ಸಾಲ್ಗಳೆಸೆಯೆ ।
ಉತ್ತಮ ಬೊಕ್ಕಸ ಭಂಡಾರದರಮನೆ
ಅರ್ತಿಯರೇನ ಬಣ್ಣಿಸುವೆ ॥೬೬॥

ಪಚ್ಚದ ಚಾವಡಿಗೊಪ್ಪುವ ಕಂಬವು
ಹೆಚ್ಚಿನ ಚಿನ್ನ ತೊಡವುಗಳು ।
ಆಶ್ಚರ್ಯವಾದರಮನೆಗಳ ಕಟ್ಟಿಸಿ
ಉತ್ಸಾಹದಿಂದ ಕಂಪಿಲನು ॥೬೭॥

ನವರಂಗಭಿತ್ತಿಗೆ ನವರತ್ನ ತೆತ್ತಿದ
ನವರತ್ನ ಸೊಬಗಿಲೊಪ್ಪುತಲಿ ।
ನವರತ್ನ ಕಳೆಯ ಒಪ್ಪುವ ರಾಣಿವಾಸಕೆ
ನವವುಪ್ಪರಿಗೆಯ ಕಟ್ಟಿಸಿದ ॥೬೮॥

ಎತ್ತನೋಡಲು ನವರತ್ನದುಪ್ಪರಿಗೆಯು
ಚಿತ್ರದ ತೋರಣಂಗಳಲಿ ।
ಒತ್ತಿಲಿ ಸೆಜ್ಜೆ ಮಾಣಿಕದ ಮದನಕ್ಕೆ
ತೆತ್ತಿಸಿ ಶೃಂಗರಿಸಿಹವು ॥೬೯॥

ಬಾಲೆಯರಿಗೆ ಬಟ್ಟಕುಚದ ನಾರಿಯರಿಗೆ
ಸಾಲುಸಾಲಿಗೆ ಕರುಮಾಡ ।
ಮೇಲೊಪ್ಪುತಿರೆ ಹೊಂಗಳಸದ ಗೋಪುರ
ಲೋಲ ಕಂಪಿಲನು ಕಟ್ಟಿಸಿದ ॥೭೦॥

ಕಂತು ಸನ್ನಿಭ ರಾಮಯ್ಯನ ಅರಮನೆ
ಇಂತು ಹಿರಿಯ ಮಕ್ಕಳಿಗೆ ।
ಪಂತದ ಅರಮನೆಗಳ ಕಟ್ಟಿ ಕಂಪಿಲ
ಮಂತ್ರಿ ಮಾನ್ಯರುಗಳಿಕ್ಕೆಲದಿ ॥೭೧॥

ಪಟ್ಟದ ಮನೆಗಳ ಕಟ್ಟಿಸಿದನು ಬೇಗ
ನಿಷ್ಠುಳ್ಳ ಕಂಪಿಲರಾಯ ।
ನೆಟ್ಟನೆ ರಾಣಿವಾಸವ ಕೊಂಡು ಬಾರೆಂದು
ದಿಟ್ಟ ಮಂತ್ರಿಯ ಕಳುಹಿದನು ॥೭೨॥

ಮಂದಿ ಕುದುರೆ ಸಹವಾಗಿ ಪ್ರಧಾನನು
ನಿಂದು ರಾಯನಿಗೆ ವಂದಿಸುತ ।
ಬಂದು ಹೊಕ್ಕನು ರಾಯದುರ್ಗವನಾಕ್ಷಣ
ನಿಂದು ದಾದಿಯ ಕರೆಸಿದನು ॥೭೩॥

ಪಲ್ಲಕ್ಕಿ ದಂಡಿಗೆ ಭಂಡಾರ ಬೊಕ್ಕಸ
ಎಲ್ಲ ರಾಣಿಯರು ಸಹವಾಗಿ ।
ಬಲ್ಲಿದ ಕಂಪಿಲ ನಿಲ್ಲದೆ ಕಳುಹಿದ
ಎಲ್ಲರು ಪಯಣವಾಗೆಂದ ॥೭೪॥

ಪನ್ನಂಗ ಕಟ್ಟಿಸಿ ರಾಣಿವಾಸಕೆಯೆಲ್ಲ
ಚೆನ್ನ ಬೈಚಪ್ಪನಾಯಕನು ।
ತನ್ನ ಕುರುಹಿನ ಮುದ್ರಿಕೆಯಿಟ್ಟ ಆಕ್ಷಣ
ರನ್ನದ ಪಲ್ಲಕ್ಕಿಗಳಿಗೆ ॥೭೫॥

ಭಂಡಾರ ಬೊಕ್ಕಸ ಹೇರಿಸಿಕೊಂಡಾಗ
ತಂಡತಂಡದೆ ಗಜ ನಡೆಯೆ ।
ಮಂಡಲಪತಿ ಚಿಕ್ಕ ಕುವರರುಗಳ ಆಗ
ಗಂಡುಳ್ಳ ದುರ್ಗದೊಳಿರಿಸಿ ॥೭೬॥

ಕದಲಿದ ಸರ್ವ ಸಂಪತ್ತಿನಿಂದಲಿ ಮಂತ್ರಿ
ಮದನಸನ್ನಿಭ ರಾಮ ಸಹಿತ ।
ಮುದದಿಂದ ಪಯಣಗತಿಯ ನಡೆದು ಪೊಕ್ಕರು
ಕದನಕಂಕುಶ ಹೊಸಮಲೆಗೆ ॥೭೭॥

ಸಂಭ್ರಮದಿಂದ ಮಂತ್ರೀಶ ದುರ್ಗವ ಹೊಕ್ಕ
ಅಂಬುಜಸಖ ಕಡೆಗಂಡ ।
ತುಂಬಿತು ಪೊಡವಿಯೆಲ್ಲವು ತಿಂಥಿಣಿಯಾಗಿ
ಶಂಭು ಸಂಭ್ರಮಿಸಲವನಿಗೆ ॥೭೮॥

ಕರ್ಪುರಗಂಧಿನಿಯರು ಬಂದು ಹೊಕ್ಕರು
ಉಪ್ಪರಿಗರಮನೆಗಳನು ।
ಒಪ್ಪುವ ಭಂಡಾರಗಳ ತರಿಸಿದನಾಗ
ಒಪ್ಪಿದ ಸುಖದಿ ಕಂಪಿಲನು ॥೭೯॥

ಉತ್ತಮ ತರುಣಿ ದೇಶವ ನೋಡ ಬಂದಂತೆ
ಮೊತ್ತದ ಫೌಜುಗಳೆಸೆಯೆ ।
ಮುತ್ತಿನ ಗದ್ದಿಗೆ ಸಿಂಹಾಸನದೊಳಾಗ
ಚಿತ್ರದ ಚಾವಡಿಯೊಳಗೆ ॥೮೦॥

ಚೆನ್ನ ಕಂಪಿಲರಾಯನೋಲಗಕೆ ನಡೆತಂದು
ಉನ್ನತ ಸ್ಥಾನದೊಳ್ಕುಳಿತ ।
ಮನ್ನೆಯ ಮಂಡಲಿಕರು ಸಹ ಕುಳಿತರು
ಮನ್ನಣೆ ಮಂತ್ರೀಶ ಬಂದ ॥೮೧॥

ಎಡವಂಕ ಬಲವಂಕ ನಾಯಕರೈತಂದು
ನಡೆದರು ತುಳುವ ನಾಯಕರು ।
ಸಡಗರದಲಿ ಬರೆ ರಾವುತರೆಲ್ಲರು
ಒಡೆಯ ಕಂಪಿಲನ ಓಲಗಕೆ ॥೮೨॥

ಹಿರಿಯ ಕುಮಾರನು ಬಂದು ವಂದಿಸಿದರು
ಕರಗಳ ಮುಗಿದು ಕಂಪಿಲಗೆ ।
ಮೆರೆವ ಎಪ್ಪತ್ತೇಳು ಮಾನ್ಯರು ಸಹವಾಗಿ
ಅರಸು ರಾಮಯ್ಯ ನಡೆತಂದ ॥೮೩॥

ತಂದೆಗೆ ವಂದಿಸಿ ನಿಂದನು ರಾಮಯ್ಯ
ಅಂದು ಮಂತ್ರಿಯೊಳು ಕಂಪಿಲನು ।
ಒಂದೊಂದು ಪರಿಯ ದಾಳಿಯನಿಟ್ಟು ದುರ್ಗವ
ಚಂದ ಚಂದದಿ ಸಾಧಿಸೆಂದ ॥೮೪॥

ದಿಕ್ಕುದಿಕ್ಕುಗಳ ದುರ್ಗದ ಮೇಲೆ ಕದನವ
ಅಕ್ಕರಿಂದಲಿ ರಾಯ ಬೆಸಸೆ ।
ಇಕ್ಕೆಲದಲಿ ಮಂದಿಯ ಕೊಡೆ ನಡೆದನು
ಸಕ್ಕರೆವಿಲ್ಲ ಸಮಾನ ॥೮೫॥

ತರಣಿಯ ಉದ[ಯ]ಕ್ಕೆ ತುರುಗಮಂದಿಯು ಕೂಡಿ
ಕರಿಘಟೆ ಐನೂರು ಸಹಿತ ।
ಅರಸು ಮನ್ನೆಯರು ಮಂಡಲಿಕರು ಸಹವಾಗಿ
ಕರ ಬೇಗದಲಿ ಕೂಡಿಕೊಂಡು ॥೮೬॥

ಧುರಧೀರ ಮಂತ್ರಿ ಬೈಚಪ್ಪ ದಾಳಿಯನಿಟ್ಟು
ತೊರಗಲ್ಲು ಬಾದವಿತನಕ ।
ಭರದಿಂದ ದುರ್ಗಕ್ಕೆ ಮುತ್ತಿಗೆ ಮಾಡಲು
ಇರದೆ ಕಂಡನು ಬಾಚಿನಾಯಕ ॥೮೭॥

ಗಂಡುಗಲಿಯು ಬೈಚಪ್ಪನ ದಳಗೂಡಿ
ದಂಡನು ಇರದೆ ಸಾಗಿಸಿದ ।
ಖಂಡೆಯ ಪಿಡಿದಿದಿರಾದರ ಕಡಿವುತ
ಮಂಡಲಗಳನು ಸಾಧಿಸುತ ॥೮೮॥

ಕಟ್ಟಣಿಲ್ಲದ ಕೊಟ್ಟಕೊಟ್ಟದ ಮಾನ್ಯರು
ಮುಟ್ಟಿ ಹಿಡಿದರು ಕೈಸೆರೆಯ ।
ದಿಟ್ಟ ಮನ್ನೆಯರಲ್ಲಿಗಲ್ಲಿಗೆ ಠಾಣ್ಯವ
ಕಟ್ಟಿಕೊಳುತ ಮುಂದೆ ನಡೆಯೆ ॥೮೯॥

ದಾಳಿಯ ಮಾಡುತ ಸೆರೆಸೂರೆ ಹಿಡಿಯೂತ
ಬಳ್ಳಾಪುರಿಯ ದೇಶಗಳನು ।
ಕೋಳಾಹಳವ ಮಾಡಿ ಪಾನುಗಲ್ಲನು ಕೊಂಡು
ಪಾಳೆಯನಾಗ ಸಾಧಿಸುತ ॥೯೦॥

ಇದಿರಾಗಿ ನಿಂದು ಕಾದುವರಾಯರಿಲ್ಲದೆ
ಕದನಗಲಿಯು ಕಂಪಿಲಗೆ ।
ಸದೆದನು ದೇಶದೇಶವ ಕಪ್ಪುವಕೊಂಡು
ಮುದದಿಂದ ತಿರುಗಿದ ಮಂತ್ರಿ ॥೯೧॥

ಕಂದನವಳಿಯಲ್ಲಿ ಹೊಸ ಠಾಣೆ [ಹಾ]ಕಿಯೇ
ಬಂದನು ಪೆನುಗೊಂಡೆತನಕ ।
ನಿಂದು ದುರ್ಗವನಾಗ ಬಿಡದೆ ಠಾಣ್ಯವನಿಕ್ಕಿ
ಚಂದದಿ [ಗು]ಡಿಕೋಟೆಯನು ॥೯೨॥

ಅಂದು ಠಾಣ್ಯವನಿಕ್ಕಿ ನಡೆಸಿದ ದಂಡನು
ಮುಂದೆ ಗುತ್ತಿಯನಾಡ ಸುಡುತ ।
ಬಂದು ಬಿಟ್ಟನು ನಿಡುಗಲ್ಲ ದುರ್ಗವನಾಗ
ಚಂದದಿ ಬೈಚಪ್ಪ ಮಂತ್ರಿ ॥೯೩॥

ಬಿಡದೆ ಕಪ್ಪವಕೊಂಡು ಒಡನೆ ಮದುರೆಗೆ ಬಂದು
ಹಿಡಿದರು ಸೆರೆಸೂರೆನಾಗ ।
ತಡೆಯದೆ ಕಪ್ಪವ ಕೊಂಡು ಕಂಚಿಗೆ ಬಂದು
ನಡಸಿ ಸಂಧಾನ ಮಾಡಿದರು ॥೯೪॥

ಒಡನೆ ತೆಂಕಲ ಮಾನ್ಯರು ಕಾಣಿಸಿಕೊಂಡು
ಬಿಡದೆ ಕಪ್ಪವ ತೆತ್ತಗಾರ ।
ನಡೆದರು ಮದುರೆಯ ದೇಶವ ತೆಕ್ಕೊಂಡು
ತಡೆಯದೆ ಬಾಗೂರ ಬಳಿಗೆ ॥೯೫॥

ಕಪ್ಪವ ತರಿಸಿಕೊಂಡನು ದೇಶವನೆಲ್ಲ
ಒಪ್ಪುವ ಬೈಚಪ್ಪ ಮಂತ್ರಿ ।
ತಪ್ಪದೆ ಉಚ್ಚಂಗಿದುರ್ಗವ ಸಾಧಿಸಿ
ಅಪ್ರತಿಮನು ದಂಡ ನಡೆಸಿ ॥೯೬॥

ಹರಿಹರ [ಹಾನ್ಗ]ಲ್ಲು ಚಂದ್ರಗುತ್ತಿಯನಾಗ
ಉರುತರ ಬೆಳಗಲ್ಲು ನಾಡ ।
ಭರದಿಂದ ಠಾಣ್ಯವನಿಕ್ಕಿ ತಿರುಗಿದನಾಗ
ಧುರಧೀರ ಬೈಚಪ್ಪ ಮಂತ್ರಿ ॥೯೭॥

ಅಪ್ಪದಿಕ್ಕಿನ ಮಾನ್ಯರ ಕಾಣಿಸಿಕೊಂಡು
ಕಟ್ಟಣಿಲ್ಲದ ಕಪ್ಪುಗಳನು ।
ಕೊಟ್ಟಿಗೆ ಆನೆ ಒಂಟಿಯಲಿ ಹೇರಿಸಿಕೊಂಡು
ದಿಟ್ಟ ಬೇಗದಿ ತಿರುಗಿದನು ॥೯೮॥

ಉತ್ತಮ ತೇಜಿಗಳರುವತ್ತು ಸಾವಿರ
ಮತ್ತೆ ಕಾಲಾಳಾರು ಲಕ್ಷ ।
ಮೊತ್ತದ ಕರಿಘಟೆ ಏಳ್ನೂರು ಸಹವಾಗಿ
ಅರ್ತಿಲಿ ಮಂತ್ರಿ ತಿರುಗಿದನು ॥೯೯॥

ವಸುಧೆಗುಬ್ಬಸವಾಗಿ ವಾದ್ಯ ಕಾಳೆಯ ಸಾಲು
ದೆಸೆದೆಸೆ ಮಾನ್ಯರು ಸಹಿತ ।
ಹೊಸಮಲೆದುರ್ಗ ವೈಹಾಳಿಯ ಬಯಲಿಗೆ
ಕುಶಲ ಮಂತ್ರಿಯು ದಂಡಬಿಟ್ಟ ॥೧೦೦॥

ಹರಿಗೆಯ ಕಾಲಾಳು ಧುರಧೀರ ಮಾನ್ಯರು
ಕರ ಬೇಗದಲಿ ರಾಯ ಬಂದು ।
ತರತರದಲ್ಲಿಹ ದೊರೆ ಮಾನ್ಯರೊಡಗೊಂಡು
ಹರುಷದಿ ಮಂದಿ ಮಾರ್ಬಲದಿ ॥೧೦೧॥

ವಂದನೆ ಮಾಡಿ ಮಂತ್ರೀಶ ಮನ್ನೆರನೆಲ್ಲ
ಚಂದ ಚಂದದಲಿ ಕಾಣಿಸಿದ ।
ತಂದ ಕಪ್ಪವ ಆನೆ ಕುದುರೆ ವಸ್ತುಗಳನು
ಒಂದೊಂದು ಪರಿಯಲೊಪ್ಪಿಸಿದ ॥೧೦೨॥

ಕಡಗ ಕಂಠಮಾಲೆ ತೊಡಿಗೆ ಮುತ್ತಿನ ಹಾರ
ಒಡನೆ ಮಂತ್ರಿಗೆ ರಾಯನಿತ್ತ ।
ತಡೆಯದೆ ನಡೆತಂದು ಪಟ್ಟಣವನು ಪೊಕ್ಕ
ಸಡಗರ ಸಂಧಿ ಮೂರಾಯ್ತು ॥೧೦೩॥

ಅಂತು ಸಂಧಿ ೩ಕ್ಕಂ ಪದನು ೩೦೪ಕ್ಕಂ ಮಹಾಶ್ರೀ

❖❖

ಸಂಧಿ : ೪

❖

ಗುತ್ತಿಯ ಜಗದಪ್ಪನೊಡನೆ ಯುದ್ಧ

ಪುಂಡರೀಕನ ಚರ್ಮವನುಟ್ಟ ಶಶಿಧರ
ಪುಂಡರೀಕನೊಲೆಸೆದಿಹನೆ ।
ಪುಂಡರೀಕನ ಪೂಜೆಗೊಲಿದ ಜಟ್ಟಂಗೀಶ ಅ
ಖಂಡಿತ ಮಹಿಮ ಪಾಲಿಪುದು ॥೧॥

ಚಿನ್ನದ ಹಲಗೆ ರನ್ನದ ಗದ್ದುಗೆಯೇರಿ
ಉನ್ನತವಪ್ಪ ಲೆಕ್ಕಣಿಯ ।
ಉನ್ನತ ಮೂರ್ತಿಯೆ ಒಲಿದು ಪಾಲಿಸುಯೆನ್ನ
ರನ್ನೆ ಶಾರದೆ ದೇಶಿಗೊಲಿದು ॥೨॥

ಮುತ್ತಿನ ಮುಡಿಯ ಸೂಸಕ ದಂಡೆ ಭುಜಕೀರ್ತಿ
ಹಸ್ತಕಡಗ ಮುತ್ತಿನೋಲೆ ।
[ಬಿ]ತ್ತರದಲಿ ಮುದ್ದು ನುಡಿಯಿಂದ ಸರಸ್ವತಿ
ಉತ್ತಮ ಎಪ್ಪತ್ತು ರಾಜನ ಬೊಲ್ಲನ
ಚಿತ್ರದಿ ತಹುದನು ಕೇಳಿ ॥೪॥

ಧರೆಯನಾಳುವರ ರಾಯರೊಳು ಕಾಣಿಕೆಗೊಂಡು
ನೆರೆಗಲಿ ಕಂಪಿಲರಾಯ ।
ಹರುಷದಿ ವಾಲಗವಿತ್ತ ಸಮಯದಲ್ಲಿ
ಭರದಿ ಬಂದರು ಗುತ್ತಿಯವರು ॥೫॥

ಬಂದು ವಂದನೆಮಾಡಿ ಜಗತಾಪಿ ಕಳುಹಿದ
ಚಂದ ಚಂದದ ಸ್ಥಾನಪತಿಯು ।
ನಿಂದು ವಂದನೆಮಾಡಿ ದೇಶ ಸರಿದೊರೆ
ಒಂದೊಂದು ಪರಿಯ ಹೇಳಿದರು. ॥೬॥

ನುಡಿಗಳ ಕೇಳುತ ಮಂತ್ರಿಯು ಸುಳ್ಳೆಂದು
ಪೊಡವಿಯ ಮನ್ನೆಯರೆಲ್ಲ ।
ಅಡಿಗೆ ವಂದನೆಮಾಡಿ ಕಂಪಿಲರಾಯಗೆ
ಪಿಡಿದರು ಕಾಳಂಜಿಗಳನು ॥೭॥

ಇಂತು ಮನ್ನೆಯರೆಲ್ಲ ಈ ಪರಿಯಾಗಿರೆ
ಮುಂತೆ ನಿಮ್ಮೊಡೆಯ ದೊಡ್ಡಿದನೆ ।
ಪಂತವ ಬಿಟ್ಟು ನಿಮ್ಮೊಡೆಯನ ಇರುಯೆಂದು
ಸಂತೋಷದಲಿ ಪೇಳಿದನು ॥೮॥

ಜಗತಾಪಿ ಮನ್ನೇರು ಮಿಗಿಲಾದ ಕ್ಷತ್ರಿಯರು
ವಿಗಡರೂಪಿನ ರಾಯರಿಗೆ ।
ಮುಗಿಯರು ಕೈಗಳ ತರ್ಕೈಸಿಕೊಂಬರು
ಬಗೆಯರು ಮಿಕ್ಕಿನ ನರರ ॥೯॥

ಗದ್ದುಗೆಯನು ಹೊಯಿದೆದ್ದನು ಪ್ರಧಾನ
ಅದ್ದಲಿಸಿದ ಸ್ಥಾನಪತಿಯ ।
ಗುದ್ದಿಸಿ ಕೊರಳ ಹಿಡಿದು ನೂಕುನೂಕೆಂದು
ರುದ್ರಕೋಪವ ತಾಳಿ [ಕಳುಹೆ] ॥೧೦॥

ಬಡವರ ಕೈಯ ನಿಧಾನವ ಸೆಳೆದಂತೆ
ಉಡುಪನ ರಾಹುಕೊಂಡಂತೆ ।
ತಡೆಯದೆ ಬಂದು ತಮ್ಮೊಡೆಯನ ಕಂಡರು
ದೃಢಗೆಟ್ಟು ಕಡು ಚಿಂತೆವೆರಸಿ ॥೧೧॥

ಯಾತಕ್ಕೆ ಬಹುಚಿಂತೆ ಮಾತಾಡಲೊಲ್ಲಿರಿ
ಭೀತಿಯ ಬಿಟ್ಟು ಬಿನ್ನೈಸಿ ।
ಭೂತಳಪತಿ ಕೇಳು ಪೇಳುವುದಿನ್ನೇನು
ನೀತಿಗೆಟ್ಟನು ಕಂಪಿಲನು ॥೧೨॥

ಒಂದೊಂದು ಪರಿಯಲ್ಲಿ ನಿಮ್ಮನು ಜರಿದನು
ಬಂದು ವಾಲೈಸ ಹೇಳಿದನು ।
ವಂದನೆಮಾಡಿ ಕಪ್ಪವ ತೆತ್ತು ಬದುಕೆಂದು
ಕುಂದ ನುಡಿದನು ಕಂಪಿಲನು ॥೧೩॥

ಶರಣುಮಾಡೆನು ಹರಿಯಜ ಮೊದಲಾದರ್ಗೆ
ನರರ ಲೆಕ್ಕಿಪೆನೆ ಎಂದೆ [ನುತ] ।
ಭರದಿ ಕೊರಳಹಿಡಿದು ನೂಕಿ ಗುದ್ದಿಸಿದನು
[ತೆ]ರಳ ಪೇಳಿದವನನೊಡನೆ ॥೧೪॥

ಘುಡುಘುಡಿಸುತಲಿ ಕೋಪವ ತಾಳಿ ಜಗತಾಪಿ
ಬಿಡ ಹೇಳೊ ಹೊರಗೆ ದಂಡವನ ।
ನಡೆದು ಕಂಪಿಲನ ದೇಶವ ಕೊಂಡು ದುರ್ಗವ
ಸುಡವೆನು ತಡವ್ಯಾಕೆಯೆಂದ ॥೧೫॥

ಕಕ್ಕಸ ಬೊಲ್ಲನ ಏರಿದ ಜಗತಾಪಿ
ಇಕ್ಕೆಲದಲ್ಲಿ ಮನ್ನೆಯರು ।
ಮಿಕ್ಕ ತುರಗ ಕಾಲಾಳೊಂದು ಲಕ್ಷವು
ಹೊಕ್ಕರು ರಾಮನ ನಾಡ ॥೧೬॥

ಊರೂರು ತಪ್ಪದೆ ಸೆರೆ ಸೂರೆವಿಡಿದನು
ದಾರೆಂದು ಕಂಪಿಲನೊಡನೆ ।
ಆರಾರ ಕೂಡಲಿ ಪಂತದ ನುಡಿಗಳು
ಹಾರಿಸುವೆನು ಕೆಣಕಿದರೆ ॥೧೭॥

ಅನ್ಯೋನ್ಯವಾಗಿ ನಾಡಿನ ಪ್ರಜೆಗಳು [ಬರೆ]
ಮನ್ನೆಯ ರಾಯನಿದ್ದೆಡೆಗೆ ।
ಮಾನ್ಯ ಕಂಪಿಲರಾಯನು ಕೇಳಿ ಉರಿದೆದ್ದು
ತನ್ನ ಎಕ್ಕಟಿಗರ ಕರೆಸಿ ॥೧೮॥

ಹುಟ್ಟಿದ ಹನ್ನೆರಡು ವರುಷಕ್ಕೆ ರಾಮನು
ದಿಟ್ಟ ಕುಮಾರದಲ್ಲಣನು ।
ನೆಟ್ಟನೆ ತನ್ನಯ ಬಾಲಕರೊಡಗೂಡಿ
ಕಟ್ಟಾಳು ಕದನಕ್ಕೆ ನಡೆದ ॥೧೯॥

ನೋಡಿ ಕಂಡನು ಕಂಪಿಲರಾಯ ರಾಮನ
ಬೇಡವೊ ಬಾಲ ಕಾಳಗಕೆ ।
ಬೇಡಿಕೊಂಬೆನು ನಿನ್ನ ಮಗ ಕಂದ [ಇವೀಗ]
ಗಾಡನೆ ತಿರುಗು ರಾಮಯ್ಯ ॥೨೦॥

ನೋಡಲು ಬಾಲಕತನವು ನೀ ರಾಮಯ್ಯ
ಮಾಡೂದು ಸಾಧನೆಗಳನು ।
ಮೂಢತನವು ಬೇಟ ತಿರುಗೆಂದು ರಾಮಯಗೆ
ಬೇಡಿಕೊಂಡನು ಕಂಪಿಲನು ॥೨೧॥

ಚಿಕ್ಕವನರ್ಜುನ ದೇವಗೆ ಅಭಿಮನ್ಯ
ಲೆಕ್ಕವಿಲ್ಲದ ದಂಡು ಕೊಂದ ।
ಕಕ್ಕುಲಾತಿಯ ನುಡಿವರೆ ಬಾಲಕನೆಂದು
ಒಕ್ಕಲಿಕ್ಕುವೆ ವೈರಿಗಳನು ॥೨೨॥

ತರಳತನವು ಬ್ಯಾಡವೊ ಚೆನ್ನಿಗರಾಮ
ಧುರಕೆ ನಡೆವ ಪ್ರಾಯವಲ್ಲ ।
ಧರೆಯ ದೇವರನೆಲ್ಲ ಸ್ಮರಿಸಿ ಪೆತ್ತಳು ನಿನ್ನ
ಉರುತರ ಹರಿಯಲದೇವಿ ॥೨೩॥

ಹಿಂದಣ (ಕಥೆ)ಯ ತಂದೆ ಕಂಪಿಲ ಕೇಳು
ಅಂದು ಪರೀಕ್ಷಿತರಾಯ ।
ಮಂದಾಸನವ ಹೊಕ್ಕರೆ ವಿಧಿ ಬಿಟ್ಟಿತೆ
ಕೊಂದಲ್ಲದೆ ಬಿಡೆನೆಂದ ॥೨೪॥

ಮಗನ ನುಡಿಯ ಕೇಳಿ ಕಂಪಿಲರಾಯನು
ಅಗಣಿತ ಸಂತೋಷದಿಂದ ।
ಬಿಗಿದಪ್ಪಿ ಮುಂಡಾಡಿ ತೆಗೆದಪ್ಪಿ ರಾಯ
ಹೊಗಳಿದ ಮನಹರುಷದಲಿ ॥೨೫॥

ಎನಲಾಗ ತರಿಸಿದ ಮಂಗಳ ಬೊಲ್ಲನ
ಘನವದ ಪಲ್ಲಕ್ಕಿ ಸಹಿತ ।
ಕನಲಿ ಕೋಪವ ತಾಳಿ ಮನಸಿಜರೂಪನು
ವಿನಯದಿ ತೇಜಿಯೇರಿದನು ॥೨೬॥

ಉನ್ನತ ಬುದ್ಧಿಯ ನೆನೆದು ಕಂಪಿಲರಾಯ
ಹನ್ನೆರಡು ಸಾವಿರ ಪರಿವಾರ ।
ತನ್ನ ಮೋಹದ ಬಂಟರ ಒಪ್ಪಿಸಿ ಕೊಟ್ಟ
ಚೆನ್ನಿಗ ಚೆಲುವ ರಾಮನಿಗೆ ॥೨೭॥

ಕಡುಗಲಿ ರಾಮನನೊಡಗೊಂಡು ಕಂಪಿಲ
ಸಡಗರದಲಿ ತೆರಳಿದನು ।
ಒಡನೆ ಸಂಗಡದಲ್ಲಿ ಮಂತ್ರಿ ಮನ್ನೆಯರೆಲ್ಲ
ಪೊಡವಿ ಘೀಳಿಡಲು ಹೊರ ಹೊಂಟ ॥೨೮॥

ಜಗತಾಪಿ ದಾಳಿಟ್ಟು ಸೆರೆ [ಹಿ]ಡಿವುತಲಾಗ
ವಿಗಡ ಪ್ರಧಾನನು ಕೇಳಿ ।
ಸುಗುಣ ಕಂಪಿಲಗೆ ಬಿನ್ನಹವನು ಮಾಡಿದ
ಹೊಗಬಿಟ್ಟು ಹೊಯ್ಯಲಾಕ್ಷಣಕೆ ॥೨೯॥

ಕ್ಷೋಣಿ ಬಲವು ಜಗಳವ ಮಾಡುತಿರಲಾಗ
ಊನವಿಲ್ಲದೆ ಕ್ಷತ್ರಿಯರು ।
ಕಾಣುತ ಕಂಡತುಂಡವ ಮಾಡಿ ಕಡಿವುತ
ಬಾಣದ ಮಳೆಗರೆವುತಲಿ ॥೩೦॥

ಕತ್ತಲೆಗವಿದು ರಣದಲಿ ಕಡಿವುತ ಬರೆ
ಇತ್ತ ಕಂಪಿಲನವರು ಕಂಡು ।
ಮತ್ತೆ ಇರಿದು ಕ್ಷತ್ರಿಯರ ತಲೆಯ ಕೊಯಿದು
ಅತ್ತ ಹುಯ್ಯಲ [ಭಿ]ನ್ನಮಾಡೆ ॥೩೧॥

ಮುಂಗುಡಿ ಪರಿವಾರ ಮುರಿದು ಬರಲು ನೋಡಿ
ತುಂಗ ವಿಕ್ರಮ ಜಗತಾಪಿ ।
ಕಂಗೆಟ್ಟು ಮನ್ನೇರು ತಿರುಗಿಬಾಹುದ ಕಂಡು
ಸಂಗರಕಿದಿರಾಗಿ ನಡೆದ ॥೩೨॥

ನೆಗಳಿದ ಕೋಪದಿ ಜಗತಾಪಿ ನಡೆದನು
ನಿಗಳ ಉಚ್ಚಿದ ಗಜದಂತೆ ।
ಹೊಗಬಿಟ್ಟು ಕಡಿಯೆ ಕಂಪಿಲನ ಚೂಣಿಯ ದಂಡ
ಹಗರೆ ತನಕ ಮುರಿದೊಡೆ ॥೩೩॥

ಮುರಿದು ಕಂಪಿಲನ ಚೂಣಿಯ ದಂಡು ತನ್ನಯ
ಶಿರಗಳು ಬದುಕಿದವೆನುತ ।
ಭರದಿಂದ ಬಂದು ಹಿರಿಯ[ರು] ಕೂಡೆ ಬೇಗ
ಅರಸು ಕಂಪಿಲ ನೋಡಿ ಕಂಡ ॥೩೪॥

ಹುಸಿ ಹುಸಿ ಪರಿವಾರ ಮುರಿದು ಹೋದಿತುಯೆಂದು
ವಸುಧೀಶ ಕಂಪಿಲರಾಯ ।
ಅಸಮಾನ ಮಾನ್ಯರ ಬೆಸನಿತ್ತು ಕಳುಹಲು
ಕುಶಲದಿ ಪಟುಭಟರು ನಡೆಯೆ ॥೩೫॥

ಉಬ್ಬಿತು ಪರಿವಾರ ಬೊಬ್ಬೆಯ ಭರದಿಂದ
ಸಬ್ಬ ದಳವು ಕಡಿದಾಡೆ ।
ಅಬ್ಬರಿಸುತ ಸೇನೆ ರಣಭಯಂಕರದಿಂದ
ತಬ್ಬಿಬ್ಬುಗೊಳುತ ಜಗತಾಪಿ ॥೩೬॥

ಕ್ಷತ್ರಿಯ ಕುಲಕೆ ಬಲ್ಲಿದ ಜಗತಾಪಿಯು
ಒತ್ತಿದ ರಾಯನ ದಂಡ ।
ತತ್ತನೆ ತಂದು ಕುದುರೆ ಮಂದಿ ಮಾನ್ಯರ
ರಕ್ತದ ಕಾಲುವೆ ಹರಿಯೆ ॥೩೭॥

ದಿಟ್ಟ ರಾಮನು ಕಂಡು ಮುರಿದು ಬಹ ದಂಡ
ದಿಟ್ಟ ಅಣ್ಣನೊಳು ಇಂತೆಂದ ।
ಅಟ್ಟಾಡಿ ನಿಟ್ಟೆಲು ಮುರಿದು ಜಗತಾಪಿಯ
ಬೊಟ್ಟು ಕಚ್ಚಿಸಿ ಹಿಡಿತರುವೆ ॥೩೮॥

ಎಣಿಕೆ ಹನ್ನೆರಡುಸಾವಿರ ಪರಿವಾರವು
ಹೊಣಕೆಯಲಿರಿದು ಪರಿವಾರ ।
ತೃಣಕೆ ಲೆಕ್ಕಿಸದೆ ಎಪ್ಪತ್ತೇಳು ಬೋಳಕರು
ರಣಭಯಂಕರನೆಡಬಲದಿ ॥೩೯॥

ಮಂಗಳ ಬೊಲ್ಲನ ಏರಿ ರಾಮಯ್ಯನು
ಸಂಗರಕಿದಿರಾಗಿ ನಡೆದ ।
ಮುಂಗಾರಿ ಸಿಡಿಲಂದದಿ ಬಂದು ಎರಗಲು
ಕಂಗೆಟ್ಟರಾಗ ಅರಿಭಟರು ॥೪೦॥

ಕದಳಿಯ ಬನವನು ಮದಕರಿದುಳಿದಂತೆ
ಮುದದಿಂದ ಫೌಜು ಒಂದಾಗೆ ।
ಎದೆಗಳು ಹದಿನಾರು ಹೋಳಾಗಿ ನಿಂದರು
ಇದಿರಾಗಿ ನಿಲ್ಲದೋಡಿದರು ॥೪೧॥

ಅಟ್ಟಿದ ರಾಮಯ್ಯ ಕುಟ್ಟಿದ ಶಿರಗಳ
ಬಟ್ಟಿ, ಕಚ್ಚಿದರು ರಾಹುತರು ।
ದಿಟ್ಟಿಸಿ ಇದಿರಾಗಿ ನಿಲ್ಲದೋಡಿದರಾಗ
ರಟ್ಟುಡಿಯಾಯ್ತು ರಣದೊಳಗೆ ॥೪೨॥

ಕುಟ್ಟುತ ತಲೆಗಳ ತಟ್ಟನೆ ತರಿದೊಟ್ಟಿ
ಒಟ್ಟಿದ ಜಗಲಿ ಕಟ್ಟೆಯನು ।
ಅಟ್ಟಾಡಿ ಮಾನ್ಯರ ಕಡಿದು ಕೆಡವುತಲಾಗ
ಕಟ್ಟಿದ ಕುದುರೆ ಪಾಗದಲಿ ॥೪೩॥

ಕಂಡ ಕಡೆಗೆ ಮುರಿದೋಡುವ ಬಂಟರ
ಕಂಡು ರಾಮನ ಎಕ್ಕಡಿಗರು ।
ತುಂಡುಗಡಿದು ತಲೆಗಳ ಹೊಯ್ದು ಒಟ್ಟಲು
ದೊಂಡೆಗರುಳು ಸುರಿಸುರಿದು ॥೪೪॥

ಕಾಲಾಳ ಕಡಿಕಡಿದೊಟ್ಟಲು ತಲೆಗಳ
ಲೋಲ ರಾಮನ ಪಟುಭಟರು ।
ಬೀಳುತ ತಲೆಯ ಈಡಾಡುತ ಹೊಡೆದರು
ಲೋಲ ಭೂತವು ಹರಸುತಲಿ ॥೪೫॥

ಕಡುಗಲಿ ಕಾಟಣ್ಣ ನಡೆದನು ರಣದೊಳು
ಹೊಡೆದನು [ಅ]ರಿರಾಯ ಭಟರ ।
ಪೊಡವಿಯ ಭೂತ ಬೇತಾಳಿಗುಣಲಿಕ್ಕಿ
ಬಿಡದೆ ರಾಮಗೆ ನಿವಾಳಿಸಿದ ॥೪೬॥

ಖಂಡೆಯರಾಯ ಕಂಪಿಲ ನೋಡಿ ಕಂಡನು
ಲೆಂಡ ರಾಮನ ಕಾಳಗವ ।
ಮಂಡಲಿಕರ ಮಾನ್ಯಮಂತ್ರಿ ಕೊಮಾರರ
ತಂಡ ತಂಡದಿ ಕಳುಹಿದನು ॥೪೭॥

ಬೆರಸಿ ಅರಸುಗಳ ಮೇಲು ಹುಯ್ಯಲು ಬ[ರೆ]
ಕರ ಬೇಗ ಕದನ ಮಾಡುತಲಿ ।
ಧುರಧೀರ ಹಿರಿಯ ಕುಮಾರರು ರಣದೊಳು
ಪರಿದು ಕಡಿದು ಅರಿಭಟರ ॥೪೮॥

ಖಂಡ್ರಿಸಿ ಹರಿದ ಕಾಲಾಳ ರಾವುತರನು
ಖಂಡೆಯದಲಿ ರಾಮ ಕಡಿದ ।
[ಮುಂಡ] ಬೀಳಲು ರಕ್ತ ಬಿಸಿಯಾಗಿ ಸೋರಲು
ಉಂಡು ಭೂತಗಳು ಕುಣಿದಾಡೆ ॥೪೯॥

ಹಲವು ಫೌಜುಗಳನು ಕಡಿದನು ಜಗತಾಪಿ
ನೆಲ ಬಾಯಿದೆರೆಯದೆಂಬಂತೆ ।
ಬಲವೆಲ್ಲ ಕಂಗೆಟ್ಟು ಮುರಿದೋಡುತಿರಲಾಗ
ಚೆಲುವ ರಾಮನು ಬೆನ್ನಟ್ಟಿದನು ॥೫೦॥

ಕಟ್ಟಣಿಲ್ಲದೆ ಗಜತುರಗವ ಹಿಡಿದನು
ಮೆಟ್ಟಿ ತಲೆಗಳ ಚೆಂಡಾಡಿ ।
ಬಟ್ಟಬಯಲು ಮಾಡಿ ಜಗತಾಪಿ ಮಾನ್ಯರ
ಕಟ್ಟಿ ತಂದನು ಹೆಡಗುಡಿಯ ॥೫೧॥

ಒತ್ತಿದ ರಣದೊಳು ಹೊಡೆದಾಡಿದರಾಗಲು
ಮತ್ತೆ ರಾಮಯ್ಯನ ದಂಡು ।
ಉತ್ತಮ ಬಿರಿದಿನ ಮಾನ್ಯ ಎಕ್ಕಟಿಗರು
ಸತ್ವದಿ ತೇಜಿ ಹಿಡಿದರು ॥೫೨॥

ಒಂದು ನಿಮಿಷಕೆ ಹತ್ತು ಕುದುರೆಯ ಹಿಡಿದರು
ಮುಂದೆ ರಾಮನ ಎಕ್ಕಟಿಗರು ।
ಸಂದಣಿಯಲಿ ಸೆಣಸಿದರು ಕುಮಾರರು
ಒಂದೊಂದು ಪರಿಯ ಭಂಗಿಸುತ ॥೫೩॥

ಕುದುರೆಯ ಸೆಳೆದರು ಹಿರಿಯ ಕುಮಾರರು
ಗದರಿಸಿ ಮನ್ನೆಯರುಗಳ ।
ಒದಗಿ ಬಂದರು ರಾಮಗೆ ಅರುಹಿದರಾಗ
ಒದೆಸಿದನವರ ಕೋಪದಲಿ ॥೫೪॥

ಅಬ್ಬರಿಸುತಲಾಗಲೈವರು ಕುಮಾರರು
ಒಬ್ಬ ರಾಮನ ಕೆಣಕಿದರು ।
ಹೆಬ್ಬುಲಿ ಹಸುವಿನ ಗುಂಪು ಹೊಕ್ಕಂದದಿ
ತಬ್ಬಿಬ್ಬುಗೊಳಿಸಿದನಾಗ ॥೫೫॥

ಮಂತ್ರೀಶ ನಡೆತಂದು ಜಗಳವ ಬಿಡಿಸಿದ
ಸಂತೈಸಿದನು ಕುಮಾರರನು ।
ಮತ್ತೆ ಗುತ್ತಿಯ ಜಗತಾಪಿಯ ಹಿಡಿತಂದು
ಪಂಥದಿಂದಲಿ ತಿರುಗಿದರು ॥೫೬॥

ಗುತ್ತಿಯ ಸೀಮೆಯ ಸೆರೆಸೂರೆ ಹಿಡಿಯುತ
ಮತ್ತೆ ತಿರುಗಿ ರಾಮನಾಥ ।
ಮತ್ತ ಗಜ ಮಂದಿ ಸೇನೆ ಭಂಡಾರ [ವ]
[ಮೊ]ತ್ತ ಮೊತ್ತದಲಿ ಹೇರಿಸಿದ ॥೫೭॥

ಚಂಡವಿಕ್ರಮ ರಾಮ ಹಿಂದಕೆ ತಿರುಗಿದ
ದಂಡನೆಲ್ಲವ ಬರಿಗೈದು ।
ಲೆಂಡ ಗುತ್ತಿಯ ಜಗತಾಪಿಯ ಹಿಡಿಕೊಂಡು
ದಂಡನು ನಡೆಸಿದನಾಗ ॥೫೮॥

ತಂದೆ ಕೈಯಲಧರ್ಮದ ಜಗಳವ ಕೊಂಬ
ಮಂದಮತಿಯ ಗಂಡನೆಂದು ।
ಚಂದಚಂದಲಿ ಬಿರುದಿನ ಕಾಳೆ ಹಿಡಿದವು
ಅಂದು ಕೊಮಾರ ರಾಮಯಗೆ ॥೫೯॥

ಕಡಿದ ತಲೆಗಳನ್ನು ಕಡೆವೊದಲಿಲ್ಲವು
ಹಿಡಿದ ಕುದುರೆ ಸೆರೆಗಳನು ।
ಹೆಡಗೈಯ್ಯ ಕಟ್ಟಿಸಿ ಜಗತಾಪಿ ಸಹವಾಗಿ
ನಡೆದನು ತಂದೆಯ ಬಳಿಗೆ ॥೬೦॥

ಕಡುಗಲಿ ರಾಮ ಪ್ರಧಾನ ಇಬ್ಬರು ಬಂದು
ಅಡಿಗೆರಗಿದರು ರಾಯನಿಗೆ ।
ಹಿಡಿದ ಗುತ್ತಯ ಜಗತಾಪಿಯನೊಪ್ಪಸಿ
ಕಡಿದ ತಲೆಗಳ ತೋರಿದರು ॥೬೧॥

ಸಂತೋಷದಿಂದ ರಾಮನ ಕೊಂಡಾಡುತ
ಮಂತ್ರಿಗೆಂದನು ಕಂಪಿಲನು ।
ಇಂತು ಮುಮ್ಮಡಿ ಸಿಂಗರಾಯನ ವಂಶಕ್ಕೆ
ಪಂತದ ಕಳಸ ಕೊಮಾರ ॥೬೨॥

ಚಿಕ್ಕವನೆನ್ನಲಿಬಹುದೆ ರಾಮಯ್ಯನ
ಒಕ್ಕಲಿಕ್ಕಿದ ವೈರಿದಳವ ।
ಸೊಕ್ಕಿದ ಮಾನ್ಯರ ಹಿಡಿದು ತೋರಿದನೆಂದು
ತರ್ಕೈಸಿಕೊಂಡ ಕಂಪಿಲನು ॥೬೩॥

ಧರೆಯ ಗೆದ್ದನು ತನ್ನ ಕಾಳಗದಲಿ ರಾಮ
ಅರಸನ ಹಿಡಿ[ವು]ದರಿದಾಯ್ತು ।
ಹಿರಿಯ ಕುಮಾರನು ಬಂದು ವಂದಿಸಿದರು
ಹರುಷದಿ ಒಲಿದು ಹೇಳಿದರು ॥೬೪॥

ರಣದೊಳು ಹಿಡಿದ ಕುದುರೆಗಳ ತರಿಸಿದ
ಹೊಣಕೆಗೆ ಕರೆದು ಭಂಗಿಸಿದ ।
ಎಣಿಕೆಗೊಳ್ಳನು ನಿಮ್ಮ ಪಾದದಾಣೆಂದ[ರು]
ಕೆಣಕಿದ ರಾಮ ಜಗಳವ ॥೬೫॥

ಪೊಡವಿಪಾಲಕ ರಾಯ ಕೇಳುವ ಸಮಯಕ್ಕೆ
ನುಡಿದವು ಬಿರಿದಿನ ಕಾಳೆ ।
ತಡೆಯದ್ಯೆವರಗಂಡನೆಂದು ರಾಮಯ್ಯನ
ತೊಡಕಿ ಜೀವಿಸುವರಿನ್ನುಂಟೆ ॥೬೬॥

ಕೇಳೀ ಕಂಪಿಲರಾಯ ಬಿರಿದಿನ ಕಹಳೆ[ಯ]
ತಾಳಿದ ಮನದಿ ಕೋಪವನು ।
ಹೇಳಿದ ಮಂತ್ರಿಗೆ ಠಮುಕು ಮಾಡಿಸುಯೆಂದು
ಸೂಳೈಸ[ಲು] ಕದಲಿದನು ॥೬೭॥

ಮನ್ನಿಸಿ ಗುತ್ತಿಯ ಜಗತಾಪಿರಾಯಗೆ
ಹೊನ್ನಪಲ್ಲಕ್ಕಿ ಉಡುಗೊರೆಯ ।
ಉನ್ನಂತ ಪೊಂಗಲು ಕಂಠಮಾಲೆಯ [ನಾಗ]
ಚೆನ್ನ ಕಂಪಿಲರಾಯನಿತ್ತ ॥೬೮॥

ಕರಿತುರಗದ ಪಿಡಿಯಾಳನು ಬಿಡಿಸಿದ
ಕರೆದು ಮುನ್ನಿಸಿಯಿಂತೆಂದ ।
ಭರದಿಂದಲೊಲೈಸುತಲಿ ಇರು ಹೋಗೆಂದು
ಧರಯನಾಳುತ ಜಗತಾಪಿ ॥೬೯॥

ಅತ್ತಳಿ ಕಳುಹಿ ಜಗತಾಪಿಯ ಕಂಪಿಲ
ಇತ್ತು ಸಾಗಿಸಿದ ಹೊಸಮಲೆಗೆ ।
ಮೊತ್ತದ ಮನ್ನೆಯರೆಲ್ಲರು ಸಹವಾಗಿ
ಚಿತ್ರದಿಂದಲಿ ತಿರುಗಿದರು ॥೭೦॥

ಬಿಟ್ಟಲ್ಲಿ ಬಿಡದೆ ಪಟ್ಟಣವ ಹೊಕ್ಕನು ರಾಯ
ಕಟ್ಟಳೆ ಎಸೆವ ಮನ್ನೆಯರು ।
ಅಷ್ಟ ಐಶ್ವರ್ಯನ ನೋಡಿ ಕಂಪಿಲರಾಯ
ಕಟ್ಟಿಸಿದನು ತೋರಣವ ॥೭೧॥

ಅರಸು ಹೊಗಲು ಅರಮನೆಯನಾಕ್ಷಣದಲ್ಲಿ
ಅರಸಿಯರಾರುತಿ ಬೆಳಗೆ ।
ಹರುಷದಿ ಮಜ್ಜನಮಾಡಿಯೆ ಸವಿದುಂಡು
ಸರಸಿಜಸಖ ಪಡು[ವಡಗೆ] ॥೭೨॥

ಇತ್ತ ವಾಲಗಕೆ ಕಂಪಿಲರಾಯ ಹೋಗಲು
ಮತ್ತೆ ಕುಮಾರರು ಬಂದು ।
ಉತ್ತಮ ಹತ್ತು ತೇಜೀಯ ಮಾಜಿದರಯ್ಯ
ಚಿತ್ರೈಸುಯೆಂದು ಬೆಸಸಿದರು ॥೭೩॥

ತರತರದಲ್ಲಿ ಕುದುರೆಯನು ಹಿಡಿಕೊಂಡು
ಬಿರಿದನಿಕ್ಕಿದ ಎಮ್ಮ ಮೇಲೆ ।
ಅರಸರೆ ಎಮ್ಮ ಬಿನ್ನಹ ಕೇಳುವವರಾರು
ಬೆರಸಿ ನುಡಿದರು ಚಾಡಿಯನು ॥೭೪॥

ಎಂದು ಚಾಡಿಯ ಹೇಳಿ ಬಂದ ಕುಮಾರರು
ತಂದೆಯ ಪಾದಕ್ಕೆ ಎರಗಿ ।
ಒಂದೂರು ಪಾಲಿಸು ನಾವು ಇಲ್ಲಿದ್ದರೆ
ಕುಂದದು ಜಗಳ ಎಂದೆನುತ ॥೭೫॥

ಸ್ವಾಮಿ ಚಿತ್ರೈಸಂದು ನುಡಿಯೆ ಕುಮಾರನು
ರಾಮನ ಕಹಳೆಯ ಬಿರಿದು ।
ಕಾಮಸನ್ನಿಭ ಬಂದು ಕಡು ವಹಿಲದಲಿ ನಿ
ಸ್ಸೀಮ ಕಂಪಿಲಗೆರಗಿದನು ॥೭೬॥

ಮಕ್ಕಳ ದುಃಖವ ಕೇಳಿ ಕಂಪಿಲರಾಯ
ಗಕ್ಕನೆ ರಾಮನ ಕರೆಸಿ ।
ಕಕ್ಕಸದೈವರ ಗಂಡನೆಂಬುವದೀಗ
ಲೆಕ್ಕವಲ್ಲವು ಕೇಳು ರಾಮ ॥೭೭॥

ಎಂದು ಕಂಪಿಲರಾಯ ತುಂಬಿದ ಓಲಗದಿ
ತಂದ ತೇಜಿಗಳನು ತರಿಸೆ ।
ಅಂದು ಕಂಪಿಲರಾಯ ನೋಡಿದ ವಾಜಿಯ
ನಿಂದು ಆಕಾಶಕ್ಕೆ ನೆಗೆಯೆ ॥೭೯॥

ತುರಗವ ನೋಡಿ ಕಂಪಿಲರಾಯ ತನ್ನಯ
ಹಿರಿಯ ಕುಮಾರರಿಗೀಯೆ ।
ಧುರದೊಳು ಹಿಡಿದ ಕುದುರೆಯಿವರಿಗೆ [ಇತ್ತ]
ನಿರಿಯ ಪೊತ್ತವರೆ ಹೆಣ್ಣುಗಳೆ ॥೮೦॥

ಭಾಯ ಹೊಯಿಸಿಕೊಂಬ ಮಾತನಾಡಿದೆ ರಾಮ
ನ್ಯಾಯ ಧರ್ಮದ ನೀತಿಯಲ್ಲ।
ತಾಯ ತರ್ಕೈಸಿ ಕೊಂಬರೆ ತೋಲು ಬಲಿದರೆ
ಕಾಯ ಸೊಕ್ಕಿನ ನುಡಿ ಬೇಡ ॥೮೧॥

ಎನ್ನ ಎಕ್ಕಟಿಗರು ಹಿಡಿತಂದ ಕುದುರೆಯ
ನಿನ್ನ ಕುಮಾರರಿಗಿತ್ತೆ ।
ಅನ್ಯಾಯ ನ್ಯಾಯವೆಂಬುವದ ವಿಚಾರಿಸು
ನನ್ನಿಯುಳ್ಳ ರಾಯ ನೀನೆಂಬೆ ॥೮೨॥

ಕುಂದ ನುಡಿದೆ ನೀನು ಹಿರಿಯ ಕುಮಾರರ
ಮುಂದೆ ಐವರಗಂಡನೆಂದು ।
ಒಂದೊಂದು ಪರಿಯ ಬಿರಿದನಿಕ್ಕಿ ಭಂಗಿಸಿ
ನಿಂದೆಯ ನುಡಿದೆ ಪುತ್ರರನು ॥೮೩॥

ಮಥನವೆಂಬುದು ಹರಿಬ್ರಹ್ಮರಿಗಗ್ಗಳ
ಹಿತವಲ್ಲ ಇದರಿಂದ ಮುಂದೆ ।
ಕಥನ ಹುಟ್ಟುವುದಿನ್ನು ಹಿತವಲ್ಲ ರಾಮಯ್ಯ
ಅತಿಧರ್ಮ ರಾಯ ನುಡಿದನು ॥೮೪॥

ಚೆನ್ನಿಗ ರಾಮನ ಉನ್ನತ ಕಹಳೆಯು
ಬಿನ್ನಾಣ ಬಿರಿದನುಗ್ಗಡಿಸೆ ।
ಹೊನ್ನನು ಕೊಟ್ಟು ಕುದುರೆಯ ಕೊಂಡನೆಂಬಂಥ
ಉನ್ನತ ರಾಯರ ಗಂಡ ॥೮೫॥

ತಪ್ಪದೆ ಬಿರಿದು ಸಲುವುದು ರಾಮ ನಿನಗಿಂದು
ಎಪ್ಪತ್ತುರಾಜ ಬೊಲ್ಲವನು ।
ಅಪ್ಪಣೆಯಿಲ್ಲದೆ ನೀ ಹೋಗಿ ತಂದರೆ
ಇಪ್ಪವರೆ ಹೆಣ್ಣುಗಳೆಂದ ॥೮೬॥

ಬಿರಿದನಿಕ್ಕಿದರೇನು ಗರ್ವಯಿಲ್ಲವು ಎನಗೆ
ಧುರಧೀರ ತಂದೆ ಕಂಪಿಲನೆ ।
ತರುವೆನು ಎಪ್ಪತ್ತು ರಾಜನ ಬೊಲ್ಲನ
ಭರದಿಂದ ನೀ ಮೆಚ್ಚುವಂತೆ ॥೮೭॥

ಪಂತದ ನುಡಿಯನಾಡುವ[ನ]ಲ್ಲ ರಾಯ(ನೆ)
ಮಂತ್ರಿ ಮಾನ್ಯರ ಕಳುಹಬೇಡ ।
ಅಂತಕನಗರಕ್ಕೆ ಕಳುಹುವೆ ನಾ ಮುನ್ನ
ಇಂತು ಭಂಗಿಸಬೇಡಯೆನ್ನ ॥೮೮॥

ಮರ್ತ್ಯಕ್ಕೆ ಒಡೆಯ ಕಂಪಿಲರಾಯನಾಕ್ಷಣ
ಗುತ್ತಿಯ ಜಗತಾಪಿಯನು ।
ಅರ್ತಿಲಿ ಗೆಲಿದ ಪ್ರಸಂಗದ ಕಥೆಯನು
ಚಿತ್ರದ ಸಂಧಿ ನಾಲ್ಕನೆಯ ॥೮೯॥

ಅಂತು ಸಂಧಿ ೪ಕ್ಕಂ ಪದನು ೩೯೩ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೫

❖

ಕುಮಾರರಾಮ ಓರುಗಲ್ಲ ಪ್ರವೇಶಿಸಿದುದು

ಗೋಕರ್ಣಭೂಷನೆ ಗೋಪುತ್ರಗಮನನೆ
ಗೋಕರ್ಣಶಯನ ವಂದಿತನೆ ।
ಗೋಕುಳರಾಜನಂದನೆಯಾಳ್ದ ಮಹಿಮನೆ
ಗೋಕರ್ಣವಂದ್ಯ ರಾಮೇಶ ॥೧॥

ಬಿರಿದುಳ್ಳ ಎಪ್ಪತ್ತುರಾಜನ ಬೊಲ್ಲನ
ಧುರಧೀರ[ನು] ರಾಮನಾಥ ।
ಭರದಿಂದ ಓರುಗಲ್ಲಿಗೆ ಹೋಗಿ ಕಾದಿಯೆ
ತರುವ ಚರಿತೆಯ ಲಾಲಿಪುದು ॥೨॥

ತಂದೆಯ ಕೂಡ ಪಂತವನಾಡಿ ರಾಮಯ್ಯ
ಬಂದನು ಮಾತೆಯ ಗೃಹಕೆ ।
ನಿಂದು ಹರಿಯಮ್ಮನ ಕೂಡೆ ಹೇಳಿದನಾಗ
ಒಂದೊಂದು ಪರಿಯ ಜಗಳವ ॥೩॥

ಹಲವು ದೈವಕೆ ನಿನ್ನ ಹರಸಿ ಹೆತ್ತೆನು ನಾನು
ಚೆಲುವ ಚೆನ್ನಿಗ ರಾಮನಾಥಾ ।
ಕಲಹವ ಮಾಡಿ ಬೊಲ್ಲನ ತರಹೋಗುವ
ಬಲುಹು ಯಾತಕೆ ಕಂದ ನಿನಗೆ ॥೪॥

ಹುಟ್ಟಿದ ಮೊದಲು ಕಂಪಿಲರಾಯ ನಿನಗೆಯು
ಕಷ್ಟವ ನುಡಿವುದ ಬಲ್ಲೆ ।
ಸೃಷ್ಟಿಯನಾಳೆಂದು ಕನ್ನೆ ಕುಮಾರ [ನೆ]
ಕೊಟ್ಟುದಿಲ್ಲವು ರಾಮ ನಿನಗೆ ॥೫॥

ಜಾತಸ್ಯ ಮರಣ ತಪ್ಪದು ಕೇಳು ಹರಿಯಮ್ಮ
ಭೂತಳಪತಿ ರುದ್ರರಾಯ [ನ] ।
ಧಾತುಗೆಡಿಸಿ ಕಾದಿ ಬೊಲ್ಲನ ತಹೆನು
ಮಾತೆ ಪರಸಿ ಕಳುಹೆನ್ನ ॥೬॥

ರನ್ನ ಮಾಣಿಕ ಕಾಲ ಕಡೆಯವನಿತ್ತಳು
ಚಿನ್ನದ ಮೈತೊಡುಗೆಗಳ ।
ಹೊನ್ನನಿತ್ತಳು ಮುನ್ನೂರು ಸಾವಿರಗಳ
ಉನ್ನತ ಹರಕೆಯನಿತ್ತು ॥೭॥

ಹೆತ್ತ ತಾಯ ಕೈಯ ಹರಕೆಯ ತೆಕ್ಕೊಂಡು
ಮೊತ್ತದ ಪರಿವಾರ ಸಹಿತ ।
ಚಿತ್ತಜ ಸಮರೂಪ ದುರ್ಗವ ಹೊರಟನು
ಮತ್ತೆ ನೋಡಿದ ತನ್ನ ದಳನ ॥೮॥

ಮುನ್ನೂರು ತಳವಾರ ಮುನ್ನೂರು ಹರಿಗೆಯು
ಚೆನ್ನಾಗಿ ಫೌಜು ತೋರಿದರು ।
ಉನ್ನತವಾದ ಎಪ್ಪತ್ತೆರಡು ಮಾನ್ಯರು
ತನ್ನ ನಾಯಕರು ಒಪ್ಪಿದರು ॥೯॥

ಹೊನ್ನ ಕಟ್ಟಿನ ಬಿಲ್ಲು ಹನ್ನೆರಡು ಸಾವಿರ
ಉನ್ನತ ಮಾನ್ಯರು ಸಹಿತ ।
ಚೆನ್ನಾಗಿ ಪರಿವಾರವೆಲ್ಲ ರಾಮಯ್ಯನು
ಮನ್ನಣೆ ಬೆಸನ ಬೇಡಿದನು ॥೧೦॥

ಕುಸುರಿದರಿವ ಪರಿವಾರವು ಏಳ್ನೂರು
ಹೊಸಪರಿ ಪೌಜ ತೋರಿದರು ।
ಎಸೆವ ಬಿರಿದಿನುಗ್ರ ಕಾಲಾಳು ಸಾವಿರ
ಅಸಮಯನಿದಿರಿಲೊಪ್ಪಿದರು ॥೧೧॥

ಕಡುಗಲಿ ರಾಮಯ್ಯ ಪೌಜನು ನೋಡಿದ
ಒಡನೆ ನಿಸ್ಸಾಳ ಸಾರಿದವು।
ನಡೆ ಭೇರಿವಾದ್ಯವು ನುಡಿಯೆ ಬಿರಿದಿನ ಕಹಳೆ
ಪೊಡವಿ ರಾಯರ ಗಂಡನೆಂದು ॥೧೨॥

ಕಟ್ಟಣಿಲ್ಲದ ಪಯಣಗತಿಯಿಂದ ರಾಮಯ್ಯ
ಬಿಟ್ಟಲ್ಲಿ ಬಿಡದೆ ನಡೆತಂದ ।
ದಿಟ್ಟ ಚೆನ್ನಿಗ ರಾಮಯ್ಯನು ಬೇಗದಿ
ಗಟ್ಟಿ ಮಾನ್ಯರು ಸಹ ನಡೆದ ॥೧೩॥

ನಿಷ್ಕಳ್ಳ ಗುಂಡಬ್ರಹ್ಮಯ್ಯನ ಗುಡಿಯಲಿ
ಬಿಟ್ಟನು ಹೊರ [ಬೀಡು]ಗಳ ।
ಅಷ್ಟ ಐಶ್ವರ್ಯದ ಸಂಭ್ರಮ ಸಹವಾಗಿ
ನೆಟ್ಟನೆ ರಾಯರ ಬಳಿಗೆ ॥೧೪॥

ಅಷ್ಟಾವಧಾನದ ಸ್ಥಾನಪತಿಗಳನು
ಕೊಟ್ಟು ಕಳುಹಿದ ರಾಯನೆಡೆಗೆ ।
ನೆಟ್ಟನೆ ಬಾಗಿಲ ಮುಂದೆ ನಿಂದರು ಬಂದು
ದಿಟ್ಟಾಗಿ [ತಂದ] ಸುದ್ದಿಗಳ ॥೧೫॥

ತಡೆಯದೆ ಬಾಗಿಲವರು ಬಂದು ಸುದ್ದಿಯ
ಒಡೆಯ ಪ್ರತಾಪರುದ್ರನಿಗೆ ।
ಕಡುಗಲಿ ರಾಮನು ಬಂದಹನೆಂದು [ತಾ]
ಒಡನೆ ಪೇಳಿದರು ಸುದ್ದಿಯನು ॥೧೬॥

ಕರೆಸು ಕೇಳು ಅವನಾರಾದಡಾಗಲಿ
ಕರೆಯಲಟ್ಟಿದನು ಬಾಗಿಲಿಗೆ ।
ಕರೆ ತಂದ[ರು] ಬೇಗ ಸ್ಥಾನಪತಿಗಳನಾಗ
ಭರದಿಂದ ರಾಯನಿದ್ದೆಡೆಗೆ ॥೧೭॥

ಬಂದರು ಸ್ಥಾನಪತಿಗಳಾಗ ಶರಣೆಂದು
ನಿಂದು ರಾಮನ ಸುದ್ದಿಗಳನು ।
ತಂದೆ ನಿನ್ನನು ಓಲೈಸಲಿ ಬಂದಹನೆ
ಎಂದು ಹೇಳಲು ರಾಯನೊಲಿದು ॥೧೮॥

ಗಂಡುಗಲಿ ರಾಮ ಬಂದಾನೆ ಚಿತ್ರೈಸು
ಗುಂಡಬ್ರಹ್ಮನ ದೇವಾಲಯದಿ ।
ಮಂಡಲಪತಿ ಕಂಪಿಲನೊಳು ಮುನಿಸಾಗಿ ಉ
ದ್ದಂಡ ಪರಿತಂದ ನಿಮ್ಮ ಬಳಿಗೆ ॥೧೯॥

ಹೇಳಿದ ಬಿನ್ನಹ ಕೇಳಿದ ರುದ್ರನು
ವೀಳ್ಯವನಿತ್ತನಾ ಕ್ಷಣದಿ ।
ನಾಳಿನ ದಿನದಿ ಕಾಣಿಸಿಕೊಂಬೆವೆನುತಲಿ
ಬೀಳುಗೊಟ್ಟನು ಸ್ಥಾನಪತಿಯ ॥೨೦॥

ನಡೆತಂದು ರಾಮನ ಕಂಡು ಸ್ಥಾನಪತಿ
ಪೊಡವಿಪಾಲಕ ರುದ್ರರಾಯ ।
ನುಡಿದ ನುಡಿಯ ವಿಸ್ತರವಾಗಿ ಹೇಳಲು
ಕಡೆಗೊಂಡ ರವಿಯು ಪಶ್ಚಿಮದಿ ॥೨೧॥

ಉತ್ತಮ ಬಿನ್ನಹ ಕೇಳಿ ರಾಮಯ್ಯನು
ಮತ್ತೆ ಮನ್ನಿಸಿ ಸ್ಥಾನಪತಿಯ ।
ಕತ್ತಲೆ ಜಂಬುನೇರಿಲ ಪಣ್ಣಿನಂದದಿ
ಮುತ್ತಿತು ಜಗವನಾ[ವ]ರಿಸಿ ॥೨೨॥

ಚೆಲುವ ಚೆನ್ನಿಗರಾಮ ಜಳಕ ಮಜ್ಜನಮಾಡಿ
ನಲವಿಂದ ಭೋಜನಗಳನು ।
ಸುಲಲಿತ ಗುಂಡಬ್ರಹ್ಮನ ದೇವಾಲಯದಲ್ಲಿ
ಹಲವು ನೆನೆದು ಪವಡಿಸಿದ ॥೨೩॥

ಮಾರಾಂತರ ಕೊಲ್ವೆ ಮಹಾ ಪರಮಾತ್ಮನೆ
ಮರೆಹೊಕ್ಕವರ ಕಾಯ್ದುಳುಹು[ವೆ]
ನೆರೆಗಲಿ ಗುಂಡಬ್ರಹ್ಮಯ್ಯ ನೀನಲ್ಲ[ವೆ]
ಧುರಧೀರ ರಾಮ ಹೊಗಳಿದ ॥೨೪॥

ಕದ್ದ ಕಳ್ಳರ ಹಿಂದಿಕ್ಕಿ ಕೊಡದೆ ನೀವು
ಬಿದ್ದಿರಿ ಸೂಲದ ಮೇಲೆ ।
ಸದ್ಯ ಫಲವನೀವ ಶರಣರಾದಿರಿ ನೀವು
ಉದ್ಧರಿ[ಸಿಯೆ] ರಕ್ಷಿಸೆನ್ನ ॥೨೫॥

ತಂದೆಯೆಂಬೆನು ನಿನ್ನ ಬಂಧುಯೆಂಬೆನು ನಿನ್ನ
ಕಂದನ ಬಿನ್ನಪವನ್ನು ।
ಇಂದು ಸೈರಿಸಿ ನಂಬಿ ಪಾಲಿಸಿ ಕೊಟ್ಟರೆ
ನಿಂದಲ್ಲಿ ನೆನೆವೆ ನಾ ನಿನ್ನ ॥೨೬॥

ಎಪ್ಪತ್ತುರಾಜನ ಬೊಲ್ಲನು ಸಿಕ್ಕರೆ
ತಪ್ಪದೆ ನಾ ಬಲಗೊಂಬೆ ।
ಒಪ್ಪುವ ಶಲದ ಹಬ್ಬವ ಮಾಳ್ಪೆನು
ಛಪ್ಪನ್ನ ದೇಶರಿವಂತೆ ॥೨೭॥

ಇಷ್ಟಾರ್ಥವ ಬೇಡಿ ರಾಮಯ್ಯ ಪವಡಿಸೆ
ಅಷ್ಟರೊಳಗೆ ನಿದ್ರೆಗೈದು ।
ದೃಷ್ಟ ಮೂರುತಿ ಗುಂಡಬ್ರಹ್ಮಯ್ಯ ಸ್ವಪ್ನದಿ
ನಿಷ್ಠೆಯ ತೋರಿ ರಾಮನಿಗೆ ॥೨೮॥

ಇದಿರೇರಿದ ರೋಮ ಚೆದುರ ಚೆನ್ನಿಗರಾಮ
ಒದಗಿದ ನಿದ್ರೆಯೊಳಿರಲು ।
ಮದನಹರನ ಶರಣ ಬರೆ ಗುಂಡಬ್ರಹ್ಮಯ್ಯ
ಕದನಗಲಿಯ ಸ್ವಪ್ನದಲ್ಲಿ ॥೨೯॥

ಉಟ್ಟಪಟ್ಟೆಯ ದಟ್ಟಿ ಕಟ್ಟಿದೊಂಕುಡಿ ಬಾಕು
ಇಟ್ಟ ಹಣೆಯಲಿ ವಿಭೂತಿ ।
ದಟ್ಟನೆ ಬಂದು ನಿಲ್ಲಲು ರಾಮನಾಥನು
ನಿಷ್ಠೆಯುಳ್ಳವನೆ ಬೇಡೆಂದ ॥೩೦॥

ಅಗಣಿತವಾದ ರೂಪನ ಕಂಡು ರಾಮಯ್ಯ
ಮುಗಿದನು ತನ್ನ ಹಸ್ತಗಳ ।
ಜಗವರಿಯಲು ನಿಮ್ಮ ಮರೆಯ ಹೊಕ್ಕೆನು ನಾನು
ಒಗುಮಿಗೆ ವರವ ಪಾಲಿಪುದು ॥೩೧॥

ಕೊಟ್ಟೆವು ಬೇಡಿದ ವರಗಳ ರಾಮಯ್ಯ
ದಿಟ್ಟನಾಗೆಂದು ಹರಸುತ ।
ಬಟ್ಟಬಯಲುವಾಗಿ ಹೋಹರು ವೈರಿಗಳೆಲ್ಲ
ದುಷ್ಟರಂಕುಶ ರಾಮನಾಥಾ ॥೩೨॥

ಸಿಕ್ಕೊದು ಎಪ್ಪತ್ತುರಾಜನ ಬೊಲ್ಲನು
ಒಕ್ಕಲಿಕ್ಕೋದು ವೈರಿಗಳ ।
ಕಕ್ಕಸವಾದ ರಿಪುಗಳ ನೀ ಮುರಿಯೆಂದು
ಗಕ್ಕನೆ ವರವಿತ್ತನಾಗ ॥೩೩॥

ವರವ ಪಾಲಿಸಿ ಗುಂಡಬ್ರಹ್ಮಯ್ಯ ಪೋಗಲು
ತರಣಿ ಪೂರ್ವಾದ್ರಿಯನಡರೆ ।
ಭರದಿಂದ ಕೈರವ ನಾಚಿ ಮುಖವ ಮುಚ್ಚೆ
ಸರಸಿಜ ನಗುತಿರ್ದವಾಗ ॥೩೪॥

ಉದಯವಾಗಲು ರುದ್ರರಾಯ ಮಜ್ಜನಮಾಡಿ
ಸದುಗುರು ಲಿಂಗ ಜಂಗಮಕೆ ।
ಮುದದಿ ವಂದನೆಮಾಡಿ ನಿರಾಸೆಮಠಕೆ ಬಂದು
ಮದನಹರ ಶರಣೆಂದು ಮನದಿ ॥೩೫॥

ಪಂಚರತ್ನದ ಕಂತೆ ಪರಿಪರಿ ಚಿನ್ನದ
ಪಂಚಮುಖನ ಸಮನಿಕರು ।
ಪಂಚಬಾಣನ ಬಾಧೆಯ ಕಳೆದ ಹಿರಿಯರ್ಗೆ
ವಂಚನಿಲ್ಲದೆ ಶರಣೆಂದ ॥೩೬॥

ಉತ್ತಮ ರಜತಾದ್ರಿಯನೊಪ್ಪವಿಟ್ಟಂತೆ
ಹತ್ತು ಸಾವಿರ ಬೆಳ್ಳಿಕಂತೆ ।
ಮುತ್ತಿನ ಕಂತೆ ಚಿನ್ನದ ಕಂತೆ ಹಿರಿಯರ್ಗೆ
ಎತ್ತಿ ಕರಗಳನು ಮುಗಿದ ॥೩೭॥

ಪಂಚಬಾಣಗೆ ಸಿಲ್ಕದ ಗುರುಹಿರಿಯರು
ಪಂಚೈದು ಸಾವಿರವಿಹರು ।
ಮುಂಚುವ ಮದಮಚ್ಚರಗಳ ಗೆಲುವಂಥ
ಅಚ್ಚ ಜಂಗಮಕೆ ಕೈಮುಗಿದ ॥೩೮॥

ಬಟ್ಟ [ಗಂಧರ]ಸುತ್ತ ತೆತ್ತಿಸಿ ರುದ್ರಾಕ್ಷಿ
ಖಟ್ವಾಂಗಧರನ ಸಮನಿಕರು ।
ಕಟ್ಟಣೆಲ್ಲದ ಕಬ್ಬಿಣ ಕಂತೆಗಳಿಂದ
ನಿಷ್ಠ ಜಂಗಮರು ಒಪ್ಪಿದರು ॥೩೯॥

ರುದ್ರಕಂತೆಯ ಜಂಗಮರ ನೋಡಲು ಜನ
ಹೊದ್ದಿದ ಪಾಪ ಓಡುವುದು ।
ಅದ್ವೈತವಾದ ದೀಕ್ಷಾಬೋಧೆ ಪಠಿಸುತ
ಉದ್ಧರಿಸುತ ಪಂಚಾಕ್ಷರವ ॥೪೦॥

ಭಸ್ಮಾಂಗ ಭಸಿತದ ಹೊಸವರಿ ಮುಕುಟದ
ಅಸಮಾನ ಷಡುಸ್ಥಲದವರು ।
ದೆಸೆಯಬಲ್ಲರು ವೀರೇಶನ ಮಹಿಮೆಯ
ಕುಶಲದ ಹಿರಿಯರೊಪ್ಪಿದರು ॥೪೧॥

ಕಾಡುವ ಬ್ರಹ್ಮೇತಿ ಓಡುವುದಾಕ್ಷಣ
ನೋಡಿದಾಗಲೇ ಪಾಪಹರವು ।
ಆಡರು ಹುಸಿಯ ಸುಳ್ಳುಗಳನು ಹಿರಿಯರು
ರೂಢಿಗೀಶನ ಪಟ್ಟಣದಲಿ ॥೪೨॥

ವೇದ ಮಂತ್ರಗಳನೋದುವ ಜಪಮಾಲೆಯ
ಆಧಾರ ಶಿವಪೂಜೆಯನ್ನು ।
ನಾದ ಘೋಷಣೆ ಪೂಜೆಯ ಮಾಡುವರಲ್ಲಿ
ವೇದವ ಬಲ್ಲ ಮನ್ನೆಯರು ॥೪೩॥

ಅಪರಂಪರನ ಪೂಜೆ ಮಾಡುತ ಹಿರಿಯರು
ವಿಪರೀತವಾಗಿ ರಂಜಿಪರು ।
ಗುಪಿತದಿಂ ದೀಪಧೂಪಾರತಿ ನೈವೇದ್ಯ
ವಿಪರೀತ ಪೂಜೆ ಮಾಳ್ಪವರು ॥೪೪॥

ಕುಸುಮ ಪತ್ರೆಗಳಿಂದ ಗಂಧ ವಿಭೂತಿಲಿ
ಶಶಿಧರನರ್ಚನೆ ಮಾಡಿ ।
ದಶವಾಯುಗಳನು ಒಮ್ಮನದಲ್ಲಿ ನಿಲಿಸುತ
ದಶಕೋಟಿ ದೀಪವ ಬೆಳಗಿ ॥೪೫॥

ಅಸಮಾಕ್ಷನ ಪೂಜೆ ಅರ್ತಿಲಿ ಮಾಡುತ
ಕುಶಲದ ಹಿರಿಯರೊಪ್ಪಿದರು ।
ದಶಭೂಜ ಶಿವನ ನೆನೆವ ಹಿರಿಯರ ಕಂಡು
ದಶವೆರಳೆತ್ತಿ ಕೈಮುಗಿದು ॥೪೬॥

ಇಂತು ಶರಣುಮಾಡಿ ಲಿಂಗಜಂಗಮಕಾಗ
ಕುಂತುಸಮಾನ ರುದ್ರೇಶ ।
ಸಂತೋಷದಿಂದ ನಡೆದು ಓಲಗಕೆ ಬಹ
ಪಂಥವನೇನ ಬಣ್ಣಿಸುವೆ ॥೪೭॥

ಮುತ್ತಿನ ಚಾವಡಿಗೊಪ್ಪುವ ಕಳಸವು
ಉತ್ತಮ ರತ್ನ ತೆತ್ತಿಸಿದ ।
ಚಿತ್ರದ ಕೆಲಸದ ಲೋವೆ ಮದನಕ್ಕೆಯ
ಸುತ್ತ ಸೂತ್ರದ ಬೊಂಬೆಯೆಸೆಯೆ ॥೪೮॥

ಪಟ್ಟೆಯ ಮೇಲುಕಟ್ಟಿನ ಶೃಂಗಾರಕೆ
ಇಟ್ಟಿಹ ಸೆಡಕು ಜಲ್ಲಿಗಳು ।
ಕಟ್ಟಾಣಿ ಮುತ್ತಿನ ಜಗುಲಿಗಳೆಸೆದವು
ದಿಟ್ಟ ರುದ್ರನ ಚಾವಡಿಯಲಿ ॥೪೯॥

ಜಂಬುದ್ವೀಪಕೆ ಅಧಿಕೆಸೆಯೆ ಸಿಂಹಾಸನ
ತುಂಬಿ ತುಳುಕುವ ಕೀಲಣಿಯು ।
ಅಂಬರದಲಿ ಮಣಿ ಕಳೆಗಳು ಎಸೆದವು
ಸಂಭ್ರಮಿಸಿತು ಸಿಂಹಾಸನವು ॥೫೦॥

ಕಾಂ[ತಿ]ಯ ಕಳೆಯುಳ್ಳ ಸೊಬಗಿಂದಲಿರುತಿರೆ
ಕಾಂತೆಯ ಜಯವಂತನಿರುತ ।
[ಮುಂ]ತೆ ಕಂಚುಕಿಯರು ಘಟಿಸುತಲಿ ಬರೆ
ಸಂತೋಷದಲಿ ನಡೆತಂದ ॥೫೧॥

ನಡೆತಂದು ರಾಯನು ಸಿಂಹಪೀಠವನೇರೆ
ಒಡನೆ ಕಂಚುಕಿಯರ್ ಕೊಂಡಾಡೆ ।
ಬಿಡದೆ ಜಯ ಜಯಯೆಂದು ಕಾಂತೆಯರ್ ನಡೆತರೆ
ಎಡಬಲದೋಲಗದೊಳಗೆ ॥೫೨॥

ಕುಂಬಳ ಕಾಯೊಳು ಒಡೆದು ಮೂಡಿದ ರುದ್ರ
ಶಂಭಿ ಶಿವನ ಕರುಣದಲಿ ।
ಬೆಂಬಳಿ ವಂಶ ವಂಶಾದಿಗಳಿಗೆಲ್ಲ
ತುಂಬಿದ ಸುಖದಿ ಸಲಹುವ ॥೫೩॥

ಸಲಹೆಂದು ಪೂರ್ವ ಪ್ರತಾಪ ರುದ್ರರಾಯ
ನಲವಿಂದ ನೆನೆದನೋಲಗದಿ ।
ಚೆಲುವ ರಾಮನ ಕರೆಯೆನುತ ಲಿಂಗನ ಕೂಡೆ
ಗೆಲವಿಂದ ಪೇಳ್ದನಾಕ್ಷಣದಿ ॥೫೪॥

ತುರಗವನೇರಿದ ದೇವಿಶೆಟ್ಟಿಯ ಲಿಂಗ
ಬಿರುದುಳ್ಳ ರಾಮನ ಕರೆಯೆ ।
ಭರದಿಂದ ವೈಹಾಳಿ ಮಾಡುತ ಲಿಂಗಣ್ಣ
ಧುರಧೀರ ಮಾನ್ಯರು ಸಹಿತ ॥೫೫॥

ತೇಜಿಯ ತಿರುಹುತ ರಾಜಬೀದಿಯೊಳಾಗ
ಮೂಜಗದೊಡೆಯನ ಮಂತ್ರಿ ।
ವಾಜಿಯನೇರಿ ಝೇಂಕರಿಸಿ ಕುಣಿಸುತಿರೆ
[ತೇಜದಿ]ರಾಮಯ್ಯ ಕಂಡ ॥೫೬॥

ನೋಡಿ ಕಂಡನು ರಾಮ ಲಿಂಗನ ತೇಜಿಯ
ರೂಢಿಯೊಳ್ವಿಪರೀತವೆಂದ ।
ಗಾಢದಿ ತೇಜಿಯನೇರಿದ ರಾಮಯ್ಯ
ಮಾಡಿದ ವೈಹಾಳಿಯನ್ನು ॥೫೭॥

ಕುದುರೆಯ ನಡೆಸಿದ ಮದನಸನ್ನಿಭ ರಾಮ
ಚೆದುರ ಲಿಂಗನ ತರ್ಕೈಸಿ ।
ಸಾಧನೆಗಳ ನೋಡಿ ಮೆಚ್ಚಿದ ಲಿಂಗಣ್ಣ
ಭೇದವಿಲ್ಲದೆ ತೋರುಯೆನಗೆ ॥೫೮॥

ಒಬ್ಬರ ಸಾಧನೆ ಒಬ್ಬರು ಮಚ್ಚುತ
ಇಬ್ಬರು ಸಾಧನೆಮಾಡಿ ।
ಒಬ್ಬರೊಬ್ಬರು ಕುದುರೆಗಳನಿಳಿದರಾಗ
ಇಬ್ಬರು ಮಾತನಾಡಿದರು ॥೫೯॥

ಉನ್ನತ ಹರುಷದಿ ಹೆಚ್ಚುತ ಮನದಲ್ಲಿ
ಚೆನ್ನಾಗಿ ಕರಗಳ ಮುಗಿದು ।
ಮನ್ನೆಯ ರಾಮಯ್ಯ ಬಂದ ಕಾರಣವೇನು
ಚೆನ್ನಾಗಿ ಹೇಳುಯೆನ್ನೊಡನೆ ॥೬೦॥

ಒಡಗೊಂಡು ಲಿಂಗರಾಹುತ ರಾಮಯ್ಯ [ರು]
ನಡೆತಂದು ಬೀಡಾರದೊಳಗೆ ।
ದೃಢವುಳ್ಳ ಗುಂಡಬ್ರಹ್ಮಯ್ಯನಾಲಯದಲ್ಲಿ
ಬಿಡದೆ ಏಕಾಂತ ಮಾಡಿದರು ॥೬೧॥

ಇಬ್ಬರು ಕುಳಿತು ಮಾತನಾಡಿದರಲ್ಲಿ
ಒಬ್ಬರೊಬ್ಬರ ಸುದ್ದಿಗಳನು ।
ಗಬ್ಬಿ ಕೊಮಾರ ದೇವಿಶೆಟ್ಟಿ ಲಿಂಗನು
ಇಬ್ಬರೇಕಾಂತ ವಾಡಿದರು । ॥೬೨॥

ಛಪ್ಪನ್ನದೇಶದ ರಾಯರ ಗಂಡ ಕಂ
ದರ್ಪಸಮಾನ ರಾಮಯ್ಯ ।
ಒಪ್ಪುವ ರುದ್ರರಾಯನು ಎನ್ನ ಕಳುಹಿದ
ಪುಷ್ಪಬಾಣನೆ ನಿನ್ನ ಕರೆಯೆ ॥೬೩॥

ಬಂದುದು ಲೇಸಾಯ್ತು ಅಣ್ಣ ಲಿಂಗಣ್ಣನೆ
ಇಂದಿನ ಕಾರ್ಯದ ವಿವರ ।
ತಂದೆ ಕಂಪಿಲನೊಳು ಮುನಿಸಾಗಿ ಬಂದೆನು
ಕುಂದ ನುಡಿಯದಿರು ಎನ್ನ ॥೬೪॥

ಲೇಸಮಾಡಿದೆ ರಾಮನಾಥ ನೀ ಕೇಳಯ್ಯ
ಬೇಸರವುಂಟೆ ಈರ್ವರಲಿ ।
ಸಾಸಿರ ಕಾಲವು ಕೂಡಿದ ಸ್ನೇಹವು
ಈಸು ನುಡಿಯೇಕೆ ಚಿತ್ತೈಸು ॥೬೫॥

ನಿನ್ನ ಪ್ರಾಣವೇ ಎನ್ನ ಪ್ರಾಣವೆಂಬೆನು ರಾಮ
ಉನ್ನಂತ ಭೇರುಂಡನಂತೆ ।
ಭಿನ್ನವಿಲ್ಲದೆ ರುದ್ರರಾಯನ ಬಳಿಯಲಿ
ಮನ್ನಣೆಯಲಿ ಓಲೈಸು ॥೬೬॥

ಚಿತ್ತಜ ಸಮರೂಪ ರಾಮಯ್ಯ ನೀ ಕೇಳು
ಕರ್ತುರ ಶಿವನ ಪಾದದಾಣೆ ।
ಸತ್ತರೆ ನಿನ್ನೊಡನೆ ಸಾವೆನುಯೆನುತಾಗ
ಇತ್ತ ಭಾಷೆಯನವನೊಡನೆ ॥೬೭॥

ಅಂಜಿದ ರಾಮನೇತರ ಬಂಟನೆನುತಲಿ
ಬಂಜೆ ನುಡಿಯನಾಡಬೇಡ ।
ರಂಜಿಪ ಭೂಮಿರಾಯರ ಗಂಡನೆನುತಲಿ
ಅಂಜದೆ ಕರವೆತ್ತಿ ನುಡಿದ ॥೬೮॥

ಭೂತದೊಳು ನಿನಗಿನ್ನೆಣೆಯಿಲ್ಲೆಂದು
ಓತು ಕೂಡಿದನಣ್ಣ ಲಿಂಗ ।
ಭೀತಿಗೊಳ್ಳದ ರಾಯರಾರುಂಟೊ ಲಿಂಗಣ್ಣ
ನೀ ತಿಳಿದುದನಾಡೆಂದ ॥೬೯॥

ಕಂಡ ಬಿರಿದ ಕಟ್ಟಿ ಕಂಡಿಲಿ ನುಸುಳುವನಲ್ಲ
ಭಂಡನತವು ನಮಗಿಲ್ಲ ।
ಗಂಡು ರಾಮಯ್ಯ ನಾ ಓಲೈಸ ಬರಲಿಲ್ಲ
ಗುಂಡಬ್ರಹ್ಮನ ಪಾದದಾಣೆ ॥೭೦॥

ಅಪ್ಪ ಕಂಪಿಲನೊಳು ನುಡಿದೆನು ಬಲುಮಾತ
ಎಪ್ಪತ್ತುರಾಜನ ಬೊಲ್ಲ ।
ಇಪ್ಪತ್ತು ದಿನದೊಳು ತರುವೆನು ನಾನೆಂದು
ಒಪ್ಪುವ ಪಂತವಾಡಿದೆನು ॥೭೧॥

ನುಡಿಯ ಕೇಳುತ ಲಿಂಗ ಪಿಡಿದೆತ್ತಿ ಇಂತೆಂದ
ಕಡುಗಲಿ ರಾಮಯ್ಯ ಕೇಳು ।
ಒಡಹುಟ್ಟಿದನೆ ಪಂತ ಹಿಂದಕ್ಕೆ ತೆರೆವರೆ
ತಡಮಾಡಬೇಡ ಏಳೆಂದ ॥೭೨॥

ನೇತ್ರವಳಿಯ ತೆಗ[ದು]ಟ್ಟನು ರಾಮಯ್ಯ
ಸೂತ್ರದ ಕಂಠಮಾಲೆಯನು ।
ಧಾತ್ರಿಗೆ ಪೊಸತೆಂಬ ಪದಕವನಿಟ್ಟನು
ಮುತ್ತಿನ ಕಾಲಪೆಂಡೆಯನು ॥೭೩॥

ಪಚ್ಚದ ಕಡಗವನಿಟ್ಟನು ರಾಮಯ್ಯ
ಹೆಚ್ಚಿನ ಪಚ್ಚೆ ಸರಗಳ ।
ನಿಚ್ಚಳ ಮುತ್ತಿನ ಕಟಕನಿಕ್ಕಿದ ರಾಮ
ಅಚ್ಚಕಸ್ತೂರಿ ತಿಲಕವನು ॥೭೪॥

ಸಣ್ಣದುಪ್ಪಟವ ಪೊದ್ದನು ರಾಮನಾಥನು
ಬಣ್ಣದ ಚಿಮ್ಮುರಿ ಸುತ್ತಿ ।
ಕಣ್ಣಹಬ್ಬವ ಮಾಡಿ ಆಳು ಶೃಂಗರಿಸೆಂದು
ಅಣ್ಣ ಕಾಟಣ್ಣಗೆ ಪೇಳೆ ॥೭೫॥

ಉತ್ತಮ ಮುತ್ತಿನ ಸರ ಕಂಠಮಾಲೆಯ
ಚಿತ್ರದ ಕಟುಕು ಪೆಂಡೆಯವ ।
ಮೊತ್ತದ ನಾಯಕರಾದಿ ಬಂಟರಿಗೆಲ್ಲ
ಅರ್ತಿಲಿ ಶೃಂಗರಿಸಿದರು ॥೭೬॥

ಪಟ್ಟೇದ ದಟ್ಟಿಗೆ ಪರಿಪರಿ ಜಲ್ಲಿಯು
ಕಟ್ಟು ಬಣ್ಣವು ಕಡೆಯಿಲ್ಲ ।
ಕಟ್ಟಾಳು ಹೊನ್ನಮೊಳೆಯ ಕಠಾರಿಯ
ದಿಟ್ಟರು ಶೃಂಗರಿಸಿದರು ॥೭೭॥

ಹೊನ್ನ ಕಟ್ಟಿ[ನ] ಬಿಲ್ಲು ಹೊಗರೇರೆ ಪರಿವಾರ
ಚೆನ್ನಾಗಿ ಫೌಜುಮಾಡಿದನು ।
ಮಾನ್ಯರ ಶೃಂಗಾರವನು ನೋಡಿ ಲಿಂಗಣ್ಣ
ಉನ್ನತ ಹರುಷವ ತಾಳಿ ॥೭೮॥

ದೇವಸೆಟ್ಟಿಯ ಲಿಂಗಣ್ಣನು ತಾ ನೋಡಿ
ಯಾವ ರಾಯರಿಗಳವಲ್ಲ ।
ಕಾವನ ಸಮರೂಪ ರಾಮ ಭಾಪುರೆಯೆಂದು
ಆ ವೇಳೆಯಲಿ ನೋಡಿ ಕಂಡ ॥೭೯॥

ಧುರಧೀರ ನಿನಗೆ ಈ ಬಿರಿದು ಸಲ್ವದು ರಾಮ
ಶಿರವ ತೂಗಿದನು ಲಿಂಗಣ್ಣ
ದೊರೆ ರಾಮನಾಥ ದೇವಿಸೆಟ್ಟಿ ಲಿಂಗಣ್ಣ
ತುರಗವ ಬೋಳೈಸಿದ [ರು] ॥೮೦॥

ಹೊನ್ನ ಭಲ್ಲೆಯ ತಿರುವುತ ರಾಮನಾಥರು
ತನ್ನ ಸಾಧನೆಯ ತೋರುತಲಿ।
ಉನ್ನತ ಗಜ ತುರಗವು ಪದಾತಿಗಳಿಂದ
ಚೆನ್ನರಾಮನು ತೆರಳಿದನು ॥೮೧॥

ಕುಟ್ಟಿತು ಸಕಲ ಸಂಭ್ರಮದಿಂದ ವಾದ್ಯವು
ಪಟ್ಟಣ ಘೀಳಿಡುವಂತೆ ।
ಅಪ್ಪ ಕಳೆಯ ರಾಮ ದೇವಿಶೆಟ್ಟಿಯ ಲಿಂಗ
ದಿಟ್ಟರು ನಗರಿಗೈತರಲು ॥೮೨॥

ಶೃಂಗಾರ ಕಂಚಿನ ಬಾಗಿಲ ದ್ವಾರಕ್ಕೆ
ಪೊಂಗಳಸಗಳು ಒಪ್ಪಿದವು ।
ಅಂಗಜ ಸಮರೂಪ ರಾಮ ನೋಡುತ ಬರೆ
ಹಿಂಗದೆ ಹೊಕ್ಕ ಪಟ್ಟಣವ ॥೮೩॥

ಉತ್ತಮ ಸೋಮ ಸೂರ್ಯರ ವೀದಿಯೊಳಗೆಲ್ಲ
ಮೊತ್ತದ ವಾದ್ಯ ಭೋರಿಡುತೆ ।
ಮುತ್ತಿನ ಸತ್ತಿಗೆ ನೆರಳಲ್ಲಿ ರಾಮಯ್ಯ
ಚಿತ್ತಜ ಸಮ ನಡೆತರಲು ॥೮೪॥

ಚೆಲುವರಗಂಡ ರಾಮನ ನೋಡುವೇಳ್ಕೆಂದು
ಲಲನೇರು ಶೃಂಗಾರವಾಗಿ ।
ಹಲವು ಮಾಳಿಗೆ ಮಂಟಪ ಭದ್ರಸಾಲೆಯ
ಒಲವಿಂದ ಏರಿ ನೋಡಿದರು ॥೮೫॥

ನಟ್ಟ ಕಂಗಳ ಕೀಳಲಾರದೆ ಸತಿಯರು
ಉಟ್ಟ ಉಡಿಗೆ ಸಡಿಲುತಲಿ ।
ಬಟ್ಟ ಕುಚದ ಸೆರಗ[ದು] ಜಾರಿ ಬೀಳುತ
ದಿಟ್ಟ ರತಿಯರು ಕಳವಳಿಸೆ ॥೮೬॥

ಉತ್ತಮ ಸಕಲ ಜೀವಿಗಳ ಪುಟ್ಟಿಸಿ ಬ್ರಹ್ಮ
ಮತ್ತೆ ಮನದೊಳು ಯೋಚಿಸಿದ ।
ಚಿತ್ರದ ಬೊಂಬೆಯೊಂದಿರಲೆಂದು ತೀವ್ರದಿ
[ಅ]ರ್ತಿಯಿಂದಲಿ ನಿರ್ಮಿಸಿದನು ॥೮೭॥

ನೋಡಿ ರಾಮನ ರೂಪ ಹೆರೆ ಹಿಂಗಲಾರದೆ
ಕೂಡುವ ಪರಿ ಹೇಗೆಯೆನುತ ।
ಗೋಡೆಯ ಮೇಲಣ ಚಿತ್ರದಿ ನಿಂದರು
ಗಾಡಿಕಾರ್ತಿಯರು ಚಂಚಲದಿ ॥೮೮॥

ಎತ್ತಿದ ಮಕ್ಕಳ ಕೆಳಯಕೆ ಬಿಟ್ಟರು
ಮೊತ್ತದ ವಿರಹ ತಾಪದಲಿ ।
ನೆತ್ತಿಯ ಮೇಲಣ ಕೊಡಗಳ ಮರೆದರು
ಚಿತ್ತದಿ ಭ್ರಮಿಸಿ ನಿಂದಿಹರು ॥೮೯॥

ಕಾಮನ ಕಳೆಯಿಂದ ವೆಗ್ಗಳವೆನಿಸುವ
ಭೂಮಿಗೆ ಚೆಲ್ವ ರಾಮಯ್ಯ ।
ಆ ಮಹಾಲಕ್ಷ್ಮೀ ಪೆತ್ತಳೊ ಇವನೆಂದರು
ಕೋಮಲೆಯರು ಕೊಂಡಾಡಿದರು ॥೯೦॥

ಸಕಲ ಸ್ತ್ರೀಯರ ಕೈವ[ಶ]ಮಾಡ ಬಂದನೊ
ವಿಕಳಗೊಳಿಸ[ಲು] ಹೆಣ್ಣುಗಳ ।
ಮುಖದ ಚೆಲ್ವಿಕೆಗೆ ಚೆಲ್ವನು ಬಂದನೆನುತಲಿ
ವಿಕಳಗೊಂಡರು ಕೋಮಲೆಯರು ॥೯೧॥

ಹಡೆದ ತಾಯಿಗಳು ಮಕ್ಕಳ ನೋಡುವಂದದಿ
ಒಡಹುಟ್ಟಿದರು ತಮ್ಮಂದಿರನು ।
ಕಡುಗಲಿ ರಾಮನ ಪರಸಿ ನೋಡಿದರಾಗ
ದೃಢವುಳ್ಳ ಪತಿವ್ರತೆರಿನ್ನು ॥೯೨॥

ನೋಡಿ ಕಂಡನು ವಿರಹದ ಸತಿಯರನಾಗ
ಮಾಡಿದ ಮನಕೆ ಸಂತಸವ ।
ರೂಢಿಗೀಶ್ವರ ಬಲ್ಲ ಹರಿಯಮ್ಮರಿವರೆಂದು
ಕೂಡೆ ಕಾಳೆಗಳ ಹಿಡಿಸಿದನು ॥೯೩॥

ಪರನಾರಿಯರ ಸಹೋದರ ಚೆನ್ನಿಗ ರಾಮ
ಪರಬಲ ರಣಭಯಂಕರನು ।
ಪರರಾಯದಲ್ಲಣನೆಂದು ನುಡಿಯೆ ಕಹಳೆ
ಬಿರಿದೆತ್ತಿ ಹಲವು ಪರಿಯಲಿ ॥೯೪॥

ಒಂದೊಂದು ಹೊಸ ಪರಿಯುಪ್ಪರಿಗೆಗಳನು
ಚೆಂದದಿ ಲಿಂಗ ತೋರುತಲಿ ।
ಒಂದೊಂದು ಹೊಸ ಪರಿ ಮುತ್ತಿನಂಗಡಿಗಳ
ಮುಂದೆ ಚಿನಿವಾಲರಂಗಡಿಯು ॥೯೫॥

ಹವಳದಂಗಡಿ ಹರಿವಾಣದಂಗಡಿಗಳು
ಜವಳಿ ಸೋನಾರಂಗಡಿಯು ।
ಜವ್ವಾದಿ ಪುಣುಗು ಕಸ್ತೂರಿ ಕಮ್ಮಣ್ಣಿಯು
ಹೂವು ಮಾರುವರಂಗಡಿಯು ॥೯೬॥

ಕಜ್ಜೂರ ತೆಂಗು ಬೆಳಲು ಮಾವು ರಸದಾಳಿ
ಜಾಜಿಕಾಯ್ಗಳು ಪ್ರಶ್ನೆಗಳು ।
ಮೂಜಗದೊಳಗುಳ್ಳ ಪರಿಪರಿ ಸರಕಿಂದ
ರಾಜವೀಧಿಗಳೊಪ್ಪಿದವು ॥೯೭॥

ಕಣ್ಗೆ ಮಂಗಳವಾಡಿ ಅಂಗಡಿ ಎಡಬಲ
ಶೃಂಗಾರವಾದ ಸೆಟ್ಟಿಗಳು ।
ಇಂಗು ಮೆಣಸು ಬೇಳೆ ಬೆಲ್ಲಗಳನೇ [ಪೇರಿ]
ಸಂಗನ ಶರಣರು ಕುಳಿತು ॥೯೮॥

ಸಾಲು ಸಾಲುಗಳಿಂದ ಮಾರುವ ಬಿಳಿಯೆಲೆ
ಮೇಲೆ ಕಾಯ್ಪಲ್ಲೆ ಪದಾರ್ಥ ।
ಲೀಲೆಯಿಂದಲಿ ಬತ್ತಮಾರುವರಂಗಡಿ
ಲೋಲ ರಾಮಯ್ಯ ನೋಡುತಲಿ ॥೯೯॥

ಇಂತು ಸೋಮ ಸೂರ್ಯವೀಧಿಯ ನೋಡುತ
ಕಂತು ಸಮಾನ ರಾಮಯ್ಯ ।
ತಿಂಥಿಣಿಯಲಿ ಮಂದಿ ಕುದುರೆಯು ಸಹವಾಗಿ
ಮುಂತೆ ನಡೆದ ವೀಧಿಯೊಳಗೆ ॥೧೦೦॥

ಇತ್ತರದಂಗಡಿ ಉಪ್ಪರಿಗಳ ನೋಡಿ
ಮೊತ್ತದ ಶೃಂಗಾರಗಳನು ।
ಚಿತ್ರದ ಮಿಗಿಲು ಮಂದಿರಗಳ ನೋಡುತ
ಮತ್ತೆ ಬಂದನು ರಾಯನೆಡೆಗೆ ॥೧೦೧॥

ಥಳಥಳಿಸುವ ಬಾಗಿಲ ಹೊಕ್ಕು ರಾಮಯ್ಯ
ಒಳೆಯಾಕೆ ನಡೆದನಾ ಕ್ಷಣದಿ ।
ಇಳಿದು ಕುದುರೆಯ ಕಂ[ಧರ] ಕಟ್ಟಿ ರಾಮಯ್ಯ
ಘಳಿಲನೆ ನಡೆದನಾಕ್ಷಣದಿ ॥೧೦೨॥

ಬಿರಿದುಳ್ಳ ಪ್ರತಾಪರುದ್ರನೋಲಗವಿರೆ
ಅರಸು ರಾಮನು ನೋಡಿ ಕಂಡ ।
ಧುರಗಲಿ ಮಾನ್ಯ ಮಕುಟವರ್ಧನರಿಂದ
ಸಿರಿಯನಾದರು ಬಣ್ಣಿಪರು ॥೧೦೩॥

ಎಡವಂಕ ಬಲವಂಕ ನಾಯಕರುಗಳಾಗ
ಕಡುಗಲಿ ರಾಜಕುವರರು ।
ದೃಢವುಳ್ಳ ಮನ್ನೆಯ ಮಂತ್ರಿಗಳೊಡಗೂಡಿ
ಪೊಡವಿಪಾಲಕನ ಓಲಗದಿ ॥೧೦೪॥

ಮುತ್ತಿನ ಗದ್ದುಗೆಯಲಿ ರುದ್ರರಾಯನು
ಚಿತ್ತಜ ಕಳೆಯಲೊಪ್ಪಿದನು ।
ಇತ್ತರದೋಲಗದೊಳಗೆ ರಾಮಯ್ಯನು
ಅರ್ತಿಯಿಂದಲಿ ನಡೆತಂದ ॥೧೦೫॥

ತಾರಕಿಯೊಡನೆ ಚಂದ್ರಮನುದಿಸಿ ಬಂದಂತೆ
ಹರಣೆಲ್ಲದಲಿ ಜೀವರತ್ನ ।
ಓರುಗಲ್ಲಿನ ರುದ್ರರಾಯನೋಲಗದೊಳು
ಮಾರಸನ್ನಿಭ ರಾಮನೆಸೆದ ॥೧೦೬॥

ಕಟ್ಟಣಿಲ್ಲದ (ರಾಯ) ಮಾನ್ಯ ಮಂಡಲಿಕರು
ದಿಡ್ಡ ರಾಮಯ್ಯನ ನೋಡಿ ।
ನೆಟ್ಟನೆ ಬೆರಗಾಗಿ ತಮತಮಗೆಲ್ಲರು
ಬೊಟ್ಟು ಕಚ್ಚಿದರು ಓಲಗದಿ ॥೧೦೭॥

ವಂದನೆಮಾಡಿ ರಾಮಯ್ಯನು ರುದ್ರಗೆ
ತಂದೆ ಕಾಣಿಕೆಯನಿಕ್ಕಿದನು ।
ಚಂದ್ರನ ಕಳೆಯುಳ್ಳ ರಾಮಯ್ಯ ಕೊಡೆಂದು
ಅಂದು ರಾಯನು ಮನ್ನಿಸಿದನು ॥೧೦೮॥

ನೋಡಿದ ರಾಯ ರಾಮನ ಮಂದಿ ಕುದುರೆಯ
ಮಾಡಿದ ಕಡು ಸಂತೋಷವನು ।
ಕೂಡಿದ ಎಪ್ಪತ್ತುರಾಜ[ನ] ರಾಮನುಯೆಂದು
ನಾಡೊಳು ಎದುರಂಟೆ ನಮಗೆ ॥೧೦೯॥

ಬುದ್ಧಿನಿತಲ್ಲವು ಕಂಪಿಲರಾಯಗೆ
ಮುದ್ದುಮುಖದ ಕುಮಾರಕನ ।
ಇದ್ದಲ್ಲೆ ಮುನಿಸು ತಿಳಿ[ಸದೆ] ಬರಗೊಡಬಹುದೆ
ರುದ್ರ ಮಂತ್ರಿಯೊಳು ಇಂತೆಂದ ॥೧೧೦॥

ಇತ್ತನು ಕಟಕ ಕಂಠಮಾಲೆ ಪದಕವನಾಗ
ದಟ್ಟಿ ಕಬಾಯ ಉಡುಗೊರೆಯ ।
ಉತ್ತಮ ಉಲುಪೆಯ ಕೊಟ್ಟ ರಾಮಯ್ಯಗೆ
ಮತ್ತೆ ಮನ್ನಿಸಿ ಕಳುಹಿದನು ॥೧೧೧॥

ಆ ಸಮಯದಿ ಭಟ್ಟನು ಕೊಂಡಾಡಿದ
ಸಾಸಿರ ಕಾಳೆ ಸಾರಿದವು ।
ದೇಶಾಧಿಪತಿ ರಾಯರ ಗಂಡ ರಾಮಯ್ಯ
ಆಸೆಯಿಲ್ಲವು ಪರಸತಿಗೆ ॥೧೧೨॥

ಹೊನ್ನನು ಕೊಟ್ಟು ಕುದುರೆಯನು ಕೊಂಬುವಂಥ
ಮನ್ನಣೆ ರಾಯರ ಗಂಡ ।
ಇನ್ನುಳ್ಳ ಭೂಮಿಯ ರಾಯರ ಗಂಡನು
ಚೆನ್ನಾಗಿ ಕಹಳೆ ಸಾರಿದವು ॥೧೧೩॥

ಕಟ್ಟಣೆಲ್ಲದ ಬಿರಿದನು ರಾಮಯ್ಯಂಗೆ
ಭಟ್ಟರು ಕೊಂಡಾಡಿದರು ।
ಸೃಷ್ಟಿಪಾಲಕ ರಾಯ ಕೇಳಿ ಕೋಪವ ತಾಳಿ
ದಿಟ್ಟ ಮಂತ್ರಿಯೊಳು ಇಂತೆಂದ ॥೧೧೪॥

ನಮ್ಮ ಬಳಿಗೆ ರಾಮನೋಲೈಸಲಿ ಬಂದು
ಹಮ್ಮಿನ ಬಿರಿದನಿಕ್ಕಿದನು ।
ಗಮ್ಮನೆ ಆ ಮಾತ ಕೇಳುತ ಸಭೆಯೆಲ್ಲ
ಇಮ್ಮಡಿ ಮಾತನಿಕ್ಕಿದರು ॥೧೧೫॥

ಘುಡುಘುಡಿಸುತ ರುದ್ರರಾಯ ಕೋಪವ ತಾಳಿ
ಹಿಡಿ ತನ್ನಿ ಲಿಂಗನಯೆನುತ ।
ಒಡನೆ ಕಂಚುಕೆಯರ ಕಳುಹಲು ಆಕ್ಷಣ
ನಡೆದು ಬಂದರು ಲಿಂಗನೆಡೆಗೆ ॥೧೧೬॥

ಪರಿಪರಿ ಬೀಡಾರವ ಮಾಡುತಿರಲಾಗ
ಇರದೆ ಬಿನ್ನೈಸಿದರಾಗ ।
ಕರ ಬೇಗ ರಾಯನು ಬರಹೇಳೆ[ದ]ನಿಮ್ಮನು
ಧುರಧೀರ ಲಿಂಗ ಬಾಯೆನಲು ॥೧೧೭॥

ನಡೆದು ಬಂದನು ಲಿಂಗ ರಾಹುತರೊಡಗೂಡಿ
ಒಡೆಯ ರುದ್ರಗೆ ಬಂದು ನಮಿಸೆ ।
ಕಿಡಿಗೆದರುತ ರಾಯ ಕೋಪದಿ ಉರಿದೆದ್ದು
ಜಡಿದು ಗರ್ಜಿಸಿದ ಲಿಂಗವನು ॥೧೧೮॥

ಕೊಟ್ಟದ ಬೇಡನ ಕರೆತಂದೆಯಿಲ್ಲಿಗೆ
ಮುಟ್ಟಿ ಬಿರಿದು ಹೊಗಳಿಸಿದೆ ।
ಸೃಷ್ಟಿಯರಾಯರ ಗಂಡನು ತಾನೆಂದು
ಇಷ್ಟುವುಳ್ಳವ ಬರಬಹುದೆ ॥೧೧೯॥

ಬಂದನೇತಕೆ ರಾಮನೋಲೈಸಲಿಲ್ಲಿಗೆ
ಗೊಂದಣ ಬಿರಿದುಳ್ಳ ಬಂಟ ।
ಹಿಂದಿನ ಪಂಥವೆಲ್ಲವ ಬಿಟ್ಟುಬರಹೇಳು
ಹಿಂದು ಬಿಡದಿರೆ ಪೋಗ ಹೇಳು ॥೧೨೦॥

ಬಲ್ಲಿದಗಲ್ಲದೆ ಬಿರಿದು ದೇವರೆ ಕೇಳು
ತಲ್ಲಣಿಸುವ ಹೇಡಿಗುಂಟೆ ।
ಅಲ್ಲಿಯು ಜಗತಾಪಿ ಮೊದಲಾದವರ ಗೆದ್ದು
ಬಲ್ಲಿದ ತಾನೆಂದು ನುಡಿದ ॥೧೨೧॥

ಉಂಟುಂಟು ಸಂಗಡಿಗನ ಬಿರಿದೆಲ್ಲವ
ಉಂಟುಮಾಡಿಯೆ ಗೆಲಿಸಿದಿಯೆ ।
ಬಂಡನಲ್ಲವೊ ಹಗೆಯಾದವ ಲಿಂಗ ನೀ
ಕಂಟಕ ನೋಡಿ ನುಡಿಲೇಸು ॥೧೨೨॥

ರಾಯನು ಕೋಪವ ತಾಳೆ ಮನ್ನೆಯರೆಲ್ಲ
ಆಯಗಾಣಿಸಿ ಮಾತನಾಡಿ ।
ಬಾಯಿಬಡುಕತನವನು ಬೇಡ ಲಿಂಗನೆ
ಕಾಯ ಸೊಕ್ಕಿನ ಮದದಿಂದ ॥೧೨೩॥

ಬಿರಿದ ಬಿಟ್ಟರೆ ರಾಮ ಇರಲಿ ಕೇಳೆಲೊ ಲಿಂಗ
ಭರದಿಂದ ಪಂಥಮಾಡಿದರೆ ।
ಮುರಿವೆನು ತನ್ನಯ ಬಲುಬಂಟತನವನು
ಕರ ಬೇಗ ಹೋಗಿ ಹೇಳೆಂದ ॥೧೨೪॥

ದುಗುಡವ ತಾಳಿದ ದೇವಿಸೆಟ್ಟಿಯ ಲಿಂಗ
ವಿಗಡ ರಾಮನ ಬಳಿಗೈದಯ ।
ಅಗಣಿತ ಬಿರಿದ ಬಿಟ್ಟರೆ ಇರ ಹೇಳೆಂದ
ಸುಗುಣ ರಾಮಯ್ಯ ಚಿತ್ರೈಸು ॥೧೨೫॥

ಅಬ್ಬರಿಸುತ ರಾಮ ಕೋಪವ ತಾಳಿದ
ಉಬ್ಬಿ ಕಾಟಣ್ಣಗಿಂತೆಂದ ।
ಹೆಬ್ಬುಲಿ ಕಂಪಿಲಸುತ ರಾಮ ಜಗದೊಳು
ಹಬ್ಬಿದ ಬಿರಿದ ಬಿಡುವನೆ ॥೧೨೬॥

ಕಟ್ಟಣೆಲ್ಲದ ದಂಡ ಕಡಿದು ಕುಪ್ಪೆಯನೊಟ್ಟಿ
ಸುಟ್ಟು ಬೊಟ್ಟಿಡುವೆ ಪಟ್ಟಣವ ।
ಮುಟ್ಟಿ ಕಾದಲು ರುದ್ರರಾಯನ ಹಿಡಿವೆನು
ದಿಟ್ಟ ಲಿಂಗನೆ ಕೇಳು ಬಿರಿದ ॥೧೨೭॥

ಆಡಿದರೇನು ಪಂಥದ ಮಾತ ಲಿಂಗಣ್ಣ
ನೋಡು ನೀಯೆನ್ನ ಕಾಳಗವ ।
ಕೂಡಿದೆವಿಬ್ಬರು ಮರೆಯದಿರೆನ್ನನು
ಬೇಡಿಕೊಂಬೆನು ಪೋಪೆನೆಂದ ॥೧೨೮॥

ನಿನ್ನ ಜೀವಕೆ ಎನ್ನ ಜೀವಯೀವೆನೊ ರಾಮ
ಇನ್ನು ಓಲೈಸೆ ರುದ್ರನನು ।
ಮನ್ನಿಸಿ ಹರಿಯಲದೇವಿಗಿಬ್ಬರು ನಾವು
ಬೆನ್ನಬಿಡೆನೊ ನಿನ್ನನೆಂದ ॥೧೨೯॥

ಭಂಡಾರ ಬೊಕ್ಕಸ ಹೆಂಡಿರ ಮಕ್ಕಳ
ತಂಡ ತಂಡದಿ ಪಯಣಮಾಡೊ ।
ದಂಡೆತ್ತಿ ಪ್ರತಾಪ ರುದ್ರನ ಬರಹೇಲೋ
ಗಂಡಾಳು ಲಿಂಗ ಹೋಗೆಂದ ॥೧೩೦॥

ಬಂದು ಲಿಂಗ ದೇವಿಶೆಟ್ಟಿಗೆ ಹೇಳಿದ
ನಿಂದು ರಾಯನ ಜಗಳವನು ।
ಇಂದು ಇಲ್ಲಿದ್ದರೆ ಕೆಡುವೆವು ನಾವಿನ್ನು
ಸಂದೇಹ ಬೇಡ ಕೇಳೆಂದ ॥೧೩೧॥

ಮುತ್ತು ಮಾಣಿಕ ನವರತ್ನ ಭಂಡಾರವ
ಮತ್ತೆ ಪೆಟ್ಟಿಗೆಯಲಿ ತುಂಬಿ ।
ಉತ್ತಮ ಹೊನ್ನ ಹಣದ ಜಾಳಿಗೆಗಳ
ಇತ್ತು ಒಂಟೆಯಲಿ ಹೇರಿದನು ॥೧೩೨॥

ಕಾಲುಕುಪ್ಪಸಗಳ ತೊಡಿಸಿ ಹೆಣ್ಣುಗಳಿಗೆ
ಆಲಸ್ಯವಿಲ್ಲದೆ ಬೇಗ ।
ಮೇಲು ಹಕ್ಕರಿಕೆಯ ಮುನ್ನೂರು ತೇಜಿಗೆ
ಸಾಲುಸಾಲಿನಲಿ ಶೃಂಗರಿಸಿ ॥೧೩೩॥

ಅತ್ತ ಹೋಗ [ಲು] ಲಿಂಗ ಇತ್ತ ಮನ್ನೆಯರೆಲ್ಲ
ಒತ್ತಿ ಚಾಡಿಯನು ಹೇಳಿದರು ।
ಚಿತ್ತೈಸು ರಾಯ ರಾಮಗೆ ಲಿಂಗನೊಂದಾದ
ಅತ್ಯಂತ ಸ್ವಾಮಿದ್ರೋಹಿಕೆಯ ॥೧೩೪॥

ಹೇಳಿದ ಚಾಡಿಯ ಕೇಳಿದ ರಾಯನು
ತಾಳಿದ ಕಡು ಕೋಪವನ್ನು ।
ಉಳಿಗದವರಿಗೆ ಬೆಸನಿತ್ತು ರಾಯನು
ಹೇಳಿ ಮನೆಯ ಮುದ್ರಿಸೆಂದ ॥೧೩೫॥

ಹರಿದು ಬಂದರು ಕಂಬಿಕಾರರು ಬೇಗದಿ
ಕರೆದು ಹೇಳಿದರು ಲಿಂಗನಿಗೆ ।
ಭರದಿಂದ ರಾಯರ ದೇವ ಕೋಪಿಸಿದನು
ಸೆರೆಮನೆಯನು ಮುದ್ರಿಸೆಂದ ॥೧೩೬॥

ಹೆಡಕು ಹಿಡಿದು ನೂಕುನೂಕೆಂದ ಲಿಂಗನು
ಒಡೆಯ ರಾಮನು ತನಗಿ[ಂದು] ।
ಸುಡುವೆ ಪಟ್ಟಣವನ್ನು ದಂಡೆತ್ತಿ ಬಂದರೆ
ಕಡಿವೆನು ಮಂತ್ರಿ ಮನ್ನೆಯರ ॥೧೩೭॥

ಕಟ್ಟಿಗೆಕಾರರು ಬಂದು ರಾಯಗೆ ಹೇಳೆ
ಮುಟ್ಟಿ ಲಿಂಗನಿಗೆ ಕೋಪಿಸಿದ ।
ಸೃಷ್ಟಿಪಾಲಕ ತನ್ನ ಒಡೆಯ [ನೀ]ನಲ್ಲೆಂದು
ಬಿಟ್ಟೋಡುತಹನೆ ಪಟ್ಟಣವ ॥೧೩೮॥

ಕರಿತುರಗವ ಜೋಡು ಮಾಡೆಂದು ರುದ್ರನು
ಭರದಿಂದ ಮಂತ್ರಿಗೆ ಬೆಸಸೆ ।
ಅರಮನೆ ಭಂಡಾರ ಬೊಕ್ಕಸ ಸಹವಾಗಿ
ತೆರಳಿ ಹೋಗುತಲಾನೆ ಲಿಂಗ ॥೧೩೯॥

ಹೆಸರುಳ್ಳ ರಾಮ ಲಿಂಗ ಒಂದಾದರು
ಹೊಸತಿದು ಲೇಸು ಲೇಸೆಂದ ।
ಬೆಸನಿತ್ತು ಮನ್ನೆಯ ಮಂಡಲಿಕರಿಗೆಲ್ಲ
ಅಸಹಾಯ ರುದ್ರನು ನುಡಿದ ॥೧೪೦॥

ಹುಯ್ಯಲು ಬರುವ ಸುದ್ದಿಯ ಕೇಳಿ ಲಿಂಗಣ್ಣ
ತಾಯಿ ತಂದೆಗಳ ಸಾಗಿಸಿದ ।
ಆಯತದಿಂದಲಿ ಕುದುರೆಯನೇರಿಸಿ
ಭಯಭೀತಿಯಿಲ್ಲದೆ ತೆರಳೆ ॥೧೪೧॥

ಸುಟ್ಟನು ಪಟ್ಟೆ ಪಟ್ಟಾವಳಿ ಹೊದಕಿಯ
ಸುಟ್ಟನುಪ್ಪರಿಗೆ ಚಾವಡಿಯ ।
ಸುಟ್ಟನು ಬತ್ತದ ಕಣಜವನೆಲ್ಲವ
ಸುಟ್ಟು ಲಿಂಗಣ್ಣ ಪೊರಮಟ್ಟ ॥೧೪೨॥

ಉರಿಗಳು ಗಗನಕ್ಕೆ ಮುಟ್ಟುವುದನು ಕಂಡು
ಬೆರಗಾಗಿ ಹುಯ್ಯಲ ಕಳುಹೆ ।
ಭರದಿಂದ ಬಂ[ದ] ತಾ ಧುರದಲಿ ಲಿಂಗಣ್ಣ
ತುರಗ ಕಾಲಾಳುಗಳು ಸಹಿತ ॥೧೪೩॥

ಬೆರಸಿತು ಹುಯ್ಯ[ಲ] ಚೂಣಿಯ ಜಗಳವು
ಕರ ಬೇಗ ಕಡಿದಾಡಿದರು ।
ತುರಗ ತುರಗ ಒಡಗೂಡಿ ರಾಹುತರೆಲ್ಲ
ಇರಿದಾಡಿದರು ಹೊಣಕೆಯಲಿ ॥೧೪೪॥

ಕಂಡು ದೂರದಲಿಂದ ದೇವಿಸೆಟ್ಟಿಯಲಿಂಗ
[ಖಂಡ] ರಾಯನ ದಳವನ್ನು ।
ಗುಂಡಿಗೆ ಒಡೆವಂತೆ ಲವುಡಿಂದ ಹೊಡೆದರೆ
ಮುಂಡಗಳುರುಳೆ ಭೂಮಿಯಲಿ ॥೧೪೫॥

ಕಂಡರು ರಾಯನ ದಳವು ಕಾಳಗ [ದಲಿ]
ತಂದ ತಂಡದಿ ಮುರಿದೊಡೆ ।
ಮಂಡಲಪತಿ ರುದ್ರರಾಯನಿಗೆ ಹೇಳಲು
ಹಿಂಡು ಗಜವ ಕಳುಹಿದನು ॥೧೪೬॥

ಮುತ್ತುವ ದಂಡನು ತತ್ತರದರಿದನು
ಚಿತ್ತಜಸಮ ರಾಮನಾಥ ।
ಮುತ್ತು ಮಾಣಿಕ ರತ್ನ ಸೂರಾಡಿದಲ್ಲಿಗೆ
ಚಿತ್ರದ ಸಂಧಿ ಐದಾಯ್ತು ॥೧೪೭॥

ಅಂತು ಸಂಧಿ ೫ಕ್ಕಂ ಪದನು ೫೪೦ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೬

❖

ಓರುಗಲ್ಲ ಯುದ್ಧ–ಬೊಲ್ಲನನ್ನು ತಂದುದು

ಕೆಂಜೆಡೆಗಳು ಸುಲಿಪಲ್ಲು ರಂಜಿಸುತಿಹ
ಕುಂಜರ ಚರ್ಮಾಂಬರನೆ ।
ಕಂಜಭವ ಶಿರವರಿದ ನಂಜುನಗೂಡ
ನಂಜುಂಡೇಶ್ವರಗೆ ವಂದಿಸುವೆ ॥೧॥

ಶ್ರೀ ಲಕ್ಷ್ಮೀವಲ್ಲಭ ಕೃಷ್ಣರಾಯನೆ [ಸ್ವಾಮಿ]
ಮೂಲೋಕವಂದ್ಯ ಪಾಲಕನೆ ।
ಲೋಲ ಚಿಂತಾಮಣಿ ಗೋಪಿವಲ್ಲಭ ನೀನು
ಪಾಲಿಸು ಮತಿಗೆ ಮಂಗಳವ ॥೨॥

ಮುತ್ತಿನ ಮಣಿಯ ಸೂಸಕ ದಂಡೆ ಭುಜಕೀರ್ತಿ
ಹಸ್ತ ಕಡಗ ಮುತ್ತಿನೋಲೆ ।
[ಬಿ]ತ್ತರದಲಿ ಮುದ್ದು ನುಡಿಯಿಂದ ಸರಸ್ವತಿ
ಉತ್ತಮ ಮತಿಯಿತ್ತು ಸಲಹು ॥೩॥

ದಿಟ್ಟ ಲಿಂಗನ ತಂದೆ ತಾಯಿ ಊರನು ಬಿಟ್ಟು
ಪೆಟ್ಟಿಗೆ ಭಂಡಾರ ಸಹಿತ ।
ಪಟ್ಟಣವನು ಬಿಟ್ಟು ಹೊರಹೊಂಟು ಕ್ಷಣದಲ್ಲಿ
ಒಟ್ಟಿಗೆ ಬಳಿಗೆ ವಹಿಲಗಲಿ ॥೪॥

ಅರಸು ರಾಮನು ಲಿಂಗ ಹೊರಹೊಂಟ ಸುದ್ದಿಯ
ಧುರಧೀರ ರುದ್ರನು ಕೇಳಿ ।
ಕರಿತುರಗವು ಮಂದಿ ಮನ್ನೆ ಎಕ್ಕಟಿಗರ
ಕರ ಬೇಗ ಬೆಸನಿತ್ತು ಕಳುಹೆ ॥೫॥

ದಿಕ್ಕು ದಿಕ್ಕಿನ ಬಾಗಿಲದಿಂದ ಹೊರಟರು
ಲೆಕ್ಕವಿಲ್ಲದ ಮಂದಿ ಕುದುರೆ ।
ಕಕ್ಕಸ ಪೌಜುದೋರುತ ಕಡಿದಾಡುತ
ಒಕ್ಕಲಿಕ್ಕಿದರು ವೈರಿಗಳ ॥೬॥

ಒಟ್ಟಿಲ ಚಕ್ರ [ಸ]ನ್ನಹ ಮಾಡಿ ಒಟ್ಟಿ [ಸೆ]
ಕಟ್ಟಾಳು ಲಿಂಗರಾಹುತನು ।
ಸೃಷ್ಟಿಪಾಲಕ ರುದ್ರರಾಯನ ಮಾರ್ಬಲ
ತಟ್ಟು ತಟ್ಟಲಿ ನಿಂದಿರಲು ॥೭॥

ಜಾಳಿಗೆ ಬಂಡಿ ಭಂಡಾರ ಬೊಕ್ಕಸಗಳ
ಮೇಳದಿ ಹೆಮ್ಮಕ್ಕಳೊಡನೆ ।
ಮಾಳವ ಮಗಧ ರಾಯನ ಹಿಂದೆ ಕಳುಹಿದ
ಲೋಲ ರಾಮನು ಜತನೆನುತ ॥೮॥

ತಂದೆ ದೇವಿಸೆಟ್ಟಿ ಲಿಂಗನ ಕಳುಹಿದ
ವಂದಿಸಿ ಕರಗಳ ಮುಗಿದು ।
ಕುಂದದೆ ಬಾಲಕರಿಬ್ಬರ ಜಗಳವ
ನಿಂದು ನೀ ನೋಡಬೇಕೆಂದು ॥೯॥

ಮತ್ತೆ ರಾಮಯ್ಯ ಲಿಂಗಣ್ಣನ ಕಳುಹಿಸಿ
ಒತ್ತಿದ ಪರಬಲಕಾಗಿ ।
ಉತ್ತಮ ತೇಜಿಯನೇರಿ ನಡೆದನಾಗ
ಕರ್ತು ಶಿವನೆ ಶರಣೆನುತ ॥೧೦॥

ಗುಂಡಬ್ರಹ್ಮಯ್ಯನ ಮನದೊಳು ನೆನೆವುತ
ತಂಡ ತಂಡದಿ ವರವ ಪಡೆದು ।
ಖಂಡೆಯ ಜಳಪಿಸಿ ಕದನಕ್ಕೆ ನಡೆದ ಪ್ರ
ಚಂಡ ಚೆನ್ನಿಗ ರಾಮನಾಥ ॥೧೧॥

ಕುದುರೆ ಬಿಲ್ಲಾಳ್ಗಳು ಹರಿಗೆ ಸಬಳದವರು
ಕದನವ ಮಾಡುತ ಬರಲು ।
ಇದಿರಾದ ಪೌಜನು ಬೆದರಿಸಿ ರಾಮಯ್ಯ
ಒದಗಿದ ಪರಬಲಕಾಗ ॥೧೨॥

ಪೊಡವಿಯ ರಾಯರಿಗಿದಿರಾಗಿ ರಾಮಯ್ಯ
ನಡೆಯೆ ಬಲವೆಲ್ಲ ಮುರಿದೊಡೆ ।
ಜಡದೇಹಿ ಮಾನ್ಯರ ಯುದ್ಧ [ದಿ ದ]ಯವಿತ್ತು
ಬಿಡುಗಡೆಮಾಡಿ ನಡೆದನು ॥೧೩॥

ಮತ್ತೆ ರಾಮಯ್ಯನು ತನ್ನ ಪರಿವಾರಕ್ಕೆ
ಚಿತ್ತದಿ ಬೆಸನಿತ್ತು ಕಳುಹೆ ।
ಕಿತ್ತ ಕಠಾರಿಯ ಕಟ್ಟಿಗೆ ಮನ್ನೆರೆಲ್ಲ
ಮುತ್ತಿತು ರುದ್ರನ ದಂಡ ॥೧೪॥

ಮುಂದಲೆ ಹಿಡಿದಿರಿದಾಡಿದರಾಕ್ಷಣ
ಬಂದು ರಾಮನ ಪರಿವಾರ ।
ಕುಂದದೆ ಕುದುರೆ ರಾಹುತರನು ಕಡಿದಾಗ
ಬಂದಿರಿದರು ಗಜಗಳನು ॥೧೫॥

ಎಡಬಲದಲಿ ಕಾಲ ಕಡಿದು ಇಕ್ಕುತಲಾಗ
ಜಡಿದು ರುದ್ರನ ದಂಡ ಕವಿದು ।
ಸಿಡಿಲು ಪರ್ವತಕೆ ಎರಗುವಂತೆ ಎರಗಲು
ಕಡುಗಲಿ ರಾಮನ ಫೌಜು ॥೧೬॥

ಹಿಮ್ಮೆಟ್ಟಿದಂಥ ಫೌಜ[ನು] ಕಂಡು ರಾಮಯ್ಯ
ಉಮ್ಮಾಯದಲಿ ನಸುನಗುತ ।
ಹೆಮ್ಮೆಯ ಮುರಿವೆನು ರುದ್ರರಾಯನದಂಡ
ಒಮ್ಮೆ ಲಿಂಗಣ್ಣ ನೀ ನೋಡೊ ॥೧೭॥

ಎಡವಂಕ ಬಲವಂಕವನು ಮಾಡಿ ರಾಮಯ್ಯ
ನಡೆದನು ಕಡು ವಹಿಲದಲಿ ।
ನುಡಿದವು ಬಿರಿದಿನ ಕಾಳೆಯು ಭೇರಿಯು
ಪೊಡವಿ ರಾಯರ ಗಂಡನೆಂದು ॥೧೮॥

ಅಣ್ಣ ಕಾಟಣ್ಣನು ದೇವಿಶೆಟ್ಟಿಯ ಲಿಂಗ
ತನ್ನೆಪ್ಪತ್ತೆರಡು ನಾಯಕರು ।
ಚೆನ್ನಿಗರಾಮನು [ಒಡಗೂಡಿ] ತಾಕಿದ
ಮನ್ನೆಯ ಮಕುಟವರ್ಧನರ ॥೧೯॥

ಉರಗ ತಿಂಥಿಣಿಗೆ ಗರುಡನು ಬಂದು ಕವಿದಂತೆ
ಕರಿಗಳಿದ್ದೆಡೆಗೆ ಮರಿಸಿಂಹ ।
ಹೊರಳಿ ಹೊಡೆಯೆ ರುದ್ರರಾಯನ ಪರಿವಾರ
ಮುರಿದು ಜಜ್ಜರಿಸಿ ಓಡಿದರು ॥೨೦॥

ಸಂಗರದೊಳು ಚೆಲ್ಲವರಿದು ರಾಮಯ್ಯನು
ಭಂಗಿಸಿ ಪಿಡಿಯೆ ಮನ್ನೆಯರ ।
ಮಂಗಳುತ್ಸಹ ರಣದೇವಿ ನಲಿದಾಡಿತು
ತೋಂಗಿಟ ಧಿಮಿಕೆಂದು ನುಡಿಯೆ ॥೨೧॥

ಉಂಡು ದಣಿಯೆ ಭೂತ ರಾಮನ ಕೊಂಡಾಡೆ
ಖಂಡೆಯದಲಿ ಕಡಿ ಕಡಿದು ।
ಖಂಡ್ರಿಸಿ ತುರಗ ಹಲ್ಲಣದ ರಾಹುತರನು
ತುಂಡಾಗಿ ಕೆಡಹಿದ ಧರೆಗೆ ॥೨೨॥

ಮಲೆವ ರಾಯರ ಗಂಡ ಸಲುವುದು ಬಿರುದೆಂದು
ಛಲದಂಕ ಲಿಂಗ ಕೊಂಡಾಡೆ ।
ಬಲವೆಲ್ಲ ಒಂದಾಗಿ ರುದ್ರನ ದಂಡೆಲ್ಲ
ಒಲಿದು ಜಗಳವ ಮಾಡಿದರು ॥೨೩॥

ನೆಟ್ಟಗೆ ದೇವಿಶೆಟ್ಟಿಯ ಲಿಂಗ ರಾಮನು
ಹಿಟ್ಟುಗುಟ್ಟ[ಯೆ] ರುದ್ರ ಬಲವ ।
ದಿಟ್ಟರು ರಣಮಯ ಮಾಡುತ ಬರಲಾಗ
ಬಿಟ್ಟಲ್ಲಿ ಬಿಡದೆ ಓಡಿದರು ॥೨೪॥

ತತ್ತರದರಿವುತ ಒತ್ತಿ ಮುರಿದೊಟ್ಟುತ
ಮತ್ತೆ ತುರಗ ಕಡಿವಡೆದು ।
ರಕ್ತದ ಕಡಲು ಹರಿಯೆ ಧರಣಿಯ ಮೇಲೆ
ಸುತ್ತಲಿ ಕರುಳುಗಳುಸ್ಸರಿದು ॥೨೫॥

[ರಸೆ] ಬಾಯಿದೆರೆಯದೆನುತ ರುದ್ರನ ದಂಡು
ಬಿಸಿರಕ್ತ ಸುರಿಸುರಿವುತಲಿ ।
ಅಸಮ ಸಾಹಸ ರಾಮ ಬೆನ್ನಟ್ಟಿ ಬರುತಿರೆ
ಮುಸುಕಿ ಹೊಕ್ಕರು ಪಟ್ಟಣವ ॥೨೬॥

ಕೇಳಿದ ದಂಡು ಮುರಿದ ಸುದ್ದಿ ರುದ್ರನು
ತಾಳಿದ ಮನಕೆ ಕೋಪವನು ।
ಕೋಳಾಹಳವ ಮಾಡಿ ಕಡಿವೆನು ರಾಮನ
ದಾಳಿ ಮಾಡುವೆ ಹೊಸಮಲೆಗೆ ॥೨೭॥

ಇದ್ದಂಥ ಮುಕುಟವರ್ಧನರ ನೋಡಿದ ರಾಯ
ಗದ್ದುಗೆಯನು ಹೊಯಿದೆದ್ದ ।
ಬಿದ್ದ ಚರಣದಲ್ಲಿ ಎಪ್ಪತ್ತುರಾಜನು
ರುದ್ರೇಶ ಬೆಸನ ಚಿತ್ತೈಸು ॥೨೮॥

ಮನ್ನೆಯ ಮಂಡಲಿಕರು ಪೋಗಿ ರಾಮನಿಗೆ
ಬೆನ್ನಕೊಟ್ಟರು ಕಂದ ಕೇಳು ।
ನಿನ್ನ ಹವಣೆ ಸಮರಕೆ ನಿಲ್ಲುವರಾರು
ಇನ್ನು ನಾ ಹೋಗುವೆನೆನಲು ॥೨೯॥

ಗೂಳೆಯ ತೆಗೆಸುವೆ ಹೊಸಮಲೆ ದುರ್ಗಕ್ಕೆ
ಹೇಳ ಹೆಸರ ಕೆಡಿಸುವೆನು ।
ಪಾಲಿಸು ಬೆಸನ ಎನಗೆ ಎನುತ ಕುಮಾರ
ಮೇಲೆ ತಂದೆಯೊಳು ಇಂತೆಂದ ॥೩೦॥

ಎಪ್ಪತ್ತುರಾಜನ ನುಡಿಗೇಳಿ ರಾಯನು
ಒಪ್ಪಿಕೊಂಡನು ಸಂತೋಷದಲಿ ।
ಒಪ್ಪಿಸಿದನು ಮಂತ್ರಿ ಮಂಡಲಿಕರನೆಲ್ಲ
ಒಪ್ಪದಿ ಪಯಣವಾಗೆಂದ ॥೩೧॥

ಬೊಲ್ಲನ ತರಹೇಳಿ ಮಲ್ಲಯ ಸಾಣೀಗೆ
ಅಲ್ಲಿ ರುದ್ರನು ಕಳುಹಿದನು ।
ಬಲ್ಲಿದ ಗೆಳೆಯರು ಕೂಡಿ ಅರವತ್ತುಮಂದಿ
ಅಲ್ಲಿಗೆ ನಡೆದರಾಕ್ಷಣದಿ ॥೩೨॥

ಉನ್ನತ ವಜ್ರಗಾರೆಯ ನೆಲಮಾಳಿಗೆ
ಚಿನ್ನದುಪ್ಪರಿಗೆಯ ಕೆಳಗೆ ।
ಬಿನ್ನಣ ಬೀಗ ಮುದ್ರೆಯ ತೆಗೆದೊಳಯಕ್ಕೆ
ಚೆನ್ನ ಮಲ್ಲಯ್ಯನೊಳಹೊಕ್ಕ ॥೩೩॥

ಚಿನ್ನದ ಮುಖರಂಬ ರನ್ನದ ಕಡಿವಾಣ
ಉನ್ನತ ರತ್ನದಲ್ಲಣವು ।
ಚಿನ್ನದ ಪಟ್ಟೆಯ ಬಿಗಿದು ಶೃಂಗರಮಾಡಿ
ಹೊನ್ನ ಅಂದುಗೆ ಕಾಲಿಲಿಟ್ಟ ॥೩೪॥

ಇಂದ್ರಗೋಪದ ಜೋಡ ಕಟ್ಟಿಸಿದ ಮತ್ತಾಗ
ಮುಂದೆ ಸಾಣಿಯ ಗೊಂಡೆ ಕಟ್ಟಿ ।
[ಚೆಂದದ] ಪಂಚಜಲ್ಲಿಯು ಹೊಕ್ಕುಳಗಂಟೆ
ಅಂದು ಶೃಂಗರಿಸಿ ಬೊಲ್ಲವನು ॥೩೫॥

ತರಕಸೆ ಸಿಂಗಾಡಿ ಹಿಡಿದಂಬು ಬತ್ತಳಿಕೆ
ಮೆರವ ಖಂಡೆಯವು ಬಲ್ಲೆಯವು ।
ಧುರದೊಳು ವೈರಿಯ ಹಿಡಿ [ವ] ಮರುಳಗೈಯ
ಭರದಿ ಕಟ್ಟಿದರು ಪಾಯವನು ॥೩೬॥

ಬಾಯ ಹೊಮ್ಮಿಗ [ವ] ಹಾಕಿದರೆಡಬಲದಲ್ಲಿ
ಆಯತದಿಂದ ಕಡಿವಾಣ ।
ಬಾಯೊಳಗಿಕ್ಕಿ ಸರಪಳಿಗಳ ತೆಗೆದಾಗ
ರಾ [ಯ] ತೇಜಿಯ ಪಿಡಿದಿಹರು ॥೩೭॥

ಮಾಳಿಗೆ ಹೊರಡಿಸಿ ತಂದರು ಬೊಲ್ಲನ
ಬಾಳ ಮನ್ನೆಯರು ಒಂದಾಗಿ ।
ಆಳಿದೊಡೆಯ ರುದ್ರರಾಯನೆ ನೋಡೆಂದು
ದಾಳಿಟ್ಟು ದೆಸೆಗೆ ಲಂಘಿಪುದ ॥೩೮॥

ದೆಸೆಗೆ ಲಂಘಿಪ ಕರ ಚೆಲ್ವ ಬೊಲ್ಲನ ಕಂಡು
ವಿಸ್ಮಯಬಟ್ಟು ಮನದೊಳು ।
ಕುಸುಮ ಮಲ್ಲಿಗೆ ಪುಷ್ಪ ಗಂಧ ಅಕ್ಷತೆಯಿಂದ
ಹೊಸಪರಿ ಪೂಜೆ ಮಾಡಿದರು ॥೩೯॥

ಶೃಂಗಾರ ಬೊಲ್ಲ [ಗೆ] ಹೆಂಗಳರಸಿಯರು
ಮಂಗಳಾರುತಿಯನು ಬೆಳಗೆ ।
ಅಂಗಜಸಮ ರುದ್ರರಾಯ ವಂದಿಸಿದನು
ಹಿಂಗದೆ ಎಮ್ಮ ಸಲಹೆಂದು ॥೪೦॥

ತನ್ನ ಕುಮಾರ ಎಪ್ಪತ್ತುರಾಜಗೆ ರಾಯ
ಮನ್ನಣೆ ಬೊಲ್ಲನ ಕೊಟ್ಟ ।
ಉನ್ನತ ಕಟಕ ಕಂಠಮಾಲೆ ಪೆಂಡೆಯವ
ಚೆನ್ನಾಗಿ ಶೃಂಗರಿಸಿದನು ॥೪೧॥

ಪುಲ್ಲಶರನ ರೂಪ ಎಪ್ಪತ್ತುರಾಜನು
ಮಲ್ಲಗಾಸೆಯನು ಕಟ್ಟಿದನು ।
ತಲ್ಲಣಿಸುವ ವೈರಿಯ ಎದೆದಲ್ಲಣ
ಒಳ್ಳೆಯ ಶಾಲು ಸುತ್ತಿದನು ॥೪೨॥

ಪರಿಪರಿ ಶೃಂಗಾರವಾಗಿ ಎಪ್ಪತ್ತುರಾಜ
ಭರದಿಂದ ಪಿತಗೆ ನಮಿಸಿದ ।
ಧುರವ, ಗೆಲುವುದಕೆ ಪರಸಲು ಆಕ್ಷಣ
ತುರಗವನೇರಿ ತಾ ನಡೆದ ॥೪೩॥

ಮುತ್ತಿನ ಸತ್ತಿಗೆ ಒಡೆಯ ಕುಮಾರಗೆ
ಇತ್ತರದಲಿ ಮನ್ನೆಯರು ।
ಒತ್ತಿಲಿಯಾನೆ ಕುದುರೆ ತಳತಂತ್ರವು
ಮೊತ್ತದಿಂದಲಿ ನಡೆತರಲು ॥೪೪॥

ತಮ್ಮಟ ಭೇರಿ ನಿಸ್ಸಾಳ ಸೊಳೈಸಲು
ಭೂಮಿಯು ನಡುಗುವಂದದಲಿ ।
ಸುಮ್ಮಾನದಿಂದ ಪಟ್ಟಣವನು ಹೊ[ರವೊಂಟ]
ಕಮ್ಮಲರ್ಸಮರೂಪನಾಗ ॥೪೫॥

ಎತ್ತನೋಡಿದರತ್ತ ಆನೆ-ಕುದುರೆ ಮಂದಿ
ಮೊತ್ತದ ಮಗುಟವರ್ಧನರು ।
ಸುತ್ತ ನೋಡಲು ಕಣ್ಣು ಮನಗೊಂಬದೆಂಬಂತೆ
ಮೊತ್ತದಿ ನಡೆದ ಕಾಳಗಕೆ ॥೪೬॥

ಹರಿಗೆ ಬಿಲ್ಲಾಳು ಸಬಳ ಕುದುರೆಗಳು
ತರತರದ ಪೌಜಮಾಡಿಸಿದ ।
ಕರಿಘಟೆ ತುರಗ ಕಾಲಾಳುಗಳೆಷ್ಟೆಂದು
ಬರೆದು ಲೆಕ್ಕಿಸಲೆನ್ನಳವೆ ॥೪೭॥

ರಣವ ಕಾಣುತ ಬೊಲ್ಲ ಕುಣಿದು ಕೆಕ್ಕರಿಸುತ
ತೃಣಕೆ ಲೆಕ್ಕಸದೆ ಮನ್ನೆಯರ ।
ಎಣಿಕೆಗೊಳ್ಳದೆ ಹಿಂದೆಮುಂದೆ ಕೊಲ್ಲುತ ಬರೆ
ಹೊಣಕೆಲಿ ಹೊಯ್ದಿತು ದಂಡ ॥೪೮॥

ಕಕ್ಕಸ ಬೊಲ್ಲನ ಕಂಡು ರಾಮಯ್ಯನು
ಗಕ್ಕನೆ ಲಿಂಗನ ಕರೆದು ।
ಲೆಕ್ಕಿಸದಿದು ವೈರಿಯ ದಂಡ ಬೊಲ್ಲನು
ಸಿಕ್ಕುವ ಪರಿ ಹೇಗೆನುತ ॥೪೯॥

ಬೊಲ್ಲನ ವಿವರವ ಪೇಳುವೆ ರಾಮಯ್ಯ
ಬಲ್ಲಿದ ಮುಂಗಲನಲ್ಲಿ ।
ಒಳ್ಳೆಯ ಮಂಗಳ ಬೊಲ್ಲಗೆ ಹುಟ್ಟ[ಲು]
ಹೊಲ್ಲದ ದಿನದಲ್ಲಿ ಪಗಲೆ ॥೫೦॥

ಅಸಮಶಾಸ್ತ್ರಗಳ ಕೇಳಿ ಮುಂಗಲರಾಯ
ಎಸೆವ ಕುದುರೆ ಲಕ್ಷಣವ ।
ವಿಷಗಳಿಗೆಯಲಿ ಪಗಲೆ ಪುಟ್ಟಿತು ಬೊಲ್ಲ
ಹೊಸ ಪರಿಯಿದು ಒಳಿತಲ್ಲ ॥೫೧॥

ಪೊಡವಿಗೆ ಹೊಸಪರಿ ತೇಜಿ ಹೊಲ್ಲಹದೆಂದು
ಒಡೆಯ ಮುಂಗಲಗೆ ಹೇಳಿದರು ।
ತಡೆಯದೆ ಲಾಯದಿ ಇರಬಾರದುಯೆಂದು
ಕಡೆಗೆ ಕಟ್ಟೆಂದರಾಕ್ಷಣದಿ ॥೫೨॥

ಉತ್ತಮ ತೇಜಿಯ ಸಾಕ್ಷಿ ಮುಂಗಲರಾಯ
ಮತ್ತೆ ದಿಳ್ಳಿಯ ಸುರಿತಳಿಗೆ ।
ಇತ್ತು ಕಳುಹೆ ಪರಿಚರರ ಕೈಯಿಂದಲಿ
ಚಿತ್ರದಿ ತಂದೊಪ್ಪಿಸಿದರು ॥೫೩॥

ತುರಗ ಲಕ್ಷಣ ಕರ ಕೇಳಿದ ಸುರಿತಾಳ
ಇರಬಾರದಿದು ಲಾಯದೊಳಗೆ ।
ಭರದಿಂದ ಪಗಲಿನ ವೇಳ್ಯದಿ ಪುಟ್ಟಿತು
ಕರ ಬೇಗ ಮಾರಹೇಳಿದನು ॥೫೪॥

ಅಂದಿನ ದಿನದಿ ನಮ್ಮವು ಹೋಗಿರಲಾಗಿ
ಒಂದು ಸಾವಿರ ಕುದುರೆಯನು ।
ಚಂದದಿಂದಲಿ ಬೇಹರಮಾಡಿಕೊಳುತಿರೆ
ತಂದು ತೋರಲು ಕೊಂಡರಿವರು ॥೫೫।

ಒಪ್ಪುವ ಮುಂಗಲ ಸುರಿತಾಳ ಕುದುರೆಯ
ತಪ್ಪಲ ಲಾಗುವೇಗವನು ।
ಚಪ್ಪನ್ನ ದೇಶಕ್ಕೆ ಅರಿದಪ್ಪ ಬೊಲ್ಲನ
ಇಪ್ಪ ಇರವ ಕಾಣರೆಂದ ॥೫೬॥

ತಂದು ನಮ್ಮವರು ಕುದುರೆಯನೊಪ್ಪಿಸುತಿರೆ
ನಿಂದು ನೋಡಿದ ರುದ್ರರಾಯ ।
ಅಂದು ಲಾಕ್ಷಣಿಕರು ಬೇಡೆಂದ ಕುದುರೆಯ
ಬಂದು ಎಪ್ಪತರಾಜ ಕಂಡ ॥೫೭॥

ಎಪ್ಪತ್ತುರಾಜನು ಬೊಲ್ಲನ ನೋಡಿದ
ತಪ್ಪದೆ ನಾಲ್ಕು ವೀದಿಯಲಿ ।
ಕುಪ್ಪಳಿಸುತ ಕುಣಿವುತ ಪುಟನೆಗೆಯಲು
ಒಪ್ಪಿದ ತನಗಿರಲೆಂದು ॥೫೮॥

ಬೊಲ್ಲನು ಎಪ್ಪತ್ತು ರಾಜಗೆ ಬಂದುದ
ಎಲ್ಲವನೊರೆದ ರಾಮಯ್ಯಗೆ ।
ಬಲ್ಲಿದ ಲಿಂಗರಾಹುತ ಹೇಳಲಾಕ್ಷಣ
ಅಲ್ಲಿ ಜಗಳವು ಮೋಹಿಸಿತು ॥೫೯॥

ಮುತ್ತಿದ ಪವುಜನು ತತ್ತನೆ ತರಿದಲ್ಲಿ
ಕತ್ತರಿಗೋಲ್ಗಳಿಂ ದೆಸೆಯಲಿ ।
ಕತ್ತಲೆಗವಿದು ಕಾಲಾಳೆಲ್ಲ ಒರಗಲು
ಮತ್ತಾಗ ನೋಡಿ ಕಾಳಗವ ॥೬೦॥

ತೃಣಕೆ ಲೆಕ್ಕಿಸ[ದು] ರಾಮನ ಪರಿವಾರವ
ಗಣಪತಿರಾಯನ ದಂಡು ।
ರಣದೊಳು ಚಲ್ಲವರಿದು ಕಡಿಯಲು ಮುಂಡ
ಕುಣಿದಾಡಿದವು ತಮತಮಗೆ ॥೬೧॥

ಬಸವನ ಹರಿಗೆಯ ಬಿರಿದಿನ ಬಂಟರು
ಕುಸರಿದರಿದರರಿ ಭಟರ ।
ಬಿಸಿಯ ರಕ್ತದ ಕಡಲೊಳಗೆ ಪರಿದು ತಲೆ
ಕುಸಿದು ಬಿದ್ದಿತು ರಣದೊಳಗೆ ॥೬೨॥

ಬಿರಿದಿನ ಎಕ್ಕಟಿಗರು ಸಾವುದ ಕಂಡು
ಧುರಕೆ ನಡೆದ ರಾಮನಾಥ ।
ಕರ ಬೇಗ ಲಿಂಗನ ಕರೆದು ರಾಮಯ್ಯನು
ಪರಬಲಕಿದಿರಾಗಿ ನಡೆದ ॥೬೩॥

ಸಲಿಲಪಡೆದು ಲಿಂಗ ಬಲವ ಕೊಡಲು ಬಂದ
ಬಲವು ಎಲ್ಲಕೆ ಭಯಂಕರನು ।
ಮಲೆತ ಗಜವು ಐನೂರು ತೇಜಿಗಳಿಂದ
ಗೆಲಿವರ ವೈರಿಯಗಂಡ ॥೬೪॥

ಅಟ್ಟಗೋಲಿನ ಸೂಲಂಗಿಯ ಗುಡಿಗಟ್ಟಿ
ನೆಟ್ಟನೆ ಹಿಡಿದು ರಣದೊಳು ।
ಕಟ್ಟಾಳು ಬೀಸು ಹಗ್ಗದಿ ಪಾಯದಳ ಬಂದು
ಮುಟ್ಟಿ ಹನ್ನೆರಡು ಸಾವಿರವು ॥೬೫॥

ಅನ್ನವನುಂಡು ಬೆಳೆದನು ಲಿಂಗಣ್ಣನು
ಮುನ್ನ ರುದ್ರಗೆ ಹಗೆಯಾದ ।
ಮನ್ನಣೆಯುಳ್ಳ ಮಾದಿಗರ ಹಂಪನು ಬಂದು
ಸನ್ನಾಹದಲಿ ನಿಂದನಾಗ । ॥೬೬॥

ಕಟ್ಟಾಳು ತೇಜಿಯನೇರಿ ರಣದಲಿ ಬಂದು
ನೆಟ್ಟನೆ ಟಮುಕು ಮಾಡಿಸಿದ ।
ಸುಟ್ಟನು ಪೆಟ್ಟಿಯ ಬಾಣಂಗಳಿಂದಲಿ ಆಗ
ಮುಟ್ಟಿ ನುಡಿಯೆ ಕಾಳೆ ಬಿರಿದ ॥೬೭॥

ಕದನ ಕೋಳಾಹಳ ಕದನ ಪ್ರಚಂಡನು
ಇದಿರಾದ ವೈರಿಯ ಗಂಡ ।
ಮದವ ಮುರಿವ ಲಿಂಗ ಬರುತಾನೆ ನೋಡೆಂದು
ಒದರುತ ಕಹಳೆ ಸಾರಿದವು । ॥೬೮॥

ಇಳೆಯೊಳು ಮಂಜು ಮೊಟ್ಟೆಯ ಕಟ್ಟುವ ಲಿಂಗ
ಮಳಲಲಿ ಸರವಿಯ ಹೊಸೆವ ।
ಬಳಿಯಲುಟ್ಟವನು ಬಾರದ ಮಾರಿಗೆನುತಲಿ
ಘಳಿಲನೆ ಕಹಳೆ ಸಾರಿದವು ॥೬೯॥

ಹಾದಿಯ ಜಗಳವ [ಹಣವಡ್ಡಕೆ] ಕೊಂಬ
ಬೀದಿಯ ಜಗಳವನೆಲ್ಲ ।
ಸಾಧಿಸಿ ಬೀಳಬಡಿಯೆ ಕೊಂಬ ಲಿಂಗಣ್ಣ
ವಾ [ದ] ಬೇಡೆಂದು ಸಾರಿದವು ॥೭೦॥

ಕಡಿಕಡೆನುತ ಲಿಂಗ ನಡೆದನು ರಣದೊಳು
ಒಡನೆ ಕಾಲಾಳು ಬಾಣದಲಿ ।
ಜಡಿದೆಸೆಯಲು ರುದ್ರರಾಯನ ಪರಿವಾರ
ಮಡಿದರು ರಣಭೂಮಿಯೊಳಗೆ ॥೭೧॥

ಗಕ್ಕನೆ ಖಂಡೆವ ಜಳಪಿಸಿ ಲಿಂಗಣ್ಣ
ಹೊಕ್ಕನು ಪರಬಲದೊಳಗೆ ।
ಸಿಕ್ಕಿದ ಕಾಲಾಳ ಮನ್ನಿಸಿ ಬಿಡುತಲಿ
ಒಕ್ಕಲಿಕ್ಕಿದನು ವೈರಿಗಳ ॥೭೨॥

ಕೊಗ್ಗಗತ್ತಿಯ ಕೆಡಗಡಿದು ಮಾದಿಗ ಹಂಪ
ಭಂಗಿಸಿ ಹರಿಗೆಯ ಭಟರ ।
ಹಿಂದೆ ತಲೆಗಳ ಕಡಿದು ಸಾಸಿರವನು
ಲಿಂಗ ಗೆಲಿದು ನಿವಾಳಿಸಿದ ॥೭೩॥

ಅಟ್ಟಗೋಲಿನ ಸೂಲಂಗಿ ಮರಿಯಾನೆ
ಗಟ್ಟಿ ಕಾಲಾಳು ಮೇಲಾಳು ।
ಮುಟ್ಟಿ ತಿವಿದು ಬಲುವುಗಳಿಂದ ಕಡಿಯಲು
ನೆಟ್ಟನೆ ಕರುಳು ಚೆಲ್ಲಿದವು ॥೭೪॥

ಬೀಸುವ ಹಗ್ಗದ [ಹೊ]ರೆಗಳು ರಣದೊಳು
ಬೀಸಿ ಕಾಲಾಳ ಮೇಲಾಳ ।
ಸಾಸಿರ ಮಂದಿಯ ಹಿಡಿಯಾಳ ಹಿಡಿತಂದು
ಸಾಸುಳ್ಳ ಲಿಂಗ ತೋರಿಸಿದ ॥೭೫॥

ಇತ್ತರದಲಿ ತಲೆಗಳ ಬೆಟ್ಟನೊಟ್ಟುತ
ಮತ್ತೆ ರಾಮಯ್ಯನ ಭಟರು ।
ತತ್ತನೆ ತರಿದುವ ಕಂಡ ರುದ್ರನ ಮಗ
ಅತ್ತ [ಲೆ] ಬೆರಗಾಗಿ ನಿಂದ ॥೭೬॥

ರಣ ಮುರಿದುದ ಕಂಡು ಎಪ್ಪತ್ತುರಾಜನು
ರಣವ ಭರದಿಂದ ತುಡುಕಿದನು ।
ಗರುವುಳ್ಳ ಲಿಂಗನ ಬಲವ ಕಡಿಯಲು
ಇರದೆ ಓಡಿತು ದೆಸೆದೆಸೆಗೆ ॥೭೭॥

ಮುರಿದ ದಳವ ನೋಡಿ ಎಪ್ಪತುರಾಜನು
ಬೆರಸಿ ಹೊಕ್ಕನು ರಣದೊಳಗೆ ।
ಬರಸಿಡಿಲೆರಗುವಂದದಿ ವೈರಿಯ ದಂಡು
ವೆರಸಿ ಭೂತಗಳ ತಣಿಸಿದ ॥೭೮॥

ಅಲ್ಲಿಗಲ್ಲಿಗೆ ಗಜತುರಗ ರಾವುತರನು
ಭಲ್ಲೆಯದಲಿ ತಿವಿತಿವಿದು ।
ನಿಲ್ಲದೆ ಎಪ್ಪತುರಾಜನೊಡೆಂದರು
ಬಲ್ಲಿದ ರಾಯ ರಾವುತರು ॥೭೯॥

ರಣಮುಖ ನಿಶ್ಯಂಕಮಲ್ಲ ಎಪ್ಪತುರಾಜ
ರಣದಿಂಡಿ ಬೊಲ್ಲನ ಏರಿ ।
ಮಣಿಯ ಬಲ್ಲೆಯದಲ್ಲಿ ಇರಿವುತ ಬಂದಾಗ
ಅಣಿಮುರಿದೊಡೆ ಲಿಂಗಣ್ಣ ॥೮೦॥

ಕೆಲಬರನೊದೆದು ಕೊಲುತಲಿರೆ ಬೊಲ್ಲನು
ಕೆಲಬರ ಕಚ್ಚಿ ಸೀಳು [ತಿರೆ] ।
ಕೆಲಬರ ಎಪ್ಪತ್ತುರಾಜನು ಕೊಲ್ಲು [ತಿರೆ]
ಬಲವೆಲ್ಲ ಮುರಿದೋಡುತಿರಲು ॥೮೧॥

ಖಂಡೆಯ ಝಳಪಿಸಿ ಕಡಿದಾಡಲಿಬ್ಬರು
ಕೆಂಡದ ಮಳೆ ಸುರಿದಂತೆ ।
ತಂಡ ತಂಡದಲಿ ಹೊಯಿದಾಡಲು ಲಿಂಗಣ್ಣ
ಕಂಡು ಹಿಮ್ಮೆಟ್ಟಿ ಓಡಿದನು ॥೮೨॥

ರಸ್ತೆ ಬಾಯಿದೆರೆಯದೆಂಬಂತೆ ಲಿಂಗನ ದಂಡು
ದೆಸೆಗೆಟ್ಟು ಮುಂದೋಡುತಿರಲು ।
ಅಸಹಾಯ ಶೂರ ರಾಮಯ್ಯನು ಕಂಡಾಗ
ಮುಸುಕಿದ ಬಲವ ಚಂದದಲಿ ॥೮೩॥

ದಂಡಿಗಭಯವಿತ್ತು ಗಂಡುಗಲಿ ರಾಮಯ್ಯ
ಗುಂಡಬ್ರಹ್ಮಗೆ ಶರಣೆಂದು ।
ಖಂಡೆಯ ಬಲಿದು ರಣಕೆ ನಡೆದನಾಗ
ಹಿಂಡು ಗಜಕೆ ಕಲಿಸಿಂಹ ॥೮೪॥

ಕತ್ತಳನೆಂಬ ತೇಜಿಯನೇರಿ ರಾಮಯ್ಯ
ನೆತ್ತಿ ಬಲ್ಲೆಯಲಿರಿವುತಲಿ ।
ಮೊತ್ತದ ಪರಿವಾರ ಲಿಂಗರಾಹುತ ಸಹ
ಮತ್ತೆ ಜಗಳವನು ಮಾಡಿದರು ॥೮೫॥

ಉಭಯದಳವು ಹಿಮ್ಮೆಟ್ಟಿ ಕಡಿದಾಡಿತು
ಪ್ರಭೆ ಮಸುಳಿತು [ತಿರೆ]ಯನು ।
ಶಬರ ಬಲದ ಕೂಡಿ ಕಡಿದು ಎಪ್ಪತ್ತುರಾಜ
ವಿಭವ ನಿಂದನು ರಣದೊಳಗೆ ॥೮೬॥

ಅಭಯವನಿತ್ತನು ಮನ್ನೆಯರೆಲ್ಲಕೆ
ವಿಭವದೋರಿದ ರಾಮನಾಥ ।
ಅಬ್ಬರಿಸುತಲಾಗ ಮುಂದಕ್ಕೆ ನಡೆದನು
ಕೊಬ್ಬಿದ ರಿಪುಗಳ ಸೀಳಿ ॥೮೭॥

ಹಬ್ಬಿದ ಧೂಳವು ಮಬ್ಬು ಮುಸುಕಲಾಗ
ಒಬ್ಬರೊಬ್ಬರು ಕಡಿದಾಡಿ ।
ತಬ್ಬಿಬ್ಬುಗೊಳುತಲಿ ತಮ್ಮವರ ತಬ್ಬುತ
ಸಬ್ಬದಳವು ಕಳವಳಿಸೆ ॥೮೮॥

ಕುಪ್ಪೆಗೆಡಹಿ ತಲೆ ಮನ್ನೆರ ಕಡಿವುತ
ಕಪ್ಪಗೊಳುತ ಪ್ರಾಣಗಳನು ।
ಎಪ್ಪತ್ತು ರಾಜಗೆ ಇದಿರಾದ ಕದನಕ್ಕೆ
ಪುಷ್ಪಗೋಲನ ಸಮರೂಪ ॥೮೯॥

ಸಿಂಗದ ಮರಿಯೆ ರಾಮನೆ ನಿನ್ನ ಬಿರಿದನು
ಹಿಂಗದೆ ಪೊಗಳುವುದಳವೆ ।
ಸಿಂಗಾಡಿ ಸರಳ ನೋಡೆನುತೆಪ್ಪತ್ತುರಾಜ
ಭಂಗೀಸುತಲಿ ತೆಗೆದಿಟ್ಟ ॥೯೦॥

ಹುಸಿಹುಸಿ ಎಪ್ಪತ್ತುರಾಜನೆ ಬಾಣವ
ಕುಸುರಿದರಿ[ವೆ] ನೀ ನೋಡೋ ।
ಅಸಮಬಲ್ಲಿದ ರಾಮ ತೆಗೆದೆಸೆಯಲು ಬೇಗ
ಹೊಸ ಪರಿ ಹೊಳೆದು ತಪ್ಪಿಸಿದ ॥೯೧॥

ಕಡುಗಲಿಗಳು ಬಾಣಗಳಿಂದ ಕಡಿದಾಡೆ
ಒಡನೆ ಖಂಡೆಯದಿ ಕಡಿಕಡಿದು ।
ತಡೆಯದೆ [ಉಬ್ಬಲಿ] ಕಡಿದಾಡಿ ಇಬ್ಬರು
ಸಿಡಿಲು ಸಿಡಿಲು ತಾಕುವಂತೆ ॥೯೨॥

ತುಂಡು ತುಂಡುಗಳಾಗಿ ಕಡಿದಾಡಿ ಇಬ್ಬರು
ಖಂಡೆಯದಲಿ ಹೊಯಿದಾಡೆ ।
ಗುಂಡಬ್ರಹ್ಮಯ್ಯಗೆ ಶರಣೆಂದು ರಾಮನು
ಗಂಡಾಳು ತಿರುವಿ ಹೊಯ್ದನು ॥೯೩॥

ಫಡಫಡೆನುತ ರಾಮ ಎಪ್ಪತ್ತುರಾಜನ
ತಡೆದನು ತನ್ನ ಲವುಡಿಯಲಿ ।
ಪೊಡವೀಶ ರಾಮನು ಉಗ್ರಕೋಪವ ತಾಳಿ
ಹೊಡೆದನು ಶಿರಬಿರಿವಂತೆ ॥೯೪॥

ಲವುಡಿಯ ಹುಯಲಿಗೆ ಎಪ್ಪತ್ತುರಾಜನು
ತವಳಿಸಿ ನಿಂದು ಜಜ್ಜರಿಸೆ ।
ಕವಲು ಬಟ್ಟೆಗಳಲ್ಲಿ ಎದೆಗೆಟ್ಟು ನಿಂದರು
ದ್ರವಗುಂದಿ ಮುರಿದು ಹಿಮ್ಮೆಟ್ಟೆ ॥೯೫॥

ಎಲ್ಲಿ ನೋಡಿದರೆ ಸೂಲಗಳೆದ್ದು ತಿವಿಯಲು
ಎಲ್ಲಿ ನೋಡಿದರೆ ರಭಸಗಳು ।
ಅಲ್ಲಿಗಲ್ಲಿಗೆ ಆನೆ ಕುದುರೆ ಮಂದಿಯ ಕೊಲ್ಲೆ
ತಲ್ಲಣಿಸಿತು ಬಲವಲ್ಲ ॥೯೬॥

ಒಂದೆಸೆಯಲಿ ಲಿಂಗರಾವುತ ಕಾಟಣ್ಣ
ಒಂದೆಸೆಯಲಿ ಪರಿವಾರ ।
ಒಂದೆಸೆಯಲಿ ರಾಮ ಕೊಲ್ಲುತ ಬರಲಿತ್ತ
ಮುಂದುಗೆಟ್ಟನು ರುದ್ರಸುತನು ॥೯೭॥

ಕಂಗೆಟ್ಟು ರುದ್ರನ ಸುತನು ಕಳವಳಿಸಲು
ಜಂಗುಳಿ ರಾಯರ ಗಂಡ ।
ಮುಂಗುಟ್ಟಿ ಮುಂಗುರುಳ ಕೈಯಿಂದ ಪಿಡಿದನು
ತುಂಗವಿಕ್ರಮ ರಾಮನಾಥ ॥೯೮॥

ಹಿಡಿದನು ಎಪ್ಪತ್ತುರಾಜನ ರಾಮನು
ಒಡನೆ ಬಂಧಿಸುತ ಬೊಲ್ಲನನು ।
ಹಿಡಿದೆತ್ತಿ ನೂಕೆ ಬೊಲ್ಲನ ತನ್ನ ಹಿಂದಣ
ಜಡನವ ಕೊಡಹಿ ಪುಟನೆಗೆದು ॥೯೯॥

ಒಡನೆ ರಾಮಗೆ ಮೆಚ್ಚಿ ರಾಜನ ಬೊಲ್ಲನು
ಬಿಡದೆ ಹರುಷದಲಿ ಕಾಲ್ಗೆದರೆ ।
ಕಡಿಯದೆ ಹೊದರ ಕೆಡಹಿದರಿಭಟರನು
[ಕು] ಡಿವುತ ಬಿಸಿಯ ರಕ್ತವನು ॥೧೦೦॥

ಐನರೂ ಕುದುರೆಯ ಕೈಸೆರೆ ಹಿಡಿದನು
ಹೊಯ್ದು ಕೆಡಹಿದ ರಾಹುತರ ।
ಕೊಯ್ದು ಶಿರಗಳ ಜಗುಳಿಯ ಕಟ್ಟೆಯ ಕಟ್ಟಿ
ರಾಯ ಕಂಪಿಲನ ಕುಮಾರ ॥೧೦೧॥

ಕಟ್ಟಾಳುಗಳನೆಲ್ಲ ಮೆಟ್ಟಿ ಶಿರಗಳ ಕೊಯ್ದು
ದಿಟ್ಟ ಎಕ್ಕಟಿಗರು ನಡೆಯೆ ।
ಬಟ್ಟಬಯಲು ಆಗಿ ರುದ್ರರಾಯನ ದಂಡು
ಕೆಟ್ಟೋಡಿ ಪೊಗಲು ಪಟ್ಟಣವ ॥೧೦೨॥

ಮಡುಹಿ ರುದ್ರನ ದಂಡ ಕಡುಗಳಿ ರಾಮಯ್ಯ
ಹಿಡಿಸಿದ ಧರ್ಮದ ಕಹಳೆ ।
ಹೆಡಗೈಯ ರುದ್ರನ ಸುತ ಸಹ ತಿರುಗಿದ
ಎಡಬಲ ರಣವ ನೋಡುತಲಿ ॥೧೦೩॥

ಕರಿಘಟೆ ತುರಗ ಕಾಲಾಳು ಸಹವಾಗಿ
ಮುರಿದ ಖಂಡೆಯ ಶಸ್ತ್ರಮಯವು ।
ಪರಿವಾರ [ವು] ರಕ್ತದ ಕಡಲೊಳು [ಚಿತ್ರ]
ಕರದಡದಿಂದೊಪ್ಪುತಿಹರು ॥೧೦೪॥

ಇಂತಪ್ಪ ರಣವ ನೋಡುತ ರಾಮ ತಿರುಗಲು
ಮುಂತೆ ಲಿಂಗಣ್ಣ ಕರಮುಗಿದು ।
ಕಂತುಸಮನ ರೂಪ ಬಿಡು ಉಗ್ರಕೋಪವ
ಪಂಥ ಸಂದಿತು ಜಗದೊಳಗೆ ॥೧೦೫॥

ಎಪ್ಪತ್ತುರಾಜನ ಬಿಡು ಬೇಗ ಪೋಗಲಿ
ತಪ್ಪದೆ ತಲೆಯ ಮುಸುಕಿನಲಿ ।
ಒಪ್ಪುವ ಗುಂಡಬ್ರಹ್ಮಯ್ಯಗೆ ರಾಮಯ್ಯ
ಒಪ್ಪದಿ ನಡೆದು ವಂದಿಸಿದ ॥೧೦೬॥

ಗಂಡಾಳು ರಾಮ ಬೊಲ್ಲನ ಇಳಿದ್ಯೆತಂದು
ಗುಂಡಬ್ರಹ್ಮಯ್ಯನಾಲಯದಿ ।
ಪುಂಡರೀಕರನ ಸಖ ಪಶ್ಚಿಮಕಿಳಿಯಲು
ದಂಡು ಬಿಡಿಸಿದನಾಕ್ಷಣದಿ ॥೧೦೭॥

ಕತ್ತಲೆ ಮುಸುಕಿರೆ [ಹೊ] ತ್ತಿಸಿದವು ಜೋಡು
ಮತ್ತೆ ಪಾಳ್ಯ ಪಾಳ್ಯದೊಳಗೆ ।
ಅರ್ತಿಲಿ ಊಟವ ಮಾಡಿ ನಿದ್ರೆಯೊಳಿರೆ
ಮತ್ತೆ ಮಾರ್ತಾಂಡನುದಯಿಸೆ ॥೧೦೮॥

ಬೊಲ್ಲನನೇರಿ ಉದಯದಲಿ ರಾಮಯ್ಯ
ಅಲ್ಲಿಂದ ಕದಲಿ ಹೊಸಮಲೆಗೆ ।
ಬಲ್ಲಿದ ದೇವಿಶೆಟ್ಟಿಯ ಲಿಂಗ ಮೊದಲಾದ
ರೆಲ್ಲ ಪಾಳೆಯವ ತೆರಳಿಸಿದ ॥೧೦೯॥

ಬಿಡುತ ಬರಲು ರಾಮ ಹಲವು ಪಯಣಗಳಿಂದ
ಒಡನೆ ಹೇಮರಡ್ಡಿ ಕೇಳಿ ।
ತಡೆಯದೆ ತನ್ನಯ ತಳತಂತ್ರ ಸಹವಾಗಿ
ನಡೆದು ಹುಯ್ಯಲನು ತಾಕಿದನು ॥೧೧೦॥

ಮದಗಜರಡ್ಡಿ ಮಂಚನರಡ್ಡಿ ಮೊದಲಾದ
ಕದನ ಕರ್ಕಶ ಕಲ್ಲಿರಡ್ಡಿ ।
ಮದನರಡ್ಡಿಯು ಮನ್ಮಥರಡ್ಡಿ ನಾಯಕ
ಕಾದುವ ಛಲದಂಕ ರಡ್ಡಿ ॥೧೧೧॥

ಇಂತಪ್ಪ ನವಲಕ್ಷ ತೆಲುಗರು ತಾಕಲು
ದಂತಿ ತುರಗ ಸಹವಾಗಿ ।
ಪಂಥದ ದೇವಿಸೆಟ್ಟಿಯ ಲಿಂಗ ರಾಮಯ್ಯ
ಅಂತಿ ನಿಲ್ಲಿಸಿ ಕಡಿದಾಡಿ ॥೧೧೨॥

ಪಂಥದ [ದೇವಿ] ಸೆಟ್ಟಿಯ ಲಿಂಗ ರಾಮಯ್ಯ
ಅಂತು ನಿಲ್ಲಿಸಿ ಕಡಿದಾಡಿ ।
ಸಂತತ ತೆಲುಗರ ಚೂಣಿಯ ಹುಯ್ಯಲು
ನಿಂತು ತರುಬಿ ಅರಿಭಟರ ॥೧೧೩॥

ಬಿಡು ರುದ್ರಸುತನ ಬೊಲ್ಲನ ಎಂದು ತೆಲುಗರು
ಒಡನೆ ರಾಮನ ಪಚಾರಿಸಲು ।
ಕಡಿದು ಕುಪ್ಪೆಯನೊಟ್ಟಿ ತೆಲುಗರ ದಂಡನು
ಒಡನೆ ನಗುತ ರಾಮನಾಥ ॥೧೧೪॥

ಒತ್ತಿ ಬರುವ ತೆಲುಗರ ದಂಡ ರಾಮಯ್ಯ
ತತ್ತರದರಿದು ಮುರಿದನು ।
ಮೊತ್ತದ ನಲವಕ್ಕ ತೆಲುಗರ ಗಂಡೆಂದು
ಮತ್ತೆ ಕಾಳೆಯ ಹಿಡಿಸಿದನು ॥೧೧೫॥

ತೆಲುಗರ ಗಂಡನೆಂಬುತ ರಾಮಯ್ಯನು
ಹಲವು ಪಯಣದಿ ನಡೆತಂದ ।
ಛಲದಂಕ ನಾಯ್ಬಿನಾಯಕನಲ್ಲಿ ತಗುಲಿದ
ನೆಲೆಗಂಡು ಬಿಟ್ಟ ಪಾಳೆಯವ ॥೧೧೬॥

ಹುಳಿಯಾರ ಮಾರಗೊಂಡನು ಬಂದು ಮುತ್ತಿದ
ಕಲಿ ರಾಮನಾಥನ ಮೇಲೆ ।
ಬಲು ಹುಯ್ಯಲುಮಾಡಿ ತಾಕಿದ ಇದಿರಾಗಿ
ಛಲಮಂಕಮಲ್ಲ ಮನ್ನೆಯರ ॥೧೧೭॥

ಎರಗಿದ ಹುಳಿಯಾರ ಮಾರಗೊಂಡನು ಬಂದು
ಬಿರಿದಂಕ ರಾಮನ ಮೇಲೆ ।
ಮುರಿದು ಬರಲು ರಾಮಯ್ಯನ ಪರಿವಾರ
ತರುಬಿ ಕಾದಿದ ರಣದಲ್ಲಿ ॥೧೧೮॥

ಹೊಡೆದನು ಮಾರಗೊಂಡನು ಬಂದು ರಾಮನ
ಎಡಬಲದೊಳು ಹೊಕ್ಕು ಹೊಯಿದು ।
ಕಡಿದಾಡಿ ರಕ್ತದ ಕಡಲು ಸೂಸ್ಥರಿವಾಗ
ತಡೆಯದೆ ರಾಮ ಬೆರಗಾದ ॥೧೧೯॥

ದೇವಿಸೆಟ್ಟಿಯ ಲಿಂಗ ಬಂದು ತಾಕಲು ಬೇಗ
ಆವಾಗ ಪಂತಗಳಿಂದ ।
ದೇವ ಕಂಪಿಲನ ಕುಮಾರ ನೋಡೆನುತಲಿ
ಕಾವನ ಸಮರೂಪನೊಡನೆ ॥೧೨೦॥

ಮಾಣದೆ ಹೊಕ್ಕು ಹೊಯಿದನು ಮಾರಗೊಂಡನ
ಕೇಣವಿಲ್ಲದೆ ದಂಡ ಕಡಿದ ।
ಕಾಣದೆ ಕೆಣಕಿದೆ ಲಿಂಗಣ್ಣ ನೀ ಕೇಳೋ
ಊಣೆಯಲ್ಲದೆ ಕಾಲಮಾಡು ॥೧೨೧॥

ಕಪ್ಪವ ತೆತ್ತು ಕಾಣಿಸಿಕೊಂಬೆ ರಾಮನ
ಒಪ್ಪ ಹೇಳಿದನು ಲಿಂಗನಿಗೆ ।
ತಪ್ಪದೆ ಕಾಣಿಸು ರಾಮನ ಎನುತಲಿ
ಒಪ್ಪಿಕೊಂಡನು ಮನದೊಳಗೆ ॥೧೨೨॥

ಬಂದ ಮಾರಿಯಗೊಂಡ ವಂದನೆ ಮಾಡಿದ
ನಿಂದನು ಭಯಭಕ್ತಿಯಲ್ಲಿ ।
ತಂದಂಥ ಕಪ್ಪವ ಮುಂದಿಟ್ಟನಾಕ್ಷಣ
ಅಂದು ರಾಮನ ಬೇಡಿಕೊಂಡ ॥೧೨೩॥

ಪ್ರಾಣ ನಿನ್ನದು ರಾಮ ಕಾಣದೆ ಕವಿದೆನು
ಊನ್ಯವ ಹೊತ್ತೆ ಜಗದೊಳಗೆ ।
[ಮನ್ನಿ]ಸುಯೆನ್ನ ಬಿನ್ನಹವನ್ನು ರಾಮಯ್ಯ
ಕ್ಷೋಣಿಯ ರಾಯರ ಗಂಡ ॥೧೨೪॥

ಕಪ್ಪವ ತೆತ್ತನು ಎಪ್ಪತ್ತು ಸಾವಿರ
ಒಪ್ಪಿಸಿ ಗಿಳಿಯ ಪಂಜರವ ।
ಎಪ್ಪತ್ತು ಆನೆಯ ಒಪ್ಪುವ ಖಡ್ಗವ
ತಪ್ಪದೆ ಕಾಣಿಕೆಯಿಟ್ಟ ॥೧೨೫॥

ದಟ್ಟಿ ಕಾಬಾಯವ ಕೊಟ್ಟನು ಗೊಂಡಗೆ
ದಿಟ್ಟ ನೀನಂಜಬೇಡೆಂದ ।
ನೆಟ್ಟನೆ ನಮ್ಮ ನೋಲೈಸೆಂದು ರಾಮಯ್ಯ
ಕೊಟ್ಟ ಅಭಯಹಸ್ತವನು ॥೧೨೬॥

ಕೇಳಿ ಕಂಪಿಲರಾಯ ಬೊಲ್ಲನ ತಾಹದ
ತಾಳಿದ ಮನಹರುಷದಲಿ ।
ಜೋಳದರಾಶಿಯ ಬಯಲಿಗೆ ಕಂಪಿಲ
ಲೋಲನು ದಂಡ ನಡೆಸಿದ ॥೧೨೭॥

ಬಂದು ರಾಮನು ದೇವಿಸೆಟ್ಟಿಯ ಲಿಂಗನು
ವಂದನೆ ಮಾಡಿ ಕಂಪಿಲಗೆ ।
ತಂದ ಬೊಲ್ಲನ ಆನೆ ಕುದುರೆ ಭಂಡಾರ [ವ]
ತಂದು ಒಪ್ಪಿಸಿದ ರಾಮಯ್ಯ ॥೧೨೮॥

ಕೇಳಿದ ಕಂಪಿಲರಾಯನಿವನಾರೆಂದು
ಲೋಲ ರಾಮನ ಬೆಸಸಿದನು ।
ಮೂಲೋಕದೊಡೆಯ ರುದ್ರನ ಮಾನ್ಯನಿವನೆಂದು
ಚೆಲುವ ಲಿಂಗಣ್ಣ ಕೇಳರಸೆ ॥೧೨೯॥

ಪಟ್ಟಣಶೆಟ್ಟಿಗಳಿವರೋರುಗಲ್ಲಿಗೆ
ಕಟ್ಟಾಳು ರುದ್ರರಾಯನಿಗೆ ।
ಮುಟ್ಟಿ ವೆಚ್ಚವನೀವ ದೇವಿಸೆಟ್ಟಿಯ ಲಿಂಗ
ದಿಟ್ಟ ಕಂಪಿಲ ತಂದೆ ಕೇಳು ॥೧೩೦॥

ಹಿಡಿತಂದ ಆನೆ ಕುದುರೆ ಭಂಡಾರವ
ಒಡನೆ ಬೊಲ್ಲನ ತೋರಿಸಿದನು ।
ಪೊಡವಿಯೊಳಗೆ ನೀನಲ್ಲದೆ ಬೊಲ್ಲನ
ಪಿಡಿದೇರುವ ಬಂಟರುಂಟೆ ॥೧೩೧॥

ಏರಲಿ ನಿಮ್ಮ ಕುಮಾರರೊಳಗೆ ರಾಯ
ವೀರರು ಬಂಟರಾದವರು ।
ತೋರಲೇತಕೆ ಮೂಗನರಿದು ಕನ್ನಡಿಯನು
ಭಾರಿಯ ಗುಣವಿರಬೇಕು ॥೧೩೨॥

ಬೊಲ್ಲನ ನೋಡುತ ಮನದಲ್ಲಿ ಕಂಪಿಲ
ಚೆಲುವ ರಾಮನ ಪೋಲ್ವರಿಲ್ಲ ।
ಒಲಿದು ಮಂತ್ರಿಯ ಕೂಡ ಪೇ[ಳಿಯೆ] ಕಂಪಿಲ
ನಲವಿಂದಲಾಗ ತೆರಳಿದನು ॥೧೩೩॥

ನಡೆದರು ಹೊಸಮಲೆದುರ್ಗಕೆ ದಂಡು
ತಡೆಯದೆ ಬೊಲ್ಲಸಹವಾಗಿ ।
ಬಿಡದೆ ಲಿಂಗಣ್ಣಗೆ ತೋರುತ ರಾಮಯ್ಯ
ನಡೆದನು ಅರಮನೆಗಾಗಿ ॥೧೩೪॥

ಚಂದಚಂದದ ಉಪ್ಪರಿಗೆ ಸಿಂಗಾರವ
ಅಂದು ಲಿಂಗಗೆ ರಾಮ ತೋರೆ ।
ಮುಂದೆ ಸೋಮಸೂರ್ಯವೀಧಿ ಇತ್ತರದಲ್ಲಿ
ಸಂದಣಿಯೇನ ಪೇಳುವೆನು ॥೧೩೫॥

ಸಡಗರ ಸಂಪತ್ತಿನಿಂದಲು ಕಂಪಿಲ
ನಡೆದನು ಅರಮನೆಗಾಗಿ ।
ತಡೆಯದೆ ನಿಂದ ಮಾನ್ಯರ ಕಳುಹಿದರಾ[ಗ]
ಒಡನೆ ರಾಮಯ್ಯ ಲಿಂಗಣ್ಣ ॥೧೩೬॥

ಚಿತ್ತಜ ಸಮರೂಪ ಅರಮನೆಯನು ಪೊಕ್ಕು
ಮತ್ತೆ ಲಿಂಗಣ್ಣ ಸಹವಾಗಿ ।
ಇತ್ತರಮನೆಯನು ಹೊಕ್ಕನೆಂಬಲ್ಲಿಗೆ
ಚಿತ್ರದ ಸಂಧಿ ಆರನೆಯ ॥೧೩೭॥

ಅಂತು ಸಂಧಿ ೬ಕ್ಕಂ ಪದನು ೬೩೬ಕ್ಕಂ ಮಂಗಳ ಮಹಾಶ್ರೀ

ಸಂಧಿ : ೭

❖

ಶೂಲದ ಹಬ್ಬ – ರತ್ನಾಜಿ ವ್ಯಾಮೋಹ

ಕರದಂಡ ಕಪಾಲ ಗಜಚರ್ಮಾಂಬರ
ಸುರರಿಗೆ ಅಮೃತವನಿತ್ತ ।
ಪುರಹರ ಪಾಲಿಸು ಕರುಣಿ ಜಟ್ಟಂಗಿಯ
ವರಗಿರಿ ರಾಮೇಶಲಿಂಗ ॥೧॥

ನಲಿದು [ಶೂಲದ] ಹಬ್ಬ ಮಾಡಿಸೆ ಕಂಪಿಲ
ಚೆಲುವ ರಾಮಯ್ಯ ನೋಡ ಬರಲು ।
ಲಲನೆ ರತ್ನಾದೇವಿ ನೋಡಿ ವಿಭ್ರಮಿಸಿದ
ಒಲುಮೆಯ ಪೇಳ್ವೆ ಲಾಲಿಪುದು ॥೨॥

ಓರುಗಲ್ಲಿನ ರುದ್ರಸುತನ ಬೊಲ್ಲನ ತಂದು
ಧೀರ ಚೆನ್ನಿಗ ರಾಮನಿರಲು ।
ಕಾರುಣ್ಯ ನಿಧಿ ಗುಂಡಬ್ರಹ್ಮಯ್ಯ ಸ್ವಪ್ನದಿ
ತೋರೆ ಶೂಲದ ಮಾಹಾತ್ಮೆಯನು ॥೩॥

ಗಂಡಾಳು ರಾಮಯ್ಯ ತಂದೆ ಬಳಿಗೈತಂದು
ಗುಂಡಬ್ರಹ್ಮಯ್ಯನೊಲಿದುದನು ।
ತಂಡತಂಡದಿ ತನಗೆ ವರವಿತ್ತ ಸ್ವಪ್ನವ
ಮಂಡಲಪತಿಗೆ ಹೇಳಿದನು ॥೪॥

ಮರೆಯದೆ ಶೂಲದ ಹಬ್ಬವ ಮಾಡಿನ್ನು
ವರವ ಪಡೆದೆ ಶರಣರಲಿ ।
ಧುರದೊಳು ಕಾದಿ ಜಯಿಸಿದನು ಶೂಲಗಳಿಗೆ
ಇರದೆ ಹಬ್ಬವನು ಮಾಡೆಂದ ॥೫॥

ಕೇಳಿ ಕಂಪಿಲರಾಯ ಶೂಲದ ಹಬ್ಬವ
ನಾಳೆ ಮಾಡಿಸಬೇಕೆನುತ
ಪೇಳಿದ ರಾತ್ರಿ ಡಂಗುರವ ಸಾರಿಸಿದನು
ಕಳೆಯುಳ ಹೊಸದುರ್ಗದೊಳಗೆ ॥೬॥

ಚಂದ ಚಂದದಲಿ ಪಟ್ಟಣವ ಶೃಂಗರಮಾಡಿ
ತಂದು ಪಟ್ಟೆಯ ಜಲ್ಲಿಗಳನು।
ನಿಂದಾಗ ಗುಂಡಬ್ರಹ್ಮಯ್ಯನ ಶೂಲಗಳು
ಅಂದು ಒಳ್ಳೆಯ ದಿವಸದಲಿ ॥೭॥

ಕಟ್ಟಿದುಪ್ಪರಿಗೆಯು ಕನಕ ತೋರಣದಿಂದ
ಪಟ್ಟಣವೆಲ್ಲ ಶೃಂಗರಿಸಿ।
ಸೆಟ್ಟಿ ಸವುದರಿಗಳು ಸಕಲದ ಪ್ರಜೆಗಳು
ನೆಟ್ಟನೆ ನಿಂದು ನೋಡಿದರು ॥೮॥

ಗಂಧ ಕಸ್ತುರಿ ಪನ್ನೀರಿಂದ ಚಳೆಯ ಕೊಟ್ಟು
ಚಂದ್ರ ಸೂರ್ಯರ ವೀಧಿಯೊಳಗೆ ।
ಮುಂದೆ [ಹ]ಜಾರದುಪ್ಪರಿಗೆ ಶೃಂಗರಿಸಿತು
ಕಂದರ್ಪ ನೆಲೆವೀಡಿನಂತ ॥೯॥

ಪಟ್ಟೆ ಪಟ್ಟಾವಳಿ ಜೇಬಿನಾಣ್ಯಗಳಿಂದ
ಸೃಷ್ಟಿಗಧಿಕ ದೇವಾಂಗ ।
ನೆಟ್ಟನೆ ಸೆಡಕು ಜಲ್ಲಿಗಳಿಂದ ಕಟ್ಟಿಯೆ
ದೃಷ್ಟಿಗೆ ಶೂಲ ಶೃಂಗರಿಸಿ ॥೧೦॥

ಮುತ್ತು ಮಾಣಿಕ ರತ್ನ ತೆತ್ತಿಸಿದ ಶೂಲಕೆ
ಚಿತ್ರ ವಿಚಿತ್ರದ ಪದಕ ।
ಸುತ್ತ ಕಟ್ಟಿದ ನಾನಾ ಪುಷ್ಪ ಶರಗಳಿಂದ
ಅತ್ಯಂತ ಶೂಲಶೃಂಗರಿಸಿ ॥೧೧॥

ಮಾನ್ಯಮಾನ್ಯರು ಶೂಲಗಳ ಶೃಂಗರಿ[ಸಲು]
ರನ್ನದ ಕಳಸವೊಪ್ಪಿಪದವು ।
ಬಿನ್ನಣದಲಿ ಶೂಲಗಳು ತಾ ಮೆರೆದವು
ಉನ್ನತ ಗಗನಕಡರುತ ॥೧೨॥

ಎಲ್ಲಿ ನೋಡಿದರಲ್ಲಿ ಪಲ್ಲಕ್ಕಿ ಸತ್ತಿಗೆ
ಎಲ್ಲಿ ನೋಡಿದರೆ ವಾದ್ಯಗಳು ।
ಎಲ್ಲಿ ನೋಡಲು ಪಾತ್ರ ಭೋಗಸಂಗೀತವು
ಬಲ್ಲಿದ ಹೊಸದುರ್ಗದೊಳಗೆ ॥೧೩॥

ವಿಟ ವಿದೂಷಕ ನಾಗರಿಕ [ಪೀಠ]ಮರ್ದನ
ನ[ಟಿನಿ] ಹಸ್ತಿನಿ ಚಿತ್ತಿನಿಯರು ।
ಬಟ್ಟಕುಚ ಶಂಕಿನಿ ಪದ್ಮಿನಿಯರು ಬಂದು
ನಟನೆಯ ಶೃಂಗರಿಸಿದರು ॥೧೪॥

ಮತ್ತೆ ಪರಿಜನ ಪುರಜನರೆಲ್ಲ ನೆರೆದಾಗ
ಅತ್ಯಂತ ಶೃಂಗಾರದಿಂದ ।
ಸತ್ಯ ಸಾಹಿತ್ಯ ಭಕ್ತ ಮುಕ್ತಾತ್ಮರು
ಮೊತ್ತದಿ ನೆರೆದು ಸಂಭ್ರಮದಿ ॥೧೫॥

ಇಂತು ಶೂಲಗಳ ಶೃಂಗರಿಸಿದ ಬೈಚಪ್ಪ
ಮುಂತೆ ರಾಮಗೆ ಬಂದು ಹೇಳೆ ।
ಕಂತು ಸಮಾನ ಕಂಪಿಲ ಶೃಂಗರವಾಗಿ
ಸಂತೋಷದಿಂದ ನಡೆತಂದು ॥೧೬॥

ಕಣ್ಗೆ ಮಂಗಳವಾದ ಶೂಲವ ನೋಡುತ
ಶೃಂಗಾರ ಸಿಂಹಪೀಠದಲಿ ।
ಸಂಗೀತ ಲೋಲ ಕಂಪಿಲರಾಯ ಕುಳಿತನು
ಮಂಗಳುತ್ಸಹ ಸಂಭ್ರಮದಲಿ ॥೧೭॥

ಮನ್ನೆಯ ಮಂಡಲಿಕರ ದಿಕ್ಕುದಿಕ್ಕಿನ
ಚೆನ್ನಿಗ ರಾಜಕುವರ ।
ಉನ್ನತ ವಾಲಗದೊಳು ಕಂಪಿಲ ಒಪ್ಪಿದ
ಚಿನ್ನದ ಕಹಳೆ ಸಾರಿದವು ॥೧೮॥

ಹೊಡೆದವು ಭೇರಿ ಡಮಾಮಿ ತಮ್ಮಟ ಡೊಳ್ಳು
ಬಿಡದೊದರುವ ಚಿನ್ನ ಕಾಳೆ ।
ಪೊಡೆವಿಯೊಳಗೆ ಭೋರ್ಗರೆವ ಹೆಗ್ಗಾಳೆಯು
ತಡೆಯದೂದುವ ಬೋರುಗಾಳೆ ॥೧೯॥

ಅನುವಾಗಿ ಕೊಳಲು ತಪ್ಪಟೆ ರೌಡೆ ಜಾಗಟೆ
ಘನತರ ಬಿರಿದಿನುಗ್ಗಡವು ।
ಜನಪತಿ ಕಂಪಿಲ ಮನಸಿಲಿ ಸುಖವಿರೆ
ಕನಕ ಶೂಲಗಳು ಶೃಂಗರಿಸೆ ॥೨೦॥

ಇತ್ತ ಶೂಲಗಳು ಶೃಂಗರವಾಗಿ ಮೆರೆದವು
ಮೊತ್ತದ ಜನ ನೆರೆದಿರಲು ।
ಕರ್ತು ಶರಣನ ಶೂಲಗಳಿಗೆ ವಂದಿಸಿ
ಮತ್ತೆ [ಶರಣರಿ] ಗೊಂದಿಸಲು ॥೨೧॥

ಕುಂಭಿನಿ ರಾಯರ ಗಂಡನೆಂದೆನಿಸುವ
ಬೊಂಬೆಯ ಕಾಲಿನೊಳಿಟ್ಟ ।
ಸಂಭ್ರಮಿಸಿದ ರನ್ನ ಸರಗಳಿಂದಲಿ ಆಗ
ಗಂಭೀರ ರಾಮ ಶೃಂಗರಿಸೆ ॥೨೨॥

ಇಟ್ಟನು ಪಚ್ಚೆದ ಕಡಗ ಕಂಠಮಾಲೆ
ಬಟ್ಟಮುತ್ತಿನ ಚೌಕುಳಿಯ ।
ಮುತ್ತಿನ ಗೊಂಡೆವು ಮೆರೆವ ವಂಕುಡಿಗೆಟ್ಟಿ
ಕಸ್ತೂರಿ ನಾಮ ಹಣೆಗಿಟ್ಟು ॥೨೩॥

ಉತ್ತಮ ದೇವಾಂಗ ವಸ್ತ್ರವನುಟ್ಟನು
ಸುತ್ತಿದ ವಲ್ಲಿ ಚಿಮ್ಮುರಿಯು ।
ಹತ್ತೆಗಟ್ಟಿದ ಹಾದ ಹೀರಾವಳಿಗಳಿಂದ
ಮತ್ತೆ ರಾಮನು ಶೃಂಗರಿಸಿದ ॥೨೪॥

ಪನ್ನೀರು ಗಂಧ ಕಸ್ತುರಿ ಪರಿಮಳವನು
ಚೆನ್ನಿಗ ರಾಮಯ್ಯ ಪೂಸಿ ।
ಕರ್ಣದೊಳಗೆ ಜವ್ವಾದಿಯ ತೆಗೆದಿಟ್ಟು
ಸಣ್ಣ ದುಪ್ಪಟವನೆ ಪೊದ್ದ ॥೨೫॥

ಮೆಲ್ಲನೆ ತನ್ನರಮನೆಯನೆ ಹೊರವಂಟು
ಬೊಲ್ಲನ ಏರಿ ಹರುಷದಿ ।
ಮಲ್ಲ ಮನ್ನೆಯರೆಲ್ಲ ನೆರೆದರು ಬೇಗದಿ
ತಲ್ಲಣಿ[ಸಲು]ವೈರಿಗಳು ॥೨೬॥

ಚಿನ್ನದ ಗಿಂಡಿಯ ಊಳಿಗದ ಲಕ್ಕನು
ಚೆನ್ನರಾಮಯ್ಯ ನೆಡಬಲದಿ ।
ಅಣ್ಣ ಕಾಟಣ್ಣನು ದೇವಿಶೆಟ್ಟಿಯ ಲಿಂಗ
ತನ್ನೆಪ್ಪತ್ತೆರಡು ಮನ್ನೆಯರು ॥೨೭॥

ಹೊನ್ನ ಕಟ್ಟಿನ ಬಿಲ್ಲ ಎಕ್ಕಟಿಗರು ಬಂದು
ಮನ್ನಣೆಯಿಂದ ಓಲೈಸೆ ।
ಭಿನ್ನವಿಲ್ಲದೆ ರಾಮನೆಡಬಲದೊಳಿನ್ನು
ಚೆನ್ನಾಗಿ ನಿಂದನರ್ತಿಯಲಿ ॥೨೮॥

ಹಣವಿತ್ತು ಹಯಕಟ್ಟಿ ಮೆರವ ರಾಯರ ಗಂಡ
ರಣದೊಳು ಜೋಡು ತೊಟ್ಟಿರುವ ॥
ರಣಹೇಡಿ ಹಿಂಡು ಕುಮಾರದಲ್ಲಣನೆಂದು
ಹೊಣಕೆಯ ಬಂಟರುಗ್ಗಡಿಸೆ ॥೨೯॥

ಕಟ್ಟಾಳು ರಾಮಯ್ಯ ವಹಿಲದಿ ನಡೆತಂದು
ದಿಟ್ಟ ಕಂಪಿಲರಾಯಗೆರಗೆ ।
ಅಷ್ಟ ಕಳೆಯದಿ ಓಲಗಗೊಟ್ಟು ನಿಂದಿರೆ
ದಿಟ್ಟಿಸಿ ಶೂಲ ನೋಡಿದರು ॥೩೦॥

ಶೃಂಗಾರವಾದ ಶೂಲವ ನೋಡಬೇಕೆಂದು
ಹೆಂಗಳರಸಿ ರತ್ನದೇವಿ ।
ಉಂಗುರ ನಡುವಿಗೆ ದೇವಾಂಗವನುಟ್ಟು
ಬಂಗಾರ ತೊಡಿಗೆಯ ತೊಟ್ಟು ॥೩೧॥

ಹಸ್ತ ಕಡಗ ಕಂಕಣ ಚೂಡಂಗವು
ವಿಸ್ತರ ಪಂಚಸರಗಳ ।
ಪೊಸತೆನಿಸುವ ಮುತ್ತಿನೋಲೆ ಮೂಗುತಿನಿಟ್ಟು
ಹಸ್ತಿಗಮನೆ ಶೃಂಗರಿಸಿ ॥೩೨॥

ಹಡಪದ ನಾಗಿ ಕಾಳಂಜಿಯ ಕನಕಾಯಿ
ಕುಡಿನೀರು ಸೋಮಾಯಿ ಸಹಿತ ।
ಕುಡಿತೆಗಂಗಳೆ ಚೌರದ ಚಾಮಿ ಸಹವಾಗಿ
ನಡೆದು ಬಂದಳು ರತ್ನದೇವಿ ॥೩೩॥

ನೀಲ ಕುಂತಳೆ ರತ್ನಾದೇವಿ ಇಕ್ಕೆಲದಲ್ಲಿ
ಸಾಲು ಸಾಲಿಲಿ ಕೈಯವಿಡಿದು ।
ಏಳು ನೆಲೆಯ ಉಪ್ಪರಿಗೆ ಏರಿದರಾಗ
ಬಾಲಯೌವನದ ಹೆಣ್ಣುಗಳು ॥೩೪॥

ಚಂದ್ರಸಾಲೆಗೆ ಇಂದ್ರಗೋಪದ ಮೇಲ್ಕಟ್ಟು
ಬಂಧಿಸಿದ ಸೆಡಕು ಜಲ್ಲಿಗಳು ।
ಚಂದಚಂದದಿ ಪುಷ್ಪ ಸರಗಳು ಕಟ್ಟಿರೆ
[ಬಂದು] ಕಂಡಳು ರತ್ನದೇವಿ ॥೩೫॥

ಉತ್ತಮ ಜಂಬುಕ ನವರತ್ನ ಗದ್ದುಗೆ
ಮುತ್ತಿನ ಒರಗು ಮುಡಿಯಲ್ಲಿ ।
ಅರ್ತಿವಾಲಗವಿತ್ತು ರತ್ನಾಜಿ ಕುಳಿತಳು
ಚಿತ್ತಜನರ್ಧಾಂಗಿಯಂತೆ ॥೩೬॥

ಮಧುರಾಕ್ಷಿಯರು ಮದನತಂತ್ರ ದೇವಿಯರು
ಹದಿನಾರು ಕಳೆಯಲೊಪ್ಪಿದರು ।
ಚದುರೇರು ಪುಲ್ಲೆಯ ಬೆದರುಗಂಗಳೆಯರು
[ಸುದತಿ] ರತ್ನಾಜಿ ಓಲಗದಿ ॥೩೭॥

ತುಂಬಿಗುರುಳ ಪೊಂಬೊಗರಿಯ ಮೊಲೆಯವರು
ಕಂದರ್ಪನ ಮೋಹಿಸುವರು ।
ಬಿಂಬಾಧರೆಯರು ರತ್ನಾಜಿ ವಾಲಗದೊಳು
ಮುಂಬಿರಿ ನಿಂತು ರಂಜಿಸಲು ॥೩೮॥

ಕೆಲಬರು ಕುಂಚ ಕಾಳಂಜಿಯ ಹಡಪವ
ಕೆಲಬರು ಹೂವಿನ ಚೆಂಡ ।
ಕೆಲಬರೊಂದೊಂದು ಕಿನ್ನರಿ ವೀಣೆ ನುಡಿಸುತ
ಲಲನೆ ರತ್ನಾಜಿಯೋಲಗದಿ ॥೩೯॥

ದೇವ ಕಂಪಿಲನ ಸಕಲ ರಾಣಿವಾಸವು
ತಾವೆಲ್ಲ ಮಡಿಗಳನುಟ್ಟು ।
ಭಾವೆಯರುಪ್ಪರಿಗೆಯನೇರಿ ಕುಳಿತಾಗ
ಭಾವಿಸಿ ನೋಡೆ ಶೂಲಗಳ ॥೪೦॥

ಮುತ್ತಿನ ಜಲ್ಲಿಯು [ರತ್ನ]ಪತಾಕೆಯು
ಮೊತ್ತದಿ ಶೂಲ ರಂಜಿಸಲು ।
ಚಿತ್ರದ ಹುರಿಯ ಕಟ್ಟೊಪ್ರದಿ ರತ್ನದಿ
ಮತ್ತೆ ಶೂಲವ ನೋಡಿಕೊಂಡು ॥೪೧॥

ಈ ತೆರ ಸ್ತ್ರೀಯರೋಲಗದೊಳು ರತ್ನಾಜಿ
ಅರ್ತಿಲಿ ಸಂಗಿ ನಾಗಿಯನು ।
ಹತ್ತಿರ ಕರೆದು ಕುಳ್ಳೀರಿಸಿ ಕೇಳಿದಳಾಗ
ಚಿತ್ರ ಚಿತ್ರದ ಕೆಲಸಗಳನು ॥೪೨॥

ನೀಲ ಮುತ್ತುಗಳ ತೆತ್ತಿಸೆ ಶೂಲಕಂಬಕ್ಕೆ
ಕೀಲ ವಜ್ರದ ಅಡ್ಡಣಿಯು ।
ಮೇಲೆ ಮಿಸುನಿಯ ಶೂಲಕೆ ಶೃಂಗರಿಸಿರೆ
ಲೋಲ ರತ್ನಾಜಿ ಕೇಳಿದಳು ॥೪೩॥

ಪಂಚವರ್ಣದ ಜಲ್ಲಿ ಪರಿಪರಿ ಗೊಂಡೆವು
ಮಿಂಚುವ ಚೋಹ ಪತಾಕೆ ।
ಅಂಚೆಗಮನೆ ನೋಡು ಅಣ್ಣ ಕಾಟಣ್ಣನ
ಮಿಂಚುವ ಶೂಲ ರತ್ನಾಜಿ ॥೪೪॥

[ಕೇ] ವಣಿಸಿದ ಮುತ್ತು ಹತ್ತೆ ಕಟ್ಟಿದ ಜಲ್ಲಿ
ಹೂವಿನ ಸರಗಳಟ್ಟಣೆಯು ।
ದೇವಿಸೆಟ್ಟಿಯ ಲಿಂಗಣ್ಣನ ಶೂಲವು
ಭಾವೆ ರತ್ನಾಜಿ ಕೇಳೂಲಿದು ॥೪೫॥

ಇಂದ್ರಗೋಪದ ಸುತ್ತ ಎಡಬಲ ಪತಾಕಿ
ಚಂದ್ರಗಾವಿಯ ಸೀರೆ ಮೆರವ ।
ಕಂದರ್ಪ ಸಮರೂಪ ಭಾವಸಂಗನ ಶೂಲ
ಅಂದವ ನೋಡೆ ರತ್ನಾಜಿ ॥೪೬॥

ಸೊಗಸಿನ ಪೂಸರ ಪೊಂಗೆಜ್ಜೆ [ಸರ]ಮಾಲೆ
ನೆಗದಿಹ ಬಿರಿದ ಟೆಕ್ಕೆಯದ ।
ಬಗೆ ಬಗೆ ಸೆಡಕು ಝಲ್ಲಿಗಳ ಪೊಂಗಳಸದ
ವಿಗಡ ಶೂಲವ ಪೇಳೆ ಸಂಗಿ ॥೪೭॥

ಸೆಣಸುವ ರಾಯರ ತಲೆಯ ಚೆಂಡಾಡುವ
ಪೊಡವಿ ರಾಯರ ಗಂಡನೆಂಬ ।
ಕಡುಗಲಿ [ಕಾ]ಮಯ್ಯನ ಶೂಲವೆಂದಳು
ಮಡದಿ ರತ್ನಾಜಿಗೆ ನಾಗಿ ॥೪೮॥

ಎತ್ತ ನೋಡಲು ಮನ್ನೆ ಮನ್ನೆರ ಶೂಲವ
ಮತ್ತೆ ರತ್ನಾಜಿ ನೋಡುತಲಿ ।
ಉತ್ತಮ ವರ್ಣವರ್ಣದ ಚಿತ್ರ ದೊರೆಗಳ
ಮೊತ್ತವ ನಾಗಿ ಪೇಳೆನಗೆ ॥೪೯॥

ನೀಲಿಯ ಸತ್ತಿಗೆ ಮೇಲೆ ಪೊಂಗಳಸವು
ಶಾಲು ಸುತ್ತಿಹನಾರೆ ಸಂಗಿ ।
ಕೋಳಾಹಳದ ಕೊಂಡಿಯ ರಾಜ ಭೈರವ
ಲೋಲಾಕ್ಷಿ ಕೇಳೆ ರತ್ನಾಜಿ ॥೫೦॥

ಮೇಣ ಕಪ್ಪಟ ಛತ್ರ ಚೌರ ಢಾಳಿಸಿಕೊಂಬ
ಜಾಣ ಮನ್ನೆಯನಾರೆ ಸಂಗಿ ।
ಕ್ಷೋಣಿಯನಾಳುವ ಕಲಿ ಕೋನಿನಾಯಕ
ಏಣಾಕ್ಷಿ ಕೇಳೆ ರತ್ನಾಜಿ ॥೫೧॥

ಬಿಳಿಯ ಸತ್ತಿಗೆ ಮೇಲೆ ಕಳೆಯುಳ್ಳ ಗೊಂಡೆವು
ಕಲಿಧೀರನವನಾರೆ ನಾಗಿ ।
ತಳವಾರ ನರಸಯ್ಯನ ಮಗ ಸಿಂಗನು
ನಳಿತೋಳ ರನ್ನೆ ರತ್ನಾಜಿ ॥೫೨॥

ಪಚ್ಚದ ಸತ್ತಿಗೆ [ಶರಭದ] ಟೆಕ್ಕೆವು
ಹೆಚ್ಚುಗೈಯ್ಯುವನಾರೆ ನಾಗಿ ।
ಉಚ್ಚಂಗಿದುರ್ಗದ ಕಬ್ಬೇ ನಾಗನು
ಉಚ್ಚಹವುಳ್ಳ ರತ್ನಾಜಿ ॥೫೩॥

ಹಳದಿ ಛತ್ರದ ಮುಂದೆ ಹೊಳವ ಬಿರುದಿನ ಟೆಕ್ಕೆ
ಛಲದಂಕ ಮನ್ನೆಯನಾರೆ ।
ಬೆಳಗಲಿ ನಾಡಿನ ಬಲವಂತ ಸಿಂಗನು
ಲಲನೆ ನೀ ನೋಡೆ ರತ್ನಾಜಿ ॥೫೪॥

ಮೆರೆವ ಇಂದಿರನ ಸಮ ಸತ್ತಿಗೆ ನೆರಳೊಳು
ಸರಸ ಕೋವಿದನಾರೆ ನಾಗಿ ।
ಅರಸು ಗುರ್ಜರ ಕಂಪನ ಮಗ ಬಸವಯ್ಯ
ಹರಿಣಾಕ್ಷಿ ಕೇಳೆ ರತ್ನಾಜಿ ॥೫೫॥

ಇತ್ತರದಲಿ ಛತ್ರಿ ಸುತ್ತ ಭಟರು ಬಿರಿ
ದೆತ್ತಿ ಹೊಗಳಿಸಿಕೊಂಬನಾರೆ ।
ಗುತ್ತಿಯ ಜಗತಾಪಿ ರಾಯನ ಮಗನಿವ
ಕ್ಷತ್ರಿಯ ಕುಲಕೆ ಬಲ್ಲಿದನು ॥೫೬॥

ಜಾತಿಮುತ್ತಿನ ಛತ್ರ ಬಿರಿದಿನುಕ್ಕಟ ಕಹಳೆ
ನೀತ್ಯುಳ್ಳನಾವ ಮನ್ನೆಯನೆ ।
ಖ್ಯಾತ್ಯುಳ್ಳ ತೊರೆಗಲ್ಲನಾಳುವ ಗೊಲ್ಲರ
ಬಾಚಿನಾಯಕ ಕೇಳೆ ರತ್ನಿ ॥೫೭॥

ನೆಗೆವ ಗುಬ್ಬಿಯ ಛತ್ರ ಪಗಲ ಕೈದೀವಿಗೆ
ವಿಗಡ ಮನ್ನೆಯನಾರೆ ಸಂಗಿ ।
ಅಗುರಗಂಬಿಯನಾಳ್ವ ಮಾಚಿನಾಯಕನಿವ
ಸುಗುಣೆ ನೀ ಕೇಳೆ ರತ್ನಾಜಿ ॥೫೮॥

ಮಿಂಚುವ ಕಳೆಯುಳ್ಳ ಸತ್ತಿಗೆ ನೆಳಲೊಳು
ಕಂಚಿನ ರವುಡಿ ಜಾಗಟೆಯು ।
ಮುಂಚೆ ವೀಳ್ಯವ ಕೊಂಬ ಕೊಳ್ಳಿಯ ನಾಗನು
ಕೆಂಚೆ ನೀ ಕೇಳೆ ರತ್ನಾಜಿ ॥೫೯॥

ಚಿತ್ರದ ಬೊಂಬೆ ಚಿನ್ನದ ಸತ್ತಿಗೆ ಮೇಲೆ
ಕರ್ತುಜ ಮನ್ನೆಯನಾರೆ ಸಂಗಿ ।
ಸತ್ಯನು ಬೈಚಪ್ಪ ಕಂಪಿಲರಾಯಗೆ
ಅತ್ಯಂತ ಹಿತದ ಪ್ರಧಾನ ॥೬೦॥

ಹೊಸ ಛತ್ರ ಬಿರುದಿನ ಬಸವನ ಟೆಕ್ಕೆಯು
ಅಸಮ ಬಲ್ಲಿದನಾರೆ ನಾಗಿ ।
ದೆಸೆ ಓರುಗಲ್ಲಿನ ದೇವಿಸೆಟ್ಟಿಯ ಲಿಂಗ
ಕುಶಲ ಕೋವಿದಳೆ ರತ್ನಾಜಿ ॥೬೧॥

ಅರ್ಧನಾರಿಯ ಛತ್ರ ಹೆಬ್ಬುಲಿ ಸಮಜೋಡು
ಉದ್ದಂಡ ಮನ್ನೆಯನಾರೆ ।
ಕದ್ದು ಹೋಹರಗಂಡ ಕಾಟಣ್ಣ ಇವನೀಗ
ಮುದ್ದುಮುಖದವಳೆ ರತ್ನಾಜಿ ॥೬೨॥

ಮುತ್ತಿನವರೆಡು ಸತ್ತಿಗೆ ನೆರಳಲಿ ಬಹ
ಮೊತ್ತದ ಮಾನ್ಯರ ನಡುವೆ ।
ಚಿತ್ತಜ ಕಳೆಯಲೊಪ್ಪಿಹನಿವನಾರೆಂದು
ಮತ್ತೆ ಸಂಗಿಯನು ಕೇಳಿದಳು ॥೬೩॥

ಓರುಗಲ್ಲಿನ ಸುತನ ಬೊಲ್ಲನ ತಂದಂಥ
ಧೀರ ಚೆನ್ನಿಗ ರಾಮನೆಂದು ।
ನೀರೆ ರತ್ನಾಜಿಗೆ ಸಂಗಿ ಪೇಳಲು ಕೇಳಿ
ಮಾರನಂಬಿನ ಗಾಯವಾಗಿ ॥೬೪॥

ಬಟ್ಟಕುಚದ ಮೇಲೆ ಸೆರಗು ಜರಿದು ಬೀಳೆ
ಬಿಟ್ಟ ಸೋಲ್ಮುಡಿಯ ಮನ್ನಿಸದೆ ।
ಕಟ್ಟಾಳು ರಾಮನ ಲಾವಣ್ಯವನು ಕಂಡು
ದೃಷ್ಟಿಯಿಟ್ಟಳು ರತ್ನದೇವಿ ॥೬೫॥

ರಾಮನ ಚೆಲುವಿಗೆ ಸೋತ ರತ್ನಾಜಿಯು
ಕೋಮಲೆ ಚಿಂತೆಯೊಳಿರಲು ।
ಪ್ರೇಮದಿ ಗುಂಡಬ್ರಹ್ಮಯ್ಯನ [ಶೂಲಕೆ]
ಭೂಮಿಪ ಶರಣೆಂದು ನಡೆದ ॥೬೬॥

ಚಂದನ ಸಾದು ಜವ್ವಾದಿ ಕಸ್ತುರಿಯಿಂದ
ಅಂದದಿ ಪುಷ್ಪಮಾಲೆಯಲಿ ।
ಒಂದೊಂದು ಪರಿಯಲಿ ಮಲ್ಲಿಗೆ ಸರಗ [ಳಿಂ]
ಇಂದು ಶೂಲದ ಪೂಜೆ ಮಾಡಿ ॥೬೭॥

ಇಟ್ಟು ತೊಟ್ಟಿನ್ನು ಶೃಂಗರಮಾಡಿ ಶೂಲವ
ನಿಷ್ಠೆಲಿ ಮೆರೆವ ಮನ್ನೆಯರು ।
ಪಟ್ಟಣದೊಳಗೆಲ್ಲ ಕನಕಮಯದ ಶೂಲ
ದಿಟ್ಟ ಕಂಪಿಲ ಮೆರೆಸಿದನು ॥೬೮॥

ಪರಿಜನ ಪುರಜನ ಇರದೆ ಪರಿದು ಪೋಗೆ
ದೊರೆಗಳರಸ ಬೀಳ್ಕೊಡಲು ।
ಶರಣರ ಶೂಲದ ಹಬ್ಬವ ಮಾಡಿಸಿ
ಅರಸು ರಾಮನು ಕಳುಹಿದನು ॥೬೯॥

ಶೂಲದ ಹಬ್ಬವ ಮಾಡಿದ ರಾಮಯ್ಯ
ಮೇಲೆ ತನ್ನರಮನೆಗೈದ ।
ಬಾಲೆ ರತ್ನಾಜಿ ಚಿತ್ತಜನಂಡಲೊಳಗಾಗಿ
ಲೋಲನ ನೆನೆದು ವಿರಹದಲಿ ॥೭೦॥

ರಾಮನ ರೂಪನು ನೆನೆವುತ ರತ್ನಾಜಿ
ಕಾಮಗ್ರಹವು ಮೈತುಂಬಿ ।
ಸಾಮಜಗಮನೆ ತನ್ನೊಳು ಕಂದಿಕುಂದುತ
ಕೋಮಲೆ ಬಿಸುಸುಯ್ವುತಿರುಲು ॥೭೧॥

ಆರೇಳವಸ್ಥೆಯು ತೋರಿದ ವಿರಹದಿ
ಆರೊಡನುಸುರುವೆನೆನುತ ।
ಮಾರಾರಿ ಕೇಳಿನ್ನು ತಾಯಿಲ್ಲವೆನಗೆಂದು
ನಾರಿ ತನ್ನೊಳು ತಾನೆ ಮರುಗಿ ॥೭೨॥

[ಮೆಳೆಗಳ] ರಾಶಿಯ ಮೇಲೆ ಮೊಳೆಗೊಂಡಂತೆ
ಸುಳಿಗೊಂಡ ಆವುಗೆಯಂತೆ ।
ಬಳಲುತ ಅಂಗಜ ತಾಪದಿ ರತ್ನಾಜಿ
ಕಳೆಗುಂದಿ ನುಡಿಯಳಾರೊಡನೆ ॥೭೩॥

ಎಂತುಸುರುವೆ ಒಬ್ಬರೊಡನುಸುರುವುದಲ್ಲ
ಮುಂತೊಬ್ಬ ಎನಗಾಪ್ತರಿಲ್ಲ ।
ಚಿಂತಿಸಿ ರಾಮನ ರೂಪವ ನೆನೆನೆನೆದು
ಕಾಂತೆ ತನ್ನೊಳು ಕಳವಳಿಸೆ ॥೭೪॥

ಕಡು ದುಗುಡವಿದೇನು ರತ್ನಮ್ಮ ನಿನಗೆಂದು
ಒಡನೆ ನಾಗಾಯಿ ಕೇಳಿದಳು ।
ಬಿಡದೆ ಮಿಸುನಿವಣ್ಣ ಕಾಯ ಕುಂದು [ತಲಿದೆ]
[ನುಡಿ]ಗೆಟ್ಟು ನುಡಿಯಬೇಡಮ್ಮ ॥೭೫॥

ನಾಗಿ ಕೇಳರಸಿ ನಾಚಿ[ದೆ] ವಿರಹವು ಎನಗೆ
ಹೀಗಿರೆ ಚಿಂತಿಸುತಿರಲು ।
[ಬೇಗ] ಹಡಪದ ಬೊಮ್ಮಿ ಕೇಳಿ ಒಳಗೆ ಪೋಗೆ
ಆಗ ಉಸುರಿದಳು ಇಂತೆಂದು ॥೭೬॥

ಈ ತೆರನಾನೆಂತುಪೇಳಲಮ್ಮೆನು ನಾನು [ಕಾಮ]
ನೀತಿಕೋವಿದಳೆ ಕೇಳ್ನಾಗಿ ।
ಪಾತಕತನದಿಂದ ಉಸುರುವೆನೆಂದಳು
ಕಾಂತೆ ನಂಬುಗೆ ಮಾಡೆ ಎನಗೆ ॥೭೭॥

ಕಡಲೊಳು ವರನದಿಗಳು ಬೆರೆ(ವ)ಂದದಿ
ಮಡುವಿನೊಳಗೆ ಗುಂಡುಗಳ[ಲಿ] ।
ಕೊಡಹಾಲು ತೇಲದ ಪರಿಯಾಯಿತಕಟೆಂದು
ಮಡದಿ ಕೇಳೆನ್ನ ಹಗರಣವ ॥೭೮॥

ಮತ್ತೋಳಿತಾಯಿತು ನಂಬಲಾರೆನು ನಿನ್ನ
ಭೀತಿ ಬಿಡದು ನಾರಿಯನ್ನು ।
ಘಾತಕತನದಿಂದಲುಸುರುವೆನೆಂದಳು
ಕಾಂತೆ ನಂಬುಗೆಯ ಮಾಡೆನಲು ॥೭೯॥

ನಂಬು ಹಂಪೆಯ ವಿರುಪಾಕ್ಷನಾಣೆ ತ್ರಿ
ಯಂಬಕನಾಣೆ ನಿನ್ನಾಣೆ ।
ನಂಬು ಪೇ[ಳೆನೆ] ಪ್ರಮಾಣವ ಮಾಡಿಸಿ
ಅಂಬಲಿ ಅನ್ನವ ಮುಟ್ಟೆ ॥೮೦॥

ಕ್ಷೀರಾನ್ನ ಉಣಲಿಕ್ಕಿದಳು ರತ್ನಾದೇವಿಯು
ತೋರಮುತ್ತಿನ ಹಾರವಿತ್ತು ।
ಮಾರಸನ್ನಿಭ ರಾಮಗೆ ಸಿಕ್ಕಿದೆನುತಲಿ
ನೀರೆ ನಾಗಾಯೆ ಕಾಲ್ಪಿಡಿದು ॥೮೧॥

ತುಂಬಿತು ವಿರಹ ರಾಮಗೆ ಸಿಕ್ಕಿ ಮನಸೋತೆ
ಇಂಬುಗೊಂಡೆನು ಕಾಮಗೆದೆಯ ।
ಅಂಬುಜವದನೆ ತನ್ನೊಳು ತಾನೆ ಮರುಗುತ್ತ
ಕಂಬನಿದುಂಬೆ ಶೋಕದೊಳು ॥೮೨॥

ಅಷ್ಟರೊಳಗೆ ರಾಮನ ರೂಪ ರತ್ನಾಜಿ
ನೆಟ್ಟನೆ ಮನವನಾವರಿಸೆ ।
ಮುಟ್ಟಿದ ಮೂರ್ಛೆಯೊಳಗೆ ಒರಗಲು ಕಂಡು
ಹೆಟ್ಟುಗೆಯರು ಕಳವಳಿಸೆ ॥೮೩॥

ಹೆಣ್ಣ ಒಲಿಸಬೇಕು ಪ್ರೌಢೆಯಿಂ ಪುರುಷರು
ಕಣ್ಣಸನ್ನೆಯಲಿ ಬಾಲೆಯರು ।
[ಬನ್ನ]ಬಡಿಸಿ ಎಳತರಬೇಕು ನೀನಿಂತು
ಬಣ್ಣವಳಿವುದು ಸಲ್ಲ ॥೮೪॥

ರಾಜವಶ್ಯವ ಜನವಶ್ಯ ಸ್ತ್ರೀವಶ್ಯವ
ಮಾಜಲೇತಕೆ ನಾನು ಬಲ್ಲೆ ।
ಮೂಜಗಕಧಿಕ ರಾಮನ ತಂದು ನಿನಗೀವೆ
ರಾಜೀವಲೋಚನೆ ನಂಬು ॥೮೫॥

ನಂಬುವುದಿನ್ನೇನು ರಾಮನ ಚೆಲ್ವಿಕೆ
ಅಂಬಿಗೊಡ್ಡಿದ ಗುರಿಯಾದೆ ।
ಹಂಬಲ ಮರೆಯಲಾರೆನು ಮನನಿಲ್ಲದು
ಅಂಬುಜಮುಖಿ ತಂದು ತೋರೆ ॥೮೬॥

ವಾರಿಜೋದ್ಭವ ಹೆಣ್ಣನೇಕೆ ಪುಟ್ಟಿಸಿದನೊ
ಮೀರಿದ ಕಡುಪಾಪಿ ಎನ್ನ ।
ದಾರಿಯೊಳ್ ಮರನಾಗಿ ಪುಟ್ಟ [ಯೆ] ರಾಮ [ನ]
ಸೇರುವೆನೆನುತ ರತ್ನಾಜಿ ॥೮೭॥

ಅಳುವುದ್ಯಾತಕೆ ಹೆಣ್ಣಿಗೋಳಗಾಗದವರಾರೆ
ಕಳೆಯುಳ್ಳ ಪರಮಪುರುಷರಿಗೆ ।
ಎಳಸುವ ಚಿತ್ತವ ತಳುಹಿಕೊಂಬುದು ನಿನ್ನ
ಅಳವಿಗೆ ಸಿಕ್ಕುವ ತನಕ ॥೮೮॥

ಸಕ್ಕರೆವಿಲ್ಲನು ಸಿಕ್ಕುದುಂಟಾದರೆ
ಇಕ್ಕುವೆ ಆಭರಣವನು ।
ಸೊಕ್ಕಿದಾನೆಗೆ ನಿಗಳವ ಹಾಕಿದಂದದಿ
ಅಕ್ಕ ನಾಗಾಜಿಗಾಡಿದಳು ॥೮೯॥

ಸಿರಿಗಂಧ ಕಸ್ತೂರಿ ಪರಿಮಳ ಪನ್ನೀರು
ಉರಕೆ ಹದಮಾಡಿ ಲೇಪಿಸಲು ।
ಉರಿಯೊಳು ಘುತವೆರಸಿದಂತೆ ವಿರಹವು
[ಕರಿಕುವರಿಯೆ] ಬಳಲಿದಳು ॥೯೦॥

ಪುಂಡರೀಕನೊಳು [ಉಂಗುರ]ವಿಕ್ಕಿ ರತ್ನಾಜಿ
ಕೊಂಡುಹೋಗೆಂದು ನಾಗಿಯನು ।
ಅಂಡಲೆವುತ [ಕಾಮ] ಕಳವಳದೊಳಗಾ[ದೆ]
ಗಂಡುರಾಮನ ತೋರಿಸೆನೆಗೆ ॥೯೧॥

ಪ್ರಾಣಕ್ಕೆ ಸಂಚಕಾರವ ತಂದೆ ರತ್ನಮ್ಮ
ಜಾಣತನದ ಬಗೆಯಲ್ಲ ।
ಕಾಣಬಾರದು ರಾಮಯ್ಯನ ಮನವನು
ಪುಣ್ಯವೆ ಕೊಡುವುದುಂಗುರವ ॥೯೨॥

ದಟ್ಟಣಿ ಕಾಣದೆ ನೆರೆಹೊರೆಯೆಲ್ಲರ್ಗೆ
ತಟ್ಟಿ ಕರೆವ ಪರಿ ಹೇಗೆ ।
ಗುಟ್ಟು ನುಡಿಯು ಹೊರಗಾಗದಿರೆ ಕರ ಲೇಸು
ಗಟ್ಟೆಲ್ಲ ಒಲಿಸುವ ಮಾತು ॥೯೩॥

ಆಶ್ಚರ್ಯಮಾತನು ಕೇಳಿ ಉಬ್ಬಸಬಟ್ಟು
ರಚ್ಚೆಗೆ ತಂದು ನಾಚಿಕೆಯ ।
ಹುಚ್ಚುಗೊಳಿಸಿ ಕಂಡವರು ಮರುಳಾಗಲಿ
ಹೆಚ್ಚುಗೆಯಲ್ಲ ಪಾತಕವು ॥೯೪॥

ಅರಿವುಳ್ಳ ಹಿರಿಯರಿಗೆ ಅರಿಕೆಯಿರಬೇಕೆಂದು
ಅರಿತರೆ ದೈವಗತಿಯಲ್ಲಿ ।
ಮರೆದೆದ್ದ ಕನಸಿನ ಪರಿಯಂತೆ ನಡೆವುದು
ತರುಣಿ ಕೇಳಲೆ ಪಡೆದ ರಾಮ ॥೯೫॥

ಜಾಣತನದಿ ಇರಬೇಕು ಯಾರರಿಯದೆ
ಕಾಣದಂತೊಲಿಸಬೇಕವನ ।
ಊಣೆಯು ಬಹುದು ನೆರೆಹೊರೆ ಕಂಡರೆ
ಪ್ರಾಣಕ್ಕೆ ಬಗೆವ ಬಂಧನವು ॥೯೬॥

ಹಸನವಾಯಿತು ನಿನ್ನ ಶಾಸ್ತ್ರದ ಬಗೆ ನಾಗಿ
ವಶವಲ್ಲ ವಿರಹ ತಾಳುವಡೆ ।
ಅಸಹಾಯಶೂರ ರಾಮನ ತಂದು ತೋರಿಸೆ
ಬಿಸಜಾಕ್ಷಿ ಮನ ನಿಲ್ಲದೆನಗೆ ॥೯೭॥

ಒಂದಿನ ಯುಗವಾಗಿ ತೋರಿತ ನನಗೀಗ
ಎಂದಿಗೆ ಬಿಗಿದು ಅಪ್ಪುವೆನೆ ।
ಎಂದು ಕಳವಳಿಸುತ ನೆಟ್ಟದೃಷ್ಟಿಯೊಳಿರೆ
ಅಂದು ನುಡಿದಳು ರತ್ನಾಜಿ ॥೯೮॥

ಬಳಲುವ ಸಮಯದಿ ರಾಮ ಬಂದನುಯೆಂದು
ಕಳವಳಿಸುತಲೆದ್ದು ನಿಂದು ।
ಸುಳುಹು ಕಾಣದೆ ಹಂಬಲಿಸುತ ರತ್ನಾಜಿ
ಚೆಲುವ ನೀನಿಂತಡಗುವರೆ ॥೯೯॥

ಬೆಳದಿಂಗಳೆನಗೆ ಬೇಸಗೆ ಬಿಸಿಲಾಗಿದೆ
ಸುಳಿವ ತಂಗಾಳಿ ದಳ್ಳುರಿಯು ।
ಅಲಗಿಂದಲಿರಿವಂತೆ ತಳಮಳವಾಯಿತು
ತಿಳಿಯ ಪೇಳಲೆ ರಾಮುಗನೆ ॥೧೦೦॥

ಅರಮನೆಯೊಳಗುಂಟು ಅರಸು ರಾಮನ ಚಿತ್ರ
ಬರಸಿ ನಾ ನೋಡುವೆನೆನುತ ।
ಅರಸಿ ಕಾಣದೆ ನೊಂದುಕೊಂಡಳು ರತ್ನಾಜಿ
ಭರದಿ ರಾಮನ ಕಂಡಿರೆನುತ ॥೧೦೧॥

ತನ್ನರಮನೆ ಮುಂದೆ ಶೃಂಗಾರವನಕೆ ಪೋಗಿ
ಚೆನ್ನರಾಮನ ಚೆಲ್ವಿಕೆಯ ।
ಕನ್ನೆ ರತ್ನಾಜಿಯು ನಡೆಗೊಂಡು ನೋಡಿದಳು
ಹೊನ್ನ ಸೋಪಾನದ ಕೊಳನ ॥೧೦೨॥

ರಾಮನ ನೆನೆಯಬೇಕೆಂದು ನೇಮವ ಮಾಡಿ
ಸ್ವಾಮಿ ಪಂಜರದರಗಿಳಿಯ ।
ರಾಮ ರಾಮಯೆಂದು ನೆನೆವುತ ರತ್ನಾಜಿ
ಪ್ರೇಮ[ದಲ್ಲಿಯೆ] ಇರುತಿರಲು ॥೧೦೩॥

ವಸವಂತ ಕೊಳ (ನೊ)ಳು ಕುಸುಮ ಹೊಂದಾವರೆ
ಕುಶಲ ರಾಮನ ಕಂಡಿರೆಂದು ।
ಬಸವಳಿ[ಯು]ತ ನೈದಿಲನುಪಚರಿಸು [ತ]
ಹೊಸ ತಳಿರ್ಗಳ ಬೆಸಗೊಳಲು ॥೧೦೪॥

ಸ್ವರದ ಕೋಗಿಲೆ ನಿನ್ನ ಸ್ವರದ ಚೆಲ್ವಿಕೆಯನ್ನು
ಇರದೆ ಸಾರುವೆ ಜಗದೊಳಗೆ ।
ಅರಸು ರಾಮನ ಕಂಡರೆ ತೋರಿಸೆಂದಳು
ಸರಸಿಜಮುಖಿ ವಿಕಳದಲಿ ॥೧೦೫॥

ಕಂಡಿರೆ ಗಿಳಿ ಮಧುಕರ ನವಿಲ್ಗಳೆ ನೀವು
ಕಂಡಿರೆ ಹಂಸ ಚಕೋರ ।
ಕಂಡರೆ ತೋರಿ ಪ್ರಚಂಡ ರಾಯನಯೆಂದು
ಮುಂಡಾಡಿದಳು ಬಿಂಬಫಲವ ॥೧೦೬॥

ಅಲ್ಲಲ್ಲಿ ನೋಡಿ ರಾಮನ ಕಾಣದೆ ರತ್ನಿ
ತಲ್ಲಣಿಸುತ ತಿರುಗಿದಳು ।
ಮಲ್ಲಿಗೆ ಬನದೊಳು ಅರಸುತಿರಲು ರತ್ನಿ
ವಲ್ಲಭ ಕಂಪಿಲ ಬಂದ ॥೧೦೭॥

ಮಿಸುನಿವರ್ಣದ ಮೈ ಕುಂದಿರೆ ರತ್ನಾಜಿ
ಹೊಸಪರಿ ಚಿತ್ತ ಭೀತಿಯಲಿ ।
ಹಸಗೆಟ್ಟ ಕಾರಣವೇನೆಂದು ಕಂಪಿಲ
ಬೆಸಗೊಂಡ ಶಶಿಮುಖಿಯಳನು ॥೧೦೮॥

ಮನ ಮಾಸಿದ ಕಾರ್ಯವು ಏನೆ ರತ್ನಾಜಿ
ವಿನಯ ಕಂಪಿಲನು ಕೇಳುತಲಿ ।
ಮನಸಿಜ ಸಮರೂಪ (ರಾಯನೆ) ಬಿಗಿಯಪ್ಪಿ
ಮನ ಕೆಡಿಸಿ[ದೆ] ಕೇಳರಸ ॥೧೦೯॥

ಹೆಂಗಳ [ಅ]ರಸಿ ಬಡವಾದ ಕಾರಣವೇನು
ಮಂಗಳುತ್ಸವ ದೈವಗಳಿಗೆ ।
ಹಿಂಗದೆ ನೇವರಿಸಿ ನೋಡೆಂ [ದ] ಕಂಪಿಲ
ಅಂಗವನರಿಯ ನಾರಿಯಳ ॥೧೧೦॥

ಮುಟ್ಟಿ ಗೌಡಿಯ ಮಾಡಿದಿರಿ ತೇಜದಲೆಂದು
ಹೊಟ್ಟುಗೆ ಚಿಂತಿಸಬೇಡ ।
ಪಟ್ಟದರಸಿಯರ ಸಮವ ಮಾಳ್ಪೆನು ನಿನ್ನ
ಕೊಟ್ಟ ವಾಕ್ಯವ ನೀನು ನಂಬು ॥೧೧೧॥

ಅರ್ತಿ ಬೇಂಟೆಗೆ ಹೋಗುವೆನೆಂದು ಕಂಪಿಲ
ಮತ್ತೆ, ಸತಿಯೊಳು ಪೇಳಿದನು ।
ಮುತ್ತಿದ ವಿರಹತಾಪದಿ ರತ್ನಿಯಿರುತಿರೆ
ಚಿತ್ರದ ಸಂಧಿ ಏಳನೆಯ ॥೧೧೨॥

ಅಂತು ಸಂಧಿ ೭ಕ್ಕಂ ಪದನು ೩೩೮ಕ್ಕಂ ಮಂಗಳ ಮಾತಾಶ್ರೀ

❖❖

ಸಂಧಿ : ೮

❖

ಕುಮ್ಮಟದುರ್ಗ ನಿರ್ಮಾಣ

ಕೆಂಜೆಡೆ ವಿಷಗಳ ರಂಜಿಪ ಸುಲಿಪಲ್ಲ
ಕುಂಜರ ಚರ್ಮಾಂಬರನೆ ।
ಕುಂಜಭವನ ಶಿರವರಿದ ಮಹಾತ್ಮನೆ
ನಂಜುಂಡೇಶ್ವರಗೆರಗುವೆನು ॥೧॥

ಕರುಣಿಸು ಗೌರಿಕುಮಾರ ಲಂಬೋದರ
ಕರುಣಿಸು ಕರಿಮುಖದವನೆ ।
ಕರುಣಿಸು ವಿದ್ಯವಾರಿಧಿಯೀವ ಗಣನಾಥ
ಕರುಣಿಸು ಜಟ್ಟಂಗಿ ಪುತ್ರ ॥೨॥

ಮುತ್ತಿನ ಮುಡಿಯ ಸೂಸಕ ದಂಡೆ ಭುಜಕೀರ್ತಿ
ಹಸ್ತಕಡಗ ಮುತ್ತಿನೋಲೆ ।
[ಬಿ]ತ್ತರದಲಿ ಮುದ್ದು ನುಡಿಯಿಂದ ಸರಸ್ವತಿ
ಉತ್ತಮ ಮತಿಯಿತ್ತು ಸಲಹು ॥೩॥

ಶೂಲದ ಹಬ್ಬವ ಮಾಡಿಸಿ ರಾಮಯ್ಯ
ಲೋಲಮಾನ್ಯರ ಕೂಡಿಕೊಂಡು ।
ಲೀಲೆಯಿಂ ಬೇಂಟೆಯನಾಡುತ ರಾಮಯ್ಯ
ಮೇಲಾದ ದುರ್ಗವ ಕಂಡ ॥೪॥

ಕುಮ್ಮಟವನ್ನು ತಾ ಕಂಡು ರಾಮಯ್ಯನು
ವರ್ಣಿಸಿದನು ಮನದೊಳಗೆ ।
ಭೂಮಿಯೊಳಗೆಯಿದು ಚೋದ್ಯವೆಂದೆನುತಲಿ
ಪ್ರೇಮವ ಮಾಡಿ ರಾಮಯ್ಯ ॥೫॥

ಪಂಥಕ್ಕೆ ಗುರಿ [ಸಿ] ರಿರಾಮನ ಮಚ್ಚು
ಪಂಥವುಳ್ಳವರು ಲಾಲಿಪುದು ।
ಕಂತು ಸಮಾನ ರಾಮಯ್ಯನ ಕೃತಿಯನು
ಮುಂತೆ ಕೇಳದಲಿಹನಾರು ॥೬॥

ಈ ಕೃತಿಯನು ಲಾಲಿಸಿ ಕೇಳಿದರೆ ಮುಕ್ತಿ
ಸಾಕಾರವಾಗಿ ಬಾಳುವರು ।
ಲೋಕದೊಳಗೆ ಪರನಾರಿ ಸಹೋದರ
ಈ ಕಲಿ ರಾಮನ ಕೃತಿಯ ॥೭॥

ಶ್ರೀ ಗಿರಿಜಪ್ರಿಯ ಸಿಂಧುರ ಚರ್ಮಾಂಬರ
ಆಗಮಶ್ರುತಿಗೆ ಅಭೇದ್ಯ ।
ಭಾಗೀರಥಿ ಧರ ಭವರೋಗವೈದ್ಯನೆ
ಯೋಗಿ ಜನರ ಮನೋಹರನೆ ॥೮॥

ರಾಮನ ನೆನೆ ಕಂಡ್ಯಾ ಮನವೆ ಜಟ್ಟಂಗಿಯ
ರಾಮನ ನೆನೆ ಕಂಡ್ಯಾ ತನುವೆ ।
ರಾಮ ರಾಮಾಯೆಂದು ನಾಮವ ನೆನೆದರೆ
ಕಾಮಿತ ಫಲವೀವ ರಾಮ ॥೯॥

ರಾವಣಗಂಜಿ ವಿಭಿಷಣದೇವ [ತಾ]
ರಾಮನ ಮರೆಹೊಕ್ಕು ಉಳಿದ ।
ದೇವ ಜಟ್ಟಂಗಿಯ ಮರೆವೊಕ್ಕ ಜನರಿಗೆ
[ಕಾವುದು] ರಾಮನ ಕೃತಿ [ಯು] ॥೧೦॥

ಪರನಾರಿ ಸೋದರ ಚೆನ್ನಿಗ ರಾಮನ
ಪರಿಯ ಕೇಳಲು ಮುಕ್ತಿಯಹುದು ।
ನರಕೃತಿಯಿದುಯೆಂದು ಜರಿಯಲಾಗದು ಕೇಳಿ
ವರವೀವ ಶೌರ್ಯ ಕಾಳಗವ ॥೧೧॥

ಕೊಟ್ಟದ ಮಾನ್ಯರು ಬೇಂಟೆಯನಾಡುತ
ಘಟ್ಟದ ಮೃಗಗಳ ಕಂಡು ।
ಬೆಟ್ಟ ಬೆಟ್ಟವನಡ [ರುತ] ಮೊಲನೆಬ್ಬಿಸಿ
ಬಿಟ್ಟರು ನಾಯ ಹಾಸಗಳ ॥೧೨॥

ಹೆಬ್ಬುಲಿ ಕರಡಿ ಕಾಡೆಮ್ಮೆ ಕೋಣನ ಹಿಂಡು
ಬೊಬ್ಬಿಟ್ಟು ಶಿರಗಳ ಕೊಯಿದು ।
ಕಬ್ಬಿಲಿಗರ ನಾಗ ಹೆಬ್ಬುಲಿ ಇರಿದನು
ಸರ್ಬದಳದ ಮಂದಿಯೊಳಗೆ ॥೧೩॥

ಎದ್ದೋಡಿತು ಹಂದಿ [ತಾ] ಬೇಗದಿಂದಲಿ
ಇದ್ದ ಮನ್ನೆಯರ ಕೊಲ್ಲುತಲಿ ।
ಗದ್ದಗದ ನಡುಗುತ ಮುರಿದೋಡಿ ಪರಿವಾರ
ಎದ್ದೊಡಿದರು ತವಕದಲಿ ॥೧೪॥

ಲೆಕ್ಕವಿಲ್ಲದೆ ಮಂದಿ ಒಕ್ಕಲಿಕ್ಕುತ ಬರೆ
ಚಿಕ್ಕ ಚೆನ್ನಿಗರಾಮ ಕಂಡು ।
ಸೊಕ್ಕಿದೆಕ್ಕಲನ ಬಾಣವ ತೊಟ್ಟು ಎಸೆಯಲು
ಕುಕ್ಕರಿಸುತ ಹಂದು ಕೆ[ಡೆದು[॥೧೫॥

ಮುದ್ದು ಮುಖದ ರಾಮ ಬೆನ್ನಟ್ಟಿ ಬರಲಾಗ
ಎದ್ದಿತು ಮೊಲನು ಕುಮ್ಮಟಿದಿ ।
ಇದ್ದಂತ ನಾಯಿಗಳ ಹಾಸವ ಬ[ಹ]ಳ ಬಲು
ಗುದ್ದಿತು ನಾಯ ಮೇಲ್ಪಂದು ॥೧೬॥

ದಿಟ್ಟ ಚೆನ್ನಿಗ ರಾಮ ಆದ ಕಂಡು ಕೋಯೆನೆ
ಅಟ್ಟಿತು ಜುಣಗಿಯೆಲ್ಲರನು ।
ಬಿಟ್ಟಲ್ಲಿ ಬಿಡದೆ ಹುಯ್ಯಲ ಕುಮ್ಮ [ಟ] ಕಾಗಿ
ನೆಟ್ಟನೆ ಬೆನ್ನಟ್ಟಿ ನಡೆಯೆ ॥೧೭॥

ಮುಂಡಲೇಶ್ವರ ರಾಮ ಕಂಡನು ದುರ್ಗ [ವ]
ಕಂಡು ಬೆರಗುವಟ್ಟನಾಗ ।
ತಂಡ ತಂಡದ ಪರಿವರವು ಸಹವಾಗಿ
ಹಿಂಡು ಮಾವಿನ ತೋಪಿನಡಿದು ॥೧೮॥

ಜೈನರು ಕುಮ್ಮಟ ದುರ್ಗದಿಂದಲಿ ಮತ್ತೆ
ಚೆನ್ನ ರಾಮನ ಬಳಿಗೈದಿ ।
ಚೆನ್ನಾಗಿ ಉಲುಪಿಯ ತಂದು ಕಾಣಿಕೆಯಿಟ್ಟು
ಇನ್ನು ರಾಮನ ಕರೆದೊಯಿದು । ॥೧೯॥

ಉನ್ನತ ಹರುಷದಿ ಕುಮ್ಮಟವನು ಹತ್ತಿ
ಚೆನ್ನಾಗಿ ದುರ್ಗ ನೋಡಿದನು ।
ಮನ್ನೆಯ ರಾಮನು ನುಡಿದ ಮತ್ತೆ [ಮತ್ತೆಯು]
ಇನ್ನು ರಾಯರಿಗಳವಲ್ಲ ॥೨೦॥

ಗಂಡು ಭೂಮಿಯುಯಿದು ನಾಯ ಕಚ್ಚಿತು ಮೊಲ
ತಂಡ ತಂಡದ ಜನ ನೋಡೆ ।
ಮಂಡಲದೊಳು ಕುಮ್ಮಟ ನೋಡಿ ರಾಮಯ್ಯ
ಕಂಡು ಹಿಗ್ಗಿದ ಮನದೊಳಗೆ ॥೨೧॥

ಹಿರಿದು ದುರ್ಗವು ತನಗಿರಲೆಂದು ರಾಮಯ್ಯ
ದೊರೆ ವೀರ ಮನ್ನೆರೊಳೆಂದ ।
ಕರೆತಂದು ಜೈನ[ರು] ಅಡಿಗೆಯ ಮಾಡಿಸಿ
ಭರದಿ ರಾಮನ ಕರೆದೊಯಿದು ॥೨೨॥

ನಿಲ್ಲದೆ ಕಾಲ್ಮೊಗದೊಳೆದು ಗದ್ದುಗೆ ಹಾಕಿ
ಎಲ್ಲರ ತಂದು ಕುಳ್ಳಿರಿಸಿ ।
ನಿಲ್ಲದೆ ಬಾಳೆಯೆಲೆಗಳನು ಹಾಸಿಯೆ
ಅಲ್ಲಿ ಜೈನರು ಭೋಜನಗಳ ॥೨೩॥

ಕರಿದ ಗಾರಿಗೆ ಮಂಡಗೆ ಕ್ಷೀರ ಸಕ್ಕರೆ
[ಹು]ರಿದ ಭಕ್ಷಗಳ ಅನ್ನಗಳ ।
ಪರಿಪರಿ ಹಪ್ಪಳ ಸಂಡಿಗುಪ್ಪಿನಕಾಯಿ
ಇರದೆ ಭೋಜನವ ಮಾಡಿದರು ॥೨೪॥

ಬಿಳಿಯ ಕರ್ಪೂರ ಹೋಳು ವೀಳ್ಯಗಳ [ನು] [ತಿಂ]ದು
ಚೆಲುವ ರಾಮಯ್ಯನು ಕುಳಿತು ।
ಘಳಿಲನೆ ಮಾನ್ಯರಿಗುಪಚಾರ ಮಾಡಿಸಿ
ಅಳವಡಿಸುವ ವಸ್ತ್ರ ತೊಟ್ಟ ॥೨೫॥

ಊಟವ ಮಾಡಿನ್ನು ಇಳಿದ ಕುಮ್ಮಟವನ್ನು
ಕೋಟಿ ಮನ್ಮಥ ಸಮರೂಪ ।
ಊಟವ ಉಂಡಲ್ಲಿ ವಂಕುಡಿ ಮರೆದನು
ಅಟ್ಟಿದ ತನ್ನ ಚರರನು ॥೨೬॥

ನೆಟ್ಟನೆ ಕುಮ್ಮಟವನು ಹತ್ತಿ ರಾಮಯ್ಯ
[ನಿ]ಟ್ಟ ಕಂಜರವ ಕೇಳಿದನು ।
ಕೊಟ್ಟಿದ ರಾಮಯ್ಯ ಕುಳಿತ ಮಂಚದ ಮೇಲೆ
ಇಟ್ಟಿದೆ ಕಂಜರ ಬಾಕು ॥೨೭॥

ಕರಬೇಗ ನೋಡಿ ತೆಕ್ಕೊಳೆಂದು ಹೇಳಲು
ಚರ ಬೇಗ ಬಂದು ನೋಡಿದನು ।
ಇರದೆ ತೆಕ್ಕೊಂಡು [ಬಹ] ಸಮಯದಿ ಕಂಡನು
ದೊರೆ ರಾಮ[ನು] ಉಂಡ ತಾ [ವ] ॥೨೮॥

ಕಂಡಾಗ ಬಂದು ತನ್ನೊಡೆಯಗೆ ಹೇಳಲು
ತೊಂಡ ಜೈನರು ನೋಡೆನಲು ।
ಉಂಡ ಠಾವನುಯೆತ್ತಿ ಸಾರಣೆಮಾಡಿಯೆ
ಭಂಡರ ನೋಡಿಯೆಂದೆನಲು ॥೨೯॥

ಕೇಳಿದ ಕೋಪವ ತಾಳಿದ ರಾಮಯ್ಯ
ಭಾಳಾಕ್ಷ ಕೊಟ್ಟನೆಂದೆನುತ ।
ಕೇಳಿ ಕುಮ್ಮಟದೊಳಗಿದ್ದ [ಬ] ಸ್ತಿಗಳಿಗೆ
ಸೀಳಿಸಿ ಕುರಿಕೋಣಗಳನು ॥೩೦॥

ತಡೆಯದೆ ಕುರಿಕೋಣ ಕಡಿದು ಬಲಿಯನಿಕ್ಕಿ
ಸುಡಿಸಿದ ಕುರಿಕೋಳಿಗಳನು ।
ತಡೆಯದೆ ಜೈನ ಖೂಳರಿವರೆಂದು
ಬಿಡದಾಗ ಹೊರ[ಡೆ] ಕುಮ್ಮಟವ ॥೩೧॥

ಬಿಟ್ಟ[ರು] ಕುಮ್ಮಟವರು ಕೊ[ಪ್ಪ]ಳಕಾಗ
ನೆಟ್ಟನೆ ಕೆಟ್ಟಿ ಪಟ್ಟಣವ ।
ಕೋಟೆ ಕುಮ್ಮಟದಲ್ಲಿ ಚೆನ್ನಿಗರಾಮಯ್ಯ
ದಿಟ್ಟ ಕಾಮಾಟಿಗರ ಕರೆಸಿ ॥೩೨॥

ಎತ್ತಿತು ಕೊತ್ತಳ ಗಗನವ ತುಳುಕಲು
ಸುತ್ತಲಿ ಆಳ್ವೇರಿಗಳು ।
ಮೊತ್ತದಿ ಹುಲಿಮುಖಗಳು ಸಂಭ್ರಮಿಸೆ
ಸುತ್ತಲಿ ದುರ್ಗ ರಂಜಿಸಲು ॥೩೩॥

ಎಡಬಲದಲ್ಲಿ [ಯು] ಅನ್ನ ಭೂದಾನವು
ಸಡಗರದಲ್ಲಿ ಪುರವೆಸೆಯೆ ।
ಗುಡಿವನಗಳು ಪುಷ್ಪ ಫಲಗಳು ಚೆನ್ನಿಗರಾಮ
ಬರೆಸಿದ ಬಿನ್ನವತ್ತಳೆಯ ॥೩೪॥

ಕರೆದು ಕೊಟ್ಟನು ಬಂದಿಕಾರನ ಕೈಯಲಿ
ಇರದೆ ನಡೆತಂದ ಹೊಸಮಲೆಗೆ ॥೩೫॥

ಬಂದಿಕಾರನು ಬಂದು ನಿಂದನು ಕರಮುಗಿದು
ತಂದೆ ಓಲೆಯನು ಮುಂದಿಡಲು ।
ಅಂದು ಕಂಪಿಲ ಕಂಡು ಸರಸದಿ ನಗುತಲಿ
ತಂದ ವಿವರವನು ಕೇಳಿದನು ॥೩೬॥

ಹೊಸಮಲೆ ದುರ್ಗಕೆ ಮಿಸುನಿಯ ಕುಮ್ಮಟ
ವಸುಧೀಶ ಕಂಪಿಲ ಕೇಳು ।
ಹೊಸತಾಗಿ ಜೈನರು ಕಟ್ಟಿದ ದುರ್ಗವು
ಶಶಿಧರನಲ್ಲೆಸದಿಹನು ॥೩೭॥

ಮಂತ್ರಿ ಬೈಚಪ್ಪನ ಕರೆಸಿದ ಬೇಗದಿ
ನಿಂತು ಬೈಚಪ್ಪನ ಕರೆದಾಗ ಕೊಟ್ಟನು
ಇಂತು ಓದಿಸಿನೋಡೆಂದೆನುತ ॥೩೮॥

ಬಿನ್ನವತ್ತಳೆಯನು ತೆಗೆದು ಪ್ರಧಾನನು
ಚೆನ್ನಿಗರಾಮ ಬರೆದುದನು ।
ಚೆನ್ನಾಗಿ ಓದಿಸಿ ಕೇಳಿದ ಕಂಪಿಲ
ಉನ್ನತ ಹರುಷ ತಾಳಿದನು ॥೩೯॥

ಶ್ರೀಮತು ಪರರಾಯ ತಿಮಿರಮಾರ್ತಂಡನು
ಭೂಮಿಪಾಲಕ ಕಂಪಿಲಗೆ ।
ಪ್ರೇಮದಿ ಮಾಡು[ವ] ಬಿನ್ನವತ್ತಳಿಯನು
ಆ ಮಹಾಪ್ರಧಾನ ಓದಿ ॥೪೦॥

ಸಮಸ್ತ ಗುಣಸಂಪನ್ನ ಮುಮ್ಮಡಿಸಿಂಗ
ಭೂಮಿಪಾಲಕನಾತ್ಮಜನು ।
ಆ ಮಹಾ ಕಂಪಿಲ ತಂದೆಗೆ ರಾಮನು
ಪ್ರೇಮದಿ ಮಾಳ್ಪ ಬಿನ್ನಹವು ॥೪೧॥

ಜೈನರ ಕುಮ್ಮಟದುರ್ಗವ ತೆಕ್ಕೊಂಡು
ನಾನು ಕಟ್ಟಿಸಿದೆ ದುರ್ಗವನು ।
ಮಾನವ ಪಾಲಕ ಕಂಪಿಲ ನೀ ಬಂದು
ಈ ನಗರವನು ಪಾಲಿಪುದು ॥೪೨॥

ಇಂತು ಓಲೆಯ ಕೇಳಿ ಸಂತೋಷವಾಗಿರೆ
ಮುಂತೆ ಎಲ್ಲರಿಗೆ ಸೈರಣೆಯ ।
ಮಂತ್ರಿ ಬೈಚಪ್ಪನ ಒಡಗೊಂಡು ಕಂಪಿಲ
ತಾ ತೆರಳಿದನು ಕುಮ್ಮಟಕೆ ॥೪೩॥

ತಂದೆ ಬಂದುದು ಕೇಳಿ ಕಂದ ರಾಮಯ್ಯನು
ಬಂದು ಚರಣಕ್ಕೆರಗಿದನು ।
ಕಂದನ ನೋಡಿ ಬಿಗಿಯಪ್ಪಿ ಕಂಪಿಲ
ಅಂದು ಮುಮ್ಮಡಿ ಕಂದನನು ॥೪೪॥

ಮಂತ್ರಿ ಮನ್ನೆಯರೆಲ್ಲ ಸಂತೋಷದಿಂದಲಿ
ಅಂತು ಕುಮ್ಮಟವ ಹತ್ತಿದರು ।
ಸಂತೋಷದಿಂದಲಿ ಕುಮ್ಮಟವನು ನೋಡಿ
ನಿಂತು ನೋಡಿದರು ತಾವೆಲ್ಲ ॥೪೫॥

ಅರಮನೆ ಚಾವಡಿ ಗರುಡಿ ನಾಟಕಶಾಲೆ
ಹರಿಯಲದೇವಿಯರಮನೆಯ ।
ಅರಸಿ ರತ್ನಾಜಿಯ ಬೇರೊಂದು ಅರಮನೆ
ಪಿರಿದಾಗಿ ದುರ್ಗ ಸಂಭ್ರಮಿಸೆ ॥೪೬॥

ಮಂತ್ರಿ ಮನ್ನೆಯರಿಗೆ ಠಾವು ಬೀಡನೆ ತೋರಿ
ಸಂತೋಷ ಕಂಪಿಲರಾಯ ।
ಮುಂತೆ ಬೈಚಪ್ಪನ ಕೂಡೆ ಹೇಳಿದನಾಗ
ಕಂತು ತನ್ನಯ ರಾಣಿಯರು ॥೪೭॥

ನೆಟ್ಟನೆ ಹಸ್ತಿನಿ ಚಿತ್ತಿನಿಯರು ಸಹ
ಬಟ್ಟ ಕುಚದ ಚೆಲ್ವೆಯರು ।
ತಟ್ಟನೆ ಶಂಕಿನಿ ಪದ್ಮಿನಿಯರು ಸಹ
ದಿಟ್ಟರು ನೆರದು ದುರ್ಗದಲಿ ॥೪೮॥

ಉತ್ತಮ ದೇಶದ ಪರಿಜನರ ಪುರಜನ
ಅರ್ತಿಲಿ ನೆರೆದು ನಾರಿಯರು ।
ಸತ್ಯ ಶಾಸ್ತ್ರಿಕರು ಭಕ್ತಿ ಭಾವಂತರು
ಉತ್ತಮ ಗುರು ಹಿರಿಯರನು ॥೪೯॥

ಪುರದ ಪುಣ್ಯಸ್ತ್ರೀಯರು ಅರತಿಯನೆತ್ತಿ
ಹರುಷದಿಂದ್ಯೆತರುತಾಗ ।
ಭರದಿಂದ ಬಂದು ನಿಂತರು ಕೋಲಾಟದ
ತರುಣಿಯರೆಲ್ಲ ಶೃಂಗರಿಸಿ ॥೫೦॥

ಇಟ್ಟಾಡು ಚೋಹದ ಬೊಂಬೆಯರಮನೆ
ತೊಟ್ಟಾಡುವ ಚೋರಗೃಹವು ।
ನೆಟ್ಟನೆ ಸೊಗಸುದೋರವು ನಾಟಕಸಾಲೆ
ಕಟ್ಟಾಳು ಪುರದೊಳಗೆಸೆಯೆ ॥೫೧॥

ಇತ್ತ ಕಂಪಿಲನ ಜಂಗುಳಿಯ ಕುಮಾರರು
ಮೊತ್ತದಿಲ್ಯೆತಂದರಾಗ ।
ಉತ್ತಮ ತೇಜಿಯನೇರಿ ಬಂದನು ಬೇಗ
ಮತ್ತೆ ರಾಯರ ದೇವ ರಾ[ಮ] ॥೫೨॥

ಇಟ್ಟನು ರನ್ನದ ಪದಕವ ರಾಮಯ್ಯ
ಇಟ್ಟ ಮುತ್ತಿನ ಚೌಕುಳಿಯ ।
ಇಟ್ಟನು ಕಸ್ತೂರಿ ತಿಲಕವ ನೊಸಲೊಳು
ಸುತ್ತಿದ ಚಿಮ್ಮುರಿ ಚುಂಗು ॥೫೩॥

ಎಪ್ಪತ್ತುಎರಡು ಮನ್ನೆಯರ ಸಂದಣಿಯೊಳು
ಒಪ್ಪುವ ಚಂದ್ರನಂದದಲಿ ।
ಒಪ್ಪುವ ಚೆನ್ನಿಗ ರಾಮ ಬಂದೈದಾನೆ
ಪುಷ್ಪಸುಗಂಧಿ ರತ್ನಾಜಿ ॥೫೪॥

ರಾಣಿವಾಸಿಯರು ಉಪ್ಪರಿಗೇರಿ ನಿಂದರೆ
ಏಣಾಕ್ಷಿ ರತ್ನಿ ಕೇಳೊಲಿದು ।
ಜಾಣೆ ಕಲ್ಯಾಣಿ ಸುತ್ರಾಣಿಯೆ ಪ್ರವೀಣೆ
ಮಾಣಿಕದುಟಿಯ ರತ್ನಾಜಿ ॥೫೫॥

ಕನ್ನೆ ಸೌಂದರಿ ಸಂಪನ್ನೆ ಊರ್ವಶಿಯೆ
ಚೆನ್ನ ಕಾವನ ಮದಕರಿಯೆ ।
ಸನ್ನ [ದ] ಗಮನೆ ರಾಮನ ನೋಡಬೇಕೆಂದು
ರನ್ನೆ ತೈಲಭ್ಯಂಗವಾಗಿ ॥೫೬॥

ಮಿಂದು ಮಡಿಯನುಟ್ಟಾಗ ರತ್ನಮ್ಮ
ಇಂದುಮುಖಿಯು ಕನ್ನಡಿಯ ।
ತಂದು ತೋರಲು ಸಖಿಯರು ಕೋಮಲಾಂಗಿಗೆ
ವಂದಿಸಿ ಮುಗುಳ್ನಗೆ ನಕ್ಕು ॥೫೭॥

ಮುಡಿಯನಾರಿಸಿ ದೇವಾಂಗವನುಟ್ಟಳು
ಮುಡಿಯನಾರಿಸಿ ತುರುಬಿಕ್ಕಿ ।
ಹಡಪದ ಸಂಗಿ ಮೊಲ್ಲೆ ಮಲ್ಲಿಗೆ ಜಾಜಿ
ಮುಡಿಸಿದಳವಳ ಸೊಲ್ಮುಡಿಗೆ ॥೫೮॥

ಹಂಸಗಮನೆ ರತ್ನಿ ನಾಗಿಯರೆಲ್ಲರು
ಕುಶಲ ರಾಮನ ನೋಡುವುದಕೆ ।
ಬೊಗಸೆಗಂಗಳೆಯರು ಕೂಡಿ ಶೃಂಗರವಾಗಿ
ಸೊಗಸಾಗಿ ಶೃಂಗಾರದಿಂದ ॥೫೯॥

ತೊಡಿಗೆಯ ತಂದಳು ಸಖಿ ರತ್ನದೇವಿಗೆ
ಕುಡಿನೀರ ನಾಗಿ ಬಂದವಳು ।
ಒಡನೆ ನಮ್ಮವರ ಅರಸಿಯೆ ನಿನಗೆಯು
ತೊಡಕು ಬೇಡೆಂದು ನುಡಿದರು ॥೬೦॥

ಹಸ್ತಕಡಗ ಮುತ್ತಿನ ಬೊಟ್ಟು ನೊಸಲೊಳು
ಕಸ್ತುರಿ ಗಂಧ ಕುಂಕುಮವು ।
ಉತ್ತಮ ಸಾದು ಜವಾದಿ ಕಸ್ತುರಿ ಪುಣುಗು
ಉತ್ತಮವೆನಿಪ ಲೇಪನವು ॥೬೧॥

ಹೊಸಮುತ್ತಿನೊಲೆ ಹೊಂಗಡಗ ಮುತ್ತಿನ ಬೊಟ್ಟು
ಮಿಸುಪ ಮೂಗುತಿ ಕಂಠಮಾಲೆ ।
ಮಿಸುನಿಯ ಪದಕವನಿಟ್ಟಳು ರತ್ನಾಜಿ
ಎಸೆದಳು ರತಿದೇವಿಯಂತೆ ॥೬೨॥

ಪರಿಮಳಿಸುವ ಸಂಪಗೆಯಿಂದ ತುರುಬಿಕ್ಕಿ
ಸುರಹೊನ್ನೆ ಮೊಗ್ಗೆ ಮೊಲ್ಲೆಯೊಳು ।
ಮೆರೆವ ರತ್ನದ ಸರ ಒಪ್ಪಿ[ಸೆ] ರತ್ನಿಗೆ
ದರಹಾಸಮುಖಿಯರರ್ತಿಯಲಿ ॥೬೩॥

ಪಂಕಜಮುಖಿ ರತ್ನಾದೇವಿಯು ಮತ್ತಾಗ
ಕುಂಕುಮ ಕಸ್ತೂರಿಯಿಟ್ಟು ।
ಝೋಂಕರಿಸುವ ಅಂದುಗೆಯಿಟ್ಟು ನಡದಳ್ಮೀ
ನಾಂಕನ ಮದದಾನೆಯಂತೆ ॥೬೪॥

ಅಂಗಜನಲರಂ[ಬೊ ಮೂಡಣ ಭಾನುವೋ]
ಬಂಗಾರ ಬೊಂಬೆಯಂದದಲಿ ।
ಅಂಗುಲಿಗಳ ಪಟ್ಟ ಹೊನ್ನ ಹಾವುಗೆ ಮೆಟ್ಟಿ
ಹೆಂಗಳ ರನ್ನೆ ನಡೆತರಲು ॥೬೫॥

ಮದನನ ಮದಕರಿಯಂತೆ ನಡೆವ ಭಾವ
ಚದುರೆ ಕುಚಗಳಲುಗುತಲಿ ।
ಇದಿರಾಗಿ ಬಾಹರ ಹೃದಯವು ಬಿರಿವಂತೆ
ಮದನರಾಣಿಯು ರತಿಯಂತೆ ‖೬೬‖

ಚದುರೆ ಬಂದಳು ರತ್ನಾದೇವಿಯು ಗತಿಯಿಂದ
ಚದುರವೆಣ್ಣುಗಳೊಡಗೊಂಡು ।
ಮಧುರ ಹಂಸದ ಹಂಪಾಜಿ ಗಿಂಡಿಯ ನಾಗಿ
ಸುದತಿ ರತ್ನಾಜಿ ಕೈವಿಡಿದು ‖೬೭‖

ಶೃಂಗಾರ ತೋಟಕ್ಕೆ ಇಟ್ಟ ನಿಚ್ಚಣಿಕೆಯ
ಅಂಗನೆಯರು ಉಪ್ಪರಿಗೆಯ ।
ಮಂಗಳಾಂಗಿಯರ್ ತನ್ನ ಸುದತಿಯರ್ ಸಹವಾಗಿ
ಹಿಂಗದುಪ್ಪರಿಗೆಯೇರಿದರು ‖೬೮‖

ಅಡಿ[ಗಂಚೆ] ತುಂಬಿ ಕುಂತ[ಳಕೆ] ತಾವ್ ಸೋತಾಗ
ಒಡರೆ ಹೋದವು ತಾವು ತಮ್ಮ ।
ನುಡಿಗರಗಿಳಿ ನಡುವಿಗೆ ಸಿಂಹ ತಾ ಸೋತು
ಬಿಡದೆ ಹೊಕ್ಕವು ವನಾಂತರವ ‖೬೯‖

ಏರಿದಳುಪ್ಪರಿಗೆಯ ರತ್ನಾಜಿಯು
ಸೇರಿ ಜಾಳಿಂದ್ರದೆಡೆಯಲಿ ॥
ನೀರೆ ಕಂಡಳು ಶೂಲಗಳ ಸಂಭ್ರಮವನು
ನಾರಿಯರನು ಕೇಳುತಾಗ ‖೭೦‖

ಕೊಡಗಿನ ಸತ್ತಿಗೆ ಹೊಡೆವ ರೌಡಿಯ ಮುಂದೆ
ಬೆಡಗಿಲಿ ನಿಂದಿಹನಾರೆ ।
ಪೊಡವಿಗೆ ಶಂಭುರಾಯನ ಕುದುರೆಯ ತಂದ
ಗಡಿಯ ಭೋಗಣ್ಣ ಕಾಣಮ್ಮ ‖೭೧‖

ಮುತ್ತಿನ ಸತ್ತಿಗೆ ನೆರಳೊಳು ನಿಂದಿಹ
ಮೊತ್ತದಿ ನಿಂದಿಹನಾರೆ ।
ಗುತ್ತಿಯ ಜಗತಾಪಿಯ ಮೇಲೆ ಕಡಿದನು
ಕತ್ತಲೆರಾಯನ ಮಗನು ॥೭೨॥

ಚಿನ್ನದ ಸತ್ತಿಗೆ ನೆರಳೊಳು ನಿಂದಿಹ
ಉನ್ನತವಾದ ಮನ್ನೆಯನೆ ।
ಕನ್ನೆ ಕೇಳೆಲೆ ರತ್ನಿ ಮುನ್ನ ನೇಮಿಯ ಮೇಲೆ
ಬೆನ್ನ ಕೊಡದ ನಾಗನಮ್ಮ ॥೭೩॥

ಮುತ್ತಿನ ಮುಡಿಯ ಸೂಸಕ ದಂಡೆ ರತ್ನಮ್ಮ
ಮತ್ತೆ ಕೇಳೆಲೆ ಸವಿನುಡಿಯ ।
ಬಿತ್ತರಿಸುವೆ ನಿನ್ನಯ ಕಿವಿಗೆನುತಲಿ
ಮತ್ತೆ ಪೇಳಿದಳು ನಾಗಾಯಿ ॥೭೪॥

ಏಕಚಿತ್ತದಿ ಕೇಳುಯೆನುತಲಿ ನಾಗಾಯಿ
ಆಕೆಯೊಡನೆ ಪೇಳಿದಳು ।
ಸಾಕಾರದಿಂದ ನಿನ್ನಯ ಮನಸಿನ ಭ್ರಾಂತು
ನಾ ಕೇಳುವೆ ತಾಯಿ ಪೇಳು ॥೭೫॥

ಚೆನ್ನ ರಾಮಯ್ಯನ ಮೋಹದ ಬಂಟನು
ಕನ್ನೆ ನಾಗಾಯಿ ಪೇಳಿದಳು ।
ಇನ್ನು ಕೇಳುತ ರತ್ನಿ ಘನಹರುಷಗಳಿಂದ
ಚೆನ್ನ ರಾಮನ ತೋರಿಸೆನಗೆ ॥೭೬॥

ಧಾರುಣಿ ಬೆಸಲಾದಂತೆ ನಿಂತೈದಾನೆ
ಧೀರ ಮನ್ನೆಯನಾರೆ ಸಂಗಿ ।
ನಾರಿ ರತ್ನಾಜಿಯು ನಾಗಿಯ ಕೇಳಲು
[ನೀರೆ] ಹೇಳಿದಳು ವಿವರದಲಿ ॥೭೭॥

ಜಗದೊಳು ನನಗಾರ ಎಣೆಯಿಲ್ಲವೆನುತಲಿ
ಮಿಗಿಲು ಮನ್ನೆಯನಾರೆ ನಾಗಿ ।
ಹಗಲ ಕಗ್ಗೊಲೆ ವೀರ ಚೌರದ ಗಂಗನು
ಸುಗುಣೆ ನೀ ಕೇಳೆ ರತ್ನಾಜಿ ॥೭೮॥

ಇಕ್ಕಿದ ಚಿನ್ನದ ಕಳಸ ಸತ್ತಿಗೆ ಮೇಲೆ
ಚಿಕ್ಕ ಹ [ರೆ]ಯನಾರೆ ಸಂಗಿ ।
ಸೊಕ್ಕಿದಾನೆಯ ಮೇಲೆ ಇರಿವನು ಇವನೀಗ
ರಕ್ಕಸ ಲಕ್ಕ ಕಾಣಮ್ಮ ॥೭೯॥

ಪಟ್ಟೆದ ಸತ್ತಿಗೆ ಹಳದಿಯ ಚೌರವು
ದಿಟ್ಟ ಮನ್ನೆಯನಾರೆ ಸಂಗಿ ।
ಕೊಟ್ಟು ಕುದಿವ ತ್ಯಾಗಿಯರ ಗಂಡನಿವನೀಗ
ನಿಷ್ಠುಳ್ಳ ದೇವಿಯಸೆಟ್ಟಿ ಲಿಂಗ ॥೮೦॥

ಸಾಧನೆ ಖಂಡೆಯ ತಿರುಹಿ ತೇಜಿಯನೇರಿ
ಮಾಧವರೂಪಿನವ ನಾರೆ ।
ಮೇದಿನಿಯರಿಯೆ ರಾಮಯ್ಯನ ಮರೆಹೊಕ್ಕ
ಬಾದುರಖಾನ ಕಾಣಮ್ಮ ॥೮೧॥

ಭೂಮಿಯೊಳಧಿಕ ತೇಜಿಯನೇರಿ ಬಾಹಂತ
ಕಾಮನ ಸಮರೂಪನಾರೆ ।
ಆ ಮಹಾ ದಳವ ನುಗ್ಗೊತ್ತಿದೆಕ್ಕಟಿಗನು
ಕೋಮಲೆ ರತ್ನಿ ಸಂಗಮನು ॥೮೨॥

ಜಂತ್ರದ ಕಾವಿನ ಸತ್ತಿಗೆ ನೆಳಲಲ್ಲಿ
ಕಂತು ಸಮಾನದವನಾರೆ ।
ಎಂತು ಪೇಳುವೆ ರತ್ನಿ ರಾಮನ ಗೆಳೆಯನು
ಮುಂತಕ್ಕಸಾಲೇರ ಚಿಕ್ಕ ॥೮೩॥

ಬೆಳ್ಳಿಯ ಕಾವಿನ ಬೀಸುವ ಚೌರವು
ಒಳ್ಳೆಯ ಮನ್ನೆಯನಾರೆ ।
ಕಳ್ಳತನವ ಮಾಳ್ಪ ರಾಯರ ಶಿಕ್ಷಿಪ
ಒಳ್ಳೆ ಮಂತ್ರಿ ಕುಮಾರಕನು ॥೮೪॥

ಕಳೆಯುಳ್ಳ ಸತ್ತಿಗೆ ಸುರಮಾಯಿ ಬಿರಿದಿನ
ಚೆಲುವುಳ್ಳನಾವ ಮನ್ನೆಯನೆ ।
ಹುಳಿಯಾರ ಮಾರಿಗೊಂಡನ ಮಗ ಇವನೀಗ
ನಳಿನಾಕ್ಷಿ ಕೇಳೆ ರತ್ನಾಜಿ ॥೮೫॥

ಕುಪಿತ ಕುಮಾರರ ಗಂಡನೆನಿಸಿಕೊಂಬ
ಅಪರಿಮಿತಾವ ಮನ್ನೆಯನೆ ।
ಕೊಪ್ಪಳ ತಿಮ್ಮರಾಜನ ಮಗನಿವನೀಗ
ಚಪಳಾಕ್ಷಿ ರತ್ನಿ ಕೇಳಮ್ಮ ॥೮೬॥

ಕೊಂಡಾಡುವವರ ಕೈತೆಗೆವ ಲೋಭಿಯರ
ಗಂಡನು ಇವನು ಕೇಳಮ್ಮ ।
ಮಂಡಲದೊಳು ಎಣೆಯಿಲ್ಲವು ಇವನಿಗೆ
ಗಂಡಿಕೋಟೆಯ ತಿಮ್ಮರಾಜ ॥೮೭॥

ಬಾವನ್ನ ಸತ್ತಿಗೆ ನೆರಳಡಿ ನಿಂದಿಹ
ಕೋವಿದನಾವ ಮನ್ನೆಯನೆ ।
ಇವನೀಗ ದೇವದುರ್ಗದ ರಾಯನ ಮಗ
ಕೋವಿದೆ ಕೇಳು ರತ್ನಮ್ಮ ॥೮೮॥

ಅವರಿವರನು ತೋರಲೇತಕ್ಕೆ ಸಂಗಾಯಿ
ದಿವಿಜ ರಾಮನ ತೋರಿಸೆನಗೆ ।
ಕಾವನ ಬಾಧೆಗೆ ಒಳಗಾ[ಯ್ತು] ಪ್ರಾಣವು
ದೇವ ರಾಮನ ತೋರಿಸೆನಗೆ ॥೮೯॥

ಹಸಿದಂಚೆಗೆ ಹಾಲು ಕುಸುಮ ತುಂಬಿಗಳಿಗೆ
ಪಸಿದ ಗಿಳಿಗೆ ಜಂಬುಫಲವು ।
ವಶವಾಗದ ಪಕ್ಷಿಯಂತೆ ರತ್ನಾಜಿಯು
ಹಸಗೆಟ್ಟು ರಾಮನ ನೆನೆದು ॥೯೦॥

ಇದೆ ನೋಡು ಮಕ್ಕಳ ಕೈಜೀತ ಪರಿವಾರ
ಇದೆ ನೋಡು ಕರಿತುರಗಗಳು ।
ಇದೆ ನೋಡು ಸಕಲ ಸಂಭ್ರಮವೆಂದು ರತ್ನಿಗೆ
ಮುದದಿ ಸಂಗಾಯಿ ತೋರಿದಳು ॥೯೧॥

ಸುರಿತಾಳ ಬಲ್ಲಾಳ ನವಲಕ್ಷ ತೆಲುಗರ
ಧುರದೊಳು ಜೈಸಿ ಕೈಸೆರೆಯ ।
ಭರದಿಂದ ಮಚ್ಚಿಸಿ ಬಿರಿದನು ಪಡೆದಿಹ
ನೆರೆಗಲಿ ಚೆನ್ನಿಗ ರಾಮ ॥೯೨॥

ಮೀಸರ ಗಂಡನೆನಿಸಿಕೊಂಬ ಬಿರಿದಿನ
ಮಾಸಾಳ ತನ್ನ ಮನದಲ್ಲಿ ।
ಆಸೆಗೈವರಗಂಡ ಭಾಷೆಪಾಲಕ ರಾಮ
ದೇಶಾಧಿಪತಿ ರಾಮನಾಥ ॥೯೩॥

ನಾಲ್ಕು ಸತ್ತಿಗೆ ನೆಳಲೊಳು ನಿಂದುಕೊಂಡಿಹ
ಏಕಾಂಗವೀರ ಕಾಣಮ್ಮ ।
ಲೋಕದೊಳಗಿಲ್ಲ ಇವನಂಥ ಚೆಲುವನು
ನೀ ಕೇಳೆ ಸಖಿ ರತ್ನಾದೇವಿ ॥೯೪॥

ಗುತ್ತಿಯ ಜಗತಾಪಿಯ ಗೆದ್ದ ವೀರನು
ಮೊತ್ತದಿ ಡಿಳ್ಳಿ ಸುರಿತಾಳ ।
ಮತ್ತೆ ಓರುಗಲ್ಲ ರುದ್ರನ [ಜೊತೆ]ಕಾದಿ
ಒತ್ತಿ ಬೊಲ್ಲನ ತಂದ ರಾಮ ॥೯೫॥

ಕಾಮನೊ ಕಂದರ್ಪನೊ ದೇವೇಂದ್ರನೊ
ಸೋಮನೊ ಸುಜನರಕ್ಷಕನೊ ।
ಭೂಮಿಯೊಳಿವನ ಚೆಲ್ವಿಕೆಗೆ ಸಮಗಾಣೆನು
ಕಾಮನಟ್ಟುಳಿಗಾದೆ ನಾಗಿ ॥೯೬॥

ಹರಹರ ಇವಗೆ ಸೋಲದ ಸ್ತ್ರೀಯರಿಲ್ಲೆಂದು
ನೆರೆ ನೋಂಪಿ ನೋಂತುದಿಲ್ಲವ [ನ] ।
ಬರಿದೆ ಪಡೆಯದೆ ಬಯಸಿದರಿನ್ನೇನುಂಟು
ನೆರೆ ಪಾಪಿಗಳಿಗೆ ಸಿಲ್ಕುವನೆ ॥೯೭॥

ಇಂದು ರಾಮನ ತಂದು ತೋರದಿದ್ದರೆ ಸಂಗಿ
ಸಂದೇಹ ನಾನುಳಿವುದಕರ ।
ಮುಂದೆ ಕಂಪಿಲರಾಯ ವರನಲ್ಲ ನನಗೆಂದು
[ಎಂ]ದು ನುಡಿದಳು ರತ್ನಾಜಿ ॥೯೮॥

ಮುಪ್ಪಿನ ಕಂಪಿಲರಾಯನು ತರವಲ್ಲ
ಒಪ್ಪುವ ಕಳೆಯ ಯೌವನಕೆ ।
ಅಪ್ಪಿಗೊಂಡೆನ್ನ ದೇಹವ ಸುಖಬಡುವೆನು
ಚಪ್ಪಳೆ ಚೆನ್ನಿಗನೊಡನೆ ॥೯೯॥

ಸಾಯಬಹುದು ಸಂಗಿ ಇದು ಬಹು ಕ[ರ]ಕಷ್ಟ
ರಾಯ ರಾಮನ [ಕೂಡಿ]ಸೆನಗೆ ।
ಕಾಯವು ಕಡೆಯಾಗಿ ಹೋಗುತಲಿದೆಯೆಂದು
ಆಯತ ಸಂಧಿ ಎಂಟನೆಯ ॥೧೦೦॥

ಅಂತು ಸಂಧಿ ೮ಕ್ಕಂ ಪದನು ೮೮೮ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೯

❖

ನೀರಾಟ-ಚೆಂಡಿನಾಟ-ರತ್ನಿಯ ಮೋಹ

ಶ್ರೀಗಿರಿಜಾಸ್ಯಾಂಬುಜ ದಿನನಾಯಕ
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗ ವೈದ್ಯನೆ
ನಾಗಕಂಕಣ [ನ] ವಂದಿಸುವೆ ॥೧॥

ಶ್ರೀಲಕ್ಷ್ಮೀವಲ್ಲಭ ಕೃಷ್ಣರಾಯನೆ ನೀನು
ಮೂಲೋಕ ಸಲಹುವ ದೇವ ।
ಲೋಲ ಚಿಂತಾಮಣಿ ಗೋಪಿವಲ್ಲಭ ನೀನು
ಪಾಲಿಸು ಮತಿಗೆ ಮಂಗಳವ ॥೨॥

ದಂಡ ಕಮಂಡಲ ಕುಂಡಲಕರ್ಣಾದಿ
ಪುಂಡರೀಕನ ವರಸುತನೆ ।
ಮಂಡಲಕಧಿಪತಿ ನಿರ್ಮಿತ ಬ್ರಹ್ಮನ
ಕೊಂಡಾಡುವೆನು ಮುದದಿಂದ ॥೩॥

ರಾಮರಾಮಾಯೆಂ ನಾಮವ ನೆನೆದರೆ
ಕಾಮಿತ ಫಲವೀವ ರಾಮ ।
ರಾವಣಗಂಜಿ ವಿಭೀಷಣ ದೇವರು
ರಾಮನ ಪೊರೆವೊಕ್ಕು ಉಳಿದ ॥೪॥

ಹರನಣುಗನೆ ನೀನು ಗಿರಿಜೆಯ ಪುತ್ರನೆ
ಕರಿವದನನೆ ಮೂಗಯ್ಯ ।
ಉರಗಭೂಷಣ ಗಣನಾಥನೆ ನೀಯೆನ್ನ
ವರವಿತ್ತು ಕೃಪೆಯ ಪಾಲಿಪುದು ॥೫॥

ಮುತ್ತಿನ ಮುಡಿಯ ಸೂಸಕ ದಂಡೆ ಭುಜಕೀರ್ತಿ
ಹಸ್ತಕಡಗ ಮುತ್ತಿನೋಲೆ ।
[ಬಿ]ತ್ತರದಲಿ ಮುದ್ದು ನುಡಿಯಿಂದ ಸರಸ್ವತಿ
ಉತ್ತಮ ಮತಿಯಿತ್ತು ಸಲಹು ॥೬॥

ರಾಮನ ನೆನೆ ಕಂಡ್ಯಾ ಮನವೆ ಜಟ್ಟಂಗಿಯ
ರಾಮನ ನೆನೆ ಕಂಡ್ಯಾ ತನುವೆ ।
ರಾಮರಾಮಾಯೆಂಬ ನಾಮವ ನೆನೆದರೆ
ಸ್ವಾಮಿ ತಾನೊಲಿದು ರಕ್ಷಿಪನು ॥೭॥

ನರಸ್ತುತಿಯನು ಕೇಳಿ ಫಲವಿಲ್ಲಯೆನುತಲಿ
ಬರಿದೆ ನಿಂದೆಯ ಮಾಡುವರೆ ।
ಪರನಾರಿ ಸೋದರ ರಾಮನ ಚರಿತೆಯ
ಪರಿಯ ಕೇಳಲು ಮುಕ್ತಿಯಹುದು ॥೮॥

ಕನ್ನಡ ದೇಶಕೆ ರನ್ನದ ಪದ ಜಾತಿ
ಇನ್ನು ಮುನ್ನವನು ಪಂಚಾಳ ।
ಚೆನ್ನ ಭುಜಂಗನ ಪುತ್ರ ಗಂಗಯ್ಯ ಸಂ
ಪನ್ನ ಹೇಳಿದನು ಈ ಕೃತಿಯ ॥೯॥

ಜಗದೊಳು ಈ ಕೃತಿ ಹವಣಿಸಬೇಕೆಂದು
ಅಗಜೆಯ [ಅ]ರಸನ ನೆನದು ।
ತಗಡೂರ ಕಟ್ಟೇಲಿ ನೆಲಸಿ ವರವನೀವ
ಮಿಗೆ ರೂಪಿನ ವಿಘ್ನರಾಜ ॥೧೦॥

ರಾಮ ಜಟ್ಟಂಗಿದೇವರ ಪಿಂಡ ರಾಮಯ್ಯ
ರಾಮನ ಕೃತಿಯ ಪೇಳುವೆನು ।
ಸೋಮನ ಸೂಡಿದ ವರಮೂರ್ತಿಕಾರನೆ
ಹೇಮವತಿಯ ವಲ್ಲಭನೆ ॥೧೧॥

ನೇಮಿಸಿ ಈ ಕೃತಿ ವರ್ಣಿಸುವೆನು ನಾನು
ಭೂಮಿಯೊಳಗೆ ಪೊಸತೆನಿ ।
ಭೂಮಿಯೊಳಗೆ ರಕ್ಷಿಸೆನ್ನ ಜಟ್ಟಂಗಿಯ
ರಾಮೇಶನ ವರದಿಂದ ॥೧೨॥

ಸಕ್ಕರೆ ಸವಿಯಂತೆ ಮಧುರ ಮಾವಿನ ಹಣ್ಣು
ಉಕ್ಕುವ ತನಿರಸದಂತೆ ।
ಚಿಕ್ಕಮಕ್ಕಳ ನಸುನಗೆಯಂತೆ ಈ ಕೃತಿ
ಸತ್ಕವಿಗಳು ಲಾಲಿಪುದು ॥೧೩॥

ಗರಿಯಿಲ್ಲದಂಬನು ಐನೂರು ಎಚ್ಚರೆ
ಗುರಿ(ಯ) ತಾಕುವುದೆ ಲೋಕದೊಳು ।
ಗರಿಗಣೆ ಶೂರ ರಾಮನ ಕೃತಿ ಬಾಣದಿ
ಉರವಿಯೊಳೆಚ್ಚ ಗಂಗಯ್ಯ ॥೧೪॥

ಮುತ್ತಿನ ಚೆಂಡನಾಡಲು ರಾಮನಾಥನು
ಹೆತ್ತ ತಂದೆಯು ಕೊಲ್ಲಹೇಳೆ ।
ಮತ್ತೆ ಪ್ರಧಾನಿಗಳರಸ ಕೊಲ್ಲದೆ ಕಾಯ್ದ
ಚಿತ್ರದ ಕಥೆಯ ಪೇಳುವೆನು ॥೧೫॥

ಸೆಣಸುವ ಸುರಿತಾಳ[ಗೆ] ರಾಮ ವೈರಿಯು
ಮಣಿವ ರಾಯರನು ಮನ್ನಿಸುವ ।
ಫಣಿಲೆಂಬ ಗಂಟೆಸರಪಳಿ ಬೊಂಬೆಗಳನಾಗ
ಕಣಕಾಲಲಿ ರಾಮನಿಟ್ಟ ॥೧೬॥

ತೊಟ್ಟು ಶೃಂಗರವಾಗಿಯೆ ಹರುಷದಲಿಂದ
ಸೃಷ್ಟಿಗೀಶ್ವರ ಗತಿಯೆನುತೆ ।
ಕೊಟ್ಟದ ರಾಮನು ಕೋವಿದ ಮಾನ್ಯ[ರು]
ನೆಟ್ಟನೆಯಿರಲೊಂದು ದಿವಸ ॥೧೭॥

ತಡೆಯದೆ ಬೇಂಟೆ ಹೋಗುವೆನೆಂದು ಕಂಪಿಲ
ಮಡದಿಯ ಕರೆದು ಹೇಳಿದನು ।
ಕಡುಗಲಿ ಕಂಪಿಲ ಬಿಡಲಾರೆ ನಾ ನಿನ್ನ
ತಡೆಯಲಾರೆನು ವಿರಹವನು ॥೧೮॥

ಬಾಹತನಕ ಸೈರಿಸೆಂದು ಕಂಪಿಲ [ರಾಯ]
ಮೋಹದಿ ಬಿಗಿಯಪ್ಪಿಕೊಂಡ ।
ಸ್ನೇಹದ ಸಖಿಯರೊಡನೆ ನೀನು ಇರುಯೆಂದು
ಭಾವೆಯ ಕರೆದು ಹೇಳಿದನು ॥೧೯॥

ಉಸುರದೆ ಹೊರಹೊಂಟನು ಕಂಪಿಲರಾಯ
ಪೆಸರೆನಿಸುವ ಹೊಸಮಲೆಗೆ ।
ಪಸರಿಸಿದವು ಪಲ್ಲಕ್ಕಿ ಸತ್ತಿಗೆಗಳು
ದೆಸೆದೆಸೆ ಉಲಿವ ಸಾಧಕರು ॥೨೦॥

ಬಂದನೆ ರಾಮಯ್ಯನೆನುತ ಕಂಪಿಲರಾಯ
ಹಿಂದಣವರ ಬೆಸಗೊಂಡ ।
ಮುಂದೆ ಐದಾನೆ ವೈಹಾಳಿಯ ಬಯಲಲಿ
ಬಂದಾನು ನಡೆ ಮುಂದಕೇಳು ॥೨೧॥

ಅತ್ತ ಕಂಪಿಲರಾಯ ಸುತ್ತಿ ಅರಣ್ಯವ
ಒತ್ತಿ ಬೇಂಟೆಯನಾಡುತಿರಲು ।
ಇತ್ತ ರಾಮಯ್ಯ ಬೇಂಟೆಯನಾಡಲೊಲ್ಲದೆ
ಮೊತ್ತದ ಮಾನ್ಯರು ಸಹಿತ ॥೨೨॥

ವೀರ ರಾಮಯ್ಯ ಬೇಂಟೆಯನಾಡಲೊಲ್ಲದೆ
ಭೋರನೆ ಬಂದು ಕುಮ್ಮಟಕೆ ।
ಊರೊಳಗಣ ಹರುಗೋಲು ತರಿಸಿಕೊಂಡು
ನೀರಾಟಕೆ ತೆರಳಿದನು ॥೨೩॥

ಸಂಗ್ರಾಮ ಧೀರ ಕೊಮಾರ ಚೆನ್ನಿಗ ರಾಮ
ತುಂಗಭದ್ರೆಗೆ ನಡೆತಂದ ।
ಕಂಗಳ ಮೂರುಳ್ಳ ಲಿಂಗಕೊಂದನೆಮಾಡಿ
ಗಂಗೆಯೊಳಿಳಿದನಾಕ್ಷಣದಿ ॥೨೪॥

ಕಂಪಿಲರಾಯನ ಮಗನು ರಾಮಯ್ಯನು
ಹಂಪೆಯ ಹೊಳೆಗಾಗಿ ಬಂದ ।
ಹಂಪರಾಜನು ಕಂಪರಾಜ ಕೊಂಡಿಯರಾಜ
ಸಂಪಿಗೆರೆಯ ತಿಮ್ಮರಾಜ ॥೨೫॥

ಹಡಪದ ಬೊಲ್ಲುಗ ಕಡುಪ್ರಿಯ ಸಂಗಯ್ಯ
ಒಡಹುಟ್ಟಿದನು ಕಾಟಣ್ಣ ।
ತಡೆಯದೆ ಮಂತ್ರಿ ಬೈಚಪ್ಪನ ಕುಮಾರ
ಒಡನೆ ನೀರಾಟಕೆ ತೆರಳೆ ॥೨೬॥

ಮೂರು ಸಾವಿರ ಹರುಗೋಲು ಸಹಿತ ರಾಮ
ಧೀರ ಮಾನ್ಯರ ಕೂಡಿಕೊಂಡು ।
ಭೇರಿಯ ಹೊಯಿಸಿಕೊಳುತ ಲಗ್ಗೆ ಮಾಡುತ
ನೀರ ಹೊಕ್ಕನು ಹರುಷದಲಿ ॥೨೭॥

ತಂದು ಹಾಕಿದರು ಹರುಗೋಲ ಹೊಳೆಯೊಳು
ಬಂದು ಕುಳಿತ ಚೆನ್ನ ರಾಮ ।
ಚೆಂದದಿ ಕಾಟಣ್ಣ ಸಹಿತಲಿ ಪರಿವಾರ
ಒಂದೆಸೆಯಲಿ ಏರಿದರು ॥೨೮॥

ಒತ್ತಿ ಬಂದರು ಕಾಟಣ್ಣನ ಪರಿವಾರ
ಮೊತ್ತದೈನೂರು ಹರುಗೋಲು ।
ಸುತ್ತಗಟ್ಟಿಯೆಕೊಂಡು ರಾಮನಾಥನ ಮೇಲೆ
ಮತ್ತೆ ನೀರನೆ ಚೆಲ್ಲಿದರು ॥೨೯॥

ಹೊನ್ನಗೊಂಡೆಯ ರನ್ನದ ಜೀರ್ಕೊಳವಿಯ
ಉನ್ನತ ಬೆಳ್ಳಿಯ ಕೊಂಬು ।
ಚೆನ್ನಿಗ ರಾಮಯ್ಯ ನೀರ ಮೊಗಿದುಕೊಂಡು
ಮಾನ್ಯರ ಮೇಲೆ ಚೆಲ್ಲಿದನು ॥೩೦॥

ಕೆಲಬರು ನೀರಾಟನಾಡುವರು ಬೇಂಟೆಯ
ಕೆಲಬರು ಮೀನ್ ಬಲೆ ಪಿಡಿದು ।
ಕೆಲಬರು ಅರಿಗಿರಿ ಲೆಂಕೆ ಮೀನುಗಳನು
ಬಲೆ ಬೀಸಿ ಬೇಂಟೆಯಾಡುತಲಿ ॥೩೧॥

ಪರಿಪರಿ ಬೇಂಟೆಯನಾಡುತ ಕೆಲಬರು
ಪರಿಪರಿ ಮೀನ್ಗಳ ಪಿಡಿದು ।
ಮುರಿಗೋಡಿನೊಳಗಿರ್ದ ತುಡುಹಿನ ಮೀನ್ಗಳ
ಇರದೆಬ್ಬಿಸಿದರೊಗ್ಗಿನಲಿ ॥೩೨॥

ಕಸ್ತೂರಿ ಕುಂಕುಮ ಸಾದು ಜವ್ವಾದಿಯ
ವಿಸ್ತರಿಸಿಯೆ ಕಲಸಿದರು ।
ಚಿತ್ತಜರೂಪನು ಹರುಗೋಲನು ತುಂಬಿ
ಕಾಂತೆಯರನು ಏರಿಸಿದನು ॥೩೩॥

ಮುತ್ತು ಮಾಣಿಕ ನವರತ್ನ ತೆತ್ತಿಸಿದ
ರತ್ನದ ಹೊನ್ನದಂಡೆಗಳ ।
ಮತ್ತೆ ಜವ್ವನೆಯರು ಪಿಡಿದು ಓಕುಳಿಯನು
ಅರ್ತಿಯಿಂ ಲೋಲ್ಯಾಡಿದರು ॥೩೪॥

ಬೊಗಸೆಗಂಗಳ ಬಟ್ಟ ಮೊಲೆಯರೆಲ್ಲರು ತುಂಬಿ
ನೆಗೆದು ಚೆಲ್ಲಿದರು ಪನ್ನೀರ ।
ಜಗದೇಕವೀರ ಕೊಮಾರ ರಾಮನ ಕೂಡ
ನಗೆಯಿಂದಾಡಿದರು ಓಕುಳಿಯ ॥೩೫॥

ಮಿಂಚುವ ತೋರ ಕುಚದ ಕಾಂಚಿದಾಮದ
[ಚಂಚಲಾ]ಕ್ಷಿಯರು ಒಗ್ಗಿನಲಿ ।
ಪಂಚಬಾಣನ ಸಮರೂಪ ರಾಮನ ಕೂಡೆ
ಅಂಚೆಗಮನೆಯರಾಡಿದರು ॥೩೬॥

ಕುಂಜವದನೆಯರು ರಂಜಿಪ ಸೊಬಗಿನ
ಹೊಂಜಾಣೆ ಮೈಯ ಸೊಬಗಿಂದ ।
ಕುಂಜರಗಮನೆಯರಾಡಿದರರ್ತಿಲಿ
ರಾಜ ರಾಮಯ್ಯನ ಕೂಡೆ ॥೩೭॥

ಹೊನ್ನಗೊಂಡೆಯ ರನ್ನದ ಜೀರ್ಕೊಳವಿಯ
ಉನ್ನತ ಬೆಳ್ಳಿಯ ಕೊಂಬು ।
ಚೆನ್ನಿಗ ರಾಮಯ್ಯ ನೀರ ಮೊಗೆದು ಕೊಂಡು
ಕನ್ನೆರ ಮೇಲೆ ಚೆಲ್ಲಿದನು ॥೩೮॥

ಕಡುಗಲಿ ರಾಮಯ್ಯನೊಡನೆ ನೀರನು ಚೆಲ್ಲೆ
ಕೆಡೆ ಮುರಿದೊಡೆ ಪರಿವಾರ ।
ಗಿಡಿಬಿಡಿ ಕೊಳಲು ತಮ್ಮಟ ಭೇರಿ ರಭಸದಿ
ಗಡಣದಿ ಹೊಕ್ಕ ಪಟ್ಟಣವ ॥೩೯॥

ಚೆಲ್ಲನೆ ಚೆಲ್ಲುವ ನೀರ ಅಬ್ಬರಕಾಗಿ
ತಲ್ಲಣಿಸಿತು ಮತ್ಸ್ಯ ಕೂರ್ಮ ।
ಎಲ್ಲರು ನೋಡುವ ಸಮಯಕ್ಕೆ ರಾಮಯ್ಯ
ನಲ್ಲೆರ ಮೇಲೆ ಚೆಲ್ಲಿದನು ॥೪೦॥

ಹರಡಿನರಾಡಿ ಕೆಮ್ಮೀನು ಹಾಮೀನು
ಸರಿದೊಡ್ಡ ಬಾಳೆಯಮೀನು ।
ಮುರಿಗೊಂಡು ತುಡುಹಿನ ಮೀನನು ಓರ್ವನು
ಭರದಿ ಹಿಡಿದನೊಗ್ಗಿನಲಿ ॥೪೧॥

ಪರಿಪರಿ ಬೇಂಟೆಯನಾಡಿ ಮನ್ನೆಯರಾಗ
ಪರಿ ಪರಿ ಬಲೆಗಳ ಪಿಡಿದು ।
ಪರಿ ಪರಿ ಬೇಂಟೆಯ [ನಾಡಿ] ದಣಿ [ದು] ಕೊಂಡು
ಪರಿವಾರ ಗೆಲವಿಂದಾಡಿದರು ॥೪೨॥

ತಣ್ಣೀರಿನೊಳಗೆ ನೀರಾಟವನಾಡಿ
ದಣ್ಣನೆ ದಣಿದ ರಾಮಯ್ಯ ।
ಅಣ್ಣ ಕಾಟಣ್ಣನ ಕರೆಸಿದ ರಾಮಯ್ಯ
ಬಣ್ಣ ಬಳಿದನುಡಕೊಟ್ಟ ॥೪೩॥

ಇತ್ತರದಲಿ ಬಂದು ನಿಂದರಂಬಿಗರಾಗ
ಕರ್ತು ರಾಮಯ್ಯನ ಮುಂದೆ ।
ಉಡವರಿಗಳ ಮಾಡೆ ನಗುತ ರಾಮಯ್ಯನು
ಮತ್ತೆ ಬಂಟರು ತೊರೆಗಳಲಿ ॥೪೪॥

ಬೆಂಬಳಿ ಮಾನ್ಯರನೊಡಗೊಂಡು ರಾಮಯ್ಯ
ಅಂಬುಧಿಯೊಳಗೆ ಲೋಲಾಡಿ ।
ಅಂಬಿಗರಿಗೆ ಹಚ್ಚಡ ವೀಳ್ಯಯವನಿತ್ತು
ಸಂಭ್ರಮದಲಿ ತಿರುಗಿದನು ॥೪೫॥

ಆಗ ತಿರುಗಿ ಬಂದ ರಭಸಕ್ಕೆ ಭೂಮಿಯು
ಬೇಗಲಬ್ಬರಿಸಿ ತಲ್ಲಣಿಸೆ ।
[ಜೋ]ಗವಡೆದರು ಅರಿರಾಯರು ಕಂಗೆಟ್ಟು
ಹೋಗಗಾಣದೆ ದೆಸೆದೆಸೆಗೆ ॥೪೬॥

ಮೂಡ ಟೆಂಕಲು ಇದಿರಾಹ ರಾಯರ ಗಂಡ
ಬೀಡಿನೊಳಗೆ ಬಲ್ಲಾಳ ।
ರೂಢಿಯೊಳಗೆ ಸುರಿತಾಳನ ಗಂಡನೆಂದು
ಜೋಡಿಸಿ ಕಾಳೆ ಪಿಡಿದವು ॥೪೭॥

ಸಾರಿದವರ ಕಾವ ಹೋರಿದವರ ಕೊಲ್ವ
ಓರುಗಲ್ಲಿಗೆ ಕೋಳಾಹಳ ।
ಭೋರನೆ ವೀರ ರಾಮುಗಗೆ ಸರಿಯಿಲ್ಲೆಂದು
ಧೀರ ಮನ್ನೆಯರು ಕೊಂಡಾಡೆ ॥೪೮॥

ಬಂದು ವಿರುಪಾಕ್ಷಗೆ ವಂದಿಸಿ ಶರಣೆಂದು
ತಂದುಯಿಟ್ಟನು ಹಿಡಿಹೊನ್ನ ।
ಕಂದುಗೊರಳನ ಪ್ರಸಾದವ ಕೈಕೊಂಡು
ಬಂದನು ತಿರುಗಿ ಕುಮ್ಮಟಕೆ ॥೪೯॥

ತಡೆಯದೆ ತಳತಂತ್ರ ಮಾರ್ಬಲ ಸಹವಾಗಿ
ನಡೆದನು ತನ್ನ ಪಟ್ಟಣಕೆ ।
ಬಡಿವ ಭೇರಿಯು ಹೊಡೆವ ಉಕ್ಕಡ ಕಾಳೆ
ಸಡಗರ ಸಂಪತ್ತಿನಿಂದ ॥೫೦॥

ನಡೆದು ಬಂದನು ಅರಮನೆಗಾಗಿ ರಾಮಯ್ಯ
ಒಡನೆ ಪಾಠಕರು ಉಗ್ಗಡಿಸೆ ।
ಎಡಬಲ ಮಾನ್ಯರು ಸಹವಾಗಿ ರಾಮಯ್ಯ
ತಡೆಯದೆ ಹೊಕ್ಕರಮನೆಯ ॥೫೧॥

ಬಂದ ಮಾನ್ಯರಿಗೆಲ್ಲ ನಿಂದು ವೀಳ್ಯವ ಕೊಟ್ಟು
ನಿಂದು ಎಲ್ಲರ ಕಳುಹಿದನು ।
ಚೆಂದದಿ ಕಾಟಣ್ಣನ ಹೋಗ ಹೇಳಿದ
ಬಂದು ಹೊಕ್ಕನು ಅರಮನೆಯ ॥೫೨॥

ಸಂತೋಷದಿಂದ ಮಜ್ಜನಮಾಡಿ ಸವಿದುಂಟು
ತಾ ತನ್ನ ವಲ್ಲಭೆಯೊಡನೆ ।
ಅತ್ಯಂತ ತೂಗುಮಂಚದಿ ನಿದ್ರೆಗೈದೆದ್ದು
ಮತ್ತೆ ಮನದೊಳೊಂದ ನೆನೆದು ॥೫೩॥

ಪನ್ನೀ[ರಿನಿಂದ] ತನ್ನ ಕೈಕಾಲುಮುಖವನಾಗ
ಚೆನ್ನಾಗಿ ತೊಳೆದ ರಾಮಯ್ಯ ।
ಸಣ್ಣ ನಾಮವನಿಟ್ಟು ಕಸ್ತೂರಿ ತಿಲಕವ
ಉನ್ನತ ಗಂಧ ಪೂಸಿದನು ॥೫೪॥

ಹೊತ್ತು ಹೋಗದು ಚೆಂಡನಾಡಬೇಕೆನುತಲಿ
ಮತ್ತೆ ಮಾನ್ಯರ ಕರೆಸಿದನು ।
ಮುತ್ತಿನ ಶಾಲು ಬಿಗಿದು ಚಿಮ್ಮುರಿ ಸುತ್ತಿ
ಮತ್ತೆ ಇಟ್ಟನು ಹಾರಪದಕ ॥೫೫॥

ಮೃಗಮದವನು ಪೂಸಿ ಜವಾದಿ ಕೊರಳೊಳು
ಸೊಗೆಸಿಂದಲಳವಡಿಸಿದನು ।
ಬಗೆಯರಿದಲಲ್ಲಿ ಕದಂಬ ಗಂಧವ [ಪೂಸಿ]
ನಗುತ ಕನ್ನಡಿಯ ನೋಡಿದನು ॥೫೬॥

ಉಟ್ಟನು ಪಟ್ಟೆದ ದಟ್ಟಿ ವಂಕುಡುದಾರ
ಕಟ್ಟಿದ ಚಿತ್ರ ಚಿತ್ರದಲಿ ।
ಕಟ್ಟಾಳು ರಾಮ ಚಂಡಿಕೆ ಚಂದ್ರಿಕೆ ಸುತ್ತಿ
ಇಟ್ಟನು ಕಸ್ತೂರಿ ತಿಲಕ ॥೫೭॥

ಸಾರಿದವರ ಕಾವ ಮೀರಿದವ ಕೊಲ್ವ
ಓರುಗಲ್ಲಿಗೆ ಕೋಳಾಹಳ ।
ಧೀರ ಕುಮಾರ ರಾಮುಗಗೆ ಸರಿಯಿಲ್ಲೆಂದು
ವೀರ ಬಿರಿದಿನ ಕಹಳೆ ಪಿಡಿಯೆ ॥೫೮॥

ಮಾಳವರಾಯರ ಗಂಡನೆನಿಸಿಕೊಂಬ
ಕೀಲ ಕಂಕಣ ರಾಮನಿಟ್ಟ ।
ಸಾಳುವರಾಯರ ಗಂಡನೆಂಬುವದೊಂದು
ತೋಳ ಬಾಪುರಿ ರಾಮುಗನಿಟ್ಟ ॥೫೯॥

ಉನ್ನತ ಮೂರುರಾಯರ ಗಂಡನೆಂದೆಂಬ
ರನ್ನದ ಕಡೆಯವನಿಟ್ಟ ।
ಉನ್ನತ ಮುತ್ತಿನ ಹಾರ ಪದಕವನಿಟ್ಟ
ಚೆನ್ನಿಗ ರಾಮನರ್ತಿಯಲಿ ॥೬೦॥

ಕೊಟ್ಟ ಭಾಷೆಗೆ ತಪ್ಪುವ ಲೋಭಿಯ ಗಂಡ
ದಿಡ್ಡ ರಾಮನು ತನ್ನ ಕರದಿ ।
ಇಟ್ಟನು ರತ್ನದ ಮುದ್ರೆಯುಂಗುರಗಳ
ಕಟ್ಟಿದ ಹೊನ್ನ ವಂಕುಡಿಯ ॥೬೧॥

ಇಟ್ಟು ತೊಟ್ಟು ಶೃಂಗರವಾಗಿ ನಿಂದನು
ಕಟ್ಟಿದ ನಿಲುವಗನ್ನಡಿಯ ।
ನೆಟ್ಟನೆ ನೋಡಿ ನಸುನಗುತಲಿ ರಾಮಯ್ಯ
ಕಟ್ಟಿಗೆಕಾರರ ಕರೆಸಿ ॥೬೨॥

ಪಟ್ಟಸಾಲಿಗೆ ಬಂದು ನಿಂದಾಗ ರಾಮಯ್ಯ
ಸೃಷ್ಟಿಗೀಶ್ವರ ಸಲಹೆನುತ ।
ಪಟ್ಟಣದೊಳಗುಳ್ಳ ಮಂತ್ರಿ ಮನ್ನೆಯರನು
ಇಟ್ಟು ಶೃಂಗರವಾಗ ಹೇಳೊ ॥೬೩॥

ಎಂದ ಮಾತನು ಕೇಳಿ ಕಟ್ಟಿಗೆಕಾರರು
ಬಂದರು ಕೇರಿಕೇರಿಯಲಿ ।
ಮಂದಿಯ ಹೊರಡ ಹೇಳಿದರು ರಾಮಯ್ಯನು
ಇಂದು ಚಂಡಾಟನಾಡುವರೆ ॥೬೪॥

ಗಮ್ಮನೆ ಆ ಮಾತ ಕೇಳುತ ಕೆಲಬರು
ತಮ್ಮ ಮನದಿ ಹರುಷದಲಿ ।
ಉಮ್ಮಾಯದಿಂದ ಶೃಂಗರಿಸಿಯೆ ಬೀದಿಯೊ
ಳಿಮ್ಮಡಿ ರೂಪ ತೋರಿದರು ॥೬೫॥

ದೇವಿಸೆಟ್ಟಿಯ ಲಿಂಗ ಬೇವಿನ ಸಂಗಯ್ಯ
ಕೋವಿದ ಕೋಟಗಾರ ದೇವ ।
ಹಾವಳಿಗಾರ ಹಂಪಯ್ಯ ಮೊದಲಾದವರು
ಕೋವಿದ ರಾಮನ ಬಳಿಗೆ ॥೬೬॥

ಚಿತ್ತಜ ಸಮರೂಪ ರಾಮನ ಕಾಣುತ
ಎತ್ತಿ ಕರಗಳ ಮುಗಿದರು ।
ಒತ್ತಿಲಿ ಚಿನ್ನದ ತಬಕಿಲಿ ವೀಳ್ಯವ
ಇತ್ತರೈವರು ಮಾನ್ಯರಿಗೆ ॥೬೭॥

ಇತ್ತ ಮಾನ್ಯರ ಕೂಡಿಕೊಂಡು ರಾಮಯ್ಯನು
ಹೆತ್ತ ತಾಯರಮನೆಗಾಗಿ ।
ಮುತ್ತಿನಂದಳವೇರಿ ಹೊರಟನು ರಾಮಯ್ಯ
ಅರ್ತಿಲಿ ಚೆಂಡ ಬೇಡುವರೆ ॥೬೮॥

[ಆಯಿವರು] ಮಾನ್ಯರು ಸಹವಾಗಿ ರಾಮಯ್ಯ
ಕೈಯಮುಗಿದು ಹರಿಯಮ್ಮಗೆ ।
ಹುಯ್ಯಲಗೆ ಕಲಿಯಲಿಬೇಕೆನುತಲಿ
ಒಯ್ಯನೆ ಬಿನ್ನಯಿಸಿದನು ॥೬೯॥

ಬಂದ ಮಗನ ನೋಡಿ ನಿಂದು ಸಂತೋಷದಿ
ಗಂಧ ಕಸ್ತುರಿಯ ತರಿಸಿದಳು ।
ಚಂದ್ರನ ಕಳೆಯುಳ್ಳ ರಾಮಯ್ಯ ಕೊಳ್ಳೆನುತ
ತಂದು ಕೊಟ್ಟಳು ಹರಿಯಮ್ಮ ॥೭೦॥

ಕಲಿಗಳ ಕುಲತಿಲಕವೆ ಎನ್ನ ದೈವವೆ
ಸುಲಲಿತವಹ ಮಾಣಿಕವೆ ।
ನಲಿದು ನೀ ಬಂದ ಕಾರಣವೇನು ಹೇಳಪ್ಪ
ಲಲನೆ ಮಗನ ಕೇಳಿದಳು ॥೭೧॥

ಎಲ್ಲಿಗೆ ಪಯಣ ಇಂದೇಕೆ ಶೃಂಗರವಾದೆ
ಸೊಲ್ಲಿಸೆನ್ನೊಡನೆ ರಾಮುಗನೆ ।
ಗಲ್ಲವ ಪಿಡಿದು ಮಗನ ಮುಂಡಾಡಲು
ಬಲ್ಲಿದ ರಾಮನಿಂತೆಂದ ॥೭೨॥

ಹೆತ್ತ ತಾಯೆ ಕೇಳು ಹಂಪಯ್ಯನ ಹೊಳೆಯೊಳು
ಅತ್ತ ಮಾನ್ಯರ ಕೂಡಿಕೊಂಡು ।
ಮತ್ತೆ ನೀರಾಟವನಾಡಿ ಬಳಲಿ ಬಂದೆ
ಹೊತ್ತು ಹೋಗದುಯೆಂದೆನುತ ॥೭೩॥

ಹೊತ್ತು ಹೋಗದು ಕುಕ್ಕಟನ ಸಮ್ಮೊಹನವು
ಮತ್ತೆ ಆಡಿದೆ ಚದುರಂಗ ।
ಲೆತ್ತ ಪಗಡೆಯಾಡಿ ಅಲಸಿದೆ ಲಗ್ಗೆಗೆ
ಚಿತ್ತವಾಯಿತು ಕೊಡು ಚೆಂಡ ॥೭೪॥

ಮುಗಿಲ ಮೋಡವ ಕಂಡ ನವಿಲಂತೆ ಚಂದ್ರನ
ಮೊಗವ ಕಂಡಂಬುಧಿಯಂತೆ ।
ಮಿಗೆ ಹೆಚ್ಚಿದಂತರಂಗದೆ ತಾಯಿ ಹಿಗ್ಗಿದಳು
ತೆಗೆದಪ್ಪಿದಳು ತಾಯಿ ಮಗನ ॥೭೫॥

ಆವ ಪಾಪಿಗಳು ಚೆಂಡಾಡೆಂದು ರಾಮನ
ಜೀವಕ್ಕೆ ಮುಳಿದು ಹೇಳಿದರೊ ।
ದೇವರೆ ಇದಕಿನ್ನು ಏನುಪಾಯವುಯೆಂದು
ನೋವುತಿರ್ದಳು ಹರಿಯಮ್ಮ ॥೭೬॥

ಹೊತ್ತು ಹೋಗದು ಎಂದಿನುತಲಿ ರಾಮಯ್ಯ
ಹೆತ್ತ ತಾಯೊಡನೆ ಆಡಿದನು ।
ಮುತ್ತಯ್ಯ ಮುಮ್ಮಡಿ ಸಿಂಗನ ಕಾಲದ
ಮುತ್ತಿನ ಚೆಂಡ ಕೊಡಮ್ಮ ॥೭೭॥

ಮರತ್ಹೋದ ಚೆಂಡ[ನು ಅ] ರುಹಿದರಾರಯ್ಯ
ನೆರೆಗಲಿ ಚೆನ್ನಿಗ ರಾಮ ।
ಕಿರಿಬುದ್ಧಿ ಯಾತಕೆಂದೆನುತಲಿ ಹರಿಯಮ್ಮ
[ಮರಿಯಾನೆ] ವೀರ ರಾಮಯ್ಯ ॥೭೮॥

ಈ ಚೆಂಡು ಶ್ರೀ ಕೃಷ್ಣರಾಯರಾಡಿದರಂದು
ಈ ಚೆಂಡು ಅಭಿಮನ್ಯುಗೊಲಿದು ।
ಈ ಚೆಂಡು ಮುಮ್ಮಡಿಸಿಂಗನಾಡಿ ಕೆಟ್ಟ
ಈ ಚೆಂಡು ಬೇಡ ರಾಮಯ್ಯ ॥೭೯॥

ಬೊಮ್ಮ ಜಟ್ಟಿಗರೆಂಬ ಕಾವಲು ಚೆಂಡಿಗೆ
ನಿಮ್ಮಯ್ಯನಾಡಲಂಜುವನು ।
ಮುಮ್ಮಡಿ ಸಿಂಗಯ್ಯ ಲಗ್ಗೆಯಾಡುವೆನೆಂದು
ನಿರ್ಮೂಲವಾಗಿ ತಾ ಕೆಟ್ಟ ॥೮೦॥

ಮುತ್ತ[ಯ್ಯ] ಮುಮ್ಮಡಿ ಸಿಂಗನ ಕಾಲನ ಚೆಂಡು
ಇತ್ತಲು ಮಿಸುಕದಲ್ಲಿಹುದು ।
ಮತ್ತೆ ತೆಗೆಯಲಾಗಿ ಮಿತ್ತಾಗಿ ಬರುವದು
ಒತ್ತಿ ಪೇಳಿದಳು ರಾಮಯ್ಯಗೆ ॥೮೧॥

ಅಂದಿನ ದೊರೆಗಳು ಚೆಂಡಿನ ಕಥನದಿ
ಮುಂದುಗೆಟ್ಟರು ಕೇಳ್ದರಿಯಾ ।
ಕಂದ ನೀನಿಂದು ಲಗ್ಗೆಯ ಚೆಂಡನಾಡಲು
ಬಂದೊಯ್ವುದು ರತ್ನಿಯೆಡೆಗೆ ॥೮೨॥

ಷೋಡಶರಾಯರುಗಳು ನಾಲ್ಕು ಯುಗದಲ್ಲಿ
ನೋಡಿನ್ನು ತಾಯ ಚಿತ್ತವನು ।
ಕೊಡೆ ನೋಯಿಸಿ ನಡೆದವರಿಲ್ಲ ಚೆಂಡನು
ಆಡಬೇಡವೊ ರಾಮಯ್ಯ ॥೮೩॥

ನಾಲ್ಕು ಯುಗದಲ್ಲಿ ತಾಯಿ ತಂದೆಯ ಮಾತ
ನೂಕಿ ಕಳೆಯರೆಲೊ ರಾಮ ।
ಬೇಕಾದ ಬಾಧೆ ಬಂದಿತು ಈ ಕಥನದಿಂ
ಲೋಕಾಧಿಪತಿ ಚೆಂಡು ಬೇಡ ॥೮೪॥

ಆಡಿಸುವೆನು ಭಾವಸಂಗಮದೇವನ
ನೋಡುವೆನರ್ತಿಲಿ ಚೆಂಡ ।
ಆಡಲಿ ಪೂರ್ವಲಿಖಿತವು ಬಿಡದಮ್ಮ
ಆಡಿದಲ್ಲದೆ ಬಿಡೆ ಚಂಡ ॥೮೫॥

ಮತ್ತೊಂದು ಯುಗದಲ್ಲಿ ಹರಿಚಂದ್ರರಾಯನ
ಮಿತ್ತಾಗಿ ಕಾಡಿತು ಚೆಂಡು ।
ಹತ್ತು ವರುಷಕೊಬ್ಬ ರಾಯನ ತಿಂಬುದು
ಪೃಥ್ವಿಪಾಲಕ ಬೇಡ ಚಂಡ ॥೮೬॥

ನಿನ್ನ ನೋಡಿ ನಿಲ್ಲಲಾರರೊ ಸ್ತ್ರೀಯರು
ಮನ್ನಿಸಿದಳು ತಾಯಿ ಮಗನ ।
ನಿನ್ನ ಮನಕೆ ಹಾನಿ ತಹುದೆಂದು ಹರಿಯಮ್ಮ
ಚೆನ್ನ ರಾಮಗೆ ಬುದ್ದಿ ಪೇಳೆ ॥೮೭॥

ಆರು ಹೇಳಿದರಪ್ಪ ಚೆಂಡಿನ ಸುದ್ದಿಯ
ಊರೊಳು ಅರಸುವೆಣ್ಣುಗಳು ।
ಸಾರಿ ಕೈತಪ್ಪಿ ಚೆಂಡತ್ತಿತ್ತ ಬಿದ್ದರೆ
ಆರು ಹೊರುವರಪಕೀರ್ತಿ ॥೮೮॥

ಮರೆದು ಹೋದ ಚಂಡ ನೆರಹದಿರು ರಾಮಯ್ಯ
ನೆರೆಗಲಿ ಚೆನ್ನಿಗರಾಮು ।
ಕಿರಿಬುದ್ಧಿ ಯಾಕೆಂದು ಎನುತಲಿ ಹರಿಯಮ್ಮ
[ಮರಿಯಾ] ವೀರ ರಾಮಯ್ಯ ॥೮೯॥

ಕಾಳಿಂಗರಾಯನೋಲಗಕೆ ಹೋಗಿಹ ಚೆಂಡು
ಕಾಲನವರ ಚೆಂಡಾಯ್ತು ।
ನಾಳೆ ನಿಮ್ಮಪ್ಪ ಬಂದರೆ ಚೆಂಡನಾಡೆಂದು
ನೀಲಕುಂತಳೆಯು ಪೇಳಿದಳು । ॥೯೦॥

ಅರಮನೆಗಳು ಹಲಕೇಲವುಂಟು ರಾಮಯ್ಯ
ದೊರೆಗಳ ಗೃಹ ಲೆಕ್ಕವಿಲ್ಲ ।
ಹರಿದಾಡಿ ಚೆಂಡು ಹೋಗತ್ತಿತ್ತ ಬಿದ್ದರೆ
[ವಿ] ರಸಬಹುದು ಚಂಡಬೇಡ ॥೯೧॥

ಚೆಲುವ ರಾಮಯ್ಯ ಬೇಡವೊ ಚೆಂಡಿನಾಟವು
ಚೆಲುವ ಹೆಣ್ಣುಂಟು ಕುಮ್ಮಟದಿ ।
ಲಲನೆರ ಕಣ್ಣ ನೋಟಕ್ಕೆ ಸಿಲುಕದಿದ್ದರೆ
ತಲೆಗೆ [ಹರಲೆ] ಮಾಡುವರು ॥೯೨॥

ಬೇಡ ರಾಮುಗ ನಿನ್ನ ನೋಡಿದ ಸತಿಯರು
ಮಾಡರೊ ಮನೆಯ ಕೆಲಸವ ।
ಉಡುರೊ ತಮ್ಮ ಕಂದಗೆ ಮೊಲೆವಾಲನು
ಕೂಡರೊ ತಮ್ಮ ಪುರುಷರ ॥೯೩॥

ಅಕ್ಕ ಮಾರಮ್ಮನೋಪಾದಿ ಸತಿಯರೆ
ಮಿಕ್ಕೈವರು ಹೊರತಾಗಿ ।
ಕಕ್ಕುಲಾತಿಯ ಮಾಡಿ ಕಳವಳಗೊಂಡರೆ
ಮುಕ್ಕಣ್ಣ ಪರಶಿವನಾಣೆ ॥೯೪॥

ಪರಸತಿಯೆಂಬರು ಹಿರಿಯಕ್ಕ ಮಾರಮ್ಮ
ಹರಿಯಮ್ಮ ನಿನ್ನೋಪಾದಿಯಲಿ ।
ಗುರುವಿನ ಸತಿಯ ಸಮಾನವು ಎನಗೀಗ
ಹರುಷದಿ ಚಂಡ ಕೊಡಮ್ಮ ॥೯೫॥

ಹಿರಿಯರು ನೀವೆಲ್ಲ ನೆರೆದು ರಾಮಯ್ಯಗೆ
ತರಳಗೆ ಬುದ್ಧಿಗಲಿಸುವರೆ ।
ಜರಿದು ಹೇಳುವ ಹಾಗೆ ನಾವು ಹೇಳಿದೆವಮ್ಮ
ದೊರೆ ನಮ್ಮ ಮಾತಿಗಂಜುವೆನೆ ॥೯೬॥

ಕೃತಯುದಲ್ಲಿ ಹುಟ್ಟಿತು ಮಾಯಾಂಗನೆ
ಹತವ ಮಾಡಿದಳು ಪಾರ್ಥಿವರ ।
ಯತಿವಂಶದಿಂದಲಿ ಪತಿ ಶಿರ ಹೋಯಿತು
ಸುತನ ಬಿಲ್ಲನೆ ಮುರಿಯಿಸಿತು ॥೯೭॥

ಮುನ್ನಿನ ಕಾಲದ ದೊರೆಗಳೆಲ್ಲರು ಕೆಟ್ಟು
ಇನ್ನಿದ ನೀನಾಡಬಹುದೆ ।
ಚೆನ್ನ ರಾಮಯ್ಯ ಬೇಡವೊ ಚೆಂಡಿನಾಟವು
ಬೆನ್ನಲ್ಲಿ ಬಹುದಪಕೀರ್ತಿ ॥೯೮॥

ಪಟ್ಟಕೆ ಸಲುವ ರಾಯರು ಪಿಡಿದಾಡುವ
ಕಟ್ಟಾಣಿ ಮುತ್ತನೆ ಹುದುಗಿ ।
ನೆಟ್ಟನೆ ಪೂಜೆ ಮಾಡಿಸಿಕೊಂಬುದಲ್ಲದೆ
ಇಟ್ಟಾಡುವ ಚೆಂಡು ಅಲ್ಲ ॥೯೯॥

ಘನ ತಪಸಿಯ ವಾಲಗದಿ ಮಾಯಾಂಗನೆ
ಬಿನಗು ಸೂಕರನಾಗಿ ಜನಿಸೆ ।
ಧನುವ ತೆಗೆದುಕೊಂಡು ಹರಿಚಂದ್ರನೆಸೆಯಲು
ಜನಿಸಿತು ಮುತ್ತಿನ ಚೆಂಡು ॥೧೦೦॥

ಒಂದು ಯುಗದಲಿ ಹೊ[ಮ]ಗವಾಗಿ ಜನಿಸಿತು
ಕೊಂಡುಹೋಯಿತು ಸೀತೆಯನು ।
ಕಂದ ನೀನಿಂದು ಲಗ್ಗೆಯನಾಡಲು ಚೆಂಡು
ಬಂದು ಬೀಳ್ವದು ರತ್ನಿ ಬಳಿಗೆ ॥೧೦೧॥

ತಂದೆ ಊರೊಳಗಿಲ್ಲ ಚಂದ್ರಮುಖಿಯರುಂಟು
ಕಂದ ಕೇಳಯ್ಯ ರಾಮುಗನೆ ।
ಇಂದಿನ ದಿನ ಬೇಡ ಮತ್ತೊಂದಿನ ಆಡೆಂದು
ಕಂದಗೆ ಬುದ್ಧಿ ಹೇಳಿದಳು ॥೧೦೨॥

ಕೀರ್ತಿವನದಲಿ ಹುಟ್ಟಿತು ಮಾಯಾಂಗನೆ
ಪತಿಯ ಮೈಯನೆ ಕೆಡಿಸಿತು ।
ಗತಿಯಾವುದೆಂದು ಮುನಿಯ ಶಾಪವ ತಾಳಿ
ಪತಿಯ ರೂಪಿಂದ ಧರಿಸಿತು ॥೧೦೩॥

ಕೃತಯುಗದಲ್ಲಿ ಹುಟ್ಟಿತು ಮಾಯಾಂಗನೆ
ಚತುರರೈವರ ತಿರುಗಿಸಿತು ।
ಯತಿಯ ಬಳಕೆಯಿಂದ ಲೆತ್ತವನಾಡಿಸಿ
ಹತವ ಮಾಡಿ[ಸಿ]ತು ಕೌರವರ ॥೧೦೪॥

ಕಡು ಮಾಯದಿಂದ ಕೆಲವು ರೂಪನು ತಾಳಿ
ಕೆಡಿಸಿತು ಕೆಲಬಲದವರ ।
ತಡೆಯದೆ ನಿಮ್ಮ ಮುಮ್ಮಡಿಸಿಂಗ ನಾಯಕ
ಪಿಡಿದಾಡುವ ಲಗ್ಗೆ ಚೆಂಡು ॥೧೦೫॥

ಆಡಿ ಆಸೆಯಿಂದ ದೇಶವ ಕೊಡಲಿ[ಸ]ದೆ
ಸಡಲಿತು ಕೌರವರ ಪಡೆಯು ।
ತಡೆಯದೆ ನಿಮ್ಮ ಮುಮ್ಮಡಿಸಿಂಗನಾಯಕ
ಹಿಡಿದಾಡುವ ಲಗ್ಗೆ ಚೆಂಡು ॥೧೦೬॥

ಆಸೆಯಿಂದಲಿ ದೇಶವ ಕೊಡಲೀ[ಸ]ದೆ
ಸಾಸಡಗಿಸಿತು ಕೌರವರ ।
ಮೀಸರ ಗಂಡ ಬೇಡವೊ ಚೆಂಡಿನಾಟವು
ನೀ ಸಲಿಸೆನ್ನ ನುಡಿಗಳ ॥೧೦೭॥

ಉಡುರಾಜನಂದದಿ ಮೈಯೆಲ್ಲ ಕೆಡುತಿದೆ
ಮಡಗಿ ಪೂಜಿಸಿದರೊ ಮಗನೆ ।
ಕಡುಗಲಿ ರಾಮಯ್ಯ ಚೆಂಡಿನಾಟವು ಬೇಡ
ನುಡಿದಳು ಹರಿಯಲದೇವಿ ॥೧೦೯॥

ತಲೆ ಹೋಗುತದೆಯೆಂದು ಶೂದ್ರಕರಾಯನು
ಸಲೆ ತನ್ನ ಕೈಕಾಲು ಕೊಯಿಸೆ ।
ಬಲುಬುದ್ಧಿಯಿಂದ ಜೀವಿಪೆನೆಂದು ಇರುತಿರೆ
ತಲೆಯ ಕಟ್ಟರೆ ಕಂಚಾಲದಲಿ ॥೧೧೦॥

ಪೊಡವಿಯೊಳಗೆ ಹರಿಚಂದ್ರರಾಯನ
ಸುಡಗಾಡ ಕಾಯಿಸಿತು ವಿಧಿಯು ।
ಹೆಡತಲೆಯೊಳಗಿರ್ದ ವಿಧಿ ಬೆನ್ನ ಬಿಡುವುದೆ
ಕೊಡು ತಾಯಿ ಚೆಂಡ ಬೇಗದಲಿ ॥೧೧೧॥

ಕಾಡಬೇಡವೊ ತಾಯೆ ಕೊಡು ಬೇಗ ಚೆಂಡನು
ಆಡುವೆ ಬೇಗ ಕೊಡೆಂದ ।
ಕಾಡುವ ಶನಿಯೆಲ್ಲಿದ್ದರೆ ಬಿಡುವುದೆ
ಆಡಿದಲ್ಲದೆ ಬಿಡೆನೆಂದ ॥೧೧೨॥

ನಿನ್ನ ಪಾಡೇನಪ್ಪ ಮುನ್ನಿನವರು ತಮ್ಮ
ಹೊನ್ನ ಬಂಗಾರ ಸಿರಿಯಿಂದ ।
ತನ್ನ ತಾನರಿಯದೆ ಕೆಟ್ಟುಹೋದರು ರಾಮ
ಇನ್ನು ನೀನಾಡಬೇಡಪ್ಪ ॥೧೧೩॥

ದೇಶಕಧಿಕವಾದ ಕುಮ್ಮಟದೊಳ[ಗೀಗ]
ಸಾಸಿರ ಸ್ತ್ರೀಯರಿನ್ನುಂಟು ।
ಆಸೆಯ ಮಾಡಿ ಪಾಶವ [ಹಾಕಿ ಕೆಡಹರೆ]
ಈಶನ ವರಪುತ್ರ ನಿನಗೆ ॥೧೧೪॥

ದೊತೆಯರಿಂದಲಿ ಮಾತನಾಡಿಸುವರು
ಕಾತರದಿಂದ ಪಿಡಿವರು ।
ಧಾತುಗೆಡಿಸಿ ಅಣ್ಣ ತಮ್ಮನಾಗಲಿ ಕಡು
[ಪಾತಕಿ]ಯರುಗಳಿನ್ನುಂಟು ॥೧೧೫॥

ದೂತೆಯ ಕಳುಹಿ ನೂತನ ವಸ್ತುಗಳ ಕೊಟ್ಟು
ಮಾತನಾಡಿಸುವ ಬಾಲೆಯರು ।
ಸೋತರೆ ಸರಿಯು ಒಲ್ಲೆನುಯೆಂದು ಜರಿಯಲು
ಆತು ಕೊಲ್ಲುವರು ಪ್ರಾಣಗಳ ॥೧೧೬॥

ಚೆನ್ನಿಗನೆಂದರೆ ಕಣ್ಣೀಡುವರು ರಾಮ
ಹೆಣ್ಣಿನ ಮನಸೊಳ್ಳೀತಲ್ಲ ।
ಕಣ್ಣಾರೆ ಕಂಡು ಚೆಂಡ್ಹ್ಯಾಗಿನ್ನು ಕೊಡಲಪ್ಪ
ದಣ್ಣನೆ ದಣಿದು ಹೇಳಿದಳು ॥೧೧೭॥

ನೋಟದಿಂ ಎದೆಗೆಡಿಸುವರು ಕಂಗಳಿನಿಂದ
ಬೇಟದಿ ಬೆರಗುಗೊಳಿಪರು ।
ಕೂಟದಿ ಕುದಿವರು ಕುಲಟೆಯರೊಳು ಜನ
ದಾಟಸಲ್ಲದು ಚೆಂಡು ಬೇಡ ॥೧೧೮॥

ರಾಜಬೀದಿಯೊಳು ಲಗ್ಗೆಯನಾಡಬೇಡೆಂದು
ವಾಜಿಯ ಮಗನಿಗ್ಹೇಳಿದಳು ।
ರಾಜಲಕ್ಷಣಕೆ ಸಲ್ವದು ಲೆತ್ತ ಚದುರಂಗ
ತೇಜಿಯ ಮೇಲೆ ವೈಹಾಳಿ ॥೧೧೯॥

ಮಂದಿಯ ತಡೆ ಕಟ್ಟು ಕುದುರೆನಿಟ್ಟು ಜೀತವು
ಸಂದು ಬರಲಿ ಸುಭಟರಿಗೆ ।
ಮಂದಮತಿಯು ಬೇಡ ಮಕ್ಕಳಾಟಿಕೆ ಯಾಕೆ
ಮುಂದುಂಟು ಬಲು ರಾಜಕಾರ್ಯ ॥೧೨೦॥

ವೀರಬಲ್ಲಾಳನ ಮುರಿಯಲಿರಿದೆ ರಾಮ
ಓರುಗಲ್ಲವನ ಕೆಣಕಿದೆ ।
ಹೋರಾಟವ ಮಾಡಿಕೊಂಡೆ ತುರುಕರೊಳು
ಆರಿಂತು ಮೈಮರೆದಿಹರು ॥೧೨೧॥

ಗುತ್ತಿಯ ನಾಡನಿರಿದು ಕಪ್ಪವ ತಂದೆ
ಒತ್ತಿ ಸಾಧ್ಯವ ಮಾಡಿಕೊಂಡೆ ।
ಹೊ[ತ್ತೆ]ಜಗಳ ಹುಳಿಯಾರ ಮಾರನ ಕೂಡ
ಇತ್ತ ಸಲ್ಲದು ಚೆಂಡಿನಾಟ ॥೧೨೨॥

ನವಲಕ್ಷ ತೆಲುಗರ ನವಜಿತ ಬಂಟರು
ಅವನ ಕೊಡದೆ ಬಾದುರನ ।
ಬವರವನೆಸಗಿದೆ ನೇಮಿಖಾನನ ಕೂಡ
ಹವಣಾಗದೆ ರಾಜಕಾರ್ಯ ॥೧೨೩॥

ಚೆಂಡುಗಳನು ಆಡಿ ಕೈಕಾಲು ನೊಂದರೆ
ಕೊಂಡೇರು ತುರುಕರಿಗುಸುರೆ ।
ದಂಡೆತ್ತಿ ಬಾರದೆ ಬಿಡುವರೆ ರಾಮಯ್ಯ
ಚೆಂಡಿನಾಟವು ಬೇಡ ಮಗನೆ ॥೧೨೪॥

ಕರವೆರಡನು ಮುಗಿದಳು ಹರಿಯಮ್ಮನು
ತರವಲ್ಲ ಚೆಂಡಿನ ಆಟ ।
ಪರನಾರಿಯರೆಲ್ಲ ಇರದೆ ಉಪ್ಪರಿಗೇರಿ
ಹರುಷದಿ ನಿನ್ನ ನೋಡುವರು ॥೧೨೫॥

ಆರನಾದರು ಆಡಿಸಿ ಹೊತ್ತು ಕಳೆಯದೆ
ಧೀರ ರಾಮಯ್ಯನಾಡುವರೆ ।
ಊರ ಮಕ್ಕಳ ಕೂಡ ಬಿಡದೆ ಚೆಂಡಾಡಲು
ಊರೊಳಗರಸುವೆಣ್ಣುಗಳು ॥೧೨೬॥

ಪಟ್ಟಣದೊಳಗೆ ನೆಟ್ಟನೆ ಪುರುಷರ [ರ]
ದಿಟ್ಟಿಸಿ ಹೊತ್ತುಕೊಂಡಿಹರು ।
ಕೆಟ್ಟ ಮನಸಿನಲಿ ಕಾಮಿಸುವರು ಹೆಣ್ಣು
ದಿಟ್ಟ ಬೇಡವೊ ಚೆಂಡಿನಾಟ ॥೧೨೭॥

ಎನ್ನ ತಾಯಿಯೆ ಕೇಳು ನಿನ್ನ ಸೊಸೆಯರಲ್ಲದೆ
ಇನ್ನು ಅವರು ಹೊರತಾಗಿ ।
ಪನ್ನಗಧರನಾಣೆ ಪರಸತಿಯೆಂಬರು
ನಿನ್ನ ಸಮಾನ್ ಕೇಳಮ್ಮ ॥೧೨೮॥

ಅಕ್ಕ ಮಾರಮ್ಮನ ಸಮವು ನೀ ಕೇಳಮ್ಮ
ಕಕ್ಕುಲಾತಿಯು ಮನವಲ್ಲ ।
ದೊಕ್ಕನೆ ಕರವ ಕರ್ಣಕೆ ಮುಚ್ಚಿ ರಾಮಯ್ಯ
ಅಕ್ಕರದಿಂದೆರಗಿದನು ॥೧೨೯॥

ತೆಗದಪ್ಪಿ ಬಿಗಿದಪ್ಪಿ ತೂಪಿರಿದಾಡುತ
ನಗುತಲಿಯಾರತಿಯೆತ್ತಿ ।
ಮಗನೆ ಮರಿಯಾನೆ ಮಕ್ಕಳೊಳು ಮಾಣಿಕವೆ
ಅಗಲದ ಸಿರಿಯೆ ಕೋ ಚೆಂಡ ॥೧೩೦॥

ತಾಯಾಡಿದ ಮಾತ ಕೇಳಿದ ರಾಮಯ್ಯ
ಜೀಯಯೆನುತ ಪಾದಕೆರಗೆ ।
ಆಯುಷ್ಯ ಬಲ್ಲಿದನಾಗೆಂದು ಪಿಡಿದೆತ್ತಿ
ರಾಯರ ಗಂಡ ಕೇಳೆ[ನಲು] ॥೧೩೧॥

ಏಳೂನೂರು ಕೋಳಿ ಏಳ್ನೂರು ಎಳೆಗಾಯಿ
ಏಳ್ನೂರು ಕಬ್ಬಿನ ಕೋಲು ।
ಏಳು ಗಳಿಗೆಯೊಳು ಚಂಡಿಗೆ ಬಲಿಗೊಟ್ಟು
ಲೋಲ ರಾಮಯ್ಯ ಕೈಮುಗಿದ ॥೧೩೨॥

ಕೈಯ ಮುಗಿಯ ಅಡ್ಡಬಿದ್ದನು ರಾಮಯ್ಯ
ದೈವವೆನಗೆ ಕೃಪೆಯಾಗು ।
ಆಯತದಿಂದಲಿ ಹರಿಯಮ್ಮಗೆರಗುತ
ರಾಯರ ದೇವ ನಡೆತಂದ ॥೧೩೩॥

ಮುತ್ತಿನ ಚೆಂಡು ಸಹಿತ ರಾಮನಾಥನು
ಮತ್ತೆ ಅಂದಳವೇರಿ ನಡೆದ ।
ಎತ್ತಿತು ಮುತ್ತಿನ ಸತ್ತಿಗೆ ರಾಮಗೆ
ಮತ್ತೆ ಪಾಠಕರು ಉಗ್ಗಡಿಸೆ ॥೧೩೪॥

ಸೊಕ್ಕಿದ ವೈರಿಯ ಶಿಕ್ಷಿಪ ಕೋದಂಡ
ರಕ್ಕಸಗಂಡ ಕೋದಂಡ ।
ಅಕ್ಕರೆ ವೀರರಾಮಗೆ ಸರಿಯಲ್ಲೆಂದು
ದೊಕ್ಕನೆ ಕಾಳೆ ಸಾರಿದವು ॥೧೩೫॥

ತಂದೆಯ ಕೈಯಲಿ ನಿಂದು ಜೀತವ ಕೊಂಬ
ಹಂದೆ ಕುಮಾರರ ಗಂಡ ।
ಮುಂದೆ ಖಂಡೆಯದಿ ಕಾಲಾಗ್ನಿಭೈರವನೆಂದು
ನಿಂದು ಹೊಗಳೆ ಭಟರುಗಳು ॥೧೩೬॥

ಕೊಟ್ಟ ಕೈಹಣಕೆ ಹರುವಿಟ್ಟುಕೊಂಬರ ಗಂಡ
ನೆಟ್ಟನೆ ವೈರಿಯಂಕುಶವೆ ।
ಕುಟ್ಟುತ ರವುಡೆ ಜಾಗಟೆಯಿಂದ ಬಾರಿಸೆ
ಸೃಷ್ಟಿಪಾಲರ ಗಂಡನೆಂದು ॥೧೩೭॥

ಮೂಡಲು [ತೆಂ]ಕಲು ಮಲೆವ ರಾಯರಗಂಡ
ಬೀಡಿನೊಳಗೆ ಬಲ್ಲಾಳ ।
ರೂಢಿಯೊಳಗೆ ಸುರಿತಾಳನ ಗಂಡನೆಂ
[ದೇ]ಡಿಸಿ ಕಾಳೆ ಪಿಡಿದವು ॥೧೩೮॥

ನೇಮಿಯ ಗಂಡ ನೇಮಿಯನಾಳ್ವ ಸುರಿತಾಳ
ಭೂಮಿಪಾಲರ ಗಂಡನೆಂದು ।
ಈ ಮಹಿಯೊಳು ಕೊಂಡಾಡಿಸಿಕೊಂಬಂಥ
ಕಾಮನ ಕೈಯ ಕನ್ನಡಿಯೆ ॥೧೩೯॥

ಎತ್ತ ಗಾಳಿಯರಸಿದರು ಮಲೆವರ ಗಂಡ
ಮೊತ್ತದ ರಾಯರ ಗಂಡ ।
ಸತ್ತಿಗೆ ನೆಳಲಡಿಯ ಬಾಹರ ಗಂಡ
ನೆತ್ತಿಯ ಶೂಲವೆ ರಾಮ ॥೧೪೦॥

ಎತ್ತಿತು ಮುತ್ತಿತು ಸತ್ತಿಗೆ ರಾಮಗೆ
ಮತ್ತೆ ಬಿರಿದಿನ ಕಾಳೆ ಹಿಡಿಯೆ ।
ಇತ್ತರದಲಿ ಬಹ ಮನ್ನೆಯರೊಲಗ
ಹತ್ತಿದ ರಾಮ ಅಂದಣವ ॥೧೪೧॥

ಮಾಳವರಾಯ ಸಾ[ಳು]ವರಾಯರ ಗಂಡ
ಬಲ್ಲಾಳ ರಾಯರ ಗಂಡ ।
ಕಾಳಗ [ಕ]ದನದಲ್ಲಣನೆಂದು ರಾಮನ
ಸೂಳೈ(ಸಿ) ಕಾಳೆ ಹಿಡಿದವು ॥೧೪೨॥

ಆಸೆಯ ಕೊಟ್ಟು ಭಾಷೆಗೆ ತಪ್ಪುವರ ಗಂಡ
[ಮೋ]ಸದ ಮಾನ್ಯರ ಗಂಡ ।
ಹಾಸಿಗೆಯೊಳು ಕೂಸ ಮುದ್ದಾಡುವರ ಗಂಡ
ಸಾಸುಳ್ಳ ರಾಯರ ಗಂಡ ॥೧೪೩॥

ಎತ್ತಿತು ಮುತ್ತಿನ ಸತ್ತಿಗೆ ರಾಮಗೆ
ಮತ್ತೆ ಬಿರಿದಿನ ಟೆಕ್ಕೆಯವು ।
ಬಿತ್ತರದಲಿ ಬಹ ಮನ್ನೆಯರೋಲಗ
ಮತ್ತೆ ಅಂದಣವನೇರಿದನು ॥೧೪೪॥

ಅಣ್ಣ ಕಾಟಣ್ಣನ ಕರೆದನು ರಾಮಯ್ಯ
ಮಾನ್ಯರ ಕರೆಸುಯೆಂದೆನಲು ।
ಉನ್ನತ ಮಾತನು ಕೇಳುತ ಕಾಟಣ್ಣ
ಮಾನ್ಯರ ಶೃಂಗರಿಸಿದನು ॥೧೪೫॥

ನೂತನವಾಗಿ ಚೆಂಡಾಡಬೇಕೆನುತಲಿ
ಅತ್ತ ಕಾಟಣ್ಣ ಹರುಷದಲಿ ।
ಉತ್ತಮ ಮಾನ್ಯರ ಕರೆಸಿದನಾಕ್ಷಣ
ಅರ್ತಿಲಿ ಚಂಡನಾಡುವರೆ ॥೧೪೬॥

ಚೆಂಡಿಗೆ ಆಳನು ಹಂಚೆಂದು ರಾಮಯ್ಯ
ಮಂಡಲೇಶ್ವರ ಕಾಟನೊಡನೆ ।
ತಂಡತಂಡದ ಪರಿವಾರವ ಕರಸೆಂದು
ಗಂಡುಗಲಿಯು ರಾಮ ನುಡಿದ ॥೧೪೭॥

ಆ ಮಾತ ಕೇಳುತ ಪ್ರೇಮದಿ ಕಾಟಣ್ಣ
ತಾ ಮಹ ಹರುಷಿತನಾದ ।
ಗಮ್ಮನೆ ತಮ್ಮ ಎಕ್ಕಟಿಗ ನಾಯಕರನು
ಉಮ್ಮಾಯದಿಂದ ಕರೆಸಿದನು ॥೧೪೮॥

ಹಟ್ಟಿಕಾರರು ಹಳ್ಳಿಕಾರರು ಕೆಲದಲಿ
ದಿಟ್ಟ ಗಾಣಿಗ ಬೊಮ್ಮನವರು ।
ಕಟ್ಟಾಳು ಕುಂಬಾರ ಸೋಮನು ವಿರುಪನು
ಜಟ್ಟಿಗಳಂತೆ ಒದಗಿದರು ॥೧೪೯॥

ನೆಲಗತಿ ಬುಕ್ಕ ಬಂಟರ ಭಾವ ತಿಪ್ಪಣ್ಣ
ಕುಲಕೆ ಚಾಗೆಯ ತೋಪಿನವರು ।
ಕುಲದಲಕ್ಕಸಾಲೆರ ಬೇವಿನ ಸಿಂಗ
ತಲೆಯಲ್ಲಿ ಶಿವಲಿಂದ ದೇವ ॥೧೫೦॥

ಒಕ್ಕಲಿಗರ ಮುದ್ದ ಅಕ್ಕಸಾಲೆರ ಚಿಕ್ಕ
ಮಿಕ್ಕ ಮೀನುಗ ಬೊಮ್ಮನವರು ।
ಹೊಕ್ಕು ಹೊಯಿವ ಕೊಳ್ಳಿ ನಾಗಣ್ಣ ಮೊದಲಾದ
ಚಿಕ್ಕ ಭೀಮನು ಪೆನ್ನನವರು ॥೧೫೧॥

ಕಬ್ಬಿಲಿಗರ ನಾಗ ಹೆಬ್ಬಲಿ ಚಿಕ್ಕಣ್ಣ
ಅಚ್ಚಿಯ ನಾಯಕನವರು ।
ತಬ್ಬಿಬ್ಬುಗೊಳಿಸುವ ವೀರಬೊಬ್ಬಲಿದೇವ
[ಕಗ್ಗೊಲೆ] ಸುರಿತಾಳ ಕಾಟ ॥೧೫೨॥

ಧೀರ ಮೀನಾಂಕಿಯ ಭಾನು ಗುಜ್ಜಲದೇವ
ಮಾರ ಮನ್ನುಲ ಬುಳ್ಳನವರು ।
ಸೇರಿ ನಿಂದ [ರು] ಮುತ್ತಿನ ಜಾಲ ಗುಜ್ಜಲ
ಸಾರಂಗ ಗೋವೆ ಗುಜ್ಜಯ್ಯ ॥೧೫೩॥

[ಎನುಮಲ] ಚಿಕ್ಕಯ್ಯ ಯರಬೋತು ಗಂಗನು
ರಣಕೆ ಮಂಗಳ ಸಿಂಗನವರು ।
ಮನದಗಟ್ಟೆಯ ತಿಮ್ಮ ಮುದಿಗೊಂಡ ವೀರನು
ಮನಕೆಚಾಕಿಯ ತಿಪ್ಪನವರು ॥೧೫೪॥

ಚಾಕಿಯ ಕೊಪ್ಪನು ಜನ್ನಿಯ ತಿಪ್ಪನು
ರೇಕೆಯ ಮುದ್ದ ಕಾಟನವರು ।
ಬೇಕಾದ ಮರಳೆಯ ಬೊಮ್ಮನವರು ಬೇಗ
ಏಕಾಂಗವೀರರೊದಗಿದರು ॥೧೫೫॥

ಕಾಹಿದೇವನು ಖಂಡೆಯ ಕರವೀರನು
ಮೋಹಿದೇವನು ಸೋಮಿದೇವ ।
ಸಾಹಿದೇವನು ಮಲವರ ಗಂಡ ಮರಿದೇವ
ಬೇಹಿನ ಬೊಲ್ಲುಗನವರು ॥೧೫೬॥

ಅರಸು ಮಕ್ಕಳು ಕಂಪರಾಜ
ಅರಿಬಿರಿದಿನ ತಿಮ್ಮರಾಜ ।
ಬಿರಿದ ಬಿಡರು ಕಾಳಗದೊಳು ನಡೆಗೋಂಟೆಯ
ದೊರೆ ಬಿಟ್ಟನಾಯಕನವರು ॥೧೫೭॥

ಜಲ್ಲಿಬಿಲಿನ ಬುಕ್ಕಿನಾಯಕ ಮೊದಲಾದ
ಕಲ್ಲುಕೋಟೆಯ ಚಿಕ್ಕನವರು ।
ನಲ್ಲ ನಾಗನು ಮೀನಾಂಕ ಕಂಪನು ತಾನು
ಬಿಲ್ಲ ಪೊಂಪನು ಸಿಂಗನವರು ॥೧೫೮॥

ತೆಲುಗ ಮನ್ನೆಯ ಮಕ್ಕಳು ಊರೊಳಗುಳ್ಳ
ಸಲೆ ರಾಜಪುತ್ರರೆಲ್ಲರನು ।
ಗೆಲುವುಳ್ಳ ಆಳುಗಳ ಹಂಚಿ ಕೊಟ್ಟನು ಕಾಟ
ಛಲದಂಕ ವೀರ ರಾಮಯ್ಯೆಗೆ ॥೧೫೯॥

ಕರೆಸಿದ ದೇವಿಶೆಟ್ಟಿಯ ಲಿಂಗನ [ತಾನು]
ಕರೆಸಿದನಾಗ ಬೊಲ್ಲುಗನ ।
ಕರೆಸಿದ ಹೊಣಕೆಯ ವೀರಾಧಿವೀರರ
ಧುರಧೀರ ಚೆನ್ನಿಗ ರಾಮ ॥೧೬೦॥

ಬಾದುರಖಾನನ ಮಗ ಮಹಿಮಖಾನ
ಸಾಧನೆ ಬಸವರಾಜಯ್ಯ ।
ಭೇದಿಸಿ ಮಣಿಯರ ಮಲ್ಲನ ಮಕ್ಕಳು
ಕಾದಲೆ ರಾಮ ಕರೆಸಿದ ॥೧೬೧॥

ಬಾಣಗಾರರ ತಿಪ್ಪ ಬಾರಿಕರ ಮಲ್ಲನು
ರಣಧೀರ ರಾಕ್ಷಸ ಮಾದ ।
ಹೊಣಿಕೆ ಬಂಟರುಗಳ ಕರೆಸಿದ ರಾಮಯ್ಯ
ಕಳುಹಿದ ಕಾಟನ ಕಡೆಗೆ ॥೧೬೨॥

ಹೊನ್ನ ಮೊಳೆಯ ಕಠಾರಿಯ ಎಕ್ಕಟಿಗರು
ನಿನ್ನ ಕಡೆಗೆ ಕಾಟಣ್ಣ ।
ಮನ್ನಿಸಿ ಉಡುಗೊರೆ ಕೊಂಬ ಎಕ್ಕಟಿಗರು
ತನ್ನ ಕಡೆಗೆ ಮಾಡಿ ರಾಮ ॥೧೬೩॥

ಚೆಲುವ ಕಾಟಣ್ಣ ಚೆನ್ನಿಗ ರಾಮ ಸಹವಾಗಿ
ಎಲ್ಲ ಮಾನ್ಯರ ಹಂಚಿಕೊಂಡು ।
ನಿಲ್ಲದೆ ಬೇಗನೆ ನಡೆಯೆಂದು ರಾಮಯ್ಯ
ಬಲ್ಲಿದ ನಡೆದ ಬಾಜರಕೆ ॥೧೬೪॥

ನಿಲ್ಲದೆ ಬೇಗನೆ ನಡೆಯೆಂದು ರಾಮಯ್ಯ
ಲೋಲ ಕಾಟಣ್ಣಗ್ಹೇಳಿದನು ।
ಮರಿಯಾನೆ ಮದ್ದಯ್ಯ ಕುರಿಡೊಳ್ಳಿ ಬೈಚಪ್ಪ
ಕಿರಿಯ ಮಲ್ಲಯ್ಯ ಸಂಗಯ್ಯ ॥೧೬೫॥

ಉದ್ದಗಿರಿಯ ತಿಪ್ಪ ರಾಹುತ ಚೌಡನು
ಕದ್ದಗಲ್ಲ ಕೇಶವನರು ।
ಒಂದಾಗಿ ವೈರಿಯ ಜೀವವ ಕೊಂ [ಬುವ]
ಮಂದಿಯ ರಾಮ ಹಂಚಿದನು ॥೧೬೬॥

ಬೂಟಕ ತಮ್ಮನು ಚಿನುಮಾದಿ ಬೊಮ್ಮನು
ಕೌಟಿಲ್ಯದವನು ಹನುವು ।
ದಿಟ್ಟರು ಕಲೆಯಲಿ ವೀರಾಧಿವೀರರು
ಕೊಟ್ಟಿದ ಬೇಡರೊದಗಿದರು ॥೧೬೭॥

ಸಂಪತ್ತಿನಿಂದಲಿ ಶೃಂಗಾರವಾದರು
ಗುಂಪಾಗಿ ನೆರೆದ ಮನ್ನೆಯರು ।
ಸಂಪಗೆ ಸಸಿಯಂತೆ ಮೇಲಾಗಿ ನಿಂದರು
ಇಂಪಾಗಿ ರಾಜ ಮನ್ನೆಯರು ॥೧೬೮॥

ಆವ ಠಾವಿಲಿ ಚೆಂಡನಾಡುವ ಕಾಟಣ್ಣ
ಆವ ಬಯಲು ಸಮವೆನಲು ।
ಕೋವಿದೆ ಚಿಕ್ಕಮ್ಮ ರತ್ನಾಜಿಯರಮನೆ
ಠಾವಿಗೆ ನಡೆಯೆಂದ ಕಾಟ ॥೧೬೯॥

ಅಲ್ಲಿ ನೋಡಲಿ ಮಕ್ಕಳರ್ತಿಯ ಚಿಕ್ಕಮ್ಮ
ಅಲ್ಲಿಗೆ ನಡೆಯೊ ಕಾಟಣ್ಣ ।
ಬೆಳ್ಳಿಯ ಲಗ್ಗೆ ಬಂಗಾರ ಲಗ್ಗೆಯ ಕೊಂಡು
ಅಲ್ಲಿಗೆ ಬಂದ ಕಾಟಣ್ಣ ॥೧೭೦॥

ತಗ್ಗು ಮುಗ್ಗಿಲ್ಲದ ಠಾವಿಲಿ ಕಾಟಣ್ಣ
ಲಗ್ಗೆಯ ಹೂಡ ಹೇಳಿದನು ।
ಉಗ್ಗೋಡೆಯಲಿ ಕೂಡಿತು ಪರಿವಾರು
ದುರ್ಗದ ಪತಿ ಚೆಂಡಿನಾಟ ॥೧೭೧॥

ಮುಂದಣ ಬಯಲಿಲ್ಲ ಚೆಂಡನಿರಿಸಿ ರಾಮ
ಗಂಧಾಕ್ಷತೆ[ಯ] ನಿಕ್ಕಿದನು ।
ಒಂದೊಂದು ಪರಿಯಲಿ ನೈವೇದ್ಯಗಳ ತೋರಿ
ವಂದಿಸಿ ಕರಗಳ ಮುಗಿದು ॥೧೭೨॥

ನಿಂದರು ಎಡಬಲದಲ್ಲಿ ಕಾಸಿಯ ಕಟ್ಟಿ
ಬಂದರು ಕೊನೆಮೀಸೆಯವರು ।
ಗಂಧ ಕಸ್ತೂರಿ ಪುನುಗು ಲೇಪನ ಮಾಡೆ
ಕಂದರ್ಪನಂತೆ ಒಪ್ಪಿದರು ॥೧೭೩॥

ಪಟ್ಟೇದ ಸೀರೆ ಕೈಬರೆಹದುಪ್ಪಟವನು
ಉಟ್ಟು ಚಿಮ್ಮುರಿಯ ಸುತ್ತಿದರು ।
ದಿಟ್ಟರು ಎಡಬಲದಲ್ಲಿಯೆ ನಿಂದರು
ನೆಟ್ಟನೆ ರವಿಶಶಿಯಂತೆ ॥೧೭೪॥

ಪೂಸಿದ ಗಂಧ ಪೂವಿನ ಸರ ಬಿಗಿದುಟ್ಟು
ಕಾಸೆ ವಂಕುಡಿಯ ಕಠಾರಿ ।
ಮೀಸೆಯ ತಿರುವುತ ವಾಸಿಯ ನುಡಿವುತ
ದೇಶಾಧಿಪತಿಯರೊಗ್ಗಿನಲಿ ॥೧೭೫॥

ನಾಡೊಳು ಅಂದವ ನೋಡ[ಲು ವಿ]ಪರೀತ
ಹೂಡುವ ಲಗ್ಗೆಯಾಟಗಳ ।
ಜೋಡು ಗಂಟೆಗಳು ಝಣರೆನುತ ಹಾಡುತಲಿರೆ
ನೋಡಿತು ನೋಟಕ್ಕೆ ಜನರು ॥೧೭೬॥

ಮುತ್ತಿನ ಚೆಂಡಿಗೆ ಪಟ್ಟ ವಂಕುಡಿದಾರ
ಇತ್ತರದಲಿ ಎಡೆ ಹಚ್ಚಿ ।
ಸುತ್ತಲಿ ನೋಡುವ ಮತ್ತೆ ಮಹಜನರೆಲ್ಲ
ಇತ್ತರದಲ್ಲಿ ಸೂಳೆಯರು ॥೧೭೭॥

ಇತ್ತರದಲ್ಲಿ ನೋಡುವ ನೋಟಕ ಜನ
ಮೊತ್ತವಾಯಿತು ಅಲ್ಲಿಗಲ್ಲಿ ।
ಕಸ್ತೂರಿ ತಿಲಕ ವಿಚಿತ್ರದ ಚದುರೇರು
ಅರ್ತಿಯಿಂದಲಿ ನೋಡುತಿರಲು ॥೧೭೮॥

ಅತ್ತ ಕಂಪಿಲರಾಯ ಹೊಸಮಲೆದುರ್ಗದಿ
ಒತ್ತಿ ಬೇಂಟೆಯನಾಡುತಿರಲು ।
ಇತ್ತ ಪಟ್ಟಣದಲ್ಲಿ ರಾಜಕುಮಾರರು
ಹೊತ್ತುಗಳೆವುತಿರ್ದರಾಗ ॥೧೭೯॥

ಚೆಲುವ ರಾಮಯ್ಯ ಚೆಂಡಾಡುವ ಬಯಲಿಗೆ
ಲಲನೆಯರೆಲ್ಲ ಶೃಂಗರಿಸಿ ।
ಕಲೆಯ ವೇಶ್ಯಯರೆಲ್ಲ ಹೊರಡೆಂದು ಸೇವಕರು
ಉಲಿದರು ಸೂಳೆಗೇರಿಯೊಳು ॥೧೮೦॥

ಸೂಳೆ ಹಂಪಾಜಿಯು ಬಂದಳು ಒಲವಿಂದ
ಮೇಲೆ ರವುಡಿಯ ಹೊಯಿಸುತಲಿ ।
ಬಾಳ ಪಂಥವನಾಡುವ ವಿಟಜನರಿಗೆ
ಕೋಳು ಹೋಹುದು ಎಚ್ಚರಿಲ್ಲ ॥೧೮೧॥

ಕಿರಿಯ ಹೊತ್ತಿಗೆ ಹಿಡಿಹೊನ್ನನು ಕೊಂಬುವ
ಸುರತದ ಸುಗ್ಗಿಯೆಂಬವಳು ।
ಉರವಕೊಂಡೆಯ ಸೋಮಿ ಬಂದಳು ಒಲವಿಂದ
ಭರದಿಂದ ಚೆಂಡ ನೋಡುವರೆ ॥೧೮೨॥

ತಿದ್ದಿದ ಕಸ್ತೂರಿ ತಿಲಕವನಿಟ್ಟಳು
ಮುದ್ದು ಮುಖವು ನಗೆ ನುಡಿಯು ।
ನಿದ್ದಿಗೆ ಸಾವಿರ ಹೊನ್ನ ಕೊಂಬುವಳೊಬ್ಬ
ಉದ್ದಗಿರಿಯ ಸಿದ್ದಿ ಹೊರಟು ॥೧೮೩॥

ಹಿಂದಣ ಕಾಲದ ರಾಯರಾಡುವ ಚೆಂಡ
ಇಂದು ರಾಮಯ್ಯನಾಡುವನು ।
ಅಂದಣವನು ಏರಿ ಹೊರಟು ಬಂದಳು ಬೇಗ
ಚಂದ್ರಗಿರಿಯ ಚೆಲ್ವ ಚೆನ್ನೆ ॥೧೮೪॥

ಚೆನ್ನದ ಬರಹದ ಸೀರೆಯನುಟ್ಟಳು
ಕನ್ನೆವೆಣ್ಣುಗಳ ಕೂಡಿಕೊಂಡು ।
ಹೊನ್ನೂರ ಹರೆಯದ ವಿರುಪಾಯಿ ಬಂದಳು
ಚೆನ್ನ ರಾಮನ ನೋಡುವರೆ ॥೧೮೫॥

ಓರುಗಲ್ಲಿನ ಸೂಳೆ ಎಲ್ಲಾಜಿ ಬಂದಳು
ಭೋರನೆ ತಾ ವಿಟರೊಡನೆ ।
ಸೇರಿಸಿ ಸುರತದಿ ಸೂರೆಗೋಂಬುವಳಾಗ
ನೀರೆ ನಡೆದಳು ಅರ್ತಿಯಲಿ ॥೧೮೬॥

ಶಂಕೆಯಲ್ಲದೆ ಮದಗಜದಂತೆ ನಡೆದಳು
ರಿಂಕಿದ ಕುಚವಲಗುತಲಿ ।
ಬಂಕಾಪುರದ ಎಲ್ಲಾಜಿಯು ಬಂದಳು ಮೀ
ನಾಂಕ ರಾಮನ ನೋಡುಲಿಕೆ ॥೧೮೭॥

ರಸಿಕ ಶಿರೋಮಣಿ ರಾಜ ಸುಲೋಚನೆ
ಶಶಿಮುಖಿಯರು ಸಹವಾಗಿ ।
ಹೊಸಪೇಟೆಯ ಹೊನ್ನಜಿ ಬಂದಳು ಬೇಗ
ಕುಶಲ ರಾಮನ ನೋಡಲಿಕೆ ॥೧೮೮॥

ಹೊಲಬುದಪ್ಪಿದ ಹುಲ್ಲೆಯಂತೆ ಹವ್ವಳಿಪಳು
ಕಳೆಯುಳ್ಳ ಮುಖಕಾಂತಿಯಿಂದ ।
ಇಳೆಗೆ ನೊಸಲಮಣಿ ಎಸೆದಿಹ ಇಕ್ಕೇರಿ
ನಳಿನಾಕ್ಷಿ ರಂಭೇ ದುರುಗಾಯಿ ॥೧೮೯॥

ಎಳೆವೆರೆದಿಂಗಳ ಮುಖಕಾಂತಿ ಹೊಳೆವುತ
ಲಲನೆಯರೆಡಬಲದಲ್ಲಿ ।
ಹೊಳೆಯಹೊನ್ನೂರ ರಾಮಾಜಿ ಬಂದಳು ಬೇಗ
ಚೆಲುವ ರಾಮನ ನೋಡುವರೆ ॥೧೯೦॥

ಬಾಳೆಯ ಸುಳಿಯಂತೆ ಬಳುಕುತ ಬಂದಳು
ಬಾಲೆವೆಣ್ಣುಗಳನೊಡಗೊಂಡು ।
ಪಾಳಿಯ ಪಾಪಾಯಿ ಬಂದಳು ಒಲವಿಂದ
ಲೋಲ ರಾಮನ ನೋಡುವರೆ ॥೧೯೧॥

ವೀರಾಧಿ ವೀರರ ವಿತರಣ ಶೂರರ
ಮಾರಕೇಳಿಯೊಳು ಸೋಲಿಪಳು ।
ನಾರಿ ಶಿರೋಮಣಿ ಭಾಗವತಿಯ ಭದ್ರಿ
ಭೋರನೆ ತಾ ಬಂದು ನಿಂದು ॥೧೯೨॥

ಹೊಳೆವ ಹೊಂಬಣ್ಣದ ಸೀರೆಗಳನು ಉಟ್ಟು
ನಳಿನಾಕ್ಷಿಯರ ಕೈಕೊಂಡು ।
ಉಳಿಬೀಡಿನ ಹಂಪಾಜಿ ಬಂದಳು ಬೇಗ
ಹೊಳೆವ ರಾಮನ ನೋಡುವರೆ ॥೧೯೩॥

ಮಾಣಿಕ ತುಟಿ[ಕಾಂತಿ]ಹೊಳೆವ ಹೊಂಬಣ್ಣವು
ಜಾಣತನವು ನಗೆನುಡಿಯು ।
ಏಣಲೋಚನೆ ಬಸವಾಜಿ ಬಂದಳು ಬೇಗ
ಜಾಣ ರಾಮನ ನೋಡುವರೆ ॥೧೯೪॥

ಕಸ್ತೂರಿ ತಿಲಕ ಕುಂಕುಮ ಗಂಧ ಸೌರಭ್ಯ
ಮಸ್ತಕ ಬೈತಲೆ ಸೊಬಗ ।
ಪುಷ್ಪ ಸುಗಂಧ ಗಂಧದ ಸುವಾಸನೆ
ಹಸ್ತಿಗಮನೆಯರೊಪ್ಪಿದರು ॥೧೯೫॥

ಮುಡಿವಾಳ ಮೊಲ್ಲೆ ಮಲ್ಲಿಗೆ ಜಾಜಿ ಸಂಪಗೆ
ಎಡೆಯೆಡೆಯಲ್ಲಿ ಕುಂಕುಮವು ।
ಸಡಗರದಲಿ ಬೇಲೂರ ನಾಗಾಜಿಯು
ನಡೆದಳು ಚೆಂಡ ನೋಡುವರೆ ॥೧೯೬॥

ಕನ್ನಡಿ ವದನೆ ಕಾಮನ ತೇಜಿ ಕರ ಚೆಲ್ವೆ
ಕರ್ಣಪತ್ರವು ಮಿನುಗುತಲಿ ।
ಉನ್ನತ ಉದಪಣಿ ರಾಮಾಜಿ ಬಂದಳು
ಚೆನ್ನ ರಾಮನ ನೋಡುವರೆ ॥೧೯೭॥

ಮುದ್ದು ಮುಖದ ಅಷ್ಟಕಳೆ ಐಶ್ವರ್ಯದ
ಉದ್ರಿಯ ಹೂವಿನ ಸಮವು ।
ಚಿದ್ರೂಪ ಶೃಂಗಾರ ಪಟ್ಟಣದೇವಿಯು
ಚಿದ್ರೂಪ ರಾಮನಾಟವನು ॥೧೯೮॥

ಚುಕ್ಕಿ ಸೀರೆಯನುಟ್ಟು ಕಸ್ತೂರಿಯನು ಇಟ್ಟು
ಸಕ್ಕರೆವಿಲ್ಲನ ಗೆಲುವೆ ।
ಚಿಕ್ಕ ಪ್ರಾಯದ ವಿಟರನು ಗೆಲಗೊಂಡಿಹ
ತೆಕ್ಕಲಕೋಟೆಯ ನಾಗಿ ॥೧೯೯॥

ಭೇದವಿಲ್ಲದೆ ರತಿಗಲೆಯೊಳು ಸೋಲಿಪ
ನೋಡುವ ಬನ್ನಿಯೆಂದೆನುತ ।
ಆದವಾನಿಯ ನಾಗಾಜಿ ಬಂದಳು ಬೇಗ
ಕಾದುವ ಮಾಸಾಳಿನಂತೆ ॥೨೦೦॥

ಶಂಕೆಯಿಲ್ಲದೆ ಮದಗಜದಂತೆ ನಡೆದಳು
ರಿಂಕದ ಕುಚವಲುಗುತಲಿ ।
ಬಂಕಾಪುರ ಎಲ್ಲಾಜಿ ಬಂದಳು ಬೇಗ
ಬಿಂಕದಿ ಚೆಂಡ ನೋಡಲಿಕೆ ॥೨೦೧॥

ಕುಂಭಕೋಣೆಯ ವಿರುಪಾಯಿ ಬಂದಳು ಬೇಗ
ಬೊಂಬೆ ಹಾಕಿದ ರುಳಿ ಪದದಿ ।
ಕೆಂಬಾವಿಲಿಂದ ಬಂದಳು ಎಲ್ಲಾಜಿಯು
ಗಂಭೀರನ ನೋಡಲಿಕ್ಕೆ ॥೨೦೨॥

ಮಂಡಲದೊಳು ತನಗೆಣೆಯಿಲ್ಲವೆನುತಲಿ
ಕೊಂಡಾಡಿಸುತ ಬಿರಿದುಗಳ ।
ಚೆಂಡನಾಡುವದನ್ನು ನೋಡಬೇಕೆನುತಲಿ
ಗಂಡಿಕೋಟೆಯ ಗಂಗಾಜಿ ॥೨೦೩॥

ಪುಂಡರೀಕಾಕ್ಷಿ ಪುರುಷರೆದೆಗಡುವಂತೆ
ಚೆಂಡ ನೋಡುವರೆ ರಾಮಯ್ಯನ ।
ತಂಡ ತಂಡದ ಸತಿಯರು ಸಹ ನಡೆದಳು
ಕೊಂಡಾಪುರದ ಕೊಂಡಾಜಿ ॥೨೦೪॥

ನೀಲಾಳಕಿ ಅಳಿಗುರುಳ ಭಾವಕಿಯರು
ಕಾಲಂದುಗೆಗಳ ರವದಿ ।
ಬಾಲೆವೆಣ್ಣುಗಳೊಳು ಭರದಿಂದ ನಡೆದ[ರು]
ಲೋಲ ರಾಮನ ನೋಡುವರೆ ॥೨೦೫॥

ಅಲ್ಲಲ್ಲಿ ಭೂರಿ ಗಣಿಕೆಯರು ತಮತಮ
ಗಲ್ಲಲ್ಲಿ ನಿಂದು ನೋಡುವರು ।
ಫುಲ್ಲಶರನ ರೂಪು ಇವರಾರೆನುತ ಬೇಗ
ಮಲ್ಲಿಗೆ ಗಂಧಿಯರೊಲಿದು ॥೨೦೬॥

ಚೆನ್ನಿಗ ರಾಮನರ್ಧಾಂಗಿಯರು ಈಗ
ಮುನ್ನಾವ ನೋಂಪಿಯ ನೋಂತು ।
ಮನ್ನಣೆ ಪಡೆದವರು ಇವನೊಳು ಕೂಟ[ಕೆ]
ಚೆನ್ನಾಗಿ ಕೂಡಿ ನಡೆತರಲು ॥೨೦೭॥

ಏನು ನೋಂಪಿಯ ನೋಂತು ಪಡದಳಿವನ ಮಾತೆ
ಈ ಸುಕುಮಾರ ರಾಮುಗನ ।
ಭಾಷೆಯ ಮಾಡಿಕೊಂಬರು ತಮ್ಮೊಳು ತಾವು
ಈಶನೆ ಇವನು ಬೇಕೆನುತ ॥೨೦೮॥

ಪಟ್ಟಣದೊಳು ಸೋಮ ಸೂರ್ಯ ವೀಧಿಯೊಳು
ನೆಟ್ಟನೆ ಚೆಂಡಾಡುತಿರಲು ।
ಕಟ್ಟಾಳು ರಾಮನ ಕಂಡು ಕದಪಿಗೆ ಕೈಯ
ನಿಟ್ಟು ನೋಡುವ ಹೆಂಗಳೆಯರು ॥೨೦೯॥

ಹಲಗೆಯ ಮಾಡಿ ಲಗ್ಗೆಯ ಚೆಂಡನೊಲಿದಿಡೆ
ಬಲವುಳ್ಳ ರಾಮನ ಮಂದಿ ।
ನಿಲ್ಲದೆ ಕಾಳೆಯ ಧ್ವನಿಗೆ ಲಗ್ಗೆಯ ಹೂಡೆ
ಅಲ್ಲಿಹ ವೀರಮನ್ನೆಯರು ॥೨೧೦॥

ಆಳನು ಹಂಚಿ ಇತ್ತರದಲಾಡುವ ಬೊಬ್ಬೆ
ಮೇಳವ ಲಾಲಸಿ ರತ್ನಿ ।
ಕೇಳಿದಳು ಸಂಗಿ ಇದೆಲ್ಲಿಯ ರಭಸಿಂದು
ಮೇಳೈಸಿದೆ ಕುಮ್ಮಟದಿ ॥೨೧೧॥

ಬೊಬ್ಬೆಯ ಅಬ್ಬರ ಹಬ್ಬಿ ಕುಮ್ಮಟದೊಳು
ಇಬ್ಬಗೆಯಾಗೆ ಪಟ್ಟಣವು ।
ಗಬ್ಬಿ ರಮನ ಚೆಂಡಿನಾಟವ ಜನರೆಲ್ಲ
ನಿಬ್ಬೆರಗಾಗಿ ನೋಡಿದರು ॥೨೧೨॥

ಊರ ಮುಂದಣ ಬೊಬ್ಬೆ ಹೇಳಬಾರದು ಇನ್ನು
ಧೀರ ರಾಮನ ಚೆಂಡಿನಾಟ ।
ಊರ ನಾರೆರ ದೃಷ್ಟಿ ತಾಕಿತು ರಾಮಗೆ
ಮಾರಿ ಬಂದಿತು ಕುಮ್ಮಟಕೆ ॥೨೧೩॥

ಇತ್ತರದಲಿ ಹುಯ್ಯಲ ಕೇಳಿ ರತ್ನಾಜಿ
ಮತ್ತೆ ಆಯತವಾಗಬೇಕೆಂದು ।
ಹತ್ತೆಲಿರ್ದ ಹೆಂಗಳೆಯರ ಕೇಳಿಯೆ
ಮತ್ತೆ ಯೋಚನೆಮಾಡಿ ರತ್ನಿ ॥೨೧೪॥

ಎಲ್ಲಿಯ ಹುಯ್ಯಲು ನಿಲ್ಲದಬ್ಬರಗಳು
ಬಲ್ಲಿದ ರಾಮನಾಟಗಳ ।
ಎಲ್ಲಿಯ ಸುದ್ದಿ ನೀ ಕೇಳಿ ಬಾರೆಲೆ ಸಂಗಿ
ನಿಲ್ಲದೆ ಕಳುಹೆ ಬೇಗದಲಿ ॥೨೧೫॥

ಎಲ್ಲಿಯ ಧ್ವನಿಯು ಇದೆಲ್ಲಿಯ ಕಲಹವು
ಎಲ್ಲಿಯ ಹುಯ್ಯಲೆಂದೆನುತ ।
ಚೆಲ್ಲೆಗಂಗಳ ಬಾಲೆ ರತ್ನಿ [ತಾ] ಸೂಚಿಸೆ
ಮೆಲ್ಲನುಪ್ಪರಿಗೆ ಏರಿದಳು ॥೨೧೬॥

ನೋಡಿ ನಾಲ್ದೆಸೆಗೆ ಬೇಗದಿ ಸಂಗಾಯಿ
ನಾಡೊಳು ರಾಮನಾಟಗಳ ।
ಗಾಢದಿ ಬಂದು ಹೇಳಿದಳು ರತ್ನಿಗೆ ಸುದ್ದಿ
[ನಾಡೆ] ರಾಮನ ಚೆಂಡಿನಾಟ ॥೨೧೭॥

ಹೋಗಿ ಬಾ ನಾಗಾಯಿ ಆರದೀ ಸುದ್ದಿಯು
ಆಗ ರತ್ನಾಜಿ ಕಳುಹಿದಳು ।
[ಸಾಗಿ] ಬಂದು ಸುದ್ದಿಯ ಕೊಂಡು ನಾಗಾಯಿ
ಬೇಗ ಇಬ್ಬರ ಮಾತ ಕೇಳಿ ॥೨೧೮॥

ರಾಮನಾಡುವ ಚೆಂಡು ಭೂಮಿಯೊಳಗೆ ಚಿತ್ರ
ಕಾಮುಕರಾಡುವ ಕಂಡು ।
ಪ್ರೇಮದಿ ತಿರುಗಿ ಸಂಗಾಯಿ ಅರಮನೆ ಹೊಕ್ಕು
ಕೋಮಲೆಯೊಳು ಮಾತನುಸುರೆ ॥೨೧೯॥

ಸಮ್ಮಾನದಿಂ ರಾಮನಿಟ್ಟ ಮುತ್ತಿನ ಚೆಂಡು
ಬ್ರಹ್ಮಾಂಡವನು ಮುಟ್ಟುತಿಹುದು ।
ಉಮ್ಮಾಯದಿಂದ ರತ್ನಿಗೆ ಸುದ್ದಿಯ [ನಾಗ]
ಗಮ್ಮನೆ ಬಂದು ಹೇಳಿದಳು ॥೨೨೦॥

ಅತ್ತ ರಾಮಯ್ಯ ಚೆಂಡಾಡುವ ಸುದ್ದಿಯ
ಇತ್ತ ಕೇಳುತ ರತ್ನಾಜಿ ।
ಚಿತ್ತಜ ಸಮರೂಪನ ನೋಡಬೇಕೆಂದು
ಮತ್ತೆ ಶೃಂಗರವಾಗುತಹಳೆ ॥೨೨೧॥

ಚೆನ್ನಿಗ ರಾಮನ ನೋಡಬೇಕೆನುತಲಿ
ರನ್ನೆಯ ಕರೆಯ ಹೇಳಿದಳು ।
ಪನ್ನೀರ ತಂದು ಕೈಕಾಲು ಮುಖಗಳನಾಗ
ಚೆನ್ನಾಗಿ ತೊಳೆದು ರತ್ನಾಜಿ ॥೨೨೨॥

ಕಾಲಂದುಗೆ ಪಿಲ್ಲಿ ಮೇಲೆ ಹೊನ್ನಡುದಾರ
ತೋಳ ಬಾಪುರೆ ಭುಜಕೀರ್ತಿ ।
ಸಾಲುಮುತ್ತಿನ ಮಣಿ ಕೊರಳ ಚಿಂತಾಕವ
ಭಾವೆ ರತ್ನಾಜಿಗಳವಡಿಸಿ ॥೨೨೩॥

ಬೆರಳ ಹೊನ್ನುಂಗುರ ಕೊರಳ ಮುತ್ತಿನ ಮಣಿ
ಹರಳು ಖಚಿತ ಕಾಂಚಿದಾಮ ।
ಅರಳುವಿಲ್ಲನು ಪೋಲ್ವ ಪಂಜರದೋಲೆಯ
ತರಳೆ ರತ್ನಾಜಿಗಳವಡಿಸಿ ॥೨೨೪॥

ಹೊನ್ನಬಳೆಯು ಹಸ್ತಕಡಗ ಕಾಲುಂಗುರ
ರನ್ನ ತೆತ್ತಿಸಿದ ಒಡ್ಯಾಣ ।
ಚೆನ್ನನ ಸರ ಹೊನ್ನ ಹೂವು ಮುತ್ತಿನ ಕೊಪ್ಪು
ಚೆನ್ನಾಗಿ ಕರ್ಣಕಿಕ್ಕಿದರು ॥೨೨೫॥

ಕಣ್ಣ ಕಪ್ಪನೆ ಹಚ್ಚಿ ಕಸ್ತೂರಿ ತಿಲಕವ
ಚೆನ್ನಾಗಿ ನೊಸಲಿಗಿಕ್ಕಿದರು ।
ಬಣ್ಣಿಸಿ ಬಾಚಿ ಬೈತಲೆ ತೆಗದು ರತ್ನಿ[ಗೆ]
ನುಣ್ಣೀಸಿ ತುರು[ಬನಿ]ಕ್ಕಿದರು ॥೨೨೬॥

ಉಟ್ಟ ಉಡುಗಿಯ ಮೇಲೆ ಕಟ್ಟಿದ ಸರಗೆಜ್ಜೆ
ತೊಟ್ಟು ಮೇಲಾದ ದುಕೂಲ ।
ಇಟ್ಟ ಮೂಗುತಿ ಮುತ್ತಿನ ಬೊಟ್ಟು ನೊಸಲೊಳು
ದಿಟ್ಟ ರತ್ನಾಜಿಗಳವಡಿಸಿ ॥೨೨೭॥

ಇಟ್ಟಳು ಚೆನ್ನಾಗಿ ನೊಸಲೊಳು ತಿಲಕವ
ಉಟ್ಟಳು ಪಟ್ಟಾವಳಿಯ ।
ತೊಟ್ಟಳು ಮುತ್ತಿನಾಭರಣವ ರತ್ನಾಜಿ
ನೆಟ್ಟನೆ ಶೃಂಗರಿಸಿದರು ॥೨೨೯॥

[ಉ]ಟ್ಟು ತೊಟ್ಟಿನ್ನು ಶೃಂಗರವಾಗಿ ನಿಂದಳು
ಕಟ್ಟಿದ ನಿಲುವುಗನ್ನಡಿಯ ।
ದಿಟ್ಟಿಸಿ ನೋಡಿ ನಸುನಗುತಲಿ ರತ್ನಮ್ಮ
ಕಟ್ಟಾಳು ರಾಮಗೆಣೆಯೆಂದು ॥೨೩೦॥

ಎನಲಾಗ ಮಾತಿಗೆ ಮನದೊಳು ನಸುನಗುತ
ಮಿನುಗುವ ರನ್ನದೊಡಿಗೆಗಳ ।
ಅನುಗೊಳಿಸಿದಳು ಅಂಗಜನ ವಾಹನದಂತೆ
ಅನುರಾಗ ಗಿಳಿ[ಯೊ ಎಂ]ಬಂತೆ ॥೨೩೧॥

ಕಲಿಸುವ ನುಡಿ ನಡೆ ಗಿಳಿಗೆ ಹಂಸೆ[ಗೆ]ಯೆಂದು
ಸಲಿಸುವ ಸಕ್ಕರೆ ಸವಿಯ ।
ಒಲಿಸುವಳನುರಾಗ ಚಿತ್ರದಿಂದಲಿ ಬೇಗ
ಕಲಹವಿಲ್ಲದೆ ನುಡಿಗಳಲಿ ॥೨೩೨॥

ನುಡಿದಳು ಮನದೊಳು ಇಷ್ಟದೈವಂಗಳ
ಪಡೆವೆನು ಮನದ ದುಷ್ಟವನು ।
ಸಡಗರ ಸಂಪತ್ತಿನಿಂದಲ್ಲಿ ಬಲಗೊಂಬೆ
ಒಡನೈದಿಗಳು ಸಂಗಾಯಿ ॥೨೩೩॥

ಚಿತ್ತಜಹರ ಜಯತು ತ್ರಿಯಂಬಕನೆ ಜಯತು
ಹಸ್ತಿಗಮನೆ ಕೊಂಡಾಡಿದಳು ।
ಇತ್ತಲಿ ನಮ್ಮಯ ಅರ್ತಿಯ ಪಾಲಿಸು
ಚಿತ್ತಜ ರಾಮನ ಬರಿಸು ॥೨೩೪॥

ಚೆನ್ನಿಗ ರಾಮನ ಚೆಂಡೆನ್ನ ಅರಮನೆಗೆ
ಭಿನ್ನವಿಲ್ಲದೆ ಬಂದು ಬೀಳೆ ।
ಉನ್ನತದಿಂದಲಿ ಊರ ಮುಂದಣ ಮಾರಿಗೆ
ಮುನ್ನೂರು ಕೋಣವ ಕಡಿವೆ ॥೨೩೫॥

ವೀರ ರಾಮಯ್ಯನಾಡುವ ಚೆಂಡು ಬಂದರೆ
ಊರ ಮುಂದಣ ಮಾರಿ ನಿನಗೆ ।
ನೂರಾರು ಕುರಿಯ ಕಡಿಸುವೆನು ಮನದಣಿ
ಹಾರುಗೋಳಿಯ ಬಿಡಿಸುವೆನು ॥೨೩೬॥

ಮೀನಕೇತನ ರೂಪ ರಾಮನಾಡುವ ಚೆಂಡು
ತಾನಾಗಿ ಬಂದು ಸಿಕ್ಕಿದರೆ ।
ಬೋನಗುರಿಯು ಹಾರಗೋಲಿಗಳಿಂದಲಿ
ನಾನು ದೇವತೆಯ ಪೂಜಿಸುವೆ ॥೨೩೭॥

ಹಗ್ಗದ ಹುರಿ ಬಾಯಬೀಗ ಬೆನ್ನಸಿಡಿ
ಹೆಗ್ಗಳ ಕುಲದ ದೇವತೆಗೆ ।
ಒಗ್ಗಿನ ಉಡಿಗೆ ಬೇವಿನುಡಿಗೆಯನುಟ್ಟು
ಕುಗ್ಗರಿದಲೆಗಳ ಹೊತ್ತು ॥೨೩೮॥

ಹರಿದು ಹಬ್ಬವ ಮಾಡುವೆ ಗುತ್ತಿಯಮ್ಮ[ಗೆ]
ಅರಿದಲೆಗಳ ಹೊತ್ತು ನಡೆವೆ ।
ಇರದೆ ಕಟ್ಟಿಸುವೆನು ಹೊಸ ಹೊನ್ನ ಕಳಸವ
ಧುರಗಲಿ ರಾಮ ಸಿಕ್ಕಿದರೆ ॥೨೩೯॥

ಕಾಣಿಕೆ ಇಕ್ಕುವೆ ಗುತ್ತಿಯಲ್ಲಮ್ಮಗೆ
ಕೋಣ ಐನೂರು ಕಡಿವೆನು ।
ಮಾಣಿಕದಾರುತಿ ಎತ್ತುವೆ ನಾನೀಗ
ಕ್ಷೋಣಿಪ ರಾಮ ಸಿಕ್ಕಿದರೆ ॥೨೪೦॥

ಹಿಡಿಹೊನ್ನಗಾಣಿಕೆಯನು ಗುತ್ತಿಯಮ್ಮಗೆ
ಹಿಡಿವೆನೊಪ್ಪತ್ತಿನೂಟವನು ।
[ಮು]ಡುಹಿನ ಕಂ[ಡ]ಮುಂದಲೆಯನು ಕೊಡುವೆನು
ಒಡೆಯ ಕಂ[ಪಲಿ] ಸೋಮ ನಿನಗೆ ॥೨೪೧॥

ಧರೆಯೊಳು ದೃಷ್ಟ ಮೂರುತಿ ತಿರುಮಲದೇವ
ಧುರಗಲಿ ರಾಮ ಸಿಕ್ಕಿದರೆ ।
ಸುರತದೊಳಗೆ ಒಂದು ಶಿಶು ಹುಟ್ಟಿದರೆ ನಾನು
ತಿರು[ಮು]ಡಿಯನು ಮಾಡಿಸುವೆನು ॥೨೪೨॥

ಸೋಮವಾರದ ದಿನ ಉಪವಾಸ ಇರುವೆನು
ಪ್ರೇಮದಿ ಹುಲಿಗೆರೆಯರಸ ।
ಸೋಮನೆ ರಾಮನಾಡುವ ಚೆಂಡು ಸಿಕ್ಕರೆ
ಹೇಮದ ಕಳಸವ ಕೊಡುವೆ ॥೨೪೩॥

ಹೊಳೆವ ಮನ್ಮಥ ರಾಮನಿಟ್ಟ ಮುತ್ತಿನ ಚೆಂಡು
ಬಳಲಿ ಬೀಳಲು ಅರಮನೆಗೆ ।
ತಳುಹದೆ ಉಪ್ಪರಿಗೆಯ ಮುಂದೆ ಬಿದ್ದರೆ
ಕಳಸವ ಕೊಡುವೆ ಪರ್ವತಕೆ ॥೨೪೪॥

ಅಕ್ಕನ ಮಗ ರಾಮ ಸಿಕ್ಕಿದನಾದರೆ
ಲೆಕ್ಕದುಪ್ಪರಿಗೆ ಕಟ್ಟಿಸುವೆ ।
ಲೆಕ್ಕವಿಲ್ಲದೆ ಕಪಿಲೆಯ ನಾನು ಬಿಡಿಸುವೆ
ಮುಕ್ಕಣ್ಣ ದೇವ ಪಾಲಿಪುದು ॥೨೪೫॥

ಕಂಪಿಲರಾಯನ ಮಗನಾಡುವ ಚೆಂಡು
ಸೊಂಪಿಲಿ ಎನಗೆ ಸೇರಿದರೆ ।
ಪಂಪಲದೇವಿಯ ಸಹಸಾದಿಯಾಳ್ಗೆಗೆ
ಸಂಪತ್ತಿನಿಂದ ಬಲಗೊಂಬೆ ॥೨೪೬॥

ವಸುಧೆಯೊಳಗೆ ರಾಮನಾಥನಾಡುವ ಚೆಂಡು
ಪಸರಿಸಿ ಬೀಳಲರಮನೆಗೆ ।
ಹೊಸಪೇಟೆಯ ಜಂಬುಲಿಂಗನಾಥಗೆ ನಾನು
ವಸವಂತವನಾಡುವೆನು ॥೨೪೭॥

ಬಲ್ಲಿದ ಕುಮಾರರಾಮನಾಡುವ ಚೆಂಡು
ನಿಲ್ಲದೆಯೆನಗೆ ಸೇರಿದರೆ ।
ಕಲ್ಯಾಣದ ಬಸವಣ್ಣಗೆ ಇಲ್ಲಿಂದ
ಬೆಲ್ಲದಾರತಿಯನೆತ್ತುವೆನು ॥೨೪೮॥

ದಿಟ್ಟ ಚೆನ್ನಿಗ ರಾಮನಿಟ್ಟ ಮುತ್ತಿನ ಚೆಂಡು
ಹಟ್ಟಿಯೊಳಗೆ ಬೀಳಲೊಡನೆ ।
ಸೃಷ್ಟಿಪಾಲಕ ಜಟ್ಟಂಗಿರಾಮೇಶಗೆ
ಪಟ್ಟವನಿಡುವೆ ನೊಸಲಿಗೆ ॥೨೪೯॥

ಅಂಗಜ ಸಮರೂಪ ರಾಮನಾಡುವ ಚೆಂಡು
ಹಿಂಗದೆ ಎನಗೆ ಸೇರಿದರೆ ।
ತಿಂಗಳ ಉಪವಾಸಯಿರುವೆ ಗಂಗಾಧರೆಗೆ
ಮಂಗಳಾರುತಿಯನೆತ್ತುವೆನು ॥೨೫೦॥

ಪಾರ್ವತಿ ರಮಣನೆ ಊರ್ವಿಗೆ ಒಡೆಯನೆ
ಗೀರ್ವಾಣ ಮುನಿಗಳೊಂದಿತನೆ ।
ಸರ್ವಜನರ ಸಲಹು ಸೂತ್ರಧಾರನೆ
ಗರ್ವ ರಾಮನ ಪಾಲಿಸೆನಗೆ ॥೨೫೧॥

ಅರವತ್ತು ಚಿನ್ನದ ಕಂಬಿಯ ಕಳುಹು
ಪರುವತ ಮಲ್ಲಯ್ಯ ನಿನಗೆ ।
ನೆರೆಗಲಿ ರಾಮನ ಚೆಂಡೆನ್ನ ಕೈಸೇರೆ
ವರ ಮಂಟಪಗಳ ಕಟ್ಟಿಸುವೆ ॥೨೫೨॥

ಬೆನ್ನಸಿಡಿಯು ಬಾಯಿ ಬೀಗ ಕಾಲಂದುಗೆ
ತನ್ನ ಹರಕೆ ಅಗ್ನಿಕುಂಡ ।
ಚೆನ್ನಿಗ ರಾಮನ ಚೆಂಡು ಕೊಡೋ ಸ್ವಾಮಿ
ಹೊನ್ನ ಕಳಸದ ಮೈಲಾರ ॥೨೫೩॥

ಎನ್ನಪ್ಪ ಅಜ್ಜನ ಮನೆಯ ದೇವರೆ ನಿಮ್ಮ
ಹೊನ್ನ ಪಾದಕೆ ಒಮ್ಮೆ ಶರಣು ।
ಚೆನ್ನಿಗ ರಾಮನ ಚೆಂಡುಯೆನಗೆ ಕೊಡು
ಎನ್ನಯ್ಯ ಭೈರವಲಿಂಗ ॥೨೫೪॥

ಕುಶಲ ರಾಮನಿಟ್ಟ ಮುತ್ತಿನ ಚೆಂಡು
ಪಸರಿಸಿ ಬೀಳಲರಮನೆಗೆ ।
ವಸುಧೆಯೊಳಗೆ ಹೊಸವೂರ ದೇವಗೆ ನಾನು
ಪಸರಿಸುವೆನು ನಡೆಮಡಿಯ ॥೨೫೫॥

ಸುಗುಣ ಚೆನ್ನಿಗ ರಾಮನಿಟ್ಟ ಮುತ್ತಿನ ಚೆಂಡು
ಬೆಗಡುಗೊಳ್ಳದೆ ಮುಂದೆ ಬೀಳೆ ।
ಚಿಗುಳಿ ತಂಬಿಟ್ಟು ಕಬ್ಬಿನ ಕೋಲು ಬೆಲ್ಲವ
ಮುಗಿಲುದ್ದ ಒಟ್ಟುವೆ ಬೆನವ ॥೨೫೬॥

ಬಂಡಿಗಟ್ಟಿಸಿ ಬಂದು ಕೆಂಡದೋಕುಳಿಯನು
ತಂಡತಂಡದಿ ಆಡಿಸುವೆನು ।
ದಿಂಡು ದಿಂಡಿಲಿ ಸೀರೆಯ ಗುಡಿಗಟ್ಟಿಸುವೆ
ಮಂಡೆಯ ಕುರುಳ ಕೊ[ಡು]ವೆನು ॥೨೫೭॥

ಚೆಲುವರ ಚೆನ್ನರಾಯಗೆ ಬೇಡಿಕೊಂಡಳು
ಲೋಲ ರಾಮನ ಚಂಡು ಬರಲು ।
ಓಲಗ ಶಾಲೆಯ ಪಾತ್ರ ವೈಭೋಗ[ದ]
ಬಾಲಕಿಯ ಕಳುಹವೆನು ॥೨೫೮॥

ಸಟೆಗೊಂದು ಹರಕೆಯ ಹೇಳುವೆ ರಾಯಗೆ
ದಿಟವೆಂದು ನಚ್ಚುವ ಹಾಗೆ ।
ಘಟಿಕಸ್ಥಾನ ದೇವರ ದೇವ ನೀ ಕೇಳೊ
ದಿ[ಟ] ಜಟ್ಟಂಗಿಯ ಲಿಂಗ ॥೨೫೯॥

ರಾಯ ಕಂಪಿಲ ನಿನ್ನ ಬೇಟೆಯೊಳಗೆ ಮೃಗ
ಹಾಯದ ಹಾಗೆ ಬೇಡಿಕೊಂಬೆ ।
ಕಾಯಜ ನೀ ಕೇಳು ಎನುತಲಿ ನುಡಿದಳು
ರಾಯನೊಪ್ಪಲಿ ಕಂಡೆ ಶಿವಗೆ ॥೨೬೦॥

ಆಡುತ ನುಡಿದಳು ಮಡದಿ ರತ್ನಾಜಿಯು
ಕೂಡೆ ಕಣ್ಮುಚ್ಚಿ ಬಿಸುಸುಯ್ದು ।
ಬೇಡಿಕೊಳ್ಳಲೆ ಸಂಗಿ ಕಾಡುವ ವಿರಹಕ್ಕೆ
ರೂಢಿಯೊಳಗೆ ಜಟ್ಟಂಗಿಯನು ॥೨೬೧॥

ಮರುಗ ಮಲ್ಲಿಗೆ ಜಾಜಿ ಸುರಹೊನ್ನೆ ಸಂಪಗೆ
ಇರುವಂತಿಗೆಯು ಮುಡಿ ದವನ ।
ಹರುಷದಿಂದರ್ಪಿಸಿ ತಾ ಬೇಡಿಕೊಂಡಳು
ಪರಿಪರಿ ಉಪಚಾರದಿಂದ ॥೨೬೨॥

ವನಿತೆ ಮುತ್ತಿನ ಕಾಲಮಣೆ ಮೇಲೆ ಕುಳಿತಳು
ಅನುಮಾನಿಸುತಲಿ ಇಂತೆಂದು ।
ಕೊನೆಯ ಮೂಗಿನ ಮೇಲೆ ಕರವಿಟ್ಟು ಡಽನೆ ಡೇಗಿ ।
ನೆನೆದಳು ಮಹದೇವತೆಯ ॥೨೬೩॥

ಕೊನೆವೆರಳಾಡಿಸಿ ರಾಮನಾಥನ ಬೇಗ
ನಿನಗೆ ಕೊಡುವೆನೀ ಕ್ಷಣದಿ ।
ಕನಕ ಮಾಣಿಕದ ಮುತ್ತಿನ ಚೆಂಡು ನಿನ್ನಯ
ಮನೆಗೆ ಬರುತ್ತೈತೆ ಕೇಳೆನುತ ॥೨೬೪॥

ಬಾಲೆಯ ನುಡಿಗೇಳಿ ಬಾಲಕತನದಲ್ಲಿ
ಪಾಲಿಸಿದಳು ಇಂಡೆಗಳನು ।
ಲೋಲ ಲೋಚನೆ ಪುಷ್ಪ ತೆಕ್ಕೊಂಡು ಬೇಗದಿ
ಅಲಯವನು ಹೊರವಂಟು ॥೨೬೫॥

ಆಡುತವೆ ಚೆಂಡು ಹಸುಮಕ್ಕಳೆಲ್ಲರು
ನೋಡುವ ಬನ್ನಿ ಆಶ್ಚರ್ಯ ।
ಗಾಡಿಕಾರ್ತಿಯು ಹಸಪದ ಸಂಗಿ ಸಹವಾಗಿ
ಕೂಡೆ ಉಪ್ಪರಿಗೆ ಏರಿದರು ॥೨೬೬॥

ನೋಡಬಹುದೆ ಚೆಂಡಾಡುವ ಲೂಟಿಯ
ಗಾಡಿಕಾರನ ರಾಮುಗನ ।
ನೋಡಿ ಸೈರಿಸಬಹುದೆಯೆಂದು ರತ್ನಾಜಿ
ರೂಢಿಯೊಳಗೆ ಚೆನ್ನಿಗನ ॥೨೬೭॥

ಎಳೆಯ ಚಂದ್ರಮನ ಪೋಲುವ ಜಾಣೆ ಬೇವಿನ
ತಳಿರೆಲೆ ಎಸೆವ ಪುರ್ಬಗಳೆ ।
ರಳೆಯ ಕ[ಣ್ಣುಗಳಂ]ತೆ ನಯನಂಗಳು
ಪೊಳೆವ ಮುಖ ದಂತಪಂಕ್ತಿಗಳ ॥೨೬೮॥

ಎಂದು ಕಂಗಳಲಿ ಸುಳೀವುತ ಸೋಂಕುತ ಬರೆ
ಬಂದು ರಾಮುಗನರಸಿದಳು ।
ಚಂದದಿಂದಲಿ ಝೇಂಕರಿಸುತ ಮೋಹದಿ
ನಿಂದು ಲಗ್ಗೆಯನೆ ನೋಡಿದಳು ॥೨೬೯॥

ಆರಾರು ಕೂಡಿ ಲಗ್ಗೆಯನಾಡುತಿಹರೆಂದು
ನಾರಿ ಕೇಳಿದಳು ರತ್ನಾಜಿ ।
ವೀರ ಕಾಟಣ್ಣ ಕುಮಾರರು ಸಹವಾಗಿ
ಸೇರಿ ಲಗ್ಗೆಯನಾಡುತಿಹರು ॥೨೭೦॥

ಧುರಧೀರ ರಾಮನ ನೋಡಬೇಕನುತಲಿ
ಗರುವೆ ಸಂಗಿಯನೊಡಗೊಂಡು ।
ಇರದೆ ಉಪ್ಪರಿಗೆಯ ಬಳಿಗೆ ಬಂದಳು ಬೇಗ
ದೊರೆ ರಾಮನ ನೋಡುವರೆ ॥೨೭೧॥

ಹತ್ತಿದಳೇಳು ನೆಲೆಯ ಉಪ್ಪರಿಗೆಯ
ಸುತ್ತ ನೋಡಿದಳು ಪಟ್ಟಣವ ।
ವಿಸ್ತರಿಸಿ ಕೇಳಿದಳು ಅರ್ತಿಯಿಂದಲಿ ನೋಡಿ
ಕೃತಯುಗದ ಚೆಂಡಿನಾಟ ॥೨೭೨॥

ಚಿನ್ನದ ಕಾಲಿನ ಮಣಿ ಮೇಲೆ ಕುಳಿತಾಗ
ಚೆನ್ನ ಸಂಗಿಯನು ಕೇಳಿದಳು ।
ಎನ್ನ ತನು ಸೂರೆಗೊಂಬ ರಾಮನ ತೋರೆ
ಹೊನ್ನ ಹೊಯಿಸುವೆ ಬಾಯ ತುಂಬ ॥೨೭೩॥

ಒಡೆಯನಾರು ಬಂಟನಾರೆಂ[ಬೆ] ಇವರೊಳು
ಅಡರಿವೆ ಸತ್ತಿಗೆ ಬಳಸಿ ।
ಕಡುಗಲಿಗಳು ಇವರಾರೆಂದು ರತ್ನಾಜಿ
ನುಡಿದಳು ಸಂಗಿಯ ಕೂಡ ॥೨೭೪॥

ಅಗಲಾದ ಸತ್ತಿಗೆ ನೆರಳಲ್ಲಿ ನಿಂದಿಹ
ಜಗುಲಿ ಮೆಯ್ಯವನಾರೆ ಸಂಗಿ ।
ತಗುಳು ಮುಗುಳು ಮಾಡಿ ಕಡಿವನು ರಣದೊಳು
ನೆಗಳೂರ ತಳವಾರ ಹಿರಿಯ ॥೨೭೫॥

ವಸವಂತ ಪಟ್ಟೆಯ ಸತ್ತಿಗೆ ನೆಳಲಲ್ಲಿ
ಹಸುರು ಕುಪ್ಪಸದವನಾರೆ ।
ದೆಸೆಗೆಡಿಸಿ ತುರುಕರ ಕಡಿವನು ಇವನೀಗ
ಹೆಸರುಳ್ಳ ಬಾದುರಖಾನ ॥೨೭೬॥

ಮರು ಭಾಷುವಿಡಿದಿರ್ದ ಕರ್ಪುರ ವೀಳ್ಯವ ಕೊಂಬ
ಗುಜ್ಜಲ ಮನ್ನೆಯನಾರೆ ।
ನಿರ್ಜರ ವೈರಿಯ ಡೊಳ್ಳು ಸುಲಿದಿಡುವನು
ಗುಜ್ಜಲ ವೀರ ಕಾಣಮ್ಮ ॥೨೭೭॥

ಮಾಣಿಕದುಟಿಯಳೆ ಕೇಳು ಜಾಣರಿಗೆಲ್ಲ
ಜಾಣ ಗಾರಿಯ ಮುಖನಾರೆ ।
ಪ್ರಾಣದಾಸೆಯ ಮಾಡುವ[ವ]ನಲ್ಲ ರಣದೊಳು
ಗಾಣಿಗರ ಚೆನ್ನನೆಂಬವನು ॥೨೭೮॥

ಹೊಂಬಣ್ಣ ಸತ್ತಿಗೆ ನೆಳಲೊಳು ನಿಂದಿಹ
ಗಂಭೀರ ಮನ್ನೆಯನಾರೆ ।
ಕೊಂಬಿನ ಧ್ವನಿಗೆ ಕಿರ್ರೆಂದರೆ ತಿರುಗುವ
ಕುಂಬಾರ ಕಲ್ಲ ಕಾಣಮ್ಮ ॥೨೭೯॥

ಚಿಕ್ಕ ಸತ್ತಿಗೆ [ಕಾಲ]ಲಿಕ್ಕಿದ ಕಡೆಯವು
ರಕ್ಕಸನಾವ ಮನ್ನೆಯನೆ ।
ಲಕ್ಷ ದಂಡಿನ ಮೇಲೆ ಕಡಿವನು ಸುರಿತಾಳ
[ಒ]ಕ್ಕಲಿಗರ ಮುದ್ದನಮ್ಮ ॥೨೮೦॥

ಗುಬ್ಬಿಯ ಸತ್ತಿಗೆ ಅಬ್ಬರಿಸುವ ಕಾಳೆ
ಗಬ್ಬಿ ಮನ್ನೆಯನಾರೆ ಸಂಗಿ ।
ಸಬ್ಬ ದಂಡಿನ ಮೇಲೆ ಒಬ್ಬನೆ ಕಡಿವನು
ಕಬ್ಬಿಲಿಗರ ನಾಗನಮ್ಮ ॥೨೮೧॥

ಎತ್ತದ ಸತ್ತಿಗೆ ನೆಳಲಲ್ಲಿ ನಿಂದಿಹ
ಉತ್ತಮನಾವ ಮನ್ನೆಯನೆ ।
ಕತ್ತಲೆಯೊಳು ಕಗ್ಗೊಲೆಬಿದ್ದು ಕಡಿವನು
ಗುತ್ತಿಯ ಚಿಕ್ಕ ಕಾಣಮ್ಮ ॥೨೮೨॥

ಉದ್ದನ ಸತ್ತಿಗೆ ನೆಳಲಲ್ಲಿ ನಿಂದಿಹ
ಮುದ್ದು ಮುಖದವನಾರೆ ಸಂಗಿ ।
ದಂಡೆತ್ತಿಬರುವ ರಾಯರ ಗಂಡನಿವ ಪೆನು
ಗೊಂಡೆಯ ಸೋಮ ಕಾಣಮ್ಮ ॥೨೮೩॥

ಎಡಬಲದಲಿ ಚೌರಿ ಢಾಳಸಿಕೊಂ[ಬುತ]
ಬೆಡಗಿಲಿ ನಿಂದಿಹನಾರೆ ।
ಕೊಡುವೆಡೆಯಲಿ ತ್ಯಾಗದಿ ಕರ್ಣನೆನಿಸುವ
ನಿಡುಗಲ್ಲ ಕಾಮ ನಿಸ್ಸೀಮ ॥೨೮೪॥

ಚಂದ್ರಗಾವಿಯ ಸತ್ತಿಗೆ ನೆಳಲಲ್ಲಿಹ
ಇಂದ್ರನಂತಿಹನಾರೆ ಸಂಗಿ ।
ಕಂದರ್ಪಸಮರೂಪ ಕದನಪ್ರಚಂಡನು
ಕುಂದುರುಪಿಯ ಗಂಗರಾಜ ॥೨೮೫॥

ಹೊಳೆವ ಮನ್ಮಥನಂತೆ ಕಳ[ಕ]ಳಿಸುತಲಿಪ್ಪ
ಕಳೆಯುಳ್ಳನಾವ ಮನ್ನೆಯನೆ ।
ಇಳೆಯೊಳು ಯುವರಾಜ ದುರ್ಗದ ರಾಯನು
ಕೆಳದಿ ಕೇಳಲೆ ರತ್ನಾಜಿ ॥೨೮೬॥

ಕೊಡೆನೆಂಬ ಲೋಭಿಯ ಗಂಡನೆಂದೆನಿಸುವ
ಗಡಿಯಂಕ ಭೀಮ ಇವನಾರೆ ।
ಪೊಡವಿಯೊಳಗೆ ಇವಗೆಣೆಗಾಣೆನು ಈಗ
ಗುಡಿಯಕೋಟೆಯ ದೇವನಮ್ಮ ॥೨೮೭॥

ಪ್ರಾಯದ ಮದದಾನೆಯೆಂದು ಪೊಗಳಿಸಿಕೊಂಬ
ನಾಯಕನಿವನಾರೆ ಸಂಗಿ ।
ಕಾಯಜಸಮರೂಪ ಕುರಗೋಡ ಸಂಗನು
ಪ್ರೀಯಳೆ ಕೇಳು ರತ್ನಾಜಿ ॥೨೮೮॥

ಜಗಜಗಿಸುವ ಸತ್ತಿಗೆ ನೆರಳಲ್ಲಿಹ
ನಗೆಮುಖದವನಾರೆ ಸಂಗಿ ।
ಜಗದೊಳು ಇವ ಚಿತ್ರಕಲ್ಲದುರ್ಗದ ವೀರ
ಅಗಣಿತ ಸಿಂಗ ಕಾಣಮ್ಮ ॥೨೮೯॥

ಪಚ್ಚದ ಕಾವಿನ ಸತ್ತಿಗೆ ನೆರಳಲ್ಲಿ
ಹೆಚ್ಚಳನಾವ ಮನ್ನೆಯನೆ ।
ಮೆಚ್ಚ ನುಂಗುವ ಲೋಭೀಯ ಗಂಡನಿವನೀಗ
ಉಚ್ಚಂಗಿದುರ್ಗದ ವೀರ ॥೨೯೦॥

ಎಸಳು ಸತ್ತಿಗೆ ಸುತ್ತ ಮುಸುದ ಗೋಂಡೆವು
ಹೆಸರುಳ್ಳನಾವ ಇವ ನೀರೆ ।
ಅಸಮ ದಳಕೆ ಕುಶಲವ ಶಿರೋಮಣಿ
ಅಸಗರ ಬಸವ ಕಾಣಮ್ಮ ॥೨೯೧॥

ಸತ್ತಿಗೆಯಗಲಕ್ಕೆ ಮುತ್ತಿನ ಗೊಂಡೇವು
ಎತ್ತಳ ನಾಡ ಮನ್ನೆಯನೆ ।
ಉತ್ತಮ ತೋರಗಲ್ಲಿನ ಜಯಸೆಟ್ಟಿಯು
ಧಾತ್ರಿ ಕೆಳೆಲೆ ರತ್ನಾಜಿ ॥೨೯೨॥

ತೇಗಿನ ಸತ್ತಿಗೆ ತೂಗುವ ಚಾಮರ
ಭೋಗದೊಳಾವ ಮನ್ನೆಯನೆ ।
ಸಾಗಿಸಿ ಸಮರಕೆ ನಡೆವ ರಾಯರಗಂಡ
ಮುಂಗಲಿ ತಾಂಬ್ರದೇವಯ್ಯ ॥೨೯೩॥

ಬೆಳ್ಳಿಯ ಕಾವಿನ ಸತ್ತಿಗೆ ನೆಳಲಲ್ಲಿ
ಬಲ್ಲಿದನಾವ ಮನ್ನೆಯನೆ ।
ಡಿಳ್ಳಿಯ ಖಾನರ ಗಂಡನೆಂದೆನಿಸುವ
ಕೊಳ್ಳಿಯ ನಾಗ ಕಾಣಮ್ಮ ॥೨೯೪॥

ಕೊಡಹಿದ ಸತ್ತಿಗೆ ನೆರಳಡಿ ನಿಂದಿಹ
ಕಡುವುಳ್ಳನಾವ ಮನ್ನೆಯನೆ ।
ಪೊಡವಿಯೊಳಗೆ ಓರುಗಲ್ಲ ರುದ್ರನ
ದೃಢವುಳ್ಳ ಮಂತ್ರಿ ಲಿಂಗಣ್ಣ ॥೨೯೫॥

ಶಕಲಾತಿ ಸತ್ತಿಗೆ ಮುಖಕೆ ಚಿಮ್ಮುರಿ ಸುತ್ತಿ
ಅಕಳಂಕ ಮನ್ನೆಯನಾರೆ ।
ಸಕಲ ವೈರಿಯೆದೆಯಂಕುಶವೆನಿಸುವ
ಮಕರಂಕ ಮಾದಿಗರ ಹಂಪ ॥೨೯೬॥

ನೀಟಾದ ಸತ್ತಿಗೆ ನೆರಳಸಿ ನಿಂದಿಹ
ಗಾಟಕನಾವ ಮನ್ನೆಯನೆ ।
ಕಾಟಣ್ಣನು ನಿಮ್ಮ ಹಿರಿಯ ಕುಮಾರನು
ಮೀಟ ಜವ್ವನೆ ಕೇಳು ರತ್ನಿ ॥೨೯೭॥

ಶಂಖದ ಸತ್ತಿಗೆ ನೆರಳಲ್ಲಿ ನಿಂದಿಹ
ಬಿಂಕದನಾವ ಮನ್ನೆಯನೆ ।
ಪಂಕಜಮುಖಿಯಳೆ ಕಂಪಿಲರಾಯಗೆ
[ಅಂಕದ] ಮಂತ್ರಿ ಬೈಚಪ್ಪ ॥೨೯೮॥

ಕೆಂಪಿನ ಸತ್ತಿಗೆ ನೆರಳಲ್ಲಿ ನಿಂದಿಹ
ಸಂಪುಳ್ಳನಾವ ಮನ್ನೆಯನೆ ।
ಕಂಪಿಲರಾಯಗೆ ಅಳಿಯ ರಾಮಗೆ ಇವ
ಇಂಪುಳ್ಳ ಭಾವ ಸಂಗಮನು ॥೨೯೯॥

ಜಲ್ಲಿಯ ಸತ್ತಿಗೆ ನೆರಳಡಿ ನಿಂದಿಹ
ನಲ್ಲನಾಯಕನಾರೆ ಸಂಗಿ ।
ಎಲ್ಲರ ದಳಕಿವ ಬಲ್ಲಿದ ಸಮರಂತ
ಕಲ್ಲುಕೋಟೆಯ ಚಿಕ್ಕನಮ್ಮ ॥೩೦೦॥

ಎದ್ದ ಸತ್ತಿಗೆ ಮೇಲೆ ಹದ್ದಿನ ಬಿರಿದಿಕ್ಕಿ
ರುದ್ರನಂತಿಹನಾರೆ ಸಂಗಿ ।
ಕದ್ದು ನೇಮಿಯ ದಂಡ ಕಾದಿ ಕೊಲ್ಲುವನಿವ
ಉದ್ದಗಿರಿಯ ಸಿದ್ದನಮ್ಮ ॥೩೦೧॥

ಚಪ್ಪನ್ನ ದೇಶದ ಮಾನ್ಯರೊಳೊಪ್ಪುವ
ಪುಷ್ಪಚಾಪನ ರೂಪನಾರೆ ।
ಎಪ್ಪತ್ತುಎರಡು ಮನ್ನೆಯರೊಳು ವೆಗ್ಗಳ
ಕೊಪ್ಪಳ ತಿಮ್ಮನಿವನಮ್ಮ ॥೩೦೨॥

ಎಪ್ಪತ್ತೆರಡು ಮನ್ನೆಯರ ಸುತ್ತಿಗೆ[ಗಳು]
ತಪ್ಪದೆ ಉರಿಯಲಿ ಸಂಗಿ ।
ಒಪ್ಪುವ ಚೆಲುವ ಚೆನ್ನಿಗರಾಮನ ತೋರು
ಎಪ್ಪತ್ತು ಉಡುಗೊರೆ ಕೊಡುವೆ ॥೩೦೩॥

ನಾಲ್ಕು ಸತ್ತಿಗೆ ಮೇಲೆ ಬೀಸುವ ಚೌರವು
ಲೊಕೈಕ ಮನ್ನೆಯನಾರೆ ।
ಲೋಕಮೋಹಿನಿ ಕೇಳು ಕಂಪಿಲರಾಯನ
ಸಾಕಾರ ಚೆನ್ನಿಗರಾಮ ॥೩೦೪॥

ಎಡಬಲದಲಿ ನಾಲ್ಕು ಮುತ್ತಿನ ಸತ್ತಿಗೆ
ನಡುವೆ ನಿಂದಿಹನಾರೆ ಸಂಗಿ ।
ಪೊಡವಿಯೊಳಗೆ ಅಷ್ಟದಿಕ್ಕ ರಾಯರ ಗಂಡ
ಕಡುಗಲಿ ಚೆನ್ನಿಗರಾಮ ॥೩೦೫॥

ರಾಮನ ತೋರು ತೋರೆಂದರೆ ಇಷ್ಟೊತ್ತು
ಸೀಮೆ ಮನ್ನೆಯರ ತೋರಿಸಿದೆ ।
ಕಾಮನ ಸಮರೂಪ ಕನ್ನಡಿ ಮುಖ ಚೆಲ್ವ
ಧಾಮನ ತೋರಿದೆ ಸಂಗಿ ॥೩೦೬॥

ರಾಮಯೆಂಬ ಮಾತ ಕೇಳಿ ಸಂತೋಷದಿ ನಿ
ಸ್ಸೀಮನ ದಿಟ್ಟಿಸಿ ನೋಡೆ ।
ಪ್ರೇಮದಿ ತಲ್ಲಣಗೊಂಡು ರತ್ನಾಜಿಯು
ಕಾಮನ ಬಾಧೆಲಿ ಹೊರಳಿ ॥೩೦೭॥

ದಿಟ್ಟಿಸಿದಳು ರಾಮನ ಕಂಡು ಮನದಲ್ಲಿ
ಹುಟ್ಟಿತು ತಾಪ ವೆಗ್ಗಳಿಸಿ ।
ಕಟ್ಟಾಳು ರಾಮನಂಗವ ಪೊಕ್ಕು ಸವಿನೆನೆಂದು
ದಿಟ್ಟೆ ನುಡಿದಳು ಸಂಗಿಯೊಡನೆ ॥೩೦೮॥

ಧರೆಯೊಳಗಾಡುವರು ಬರಿಮಾತು ಮಧನನ
ದಿಟದನುರುಸುಟ್ಟುದು ।
ಧುರಧೀರ ರಾಮ [ಸ್ತ್ರೀ]ಯರ ತನುದುರ್ಗಕ್ಕೆ
[ಇ]ರದೆ ಮುತ್ತಿಗೆ ಮಾಡಬಂದ ॥೩೦೯॥

ಹೊನ್ನ ಪುತ್ಥಳಿಯಂತೆ ಹೊಳೆವ ಕನ್ನಡಿಯಂತೆ
ಮನ್ಮಥ ಸಮರೂಪ ಬಂದ ।
ಕನ್ನಡ ಜಾಣ ರಾಮನ ಕಂಡು ಮನಸೋತು
ತನ್ನ ಮನದಣಿಯೆ ನೋಡಿದಳು ॥೩೧೦॥

ನೋಡಿದಾಕ್ಷಣದೊಳು ಮೂಡಿತು ವಿರಹವು
ಕೂಡೆ ತೋರಿತು ರತಿ ತಾಪ ।
ರೂಢಿಗೆ ಮನ್ಮಥ ತನ್ನೈದು ಬಾಣವ
ಹೂಡಿಬಟ್ಟನು ಅವಳೆದೆಗೆ ॥೩೧೧॥

ಮದನನ್ನೈದು ಬಾಣ ಎದೆಯೊಳು ತಾಕಲು
ಕದುಬಿ ಕಾತರದಿ ಕಂಗೆಟ್ಟು ।
ಹೃದಯ ತಲ್ಲಣಿಸಿ ಮೈಮರೆದು ಮೂರ್ಛೆಯಿಂದ
ಹೆದರಿ ಬಿದ್ದಳು ರತ್ನಾಜಿ ॥೩೧೨॥

ಬಿದ್ದ ಭರದಲಾಗ ಮುದ್ದು ಮುಖವು ಬಾಡಿ
ಹೊದ್ದಿ ಬಿದ್ದವು ಕುಂತಳವು ।
ನಿದ್ರೆಯಂದದಿ ಮೈಮರೆದು ವಿರಹದಲ್ಲಿ
ಹೊದ್ದಿ ಹೊರಳಿದಳು ರತ್ನಾಜಿ ॥೩೧೩॥

ಹೊರಳಿದ ತಾಪದೊಳುರಳಿದ ವಿರಹದಿ
ಸೊರಗಿದಳ್ ಮರೆದು ಮೂರ್ಛೆಯಲಿ ।
ಬಿರ್‍ರನೆ ಬಿಕ್ಕುತ ಮನದಲ್ಲಿ ಸುಯ್ಯುತ
ಇರುವ ರತ್ನಿಯ ಕಂಡು ಸಂಗಿ ॥೩೧೪॥

ಕೆಟ್ಟೇನೀ ಪಾಪಿಗೆ ಹುಟ್ಟಿತು ತಾಪವು
ಮುಟ್ಟಬಾರದು ಕಾಮಜ್ವರವು ।
ಉಟ್ಟ ಸೀರೆಯು ಬಯಲಾದುದನರಿಯದ
ಭ್ರಷ್ಟ ರತ್ನಿಯ ಕಂಡು ಸಂಗಿ ॥೩೧೫॥

ಇವಳು ಮೈವೊತ್ತಿನ ದೇಹವ ಕಾಣದೆ
ಬವಳಿಯಲಿಂದು ಬಿದ್ದಿರಲು ।
ತವಕದಿ ಕಂಪಿಲರಾಯ ಬಂದರೆ ಇವಳ
ಭವಗೆಡಿಸಿ ಕೊಲ್ಲದೆಬಿಡನು ॥೩೧೬॥

ಎಂದು ಸಂಗಿಯು ಕಂಗೆಟ್ಟಳು ಮನದೊಳು
ಒಂದು ಬುದ್ಧಿಯನೆಣಿಸಿದಳು ।
ಗಂಧ ಕಸ್ತೂರಿ ಕುಂಕುಮ ಕದಂಬವ
ತಂದು ಅಂಗಕೆ ಲೇಪಿಸಿದಳು ॥೩೧೭॥

ಪನ್ನೀರನು ತಂದು ಕಣ್ಣಿಗೆ ಒತ್ತಲು
ತನ್ನ ಮರವೆಯ ತಿಳಿದೆದ್ದು ।
ಚೆನ್ನೆ ಸಂಗಿಯ ಕೂಡ ನುಡಿದಳು ರತ್ನಾಜಿ
ಚೆನ್ನ ರಾಮನ ತೋರಿಸೆನಗೆ ॥೩೧೮॥

ಕನ್ನೆ ನಿನ್ನಯ ಬುದ್ಧಿ ಸಣ್ಣವರಂದದಿ
ಚೆನ್ನಿಗಗೆ ನೀ ಸೋಲಬಹುದೆ ।
ನಿನ್ನ ಇಚ್ಚೆಗೆ ಸಿಕ್ಕುವನಲ್ಲ ರಾಮಯ್ಯ
ಚೆನ್ನೆ ಸಂಗಿಯು ಪೇಳಿದಳು ॥೩೧೯॥

ಆಡೋ ಚೆಂಡಿಲ್ಲಿಗೆ ಓಡಿಬರುತಲಿದೆ
ಬೇಡ ಬರುತಾನೆ ರಾಮಯ್ಯ ।
ರೂಢಿಗೆ ಮನ್ಮಥ ನಿನ್ನ ಕೈಸೆರೆಯನು
ಮಾಡಿಕೊಳ್ಳೆಲೆ ರತ್ನಾಜಿ ॥೩೨೦॥

ಮಂದಗಮನೆ ಕೇಳು ಮನ್ಮಥರೂಪನು
ಬಂದಾನು ನಿನ್ನರಮನೆಗೆ ।
ಸಂದೇಹ ಬೇಡವೆಂದೆನುತಲಿ ರತ್ನಿಗೆ
ಎಂದು ಸಂಗಾಯಿ ಹೇಳಿದಳು ॥೩೨೧॥

ಗಾದೆಯ ಮಾತ ಸಾವಿರವನಾಡಿದರೇನು
ಬೋಧಿಸರೇನೆ ಬುದ್ಧಿಯನು ।
ನಿಧಾನವ ಕಂಡರೆ ಬಿಡುವವರುಂಟೆ
ಉದಾರ ರಾಮನ ತೋರಿಸೆನಗೆ ॥೩೨೨॥

ತೋರುವೆ ಎಳೆಂದು ನೀರೆ ಕೈವಿಡಿದೆತ್ತಿ
ಮೇರುವೆಯನು ಮೆಟ್ಟಿನಿಂದು ।
ಧಾರುಣಿಯೊಳು ಚೆಲ್ವರ ಗಂಡ ರಾಮನ
ತೋರಿದಳಾಗ ರತ್ನಿಗೆ ॥೩೨೩॥

ಕಪ್ಪೊತ್ತಿದ ಮೀಸೆ ಕಸ್ತೂರಿ ತಿಲಕವು
ಸುತ್ತಿದ ಚಿಮ್ಮುರಿ ಚುಂಗು ।
ಇತ್ತರದಲಿ ಮನ್ನೆಯರ ಉತ್ಸಾಹದಿಂದ
ಒಪ್ಪುತಿರ್ದನು ರಾಮನಾಥ ॥೩೨೪॥

ಇಷ್ಟ ದೃಷ್ಟಿಯ ತೆಗೆಯಳು ರಾಮನ ಮೇಲೆ
ಕೆಟ್ಟ ಮನವು ಸಂಚರಿಸಿ ।
ಬಿಟ್ಟಳು ಪಾ (ಪಿಯು) ಪುಣ್ಯದ ಮಾರ್ಗವ
ಹುಟ್ಟಿದ ತಾಪವೆಗ್ಗಳಿಸೆ ॥೩೨೫॥

ತವಕವು ಬೇಡ ನೀನೀಗಲೇ ರತ್ನಮ್ಮ
ಎವೆಯಾಡು ಹೊತ್ತಿನೊಳೀಗ ।
ಪವನದಿ ಬರುತಿದೆ ಪರಿಹರಿಸು ತಾಪವ
ಭುವನೇಶ ಕಂಪಿಲನರಸಿ ॥೩೨೬॥

ಎರಗಿದಳ್ಬೇಗ ರತ್ನಾಜಿಯು ಚರಣಕೆ
ಮರೆಯಾತಕೆ ಮಾಜಲಿನ್ನು ।
ಕರ ಪರಿಣಾಮದ ಲೇಸಿನ ಸುದ್ದಿ (ಯು)
ಹರಣ ಉಳಿಯದೆಲೆ ಸಂಗಿ ॥೩೨೭॥

ಅಹುದೇಳೆ ರತ್ನಮ್ಮ ಅಂಗಜನರಗಿಳಿಯೆ
ಮೋಹದ ಮಂತ್ರದೇವತೆಯೆ ।
ಬಹಳ ಬುದ್ಧಿಯಲಿರೆ ಬರುತಾನೆ ರಾಮಯ್ಯ
ಮಹದೇವರಾಯ ಪಾಲಿಪನು ॥೩೨೮॥

ಎಂದಿಗೆ ಬರುತಾನೆ ಎಂದಿಗೆ ಕಾಬೆನೆ
ಎಂದಿಗೆ ಅವನ ತಬ್ಬುವೆನು ।
ಎಂದಿಗೆನ್ನಯ ಬರ ಹರಿವುದು ಎಲೆ ಸಂಗಿ
ಎಂದು ನುಡಿದಳು ರತ್ನಾಜಿ ॥೩೨೯॥

ಚೆಂಡನಾಡುವ ರಾಮನ ಕಂಡಲು ರತ್ನಿ
ಮಂಡಲೇಶ್ವರ ಮನ್ಮಥನ ।
ಮಂಡೆಯ ತೂಗಿ ಮನದಲುಬ್ಬಿ ಹರುಷದಿ
ಕೊಂಡಾಡಿದಳು ರತ್ನಾಜಿ ॥೩೩೦॥

ಇಂದ್ರನೊ ಚಂದ್ರನೊ ಕಾಮರಾಯನೊ ಇವ
ಸೂರ್ಯನೊ ಲಾದ್ರಿಕ ವೀರನೊ।
ಇವರ ರೂಪಿಗೆ ಸರಿಯಿಲ್ಲೆಂದು ರತ್ನಾಜಿ
ತವಕದಿ ತಾ ಕೊಂಡಾಡಿದಳು ॥೩೩೧॥

ಇವನೀಗ ಚೆಂಡನಾಡುವ ಕಾಟಣ್ಣನು
ಜವದಂಡೆಯ ಕಟ್ಟಿದವನು ।
ಇವನೀಗ ಕಂಗಳ ಸಿರಿಯ ಚೆನ್ನಿಗ ರಾಮ
ಅವನೀಗ ಕಾಮಸನ್ನಿಭನು ॥೩೩೨॥

ಸೃಷ್ಟಿಯೊಳಗೆ ಪೊಸತಿವರ ಚೆಂಡಾಟವು
ಕಟ್ಟಾಳುಗಳ ಸಂಭ್ರಮವು ।
ಪಟ್ಟದಾನೆಯೆ ಕಾಟಣ್ಣ ಚಂಡನು [ತೂ]ರೊ
ಇಟ್ಟು ನೋಡುವೆನೊಂದು ಬಾರಿ ॥೩೩೩॥

ಇರಲಿತ್ತಲತ್ತ ಕಾಟಣ್ಣನವರ ಕೂಡ
ಇರದೆಲ್ಲರು ಚೆಂಡನಾಡೆ ।
ಕರೆದು ಕುಳ್ಳಿರಿಸಿ ಹೆಗ್ಗಡಿಗರನೊಡಗೊಂಡು
ಉರವಣಿಸುತ ರಾಮನಾಥ ॥೩೩೪॥

ತಡೆಯದೆ ವಾಯುದೇವರು ಬಂದು ಲಗ್ಗೆಯ
ನಿಡುವೆನೆಂದೆಂಬ ಸಂಭ್ರಮದಿ ।
ಬಿಡದೆ ಬೇಗದಿ ಚಂಡನಾಡುವ ಕಾಟಣ್ಣ
ಒಡನೆ ಬಿನ್ನಹವ ಮಾಡಿದನು ॥೩೩೫॥

ಮುದದಿಂದ ಬಂದ ಚೆಂಡನು ಒದಗಿದ ಮಂದಿ
ಗದಗಂಪಿಸಿ ನಡುಗುತಲಿ ।
ಕದಲಿ ಮುತ್ತಿನ ಚೆಂಡು ಲಗ್ಗೆಯ[ನೊಡೆವಾ]ಗ
ಹೃದಯಾರ್ಭಟದಿ ಕೂಗಿದರು ॥೩೩೬॥

ಲಗ್ಗೆಯೆಂ[ಬುದು] ಲೆಕ್ಕವಿಲ್ಲದ ಆಟವು
ಒಗ್ಗಿನೆಕ್ಕಟಿಗರ ಬರವು ।
ಕಿಗ್ಗಡೆಯಲಿ ಕಾಟಣ್ಣನಿಟ್ಟರೆ ಬಲು
ನುಗ್ಗಾಗಿಯಾಯಿತು ಚೆಂಡು ದಣಿದು ॥೩೩೭॥

ಚೆನ್ನಿಗ ರಾಮನು ಚೆಂಡ ಕೈಯೊಳಗಾಂತು
ಮನ್ನೆಯರುಗಳು ಸಹವಾಗಿ ।
ಉನ್ನತವಾದ ಲಗ್ಗೆಯ ಮೇಲೆ ತುಡುಕಲು
ಬಿನ್ನಣವಾಯಿತು ಪ್ರಜೆಯು ॥೩೩೮॥

ಹೂಡಿದ ಲಗ್ಗೆಯನೀಡಾಡಲಿಟ್ಟರೆ
ಓಡಿತು ದಿಕ್ಕುದಿಕ್ಕಿನಲಿ ।
ನೀಡಿರೋ ಚೆಂಡನು ಹಾಕಿರೊ ಎಂದರೆ
ಓಡಲಮ್ಮರು ತಮತಮಗೆ ॥೩೩೯॥

ಒಂದು ಬಾರಿಗೆ ಧರ್ಮದ ಚೆಂಡಿನಾಟವು
ಎಂದು ನಗುತಲಿದ್ದ ರಾಮ ।
ನೊಂದರೆ ನೋಯಲಾಟವನೊಡಗೊಡೆನೆಂದು
ಮುಂದಿಯ ಬೆನ್ನೊಳಗಾಂತು ॥೩೪೦॥

ಮದಕರಿಯೊಳಗೊಂದು ಸಿಂಹದ ಮರಿ ಬಂದು
ಒದಗಿ ಸರಸವಾಡುವಂತೆ ।
ಕದುಬುತ ರಾಮಯ್ಯ ಚೆಂಡಿಗೆ ಎರಗಲು
ಎದೆಗೆಟ್ಟು ಕಾಲಗೆಡುವರು ॥೩೪೧॥

ತಾಗಿದ ಬಿರಿಸಿಗೆ ಕೂಗಿತು ಪರಿವಾರ
ಹೋಗಿತು ಚೆಲ್ಲನೆ ಹರಿದು ।
ಹೋಗದಿರೆನುತ ರಾಮಯ್ಯ ಗರ್ಜಿಸಿದರೆ
ಆಗ ಲಗ್ಗೆಯನು ಹೂಡುವರು ॥೩೪೨॥

ರಾಮನಿಡಲು ಚೆಂಡು ಭೂಮಿಯಾಕಾಶಕ್ಕೆ
ತಾಮಸವಿಲ್ಲದೆ ನೆಗೆಯೆ ।
ಪ್ರೇಮದಿ ಕಾಟಣ್ಣ ಕೊಳ್ಳಿಯ ನಾಗಣ್ಣ
ರಾಮನ ಭಾವ ಸಂಗಮನು ॥೩೪೩॥

ಭಾಗ ಸಂಗಮ ದೇವನಾಂತ ಮುತ್ತಿನ ಚೆಂಡ
ದೇವಿಸೆಟ್ಟಿಯ ಲಿಂಗನಾಂತ ।
ದೇವಿಸೆಟ್ಟಿಯ ಲಿಂಗನಾಂತ ಮುತ್ತಿನ ಚಂಡ
ರಾಮನ ಕೈಲಿ ತಾ ಕೊಟ್ಟ ॥೩೪೪॥

ಮುತ್ತಿನ ಚಂಡನು ಧುರಗಲಿ ತೆಕ್ಕೊಂಡು
ಒತ್ತಿ ಬಲ್ಲಿದ ರಾಮನಿಡಲು ।
ಚಿತ್ತಜ ರಾಮನಿಟ್ಟರೆ ಆಗ ಮುಂದಣ
ಹಟ್ಟಿಯೊಳಗೆ ಪುಟನೆಗೆಯೆ ॥೩೪೫॥

ಹಾರಿತು ಮಿಗೆ ಚೆಂಡು ಹತ್ತೆಂಟು ಮಾರನು
ಮೀರಿತು ಪುಟಹಾರಿ ನೆಗೆದು ।
ತೋರಿತು ನೋಟದ ಕಣ್ಣಿಗೆ ಹಬ್ಬವ
ಏರಿತು ರತ್ನಿಗೆ ತಾಪ ॥೩೪೬॥

ಕುಟಿಲ[ಲ್ಲದ]ವರೆಲ್ಲ ಜವ ಕರುಣದಿ ನಿಂದು
ದಿಟ ರತ್ನಿಯ ಹುಟ್ಟಿಯೊಳಗೆ ।
ಪುಟಿದು ನೆಗದು ಬೀಳ್ವದು ಕಂಡು ರಾಮಯ್ಯ
ಕಟಕಟ ಶಿವಶಿವಯೆಂದ ॥೩೪೭॥

ಪುಟಹಾರಿ ನೆಲಕೆ ಬೀಳ್ವದು ಕಂಡು ರಾಮಯ್ಯ
ಕಟಕಟ ಶಿವಶಿವಯೆಂದು ।
ಕುಟಿಲಗಾರತಿ ರತುನಿಯ ಮಲಗಿ ದಾಂಟಿತೆ
ದಿಟವೆ ಕಾಟಣ್ಣ ನೀ ನೋಡು ॥೩೪೮॥

ಎಂದ ಮಾತಿಗೆ ಕಾಟಣ್ಣನು ನೋಡುತ
ನೊಂದುಕೊಂಡನು ಮನದೊಳಗೆ ।
ಇಂದು ಎಮ್ಮನಗೆ ಕಂಟಕ ಬಂತುಯೆನುತಲಿ
ಎಂದ ಕಾಟಣ್ಣ ಮನದೊಳಗೆ ॥೩೪೯॥

ತಪ್ಪದೆ ಹೋಗಿ ಬಿದ್ದಿತು ಮಾರಿ ಬಂದಿತು
ದೊಪ್ಪನೆ ರತ್ನಿಯಂಗಳಕೆ ।
ಅಪ್ಪನಿಲ್ಲದ ಅರಮನೆಯೊಳೆ ಚಿಕ್ಕಮ್ಮ
ಒಪ್ಪದಿಂದೊಬ್ಬಳೆ ಇಹಳು ॥೩೫೦॥

ಎಳೆನಡು ಬಳುಕುತ ಮುಡಿ ಬೆನ್ನೊ[ಳೊಲೆ]ವುತ
ಇಳಿದಳುಪ್ಪರಿಗೆ ಬೇಗದಲಿ ।
ಕಳಕಳಿಸುವ ಕಾಂತಿ ಮಿಗೆ ಹಚ್ಚಿ ರತ್ನಮ್ಮ
ಘಳಿಲನೆ ಬಂದಳರ್ತಿಯಲಿ ॥೩೫೧॥

ಮಂದರಧರನ ಭಜಿಸಿದ ಕಾರಣದಿಂದ
ಬಂದಿತು ಇಲ್ಲಿಗೆ ಚೆಂಡು ।
ಮುಂದೆ ಕಾಮನ ಕಾರ್ಯ ಕೈವಶವಾಯಿತು
ಎಂದು ನುಡಿದಳು ರತ್ನಾಜಿ ॥೩೫೨॥

ಅಂಗಳದೊಳು ಬೆಳುದಿಂಗಳ ಮರಿಯಂತೆ
ಶೃಂಗಾರದಲಿ ಬಿದ್ದ ಚೆಂಡ ।
ಅಂಗನೆ ರತ್ನಮ್ಮ ತಕ್ಕೊಂಡು ಬೇಗದಿ
ಕಂಗಳು ದಣಿಯೆ ನೋಡಿದಳು ॥೩೫೩॥

ಬಿದ್ದ ಚಂಡನು ಎತ್ತಿಕೊಂಡಳು ಬೇಗದಿ
ಎದ್ದು ನೋಡಿದಳು ಹರುಷದಲಿ ।
ಮುದ್ದುಮುಖದ ರಾಮ ಬಂದನೆಂದೆನುತಲಿ
ಹೊದ್ದಿ ಬಾಗಿಲವ ಸಾರಿದಳು ॥೩೫೪॥

ತನ್ನೊಳು ಮುನಿದ ಮಾನಿನಿಯ ತೈಸೆಂದು
ನಿನ್ನ ಕಳುಹಿದನೆಲೆ ಚೆಂಡೆ ।
ಭಿನ್ನವಿಲ್ಲದೆ ಆ ಚೆಂಡನು ರತ್ನಾಜಿ
ಉನ್ನಂತ ಹರುಷದೊಳಪ್ಪಿ ॥೩೫೫॥

ಚೆಂಡೆತ್ತಿಕೊಂಡು ಮುಂಡಾಡಿದಳರ್ತಿಲಿ
ಕೊಂಡಾಡಿ ಕಣ್ಣಿಗೊತ್ತಿದಳು ।
ದುಂಡುಗೈಯುಗುರಿಂದ ಹಣೆಗೊತ್ತಿಕೊಳುತಲಿ
ಕೊಂಡು ಹೋದಳು ಅರಮನೆಗೆ ॥೩೫೬॥

ಎದೆಗೊತ್ತಿ ತನ್ನಯ ಗುರುಕುಚ ಯುಗಳಕ್ಕೆ
ಕದನ ಪ್ರಪಂಡನೆ ನೀನು ।
ಚದುರ ರಾಮನ ಸರಿಯೆನುತಲಿ ರತ್ನಾಜಿ
ಮದನಗೃಹದೊಳು ಪೊಕ್ಕು ॥೩೫೭॥

ಹೊಕ್ಕಳು ತನ್ನರಮನೆಯನ್ನು ರತ್ನಮ್ಮ
ದಕ್ಕಿದ ರಾಮನೆಂದೆನುತ ।
ಹೊಕ್ಕಳು ಹರುಷಾಶ್ರು ಕಂಗಳೋಲ್ಯಾಡುತ
ಇಕ್ಕಿದಳ್ಮಂಚದ ಮೇಲೆ ॥೩೫೮॥

ಮಣಿಮಂಚ ಸೆಳೆಮಂಚ ತೂಗುಮಂಚಗಳೊಳು
ಉಲಿವ ಶಕುನಿಮಂಚಗಳೊಳು ।
ಚೆಲುವ ಚಿನ್ನದ ಕಾಲಿನ ಮಂಚದ ಮೇಲೆ
ಲಲನೆ ಚೆಂಡನು ಮಡಗಿದಳು ॥೩೫೯॥

ಪನ್ನೀರ ಚೆಳೆಯ ಹೋಯಿದಳು ಆ ಚೆಂಡಿಗೆ
ಚೆನ್ನ ರಾಮನು ನೀನುಯೆನುತ ।
ನಿನಿಚ್ಚೆಗೆ ರಾಮ ಬಾಹನುಯೆನುತಲಿ
ಕನ್ನೆ ಮನದೊಳು ಹಿಗ್ಗಿದಳು ॥೩೬೦॥

ಕರೆದಳೇಕಾಂತ್ಕೆ ಸಂಗಾಯಿ ನೀ ನೋಡು
ಇರದೆ ತೋರಿದಳು ನಸುನಗುತ ।
ಅರಸಿ ರತ್ನಮ್ಮ ಸಂಗಾಯಿಗೆ ಹೇಳುತ
ಭರದಿಂದ ಬಂದು ಚಾವಡಿಗೆ ॥೩೬೧॥

ಆರು ಬಾರದ ಹಾಗೆ ಕವಾಟವ ಹೂಡಿ
ನಾರಿಯೇಕಾಂತ [ದೊಳಾಗ] ।
[ಸಾ]ರಿ ರತ್ನಾಜಿ ಸಂಗಾಯಿಗೆ ನುಡಿದಳು
ತೋರಿಸು ಚಿತ್ರಮಂಟಪವ ॥೩೬೨॥

ಚಿತ್ರಶಾಲೆಗೆ ಹೋಗಿ ರಾಮನ ಪೋಲುವ
ಚಿತ್ರವುಂಟೆಂದರಸಿದಳು ।
ಮತ್ತಲ್ಲಿ ಕಾಣದೆ ಮನನೊಂದು ರತ್ನಾಜಿ
ಇತ್ತ ಬೇಗನೆ ತಿರುಗಿದಳು ॥೩೬೩॥

ಪೆಟ್ಟಿ[ಗೆ] ಪೆಟ್ಟಿಗೆ ತುಂಬಿದ ಬರಹದ
ಪಟ್ಟೆ ದೇವಾಂಗ ಹಚ್ಚಡವ ।
ಮುಟ್ಟಿ ತೆಗೆದು ನೋಡೆ ರಾಮನಾಥನ ರೂಪು
ನೆಟ್ಟನೆ ಅದರೊಳಗಿರಲು ॥೩೬೪॥

ಬೊಂಬೆಯ ಹಚ್ಚಡದೊಳು ಗಂಡು ರೂಪಿರೆ
ಹಂಬಲಿಸುತ ಕಳವಳೀಸಿ ।
ಬೆಂಬಳಿಯಲಿ ಮಲಗಿಸಿ ತೋಳು ತೊಡೆಯೊಳು
ಚುಂಬಿಸು ರಾಮಯೆಂದೆನುತ ॥೩೬೫॥

ಮುನಿದು ಮುದ್ದಿಪಳೊಮ್ಮೆ ಹೊಯಿವಳು ಬಯಿವಳು
ಮನಹರುಷದಲಿ ಮುಂಡಾಡಿ ।
ಸನುಮತದಿಂದಲಿ ಗುಟುಕು ತಾಂಬುಲವಿಕ್ಕಿ
ವನಿತೆ ಕೋಟಲೆಗೊಳುತಿಹಳು ॥೩೬೬॥

ಹಡಪದ ಸಂಗಿಗೆ ಉಡಗೊಟ್ಟು ತೊಡಗೊಟ್ಟು
ಒಡನೆ ಪಂಕ್ತಿಯೊಳು ಉಂಡಾಗ ।
ತಡೆಯದೆ ಬಳಿನೀರನೆರೆದಳು ಅವಳಿಗೆ
ನುಡಿ ತಪ್ಪು ಕಾಯಿ ಕೊಲ್ಲೆಂದು ॥೩೬೭॥

ಹೇಳಬಾರ[ದು] [ನ]ನ್ನ ಭಾವವ [ನೀ] ಬಲ್ಲೆ
ಭಾಳಾಕ್ಷನ ಪಾದದಾಣೆ ।
ತಾಳಲಾರನೆ ಚೆಲ್ವ ರಾಮನ ಬಯಸಿನ್ನು
ಕೋಳು ಹೋದುದು (ಇಂ)ದಿಗೆನುತ ॥೩೬೮॥

ಎಂದು ಹೇಳುತ ರಾಮುಗ ರಾಮುಗನೆಂದು
ನೊಂದು ಬಿದ್ದಳು ಮೈಮರೆದು ।
ಕಂದರ್ಪ ಎಸೆದ ಸರಳು ತಾಕಿ ರಾಮ[ನು]
ಇಂದೆನ್ನ ನೆರೆ[ದನು] ಎನುತ ॥೩೬೯॥

ಈ ಪರಿಯಲಿ ರಾಮನ ನೆನೆದು ರತ್ನಾಜಿ
ತಾಪದಿ ಬಿದ್ದು ಮೈಮರೆದು ।
ರೂಪಳಿದು ಮೆಲ್ಲಣೆ ಮೂರ್ಛೆಯ ತಿಳಿದೆದ್ದು
ಕಾಪಾಲಿ ನೀ ಗತಿಯೆಂದು ॥೩೭೦॥

ಇತ್ತ ಕಾಟಣ್ಣ ರಾಮಯ್ಯ ನೆಕ್ಕಟಿಗರು
ಮತ್ತೆ ಮನದೊಳತಿ ನೊಂದು ।
ಎತ್ತಣ ವಿಧಿಯೆ ಜಟ್ಟಂಗಿ ಲಿಂಗವೆ [ಚೆಂಡು]
ಅತ್ತ ರತ್ನಿಗೆ ಸೇರಿತ್ತೈಸೆ ॥೩೭೧॥

ಗಾಢವಾಯಿತು ನಮ್ಮ ಆಟವು ಕೆಟ್ಟಿತು
ಕೇಡು ಬಂದಿತು ಚೆಂಡು ಹೋಗಿ ।
ಕಾಡುತಲಿದೆ ಶನಿ ಹರಿಯಮ್ಮನಾಗಳೆ
ಬೇಡವೆಂದಳು ಕಾಟಣ್ಣ ॥೩೭೨॥

ಚೆಂಡು ಹೋಯಿತು ಚೆಂಡಿನಾಟವು ಕೆಟ್ಟಿತು
ಚೆಂಡು ತಾರೆಲೊ ಕಾಟಣ್ಣ ।
ಚೆಂಡು ಕೇಳ್ಹೋದರೇನೆಂಬಳೊ ಚಿಕ್ಕಮ್ಮ
ಅಂಡಲೆವಳೊ ಮನದೊಳಗೆ ॥೩೭೩॥

ಅಪ್ಪನಿಲ್ಲದ ಅರಮನೆಯೊಳು ಪೋಗಲು
ತಪ್ಪು ತಾಕುಗಳು ಬರುವವು ।
ತಪ್ಪದು ನಮಗಿನ್ನು ಅಪಕೀರ್ತಿ ಬಾಹೂದು
ತಪ್ಪುವುದಿಲ್ಲ ರಾಮಯ್ಯ ॥೩೭೪॥

ಹಡೆದ ತಾಯ ಮಾತ ಮೀರಿ ತಂದೆಯೊ ರಾಮ
ತುಡುಕಿ ಬಿದ್ದಿತು ಅರಮನೆಗೆ ।
ಕಡೆಗಾಲವಾಯಿತೊ ನಮ್ಮ ಚೆಂಡಾಟವು
ನುಡಿದನು ಕಾಟಣ್ಣ ಬೇಗ ॥೩೭೫॥

ಒಂಟಿ ಸೀನನು ಸೀತರೆ ತಂದೆ ಚೆಂಡನು
ಕಂಟಕ ಬಂದಿತೆಲ್ಲರಿಗೆ ।
ಮಂಟೆಯಾಯಿತು ನಮ್ಮ ಚೆಂಡಿನ ಆಟವು
ಉಂಟಾಯಿತು ಅವಶಕುನ ॥೩೭೬॥

ತಾಯಿ ಹೇಳಿದ ಮಾತು ತಲೆಯ ತಾಕಿತು ರಾಮ
ಮಾಯದ ವಿಧಿ ಬಂತು ನಮಗೆ ।
ಆಯುಧವನು ಹಾಯ್ದು ಸಾವೆನೆನುತ ಕಾಟ
ರಾಯ ದುಃಖವನು ಮಾಡಿದನು ॥೩೭೭॥

ಆಟ ಕೆಟ್ಟಿತು ಅರ್ತಿ ಕೆಟ್ಟಿತೊ ಕಾಟಣ್ಣ
ನೆಟ್ಟನೆ ಚೆಂಡ ತರಹೇಳೊ ।
ಮೀಟು ಜವ್ವನೆ ರತ್ನಿ ಎನಗೆ ಕೊಡಳು ರಾಮ
ಆಟ ಕೆಟ್ಟರೆ ಅಷ್ಟೆ ಆಯ್ತು ॥೩೭೮॥

ನಿಂದು ಅಂಗಳದಲ್ಲಿ ಚೆಂಡ ನೀ ಬೇಡಣ್ಣ
ಕಂದಿದ ಮುಖ ದುಗುಡದಲಿ ।
ಎಂದ ಮಾತನು ಕೇಳಿ ಮೆಲ್ಲನೆ ಕಾಟಣ್ಣ
ಬಂದನು ಚೆಂಡ ಬೇಡುವರೆ ॥೩೭೯॥

ಗಮ್ಮನೆ ಬಂದು ಹೊಕ್ಕನು ಅರಮನೆಯನು
ನೆಮ್ಮಿದ ಸಂಗಿಯ ಕಂಡ ।
ಚಿಮ್ಮಿದ ಹಾಗೆ ಚೆಂಡಿಲ್ಲಿಗೆ ಬಂದಿದೆ
ಗಮ್ಮನೆ ಕೊಡು ಮಾಜಬೇಡ ॥೩೮೦॥

ನಿಮ್ಮಾಣೆ ನಮ್ಮ ಕಣ್ಣಿಗೆ ಕಾಣಲಿಲ್ಲವು
ಅಮ್ಮಾಜಿ ಕೇಳೋ ಕಾಟಣ್ಣ ।
ತಮ್ಮ ಮುತ್ತಿನ ಚೆಂಡು ನಿಮ್ಮಲ್ಲಿದ್ದೀತೆಂದು
ನಿಮ್ಮ ಕುಮಾರ ಬಂದಹನೆ ॥೩೮೧॥

ಆಡ ಬಂದರೆ ನಿಮ್ಮೊಳು ನಮ್ಮ ಸಖಿಯರು
ನೋಡಿವನೆದೆಯ ದಲ್ಲಣವ ।
ಬೇಡಬಂದೆಲವೊ ನಿಮ್ಮಯ ಚಂಡು
ಗೋಡೆಯ ನೆಗದು ಬಂತೇನೊ ॥೩೮೨॥

ಯಾಕೆ ಬಂದೆಲೊ ಕಾಟ ಅರಸಿಲ್ಲದರಮನೆಗೆ
ಜೋಕೆಯು ನಿನಗಿದು ಗುಣವೆ ।
ನೂಕೆಂದು ನೂಕಿಸೆ ಮುಖ ಬಿನ್ನನಾದರೆ
ಆಕೆಯು ಮಗನ ತಬ್ಬಿದಳು ॥೩೮೩॥

ಚೆಂಡು ಬಿದ್ದಿತು ರಾಮನಾಥನಿಡಲು ಬೇಗ
ಹಿಂಡು ಮಾನ್ಯರ ಕಣ್ಣ ಮುಂದೆ ।
ಕೊಂಡು ಹೋಗುವೆನೆಂದು ಬಂದೆನು ಚಿಕ್ಕಮ್ಮ
ಮಂಡಲಪತಿ ಕಳುಹಿದನು ॥೩೮೪॥

ದೊರೆ ಕಾಟನೊಡನೆ ರತ್ನಾಜಿಯು ನುಡಿದಳು
ಅರಗಿಳಿ ಮಾತಾಡುವಂತೆ ।
ಸರಸಿಜ ರವಿಯ ಕಾಣುತ ಬಾಯ ತೆರೆವಂತೆ
ಸ್ವರ ಕೋಗಿಲೆ ಧ್ವನಿಯಂತೆ ॥೩೮೫॥

ಕಂಗಳಸಿರಿ ರಾಮ ಇಟ್ಟ ಮುತ್ತಿನ ಚೆಂಡು
ಅಂಗಳದೊಳು ಬೀಳಲಿಲ್ಲ ।
ಶೃಂಗಾರತೋಟವ ನೋಡುವೆನೆನುತಲಿ
ಅಂಗನೆ ಹೊರ ಹೊಂಟಳಾಗ ॥೩೮೬॥

ಹಿತ್ತಲದೊಳು ನೀ ಹುಡುಕಲೆ ಸಂಗಾಯಿ
ಮತ್ತೆ ಅರಸಿಕೊಡು ಚೆಂಡ ।
ಮತ್ತವಳೊಡನೆ ಕಾಟಣ್ಣನು ತಾ ಹೋಗಿ
ಹಿತ್ತಲು ಶೋಧಿಸಿ ನೋಡಿ ॥೩೮೭॥

ಮಡಿವಾಳ ಮಲ್ಲಿಗೆ ಕಳೆಗೊಂಬ ಕಸ್ತೂರಿ
ಎಡೆಯಡೆಯಲ್ಲಿ ಕುಂಕುಮವು ।
ಕಡು ಪುಷ್ಪವೆನಿಪ ಕೇದಗೆಯ ಬನದೊಳಿನ್ನು
ಬಿಡದೆ ನೋಡಿದನು ಕಾಟಣ್ಣ ॥೩೮೮॥

ಬೊಂಬೆಯ ಚಾವಡಿ ಸಂಭ್ರಮದುಯ್ಯಲೆ
ತುಂಬಿದ ಚಿತ್ರ ಮಂಟಪದಿ ।
ಕುಂಭಕುಚದ ಸಂಗಿ ಸಹವಾಗಿ ದಾಳಿಂಬ
ಇಂಬುಳ್ಳ ಬನದೊಳಗರಸಿ ॥೩೮೯॥

ಇಕ್ಷಿವಿನೆಡೆಗೆ ಕಮಲಾಕ್ಷಿ ಎಡೆಗೊಂಡು ರು
ದ್ರಾಕ್ಷಿಯ ಮಂಟಪದೊಳಗೆ ।
ಪಕ್ಷಿವಾಸದ ಗಿಡದೊಳಗರಸಿ ಕಾಣದೆ ಚೆಂಡ
ಆಕ್ಷಣ ತಿರುಗಿದ ಕಾಟ ॥೩೯೦॥

ಬೆತ್ತದ ಸಾಲು ಬಿದಿರಸಾಲು ಸಾಲೆಯು
ಮತ್ತೆ ಮರುಗದ ಸಾಲೆಯೊಳಗೆ ।
ಅರ್ತಿಲಿ ಓಲೈಸಿದ ಸಾಲೆಯೊಳ ಹೊಕ್ಕು
ಚಿತ್ತವಿಡಿದರಸಿದ ಚೆಂಡ ॥೩೯೧॥

ಹಲಸು ನೀರಲ ಮಾವು ಖರ್ಜುರ ಭವನ್ನ
ಒಲಿದಾಡುವ ಸಂಪಗೆಯ ।
ನಲವಿಂದ ಕೇದಗೆ ಬನದೊಳು ಕಾಣದೆ
ಗೆಲವಿಂದ ಬಳಲಿದ ಕಾಟ ॥೩೯೨॥

ಸರಸವು ಬೇಡ ಮಕ್ಕಳ ಕೂಡ ಚಿಕ್ಕಮ್ಮ
ತರಿಸಿಕೊಡೆಂದನು ಚೆಂಡ ।
ಹಿರಿಯರಿಗಿದು ಗುಣವಲ್ಲೆಂದು ಪೇಳಲು
ತರುಣಿ ನುಡಿದಳೊಂದು ಮಾತ ॥೩೯೩॥

ಹುಟ್ಟಿದ ಹದಿನಾರು ವರುಷವು ಮೊದಲಾಗಿ
ದಿಟ್ಟ ರಾಮನ ಕಂಡುದಿಲ್ಲ ।
ನೆಟ್ಟನೆ ಆತನ ಬರಹೇಳು ಹೋಗಯ್ಯ
ಕೊಟ್ಟು ಕಳುಹುವೆನೀಕ್ಷಣದಿ ॥೩೯೪॥

ಚಂಡದೆ ಹುಸಿಯಲ್ಲ ರಾಮನ ಬರಹೇಳು
ಕಂಡವಳಲ್ಲ ನಾನೆಂದು ।
ಕೊಂಡು ಹೋಹ[ಲಿ] ಕಾಟ ಕಳುಹಿಸಿಕೊಂಡು [ಇಂದು]
ಗಂಡುಗಲಿಯು ರಾಮುಗನ ॥೩೯೫॥

ಇಮ್ಮಡಿ ರಾಮನ ಸರಿಯಲ್ಲವೇ ನಾನು
ನಿಮ್ಮ ಹಿರಿಯ ಕುಮಾರ ।
ತಮ್ಮ ರಾಮನು ಬರಲರಿಯ ಮುತ್ತಿನ ಚೆಂಡ
ಗುಮ್ಮನೆ ಕೊಡಿಸು ಚಿಕ್ಕಮ್ಮ ॥೩೯೬॥

ಆರ ಚೆಂಡನು ನಾನಾರಿಗೆ ಕೊಡಲಯ್ಯ
ಸೇರದು ದಾಯಾದಿ ಜಲ್ಮ ।
ತೋರ ಮುತ್ತಿನ ಚೆಂಡ ನಿನಗಿತ್ತೆನಾದರೆ
ಹೋರಾಟ ಬಹುದಿಬ್ಬರಿಗೆ ॥೩೯೭॥

ರಾಮಗಾಯಿತು ನಾಯಕತನ ಇಲ್ಲಿಗೆ
ಪ್ರೇಮದಿ ಬಂದು ಬೇಡಿದರೆ ।
ಕಾಮನರೂಪಿನ ರಾಮಗೀವೆನುಯೆಂದು
ಕೋಮಲೆ ರತ್ನಿಯಾದಳು ॥೩೯೮॥

ಆದರೆ ರಾಮನಾಥ [ಗೆ] ನೇಮಿಯ ಕೂಡ
ಕಾದಿ ಗೆಲಿದ ಗರ್ವವುಂಟು ।
ಮೇದಿನಿಯೊಳು ತಾಯ ಮನೆಗೆ [ಮಗನು] ಬಂದು
ಭೇದವಿಲ್ಲದೆ ಚೆಂಡು ಬೇಡ ॥೩೯೯॥

ಬಾಲ ಕುಮಾರರಾಮಯ್ಯಾಗೆ ಬುದ್ಧಿಯು
ಸಾಲದು ಅಣ್ಣನ ಕೈಯ್ಯ ।
ಊಳಿಗವನು ಮಾಡಿಸಿಕೊಂಬುದು ಕಲಿ
ಕಾಲದ ಮಹಿಮೆಯು ನೋಡು ॥೪೦೦॥

ಚಿಕ್ಕಂದು ಮೊದಲಾಗಿ ಎನ್ನೊಳು ಕೂಡುಂಡು
ಸೊಕ್ಕ ಬಹುದೆಯೆನ್ನೊಳಗೆ ।
ಚಿಕ್ಕಮ್ಮನಲ್ಲವೆ ಕಾಟಣ್ಣ ನಾ ನಿಮಗೆ
ಮಕ್ಕಳಲ್ಲವೆ ನೀವು ನನಗೆ ॥೪೦೧॥

ಅಕ್ಕನ ಮಗನು ಕೊಮಾರ ರಾಮಯ್ಯನ
ಚಿಕ್ಕಂದು ಮೊದಲು ನಾನರಿಯೆ ।
ಠಕ್ಕು ಮನವ ಮಾಡುತ ರತ್ನಮ್ಮನು
ಒಕ್ಕಳು ಹುಸಿಯ ಕಂಬನಿಯ ॥೪೦೨॥

ಎಲೆ ತಾಯಿ ನಿನ್ನ ಕಂಬನಿ ಬೀಳೆ ಧರೆಯೊಳು
ತಲೆ ಬೀಳಬೇಕು ರಾಮಯನ ।
ಬಲು ಬುದ್ಧಿಗಳ ಹೇಳಿ ಕಳುಹುವೆನೆನುತಲಿ
ಕಲಿಗಳರಸ ಕಾಟ ನುಡಿದ ॥೪೦೩॥

ಚೆಂಡದೆ ನಿನಗೆ ಕೊಡೆನೆಂದು ನುಡಿದಳು
ಗಂಡುಗಲಿ ಕಾಟನೊಡನೆ ।
ಚೆಂಡು ಬೇಕಾದರೆ ರಾಮನ ಬರಹೇಳೊ
ಕಂಡ ಸುದ್ದಿಯನು ಹೇ[ಳವಗೆ] ॥೪೦೪॥

ಶಿವಶಿವಯೆನುತಲಿ ಕಿವಿಯ ಕೈಯ್ಯಲಿ ಮುಚ್ಚಿ
ಹವಣೆಯಿಲ್ಲದೆ ಕಾಲ್ಗೆರಗೆ ।
ಸುವರ್ಣಬಟ್ಟಲಲಿ ಕರ್ಪುರವೀಳ್ಯವನಿತ್ತು
ಸುವಿಲಾಸದಿಂದ ಕಳುಹಿದಳು ॥೪೦೫॥

ಇನ್ನಿರಬಾರದೆಂದೆನುತ ಕಾಟಣ್ಣನು
ಕನ್ನೆ ರತ್ನಿಯು ಅವಗುಣಿಯು ।
ಇನ್ನಿವಳಲ್ಲಿ ದ್ರೋಹವು ಉಂಟುಯೆನುತಲಿ
ನನ್ನಯಿಂದಲಿ ರಾಮನೆಡೆಗೆ ॥೪೦೬॥

ಅಲ್ಲಿಂದ ತೆರಳಿ ಬಂದನು ಕಾಟಣ್ಣನು
ಮೆಲ್ಲನೆ ರಾಮನಿದ್ದೆಡೆಗೆ ।
ಖುಲ್ಲಮನದ ರತ್ನಿಯಾಡಿದ ನುಡಿಗಳ
ಎಲ್ಲವ ರಾಮನೊಳುಸುರೆ ॥೪೦೭॥

ಎಂದ ಮಾತನು ಕೇಳುತ ರಾಮಯ್ಯನು
ನೊಂದುಕೊಂಡನು ಮನದೊಳಗೆ ।
ತಂದೆಯ ಕಾಲದ ಹಳೆಯ ಬೊಲ್ಲುಗ ನೀನು
ಒಂದು ಬಾರಿಗೆ ಚೆಂಡ ಬೇಡೊ ॥೪೦೮॥

ತಂದೆಯ ಕಾಲದ ಹಳಬನಲ್ಲವೆ ನೀನು
ಒಂದು ಬಾರಿಗೆ ಚೆಂಡ ಬೇಡು ।
ಎಂದ ಮಾತನು ಕೇಳಿ ಕರಮುಗಿದು ಬೊಲ್ಲುಗ
ಬಂದನು ಚೆಂಡ ಬೇಡುವರೆ ॥೪೦೯॥

ಹಡಪದ ಬೊಲ್ಲುಗ ವಿವರವೆಲ್ಲವ ಕೇಳಿ
ಅಡಿಗೆರಗಿದ ಕೈಯ ಮುಗಿದು ।
ಒಡೆಯ ರಾಮನು ಕಳುಹಲು ಬಂದ ಅಮ್ಮಾಜಿ
[ಎಡಗೆ] ಚೆಂಡ ಬೇಡುವರೆ ॥೪೧೦॥

ಬಂದನು ಬಾಗಿಲ ಮುಂದಕ್ಕೆ ಬೊಲ್ಲುಗ
ನಿಂದು ಸಂಗಿಯ ಕಂಡು ಮನದಿ ।
ಅಂದವೆ ಚೆಂಡು ಕೊಡದೆ ಹಿಂದಕಟ್ಟಲು
ಚಂದ್ರ ವದನೆಯೊಳಿಂತೆಂದ ॥೪೧೧॥

ಭರದಿಂದ ಬಂದು ರತ್ನಾಜಿಗೆ ಬೊಲ್ಲುಗ
ಕರವ ಮುಗಿದು ಬೆಸಗೊಂಡ ।
ಪರನಾರಿ ಸೋದರ ರಾಮನು ಕಳುಹಿದ
ಹರಷದಿ ಚೆಂಡ ಕೊಡಮ್ಮ ॥೪೧೨॥

ರಾಮನ ಬಿರಿದು ಕೊಂಡಾಡಿದೆ ಬೊಲ್ಲುಗ
[ರಾಮುಗನು] ಹದುಳಿಗನೊ ।
ಭೂಮಿಯೊಳಗೆ ಧರ್ಮದ ಹನುಮಂತನೊ
ಸೀಮೆಯೊಳಗೆ ಎಣೆಯಿಲ್ಲ ॥೪೧೩॥

ತಾಯ ಮನೆಗೆ ಬಂದು ಮಗ ಚೆಂಡ ಬೇಡಲು
ನ್ಯಾಯವೇತಕೆ ಬರಹೇಳೊ ।
ವಾಯುವೇಗದಿ ತಿರುಗಿದಾಗ ಬೊಲ್ಲುಗ
ರಾಯನ ಕೂಡ ಬಿನ್ನೈಸೆ ॥೪೧೪॥

ನೀವು ಬಂದಲ್ಲದೆ ಕೊಡೆನೆಂದಳು ಚೆಂಡ
ಆವ ಹದನ ನಾನರಿಯೆ ।
ಆ ವಿಧಿಯಾಯಿತೆ ಶಿವಶಿವಯೆನುತಲಿ
ಭಾವೆಯ ಮನೆಗೆ ತಾ ನಡೆದ ॥೪೧೫॥

ಆಗಳೆ ಹೇಳಿದಳಮ್ಮ ಲಗ್ಗೆಯ ಚೆಂಡ
ಹೋಗಲಿ ಬೇಡವೆಂದೆನುತ ।
ಹೀಗೆ ಕೆಡುವರು ತಾಯ ಬುದ್ಧಿಯ ಕೇಳದೆ
ನೀಗಿ ಪ್ರಾಣವ ಮೂರ್ಖತನದಿ ॥೪೧೬॥

ಕೆಟ್ಟ ವಿಧಿಯು ಬೆನ್ನಟ್ಟಿ ಬಂದರೆ ನಾನು
ಕಟ್ಟಿ ಕಾದುವೆನೆಂದು ನುಡಿದ ।
ದಿಟ್ಟ ಕುಮಾರರಾಮಯ್ಯ ಮಾನ್ಯರಿಗೆಲ್ಲ
ಕೊಟ್ಟು ಕಳುಹಿದ ವೀಳ್ಯಗಳ ॥೪೧೭॥

ಎಡೆ ಮಾಸಿದ್ಧಚ್ಚಡ ಹೊದ್ದು ರಾಮಯ್ಯನು
ಎಡೆವಿಡದಲೆ ಚಿಂತಿಸುತ ।
ಕಡೆಯ ಪೆಂಡೆಯ ಕಾಲಕಡಗ ಪದಕ ರುಳಿಯ
ಮಡುಗ ಕೊಟ್ಟನು ಅಣ್ಣನೆಡೆಗೆ ॥೪೧೮॥

ಇಟ್ಟ ತೊಡಿಗೆಯ ಕಡಗ ಕಂಠಮಾಲೆಯ
ಕೊಟ್ಟನು ಅಣ್ಣನ ಕೈಯ್ಗೆ ।
ನೆಟ್ಟನೆ ಸರ್ಪ ನುಂಗಿದ ಶಶಿಯಂದದಿ
ಕಟ್ಟಾಳು ಕಳೆಯ ಗುಂದಿದನು ॥೪೧೯॥

ಹೋಗುತಿಹೆನೊ ಮುಂದೆ ಹೇಗಾಗೋದೆನುತಲಿ
ಬಾಗಿದ ಶಿರ[ವೆ]ತ್ತಿ ನಡೆದ ।
ಸಾಗರ ಗಂಭೀರ ಸಲಹೊ ಜಟ್ಟಂಗೀಶ
ನಾಗಕುಂಡಲನೆ ನಂದೀಶ ॥೪೨೦॥

ಎನ್ನನೇತಕೆ ಹುಟ್ಟಿಸಿದೆಯೊ ಜಟ್ಟಂಗೀಶ
ನಿನ್ನ ತಂತ್ರವ ನಾನರಿಯೆ ।
ಮುನ್ನ ಮಾಡಿದ ಫಲ ಬೆನ್ನಬಿಡದುಯೆಂದು
ತನ್ನೊಳು ತಾನೆ ಚಿಂತಿಸಿದ ॥೪೨೧॥

ತಿರುಗಿದ ಕಂಬನಿ ಮುಖ ಕಂಗಳೊಳು ತುಂಬಿ
ಭರದಿಂದ ನಡೆದನರಮನೆಗೆ ।
ಪರನಾರಿ ಸೋದರನೆಂಬ ಕಡೆಯವನಿಟ್ಟು
ಗರುವ ರತ್ನಾಜಿಯ ಬಳಿಗೆ ॥೪೨೨॥

ಪರನಾರಿಯರ ಸಹೋದರನೆಂಬ ಕಡೆಯವು
[ಮೆರೆ]ವುತಿರಲು ಪಾದದೊಳಗೆ ।
ಧುರಧೀರ ರಾಮನು ಬರುವ ಭರವ ಕಂಡು
ಧರುಮ ದೇವತೆ ಬೆನ್ನ ಬಿಡದೆ ॥೪೨೩॥

ಬೇಗದಿ ಐದಾರು ಬಾಗಿಲಗಳ ದಾಂಟಿ
ತೂಗಿ ಹೊಕ್ಕನು ಅರಮನೆಯ ।
ಬಾಗಿಲೊಳಗೆ ನಿಂತಿದ್ದ ಹೆಗ್ಗಳು
ಬಾಗಿ ಕರವನೆತ್ತಿ ಮುಗಿಯೆ ॥೪೨೪॥

ಬಲ್ಲಿಲದ ರಾಮಯ್ಯ ಬರುವಾಗ ಬಾಗಿಲ
ಗೊಲ್ಲರು ಎದ್ದು ಕೈಮುಗಿಯೆ ।
ನಿಲ್ಲಿ ಕುಳ್ಳಿರಿಯೆಂದು ರಾಮಯ್ಯ [ನೆನ್ನುತ]
ನಿಲ್ಲದೆ ಒಳಯಕ್ಕೆ ಬಂದ ॥೪೨೫॥

ಚೆನ್ನಿಗ ರಾಮಯ್ಯ ಹೊರಬಾಗಿಲನೆ ದಾಟಿ
ಚಿನ್ನದುಪ್ಪರಿಗೆಗೆ ಬರಲು ।
ಕನ್ನೆವೆಣ್ಣೀಗೆ ಸನ್ನೆಮಾಡುತ ರತ್ನಾಜಿ
ರನ್ನದ ಗೃಹವ ತೋರಿದಳು ॥೪೨೬॥

ಚಿನ್ನದ [ಪಂಜರ] ದೊಳಗಿದ್ದ ಅರಗಿಣಿ
ತನ್ನ ಜಾಳಂದ್ರದಿ ನೋಡಿ ।
ಇನ್ನಿವನಾಗ ದೇಶದ ಮನ್ನೆಯನೆಂದು
ಚೆನ್ನ ರಾಮನ ಕೇಳಿತಾಗ ॥೪೨೭॥

ಇತ್ತ ರಾಮಯ್ಯ ಬರುವ [ಬರುವುದು] ಕಂಡು
ಮುತ್ತಿನ ಪಂಜರ ಗಿಳಿಯು ।
ಮತ್ತೆ ಮನದಿ ಕರ ನೊಂದು ಇವನಾರೆಂದು
ವಿಸ್ತರಿಸಿಯೆ ಕೇಳಿತಾಗ ॥೪೨೮॥

ಬಂದ ರಾಮನ ವಿಸ್ತರವಾಗಿ ಕೇಳುತ
ಚಂದ ಚಂದದ ಅರಗಿಳಿಯು ।
ಇಂದು ಕಂಪಿಲರಾಯನಿಲ್ಲದ ವ್ಯಾಳ್ಯದಲಿ
ಬಂದು ಹೊಕ್ಕವನಾರು ಹೇಳೊ ॥೪೨೯॥

ಅರಸುಯಿಲ್ಲದ ಅರಮನೆಯ ಹೊಕ್ಕೆಲೊ ನೀನು
ಸರಸ[ವೆ] ಕಂಪಿಲನೊಡನೆ ।
ಅರಸಿ ನಮ್ಮಕ್ಕ ರತ್ನಾಜಿಗೆ ಹೇಳಿನ್ನು
ಬೆರಸಿ ಕಟ್ಟಿಸುವೆ ಹೆಡಗುಡಿಯ ॥೪೩೦॥

ಏನೆಲೊ ಗಿಳಿರಾಮ ನನ್ನ[ನು] ಮರೆದೆಯಾ
ನಾನು ರಾಮಯ್ಯನೆಂದರಿಯಾ ।
ಕಾನನದಲಿ ಕಣ್ಣು ಕಟ್ಟಿದಂದದಲಿದ್ದೆ
ನೀನು ವಿಸ್ತರವಾಗಿ ಹೇಳೋ ॥೪೩೧॥

ನೀನೇಕೆ ಮರೆದೆಯೊ ನಿನ್ನ ತಂದವ ನಾನು
ಮೋನದಲಿರು ನುಡಿಯದೆಲೆ ।
ನಾ ನಿನ್ನ ಮರೆದೆನು ಮಾನನಿಧಿಯೆಯೆಂದು
ಧ್ಯಾನಿಸಿ ಕೇಳಿತರಗಿಳಿಯು ॥೪೩೨॥

ಹುಳಿಯಾರ ಮಾರಗೊಂಡನ ಮೇಲೆ ದಾಳಿಯ
ಘಳಿಲನೆ ನಾ ಹೋಗಲಂದು ।
ತಳುವದೆ ನಿನ್ನ ಕಷ್ಟವ ಕೊಟ್ಟರೆ ತಂದ
ಚೆಲುವ ರಾಮುಗನೆಂದರಿಯಾ ॥೪೩೩॥

ನಾನೀಗ ಕಂಪಿಲರಾಯನ ಕುಮಾರ
ನಾನು ಮಾನ್ಯರ ಕೂಡಿಕೊಂಡು ।
ಆನಂದದಿಂದಲಿ ಚೆಂಡನಾಡುತಲಿರ್ದೆ
ನಾನೀಗ ಚೆನ್ನಿಗ ರಾಮ ॥೪೩೪॥

ಏನು ಕಾರಣ ಬಂದೆ ಚೆನ್ನಿಗ ರಾಮಯ್ಯ
ನೀನು ಇಲ್ಲಿಗೆ ಬರಬಹುದೆ ।
ಆನೆ ಮದ್ದಾನೆ ಮನ್ಮಥಗೆಣೆರೂಪನೆ
ಏನ ಹದನು ಹೇಳೊ ಎನಗೆ ॥೪೩೫॥

ಒತ್ತಿ ಬಲಿದು ಲಗ್ಗೆಯನಿಡಲು ಚೆಂಡು
ಮತ್ತೆ ಉಪ್ಪರಿಗೆಯ ದಾಂಟಿ ।
ಇತ್ತ ಚಿಕ್ಕಮ್ಮನ ಅರಮನೆಗೆ ಬೀಳಲು
ಹೆತ್ತ ತಾಯನು ಕೇಳ ಬಂದೆ ॥೪೩೬॥

ನಿನ್ನ ಚೆಂಡಿನ ಮನೆ ಮಂಟೆ ಹೋಗಲಿ ರಾಮ
ನಿನ್ನ ಜೀವಕೆ ಹಾನಿ ಬಂತೊ ।
ಭಿನ್ನವಿಲ್ಲದೆ ನೀನು ತಿರುಗೆಂದು ಅರಗಿಳಿ
ಚೆನ್ನ ರಾಮಗೆ ಹೇಳೀತಾಗ ॥೪೩೭॥

ಅಯ್ಯಯ್ಯೊ ಗಿಳಿರಾಮ ನೊಂದೆಯಾತಕೆ ನೀನು
ನಮ್ಮಯ್ಯನರಸಿ ರತ್ನಮ್ಮ ।
ಕೈಯ್ಯಲ್ಲಿ ಚೆಂಡದೆ ಇಸಕೊಂಡು ಹೋಗುವೆ
ನ್ಯಾಯವೇತಕ ಗಿಣಿರಾಮ ॥೪೩೮॥

ಚೆಂಡ್ಹೋದರೆ ರಾಮ ಸಾವಿರ ಬಂದಾವು
ಗಂಡು ನಿನ್ನನು ಪೋಲ್ವರಿಲ್ಲ ।
ಬಂಡಾಗಲಿಬೇಡ ತಿರುಗೆಂದು ಅರಗಿಳಿ ಪ್ರ
ಚಂಡ ರಾಮಗೆ ಹೇಳಿತಾಗ ॥೪೩೯॥

ರತ್ನಾಜಿ ನಿನ್ನ ಮೇಲಣ ವಿರಹದಲಿನ್ನು
ಯತ್ನ ಮಾಡಿಕೊಂಡಿಹಳು ।
ತ್ತೊತ್ತಿನ ಕಾವಲಿ ಇಟ್ಟಿಹಳು ಮುಂದೆ
ಮತ್ತೆ [ನೀ] ತಿರುಗು ರಾಮಯ್ಯ ॥೪೪೦॥

ಪೊಡವಿಯ ರಾಜಕುಮಾರರು ನಿನ್ನಯ
ಕಡು ರೂಪಿಗೆ ಸರಿವುಂಟೆ ।
ಬಿಡು ನಿನ್ನ ಚೆಂಡನು ಪಾಪಿ ನಾ ಸಾರಿದೆ
ಕೆಡಬೇಡವೊ [ಎಲೋ] ರಾಮಯ್ಯ ॥೪೪೧॥

ಮೊನೆಗಾರನೆಂದೆಂಬ ಸತ್ವದಿ ರತ್ನಾಜಿಯ
ಮನೆಯನೀ ಹೊಗ ಬೇಡ ರಾಮ ।
ನಿನಗೀಗ ಪ್ರಾಣಕಂಟಕ ಬರುತಾದಿನ್ನು
ಚಿನುಮಯನಾಣೆ ಸಾರಿದೆನು ॥೪೪೨॥

ಎಂದು ನಿನ್ನ ಮುಖವ ಕಂಡಿಲ್ಲ ರಾಮಯ್ಯ
ಇಂದು ಕಂಡೆನು ಚೆನ್ನರಾಮ ।
ಕಂದರ್ಪರೂಪನೆ ಅಪಕೀರ್ತಿ ಬರುತದೆ
ಹಿಂದಕ್ಕೆ ತಿರುಗೆಂದು ಗಿಳಿಯು ॥೪೪೩॥

ಎಂದ[ರಗಿಳಿಯ] ಮಾತನು ಕೇಳಿ ರಾಮಯ್ಯ
ನೊಂದುಕೊಂಡನು ಮನದೊಳಗೆ ।
ಚಂದ್ರಶೇಖರ ಜಟ್ಟಂಗಿಯ ಲಿಂಗವೆ
ಬಂದ ಕಂಟಕವ ಪರಿಹರಿಸೋ ॥೪೪೪॥

ಎನ್ನ ಪಣೆಯೊಳು ಬ್ರಹ್ಮನು ಬರೆದ ಬರಹ
ಇನ್ನು ಮೀರಲು ಅಳವಲ್ಲ ।
ಚೆನ್ನಿಗ ಚೆಲುವ ರಾಮಯ್ಯನು ತಾನಾಗ
ಪನ್ನಗಧರ ಗತಿಯೆನುತ ॥೪೪೫॥

ಬಂದುದು ಬರಲಿ ಕಂಡುದ ಕಾಬೆನೆನುತಲಿ
ಮುಂದಕ್ಕೆ ಅಡಿಯಿಟ್ಟು ನಡೆದ ।
ನಂದಿವಾಹನ ಗತಿಯೆನುತಲಿ ರಾಮಯ್ಯ
ಬಂದನು ಸಂಗಿಯ ಬಳಿಗೆ ॥೪೪೬॥

ಚಿಂತೆ ಮಾಡುತ ರಾಮ ಎಂತಹುದೆನುತಲಿ
ಅಂತರಿಸುತ ಬರುತಿರಲು ।
ಕಾಂತೆ ರತ್ನಾಜಿಯು ಹಡಪದ ಸಂಗಿ ಸಹ
ನಿಂತಿರುವುದ ಕಂಡ ರಾಮ ॥೪೪೭॥

ಕಂಡಳು ಸಂಗಿ ರಾಮಯ್ಯನ ಬರವನು
ದಂಡಪ್ರಣಾಮ ಮಾಡಿದಳು ।
ಚಂಡವಿಕ್ರಮ ರಾಮ ಬಂದ ಕಾರಣವೇನು
ಕೊಂಡಾಡಿದಳು ಸಂಗಾಯಿ ॥೪೪೮॥

ಕಳುಹಿದೆ ಚೆಂಡ ಬೇಡುವರೆ ಕಾಟಣ್ಣನ
ಕಳುಹಿದೆ ಹಳೆಯ ಬೊಲ್ಲುಗನ ।
ಕಳುಹಿದವರ ಕೈಯ್ಯ ಚೆಂಡಕೊಡದೆ ನೀವು
ಬಳಲಿಸುವುದು ಗುಣವಹುದೆ ॥೪೪೯॥

ಬೇಡಿದವರ ಕೂಡ ಚೆಂಡ ಕೊಡದೆ ಹೀಗೆ
ಕಾಡುವದುಚಿತವ[ಯೆಂ]ದು ।
ಗಾಡಿಕಾರ್ತಿಯೊಳು ರಾಮಯ್ಯನು ನುಡಿಯಲು
ಮಾಡಿದಳ್ ಸಂಗಾಯಿ ಬಿನ್ನ ॥೪೫೦॥

ಅರಮನೆಯಲಿ ಆರು ಮುಟ್ಟಲಮ್ಮರು ಚೆಂಡ
ಸರಸವೆ ನಿಮ್ಮೊಳು ನಮಗೆ ।
ಗರುವೆ ರತ್ನಮ್ಮನ ಬಳಿಯಲಿ ಚೆಂಡದೆ
ದೊರೆಗಳ ದೇವ ನೀ ಬೇಡೋ ॥೪೫೧॥

ಎಂದ ಸಂಗಿಯ ಮಾತ ಕೇಳಿ ರಾಮಯ್ಯನು
ನೊಂದುಕೊಂಡನು ಮನದೊಳಗೆ ।
ಚಂದ್ರಶೇಖರ ಜಟ್ಟಂಗಿಯ ಲಿಂಗವೆ
ಬಂದ ಕಂಟಕ ಪರಿಹರಿಸೋ ॥೪೫೨॥

ಬಂದಿದೆ ಕಂಟಕವೆಂದು ತಾ ನಡೆದನು
ಇಂದುಧರನೆ ಗತಿಯೆನುತ ।
ಬಂದುದು ಬರಲಿ ಕಂಡುದ ಕಾಬೆನೆನುತಲಿ
ಮುಂದಕ್ಕೆ ತಾನಡಿಯಿಟ್ಟ ॥೪೫೩॥

ಇತ್ತ ಹಾದಿಯ ನೋಡಿ ರಾಮನ ಕಾಣದೆ
ಮತ್ತೆ ಚಿಂತಿಸುತ ರತ್ನಾಜಿ ।
ಉತ್ತಮ ಪುರುಷ ತಾನೆಂದಿಗೆ ಬಂದಾನೊ
ಚಿತ್ತ ದಣಿಯಲಪುವೆನು ॥೪೫೪॥

ಹಾದಿಯ ನೋಡಿ ಹಂಬಲಿಸಿ ಕಾಣದೆ ರತ್ನಿ
ವೇದನೆ ಪಿರಿದಾಗಿ ಬಂದು ।
ವೇದಜನಕ ನನ್ನ ಪುಟ್ಟಿಸಿದೇಕೆಂದು
ಕಾದಲೆ ರತ್ನಿಯಾಡಿದಳು ॥೪೫೫॥

ಭರದಿಂದ ಬಂದು ರಾಮಯ್ಯ ರತ್ನಾಜಿಗೆ
ಕರಗಳ ಮುಗಿದು ನಮಿಸಿದನು ।
ಹರಿಯಲದೇವಿಯೋಪಾದಿ ನೀ ಚಿಕ್ಕಮ್ಮ
ಹರುಷದಿ ಚೆಂಡ ಕೊಡಮ್ಮ ॥೪೫೬॥

ಬಂದ ಕುಮಾರನ ಕಂಡಳು ರತ್ನಮ್ಮ
ಚಂದ್ರನ ಕಳೆಯ ರಾಮುಗನ ।
ಕಂದ ಬಾರಯ್ಯ ಲಗ್ಗೆಯನಾಡಿ ಬಳಲಿದಿ
ಮಂದಿರಕವನ ಕರೆತಂದು ॥೪೫೭॥

ಮಾಣಿಕ್ಯ ಗದ್ದುಗೆ ಹಾಕಿ ರತ್ನಾಜಿಯು
ಪ್ರಾಣಬಂದಂತೆ ಹೆಚ್ಚಿದಳು ।
ಜಾಣ ಚೆನ್ನಿಗರಾಮ ಕುಳ್ಳಿರುಯೆನು [ತಿರೆ]
ಏಣಲೋಚನೆ ಒಲ್ಲೆನೆಂದ ॥೪೫೮॥

ಆಗರು ಚಂದನ ಶ್ರೀಗಂಧ ಬಾವನ್ನವ
ತೆಗೆದು ತಂಗಾಳಿಯೊಳಿರಿಸಿ ।
ನಗೆಮುಖದ ರಾಮಯ್ಯ ಕೊಳ್ಳೆಂದು ಕೊಟ್ಟರೆ
ಅಘಹರನಾಣೆ ಬೇಡೆಂದ ॥೪೫೯॥

ಇಂದು ಚೆಂಡಿಲ್ಲದೆ ನಿಂದಿದೆ ಆಟವು
ತಂದು ಕೊಡಮ್ಮ ನೀಯೆನಗೆ ।
ಎಂದ ಮಾತನು ಕೇಳಿ ಒಂದಾರು ಭುಜವಾಗಿ
ನಿಂದು ಮಾರ್ನುಡಿಗಳ ನುಡಿದು ॥೪೬೦॥

ಇತ್ತ ಕೇಳೆಲೊ ನಿನ್ನ ಹೆತ್ತ ತಂದೆಯ ಮಂಚ
ಒತ್ತಿಲಿ ಚೆಂಡ ಮಡಗಿದೆನು ।
ಹೊತ್ತು ಹೋಯಿತು ರಾಮ ತೆಕ್ಕೊಂಡು ಹೋಗೆಂದು
ಮತ್ತೆ ಮಾರ್ನುಡಿದಳವನೊಡನೆ ॥೪೬೧॥

ಅದೆ ಹೋಗೊ ಸಜ್ಜೆಗೃಹದ ಮಂಚದ ಮೇಲೆ
ಅದೆ ಹೋಗು ಮುತ್ತಿನ ಚೆಂಡು ।
ಮದನಸನ್ನಿಭ ರಾಮ ತೆಕ್ಕೊಂಡು ಹೋಗೆಂದು
ಚದುರೆ ನುಡಿಯಲೊಳಹೊಕ್ಕ ॥೪೬೨॥

ಬರುತ ಬರುತ ಕಂಡನು ಹರಿಣಾಕ್ಷಿಯ
ಬರುವ ಕಾಣುತ ತಿರುಗಿದನು ।
ಉರವಣಿಸುತ ಹೋಗಲೀಸದೆ ರಾಮನ
ತರುಬಿ ಪಿಡಿದಳು ಮುಂದಲೆಯ ॥೪೬೩॥

ಹೊಕ್ಕ ಸಮಯದಿ ಒಳಹೊಕ್ಕು ರಾಮಯ್ಯನ
ತಕ್ಕೈಸಿ ಮುಂದಲೆ ಹಿಡಿದು ।
ಸಿಕ್ಕಿದೆ ಎನ್ನಯ ಭಾಗ್ಯದ ನಿಧಿ ಎಂದು
ಅಕ್ಕರಿಂದಲಿ ರತ್ನಿ ನುಡಿಯೆ ॥೪೬೪॥

ಹರಹರಯೆನುತಲಿ ಕಿವಿಯ ಮುಚ್ಚಿದ ರಾಮ
ಸರಸವು ಬೇಡ ಚಿಕ್ಕಮ್ಮ ।
ಹರಿಯಲದೇವಿಯೋಪಾದಿ ನೀ ಚಿಕ್ಕಮ್ಮ
ಪರಿಹರಿಸೆನ್ನ ಪಾತಕವ ॥೪೬೫॥

ಶೂಲದ ಹಬ್ಬದಿ ನಿನ್ನ ಕಂಡೆನೊ ರಾಮ
ಬಾಳ ಕಾಲವು ನಿನ್ನ ತೊರೆದೆ ।
ಇಳೆಯೊಳು ನಿನ್ನಂಥ ಚೆಲುವನ ಶಿವನೀಗ
ಲೋಲನ ಹುಟ್ಟಿಸಬಹುದೆ ॥೪೬೬॥

ಅಮ್ಮ ನೀ ಹಿಡಿದ ಕಾರಣವೇನು ಎಲೆ ತಾಯೆ
ನಿರ್ಮಳವಾಗಿ ಹೇಳೆನಗೆ ।
ಹೆಮ್ಮೆ ಬೇಡವೊ ರಾಮ ಸಿಕ್ಕಿದೆ ಬಿಡಲಾರೆ
ಕಮ್ಮಗೋಲನ ಬಾಧೆ ಘನವು ॥೪೬೭॥

ಮಾತು ಸೊಗಸದು ನಿದ್ರೆ ಬಾರದು ಕಣ್ಣಿಗೆ
ಧಾತುಗೆಟ್ಟನು ನಿನ್ನ ನೆನೆದು ।
ಸೋತವಳೊಡನೆ ಪಂಥವು ಬೇಡ ಹಗಲಿನ
ಜ್ಯೋತಿಯಂತಾದೆನೊ ನಾನು ॥೪೬೮॥

ಕನಸಿನೊಳಗೆ ಬಂದು ಕಾಡುವೆ ರಾಮಯ್ಯ
ಮನಸಿಲೇತಕೆ ಸುಮ್ಮನಿದ್ದಿಯೊ ।
ಮುನಿಸು ಬೇಡವೊ ರಾಮ ಮುಂದುಗೆಟ್ಟೆನು ನಾನು
ಮನಸಿಜರೂಪ ನೀ ಕಾಯೋ ॥೪೯॥

ಬಲ್ಲಿದ ಹೆಣ್ಣು ಹಿಡಿದುಬಿಡುವಾಗ[ಲು]
ಒಲ್ಲೆನೆಂದರೆ ಎಷ್ಟು ಕುಂದೊ ।
ಸಲ್ಲದು ಕಡು ಮೂರ್ಖತನದಿಂದ ರಾಮಯ್ಯ
ಒಲ್ಲದ ಕಾರಣವೇನು ॥೫೦॥

ಚಿನ್ನ ಕೈಸೇರಿದರೆ ಬಿಡುವರುಂಟೇ ರಾಮ
ಹೆಣ್ಣು ಮೋಹಿನಿ ಮೈಯಿಕ್ಕಿದರೆ ।
ಕಣ್ಣಾರೆ ಕಂಡು ಒಲ್ಲೆನುಯೆಂಬುವದೀಗ
ನಿನ್ನಲ್ಲಿ ಕಂಡೆ ರಾಮುಗನೆ ॥೫೧॥

ಚಿತ್ತವರಿತು ಒಪ್ಪತ್ತಿನ ಭೋಗವ
ನಿತ್ತು ಮನ್ನಿಸಿ ಮಾತನಾಡೊ ।
ಮುತ್ತು ಮಾಣಿಕ ನವರತ್ನ ಬಂಗಾರವ
ನಿತ್ತು ಮನ್ನಿಸಿ ಕಳುಹುವೆನು ॥೫೨॥

ಹೆಣ್ಣಿನಳಲು ಒಲ್ಲೆನೆನು[ತಿಹ] ರಾಮಯ್ಯಗೆ
ಮಣ್ಣನೆ ತೂರಿ ಶಾಪಿಸು[ತ] ।
ಕಣ್ಣಿಲಿ ನೀರನೆ ಕರೆದುಂಗುಟ ಕಚ್ಚಿ
ಬಣ್ಣಗೆಟ್ಟಳು ರತ್ನಾಜಿ ॥೫೩॥

ದಿಟ್ಟಿಸಿ ನೋಡನು ಮಾತಿಗೆ ಮಾತಾಡನು
ನೆಟ್ಟನೆ ಮುನಿಸಿದಂತಿಹನು ।
ಬಟ್ಟ ಕುಚವ ತೋರುವಳು [ರವಿಕೆ ಬಿಚ್ಚಿ]
ದಿಟ್ಟ ಕುಮಾರರಾಮನಿಗೆ ॥೫೪॥

ಭೂತಳದೊಳು ತಾಯಿ ಮಕ್ಕಳ ಬಯಸುವ
ಪಾತಕಕೊಳಗಾಗಬಹುದೆ ।
ಮಾತಲ್ಲ ಬಿಡು ಅಮ್ಮ ಮನಸಿಲಿ ನೋಡಿಕೋ
ನೀತಿಯೆ ನಿನಗಿದು ಗುಣವೇ ॥೪೮೫॥

ಬೇಡ ಬೇಡಪಕೀರ್ತಿ ನಾಡೊಳು ಮಕ್ಕಳ
ಕೂಡೇನೆಂದರೆ ಜಯವಹುದೆ ।
ಬೇಡ ಚೆಂಡನು ಕೊಡು ಮನ್ನೆಯರೆಲ್ಲರು
ನೋಡುವರೆನ್ನ ದಾರಿಯನು ॥೪೮೬॥

ಚೆಂಡೇನೋ ಪಾವನ ಚೆಲುವ ರಾಮಯ್ಯನೆ
ಭಂಡಾರ ಸಿರಿ ಭಾಗ್ಯವನು ।
ಕೊಂಡೊಯ್ಯೊ ಆಸೆಯ ಬಿಡಿಸೊ ಎನ್ನನು ನೀನು
ಹೆಂಡತಿ ಮಾಡಿಕೋ ರಾಮ ॥೪೮೭॥

ಪಾಪವ ಕೇಳಿದೆ ಜಟ್ಟಂಗಿ ರಾಮನೆ
ಆಪತ್ತು ತಹರೆ ಇಂಥದನು ।
ಈಪರಿ[ಯಲಿ]ಯಲ್ಪ ಬುದ್ಧಿಯನೆಣಿಪರೆ
ಭೂಪಾಲ ಕಂಪಿಲನರಸಿ ॥೪೮೮॥

ಹೀಗಾಡ ಬೇಡ ಎನ್ನಯ ಮೇಲೆ ಚಿಕ್ಕಮ್ಮ
ಭೋಗವನೆಣಿಪರೆ ತಾಯೆ ।
ಬಾಗುವುದೆ ಕಲ್ಲುಬಿಲ್ಲೆನ್ನ ಮನ ಒಳ
ನಾಗಬಲ್ಲುದೆ ಪರಸತಿಗೆ ॥೪೮೯॥

ಕೊಂದು ಹೋಗಲೊ ರಾಮ ನಿಂದು ಸೈರಿಸಲಾರೆ
ಮುಂದು ಗೆಟ್ಟೆನೊ ವಿರಹದಲಿ ।
ಒಂದು ಗಳಿಗೆ ಭೋಗವನಿತ್ತು ಮನ್ನಿಸೊ
ಕಂದರ್ಪಸಮರೂಪ ರಾಮ ॥೪೯೦॥

ಯಾಕೆ ಚಿಕ್ಕಮ್ಮ ಈ ಬಯಲ ಕಾತರವಿದು
ಕಾಕಾಗುವರೆ ಬಲ್ಲವರು ।
ಲೋಕ ನಿಂದಿಸುವುದು ಈ ಮಾತ ಕೇಳಲು
ಸಾಕು ಬಿಡೆಂದು ನುಡಿದನು ॥೪೮೧॥

ಕನ್ನೇರ ಕೂಟಕ್ಕೆ ಕಂಚಿನ ಪುತ್ಥಳಿ ಕಾಸಿ
ಚೆನ್ನಾಗಿ ಸುಡುವ ಯಮರಾಜ ।
ಇನ್ನು ನೀ ಎಣಿಸಲು ತರವಲ್ಲ ಚಿಕ್ಕಮ್ಮ
ಮುನ್ನುಂಟು ದೋಷ ಭವದಲ್ಲಿ ॥೪೮೨॥

ನಿಂದೆ[ಗೆ] ಪಾತಕವೆಂಬುವ ಪೆಸರಿ[ದ್ದು]
[ನಿಂ]ದಿಸುವರು ಸತ್ಪುರುಷರು ।
ನಿಂದ್ಯವನಾಡಿ ನುಡಿಬೇಡ ಚಿಕ್ಕಮ್ಮ
ಕಂದ ನಾ ನಿನಗೆ ಬಿಡು ಬೇಗ ॥೪೮೩॥

ಅರಿಯದೆ ನೀನಿಂದು ಮಗನೆಂದು ನುಡಿ[ಯುವೆ]
ಅರಿಕೆಯಿಲ್ಲವೊ ರಾಮ ನಿನಗೆ ।
ಮರೆಮಾಡಿ ಕಂಪಿಲ ತಗುಲಿದ ಚೆನ್ನಿಗನೆ
ನೆರೆ ಪೊಯ್ಯುವೆನು ಡಂಗುರವ ॥೪೮೪॥

ಸಾಕಿದ[ಕ್ಕ್ಮಗನೆ]ದು ಹರಿಯಮ್ಮ ನಿನ್ನನು
ಲೋಕೈಕ ನಿಮ್ಮ ರಾಮುಗನೆ ।
ಲೋಕಕ್ಕೆ ಖ್ಯಾತಿ ಮಾಡಿಸುವೆನು ನಿನ್ನ
ಭೂಕಾಂತ ಕಂಪಿಲಗ್ಹೇಳಿ ॥೪೮೫॥

ಎನ್ನ ಜೀವನೆ ಚೆನ್ನರಾಮಯ್ಯ ನೀ ಕೇಳು
ಮನ್ನೆಯ ಕಂಪಿಲನೊಡನೆ ।
ಇನ್ನು ಬೇಕಾದ ಸಂಪದವನು ಕೊಡಸುವೆ
ಮನ್ನಿಸೆನ್ನನು ಮಾತ ಕೇಳೊ ॥೪೮೬॥

ಹಲವು ಮಾತೇಕಮ್ಮ ಕೇಳುವುದೆಲೆ ತಾಯೆ
ಕುಲಸತಿಯಲ್ಲ[ದೆ ಪ]ರರ।
ಲಲನೆಗೆ ಮೋಹಿನಿ ಮನವಿತ್ತೆನೆಂದರೆ
ಹೊಲೆಯನಲ್ಲವೆ ಭೂಮಿಯೊಳಗೆ ॥೪೮೭॥

ನೀತಿಶಾಸ್ತ್ರವ ಕೇಳ ಬಂದೆನೊ ನಿನ್ನೊಳು
ಯಾತರ ಧರ್ಮದ ನಡತ್ಯೋ ।
ಸೋತವಳನು ಮನ್ನಿಸುಯೆಂದು ರತ್ನಾಜಿ
ಕಾತರದಿಂದ ಹಲುಬಿದಳು ॥೪೮೮॥

ಕಥೆಯನೋದುವರೆಲ್ಲ ವ್ರತಗೆಟ್ಟುಹೋದರು
ಪೃಥ್ವಿಯೊಳಗೆ ಬ್ರಹ್ಮ ತನ್ನ ।
ಸುತಳ ಮದುವೆಯಾದುದ ಕೇಳಿ ನೀ ಬಲ್ಲೆ
ಸತಿಯೊಳಗಾಗದವರಾರೊ ॥೪೮೯॥

ಮಳೆಗಾಲದೊಳು ಮಲ್ಲಿಗೆ ಕಾತ ತೆರನಂತೆ
ಅಳಿದೆನೊ ಮುದುಕ ಕಂಪಿಲಗೆ ।
ಪೊಳೆವ ಮನ್ಮಥರಾಮ ನೆರೆದೆನ್ನನುಳುಹೆಂದು
ನಳಿನಾಕ್ಷಿ ರತ್ನಿಯಾಡಿದಳು ॥೪೯೦॥

ತುಪ್ಪ ಸಕ್ಕರೆ ಕೆನೆವಾಲುಂಡ ಬಾಯಿಗೆ
ಹಿಪ್ಪೆಗಳಿಗೆ ಮನಸಹುದೆ ।
ಮುಪ್ಪಿನ ಗಂಡಗೆ ಒಪ್ಪ[ದೊ] ಯೌವನ
ಪುಷ್ಪಚಾಪನೆ ನೆರೆದುಳುಹೋ ॥೪೯೧॥

ಚಿಕ್ಕಮ್ಮ ನೀಯೆನ್ನ ಹಿಡಿಯ ಸಲ್ಲದು ನಿನ್ನ
ಚಿಕ್ಕಂದು ಹುಟ್ಟಿದ ಮಗನು ।
ತರ್ಕೈಸಿ ಹಿಡಿವುದು ನಿತ್ಯಲ್ಲ ಇದುಯೆಂದು
ಅಕ್ಕರಿಂದಲಿ ಆಡಿದನು ॥೪೯೨॥

ಆರ ಮಗನೊ ನಿನ್ನ ನಾನೇನ ಬಲ್ಲೆನು
ಸೇರುವುದಲ್ಲ ಈ ಮಾತು ।
ಕಾರಣವಿಲ್ಲದೆ ನೀನಿಂತು ನುಡಿವರೆ
ಸಾರೊ ಇದೇತರ ಮಾತು ॥೪೯೩॥

ಪೊಡವಿಯೊಳಗೆ ಗೋವು ಜಲ್ಮವು ಉತ್ತಮ
ನಡೆವವೆ ತಾಯ ವಾವಿಯಲಿ ।
ಒಡಹುಟ್ಟಿದವರೆಂದು ಕೂಡದಿಹವೆ ಅವು
ಕಡುಗಲಿ ಚೆನ್ನಿಗ ರಾಮ ॥೪೯೪॥

ಚಿಕ್ಕಂದು ನಿನಗೆ ತಂದೇನೆಂದ ಹೆಣ್ಣನು
ಸೊಕ್ಕಿ ಕಂಪಿಲ ಹಾಕಿಕೊಂಡ ।
ಚಿಕ್ಕಮ್ಮನಲ್ಲವೊ ನಿನಗೆ ನಾನು ಸೋದ
ರತ್ತೆಯ ಮಗಳು ಕಾಣಯ್ಯ ॥೪೯೫॥

ಆಯತ ಇಷ್ಟೇಕೆ ಪೇಳುವೆ ರಾಮಯ್ಯ
ಕಾಯಜನಂಬು ತಾಕಿರಲು ।
ನ್ಯಾಯವೇತಕೆ ನೆರೆದುಳುಹೆಂ[ದಳು ರತ್ನಿ]
ರಾಯ ಮಸ್ತಕಶೂಲನಿಗೆ ॥೪೯೬॥

ಹೊನ್ನ ಹರಿವಾಣದಿ ಕರ್ಪೂರ ವೀಳ್ಯವ
ಚೆನ್ನಾಗಿ ಪಗಡಿಯ ಹೂಡಿ ।
ಬಿನ್ನಾಣವಿಲ್ಲದೆ ಹೂವಿನ ಚೆಂಡನು
ಚೆನ್ನರಾಮಯ್ಯನೆದೆಗಿಟ್ಟು ॥೪೯೭॥

ಯಾಕೆ ಚಿಕ್ಕಮ್ಮ ಎಲ್ಲಿಯ ಮಾತು ನಿನಗೆಂದು
ನೂಕಿದ ರಾಮ ಕರದಲ್ಲಿ ।
ಲೋಕಕ್ಕೆ ಭೂಭಾರವಾಗೋದು ಹಿತವೆ
ನೀಕರಿಸಿದ ಗದ್ದುಗೆಯ ॥೪೯೮॥

ಎಂದು ಕಾತರದಿಂದ ರಾಮ [ಹೊರಬಂ]ದರೆ
ನಿಂದಡ್ಡಗಟ್ಟಿ ಬಾಗಿಲನು ।
ತಂದೆಯಾರ್ಧಾಂಗಿ ಹರಿಯಮ್ಮನ ಸಮಾನ
ಎಂದು ಕರ್ಣವ ಮುಚ್ಚಿಕೊಂಡ ॥೪೯೯॥

ಸುಮ್ಮನೆ ಇರುವ ರಾಮನ ನೋಡಿ ರತ್ನಾಜಿ
ಹೆಮ್ಮೆಗೆಟ್ಟಳು ವಿರಹದಲಿ ।
ಹೆಮ್ಮೈಸುವ ಕುಮಾರ ರಾಮಯ್ಯನ
ಗಮ್ಮನೆ ಬಿಗಿಯಪ್ಪಿಕೊಂಡು ॥೫೦೦॥

ಹಿಡಿದಳು ರಾಹು ಚಂದ್ರನ ಹಿಡಿವಂದದಿ
ಹಿಡಿದಳು ರತ್ನಿ ರಾಮುಗನ ।
ಬಿಡು ಬಿಡು ರತ್ನಮ್ಮ ಹಿಡಿಯ ಸಲ್ಲದು ನಿನ್ನ
ಒಡಲ ಬಳಿಯ ಬಂದ ಮಗನು ॥೫೦೧॥

ನಿನ್ನ ಕೂಡಲು ಕುಂದು ಬಾಹುದು ಚಿಕ್ಕಮ್ಮ
ಎನ್ನ ಪಾಪಕೆ ಎಳಸುವರೆ ।
ಮುನ್ನ ಸ್ವರ್ಗದ ಯವರಾಜ ಹಿಡಿದು ಎನ್ನ
ಚಿನ್ನ ಪುತ್ಥಳಿಯಪ್ಪಿಸುವನು ॥೫೦೨॥

ಹೊಸಮಲೆದುರ್ಗ ನಿನ್ನೋಲಶವ ಮಾಡಿಸುವೆನು
ದೆಸೆಯ ಮನ್ನೆಯರ ತೋರಿಸುವೆ ।
ಇಸವನುಯಿಕ್ಕಿ ಕಂಪಿಲನ ಕೊಲ್ಲಿಸುವೆನು
ಹೊಸಪಟ್ಟ ನಿನಗೆ ರಾಮಯ್ಯ ॥೫೦೩॥

ಏಕಾಂತದಲ್ಲಿ ಕಂಪಿಲಗೆ ಹೇಳಿಸಿ ನಾನು
ಬೇಕಾದುದನು ಕೊಡಿಸುವೆನು ।
ಸಾಕಿಕೊಳ್ಳೆಲೊ ಎನ್ನ ಕಾತರ ತಂಬಿಸೊ
ಲೋಕೈಕವೀರ ರಾಮುಗನೆ ॥೫೦೪॥

ಸಾವ ಮದ್ದನೆಯಿಕ್ಕಿ ಕೊಲಿಸುವೆ ಕಂಪಿಲನ
ಹಾವುಗಳನು ಮೇಲೆ ಹಾಕಿ ।
ಭೂಮಿಯೊಳಗೆ ನಾನು ಹೆಂಡತಿ ನೀ ಗಂಡ
ತೀವಿ ರಾಜ್ಯವನಾಳಬಹುದು ॥೫೦೫॥

ಎನ್ನಯ ಮುಂದೆ ಅಪ್ಪಾಜಿಯ ಕೊಂದೆನೆಂಬೊ
ಇನ್ನು ಈ ನುಡಿಬೇಡ ತಾಯೆ ।
ಪನ್ನಗಧರನಾಣೆ ಇದ ಕೇಳಬಾರದು
ಕರ್ಣವ ಮುಚ್ಚಿದ ರಾಮ ॥೫೦೬॥

ಒಂದು ನುಡಿದರೊಂದು ನುಡಿವುದು ಉಚಿತವೆ
ಇಂದು ವಿರಹವ ತಾಳಲಾರೆ ।
ನೊಂದೆನೊ ಬಹಳದಿ ಮಾತಿನ ವಾಸಿಯ
ತಂದುಕೊಯೆಂದು ನುಡಿದಳು ॥೫೦೭॥

[ಮಂದಿಯ]ರಿಯೆ ನಿನ್ನ ಕಂದನೆಂಬುದು ನಾನು
ಸಂದೇಹ ಬೇಡೆಲೆ ತಾಯೆ ।
ಮುಂದುಗೆಡುವರೆ ಬಲ್ಲ[ವ]ರಿಗಿದುಚಿತವೆ
ಎಂದು ಗರ್ಜಿಸಿ ನೂಕಿದನು ॥೫೦೮॥

ಎದ್ದಳು ಬಿದ್ದಳು ಚರಣಕೆ [ರತ್ನಾಜಿ]
ಎದ್ದು ಹಾರಿದನು ಕೈಯೊಡನೆ ।
ಹೊದ್ದಿದೆ ಪಾತಕ ಶಿವ ಶಿವ ಎನುತಲಿ
ಮುದ್ದು ರಾಮುಗ ಮನದೊಳಗೆ ॥೫೦೯॥

ಎದ್ದು ಭರಕೆ ಹದಿನಾರು ತುಂಡಾಗಿ
ಬಿದ್ದವು ಕೊರಳ ಹಾರಗಳು ।
ಹೆದರಿ ಹಮ್ಮೈಸಿ ರತ್ನಾಜಿ ಬೇಗದಿ
ಗದಗಂಪಿಸಿ ಎದೆನಡುಗಿ ॥೫೧೦॥

ಇನ್ನೇಕೆ ರಾಮನ ಹಂಬಲೆನುತ ರತಿ
ಕೆನ್ನೆಯ ಮೇಲೆ ಕರವಿಟ್ಟು ।
ಮನ್ನಿಸಿ ಮಾತಾಡೊ ಕರ ಪಾಪಿಯೆನುತಲಿ
ಕನ್ನೆ ರತ್ನಾಜಿಯಾಡಿದಳು ॥೫೧೧॥

ದಿಟ್ಟಿಸಿ ನೋಡಿ ಮಾತಿಗೆ ಮಾತನಾಡಳು
ನೆಟ್ಟನೆ ಮುನಿಸಿದಂತಿಹಳು ।
ಬಟ್ಟ ಕುಚವ ತೋರುವಳೆದೆಗೆಡಹೇಳಿ
ದಿಟ್ಟ ಕುಮಾರರಾಮನಿಗೆ ॥೫೧೨॥

ಕೊಂದು ಹೋಗೆಲೊ ರಾಮ ನಿಂದು ಸೈರಿಸಲಾರೆ
ಮುಂದುಗೆಟ್ಟೆನೊ ವಿರಹದಲಿ ।
ತಂದೆಗೆ ರಾಣಿಯಲ್ಲವೊ ನಾನೀಗಲಿ
ಅಂದವನುಳ್ಳ ಮನಸಿಜನೆ ॥೫೧೩॥

ಹಿಡಿದ ಮಂಡೆಯ ಬಿಟ್ಟು ಕಡು ನೊಂದು ರತ್ನಮ್ಮ
ಬಿಡದೆ ಬಿದ್ದಳು ಚರಣದಲಿ ।
ಕಡುಗಲಿ ರಾಮಯ್ಯ ನಿನ್ನ ಮುಂದೀಗಲೆ
ಬಿಡುವೆನೊ ಪ್ರಾಣವನೆನುತ ॥೫೧೪॥

ಚಿತ್ತವರಿತು ಒಪ್ಪತ್ತಿನ ಭೋಗವ
ನಿತ್ತು ಮನ್ನಿಸಿ ಮಾತನಾಡೊ ।
ಮುತ್ತು ಮಾಣಿಕ ನವರತ್ನ ಬಂಗಾರವ
ನಿತ್ತು ಮೆನ್ನಿಸಿ ಕಳುಹುವೆನು ॥೫೧೫॥

ಕಲ್ಯಾಣದೊಳು ತಳವಾರ ರಾಮನ ರಾಣಿ
ಅಲ್ಲಿ ಚಿಕ್ಕಯ್ಯನ ಭ್ರಮಿಸೆ ।
ಒಲ್ಲದ ಕಾರಣ ತಲೆ ಹೋಯಿತೊ ರಾಮ
ಮೆಲ್ಲನೆ ಮುಂದಣೆಚ್ಚರಿಕೆ ॥೫೧೬॥

ವಿಟನೊಲಿದರೆ ರಾಣಿ ನಟನಿ[ಸೆ] ಬಹಳ
ಪುಟವೇರಿದ ಚಿನ್ನದಂತೆ ।
ವಿಟನೊಲಿಯ[ದೆ] ರಾಣಿ ತಾನೀಗ ಒಲಿದರೆ
ಕಟಕದೊಳ್ ನರಿ ಸಿಕ್ಕಿದಂತೆ ॥೫೧೭॥

ಮೆಟ್ಟಿ ಕೊರಳ ಕೊಯಿಸದೆ ಬಿಡೆ ನಿನ್ನ
ಸೃಷ್ಟಿಯೊಳಗೆ ಪೊಸತೆನಿಸಿ ।
ಕಟ್ವಾಳು ರಾಮನು ಬಿಟ್ಟು ಹೋದನುಯೆಂದು
ದಿಟ್ಟತನದಿ ಗದರಿದಳು ॥೫೧೮॥

ಗದರಿದ ಬಿರಿಸಿಗೆ ಹದಿನಾರು ತುಂಡಾಗಿ
ಕೆದರಿತು ರತ್ನದ ಹಾರ ।
ಕದನ ಪ್ರಪಂಡ ಎನ್ನೊಳು ಛಲಬೇಡೆಂದು
ಹೃದಯದಿ ಮುಂದಣೆಚ್ಚರಿಕೆ ॥೫೧೯॥

ಬಿಡು ಹೋಗೆನುತ ಕಡು ಕೋಪದಿಂದಿ
ತಡೆಯದೆ ಒಳೆಯಕ್ಕೆ ಪೊಕ್ಕ ।
ಕಡುಗಲಿ ರಾಮಯ್ಯ ಚೆಂಡನು ತೆಕ್ಕೊಂಡು
ಗಡಣದಿಂದಲಿ ಹೊರಹೊಂಟ ॥೫೨೦॥

ನಿಲ್ಲದೆ ಬೇಗದಿ ಹೊರಟನು ರಾಮಯ್ಯ
ಎಲ್ಲಿಯ ಕಂಟಕವೆನುತ ।
ಬಲ್ಲಂತೆ ಮಾಡೊ ಜಟ್ಟಂಗಿಯ ಲಿಂಗವೆ
ಕೊಲ್ಲು ನೀ ಕಾಯೊ ಎಂದೆನುತ ॥೫೨೧॥

ರಾಮರಾಮಾ ಹೊಂದಿತು ಪಾಪವೆನುತಲಿ
ಕಾಮಿನಿಯನು ಬಿಟ್ಟು ಹೊರಟ ।
ಭೂಮಿದೇವತೆ ಬಲ್ಲಳು ನಾನಿದಕಂಜೆ
ಸೋಮಧರನು ಶಿವ ಬಲ್ಲ ॥೫೨೨॥

ಸತ್ಯಸಾಗರ ಬಲ್ಲನೆನುತಲಿ ರಾಮಯ್ಯ
ಪೃಥ್ವಿಗಧಿಕ ನಡೆತಂದ ।
ಮೃತ್ಯುದೇವತೆ ಬಲ್ಲಳು ನಾನಿದಕಂಜೆ
ಪೃಥ್ವಿದೇವತೆ ಬಲ್ಲಳೈಸೆ ॥೫೨೩॥

ಬಳಲುದ ನೋಡಿ ಮರುಗು ಬಾ ರಾಮಯ್ಯ
ಕಳವಳಗೊಂಡು ಕಾತರ(ಸಿ) ।
ಅಳಲಿದೆ ಬಳಲಿದೆ ತಾಳೊ ತಾಳೆನುತಲಿ
ಇಳೆಪತಿ ಕಂಪಿಲನರಸಿ ॥೫೨೪॥

ಕಿವಿಗೆ ಶೋಭಿತವಾಗೆ ನಿನ್ನನು ಕೊಲಿಸುವೆ
ಎವೆಯಾಡುವಷ್ಟರೊಳೀಗ ।
ಭುವನದೊಳಗೆ ನಿನ್ನ ಹೆಸರನು ಮಾಡುವೆ
ಜವನ ಕೋಪದಿ ರತ್ನಿ ನುಡಿಯೆ ॥೫೨೫॥

ಹರಿಯಮ್ಮನಾಣೆ ಕಂಪಿಲನ ಪಾದದಾಣೆ
ಹರಿಯಜ ಪರಶಿವನಾಣೆ ।
ತಿರಿಗೆನ್ನ ನೋಡೆಲೊ ಪಾತಕಯೆನುತಲಿ
ಮೊರೆಯಿಟ್ಟು ಮೂರ್ಛೆಲಿ ಬೆರೆಯೆ ॥೫೨೬॥

ಚಿತ್ರಗುಪ್ತರು ಬಲ್ಲರು ನಾನಿದಕಂಜೆನು
ಮೃತ್ಯುದೇವತೆ ಬಲ್ಲಳೈಸೆ ।
ಸತ್ಯಸಾಗರ ಬಲ್ಲನೆನುತಲಿ ರಾಮಯ್ಯ
ಪೃಥ್ವಿಗಧಿಕ ನಡೆತಂದ ॥೫೨೭॥

ಹಿಂದಕ್ಕೆ ತಿರುಗಿ ಬಂದನು ರಾಮನಾಥನು
ಸಂಧಿಸಿ ಬೀಗವಿಕ್ಕಿರಲು ।
ಕಂದರ್ಪಹರ ಬಲ್ಲನೆನುತಲಿ ಮುಟ್ಟದ
ಚಂದದಿ ಬೀಗ ಕಡೆಗಾಯ್ತು ॥೫೨೮॥

ಅದು ದಾಂಟಿ ಬೆಳ್ಳಿಯ ಅಗಸಿಗೆ ಬರಲಾಗ
ಕದವು ಬಲಿದಿರೆ ರಾಮ ಕಂಡು ।
ಮದನಹರನು ಬಲ್ಲನೆನುತ ಬೀಗವ ಮುಟ್ಟೆ
ಕದಲಿ ಬಿದ್ದವು ನಾಲ್ಕುದೆಸೆಗೆ ॥೫೨೯॥

ಇತ್ತ ಬಂದನು ಹೊರಬಾಗಿಲ ದಾಂಟಿಯೆ
ಸುತ್ತ ನೋಡಿದರೆ ಆರಿಲ್ಲ ।
ಚಿತ್ತಜ ಹರಬಲ್ಲನೆನುತಲಿ ರಾಮಯ್ಯ
ಪೃಥ್ವಿಗಧಿಕ ನಡೆತಂದ ॥೫೩೦॥

ಬಂದನು ರಾಮಯ್ಯ ಆಡುವ ಬೀದಿಗೆ
ನಿಂದು ಮನ್ನೆಯರ ನೋಡಿದನು ।
ಇಂದುಧರನ ಕರುಣದಿ ಬಂದೆನೆನುತಲಿ
ಚಂದದಿ ಅವರೊಳು ಪೇಳೆ ॥೫೩೧॥

ಆಟದ ಮಾನ್ಯರ ಕಳುಹಿದ ರಾಮಯ್ಯ
ಪಾತಕದವರ ಕಳುಹಿದನು ।
ಕಾಟಣ್ಣನ ಕಳುಹಿದನು ರಾಮಯ್ಯನು
ಕೋಟಲೆಯಲಿ ಪೊಕ್ಕ ಮನೆಯ ॥೫೩೨॥

ಪರನಾರಿಯರ ಸಹೋದರರನೆಂಬ ಭಾಷೆಯ
ಒರೆದು ನೋಡಿದ ಶಿವನಲ್ಲಿ ।
ಕಿರಿ ಅಮ್ಮ ನುಡಿದಳೆಂತೆಂಬುದ ಶಿವ ನನ್ನ
ಪರಿಹರಿಸುವುದು ಪಾತಕವ ॥೫೩೩॥

ಮೆಲ್ಲನೆ ಕಣ್ದೆರೆದೆದ್ದು ರತ್ನಾಜಿಯು
ಎಲ್ಲಿ ಹೋದೆನೊ ಎಂದೆನುತ ।
ಕಲ್ಲು ಮನದ ರಾಮ ಒಲ್ಲದೆ ಹೋದನೆಂ
ಬಲ್ಲಿಗೆ ಸಂಧಿ ಒಂಬ[ತ್ತು] ॥೫೩೪॥

ಅಂತು ಸಂಧಿ ೯ಕ್ಕಂ ಪದನು ೧೪೨೦ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೧೦

❖

ನೆಲಮಾಳಿಗೆಯಲ್ಲಿ ಕುಮಾರರಾಮ

ಶ್ರೀ ಗಿರಿಜಾಸ್ಯಾಂಬುಜ ದಿನನಾಯಕ
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗಕುಂಡಲನೆ ಶರಣಾರ್ಥಿ ॥೧॥

ಎಚ್ಚತ್ತು ಎಡಬಲ ನೋಡಿದಳು ರತ್ನಾಜಿ
ಹುಚ್ಚುಕೊಂಡಂತೆ ಅರಸುತಲಿ ।
ಎಚ್ಚತ್ತು ಅರಮನೆಯನೆಲ್ಲವ ನೋಡಿ
ನಿಶ್ಚೈಸಿ ಬೆರಗಾಗಿ ನಿಂದು ॥೨॥

ಎಲ್ಲಿಗೆ ಹೊದೆಯೊ ಎನ್ನ ಸ್ಮರರೂಪನೆ
ಬಲ್ಲರ ಭಾಗ್ಯದ ನಿಧಿಯೆ ।
ನಲ್ಲ ಬಾರೆಂದು ಕೂಗಿ ಬೊಬ್ಬಿರಿದಳು
ತಲ್ಲಣಿಸುತ ಮನದೊಳಗೆ ॥೩॥

ವಿರಸವೇತಕೊ ಎನ್ನ ಜರೆದು ನೀ ಹೋದೆಯೊ
ಅರಿಯಬೇಕೆಂದಡಗಿದೆಯೊ ।
ಅರಸಬೇಕೆನುತಲಿ ಮರೆಯಲಿ ನಿಂದೆಯೊ
ಪುರುಷರತ್ನವೆ ಎನ್ನ ಕರೆಯೊ ॥೪॥

ಹಾ ! ಎನ್ನ ಮನೋಹರ ಹಾ ! ಎನ್ನ ಸುಕುಮಾರ
ಹಾ ! ಎನ್ನ ಮನಸಿಜರೂಪ ।
ಹಾ ! (ನಿ)ನ್ನ ಜೋಡಿಲಿ [ಅ]ಗಲಿ ಬಾಳುವುದೆಂ [ತು]
ಹಾ ! ಎಂದು ಹಂಬಲಿಸಿದಳು ॥೫॥

ಬಾ ಬಣ್ಣ ದುಟಿಯಮೃತವನುಣಿಸುವೆ [ನೀಗ]
ಬಾ ಬಾರೊ ಎನ್ನ ಸವಿಗಾರ ।
ಬಾ ಬಾರೊ ಎನ್ನ ರೂಪಿನ ಗಿಳಿರಾಮನೆ
ಬಾ ಬಾರೊ ರತ್ನಿ ಕರೆದಳು ॥೬॥

ಬಾ ರೂಪದೋರದೆ ಆಡಗುವುದುಚಿತವೆ
ಬಾರೆನ್ನ ಗುಣದೋಷವರಿಯೊ ।
ಬಾರೆನ್ನ ಮನೋಹರ ಬಹು [ಬೇಗದಿಂದ]
ಬಾರೆನ್ನ ಮನದ ಮೋಹನಾ ॥೭॥

ಕರೆದು ಕಾತರದಿಂದ ಕಂಗೆಟ್ಟು ರತ್ನಾಜಿ
ಸೊರಗಿದ ವಿರಹತಾಪದಲಿ ।
ಮರುಗಿ ಸಂಗಾಯಿಯ ಮುಖನೋಡಿ ರತ್ನಮ್ಮ
ಅರಮತಿ ಮುನ್ನ ನಾನೆನುತ ॥೮॥

ಆರ ಮೋಹವನಗಲಿಸಿದೆನೊ ನಾ ಮುನ್ನ
ಆರ ತಪವ ಕೆಡಿಸಿದೆನೊ ।
ಆರಿಗೆ ಮಾತನು ಕೊಟ್ಟು ನಾ ತಪ್ಪಿದೆನೊ
ಮಾರಸನ್ನಿಭ ದೊರೆಯಲಿಲ್ಲ ॥೯॥

ಮದನ ನಿನ್ನಯ ಮನೆ ಮಂಟೆಯಾಗಲಿ ರಾಮ
ವಿಧಿಯು ನಿನ್ನಯ ಬೆಸುಗೆ ಅರಿಯೆ ।
ಮೊದಲೆನ್ನ ಪಣೆಯಲಿ ಬರೆದಿರ್ದ ಬ್ರಹ್ಮನ
ಸುದತಿ ಶಿರವು ಹೋಗಲಿಂದು ॥೧೦॥

ನಾನು ರಾಮನ ಕೂಡ ಸೆಣಸುವಾಗಲೇ ಸಂಗಿ
ನೀನೆನ್ನ ಬಳಿಯಿರಲಿಲ್ಲ ।
ನಾನಾ ಕಾಲವು ನಾನು ಬಯಸಿದ ಬಯಕೆಯು
ಏನು ಕೈಸೇರಿದುದಿಲ್ಲ ॥೧೧॥

ಆಗಲೆ ಕರೆದು ಹೇಳಿದುದಿಲ್ಲ ರತ್ನಮ್ಮ
ಈಗಲಿ ಬಳಲಿ ಬಯಸುವರೆ ।
ಸೋಗೆಂಗಳೆ ಚೆಲ್ವ ರಾಮಯ್ಯ ಬರುವನೆ
ಹೋಗಲೇತಕೆ ಮರೆಯೆ [ನಲು] ॥೧೨॥

ಎಂತು ಮರೆಯಲಿ ಸಂಗಿ ಎನ ಕಾತರವನು
ಪಂಥದ ರಾಮನ ಆಗಲಿ ।
ಎಂತು ಕಾಲವು ಬಯಸಿದೆ ಬಯಕೆಯ ನಾನು
ಚಿಂತೆ ಪರಿಹರವಾಗಲಿಲ್ಲ ॥೧೩॥

ಅಳಲಿ ರತ್ನಮ್ಮ ಉಪ್ಪರಿಗೆಯನೇರಿಯೆ
ಮಲಗುವ ಸಜ್ಜೆ ಗೃಹದೊಳಗೆ ।
ಕೆಲಬಲದಲ್ಲಿಯು ಅರಸಿ ಮಂಚವ ನೋಡಿ
ಲಲನೆ ಸಂಗಿಯ ಕರೆದಳು ॥೧೪॥

[ಏ]ರುಂಡ ಹುಲಿಯಂತೆ ಚೀರಿ ನೆಲನ ಹೊಯ್ದು
ಮೀರಿದ ಘನಕೋಪದಲಿ ।
ಬೇರೆ ಬೇರೆಲ್ಲರ ಬೈಯ್ವುತ ಸುಯ್ವುತ
ನೀರೆ ಸ್ವೈವೆರಗಾಗಿ ನಿಂದು ॥೧೫॥

ನೆರೆ ನೋಂಪಿಯ ನೋಂತವರಿಗೆ ಸಿಕ್ಕುವ
ದೊರೆ ರಾಮನುಳಿದ ಪೆಣ್ಗಳಿಗೆ ।
ಕರಿಕಂಠನ ಪೂಜೆ ಮಾಡದ ಪಾಪಿಗೆ
ಬರಿದೆ ಬಯಸಿದವರಿಗುಂಟೆ ॥೧೬॥

ಹಿಡಿದು ಹಿಡಿಯಲಾರದೆ ಬಿಟ್ಟೆನು ನಾನು
ಕಡು ಪಾಪಿಗವನು ಸಿಕ್ಕುವನೆ ।
ಸುಡು ಇನ್ನೇತಕೆ ರಾಮನ ಹಂಬಲ
ಕೆಡಹಿ ಕೊರಳ ಕೊಯಿಸುವೆನು ॥೧೭॥

ಅತ್ತತ್ತು ಕಂಪಿಲನೆದೆಗೆ ಉಬ್ಬಸಮಾಡಿ
ಮತ್ತೆ ರಾಮನ ಹಿಡಿತರಿಸಿ ।
ಮೆಟ್ಟಿ ಕೊರಳ ಕೊಯ್ಸದಿದ್ದರೆ ಬಿಡೆನಿನ್ನು
ಉಟ್ಟುವು ನಿರಿಯಲ್ಲ ಸಂಗಿ ॥೧೮॥

ಕಟ್ಟಿದ ಸೂತ್ರ ಏಳೆಂಟು ತುಂಡನೆಮಾಡಿ
ಅಷ್ಟ ಕಾಂಚಿಯದಾಮವನ್ನು ।
ನಟಿಕೆಯಿಂದ ಮುರಿದು ಮುಂದಲೆ ಕೊಯ್ಕೊಂಡು
ಅಡಮಟಗಳ ಮಾಡುತಿಹಳು ॥೧೯॥

ಹಾರವ ಪರಿದಿಟ್ಟು ಸೀರೆಯ ಸೆರಗನು
ನಾರು ಸೀಳಿದಂತೆ ಸೀಳಿ ।
ತೋರಮುಡಿ ಬಿಚ್ಚಿ ಕರುಳನೆಲ್ಲವ ಕಿತ್ತು
ಮಾರಿಯಂದದಿ ಮೊರೆವುತಲಿ ॥೨೦॥

ಚೆಕ್ಕೆಂದು ಕೊಲೆಯನು ಕೊಲಿಸುವೆ ನಾನೆಂದು
ಉಕ್ಕುವ ಕೋಪದಿ ರತ್ನಿ ।
ಠಕ್ಕು ವೇಷವ ತಾಳಿ ಕರಿಯಬಂಟನ ಕೊಂದ
ರಕ್ಕಸಿಯಂತೆ ಒಪ್ಪಿದಳು ॥೨೧॥

ಹೊಸ ಗಾಯಗಳು ಎಸೆದವು ನಖರೇಖೆಯು
ಅಸಿಯಳ ತೋಳು ತೊಡಯಲಿ ।
ಹುಸಿಯ ದಿಟವ ಮಾಡಿ ಕೊಲಿಸುವೆನೆನುತಲಿ
ಮಸೆದಳು ದಂಡಾಯುಧವ ॥೨೨॥

ಮುತ್ತನೆಲ್ಲವ ಪರಿದಿತ್ತರದಲಿ ಚೆಲ್ಲಿ
ಮತ್ತೆ ಬಳೆಯನೊತ್ತಿ ಒಡೆದು ।
ಒತ್ತಿಕೊಂಡಳು ಉರದಲಿ ನಖರೇಖೆಯ
ಚಿತ್ತಿನಿ ರತ್ನಿ ಕುಟಿಲದಲಿ ॥೨೩॥

ಮದ್ದು ಹಣೆಗೆ ಪೂಸಿ ಮಂಚದ ಮೇಲಿನ್ನು
ಹೊದ್ದಿ ಕಿಚ್ಚಿಗೆ ಬೆನ್ನ ಕಾಸಿ ।
ಒದ್ದೋದ ರಾಮನು ಗಾಸಿಮಾಡಿದನೆಂದು
ಬಿದ್ದ ಹಚ್ಚಡವನು ಕವಚಿ ॥೨೪॥

ದುಗುಡವ ತಾಳಿ ಮಂಡೆಯನು ಕಟ್ಟಿದಳಾಗ
ಅಗಡ ಮಾಡಿಯೆ ಕಳವಳಿಸಿ ।
ತಗಡು ಚಿನ್ನದ ಪುತ್ಥಳಿ ಪಾದರಸದಲಿ
ಬಗೆಯಳಿದಂತೆ ತಲೆವಾಗಿ ॥೨೫॥

ಬೆಟ್ಟದ ಮೇಲೆ ಬೇಟೆಯನಾಡಿ ಕಂಪಿಲ
ಬಿಟ್ಟನು ಮೊಲಕೆ ನಾಯಿಗಳ ।
ಹುಟ್ಟಿತು ವಿರಹಾಗ್ನಿ ರತ್ನಿಯ ನೆನೆಯಲು
ಕೆಟ್ಟಿತು ಬೇಂಟೆಯ ಅರ್ತಿ ॥೨೬॥

ಎಡಬಲದಲಿ ಪಡೆ ಬಳಲಿ ಬೇಂಟೆಯನಾಡಿ
ಕಡು ಬೆವರಿಲಿ ಬಳಿವಿಡಿದು ।
ಹಿಡಿದ ಚಿನ್ನದ ಕಾಳೆ ರವದಿಂದ ಕಂಪಿಲ
ನಡೆದನು ಬೇಂಟೆಯ ಬಿಟ್ಟು ॥೨೭॥

ಹೊಡೆವ ತಮ್ಮಟಿ ಭೇರಿ ಹಿಡಿವ ಉಕಡಗಾಳೆ
ಬಿಡದೆ ಪಾಠಕರು ಉಗ್ಗಡಿಸೆ ।
ಪಡುವಣ ಸೂರ್ಯನು ಇಳಿವಂತೆ ಕಂಪಿಲ
ಒಡೆಯ ಹೊಕ್ಕನು ಕುಮ್ಮಟವ ॥೨೮॥

ಲಕ್ಷ ಮಂದಿಯು ನಾಲ್ಕುಸಾವಿರ ಕುದುರೆಯು
ಸೊಕ್ಕಿದ ಗಜಯೆಂಟುನೂರು ।
ಉಕ್ಕುವ ವೈರಿರಾಯರಗಂಡ ಕಂಪಿಲ
ಹೊಕ್ಕನು ಬಂದು ಕುಮ್ಮಟವ ॥೨೯॥

ಬಂದು ಹಜಾರದ ಮುಂದೆ ನಿಂದನು ರಾಯ
ಮಂದಿ ಮಾರ್ಬಲವ ನೋಡಿದನು ।
ನೊಂದು ಬಳಲಿ ಬೇಂಟೆಯನಾಡಿದಿರೆಂದು
ನಿಂದೆಲ್ಲರ ಕಳುಹಿದನು ॥೩೦॥

ಕರೆಸಿದ ಬಾದುರಖಾನನ ಕಂಪಿಲ
[ಪಿ]ರಿ ಬೇಂಟೆಯಹುದೆ ಹೇಳೆನಲು ।
ಕರಿ ಸಿಂಹ ಶಾರ್ದೂಲ ಸಾರಂಗ ಹಂದಿಯು
ಮೊರೆವ ಹುಲಿಯು ಮೊಲ ಹರಿಣ ॥೩೧॥

ನುಡಿಯೆನು ಷಡುಚಕ್ರವರ್ತಿ ದಶರಥರಾಯ
ಷೊಡವಿಪ [ರೋಲು] ಬೇಂಟೆ[ಯನೆ] ।
ನಡೆಯಿರಿ ತುಳುವ ಎಕ್ಕಟಿಗ ನಾಯಕರೆಂದು
ಒಡೆಯ ಕಂಪಿಲ ಕಳುಹಿದನು ॥೩೨॥

ದೇವ ಕಂಪಿಲ ಬೇಂಟೆಯನಾಡಿ ಬರಲಾಗ
ಭಾವಕಿ ಹರಿಯಲದೇವಿ ।
ತೀವಿದ ಮುತ್ತಿನಾರತಿ ಹರಿವಾಣದಿ
ಭಾವೆಯೆತ್ತಿದಳವರಸನಿಗೆ ॥೩೩॥

ಹರಿಯಲದೇವಿ ಹಂಪಾಜಿ ಕನ್ನಾಜಿಯು
ನೆರೆ ತಿಗುಳ [ರ] ಸಂಗಾಯಿ ।
ವಿರುಪಾಯಿ ಮೊದಲಾದ ಸರಿರಾಣಿವಾಸವು
ಹರಿವಾಣದಾರ್ತಿ ಎತ್ತಿದರು ॥೩೪॥

ಚಿತ್ತದೊಲ್ಲಭೆ ಬರಲಿಲ್ಲವೆನುತ ರಾಯ
ಒತ್ತಿ ನಡೆದನು ಕೋಪದಲಿ ।
ಮತ್ತೆ ಮನದಿ ರತ್ನಿಯ ಮೇಲಣ ಭ್ರಾಂತು
ಚಿತ್ತದಿ ಭಾವಿಸಿಕೊಳುತ ॥೩೫॥

ಮಾನಿನಿ ಮುನಿದಳೆನುತ ಕಂಪಿಲರಾಯ
ತಾನೈದಿದ ಅರಮನೆಗೆ ।
ಏನ ಬೇಡಿದನೀವೆನೆನುತಲಿ ಕಂಪಿಲ
ಖಿನ್ನ ಮುಖದಿ ರತ್ನಿ ಬಳಿಗೆ ॥೩೬॥

ಚಿಕ್ಕ ರಾಣಿಯ ಮನೆಗೆ ಕಂಪಿಲ ಬರುವಾಗ
ಇಕ್ಕಿತು ಗೌಳಿಯ ಶಕುನ ।
ಮುಕ್ಕಣ್ಣ ಶಿವಬಲ್ಲನೆನುತಲಿ ಕಂಪಿಲ
ಹೊಕ್ಕನು ರತ್ನಿಯ ಮನೆಯ ॥೩೭॥

ಕಂಡನು ರತ್ನಿಯ ಮಲಗುವ ಮಂಚವ
ದಿಂಡೆ ಸಂಗಿಯು ನಿಂತಿರುವ ।
ಕಂಡನು ಅವಿಚಾರ ಭಾವನು ಕಂಪಿಲ
ಕಂಡಿದೇನೆಂದು ನುಡಿಸಿದ ॥೩೮॥

ಯಾಕೆ ಮಾಸಿದ ಸೀರೆ ಯಾಕೆ ಹಣೆಯ ಮದ್ದು
ಯಾಕೆ ಹೆಣೆದ ಜಡೆ ನಿನಗೆ ।
ಯಾಕೆ ಬಿಚ್ಚೋಲೆಯೆನುತ ಕಂಪಿಲರಾಯ
ಆಕೆಯನಿರದೆ ಕೇಳಿದನು ॥೩೯॥

ಒಗತನವನು ಮಾಡಲರಿಯೆನು ನಾನೀಗ
ಮಗ ತಂದೆಗೊಬ್ಬ ಹೆಣ್ಣುಂಟೆ ।
ವಿಗಡ ಬುದ್ಧಿಯ ಮಾಡಿ ಹೋದನು ರಾಮಯ್ಯ
ನಗೆಪಾಟಲಾದೆ ಧರೆಯೊಳಗೆ ॥೪೦॥

ಗಂಡನೊಳಗೆ ಹೇಳೆ ಭಂಡೆಯೆಂಬರು ಈಗ
ಬಂಡಾದೆನೊ ಲೋಕದೊಳಗೆ ।
ಚೆಂಡ ಬಿದ್ದ ನೆವದಲಿ ರಾಮನು ಬಂದು
ಬಂಡುಮಾಡಿದ ಮೈಯಕೆಡಿಸಿ ॥೪೧॥

ಮಂಡೆಯ ಹಿಡಿದೆಳೆದರೆ ನಾನೊರಲಿದೆ
ದಿಂಡುಗೆಡದೆ ನೆಲದೊಳಗೆ ।
ಮಂಡಲದೊಳಗಪಕೀರ್ತಿಯಾಯ್ತೆಂದು
ಗಂಡ ಕಂಪಿಲಗೆ ಹೇಳಿದಳು ॥೪೨॥

ಕಾವಲಿ ದುರ್ಗಕೆ ಮತ್ತೊಬ್ಬರಿಲ್ಲವೆ
ಗೋವಳರನು ಇರಿಸಿದಿರಿ ।
ಜೀವವ ತೊರೆದರೆ ನೀವಿದನರಿ [ವಿ] ರಿ
ಸಾವೆನು ನಿಮ್ಮಾಣೆಯೆಂದು ॥೪೩॥

ಹೆಸರುಳ್ಳ ಮಗನೆಂದು ನಂಬಿದೊ ರಾಯನೆ
ಹೊಸ ಪರಿಯನು ಮಾಡಿದನು ।
ಅಸದಳವಲ್ಲವು ನಿನಗೆ ಕಂಪಿಲರಾಯ
ಸೊಸೆಯಾದೆನೊ ನಾನು ನಿನಗೆ ॥೪೪॥

ಬಸುರಿಲಿ ಬರನೇಕೆ ಮಗನಲ್ಲವೆಯೆಂದು
ಹೊಸೆದುಕೊಂಡಳು ಹೊಟ್ಟೆಯನು ।
ಹುಸುರಿದರಿದು ತಲೆಯನು ತರದಿದ್ದರೆ
ವಿಷವ ಕೊಂಬೆನೊ ನಿನ್ನಾಣೆ ॥೪೫॥

ಜೋಕೆಯುಳ್ಳ ಮಗನಾದರೆ ತಾ ತನ್ನ
ಏಕಸ್ತ್ರೀಯರ ಭೋಗಿಸುವುದು ।
[ಸೋಕಿ] ಪ್ರಾಣವ ತೊರೆದು ಪರಸ್ತ್ರೀಯರ
ನೂಕಿಹಿಡಿವರೆ ಮುಂದಲೆಯ ॥೪೬॥

ಗಂಡು ತನಕೆಯನ್ನ ಕಂಡಕಡೆಗೆ ನೂಂಕಿ
ಬಂಡುಮಾಡುವರೆ ಬಡವರ ।
ಗಂಡ ಮುಪ್ಪೆಂದು ಕಂಡವರ ಮನೆಗೆ ಬಂದು
ಹಿಂಡಿ ಹಿಪ್ಪೆಯ ಮಾಡಬಹುದೆ ॥೪೭॥

ಹಿಡಿದರೆ ಕೈಯನು ಬಿಡಿಸಿ ಕೊಂಡೆನು ನಾನು
ಒಡನೆ ಬೆನ್ನಟ್ಟಿ ತುಡುಕಿದನು ।
ಬಿಡು ಪಾಪಿ ಹರಿಯಲದೇವಿ ಸರಿ ಎಂದರೆ
ಕಡು ಪಾಪಿ ಪಾತಕಂಜುವನೆ ॥೪೮॥

ಒಲ್ಲೆನೆಂದರೆ ಬಲುಹಿಂದಲಿ ಹಿಡಿದೆನ್ನ
ಗಲ್ಲಕೆ ರೇಖೆಯೊತ್ತಿದನು ।
ಸಲ್ಲದು ಇದು ಮತವಲ್ಲವೆಂದರೆ ರಾಮ
ಚೆಲ್ಲಿದ ಹರಿದು ಮುತ್ತುಗಳ ॥೪೯॥

ಪುಸಿಯಲ್ಲ ನೋಡು ಪೊಂಬೊಗರೆಯ ಮೊಲೆ ಮೇಲೆ
ಹೊಸ ಗಾಯವನು ತೋರಿದಳು ।
ಸೊಸೆಯಾದೆ ರಾಮುಗನಿಂದಲಿ ನಿನಗಿಂದು
ಹೆಸರ ಹಿಡಿಯ ಬೇಡವೆನ್ನ ॥೫೦॥

ಹೂಳಿದ ಹೊನ್ನ ತೋರುವೆನೆಂದು ನಾನಿದ್ದೆ
ಈಗಲೆ ಸಾವೆ ನಿಮ್ಮಾಣೆ ।
ಇಳೆಯೊಳು ನಾಚಕೆ ಹೋಯಿತೆಂದೆನುತಲಿ
ಬಾಲೆ ಕಂಪಿಲಗೆ ಹೇಳಿದಳು ॥೫೧॥

ಎಂದ ಮಾತನು ಕೇಳಿ ಕಂಪಿಲರಾಯನು
ನೊಂದು ಕೋಪದಿ ಉರಿದೆದ್ದು ।
ಬಂದು ಬೈಚಪ್ಪನ ಕರೆದು ಏಕಾಂತಕೆ
ನೊಂದು ನುಡಿದನು ಕಂಪಿಲನು ॥೫೨॥

ಕರೆಸಿದಿರೇಕೆಂದು ಮಂತ್ರಿ ಬೈಚಪ್ಪನು
ಹೊರೆಯಲ್ಲಿ ನಿಂದು ಕೇಳಿದನು ।
ಧರೆಯೊಳಗಿಲ್ಲದ ಪಾಪವ ಮಾಡಿದ
ಹಿರಿಯಾಕೆಯ ಮಗ ರಾಮ ॥೫೩॥

ಮಗ ರಾಮ ಮಾಡಿದ ಹಗರಣವನು ಕೇಳು
ಜಗಕೊಂದು ಕಥೆಯ ಮಾಡಿದನು ।
ಜಗವು ಹೊರೆಯದಂಥ ಪಾಪವ ಮಾಡಿದ
ನಗೆಯ ಮಾಡಿದನು ರಾಮಯ್ಯ ॥೫೪॥

ಎತ್ತಣ ಮಾತು ಎನ್ನುತ ಬೈಚಪ್ಪನು
ಮತ್ತೆ ಕೇಳಿದನೊರೆದೊರೆದು ।
ಹೆತ್ತ ಮಗನು ಕೊಮಾರರಾಮಯ್ಯನು
ಚಿತ್ತದೊಳಗೆಣಿಸುವನಲ್ಲ ॥೫೫॥

ಯಾಕೆ ಕಂಪಿಲರಾಯ ಜೋಕೆಯು ನಿನಗಿದು
ಕಾಕು ಮಾಡುವರೆ ಬಲ್ಲವರು ।
ಸಾಕು ಸಾಕಪಕೀರ್ತಿ ಸಾರಿ ಬರುತಲದೆ
ನೀರಕರಿಸುತ ಮಾತನೆಂದ ॥೫೬॥

ಎಂದ ಮಾತನು ಕೇಳಿ ಕಂಪಿಲರಾಯನು
ನಿಂದು ಕೋಪದಲುರಿದೆದ್ದು ।
ಮುಂದುಗಾಣದೆ ಎನ್ನ ಜರಿವರೆ ಬೈಚಪ್ಪ
ಬಂದು ನೋಡುರಮನೆಯೊಳಗೆ ॥೫೭॥

ಮುದ್ದು ರಾಮನ ಮೇಲೆ ಯುದ್ಧ ಮಾತುಗಳೇಕೆ
ಕದ್ದು ಕಳವಳಿಸುವನಲ್ಲ ।
ಚಿದ್ರೂಪ ಶಿವಬಲ್ಲ ಚಿಕ್ಕಮ್ಮನೆಣಿಸನು
ಕ್ಷುದ್ರ ಮಾತುಗಳಾಡುವರೆ ॥೫೮॥

ಅಡವಿಗಿಚ್ಚೊಡಲ ಹೊಯ್ದಂತೆ ಕಂಪಿಲರಾಯ
ಸಿಡಿಮಿಡಿಯೊಳು ಗರ್ಜಿಸಿದ ।
ಪೊಡವಿಯೊಳಪಕೀರ್ತಿಗೊಳಗಾಗಿ ಒಡಲನು
ಹೊರೆಯಬಹುದೆ ಬೈಚಪ್ಪ ॥೫೯॥

ಪ್ರತ್ಯಕ್ಷ[ವನು] ಪ್ರಮಾಣಿಸಿ (ನೀ) ನೋಡಯ್ಯ
ಚಿತ್ತದೊಳತಿ ನೋಯಬೇಡ ।
ಮುತ್ತು ಪೋಣಿಸಿದಂತೆ ಮುನಿದು ಪೇಳುವರಯ್ಯ
ಮತ್ತೆ ಗಯ್ಯಾಳಿ ಹೆಣ್ಣುಗಳು ॥೬೦॥

ತಂದೆಯ ಕಾಲದ ಹಿರಿಯ ಪ್ರಧಾನನೆ
ಬಂದು ನೋಡರಮನೆಯೊಳಗೆ ।
ಕೊಂದು ರಾಮನ ಅಂಗವ ತೋರದಿದ್ದರೆ
ನಿಂದೆಯ ನೀನೆ ಮಾಡಿಸಿದೆ ॥೬೧॥

ಕಟಕಟ ಶಿವಶಿವಯೆನುತ ಕರ್ಣವ ಮುಚ್ಚಿ
ನಿಟಲಾಕ್ಷನೆ ಬಲ್ಲನೆನುತ ।
ಕುಡಿಲಗಾರ್ತಿಯ ಮಾತಿಗೆ ಮರುಳಾದರೆ
ದಿಟವಾಗದರಸೆ ಕೇಳೆಂದ ॥೬೨॥

ಅಟಅಟ ಕುಟಿಲ ಕುಹಕ[ವ] ದಿಟಮಾ[ಡುವ]
ತುಟಿ ಮಿಸುಕದೆ ಕೌಟಲೆಯ ।
ವಿಟರಾ[ಮಿ] ಮಾಡಿದ ಕೋಟಲೆಯ[ವ] ನೀನು
ಕಟಕದೊಳ್ ನರಿ ಸಿಕ್ಕಿದಂತೆ ॥೬೩॥

ಹೆಣ್ಣಿನ [ಅ]ಳಲು ಕೇಳುವರೇನೊ ಕಂಪಿಲ
ಬಣ್ಣದ ಮಾತನಾಡುವರು ।
ಉಣ್ಣದ ಕರು[ವ]ನು ಉಣಿಸುವರು ಜಗದೊಳು
ಗಣ್ಯವೆ ರಾಯ ಚಿತ್ರೈಸು ॥೬೪॥

ಮುರಹರನೆದೆಯಲಿ ಘಳಿಲನೆ ಕುಳಿತರು
ಸರಸಿಜಭವನ ಜಿಹ್ವೆಯಲಿ ।
ಕರದಲಿ ಮುದ್ರಿಕತ್ವವ ಮಾಡಿ ಧರೆಯೊಳು
ಮೆರೆದರುನರರ ಪಾಡೆನು ॥೬೫॥

ಹರನರ್ಧದೇಹವ ಸೂರೆಯಗೊಂಡರು
ಸುರಪ [ನಂ]ಗದ [ತುಂಬ]ಭಗವ।
ಸ್ಥಿರವಾಗಲೆಂದು ತಾ [ಪಂಥ]ವ ಕಟ್ಟಿದ
ಪರಿಯ ನಾರಿಯ ಕುಟಿಲಗಳು ॥೬೬॥

ಒಡೆಯನ ಮಾತ ಮೀರದೆ ಬೈಚಪ್ಪನು
ಹಿಡಿಯಬೇಕೆನುತ ರಾಮುಗನ ।
ಕಡುಗಲಿ ರಾಮಯ್ಯ ಕೈದುವ ಕೊಂಡಡೆ
ಪೊಡವಿಯೊಳಗೆ ಎದುರಿಲ್ಲ ॥೬೭॥

ಎಂದು ಮನದೊಳು ಅಚ್ಚರಿಬಟ್ಟನು ಮಂತ್ರಿ
ಮುಂದಣ ಕಾರ್ಯ ಹೇಳೆನಲು ।
ಚಂದ್ರಧರನು ಬಲ್ಲ ಪುಸಿಯಲ್ಲ ರಾಮನ
ಕೊಂದಲ್ಲದೆ ಬರಬೇಡ ॥೬೮॥

ಕಾಲನೇಮಿಯ ಗಂಡ ಭೂಲೋಕಧರ ಗಂಡ
ಬಾಲ ಕುಮಾರ ರಾಮಯ್ಯ ।
[ವಳ್ಲಿ] ಕೊಲ್ಲಬೇಕೆನುತಲಿ ಕಂಪಿಲ
ಲೋಲ ಮಂತ್ರಿಯೊಳು ನುಡಿದನು ॥೬೯॥

ಕಾಣಬಹುದು ಮಂತ್ರಿ ನಿನ್ನ ಮಾತುಗಳನು
ಮಾಣದೆನ್ನನು ಕೊಂದು ಅವಗೆ ।
ಕೇಣವಿಲ್ಲದೆ ಪಟ್ಟವ ಕಟ್ಟು ಎನಲಾಗ
ಉಣೆಯನಾಡಿ ಗರ್ಜಿಸಿದ ॥೭೦॥

ಕಂಪಿಲರಾಯನು ನುಡಿದ ಮಾತನು ಕೇಳಿ
ಸೊಂಪಡಗಿದ ಮುಖಬಾಡೆ ।
ಇಂಪುಳ್ಳ ರಾಮನ ಕೊಲುವುದಕ್ಕೆ ನಿರೂಪ
ಕಂಪಿಲರಾಯ[ನು] [ನೀ] ಡೆ ॥೭೧॥

ಒಡೆಯನ ಮಾತ ಮೀರದೆ ಬೈಚಪ್ಪನು
ಹಿಡಿಯಬೇಕೆಂದು ರಾಮಯ್ಯ ।
ಕಡುಗಲಿ ಕುಮಾರ ಕೈದುಡುಕಲು ನಾನು
ಹಿಡಿಯಲಾಪೆನೆಯೆಂದು ನುಡಿದ ॥೭೨॥

ಒಂದು ಎರಡು ಮೂರಪ್ಪಣೆಯಿಂದಲಿ
ನಿಂದಲ್ಲಿ ನಿಲ್ಲದೆ ಬಂದ ।
ನಂದಿವಾಹನ ಜಟ್ಟಂಗಿಯ ಲಿಂಗವೆ
ಇಂದು ರಾಮಯ್ಯನ ಹರಣವು ॥೭೩॥

ಅಷ್ಟದಿಕ್ಕಿನ ರಾಯರ ಗಂಡ ರಾಮನ
ಮುಟ್ಟಿ ಹಿಡಿಯಲಳವಲ್ಲ ।
ಸೃಷ್ಟಿಯೊಳಗೆ ಇವನ ಪರಾಕ್ರಮವನು
ಮುಟ್ಟಿ ಹೇಳಲು ಚೋದ್ಯವೆನುತ ॥೭೪॥

ಇವನ ಸಾಹಸಗಳು ಭುವನದೊಳಾಶ್ಚರ್ಯ
ಭುವನೇಶ ರಾಮೇಶ ಬಲ್ಲ ।
ಇವನೀಗ ಪಾರ್ಥನ ಸಮವೆಂದೆನುತಲಿ
ಅವಿರಳ ಮಂತ್ರಿ ನುಡಿದನು ॥೭೫॥

ಇಂದು ಹಿಡಯಲಳವಲ್ಲವೆನುತ ಮಂತ್ರಿ
ಬಂದವನು ತನ್ನರಮನೆಗೆ ।
ಒಂದು ಬುದ್ಧಿಯನೆಣಿಸಿದ ತನ್ನ ಮನದಲ್ಲಿ
ಕಂದರ್ಪ ರಾಮನ ಮೇಲೆ ॥೭೬॥

ಹುಲಿಯಡಗಿರ್ದ ಗವಿಯಂತಿರ್ದ ರಾಮನ
ಕೊಲುವರೆ ಕೈಯೇಳದೆಂದು ।
ಚೆಲುವರ ಗಂಡ ಚೆನ್ನಿಗ ರಾಮನಳಿದರೆ
ಲಲನೆಯರೆಂತು ಬಾಳುವರು ॥೭೭॥

ದಿಟ್ಟ ಚೆನ್ನಿಗ ರಾಮನಳಿದ ಸುದ್ದಿಯು ನಾಳೆ
ಹುಟ್ಟದಿಹುದೆ ಡಿಳ್ಳಿಯೊಳಗೆ ।
ನೆಟ್ಟನೆ ತುರುಕರ ದಂಡು ಬಂದರೆ ಆಗ
ತಟ್ಟಿ ಕಾದುವರನು ಕಾಣೆ ॥೭೮॥

ಬಿಡದರಮನೆ ಸುತ್ತ ಆಳನು ಅಡಗಿಸಿ
ಹಿಡಿವೆನು ಬಿಡದೆ ಪಂಥದಲಿ ।
ನುಡಿಯೊಳು ಕಾಣುವೆ ರಾಮನ ಮಾತನು
ಹಿಡಿವೆನು ಧರ್ಮಾಧರ್ಮದಲಿ ॥೭೯॥

ಮಂದಿ ಕುದುರೆ ಒಂದು ಕಡೆಯಲ್ಲಿ ನಿಲಿಸಿದ
ಬಂದು ಹೊಕ್ಕನು ಅರಮನೆಯ ।
ಸಂಧಾನದಲಿ ನೋಡುವೆನೆಂದು ಬೈಚಪ್ಪ
ಬಂದನು ರಾಮನಿದ್ದೆಡಗೆ ॥೮೦॥

ಹೆಬ್ಬಾಗಿಲನು ತೆಗೆ[ಯಿ]ಸಿಕೊಂಡು ಬೈಚಪ್ಪ
ಒಬ್ಬನೆ ಹೊಕ್ಕನರಮನೆಯ ।
ಗರ್ಭ ತಲ್ಲಣಿಪಂತೆ ದಂಡು ಬರುತಲಿದೆ
ಹೆಬ್ಬುಲಿ ರಾ[ಮ]ನೆಲ್ಲಿಹನು ॥೮೧॥

ಎಂದು ಎಕ್ಕಟಿಗರ ಕರೆದು ಬೈಚಪ್ಪನು
ಇಂದ ರಾಮನ ಕರೆಯೆನಲು ।
ಬಂದರಾಕ್ಷಣದೊಳು ರಾಮನಿದ್ದಡೆಗಾಗ
ಬಂದು ಹೇಳಿದರು ಸುದ್ದಿಯನು ॥೮೨॥

[ಬೆರಗಾಗಿ] ಸುರಿತಾಳನ ದಂಡು ಬಂದ್ಯೆತೆ
ಬರಹೇಳಿದನು ಮಂತ್ರೀಶ ।
ಭರದಿಂದ ಸುದ್ದಿ[ಯ] ಕೇಳುತ ಬೈಚಪ್ಪ
ಕರೆಯಬಂದಾರೆಯೆಂದೆನಲು ॥೮೩॥

ಮಳೆಗಾಗಲದ ಹಳ್ಳ ಹೊಳೆಗಳ ತೊರೆಗಳ
ಬಿಳಿಬಿಡದಿಹ ಮಿಂಚುಗಳ ।
ತಳುವದೆ ಬಂದ ದಂಡೆಲ್ಲಿದೆ ಹೇಳೆಂದು
ಇಳೆಗೊಡೆಯನು ಕೇಳಿದನು ॥೮೪॥

ದಂಡುಯೆಲ್ಲಿಯ ದಾಳಿ ಎತ್ತನ ಸುದ್ದಿಯು
ಮಂಡಲದೊಳು ಹೊಸತೆನಿಸಿ ।
ಚಂಡವಿಕ್ರಮ ರಾಮ ಭರದಿಂದ ಬಂದನು
ನಿಂದು ಮಂತ್ರಿಗೆ ಶರಣೆಂದು ॥೮೫॥

ಬಂದ ಬರ[ವ] ಕೇಳಿ ನಿಂದು ರಾಮಯ್ಯನು
ಇಂದು ರಾಯರ ಮೇಲೆ ಎನಗೆ ।
ತಂದೆ ಕಂಪಿಲರಾಯ ಕರೆಯ ಕಳುಹಿದನೇ
ಅಂದುಳ್ಳ ರಾಮ ಕೇಳಿದನು ॥೮೬॥

ಬಂದ ರಾಮಯ್ಯನ ನಿಂದು ಅಪ್ಪಿಯೆ ಮಂತ್ರಿ
ಕಂದ ಬಾರೆಂದು ಕುಳ್ಳಿರಿಸಿ ।
ಕುಂದುಗೊರಳ[ನ] ಕೃಪೆಯು ತಪ್ಪಿತುಯೆಂದು
ಅಂದು ಮಂತ್ರೀಶ ನುಡಿದನು ॥೮೭॥

ಎತ್ತಣ ಮಾತು ಧರೆಯೊಳು ಬಹು ಸುದ್ದಿಯು
ಹೊತ್ತಿದೆ ಬಯಲಪಕೀರ್ತಿ ।
ಸತ್ಯವ ನುಡಿಯಸತ್ಯವ ಬೇಡೆಂದು
ವಿಸ್ತರಿಸಿ ಕೇಳಿದ ಮಂತ್ರಿ ॥೮೮॥

ಸೊಲ್ಲೆರಡ ನುಡಿವನಲ್ಲ[ವ] ಜೀವದಾಸೆಗೆ
[ಕೊಲೆ]ಗಂಜುವನು ನಾನಲ್ಲ ।
ಇಲ್ಲಿ ಹೋಯಿತು ಈ ಕ್ಷಣವೆನ್ನ ಪ್ರಾಣವು
ಕೊಲ್ಲು ಪ್ರಧಾನಿಗಳರಸ ॥೮೯॥

ಪಾಪವುಂಟಾದರೆ ಭಯವುಂಟು ಬೈಚಪ್ಪ
ಪಾಪವಿಲ್ಲದೆ ಭಯವಿಲ್ಲ ।
ಕಾಪಾಲಧರನ ಕರುಣ ತಪ್ಪಿತೋ ಏನೋ
ಕೋಪವಿದ್ದಡೆ ಕೊಂದುಕೊಳ್ಳೊ ॥೯೦॥

ಅನ್ಯಾಯವಿಲ್ಲದೆ ನಿನ್ನ ಕೊಂದರೆ ರಾಮ
ಬೆನ್ನ ಬಿಡದು ಪಾತಕವು ।
ಇನ್ನೊಂದು ಕಾಲಕ್ಕೆ ನಿನ್ನಂಥ ಬಿರಿದುಳ್ಳ
ಮನ್ನೆಯ ಹುಟ್ಟುವುದರಿದು ॥೯೧॥

ಹೊನ್ನಂಬ ನೀರೊಳಗೆಚ್ಚಂತೆ ಬೈಚಪ್ಪ
ತನ್ನೊಳು ತಾನೆ ಮರುಗಿದನು ।
ಪನ್ನಗಧರನ ಕರುಣ ತಪ್ಪಿತುಯೆಂದು
ತನ್ನೊಳು ನುಡಿದ ಬೈಚಪ್ಪ ॥೯೨॥

ಪಾತಕಿಯ ಮನೆಗೆ ಯಾತಕ್ಹೋದೆಯೊ ರಾಮ
ಮಾತನಾಡಿಸೆ ಕರೆಸಿದಳೆ ।
ಆತು ಇಡಲು ಚೆಂಡು ಅರಮನೆ ಪೊಕ್ಕಿತು
ಭೀತಿಗೊಳುತ ತರಹೋದೆ ॥೯೩॥

ಚೆಂಡು ಬಿದ್ದರೆ ನಾನು ತರಹೋದೆ ನಿಮ್ಮಾಣೆ
ಕೊಂಡು ಮುಂದಲೆಯನು ಪಿಡಿದು ।
ಚಂಡಿಕೆಯನು ಬಿಡದಿದ್ದರೆ ನೂಕಿ ಬಂದೆ
ಗಂಡ ಕಂಪಿಲಗೆ ಹೇಳಿದಳೆ ॥೯೪॥

ಒಬ್ಬಳಿದ್ದಾಳೆಂದು ಅರಿಯೆ ಚಿಕ್ಕಮ್ಮ ನನ್ನ
ತನ್ನ ಬಿಡಳು ಪೊಸಪರಿಯ ।
ಉಬ್ಬಿ ಒದೆದು ಕೆಡೆನೂಕಿ ಬಂದರೆ ಎನ್ನ
ಕೊಬ್ಬಿ ಕೊಲೆಗೆ ಎಳಸಿದಳೆ ॥೯೫॥

ಬಂದ ಗಂಡನ ಕೂಡ ಒಂದೊಂದನು ಹೇಳಿ
ತಂದು ಹಣ್ಣಿದಳೆ ಮೂಲವನು ।
ಬಂದ ಫಲವನೊಲ್ಲೆನೆಂದರೆ ಬಿಡುವುದೆ
ಕೊಂದುಕೊಳ್ಳೆಂದ ರಾಮುಗನು ॥೯೬॥

ಹೆತ್ತವ ಮುನಿದರೆ ಮತ್ತೆ ಚಿಂತೆಗಳೇಕೆ
ಮತ್ತೆನ್ನ ಪಣೆಯೊಳಿದ್ದುದನು ।
ಕರ್ತು ಶಿವನ ಕೃಪೆ ತಪ್ಪಿದ ಕಾರಣ
ಮತ್ತೇಕೆ ಹಲವು ಚಿಂತನೆಗಳು ॥೯೭॥

ಹೆತ್ತವರಿಗೆ ತನ್ನ ದೇಹವನೊಪ್ಪಿಸಿ
ಅತ್ಯಂತ ಕೀರ್ತಿಯ ನಡುವೆ ।
ಉತ್ತರಿಸೊ ನನ್ನ ಶಿರವನು ಬೈಚಪ್ಪ
ಮತ್ತೇಕೆ ಯೋಚನೆ ನಿನಗೆ ॥೯೮॥

ಎಲೆ ರಾಮ ನಿನ್ನಯ ಕೊಲೆ ಕೊಂದು ನಾನೀಗ
ಉಳಿಯಲಾರೆನೊ ಮರ್ತ್ಯದೊಳಗೆ ।
ಉಳಿವಂಥ ಕಾರ್ಯವ ಕಾಬೆನು ಎನುತಲಿ
ತಳುಹದೆ ಉಸುರು ಎನ್ನೊಳಗೆ ॥೯೯॥

ಎನ್ನಲ್ಲಿ ಗನ್ನ ಘಾತಕವುಂಟಾದರೆ
ನಿನ್ನೊಳು ಉಸುರುವೆ ಮಂತ್ರಿ ।
ಎನ್ನೊಳು ಹುಸಿಯಿಲ್ಲ ನಿಮ್ಮಾಣೆಯೆನುತಲಿ
ತನ್ನ ಮನದಲ್ಲಿ ಚಿಂತಿಸಿದ ॥೧೦೦॥

ನಾನೇನು ತಪ್ಪು ಮಾಡಿದುದಿಲ್ಲ ಬೈಚಪ್ಪ
ಅನುಮಾನ ಬೇಡ ಕೊಲ್ಲಯ್ಯ ।
ಘನತರ ರಾಮ ನುಡಿದ ನುಡಿಯ ಕೇಳಿ
ಮನದಲ್ಲಿ ನೊಂದ ಬೈಚಪ್ಪ ॥೧೦೧॥

ಹಗಲೆ ನಕ್ಷತ್ರವ ಕಂಡೆನೆಂಬರು ಈಗ
ಜಗವರಿಯಲು ಜಲಲಿಪಿಯು ।
ಸೊಗಸು ಮಾತಿನ ಸೊಲ್ಲು ನುಡಿದು [ಹೆಂಗ]ಳೆಯರು
ಬಗೆಗೆಡಿಸುವರು ಸುರ ನರರ ॥೧೦೨॥

ಕಟಕಟವೆನುತ ಬೈಚಪ್ಪ ಕಿವಿಯ ಮುಚ್ಚಿ
ನಿಟಿಲಲೋಚನಗೆ ಅಸಾಧ್ಯ ।
ಕುಟಲಗಾರ್ತಿಯ ಮಾತನು ಕೇಳಿ ಕಂಪಿಲ
ದಿಟವೆಂದು ಕೊಲ್ಲ ಹೇಳಿದನು ॥೧೦೩॥

ಅಟಮಟದಿಂದಲಿ ಸಟೆಯ ದಿಟವ ಮಾಡಿ
ಪುಟವಿಕ್ಕಿ ಅಗ್ನಿಯ ಬೆರಸಿ ।
ತುಟಿಬಿಚ್ಚದ ಮಾತು ಕಟಕಮುಚ್ಚಿತುಯೆಂದು
ನಟನಿಸಿ ಬೈಚಪ್ಪ ನುಡಿದ ॥೧೦೪॥

ನೀ ಮನದಲಿ ನೋಯಲೇತಕ್ಕೆ ಬೈಚಪ್ಪ
ನಾ ಮಾಡಿದ ಫಲವೈಸೆ ।
ಸೋಮಧರನು ಬಲ್ಲ ಹಲವು ಮಾತೇನಯ್ಯ
ಭೂಮಿದೇವತೆ ಬಲ್ಲಳೈಸೆ ॥೧೦೫॥

ಅಪ್ಪನ ರಾಣಿಗೆ ತಪ್ಪಿದೆನಾದಡೆ
ಸರ್ಪಭೂಷಣ ಶಿವ ಬಲ್ಲ ।
ತಪ್ಪು ಉಂಟಾದರೆ ಕೊಂದುಕೋ ಬೈಚಪ್ಪ
ಒಪ್ಪಿಸಿದನು ಕಠಾರಿಯನು ॥೧೦೬॥

ತಪ್ಪುವುಂಟಾದರೆ ಕೊಲ್ಲಬಹುದೊ ನಿನ್ನ
ತಪ್ಪುವನಲ್ಲ ಪರಸತಿಗೆ ।
ತಪ್ಪೇನೊ ನಿನ್ನ ಪ್ರಾಣಕೆಯೆಂದು ಬೈಚಪ್ಪ
ಅಪ್ಪಿಕೊಂಡನು ಉರತುಂಬ ॥೧೦೭॥

ಕಾಯಜರೂಪ ರಾಮಯ್ಯನ ಬೈಚಪ್ಪ
ನೋಯಿಸದಲೆ ಸಂತೈಸಿ ।
ರಾಯರಗಂಡ ಕೇಳೆನ್ನ ಬಿನ್ನಪವನು
ದಾಯದೋರುವೆ ನಿನಗೆಂದ ॥೧೦೮॥

ಎಂದ ಬೈಚಪ್ಪ ಮತ್ತೊಂದು ಯೋಚನೆಮಾಡಿ
ಚಂದ್ರನ ಪಳಿವ ರಾಮುಗನ ।
ಇಂದು ನಾ ಹೇಳಿದ ಹಾಗೆ ನೀ ಇರುವೆಂದು
ನಿಂದು ಬಿನ್ನಪವ ಮಾಡದನು ॥೧೦೯॥

ಆವ ಠಾವಿಲಿ ಮಡಗುವೆನೆಂದು ಬೈಚಪ್ಪ
ಧ್ಯಾನಿಸಿದನು ಮನದೊಳಗೆ ।
ದೇವ ಜಟ್ಟಂಗೀಶನಗುಡಿಯೊತ್ತಿಲಿ
ರಾಮನ ಮಡಗುವೆನೆಂದ ॥೧೧೦॥

ಬಾರೊ ರಾಯರ ಗಂಡ ಬಾರೊ ಜಟಂಗಿಯ
ಬಾರೊ ವರಪುತ್ರ ಬಾರೆಂದು ।
ಕಾರಣಿಕವು ನಿನಗೆಂದನು ಬೈಚಪ್ಪ
ಬಾರೆಂದ ಕಾಮಾಟದವರ ॥೧೧೧॥

ಬಂದನು ಬೈಚಪ್ಪ ರಾಮಯ್ಯ ಸಹವಾಗಿ
ನಿಂದ ಜಟಂಗಿ ಗಿರಿಯಲಿ ।
ಚೆಂದಚೆಂದದ ನೆಲಮಾಳಿಗೆ ರಚಿಸಲೆಂದು
ಮಂದಿಯ ಕರೆದು ಹೇಳಿದನು ॥೧೧೨॥

ಎನ್ನಲಾಕ್ಷಣದಲ್ಲಿ ನಿರ್ಮಿತವಾಯಿತು
ಮನಸಿಜ ರಾಮನ ಬೀಡು ।
ಕನಕ ಮಾಣಿಕ ರಚಿಸಿದ ನೆಮಾಳಿಗೆ
ಅನುವಾಯಿತು ನಿಮಿಷದಲಿ ॥೧೧೩॥

ಉಲುವುಯೇಳದ ಮುನ್ನ ನೆಲಮಾಳಿಗೆಯ ಮಾಡಿ
ಕಲಿ ರಾಮನ ಸಂತೈಸಿದನು ।
ಮಲೆತ ತಲೆಗೊಡೆಯನೆ ಬಲು ತುರುಕರಗಂಡ
ನೆಲ ಮಾಳಿಗೆಯೊಳಿರೆಂದ ॥೧೧೪॥

ಲಿಂಗಣ್ಣ ಕಾಟಣ್ಣ ಕೊಳ್ಳಿಯ ನಾಗಣ್ಣ
ಸಂಗಯ್ಯ ಲಿಂಗಯ್ಯರೆನಿಪ ।
ಸಂಗಡಲೈವರ ನೆಲಮಾಳಿಗೆಯೊಳಿಟ್ಟು
ತಿಂಗಳಾರು ಸಂಬಳವಿತ್ತ ॥೧೧೫॥

ಆರು ತಿಂಗಳು ಬಿಳಿಯೆಲಿ ಅಡಕೆಯು ಸುಣ್ಣ
ನೀರ ತೋರಿಸಿದ ರಾಮಯ್ಯಗೆ ।
ಆರು ತಿಂಗಳ ಸಂಭ್ರಮವನು ಮಾಡಿಸಿ
ವೀರ ರಾಮುಗನ ಮಡಗಿದನು ॥೧೧೬॥

ಭಾವಜ ರೂಪನ ಮಡಗಿ ಬೈಚಪ್ಪನು
ನೋವ ತಾಳಿದ ಮನದೊಳಗೆ ।
ಆವ ಕಾಲಕೆ ತುರುಕರ ದಂಡು ಬಾಹುದೊ
ಆವಾಗ ರಾಮನ ತೆಗೆವೆ ॥೧೧೭॥

ನೊಂದು ಕಂಪಿಲರಾಯ ಮನದಲ್ಲಿ ನೋವಾಗ
ಅಂದಿಗೆ ಮಗನ ತೋರುವೆನು ।
ಅಲ್ಲಿಂದ ಬಂದು ರಾಮೇಶಗೆ ಬೈಚಪ್ಪ
ಮೆಲ್ಲನೆ ಕರಗಳ ಮುಗಿದು ॥೧೧೮॥

ಇಲ್ಲಿ ನಿರ್ಮೋಶವಾದನು ರಾಮಯ್ಯನು
ಅಲ್ಲಿಂದ ಬಂದ ಕುಮ್ಮಟಕೆ ।
ಬಲ್ಲಿದ ಬೈಚಪ್ಪ ಬಂದು ಕುಮ್ಮಟದೊಳು
ಕುಲದೀಪ ರಾಮನ ನೆನೆದು ॥೧೧೯॥

ಹಲವು ಹಂಬಲಿಸುತ ಪುತ್ರರ ತೋರಲಿಬೇಕು
ಛಲದಂಕ ಕಂಪಿಲನೆಂದ ।
....
.... ॥೧೨೦॥

ಅತುಳ ಬಲ್ಲಿದನ ಕೊಂದೆನೆಂದು ಬೈಚಪ್ಪ
ಕೃತಕ ಕೋವಿಯ ತೋರಿಸಿದ ।
ಪ್ರತಿಯ ತೋರುವೆನು ನಾಳಿನ ದಿನ ಕಂಪಿಲಗೆ
ಹಿತವಾಗುವೆನು ಇಬ್ಬರಿಗೆ ॥೧೨೧॥

ಘಳಿಲನೆ ತಿರಿಗಿ[ಯೆ] ಬಂದು ಬೈಚಪ್ಪನು
ಖಳಬಂಟ ರಾಮನ ಬಳಿಗೆ ।
ಅಳಿವ ಕಾಲವು ಬಂದಿತು ರಾಮ ನಿನಗೆಂದು
ಉಳಿಯಲೀಸನು ಕಂಪನೃಪತಿ ॥೧೨೨॥

ಪಾಪಿ [ಯೆ]ಪ್ರಾಣವ ಕಾಯ್ದೆನಿಷ್ಟು ದಿನದಲ್ಲಿ
ಭೂಪ ಕಂಪಿಲನು ಬೇಂಟೆಯಲಿ ।
ಕೋಪವ ಮಾಡಿದ [ನಿ]ನ್ನ ಮೇಲೆನುತಲಿ
ಉಪಾಯದಿ ಬೈಚಪ್ಪ ನುಡಿದ ॥೧೨೩॥

ಒಡೆಯ ಕಂಪಿಲರಾಯ ಕೋಪಿಸಲೇತಕ್ಕೆ
ಕೊಡುವೆನು ಎನ್ನ ಪ್ರಾಣವನು ।
ಪೊಡವಿಯೊಳೀ ಕಾಯ ಇರಬಂದಿತೇ ಎಂದು
ಕಡುಗಲಿ ಖಳರಾಮ ನುಡಿದ ॥೧೨೪॥

ಸಲು[ಹಿ]ದೊ ಖಳಬಂಟ ಪರದೇಶಿ ರಾಮಯ್ಯ
ಬಲುಗೈಯ ಬಾವನ್ನ ಧೀರ ।
ಚೆಲುವ ರಾಮನ ಕೊಂದು ತರಹೇಳಿ ಕಳುಹಿದ
ತಲೆಗಾಯಿದುಳುಹು ನೀನವನ ॥೧೨೫॥

ಆಡಿದ ಮಾತಿಗೆ ಕಡುಮೆಚ್ಚೆ ಬೈಚಪ್ಪ
ಕೂಡೆ ಬಿಗಿದಿ ತರ್ಕೈಸಿ ।
ನಾಡಲ್ಯೆದಿದರು ರಾಮನ ಬಳಿಗಾಕ್ಷಣ
ಕೂಡೆ ಇಬ್ಬರು ಹರುಷದಲಿ ॥೧೨೬॥

ಕಂದರ್ಪರೂಪ ರಾಮಯ್ಯನ ಕರೆದು
ಇಂದನ್ಯ ಬೈಚಪ್ಪನೊಲಿದು ।

-------------------- ॥೧೨೭॥

ನಿನ್ನ ಪ್ರಾಣಕೆ ಕಳ್ಳ ಬಂಟರಾಮನ ತಂದೆ
ಇನ್ನು ನಿನಗೆ ಭಯವಿಲ್ಲ ।
ಚೆನ್ನಿಗ ಚೆಲುವ ರಾಮಯ್ಯ ನೀ ಕೇಳೆಂದು
ಮನ್ನಿಸಿ ನುಡಿದನು ಮಂತ್ರಿ ॥೧೨೮॥

ಆರ ಆಪತ್ತಿಗೆ ಆರ ಕೊಂದೆಯೊ ಮಂತ್ರಿ
ಗಾರಾದ ಹರಿಶ್ಚಂದ್ರರಾಯ ।
ತೋರಿದ ಪಾಪವು ತರವಲ್ಲ ಎಲೊ ಮಂತ್ರಿ
ಸಾರೊ ಇದೇತರ ನಡತಿ ॥೧೨೯॥

ನಿನ್ನಾಣೆ ಬೈಚಪ್ಪ ಇದು ಬ್ರಹ್ಮೇತಿಯು
ಬೆನ್ನಬಿಡದು ಬೇಡೆಂದ ।
ಚೆನ್ನಕ್ಕೆ ಪರಿಮಳ ಬಂದಂತೆ ಆಯಿತು
ಎನ್ನಾಣೆ ಕುವರನೆ ಕೇಳು ॥೧೩೦॥

ಚಿತ್ರವ ಬರೆದಂತೆ ಕಳಬಂಟ ರಾಮಗೆ
ಒತ್ತಿ ಕೆಲಸ ದಂತವಳಿಯು ।
ಉತ್ತಮ ಮಜ್ಜನ ಮಾಡಿ ಮಂತ್ರೀಶನು
ಸುತ್ತಿದ ವಾರಿ ಚಿಮ್ಮುರಿಯ ॥೧೩೧॥

ಒತ್ತಿ ಕೆಲಸ ಮಾಡಿ ಬವರಿಯನೆ ತಿದ್ದಿ
ಕಸ್ತೂರಿ ತಿಲಕ ರಾಜಿಸಿತು ।
ಮುತ್ತಿನ ಕಟುಕಿಕ್ಕಿ ಜಡೆಯ ಹೆಣಿಸಿದನಾಗ
ಮತ್ತೆ ರಾಮಗೆ ಪ್ರತಿಯೆನಿಸಿ ॥೧೩೨॥

ಪಿಡಿದಿರ್ದ ಸುರಗಿಯ ಹಿಡಿದೆದ್ದು ಬೈಚಪ್ಪ
ಒಡನೆ ರಾಮಯ್ಯ ಏಳೆನುತ ।
ಕೊಡುವೆ ಜಟ್ಟಂಗಿಯ ರಾಮಗೆ ಶಿರ[ವೆನೆ]
ಕಡಿಯೆಂದು ಖಳರಾಮ ನುಡಿದ ॥೧೩೩॥

ನುಡಿದ ಮಾತನು ಕೇಳಿ ಪ್ರಧಾನಿ ಬೈಚಪ್ಪ
ಒಡನೆ ಖಂಡೆಯ ಝಳಪಿಸುತ ।
ಒಡೆಯನ ಕಾರ್ಯವ ಮೃಡ ನೀನೆ ಬಲ್ಲೆಂದು
ಒಡನೆ ಗರ್ಜಿಸಿ ತುಂಡ್ರಿಸಿದನು ॥೧೩೪॥

ಕಡಿಯಲು ಕಳ್ಳರಾಮನ ತಲೆ ಬಿದ್ದಿತು
ಒಡನೆ ನಲಿವುತ ಬೊಬ್ಬಿಡುತ ।
ಒಡಲ ಕಿಚ್ಚಗೆ ದೇಹವಳಿವುದೆಂದೆನುತಲು
ಕಡುಗಲಿ ಬೈಚಪ್ಪ ನುಡಿದ ॥೧೩೫॥

ಮುನ್ನ ಸೆರೆಯೊಳಿರ್ದ ಏಳುಮಂದಿ ಕಳ್ಳರ
ಭಿನ್ನ ಭಿನ್ನವ ಮಾಡಿ ಖಂಡಿಸಿ ।
ಬಿನ್ನಾಣದಿಂದ ತಲೆಯ ತಂದು ಬೈಚಪ್ಪ
ಗನ್ನದ ಕೊಲೆಯ ತೋರಿದನು ॥೧೩೬॥

ಹೆಚ್ಚಿದ ಶಿರವನು ಕೊಯ್ದನುವನು ಮಾಡಿ
ಎತ್ತಿ ತಂದರು ಎಳೆಯೆಳಿದು ।
ಅರ್ತಿಯೆ ನೋಡು ಕಂಪಿಲರಾಯ ನೀನೆಂದು
ಮತ್ತೆ ಹಾಕಿದನು ತಲೆ ಮಂತ್ರಿ ॥೧೩೭॥

ಇದು ರಾಮನ ತಲೆ ಇದು ಕಾಟನ ತಲೆ
ಇದು ಸಂಗ ಲಿಂಗನ ತಲೆಯು ।
ಇದು ನಾಲಿಂಗನ ತಲೆಯೆಂದು ಬೈಚಪ್ಪ
ಮುದದಿ ತೋರಿದನು ಕಂಪಿಲಗೆ ॥೧೩೮॥

ಕೊಂದೆಯಾತಕೆ ಕಾಟಲಿಂಗನ ತಲೆ[ಯನ್ನು]
ಬಂದಿತೆ ಎಲೆ ಸಿಟ್ಟು ನಿನಗೆ ।
ಕೊಂದು ರಾಮನ ತರಲಾ[ಗ] ಯೆನುತವೆಲ್ಲ
ಹಿಂದಟ್ಟೆ ಹರಿಯ ಹೊಯ್ಸಿದೆನು ॥೧೩೯॥

ಈಸುಮಾಡಿದ ರಾಮ ಗಾಸಿಯಾಗಲಿ ಬೇಕು
ಭಾಷೆಯವಳ ಕರಸೆಂದ ।
ದೋಷವ ಮಾಡಿದ ರಾಮಗೆ ಈ ಫಲ
ಆಯ್ತೆಂದು ಕಂಪಿಲ ನುಡಿದ ॥೧೪೦॥

ಕರೆ ಬಡನಡುವಿನ ನಡೆ ಹಂಸೆಗಮನೆಯ
ಕರೆ ಬಟ್ಟ ಕುಚದ ಮಾನಿನಿಯ ।
ಕರೆ [ಗಿಳಿ ನುಡಿ] ಕನ್ನಡಿ ಮುಖದಳ [ನೆಂದು]
ಕರೆ [ದ] ಕಂಪಿಲನು ರತ್ನಿಯ ॥೧೪೧॥

ನೀಲ ಕುಂತಳೆಯೆ ಬಾ ನೀಲಾಳಕಿಯೆ ಬಾ
ಲಾವಣ್ಯದಲಿ ಕರಚೆಲುವೆ ।
ಬಾಲೆವೆಣ್ಣುಗಳ ಶಿರೋಮಣಿ ಬಾರೆಂದು
ಲೋಲ ಕಂಪಿಲರಾಯ ಕರೆದ ॥೧೪೨॥

ಕಂಗಳ ಕರಚೆಲುವೆ ಕೆಂಪಿನ ರಾಣಿ[ಯ]
ತುಂಗಕುಚದ ಪಯೋಧರೆ [ಯ] ।
ರಂಗು ಬಣ್ಣವ ಮಿಸುಗುವ ಕಮಲಾಕ್ಷಿಯ
ಅಂಗನೆಯನು ಕರೆಸಿದನು ॥೧೪೩॥

ಮುತ್ತಿನ ಮುಡಿಯೆ ಬಾ ರತ್ನವೈಢೂರ್ಯ ಬಾ
ಪುತ್ಥಳಿ ಬೊಂಬೆ ಬಾರೆನುತ ।
ಕೆತ್ತಿದ ಕಟ್ಟಾಣಿ ವಸ್ತುವೆ ಬಾಯೆಂದು
ಮತ್ತೆ ಕಂಪಿಲ ಕರೆಸಿದನು ॥೧೪೪॥

ಹೂಸಿದ ಹಣೆಮದ್ದು ಹಾಸಿದ ಹಾಸಿಕೆ
ಮಾಸಿದ ಸೀರೆ ಸೊಲ್ಮುಡಿಯು ।
ಭಾಷೆಗೆ ತ[ಪ್ಪ]ದ ಕಂಪಿಲ ನೀಯೆಂದು
ಆ ಶಶಿಕಾಂತೆ ಹಿಗ್ಗಿದಳು ॥೧೪೫॥

ಅಲ್ಲಲ್ಲಿ ನೋಡುತ ಅಲ್ಲಲ್ಲಿ ನಿಲ್ಲುತ
ಅಲ್ಲಿಗಲ್ಲಿಗೆ ಅಡಿಯಿಡುತ ।
ಗಲ್ಲದ ಮೇಲೆ ಕರವಿಟ್ಟು ನಸುನಗುತಲಿ
ಮೆಲ್ಲನೆ ಬಂದಳು ರತ್ನಿ ॥೧೪೬॥

ದಿಟ್ಟಿಸಿ ನೋಡಿ ರಾಮನ ತಲೆಯಾವುದೊ
ಮೆಟ್ಟು ಮೀಯುವೆ ಎಲೊ ಮಂತ್ರಿ ।
ನಿಷ್ಠೂರಿ ಹೋಗೆಂದು ನೂಕಿಸಿ ತಲೆಗಳ
ಕಟ್ಟೆ ಕೆಳಯಕೆ ಹಾಕಿಸಿದ ॥೧೪೭॥

ಮೆಟ್ಟಿ ಮೀವರೆ ತಲೆಯನು ಕೊಟ್ಟುದಿಲ್ಲೆಂದು
ಸಿಟ್ಟುಗುಟ್ಟುತ ಮನದೊಳಗೆ ।
ಕಷ್ಟವನಾಡುತ ಮಂತ್ರಿ ಬೈಚಪ್ಪ
ಪಟ್ಟಸಾಲೆಯ ಒಳಪೊಕ್ಕ ॥೧೪೮॥

ಉಮ್ಮಳಿಯ ಕೊಲೆ[ಗೆ] ಹೆಮ್ಮಕ್ಕಳೀದ್ದರೆ
ಬ್ರಹ್ಮಾಂಡವ ಮುಟ್ಟದಿಹುದೆ ।
ನಿರ್ಮಳವಾಯಿತು ನಿನಗೆಂದು ರತ್ನಾಜಿ
ಗಮ್ಮನೆ ತಿರುಗಿದ ಮಂತ್ರಿ ॥೧೪೯॥

ಎಂದು ಮಂತ್ರಿಶನು ತಿರುಗಿದ ಬೇಗದಿ
ಬಂದನು ಕಂಪಿಲನೆಡೆಗೆ ।
ನಿಂದು ಕರಗಳ ಮುಗಿದು ಬಿನ್ನಸಿದನಾಗ
ತಂದು ತೋರಿಸಿದ ತೊಡಿಗೆಗಳ ॥೧೫೦॥

ಕುರುಹಿನ ಕಡೆಯ ಪೊಂಗುಲಿ ಕಂಠಮಾಲೆಯ
ಮರೆಮಾಡಿ ತಂದು ತೋರಿದನು ।
ಭರದಿಂದ ಬಂದು ತೋರಲು ಕಂಪಿಲರಾಯ
ಬೆರಗಾದನು ದಿಟವೆನುತ ॥೧೫೧॥

ನಿಬ್ಬದಿಯಾಗಿ ಕೊಂದೆಯೊ ಬೈಚಪ್ಪನೆ
ತಬ್ಬಲಿಲ್ಲವೆ ಅರಗಳಿಗೆ ।
ಗಬ್ಬಿ ಕೊಮಾರರಾಮನ ಕೊಲ್ಲಬಹುದೆ ಎಂದು
ಉಬ್ಬಿ ಕೋಪವನು ಮಾಡಿದನು ॥೧೫೨॥

ಕೊಂದೆಯಾಗಲೆ ನೀನು ಎನ್ನ ರಾಮನ ಬೇಗ
ಬಂದೀತೆ ಹಗೆ ಪಾಡು ನಿನಗೆ ।
ಮುಂದರಿಯದೆ ವಿಚಾರವ ಮಾಡದೆ
ಹಿಂದಳ ಹಗೆಯುಂಟೆ ನಿನಗೆ ॥೧೫೩॥

ಮೂರು ಮಾತುಗಳನು ಕೇಳುವರು ಮಂತ್ರಿಗಳು
ಏರಿತೆ ತಲೆಗೆ ಹುಚ್ಚೆಂದ ।
ಮೀರಿ ಮಾಡಿ[ದೆ] ಆಜ್ಞೆಯನೆಂದು ರಾಮನ
ತೋರೆಂದು ರಾಯ ನುಡಿದನು ॥೧೫೪॥

ಹೊತ್ತನರಿತು ಬಿನ್ನಹಮಾಡಲಿಬೇಕು
ಚಿತ್ತವರಿತು ಇರಬೇಕು ।
ಕರ್ತರಾಗಿ ಮಂತ್ರಿಗಳೊಂದು ಮಾಡಿದರೆ
ಎತ್ತಣ ರಾಜ್ಯ ರಾಯರಿಗೆ ॥೧೫೫॥

ಅರಸಿಗೆ ಆರುಬಾಯೆಂಬುದು ತಪ್ಪದು
ಸರಸವೆ ನಿಮ್ಮೊಳು ನಮಗೆ ।
ಪುರುಷನಿಧಿಯೆ ನೋಡು ರಾಮಯ್ಯನಂಗದ
ಸರಪಳಿ ಪದಕ ಚೌಕುಳಿಯ ॥೧೫೬॥

ಹೊನ್ನ ಮೊಳೆಯ ಕಠಾರವನಿತ್ತನು
ರನ್ನ ಮಾಣಿಕದ ಉಂಗುರವ ।
ಉನ್ನತವಾದ ಪಟ್ಟೆದ ಹಚ್ಚಡವನು
ಮಾನ್ಯ ಕಂಪಿಲನ ಮುಂದಿಟ್ಟ ॥೧೫೭॥

ಚಿನ್ನದಸರ ಕಂಠಮಾಲೆಯನಿತ್ತುನು
ದೈನ್ಯವ ಬಡುತ ಕಂಪಿಲನು ।
ಮುನ್ನ ಮಾಡಿದ ಪಾಪ ಎನ್ನ ಹಣೆಯಲಿ ಇಷ್ಟು
ಬಿನ್ನೈಸಿದ ಕಂಪಿಲನು ॥೧೫೮॥

ಕೊಲ್ಲೆಂದ ಮಾತಿಗೆ ಕೊಲ್ಲೊರೆ ಬೈಚಪ್ಪ
ನಿಲ್ಲಬಾರದೆ ಅರಗಳಿಗೆ ।
ಕೊಲ್ಲುವಾಗಲಿ ಏನೆಂದೆನೊ ರಾಮಯ್ಯ
ಸೊಲ್ಲು ಹೇಳೆಲೊ ಮಂತ್ರಿಯೆನಗೆ ॥೧೫೯॥

ಸುಬಾಗ ರಾಮಯ್ಯ ಆರನು ನೆನೆದನೊ
ಭಾವವೆನೆಗೊಮ್ಮೆ ಹೇಳೊ ।
ಜೀವಗಳ್ಳರ ಗಂಡ ಕೋವಿದ ರಾಮನ
ಆವ ಪರಿಯ ಕೊಂದೆ ಹೇಳೊ ॥೧೬೦॥

ಹೆಸರಡಗಿತೊ ಕೊಮಾರ ರಾಮಯ್ಯನ
ದೆಸೆ ಹಾರಿತೊ ಕಂಪಿಲನ ।
ವಸುಧೆಯೊಳಗೆ ಇಂಥ ಧೀರನ ಕಾಣೆನು
ಹೊಸೆದು ಕೊಂಡನು ಹೊಟ್ಟೆಯನು ॥೧೬೧॥

ಅಸುರರ ಗಂಡ ಕುಮಾರ ರಾಮನ ಕೊಂದು
ಬಸವಳಿದನು ಕಂಪಿಲನು ।
ಅಸುರರ ದಾಳಿ ಬಂದರೆ ಕಾದುವರಾರು
ದೆಸೆಯ ಮನ್ನೆಯನಡಗಿದನು ॥೧೬೨॥

ಪರಿವಾರ ರಾಜ್ಯವು ಸ್ಥಿರವಾಗಿ ಇರಲೆಂದು
ದೊರೆ ಶಿರೋಮಣಿಯೆ ಕಂಪಿಲನು ।
ಧರೆಯನೆಲ್ಲವ ನೀನು ಸ್ಥಿರವಾಗಿ ಆಳೆಂದು
ಧುರಧೀರ ಹರಕೆಯನಿತ್ತ ॥೧೬೩॥

ನಮ್ಮಮ್ಮ ರತ್ನಮ್ಮ ಸುಖವಾಗಿ ಇರಲೆಂದ
ನಿಮ್ಮ ಕುಮಾರ ರಾಮಯ್ಯ ।
ಉಮ್ಮಾಯದಿಂದಲಿ ಬದುಕೆಂದ ರಾಮಯ್ಯ
ಗಮ್ಮನೆ ಮಂತ್ರಿಗೆಂದನು ॥೧೬೪॥

ಹಗಲಕಗ್ಗೊಲೆ ಸಾಹಸಭೀಮ ರಾಮಯ್ಯ
ಬಗೆಯದೆ ನಿಮಗೆ ಹೇಳೆಂದ ।
ಅಗಣಿತವಾದ ರತ್ನಮ್ಮನು ಹಾಕಿದ
ಉಗುಳನು ದಾಟಬೇಡಂದ ॥೧೬೫॥

ಎಂದೆಂದು ರತ್ನಮ್ಮ ಹೇಳಿದ ಮಾತನು
ಒಂದಿಷ್ಟು ಮೀರಬೇಡೆಂದ ।
ಕುಂದದೆ ಇಬ್ಬರು ಸಂತೊಷ ಬಾ[ಳಲಿ]
ಎಂದು ಹರಕೆಯನಿತ್ತ ರಾಮ ॥೧೬೬॥

ಸತಿಯ ಮಾತನು ಕೇಳಿ ಅಪಕೀರ್ತಿಯರಿಯದೆ
ದಶರಥರಾಯ ಭೂವರನು ।
ಮತಿಹೀನ [ಮಗಗೆ] ದೇಶಾಂತ್ರವನಟ್ಟಿದ
ಕಥೆಯೆನಗಾಯ್ತೆಂದ ರಾಮ ॥೧೬೭॥

ಆಸೆಯಿಂದಲಿ ಮಕ್ಕಳ ಕೊಲ್ಲಲಾರದೆ
ದೇಶಾಂತರವನಟ್ಟಿದ[ನು] ।
ಭಾಷೆಯಿನ್ನೇನುಂಟು ಕಂಪಿಲರಾಯಗೆ
ಮೀಸರಗಂಡ ನುಡಿದನು ॥೧೬೮॥

ಪರಬಲದೊಳು ಕಾದಿ ದಶರಥರಾಯನ
ವರರಥದ ಕೀಲು ಮುರಿಯೆ ।
ಕಿರಿವೆರಳಿಟ್ಟು ಕಾದಿಸಿ ತಂದು ಮೆಚ್ಚಿಸಿ
ವರವ ಬೇಡಲು ಕೊಟ್ಟ ಭಾಷೆ ॥೧೬೯॥

ಹಾಗಾಯಿತಿದು ಕಥಾಂತ್ರದ ನೆಪದಲ್ಲಿ
ನೀಗಿ ಎನ್ನನು ತನ್ನ ಬಲವ ।
ಹೋಗಾಡಿಕೊಂಡನೆ ಕಂಪಿಲನೆನುತಲಿ
ತೂಗಿದ ತಲೆಯ ರಾಮಯ್ಯ ॥೧೭೦॥

ಏಳೇಳು ಜಲ್ಮಕ್ಕೆ ಕಂಪಿಲ ತಂದೆಯು
ಏಳೇಳು ಜಲ್ಮಕ್ಕೆ ರತ್ನಿ ತಾಯಿ ।
ಏಳೇಳು ಜಲ್ಮಕ್ಕೆ ಜಟ್ಟಂಗಿ ರಾಮೇಶ
ಭಾಳಾಕ್ಷ ತನಗಾಗಲೆಂದ ॥೧೭೧॥

ಏಳೇಳು ಜಲ್ಮಕ್ಕೆ ಕಾಟಣ್ಣ ತನ್ನಣ್ಣ
ಏಳು ಜಲ್ಮಕ್ಕೆ ತಂದೆ ಕಂಪಿಲನು ।
ಏಳು ಜಲ್ಮಕೆ ಜಟ್ಟಂಗಿ ರಾಮನಿರಲೆಂದು
ಬಾಲರಾಮನು ತಾನು ನುಡಿದ ॥೧೭೨॥

ಏಳೇಳು ಜಲ್ಮಕ್ಕೆ ಮಾರಮ್ಮ ಸಿಂಗಮ್ಮ
ಏಳೇಳು ಜಲ್ಮಕ್ಕೆ ತನಗೆ ।
ಏಳೇಳು ಜಲ್ಮಕ್ಕೆ ಒಡಹುಟ್ಟಿದುರುಯೆಂದು
ನೀಲಕಂಠನ ಬೇಡಿಕೊಂಡ ॥೧೭೩॥

ಹರಕೆಯ ನಿಮುಗಿತ್ತು ಜಟ್ಟಂಗಿ ರಾಮನ
ವರ ಪಾದಗಳ ನೆನೆನೆನೆದು ।
ಹರುಷದಿ ಮೂಡಲ ಮುಂದಾಗಿ ಕುಳಿತನು
ತರಿಯೆಂದು ಶಿರವಿತ್ತ ರಾಮ ॥೧೭೪॥

ಹಾಗೆಂದು ರಾಮ ಖಂಡೆಯವ ತೆಕ್ಕೊಂಡರೆ
ಆಗ ನಿಲ್ಲುವರಾರರಸೆ ।
ಯೋಗತನವ ಮಾಡಿ ಕುಳಿತರೆ ನಾನಾಗ
ನೀಗಿದೆ ಶಿರವ ಕೇಳರಸೆ ॥೧೭೫॥

ಎಂದ ಮಾತನು ಕೇಳಿ ಕಂಪಿಲರಾಯ ಭೋ
ಯೆಂದು ಧರಣಿಗೆ ಬಿದ್ದ ।
ಕಾಯವ ಮರೆದು ಮೂರ್ಛೆಯಲಿ ತಲ್ಲಣಗೊಂಡು
ಬಾಯ ಬಿಟ್ಟನು ದೆಸೆದೆಸೆಗೆ ॥೧೭೬॥

ಉಕ್ಕುವ ಶೋಕಾಂಬುಧಿಯೊಳು ಬಿದ್ದನು
ತರ್ಕೈಸಿ ತಬ್ಬಿ ಕುಳ್ಳಿರಿಸೆ ।
ಮುಕ್ಕಣ್ಣ ಸಾಕೆಂದರೆ ರಾಮನಳಿದನು
ದುಃಖವ ಬಿಡು ಧುರಧೀರ ॥೧೭೭॥

ಮಡದಿಯ ನುಡಿಗೇಳಿ ಮಗನ ಕೊಲ್ಲಿಸಿ ಈಗ
ಕಡು ದುಃಖವನು ಮಾಡಿದರೆ ।
ಪೊಡವಿಯ ಜನರೆಲ್ಲ ಹಾಸ್ಯವ ಮಾಡ್ಯಾರು
ದೃಢ ಚಿತ್ತನಾಗೆಂದ ಮಂತ್ರಿ ॥೧೭೮॥

ಇತ್ತ ಕೇಳಿ[ಯೆ] ರಾಮ ಸತ್ತ ಸುದ್ದಿಯ [ನಾಗ]
ಹೆತ್ತಾಯಿ ಹರಿಯಲದೇವಿ ।
ಹೆತ್ತೊಡಲಿಗೆ ಹುಡಿಯನು ಹೊಯಿಕೊಳುತಲಿ
ಮತ್ತೆ ಅಂಗಜ ರಾಮನಳಿದ ॥೧೭೯॥

ಎದೆ ಒಡೆದ್ಧರಿಯಮ್ಮ ಮದನ ಕಂಬವ ಹಾಯೆ
ಚೆದುರ ರಾಮಯ್ಯ ಮಡಿದುದ ।
ಸೋದರರರೆಲ್ಲರು ಕೇಳಿಯೆ ಬಂದರು
ಮೂದೇವ ಶಿವ ಬಲ್ಲನವರ ॥೧೮೦॥

ಎಲ್ಲಿಯ ಸುದ್ದಿ ರಾಮಯ್ಯನಳಿದನೆಂದು
ಹೊಲ್ಲಹ ಸ್ವಪ್ನವ ಕಂಡೆ ।
ನಿಲ್ಲದೆ ಕಂಕಣ ಮುರಿವುದ ನಾ ಕಂಡೆ
ಬೊಲ್ಲನು ತುಡುಕಿ ಬಿದ್ದಿಹನು ॥೧೮೧॥

ಸಂದೇಹವಾಗಿದೆ ಬೈಚಪ್ಪ ಬರಲಿಲ್ಲ
ಇಂದು ಮನೆಗೆ ಬರದ್ಹೋದ ।
ಬಂದಿತಾಗಳೆ ಶಸಿವದನೆ ರತ್ನಿಯ ದಾಳಿ
ಎಂದು ಸೋರರರಳಲಿದರು ॥೧೮೨॥

ಹೊಟ್ಟೆ ಹೊರಕನಂತೆ ಹೊರಸಿಗೆ ನೀ ತಲೆ
ಗೊಟ್ಟು ಸಾವರೆ ಗಂಡುಮರಿಯೆ ।
ಅಟ್ಟ್ಯಾಡಿ ಕಡಿದರಮನೆಯ ಬಾಗಿಲಮುಂದೆ
ಒಟ್ಟಲಿಲ್ಲವೆ ರಾಶಿಗಳ ॥೧೮೩॥

ಮುಟ್ಟಿ ಬಂದವರನು ಕಟ್ಟಿ ಶಿರವ ಹಾಕಿ
ಬಿಟ್ಟಲ್ಲಿ ಹೊಟ್ಟೆಯ ಬಗೆದು ।
ಮೆಟ್ಟಿ [ಹಿ]ಡಿದು ಕಂಡ ಈಡ್ಯಾಡಲಿಲ್ಲವೆ
ಕಟ್ಟಿನೊಳಗೆ ಬೀಳಬಹುದೆ ॥೧೮೪॥

ಅಷ್ಟು ಮಂದಿಯ ಕಡಿದರಮನೆ ಬಾಗಿಲ ಮುಂದೆ
ಒಟ್ಟಲಿಲ್ಲವೆ ತಲೆಗಳನು ।
ಪಟ್ಟಣದೊಳು ಕಾದಿ ಮೆರೆಯದೆ ನೀನೀಗ
ದಿಟ್ಟ ಸಿಕ್ಕುವರೆ ಕೈಯೊಳಗೆ ॥೧೮೫॥

ಬಲ್ಲಿದ ರಾಮನ ಮಲ್ಲರು ಕರೆದೊಯ್ದು
ಮೆಲ್ಲನೆ ಕೊರಳ ಮುರಿವರೆ ।
ಕಲ್ಲು ಮರನ ಹಾಯ್ದು ಅತ್ತಳು ಹರಿಯಮ್ಮ
ಬಲ್ಲಿದನರಮನೆಯೊಳಗೆ ॥೧೮೬॥

ಬ್ಯಾಡ ಕೊಟ್ಟದ ರಾಮ ಸಾವಾಗ ನೆತ್ತರ
[ಕೋ] ಡಿ ಹರಿಯದೆ ಊರೊಳಗೆ ।
ರೂಢಿಗೆ ಬಲ್ಲಿದನೆಂದಿದ್ದ ಕಂದಯ್ಯ
ಹೇಡಿ ಸಾವಿಗೆ ಒಳಗಾಗೆ ॥೧೮೭॥

ಕಂದ ನಿಮ್ಮಯ್ಯನು ಕೊಂದು ಹಿಂಡಿಯ ಕೊಳ
ತಿಂದನೆ ಚೆನ್ನಿಗರಾಮ ।
ಮುಂದರಿಯದೆ ಪಡೆದನು ಅಪಕೀರ್ತಿಯ
ಚಂದ್ರಸೂರ್ಯರು ಉಳ್ಳನಕ ॥೧೮೮॥

ಹೊನ್ನ ಕಂಕಣ ಮುರಿವುದ ಕಂಡೆ ಕನಸಲಿ
ಮೊನ್ನೆಯಿಂದಿಗೆ ಮೂರು ದಿವಸ ।
ಇನ್ನಾರಿಗೆ ಪೇ[ಳಲೆಂ]ದಿದ್ದೆನು ನಾನು
ಚೆನ್ನಿಗ ರಾಮಯ್ಯ ಮಡಿದ ॥೧೮೯॥

ಅಕ್ಕ ಮಾರಮ್ಮನು ತಂಗಿ ಸಿಂಗಮ್ಮನು
ದುಃಖವಾರಿಧಿಯೊಳೊಲಾಡಿ ।
ಚೊಕ್ಕಟವಾಯಿತೆ ಕಂಪಿಲರಾಯಗೆ
ಮಿಕ್ಕು ನೋಡುವ ಕಣ್ಣಳಿಗೆ ॥೧೯೦॥

ಚೆನ್ನಿಗ ರಾಮನ ಕೊಂದು ಕಂಪಿಲರಾಯ
ತಣ್ಣಗೆ ಉಳಿದನೇ ಎಂದು ।
ಹೆಣ್ಣಿನ ಕುಟಿಲಕ್ಕೆ ಮರುಳಾದನಕಟೆಂದು
ಬಣ್ಣಿಸಿ ಅಳಲಿದರಂದು ॥೯೧॥

ಸೋತಳಕಟ ರಾಮಯ್ಯಗೆ ರತ್ನಾಜಿ
ಪಾತಗಿತ್ತಿಯನೊಲ್ಲದಿರಲು ।
ಘಾತಕವನು ಮಾಡಿ ಗಂಡಗೆ ಹೇಳಿಂತು
ಭೂತಳಪತಿಯ ಕೊಲಿಸಿದಳು ॥೯೨॥

ಹೆಣ್ಣಿನ ಮಾತು ನಿಶ್ಚಯವೆಂದು ಕಂಪಿಲ
ಅಣ್ಣ ರಾಮನ ಕೊಲಿಸಿದನು ।
[ಹ]ಣ್ಣಿದಳಕಟ ಕುಹಕವೆಂದು ಸಿಂಗಮ್ಮ
ಕಣ್ಣ ನೀರಿಲಿ ಕರದೊಳೆದು ॥೯೩॥

ಅತ್ತತ್ತು ಅರೆಯಾದಳು ಮಾರಮ್ಮನು
ಎತ್ತಣ ವಿಧಿಬಂತು ಎಮಗೆ ।
ಸತ್ತನೆ ಆಗಳೆ ಚೆಲುವ ರಾಮಯ್ಯನೆಂ
ದತ್ತಳು ತಂಗಿ ಸಿಂಗಮ್ಮ ॥೯೪॥

ಹೆಣ್ಣು ಮಕ್ಕಳ ಅಳಲನು ಹೊಯಿಕೊಂಡನು
ಮನ್ನೆಯ ಕಂಪಿಲರಾಯ ।
ಬಣ್ಣ ಬಂಗಾರವ ಕೊಡುವರಿನ್ನಾರೆಂದು
ಕಣ್ಣ ನೀರಲಿ ಕೈಯ್ಯದೊಳೆದು ॥೯೫॥

ಹಾ ! ನಿನ್ನ ಅನುಜನೆ ಮಲೆವರ ಗಂಡ ಹಾ !
ಹಾ ! ನಿನ್ನ ಚೆಲ್ವರಗಂಡ ।
ಹಾ ! ಎನ್ನ ಒಡಹುಟ್ಟಿದ ರಾಮಯೆನುತಲಿ
ಹಾ ! ಎಂದು ಕರೆದು ಹಮ್ಮೈಸಿ ॥೯೬॥

ಅಣ್ಣ ರಾಮಣ್ಣ ನಿನ್ನೋಡುವ ಕಣ್ಣಿಗೆ
ಸುಣ್ಣವ ಹಿಂಡಿದಂತಾಗೆ ।
ಹೆಣ್ಣು ಮಕ್ಕಳ ಅರ್ತಿಯ ಸಲ್ಲಿಸುವಂತ ರಾ
ಮಣ್ಣನ ಕೊಂದೆಯೊ ಶಿವನೆ ॥೧೯೭॥

ಶೂಲದ ಹಬ್ಬಕ್ಕೆ ಇನ್ನಾರು ಕರೆವರೊ
ಬಾಲೆ ಬಿದ್ದಳು ಸಿಂಗಮ್ಮ ।
ಲೋಲ ರಾಮನ ನೆನೆದತ್ತು ಸಿಂಗಮ್ಮ
ಮೂಲೋಕ ಮುಳಗಿತೊ ಎನುತ ॥೧೯೮॥

ಪಟ್ಟೆ ಪಟ್ಟಾವಳಿ ಮುತ್ತಿನಾಭರಣವ
ಪೆಟ್ಟಿಗೆ ತುಂಬ ಕಳುಹುವ ।
ಕೊಟ್ಟು ದೀಪಾವಳಿ ಹಬ್ಬವ ಮಾಡಿದ
ದಿಟ್ಟ ರಾಮನ ಕಾಣೆನೆನುತ ॥೧೯೯॥

ಇಟ್ಟು ನೆಲಕೆ ಶಾಪಿಸಿ ಎಕ್ಕೆ ಗುಳ್ಳೇವು
ಹುಟ್ಟಲಿ ಕುಮ್ಮಟದೊಳಗೆ ।
ನೆಟ್ಟನೆ ಏಳೆಂಟು [ಮಾ]ಸಕೆ ಗೋಳಿಟ್ಟು
ಕೆಟ್ಟು ಹೋಗಲಿ ರಾಮನಂತೆ ॥೨೦೦॥

ಪಟ್ಟದ ಮಗ ಕುಮಾರರಾಮನ ಕೊಂದು
ಸೃಷ್ಟಿಯೊಳಗೆ ಹೆಸರಾದ ।
ಕೆಟ್ಟೆನು ಅಣ್ಣ ರಾಮಯ್ಯ ಮಡಿದೆಯೆಂದು
ಬಟ್ಟ ಕುಚದ ಮೇಲೆ ಬಡಿ[ಯೆ] ॥೨೦೧॥

ಓಲೆಗಳುದುರಿ ಬಿದ್ದವು ನೆಲದ ಮೇಲೆ
ಕೀಲ ಕಂಕಣಗಳು ಸಡಿಲಿ ।
ಸಾಲು ಮುತ್ತಿನ ಸರ ಹರಿದು ಸಿಂಗಮ್ಮನು
ಲೋಲ ರಾಮನ ನೆನೆನೆನೆದು ॥೨೦೨॥

ನವಲಕ್ಷ [ತೆಲುಗರ] ಗಂಡ ರಾಮಯ್ಯನ
ಬವಣೆಗೆ ಸುರಿತಾಳ ಬಂದರೆ ಇಲ್ಲೆಂದು
ಕ್ರಮಗೆಟ್ಟು ಬಿದ್ದು ಸಿಂಗಮ್ಮ ॥೨೦೩॥

ದಡದಡ ದಡನೆ ಬಿದ್ದುರುಳಿ ಕಂಬವ ಹಾಯ್ದು
ಉಡಿಗೆ ಸಡಿಲಿ ಕೈಯ್ಯೊಳಾಂತು ।
ಕಡು ದುಃಖದಿಂದಲಿ [ಸಿಂಗಮ್ಮ] ಮಾರಮ್ಮ
ಹುಡಿಯಲ್ಲಿ ಬಿದ್ದು ಹೊರಳಿದರು ॥೨೦೪॥

ಅಪ್ಪ ನಿನಗೆ ಮನ ತಪ್ಪಿಯೆ ಕೊಲುವರೆ
ತಪ್ಪ ಕಾಯರೆ ಧರೆಯೊಳಗೆ ।
ಒಪ್ಪಿ ರಾಮನ ಕೊಲಿಸಿದ ಪಾಪಿಗೆ ಮುಂದೆ
ತಪ್ಪದು ನಾಯಕ ನರಕ ॥೨೦೫॥

ಸೇರದ ತಂದೆ ಇನ್ನಾರ ಮೇಲಾದರು
ವೀರ ರಾಮಯ್ಯನ ಕಳುಹಿ ।
ವಾರಣ ಹುಯ್ಯಲೊಳಗೆ ಕಾದಿ ಕೊಲ್ಲಿಸದೆ
ಊರೊಳಗಿಂತು ಮಾಡುವರೆ ॥೨೦೬॥

ಕೆಟ್ಟೆ ಮಗನೆ ಎಂದು ಹೊಟ್ಟೆಯ ಹೊಯ್ಕೊಂಡು
ಬಟ್ಟೆಲಿ ಬಿದ್ದು ಹೊರಳಿದಳು ।
ಹುಟ್ಟಿಸಿದವನು ಹಗೆಯಾದನೆ ನಿನಗೆಂದು
ನಿಟ್ಟೆಯ ಮುರಿದಳಲಿದಳು ॥೨೦೭॥

ದೇವರೆ ಈ ನೋವು ಆವಾಗ ಮರೆಯಲೊ
ಆವ ಮಕ್ಕಳ ನೋಡಲಯ್ಯಾ ।
ಗೋವಿಂದ ಹರಿ ಬ್ರಹ್ಮ ಶಿವನೆ ಪೊರೆಯೊ ಎಂದು
ದೇವಿ ಬಿದ್ದಳು ಹರಿಯಮ್ಮ ॥೨೦೮॥

ಮುಡುಬನ ಕೊಡದೆ ಕೆಡಿಸಿದೆ ಪಾಪಿ ದೇವನೆ
ಒಡಲ ಕಿಚ್ಚನು ಹೊಯಿಕೊಂಡೆ ।
ಬಡವರು ಹೆತ್ತ ಮಕ್ಕಳಿ ಇಲ್ಲವೆಯೆಂದು
ಸುಡಲೀ ಸಂಸಾರ ಯಾಕೆನುತ ॥೨೦೯॥

ಕೊಲ್ಲೆಂದು ಅಪ್ಪಣೆ ಕೊಟ್ಟ ಕಂಪಿಲರಾಯ
ಬಲ್ಲಿದ ಮಂತ್ರಿಶೇಖರಗೆ ।
ನಿಲ್ಲದೆ ತಲೆಯನು ಕಡಿದು ತಂದಾತನ
ಮೆಲ್ಲನೆ ಕರೆಸಿದಳಾಗ ॥೨೧೦॥

ಕರೆಸಿದಾಕ್ಷಣದಲ್ಲಿ ಮಂತ್ರಿಶೇಖರ ಬರೆ
ಹರಿಯಮ್ಮ ಮನದಲ್ಲಿ ನೊಂದು ।
ದೊರೆ ಶಿರೋಮಣಿ ರಾಮನ ಕೊಂದು ತಂದಂಥ
ಪರಿಯ ಹೇಳೆಂದಳಳಲಿದಳು ॥೨೧೧॥

ಬಂದು ಬೈಚಪ್ಪನು ನಿಂದು ಹರಿಯಮ್ಮಗೆ
ಕಂದನಳಿದನೆಂಬ ನೋವ ।
ಸಂದೇಹ ಬೇಡ ಸಕಲವು ಬಲ್ಲ ಹಿರಿಯರಿ
ಗೆಂದು ಬುದ್ಧಿಯ ಹೇಳಿದನು ॥೨೧೨॥

ಹೇಳಿದ ಮಾತನು ಕೇಳಿ ಹರಿಯಮ್ಮನು
ಬಾಳ ದುಃಖದಲತಿ ನೊಂದು ।
ಬಾಲ ಕುಮಾರ ರಾಮಯ್ಯಗೆ ಇಂದ್ರ
ಜಾಲವ ಕಾಣೆ ಬೈಚಪ್ಪ ॥೨೧೩॥

ಸತ್ತನೆಂದೆನಬೇಡ ಕೋವಿದ ರಾಮ ನಿಮ್ಮ
ಚಿತ್ತದೊಳೆಲ್ಲ ಹಾರೈಸೆ ।
ಮೃತ್ಯುಂಜಯನ ಕರುಣ ರಾಮಗೆ ಉಂಟೆಂದು
ಇತ್ತ ಪ್ರಧಾನ ತಿರುಗಿದನು ॥೨೧೪॥

ಬೇರೊಂದು ಮನೆಯಲಿ ರಾಮನ ಸ್ತ್ರೀಯರು
[ಬಾರಿಬಾರಿಗೆ] ಚಿಂತಿಸುತ ।
ಧೀರ ಕುಮಾರ ರಾಮನು ಎಮ್ಮರಮನೆಗೆ
ಬಾರದ ಕಾರಣವೇನು ॥೨೧೫॥

ಇಂದು ರಾತ್ರಿಯ ಸ್ವಪ್ನದಿ ಎಮ್ಮರಮನೆಯ
ನಂದಿಯ ಕಂಬವು ಮುರಿದು ।
ಅಂದು ನಮ್ಮಪ್ಪಾಜಿ ಕಳುಹಿದ ಕರಬೋನ
ಒಂದಿಲ್ಲದೆ ಒಡೆದಿಹವು ॥೨೧೬॥

ಕಿರಿಯ ಹೆಂಡತಿ ಹೇಳಿದಳೊಂದು ಕನಸನು
ತುರುಬು ನಿಂದುರಿವುದ ಕಂಡೆ ।
ಕೊರಳೊಳಗಿದ್ದ ಹೊಸ ಮುತ್ತಿನ ಸರಗಳು
ಹರಿವುದ ಕಂಡೆ ಕನಸಿನಲಿ ॥೨೧೭॥

ಮತ್ತೊಬ್ಬ ಸತಿಯು ಹೇಳಿದಳೊಂದು ಕನಸನು
ಚಿತ್ತಜಸಮರೂಪ ರಾಮ ।
ಅರ್ತಿಯಿಂದೇರುವ ಮಂಗಳ ಬೆಲ್ಲನು
ಸತ್ತುದ ಕಂಡೆ ಕನಸಿನಲಿ ॥೨೧೮॥

ರಾಮಗೆ ಹಿಡಿವ ಸತ್ತಿಗೆ ಮುರಿವುದ ಕಂಡೆ
ಪ್ರೇಮದಿ ನಾನಿಟ್ಟ ವಾಲೆ ।
ಭೂಮಿಗೆ ಬಿದ್ದುರುಳುವುದ ಕಂಡೆನು ನಾನು
ಕಾಮಿನಿ ಹೇಳಿದಳ್ ಕನಸ ॥೨೧೯॥

ಇಟ್ಟ ಮೂಗುತಿ ಮುರಿವುದ ಕಂಡೆ ಕನಸಿಲಿ
ತೊಟ್ಟ ಸರವು ಹರಿದಿಹುದು ।
ಉಟ್ಟ ಸೀರೆಯು ನಿಂದುರಿವುದ ಕಂಡೆನು
ಪಟ್ಟದ ರಾಣಿ ಹೇಳಿದಳು ॥೨೨೦॥

ಪ್ರಾನನಾಯಕ ರಾಮಯ್ಯನ ಮೇಲೊಂದು
ಉನಯವಾದ ಸ್ವಪ್ನಗಳು ।
ಮಾಣದೆ ಕಂಡೆನೆನುತ ಪಟ್ಟದರಸಿಯು
ಕೇಣಗೊಳುತ ಹೇಳಿದಳು ॥೨೨೧॥

ಎನ್ನ ತನುವ ಸೂರೆಗೊಂಬ ರಾಮಯ್ಯನ
ರನ್ನದೊಂಕಿಯ ಕೀಲ ಸಡಿಲ ।
ಚೆನ್ನಾಗಿ ಮುರಿವುದ ಕಂಡೆನು ಕನಸಿಲಿ
ಮೊನ್ನೆ ಇಂದಿಗೆ ಮೂರು ದಿವಸ ॥೨೨೨॥

ನೆಟ್ಟನೆ ನಾ ಕಂಡೆ ಕನಸನು ಈಗ
ಬಟ್ಟು ತುಂಡ್ರಿಸಿ ಬಿದ್ದಿಹವು ।
ಕಟ್ಟಿ[ದ] ಕೊರಳ ಕರಿಮಣಿ ಹರಿವುದ ಕಂಡೆ
ನಿಟ್ಟುರು[ಳ] ಕಂಡೆ ಕನಸಿನಲಿ ॥೨೨೩॥

ಚೆಲುವ ರಾಮಯ್ಯನ ಪಾದದ ಕಡೆಯವು
ಜಲ್ಲನೆ ಜರಿದು ಭೂಮಿಯೊಳು ।
ನಿಲ್ಲದೆ ಹೇಳಿದಳೊಂದು ಕನಸ ॥೨೨೪॥

ಪುರುಷ ರಾಮಯ್ಯನ ಕೊರಳೊಳು ಕಟ್ಟಿದ
ಸರಗೊಳಿಸಿದ ರನ್ನಗಳು ।
ಹರಿದು ಬೀಳ್ವುದ ಕಂಡೆನೆನುತೊಬ್ಬ ಸತಿಯಳು
ತರಳೆ ಹೇಳಿದಳೊಂದು ಕನಸ ॥೨೨೫॥

ಭೂಮಿಯನಾಳ್ವಂತ ರಾಮನ ಕೈಯೊಳ
ಗಾ ಮಹ ಖಂಡೆವು ಮುರಿದು ।
ಸೋಮಧರನು ಬಂದು ರಾಮನ ಕರೆವುದ
ಸೋಮವದನೆ ಹೇಳಿದಳು ॥೨೨೬॥

ಬೀಸುಸುಯಿವುತ ರಾಮನ ಮಡದಿಯರೆಲ್ಲ
ಹಸಿವ ಮರೆತು ಕುಳಿತಿಹರು ।
ಶಶಿಮುಖಿಯೊರ್ವಳಲ್ಲಿಗೆ ಬಂದು ಸುದ್ದಿಯ
ಉಸುರಿದಳವರಿಗಿಂತೆಂದು ॥೨೨೭॥

ಏನಾಗಿ ಅಳಿದನೆನುತ ರಾಮನಾಥನ
ಮಾನಿನಿಯರು ಕೇಳಿದರು ।
ನಾನೇನನರಿಯೆನು ಕಂಪಿಲರಾಯನು
ಮಾನಿನಿ ರತ್ನಿಯ ನುಡಿಗೆ ॥೨೨೮॥

ಚಿತ್ತ ಪಲ್ಲಟವ ಮಾಡಿದನೆಂದು ರಾಮಯ್ಯ
ಮತ್ತೆ ರತ್ನಿಯ ಮಾತ ಕೇಳಿ ।
ಚಿತ್ತಜರೂಪ ರಾಮನ ಕೊಂದು ಕಂಪಿಲ
ಉತ್ತಮ ಸತಿಗೆ ತೋರಿಸಿದ ॥೨೨೯॥

ಸತಿ ಕುಹಕವ ಹೇಳಿದಳೊಂದು ಮಾತನು
ಮತಿ[ಗೆಟ್ಟು] ಮನದೊಳು ನೊಂದು ।
ಪೃಥಿವಿಪಾಲಕ ಕೊಲಿಸಿಯೆ ಅಪಕೀರ್ತಿಯ
ಮತಿಹೀನನಾದ ಕಂಪಿಲನು ॥೨೩೦॥

ಇಂದ್ರ ಮಹೇಂದ್ರಜಾಲವ ಕೇಳಿ ಕಂಪಿಲ
ಚಂದ್ರನ ಪಳಿವ ರಾಮುಗನ ।
ನಿಂದುರುಹಿದ ಮಹಾಸೌಂದರ್ಯ ರಾಣೇರ
ಮುಂದಲೆ ರತ್ನಳೆ ಕೇಳಿ ॥೨೩೧॥

ಎಂದ ಮಾತನು ಕೇಳಿ ರಾಮನ ರಾಣಿಯರು
ನೊಂದು ಬಳಲಿ ಬಿಸುಸುಯಿದು ।
ಮುಂದುಗಾಣೆ ಕೊಲಿಸಿದ ಕಂಪಿಲನೆಂದು
ಚಂದಿರಮುಖಿರಯರ[ಳ]ಲಿದರು ॥೨೩೨॥

ನಾವು ಮಾಡಿದ ಫಲವಿಷ್ಟೆಂದು ತಮ್ಮೊಳು
ತಾವೆ ಮಾತಾಡಿ ನಿಶ್ಚಯಿಸಿ ।
ಮಾವನಿದ್ದೆಡೆಗೆ ಹೋಗುವ ಕಿಚ್ಚಬೇಡುವ
ರಾಮನ ಕೊಡುವೆವೆನುತ ॥೨೩೩॥

ದುಕುಲವ ಸಣ್ಣ ನಡುವಿಗೆ ಇಟ್ಟು ನವರತ್ನ
ಖಚಿತದಾಭರಣವ ತೊಟ್ಟು ।
ಮಕರಂಕನರಸಿಯ ಪಳಿವಂತೆ ರಾಮನ
ಸತಿಯರೆಲ್ಲರು ತೆರಳಿದರು ॥೨೩೪॥

ಹಿಡಿದ ಕಠಾರಿಯ ಬಲಗೈಯ್ಯ ಐವರು
ಎಡದ ಕೈಯಲ್ಲಿ ಕನ್ನಡಿಯು ।
ನಡೆದರು ಕಂಪಿಲ ರಾಯನ ಸಮ್ಮುಖಕೆ
ತಡೆಯದೆ ಕಿಚ್ಚ ಬೇಡುವರೆ ॥೨೩೫॥

ನಿಂಬಿಯ ಹಣ್ಣ ಕಣಗಿಲ ಕೋಲ ಪಿಡಿದರು
ಗಂಧಕಸ್ತುರಿಗಳ ಪೂಸಿ ।
ಚಂದ್ರನ ಅರಸಿಯ ಪಳಿವಂತೆ ರಾಮನ
ಮಂದಗಮನೆಯರು ಹೊರಟು ॥೨೩೬॥

ತೇಜಿಯನ್ನೈವರು ಏರುತ ಮೆರೆವುತ
ರಾಜವೀಧಿಯೊಳು ನಡೆತರುತ ।
ರಾಜ ಚೆಲುವ ರಾಮನ ಪೋಲ್ವರಾರೆಂದು
ರಾಜಮುಖಿಯರು ನಡೆತರಲು ॥೨೩೭॥

ಹಿರಿಯರು ಕಿರಿಯರು ದೊರೆಗಳು ಪ್ರಜೆಗಳು
ಪರಿವಾರ ಠಾಣ್ಯ ಮಾರ್ಬಲವು।
ಕರದೊಳೆದರು (ಕಣ್ಣುದಕದಿ) ರಾಮಗೆ
ಅರಸಿಯರನು ಕಂಡು ಬಳಲಿ ॥೨೩೮॥

ಅರಸ ಕೊಲ್ಲಿಸಬಹುದೆ ಕೋವಿದ ರಾಮನ
ದೊರೆ[ಯ]ವನೆಂದು ಮರುಗಿದರು ।
ಹರ ಚತುರ್ಭುಜ ಬ್ರಹ್ಮನ ಬೈದು ಬಳಲುತ
ಮೊರೆಯಿಡೆ ಪುರಜನವೆಲ್ಲ ॥೨೩೯॥

ನಡೆದು ಬಂದರು ಕಂಪಿಲರಾಯನೋಲಗಕೆ
ಎದೆಎಗೆಡದಾ[ಗ] ಪೊಗಳುತಲಿ ।
ಪೊಡವಿಯ ರಾಯರಗಂಡ ರಾಮುಗನೆಂದು
ನಡೆದರು ಕಿಚ್ಚ ಬೇಡುವರೆ ॥೨೪೦॥

ಆಡುತ ಗತಿಗತಿ ಛಂದಛಂದದಲಿ ಕೊಂ
ಡಾಡುತ ಗಂಡನ ಸೊಬಗ ।
ನೋಡುತ ಕನ್ನಡಿಯನು ನಲಿದಾಡುತ
ಹಾಡಿದರೊಲಿದು ರಾಮನನು ॥೨೪೧॥

ಎಳೆಮೀಸೆ ಕೊನೆಮೀಸೆ ಬರುವಂಥ ಭೂಮಿಯ
ದಳಪತಿಗಳ ಗಂಡನೆಂದು ।
ಕಳೆಯುಳ್ಳ ಚೆಲುವರ ಗಂಡನೆಂದೆನುತಲಿ
ನಲಿದು ಪಾಡಿದರು ರಾಮುಗನ ॥೨೪೨॥

ಹಾ! ಎನ್ನ ವೀರ ಹಾ! ಶೂರ ಮಲೆವರ ಗಂಡ
ಹಾ! ಎನ್ನ ಪ್ರಾಣದ ಕಾಂತ ।
ಹಾ! ಎನ್ನ ಜೋಡನಗಲುವರೆ ಚೆನ್ನಿಗ ರಾಮ
ಹಾ! ಎಂದು ಮೊರೆದರರ್ತಿಯಲಿ ॥೨೪೩॥

ಬಾಳು ಬಾಳು ಬಲು ಮಲೆತರ ಸಂಹಾರ
ಬಾಳು ಬಾಳೆಮ್ಮ ರಮಣನೆ ।
ಬಾಳು ಬಾಳು ಎಮ್ಮ ಬಿಟ್ಟಗಲುವರೆ
ಬಾಳು ಬಾಳೆಂದು ಮೊರೆದರು ॥೨೪೪॥

ಹಾ! ಎನುತೈವರು ಎಡಬಲ ನಡೆದರು
ಕೋಯೆಂದು ಕೂಗಿ ಬೊಬ್ಬಿರಿದು ।
ಕಾಯಜರೂಪ ರಾಮಯ್ಯನ ಪಾಡುತ
ರಾಯನ ಬಳಿಗೆ ನಡೆದರು ॥೨೪೫॥

ಅಸಹಾಯ ಶೂರ ರಾಮುಗನನು ನೆನೆವುತ
ಕುಶಲ ಕೋವಿದರ ನೋಡುತಲಿ ।
ಶಶಿಮುಖಿಯರು ತಮ್ಮ ಸವತೇರು ಸಹವಾಗಿ
ವಸುಧೀಶನೆಡೆಗೆಯಿದಿದರು ॥೨೪೬॥

ಮಸೆದಾಯುಧ ಪಿಡಿದಿರ್ದರು ಸತಿಯರು
ಬಿಸಿಗಲ್ಲ ನಾಸಿಕಕಿಟ್ಟು ।
ಹಸನುಳ್ಳ ರನ್ನಗನ್ನಡಿ ನಿಂಬಿಯ ಹಣ್ಣು
ಶಶಿಮುಖಿಯರು ನಡೆಗೊಳಲು ॥೨೪೭॥

ಬಂದರು ಐವರು ರಾಯನ ಮನೆಗಾಗಿ
ನಿಂದರು ಚಾವಡಿಯೊಳಗೆ ।
ಸಂದೇಹವಿಲ್ಲದೆ ಸತಿಯರೆಲ್ಲರು ಕೂಡಿ
ಬಂದರು ರಾಯನ ಬಳಿಗೆ ॥೨೪೮॥

ಒಂದೆಸೆಯಲ್ಲಿ ಕಾಟಣ್ಣನ ಸತಿಯರು
ಮಂದಗಮನೆಯರೊಡಗೂಡಿ ।
ನಿಂದಲ್ಲಿ ನಿಲ್ಲದೆ ನಲಿನಲಿದಾಡುತ
ಬಂದರು ಕಿಚ್ಚ ಬೇಡುವರೆ ॥೨೪೯॥

ಬಂದರು ಕಂಪಿಲರಾಯನ ಓಲಗಕೆ
ನಿಂದು ಕೈಮುಗಿದು ನುಡಿದರು ।
ಇಂದು ರಾಮಯ್ಯನ ಸಿಂಹದ [ಮರಿಯನ್ನು]
ಕೊಂದೆಯೊ ಏ ಕಂಪಮಾವ ॥೨೫೦॥

ಆವ ರಾಜ್ಯಕೆ ರಾಮನ ಕಳುಹಿದೆ ಮಾವ
ಆವ ರಾಯರ ಮೇಲೆ ದಂಡ ।
ಆವ ರಾಜ್ಯವ ಸಾಧ್ಯಮಾಡಲು ಕಳುಹಿದೆ
ಕೋವಿದ ರಾಮನನೆಂದು ॥೨೫೧॥

ಬಲ್ಲಾಳರಾಯನ ಬಳಿಗೆ ಕಳುಹಿದೆಯೊ
ಬಲ್ಲಿದ ರುದ್ರನ ಮೇಲೆ ।
ಖುಲ್ಲ ಮನದ ತುರುಕರ ಮೇಲೆ ರಾಮನ
ನಿಲ್ಲದೆ ಕಳುಹಿದೊ ಮಾವಾ ॥೨೫೨॥

ಗುತ್ತಿಯ ಸೀಮೆಯ ಜಗತಾಪಿ ಠಾಣ್ಯಕೆ
ಮುತ್ತಿಗೆ ಮಾಡಲು ಕಳುಹಿದೆಯಾ ।
ಮೊತ್ತದ ಹುಳಿಯಾರ ಮಾರನ ತರಹೇಳಿ
ಮತ್ತೆ ರಾಮನ ಕಳುಹಿದೆಯಾ ॥೨೫೩॥

ಸುರಿತಾಳನ ಮೇಲೆ ಕಳುಹಿದಿಯೊ ನವಲಕ್ಷ
ದೊರೆ ತೆಲುಗರ ಮೇಲೆ ದಂಡ ।
[ಪು]ರುಷ ರಾಮನ ಎಲ್ಲಿ ಕಳುಹಿದೆ ಹೇಳೆಂದು
ಅರಸು ಕಂಪಿಲನ ಕೇಳಿದರು ॥೨೫೪॥

ಅಂಬಲಿಗಾಗಿ ಅಮೃತಾನ್ನವ ಚೆಲ್ಲುವರೆ
ಕಂಬಳಿಗಾಗಿ ದೇವಾಂಗವನು ।
ಡೊಂಬತಿ ರತ್ನಿಯ ಮಾತನು ಕೇಳಿ ಮಾವ
ಕುಂಭಿನಿಪತಿಯ ಕೊಲಿಸುವರೆ ॥೨೫೫॥

ಎಕ್ಕೆಲೆಗಾಗಿ ಕಲ್ಪವೃಕ್ಷವ ಕಡಿವರೆ
ಕಕ್ಕೆಗಾಗಿ ಭಾವನ್ನವನು ।
ಚಿಕ್ಕ ಹೆಂಡತಿ ರತ್ನಿಯ ಮಾತ ಕೇಳಿ ಮಾಮಾ
ಲಕ್ಷಧಿಪತಿಯ ಕೊಲಿಸುವರೆ ॥೨೫೬॥

ಕೆಟ್ಟ ಮನಸಿನ ರತ್ನಿಯ ಮಾತ ಕೇಳಿಯು
ಪಟ್ಟದಾನೆಯ ಕೊಲ್ಲಬಹುದೆ ।
ಮುಟ್ಟಿತು ಪಾಪ ಕಂಪಿಲ ಮಾವಗೆಯೆಂದು
ಪಟ್ಟದ ಸತಿಯು ನುಡಿದಳು ॥೨೫೭॥

ಮಡದಿಯ ನುಡಿಯ ನಿಬದ್ದಿಯ ಮಾಡಿಯೆ
ಕಡಿಯೆಂದು ಚೆಲುವ ರಾಮಯ್ಯನ ।
ನುಡಿದು ಅಪ್ಪಣೆಗೊಟ್ಟು ಏನೆಂದು ಕಳುಹಿದೊ
ಒಡಲೊಳು ಉರಿಯೇಳಲಿಲ್ಲೆ ॥೨೫೮॥

ಪಾಪಿಯ ನುಡಿಯ ನಿಬದ್ದಿಯ ಮಾಡಿಯೆ
ಕೋಪವ ತಾಳಿ ಮನದೊಳಗೆ ।
ಭೂಪರಾಯರ ಗಂಡ ರಾಮನ ಕೊಲಿಸಿದೆ
ಪಾಪ ಸಂಭವಿಸಿದೆ ಮಾವಾ ॥೨೫೯॥

ಅಂಕಕ್ಕೆ ರಾಯರು ಬಂದರೆ ರಾಮನ
ಭೋಂಕನೆ ಕಳುಹಿಸಿ ಕೊಂದ್ಯಾ ।
ಬಿಂಕದಲಿದ್ದು ತಂದೆಯ ಮಾತಕೇ[ಳದೆ]
ಸೋಂಕಿನೊಳಿರ್ದನೆ ಮಾವ ॥೨೬೦॥

ತಂದೆಯ ಮಾತನು ಮೀರಿ ನಡೆದನೆ ಮಾವ
ಬಂಧು ಬಳಗ ಕೊಲಿಸಿದನೆ ।
ಹಿಂದಣ ರಾಯರು ಮುಂದಣ ರಾಯರು
ಮುಂದೆ ನಿಲ್ಲುವರೆ ರಾಮಯ್ಯಗೆ ॥೨೬೧॥

ಪಡೆದ ತಂದೆಯ ಮಾತ ಮೀರಬಾರದುಯೆಂದು
ಕಡಿಯೆಂದು ಶಿರವನೊಪ್ಪಿಸಿದ ।
ಪೊಡವಿಯ ರಾಯರು ಕಡುಗಲಿ ಧೀರರು
ಒಡನೆ ರಾಮನೊಳು ಕಾದುವರೆ ॥೨೬೨॥

ನೀನು ಅಪ್ಪಣೆಯೀಯೆ ಕೊಂದ ಪುಣ್ಯಾತ್ಮಗೆ
ಏನೆಂದು ಕೈಯೆದ್ದವೂ ಮಾವ ।
[ಏನು] ಬಲ್ಲನು [ಅವ] ನಮ್ಮ ನೋವುಗಳನು
ಮಾದೇವ ಬಲ್ಲ ಕೇಳರಸ ॥೨೬೩॥

ಕಣ್ಣಿಲಿ ಕರ ಚೆಲುವ ರಾಮನ ಕೊಲಿಸಿದೆ
ತಣ್ಣಗಾಯಿತೆ ನಿನ್ನ ಹೊಟ್ಟೆ ।
ಪುಣ್ಯದ ಕರುಳನ್ನು ಉಣ್ಣಿಸಿದೆ ಕಂಪಾಜಿ
ತಣ್ಣ ಗಾಯಿತೆ ರತ್ನಿ ನಿನಗೆ ॥೨೬೪॥

ಚೆನ್ನ ರಾಮಗ ಕಂಡು ಕನ್ನೆ ತಾ ಮನಸೋತು
ನಿನ್ನ ಮಗನ ಪಿಡಿದಳು ।
ಮನ್ನಿಸಿ ಕೂಡಲೊಲ್ಲದೆ ಬರಲಾಗಿಯೆ
ನಿನ್ನೊಳು ಪೇಳಿ ಕೊಲಿಸಿದಳೆ ॥೨೬೫॥

ನಿಚ್ಚಟ ರಾಮಯ್ಯ ಮುಂಚೆ ಹೋಗಿರುವದು
ಆಶ್ಚರ್ಯವಾಯಿತು ನಮಗೆ ।
ಉತ್ಸಾಹದಿಂದ ಗಂಡನ ಕೂಡಿಕೊಂಬೆವು
ಕಿಚ್ಚ ಕೊಡಯ್ಯ ಮಾವಾಜಿ ॥೨೬೬॥

ಬೇಡಿದರೊಲಿದು ಮಾವಗೆ ಕಿಚ್ಚು ಕೊಡುಯೆಂದು
ಕೂಡೆ ಮುಗಿದು ಕರಗಳನು ।
ನೋಡುವ ಜನ[ರು] ರತ್ನಿಯ ಶಾಪಿಸಲಾಗಿ
ಬೇಡಿದರೊಲಿದು ಮುಕ್ತಿಯನು ॥೨೬೭॥

ಕೊಂಡವ ತೋಡಿಸೊ ಕೆಂಡವ ಹಾಕಿಸೊ
ದಿಂಡೆಯ ರತ್ನಿಯ ಕರಸೊ ।
ಮಂಡಲಪತಿ ರಾಮನ ಪಿಡಿದ ಬಗೆಯನು
ಹೆಂಡತಿಯನು ಕೇಳುವೆವೊ ॥೨೬೮॥

ಮನಗು ಕಸ್ತೂರಿ ಶ್ರೀಗಂಧ ಕೆಮ್ಮಣ್ಣೆಯ
ಅನುಗೊಳಿಸಿದರು ಕೊಂಡದೊಳು ।
ಮೊನೆಗಾರ ರಾಮಯ್ಯ [ಮೆ]ಚ್ಚಲಿ ಮಾವಯ್ಯ
ಘನದಿ ಅಪ್ಪಣೆ ಕೊಟ್ಟು ಕಳುಹೊ ॥೨೬೯॥

ಕಾಟಣ್ಣನರಸಿಯು ಕಡು ಚೆಲುವೆ [ಕೆಂಪಿಲಿ]
ಪಾಟಸಿ ನಿಂದು ಸಮ್ಮುಖದಿ ।
ಕೋಟಾನುಕೋಟಿ ಕೋವಿದ ಮಾನ್ಯರಗಂಡ
ಕಾಟನೊಡನೆ ಕಿಚ್ಚನಿಯೊ ॥೨೭೦॥

ಮಂಡಲಪತಿಯು ರಾಮಯ್ಯ ನೆಕ್ಕಟಿಗರ
ಹೆಂಡಿರುಗಳು ತಮತಮಗೆ ।
ಚಂಡ ವಿಕ್ರಮ ಕಂಪಿಲರಾಯ ಬಾಳೆಂದು
ದಂಡಿಸಿ ಕಿಚ್ಚಬೇಡಿದರು ॥೨೭೧॥

ನಿಮ್ಮ ಕುಮಾರ ರಾಮಯ್ಯನು ಸ್ವರ್ಗದಿ
ಉಮ್ಮಾಯದಿಂದ ಬಾಳುವನು ।
ನಮ್ಮ ಪಾಡೇನು ಕಂಪಿಲ ಮಾವ ಕೇಳೆಂದು
ಉಮ್ಮಾಯ ಕಿಚ್ಚಕೊಡೆಂದು ॥೨೭೨॥

ಥಾಳಕತನದಿ ಅರಸು ರಾಜೇಂದ್ರನ
ಕೇಳಿದರಾಗ ಕಿಚ್ಚವನು ।
ಬಾಲೇರು ನಿಷ್ಠುರ ನುಡಿಯಲು ಕಂಪಿಲ
ಹೇಳೆಂದ ಮಂತ್ರೀಶನೊಡನೆ ॥೨೭೩॥

ಬೇಡ ನಿಮ್ಮತ್ತೇರ ಕೂಡಿಕೊಂಡಿ [ರಿ] ನೀವು
ನಾಡನು ಹಂಚಿ ಕೊಡಿಸುವೆನು ।
ರೂಢಿಯೊಳಧಿಕ ರಾಮನ ಬಿಟ್ಟಿರುವುದು
ಖೋಡಿಯಲ್ಲವೆ ಕಂಪ ಮಾವ ॥೨೭೪॥

ರಂಡೆತನಕೆ ಬೇರೆ ರಾಜ್ಯವ ಕೊಡುವೆನು
ಚಂಡಿತನವು ಬೇಡ [ಮ್ಮ]ಗಳೆ ।
ಮಂಡಲದೊಳು ರಾಮನ ಬಿಟ್ಟಿರುವುದು
ಭಂಡವಲ್ಲದೆ ಕಂಪಮಾವ ॥೨೭೫॥

ಆಡಿದ ಮಾತ ಕೇಳದೆ ಮೂರ್ಖತನವನು
ಮಾಡಿದರೆಂದು ಕೋ [ಪಿಸುತ] ।
ನೋಡು ನೀ ಬೈಚಪ್ಪ ಇದಕೊಂದುಪಾಯವ
ಮಾಡೆಂದು ಮತ್ತೆ ನುಡಿದನು ॥೨೭೬॥

ಏನು ಹೇಳಿದರೆ ಕೇಳರು ರಾಮನಾಥನ
ಮಾನಿನಿಯರು ಬೈಚಪ್ಪ ।
ಮಾನವಮಾಡಿ ನೀನವರನು ಕಳುಹೆಂದು
ಭೂನಾಥ ನುಡಿದ ಮಂತ್ರಿಯೊಳು ॥೨೭೭॥

ಹೋಗೆಂದ ಮಾತನು ಕೇಳುತ ಬೈಚಪ್ಪ
ಸೋಗೆಗಂಗಳ ಚೆಲುವೆಯರ ।
ನಾಗಕುಂಡಲನ ಕರುಣ ರಾಮಗುಂಟೆಂದು
ಆಗ ಕಳುಹಿದ ಬೈಚಪ್ಪ ॥೨೭೮॥

ಚಂದ್ರಶೇಖರ ಕರುಣ ರಮಗುಂಟೆಂದು
ಇಂದುವದನೆಯ ಹೋಗೆನಲು ।
ಕುಂದದನಾಡಿದೆ ಬೈಚಪ್ಪ ನಾವಿರುವದು
ಅಂದಲ್ಲವೊ ಕಳುಹೆನುತ ॥೨೭೯॥

[ಈವೆ] ನಿಂದೆಗಳ ನಮಗೆ ನೀ ಬೈಚಪ್ಪ
ನೀವಾವ ಪರಿಯಲಿ ನಮ್ಮ ।
ಕಾವನ ಸಮರೂಪ ರಾಮಯ್ಯನು ಹೋದ
ಠಾವಿಗೆ ನಮ್ಮ ಕಳುಹಯ್ಯ ॥೨೮೦॥

ಕಂಪ ಮಾವ ಕಾಮಸನ್ನಿಭ ಮಂತ್ರಿಯೆ
ದಂಪತಿಗಳ ಕೂಡಿ [ಸಿರೆನೆ] ।
ತಿಂಥಿಣಿಯಲಿ ಪಾನ ಪನ್ನೀರುಗಳಿಂದ
ಸಂತೈಸಿ ಕಳುಹು ಹೋಗೆಂದ ॥೨೮೧॥

ಒಡೆಯನ ಮಾತನು ಕೇಳುತ ರಾಮನ
ಮಡದಿಯರನು ಕರೆದೊಯಿದು ।
ತಡೆಯದೆ ಬುದ್ಧಿಯ ಹೇಳಿ ಮನೆಗೆ ಕಳುಹಿ
ಒಡೆಯ ಕಂಪಿಲಗಿಂತೆಂದ ॥೨೮೨॥

ಪಟ್ಟದ ಒಡೆಯ ಕುಮಾರ ರಾಮಯ್ಯನ
ಪಟ್ಟದರಸಿಯನು ಕರೆದು ।
ಗುಟ್ಟ್ಯಾಗಿ ಬುದ್ಧಿಯ ಹೇಳಿ ಬೈಚಪ್ಪನು
ದಿಟ್ಟ ಕಂಪಿಲಗಿಂತೆಂದ ॥೨೮೩॥

ರಾಮನ ಮಡದಿಯರ ಕೊಂದುದುಂಟಾದರೆ
ಸೀಮೆ ಹಿಡಿಯೆ ದಂಡುಬಹುದು ।
ತಮ್ಮಿಸಬೇಕಾರು ತಿಂಗಳುಯೆನುತಲಿ
ಗಮ್ಮನೆ ರಾಯಗ್ಹೇಳಿದನು ॥೨೮೪॥

ನಿಲ್ಲಬೇಕಾರು ತಿಂಗಳು ರಾಣಿವಾಸವು
ಕೊಲ್ಲಬಾರದು ರಾಯ ಎನುತ ।
ಮೆಲ್ಲನೆಲ್ಲರ ನೆಲಮಾಳಿಗೆ ಕೂಡಿಸಿದ ನೆಂ
ಬಲ್ಲಿಗೆ ಸಂಧೀ ಪೂರಾಯ್ತು ॥೨೮೫॥

ಅಂತು ಸಂಧಿ ೧೦ಕ್ಕಂ ಪದನು ೧೭೧೩ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೧೧

❖

ನೇಮಿಯ ಕಾಳಗ–ಸೋಲು

ಶ್ರೀಗಿರಿಜಾ [ಸ್ಯಾಂಬುಜ] ದಿನನಾಯಕ
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗಕುಂಡಲ ಶರಣಾರ್ಥಿ ॥೧॥

ಹರಿಗರ್ಧದೇಹವ ಹರುಷದಿಂದತ್ತನೆ
ಗಿರಿಜೆಯರಸ ಚಿನ್ಮಯನೆ ।
ವರಸುತ ಗಣಪಗೆ ಕರಿಮುಖವಿತ್ತನೆ
ವರ ಜಟ್ಟಂಗೀಶ ರಕ್ಷಿಪುದು ॥೨॥

ಕಮಲದೊಳು ಜನಿಸಿದ ಕಮಲ[ಭವ]ನ ಸತಿ
ಮಮಕಾರವೆಂಬ ಜಗದಂಬೆ ।
ಕಮಲಮುಖೀಯೆ ಸರಸ್ವತಿಯೆನ್ನ ಜಿಹ್ವೆಗೆ
ಕ್ರಮದಿಂದ ನೆಲೆಸೆಲೆ ತಾಯೆ ॥೩॥

ಶಂಖಚಕ್ರವು ದ್ವಾದಶ ನಾಮದಾತನೆ
ಬಿಂಕದಸುರರ ಗೆದ್ದವನೆ ।
ಪಂಕಜನಾಭ ಪಾರಿಜಾತದಯ್ಯನೆ
ಶಂಕೆಯಿಲ್ಲದೆ ಕೊಡು ಮತಿಯ ॥೪॥

ನವರತ್ನಖಚಿತ ಬಂಗಾರದಲೊಪ್ಪುವ
ಭುವನದೊಡೆಯ ಕೃಷ್ಣನರಸಿ ।
ವಿಮಲ ಸುಗಾತ್ರೆ ಕಮಲಮುಖಿ ಶ್ರೀಲಕ್ಷ್ಮಿ
ಕ್ರಮದಿಂದ ಕರುಣಿಸು ಮತಿಯ ॥೫॥

ಕ್ಷೀರಾಬ್ಧಿಶಯನನೆ ವಾರಿಜನಾಭನೆ
ಕಾರುಣ್ಯನಿಧಿ ಪೀತಾಂಬರನೆ ।
ಧಾರುಣಿಯೊಳು ಗರುಡಾದ್ರಿ ಚೆನ್ನಿಗ ಚೆಲುವ
ನಾರಸಿಂಹನೆ ಕೊಡು ಮತಿಯ ॥೬॥

ಭೂಮಿಯೊಳಗೆ ರಕ್ಷಿ[ಪ] ಜಟ್ಟಂಗಿಯ
ಸ್ವಾಮಿ ರಾಮಯ್ಯಗೊಂದಿಸುವೆ ।
ಪ್ರೇಮದಿ [ಈ]ವೃತ್ತಾಂತವ ಕೇ[ಳ್ವುದು]
ಕೋಮಲ ಸಕಲ ಸಜ್ಜನರು ॥೭॥

ಅರಿರಾಯ ತಿಮಿರಮಾರ್ತಾಂಡ ಮಸ್ತಕಶೂಲ
ಧುರಧೀರ ರಾಮನಾಥನನು ।
ದೊರೆ ಕಂಪಿಲನು ಕೊಲಿಸಿದನೆಂಬ ಸುದ್ದಿಯು
ಹರಿಯಿತು ಮೂಲೋಕದೊಳಗೆ ॥೮॥

ಪಟ್ಟಣದ ರಾಮನಾಥನು ಸತ್ತ ಸುದ್ದಿಯ
ಕೊಟ್ಟದ ಬೇಡರು ಕೇಳೆ ।
ನಿಟ್ಟೆಲು ಮುರಿ[ದ ಹಾ]ಗಾಯಿತು ಮನಸಿಲಿ
ಕೆಟ್ಟೆವೆನುತ ಮರುಗಿದರು ॥೯॥

ರಾಮನಳಿದ ಸುದ್ದಿ ಭೂಮಿಯೊಳಗೆ ಪುಟ್ಟೆ
ಆ ಮಹಾ ಸುರಿತಾಳ ಕೇಳಿ ।
ಕೋಮಲೆಯರ ಕೈಯ ಹೊಡೆದು ನಗುತಲಿರ್ದು
ರೋಮಪುಳಕ ಹರುಷದಲಿ ॥೧೦॥

ಚಿನ್ನದ ಮಲಗು ಮುಡಿಯ [ನೆಮ್ಮಿ] ಸುರಿತಾಳ
ತನ್ನ ಮಂತ್ರಿಯ ಕರೆಸಿದನು ।
ಇನ್ನೇಕೆ ಕುಮ್ಮಟದರಸು ರಾಮುಗ ಸತ್ತ
ನಿರ್ಣೈಸೊ ನೇಮಿ ಕಾಳಗಕೆ ॥೧೧॥

ಯಾಕೆ ಈ ಮಾತು ಸಲ್ಲದು ರಾಯ ನಿನಗೀಗ
ಭೂಕಾಂತಗೆ [ಮರಣ]ಹುದೆ ।
ಶ್ರೀಕಾಂತನ ಕೃಪೆಯುಳ್ಳವನಳಿವನೆ
ಲೋಕಕೆ ಇದು ಸಟೆ ಮಾತು ॥೧೨॥

ಹಣವ ಗಳಿಸಿ ರಾಜ್ಯವನುಂಡು ಎನ್ನಯ
ಮನೆಯೊಡವೆಯ ಹಾಳುಮಾಡಿ ।
ಮೊನೆಗಾರಿಕೆಯೆಂಬುದೆಳ್ಳಿನಿತಿಲ್ಲವು
ಘನ ಹೇಡಿ ನೇಮಿ ಹೋಗೆಂದ ॥೧೩॥

[ತನ್ನ ಮನೆಯ] ಬೇಹಿನವರ ಕಡೆಯಿಂದ
ಚೆನ್ನಾಗಿ ಬುದ್ಧಿಯನರಿದು ।
ಇನ್ನಿದು ನಿಜವಹುದಲ್ಲವೆಯೆಂದಾಗಿ
ತಮ್ಮೊಳೇಕಾಂತವಾಡಿದರು ॥೧೪॥

ಚೆನ್ನಾಗಿ ಸುದ್ದಿಯ ಕೇಳಿ ಬಾಯೆನುತಲಿ
ತನ್ನಯ ಮನುಷ್ಯರ ಕಳುಹೆ ।
ಮನ್ನಿಸಿ ವೀಳ್ಯವ [ಕೊಟ್ಟು] ಕಳುಹುವಾಗ
ಚೆನ್ನಾಗಿ ನುಡಿಯಿತು ಗೌಳಿ ॥೧೫॥

ಕೇಳಿದ ಸುರಿತಾಳ ರಾಮ ಸತ್ತನುಯೆಂದು
ಆಲೋಚಿಸಿ ಮನದೊಳಗೆ ।
ಗೌಳಿ ನುಡಿಯಿತು ರಾಮ ಸತ್ತುದು ಸಟೆಯೆಂದು
ಆಳ ಬೇಗದಿ ಕಳುಹಿದನು ॥೧೬॥

ಸುರಿತಾಳನ ಕೈಯ ಕಳುಹಿಸಿಕೊಂಡಾಗ
ಬರುತಿರ್ದರು ಬೇಹಿನವರು ।
ತರತರದಲ್ಲಿ ನಿಂದು ಬರುವಂಥ ಮನುಜರ
ಪರಿಪರಿಯಲಿ ಕೇಳುತಲಿ ॥೧೭॥

ನಿಂದಲ್ಲಿ ನಿಲ್ಲದೆ ಬೇಹಿನ ಚರರಾಗ
ಒಂದಾರು ದಿವಸ ಬೇಗದಲಿ ।
ತಂದೆ ಮಗನ ಕೊಲಿಸಿದ ನಿಶ್ಚಯವೆಂದು
ಬಂದು ಚರರು [ಕೇ]ಳಿದರು ॥೧೮॥

ಅಲ್ಲಲ್ಲಿ ಕೇಳುತ ಅಲ್ಲಲ್ಲಿ ನಿಲ್ಲುತ
ಅಲ್ಲಲ್ಲಿ ಗುಜುಗುಜುಯೆನುತ ।
ಅಲ್ಲಲ್ಲಿ ಸುದ್ದಿಯ ನಿರ್ಧರಗಳ ಕೇಳಿ
ಅಲ್ಲಿ ಹೊಕ್ಕರು ಕುಮ್ಮಟವ ॥೨೦॥

ಮನೆಮನೆ ಅಂಗಡಿ ರಾಜವೀಧಿಗಳೊಳು
ಜನ ಬಹುಮೊತ್ತಯಿದ್ದೆಡೆಯ ।
ತಮತಮಗತ್ತ ಅರಸಿ ಕೇಳಿದರಾಗ
ಜನಪತಿ ರಾಮನಳಿದುದ ॥೨೧॥

ಹಾದಿಯಾಯಿತು ಚೆನ್ನಾಗಿ ನಿಶ್ಚೈಸುತ
ಹೋದ ಪ್ರಾಣಗಳು ಬಂದಂತೆ ।
ಭೇದಿಸಿ ನುಡಿಗಳನಾದರಿಸುತ ಕೇಳಿ
ಸೋದರರೆಲ್ಲಳಲುವದ ॥೨೨॥

ಯಾತಕ್ಕೆ ಸತ್ತವೆನುತ ರಾಮಯ್ಯನು
ಭೀತಿಗೊಳುತ ಕೇಳುತಿರಲು ।
ಈ ತೆರದಲಿ ರಾಮನುಳಿದ ವೃತ್ತಾಂತವ
ನಾತು [ಹೇ]ಳಿದಳೊಬ್ಬ ದಾದಿ ॥೨೩॥

ರಾಮನ ಚೆಂಡು ರತ್ನಾಜಿಗೆ ಸಿಕ್ಕಲು
ಕಾಮಸನ್ನಿಭ ಬೇಡ ಹೋದ ।
ಕಾಮಿಸಿ ಹಿಡಿಯೆ ರಾಮಯ್ಯ ಸಿಕ್ಕದೆ ಹೋದ
ಆ ಮಹಾರಾಯಗೆ ಹೇಳಿ ॥೨೪॥

ಅಂದು ರಾಯಗೆ ಹೇಳಿ[ಕೊಲಿಸಿದಳು] ರಾಮನ
ಎಂದು ಹೇಳಿದರು ಸುದ್ದಿಯನು ।
ಬಂದರು ರಾಮನ ಸತ್ತ ಸುದ್ದಿಯ ಕೊಂಡು
ನಿಂದು ಡಿಳ್ಳಿಯ ಪಟ್ಟಣಕೆ ॥೨೫॥

ಬಿಟ್ಟಲ್ಲಿ ಬಿಡದೆ ಬಂದರು ಬೇಹುಕಾರರು
ಕಟ್ಟಿಸು ಜೀಯ ಗುಡಿಗಳ ।
ಪಟ್ಟಣಗಳನು ಶೃಂಗರಿಸೊ ರಾಮನು ಸತ್ತ
ಸೃಷ್ಟಿಪಾಲಕ ಸುರಿತಾಳ ॥೨೬॥

ಯಾತಕ್ಕೆ ಸತ್ತನೆನಲು ಲಗ್ಗೆಯ ಚೆಂಡು
ಆತು ಕಂಪಿಲನರಮನೆಗೆ ।
ಸೋತು ಬೀಳಲು ರತ್ನಾಜಿಯೆಂಬಳು ಕಂಡು
ಕಾತರಿಸದೆ ಚೆಂಡನೊಯ್ಯೆ ॥೨೭॥

ಬೇಡ ಹೋದರೆ ರಾಮ ಅರಮನೆಯೊಳು ಚೆಂಡ
ನೋಡಿ ಸೈರಿಸದೆ ಹಿಡಿಯಲು ।
ರೂಢೀಶ ರಾಮನು ಒಳಗಾಗದೆ ಹೋದ
ಗಾಢದಿ ಗಂಡಗ್ಹೇಳಿದಳು ॥೨೮॥

ಮಂದಿ ಕುದುರೆ ಸಹವಾಗಿ ಮನೆಯ ಮುತ್ತಿ
ಕೊಂದು ತಲಯನು ತಾರೆನಲು ।
ತಂದ ತಲೆಯ ಮೆಟ್ಟಿ ಮಿಂದಳು ರತ್ನಾಜಿ
ಎಂದು ಹೇಳಿದರು ಸುದ್ದಿಯನು ॥೨೯॥

ಎಂದ ಮಾತನು ಕೇಳಿ ಹರುಷದಿ ಮನದೊಳು
ಒಂದು ಬುದ್ಧಿಯನೆಣಸಿದನು ।
ಬಂದು ಕುಳಿತು ಸುರತಾಳ ಚಾವಡಿಯೊಳು
ನಿಂದು ಮಂತ್ರಿಯರ ಕರೆಸಿದನು ॥೩೦॥

ಹಮ್ಮಿನಿಂದಲಿ ರಾಮ ನಮ್ಮ ಲೆಕ್ಕಿಸದಿಹ
ಅಮ್ಮನ ಕತದಿಂದ ಮಡಿದ ।
ನಿರ್ಮಳವಾಯಿತು ನಮಗೆಂದು ಸುರಿತಾಳ
ಉಮ್ಮಾಯದಿಂದ ನಸುನಗುತ ॥೩೧॥

ಪೊಡವಿಯ ರಾಯರ ಗಂಡನೆಂದೆಂಬುತ
ಕಡೆಯವನಿಕ್ಕಿ ಕಾಲೊಳಗೆ ।
ನುಡಿವ ನಾಲಗೆಯನುರುಹುವೆಯೆಂದಿದ್ದೆನು
ಮಡಿದು ಮುಂಚಿದ ಕರ ತುಂಟ ॥೩೨॥

ಇಳಿಯಿತು ಎನ್ನಯ ಎದೆಯ ಮೇಳಣ ಗುಂಡು
ಕಳೆಯಿತು ಕಣ್ಗಳ ಕಸವು ।
ಅಳಿದು ಮುಂಚಿದ ರಾಮನೆನುತಲಿ ಸುರಿತಾಳ
ಕಳಕಳಿಸುತ ನಗುತಿರ್ದ ॥೩೩॥

ರಾಯ ಸುರಿತಾಳನು ನೇಮಿಯ ಕರೆಸಿದ
ದಾಯ ಬಂದಿತು ನಮಗಿಂದು ।
[ಸ್ತ್ರೀ]ಯಳ ಮಾತಿಗೆ ಕೋಪಿಸಿದ ಕಂಪಿಲ
ಬಯಲಾಯಿತು ಕುಮ್ಮಟವು ॥೩೪॥

ಕಾದಬೇಕೆಂದ ಸುರಿತಾಳ ನೇಮಿಯ ಕೂಡ
ಬಾದುರಖಾನನ ಹಿಡಿದು ।
ಮೇದಿನಿಯೊಳು ಹೊಸಪರಿಯ ಮಾಡುವೆನೆಂದು
ಕಾದ ಹೇಳಿದ ನೇಮಿಯೊಡನೆ ॥೩೫॥

ನೇಮಿಯಖಾನನ ಕರೆದನು ಸುರಿತಾಳ
ನೇಮಿಸಿ ಹೇಳಿ ಬುದ್ಧಿಯನು ।
ಕಾಮನಸನ್ನಿಭ ರಾಮನಳಿದ ಸುದ್ದಿಯ ಕೇಳಿ
ಭೂಮಿಯೆಲ್ಲವು ಮೊರೆದೆದ್ದು ॥೩೬॥

ಆನೆ ಕುದುರೆ ತಳತಂತ್ರ ಮಾರ್ಬಲ ಕೂಡಿ
ದಾನವರೊಂದಾಗಿ ತೆರಳೆ ।
ಹಾನಿ ಬಂದಿತು ನೇಮಿ ಹೀನಬಾರದ ಹಾಗೆ
ಸೇನೆ ಸಹಿತ ತೆರಳೆಂದ ॥೩೭॥

ಪ್ರೇಮದಿ ಕುಮ್ಮಟಕ್ಹೋಗಿ ಮುತ್ತಿಗೆ ಮಾಡು
ರಾಮನ ಪಟ್ಟಣಕೆನುತ ।
ಧಾಮಧೂಮವ ಮಾಡಿ ಸುಡುಯೆಂದು ಸುರಿತಾಳ
ನೇಮಿಯ ಕೂಡ ಹೇಳಿದನು ॥೩೮॥

ನಿರ್ಥರ ರಾಮನು ಮಡಿದ ಕುಮ್ಮಟಕೀಗ
ನಿರ್ಧೂಮ ಮಾಡಬೇಕೆಂದ ।
ಕದ್ದು ಹೋದಂತ ಬಾದುರನ ಹಿಡಿದು ತಂದು
ಬುದ್ಧಿಯ ಕಲಿಸಬೇಕೆಂದ ॥೩೯॥

ಏನ ಹೇಳುವೆ ನಾನು ಮಂಡಲಿಕರು ಸಹ
ಖಾನ ಖಾನರು ತೆರಳಿದರು ।
ಮಾನವಖಾನನ ಮಗ ಖೇಮಖಾನನು
[ತಾನು ಸಹವಾಗಿ] ತೆರಳಿದರು ॥೪೦॥

ಖಾದಿಯಖಾನನ ಶಕಲಾತಿಖಾನನ
ಮೇದಿನಿಖಾನ ವಜೀರ ।
ಆದಿಯಖಾನನ ಬೂದಿಯಖಾನ
ಸೋದಿಯಖಾನನ ಕರೆಸಿ ॥೪೧॥

ಅಂಬರಖಾನನ ತುಂಬರಖಾನನ
ಬೊಂಬರಖಾನ ಮಹಮದನ ।
ಗಂಭೀರಖಾನನ ಗಜಬಿಜಿಖಾನನ
ಸಂಭ್ರಮದಿಂದ ಕರೆಸಿದನು ॥೪೨॥

ಕರೆಕರೆ ಖಾನ ವಜೀರ ರಾಹುತರನು
ಕರೆ ಖಾನ [ವೀರ]ರೆಲ್ಲರನು ।
ಕರೆ ಖಾನ ಗೌ[ಳ] ಗುಜ್ಜರ ಗೌಳಿ ತುರುಕರ
ಭರದಿಂದ ಕಾದಲಟ್ಟಿದರು ॥೪೩॥

ದುರ್ಜಟಿಖಾನ ಬಿಜ್ಜಟಿಖಾನ ಭುಜಬಲ
ದುರ್ಜರಿ ಆಹಾರಖಾನ ।
ಹೆಜ್ಜೆ ಹೆಜ್ಜೆಗೆ ಗೆಲುವ ಖಾನರೀಗ
ಅಜ್ಜಮಖಾನನ ಕರೆಸಿ ॥೪೪॥

ಕಂಭೋಜಖಾನನು ಅಂಬರಖಾನನು
ಇಂಬುಳ್ಳ ಖಾನ ಮೊದಲಾದ ।
ತುಂಬಿದ ಜೋಡು ಸಿಂಗಾಡಿಯ ತುರುಕರು
ಬೆಂಬಳಿವಿಡಿದೈದಿದರು ॥೪೫॥

ಎಂಬತ್ತು ಸಾವಿರ ಕುದರೆ ಗೋಟೆಯಗೊಬ್ಬ
ತುಂಬರಖಾನನೆಂಬವನು।
ಬೆಂಬಳಿಯಲಿ ಜೋಡು ಸಿಂಗಾಡಿ ತುರುಕರು
ಬೆಂಬಳಿವಿಡಿದೈದಿದರು ॥೪೬॥

ದಿಕ್ಕು ದಿಕ್ಕಿನ ಖಾನರಿಗೆ ಓಲೆಗಳನು
ಲೆಕ್ಕವಿಲ್ಲದೆ ಕಳುಹಿದರು ।
ಅಕ್ಕರಿಂದಲಿ ಕೇಳುತ ಖಾನಖಾನರು
ಹೊಕ್ಕರು ಡಿಳ್ಳಿ ಪಟ್ಟಣವ ॥೪೭॥

ತರಿಸಿದ ಸುರಿತಾಳ ಹೊನ್ನ ಬಿಂದಿಗೆಗಳ
ಸುರಿಸಿದ ರಾಶಿರಾಶಿಗಳ ।
ಕರೆಸಿದ ಬೇಗದಿ ಖಾನಖಾನರಿಗೆಲ್ಲ
ಹರುಷದಿಂದಿತ್ತ ಜೀತಗಳ ॥೪೮॥

ಗಂಗಸಾಗರಕೆ ಬಂದಿತು ಒಂದು ಲಕ್ಷವು
ಭಂಗಿಯ ಹೇರು ಸಹವಾಗಿ ।
ಕಂಗೊಳಿಸುವ ಕರುಳಿನ ಹೇರು ತುರುಕರ
ಅಂಗವನೇನ ಹೇಳುವೆನು ॥೪೯॥

ಆನೆ ಸೇನೆಯ ತಳತಂತ್ರ ಮಾರ್ಬಲ ಕೂಡಿ
ದಾನವರೊಗ್ಗಿಲಿ ನಡೆಯೆ ।
ಸೇನಾದಿಪರುಷೆ ಸೇರ್‍ಯೋಗರ ಉಂಬರು
ಖಾನಖಾನರು ನೇಮಿಯೊಡನೆ ॥೫೦॥

ಇದು ವೇಳೆಯೆನುತ ಸುರಿತಾಳನು ನೇಮಿಗೆ
ಹದನ ಹೇಳಿದವನರೊಡನೆ ।
ಕದನವ ಮಾಡು ಕುಮ್ಮಟಕೆ ಹೋಗೆನುತಲಿ
ಮುದದಿಂದ ಹೇಳಿ ಕಳುಹಿದ ॥೫೧॥

ಎಂದ ಮಾತನು ಕೇಳಿ ನೇಮಿಯಖಾನನು
ವಂದನೆಗಳನು ಮಾಡಿದನು ।
ಬಂಧಿಸಿ ಕುಮ್ಮಟದುರ್ಗವ ಸೆರೆವಿಡಿದು
ತಂದು ಒಪ್ಪಿಸುವೆನು ನಿನಗೆ ॥೫೨॥

ಅಡ್ಡಬಿದ್ದ ನೇಮಿಯನೆತ್ತಿ ಸುರಿತಾಳ[ನು]
ದೊಡ್ಡ ತೇಜಿಯ ತರಿಸಿದನು ।
ದೊಡ್ಡಿತ ಮಾಡಿ ಮನ್ನಿಸಿ ಕುದುರೆಯ ಕೊಟ್ಟು
ಒಡ್ಡೋಲಗದಿ ಕಳುಹಿ[ದನು] ॥೫೩॥

ಪಟ್ಟಣದೊಳಗೆಲ್ಲ ಅರಿಕೆ ಮಾಡೆನುತಲಿ
ನೆಟ್ಟನೆ ನೇಮಿ ಹೇಳಿದನು ।
ಅಟ್ಟಿದ ತನ್ನನುಜರಿಗೆಲ್ಲ ಕರೆಯಲು
ನಿಷ್ಠುರವಾಗಿ ಹೇಳಿದನು ॥೫೪॥

ಹರಿದರಿತ್ತಲಿ ಕೇರಿ ಕೇ[ರಿ]ಯೊಳೆಲ್ಲರು
ಕರೆದರು ಖಾನ ಮಲ್ಲುಕರು ।
ತರತರವರಿತು ಸಂಬಳ ಜೀತವಿತ್ತರು
[ನೆರೆಯಿ]ತೋಲಗ ಸುರಿತಳೆ ॥೫೫॥

ಆನಯು ಕೋಟಿ ಕುದುರೆ ಕೋಟಿ ರಥ ಕೋಟಿ
ಖಾನರು ಕೋಟಿ ಕೋಟಿಗಳು ।
ಜಾಣರು ಕೋಟಿ ಸೂಳೆ[ಯ]ರು ಕೋಟಿಯು ಸಹ
ಮಾಣದೆ ನೇಮಿ ಹೊರಹೊಂಟ ॥೫೬॥

ಸಾರಿದ ನೇಮಿಯು ಪಾಳೆಯವೆಲ್ಲಕೆ
ನಾಳಿನ ಪಯಣ ನಿಶ್ಚಯವ ।
ವೀಳ್ಯಯಗಳ ಕೊಟ್ಟು ಬೆಳಗಾಗೋ ಹೊತ್ತಿಗೆ
ಪಾಳೆಯ ತೆರಳಬೇಕೆಂದ ॥೫೭॥

ಸಾರಿಸಿ ಹೇಳೆ ಕೇಳುತ ಖಾನಖಾನರು
ಸಾರು ಸಾರೆನುತ ತೆರಳಿದರು ।
ಭೂರಮಣನ ನೇರುವಿಡಿದು ತೆರಳಿ ಬರೆ
ಮಾರಹರನು ಬಲ್ಲನೈಸೆ ॥೫೮॥

ಬೇರೊಂದು ತಿತ್ತಿಯ ಸಾವರಿಸಿ ಕೊಂಡಾಗ
ಸಾರಾಯಗಳ ತುಂಬಿದರು ।
ನೀರ ತಿತ್ತಿಯ ಕಟ್ಟಿ ಹೇರಿದ ಬಂಡಿಗೆ
ಕಾರಮೇಘವುಯೆಂಬಂತೆ ॥೫೯॥

ಬೇಯಿಸಿ ರೊಟ್ಟಿಯ ಹೇರನೆ ಹೇರಿಸಿ
ಆಯುತವಾಗಿ ತೆರಳಿದರು ।
ರಾಯ ಕಂಪಿಲನ ಕೋಳಾಹಳ ಮಾಡೆಂದು
ಸಾಯಸದಿಂದ ಹೇಳಿದನು ॥೬೦॥

ಹೊಡೆದವು ಬರಸಿಡಿಲಂದದಿ ವಾದ್ಯವು
ಬಿಡದೊದರುವ ಚಿನ್ನಗಾಳೆ ।
ಗಿಡಿಬಿಡಿ ಹೊಡೆವ ರವುಡೆ ನಿಸ್ಸಾಳವು
ಬಡಿವ ತಮ್ಮಟೆ ಲಗ್ಗೆವರೆಯು ॥೬೧॥

ಊದುವ ಬುರುಗು ನಾಗಸ್ವರವು ಕೊಂಬು
ವಾದ್ಯದ ಕೊಳಲು ತಪ್ಪಟೆಯು ।
ಮೇದಿನಿ ಘೀಳಿಡುವ ಡೊಳ್ಳು ಡಮಾಮಿ
ಸಾಧಿಸಿ ದಂಡು ನಡೆಯಿತು ॥೬೨॥

ಗಕ್ಕನೆ ತುರುಕರ ದಂಡು ನಡೆಯಲಾಗ
ಚಿಕ್ಕ ಡಿಳ್ಳಿಯ ಪಟ್ಟಣಕೆ ।
ಇಕ್ಕಿತು ಕೆಂಧೂಳಿ ಸೂರ್ಯಮಂಡಲವನು
ದೊಕ್ಕನೆ ತಾಕಿ ಮುಸುಕಿತು ॥೬೩॥

ತೆರಳಿತು ಕುದುರೆಯ ಪವುಜಗಳೇನೆಂಬೆ
ತೆರಳಿ ಮುಂದಕೆ ಬರುವಾಗ ।
ಕರಿಘಟೆ ಹತ್ತು ಸಾವಿರ ನೇಮಿಖಾನಗೆ
ಮೊರಡಿಗಳಂತೊಪ್ಪಿದವು ॥೬೪॥

ಉರವಣಿಸುವ ದಂಡಿನ ಚೂಣಿ ಮುಂದಾಗಿ
ಮಿರಿಜೆಗೆ ದಂಡು ನಡೆವಾಗ ।
ಮಿರಿಜೆಪಟ್ಟಣದಿಂದ ನೇಮಿಖಾನನ ದಂಡು
ಶರಜಪಟ್ಟಣಕೆ ಬರಲಾಗ ॥೬೫॥

ಸಾಗಿಬರುವ ದಂಡು ನಾಗಭೂಷಣ ಬಲ್ಲ
ಸಾಗಿ ನಗರಕ್ಕೆ ಬರುವಾಗ ।
ಗಗನಕ್ಕೆ ತುಡುಕುವ ತೆರನಂತೆ ನೇಮಿಯು
ಭಾಗೀರಥಿಯ[ನು] ದಾಂಡಿದನು ॥೬೬॥

ಅಡ್ಡಗಲಾರುಗಾವುದ ನೇಮಿಯ ದಂಡು
ನಿಡಿದು ಹನ್ನೆರಡು ಗಾವುದವು ।
ಸಡಗರದಿಂದ ನೇಮಿಯ ದಂಡು ನಡೆಯಿತು
ಒಡ್ಡು ದರೋಜಿಗೆ ಬರುವಾಗ ॥೬೭॥

ದಂಡೆತ್ತಿ ಬರಲು ಮಂಡಲಿಕರು ಬೇಗ
ಗಂಡುಗಲಿಗಳೊದರಿದರು ।
ಚಂಡ ವಿಕ್ರಮ ನೇಮಿಯ ಎಡಬಲದಲ್ಲಿ
ಖಂಡೆಗಳನು ಝಳಪಿಸುತ ॥೬೮॥

ಅಸುರ ನೇಮಿಯ ದಂಡು ಬರುವಾಗ ಸುತ್ತಣ
ಬಿಸಿಲು [ಕಾ]ಯಿದು ಅರಿದೆನಿಸಿ ।
ಗಾಸಿಯಾಗಲು ದಂಡು ನೀರ ಕಾಣದೆ ಮುಂದೆ
ಮೋಸ ಹೋಯಿತು ಎಂದೆನುತ ॥೬೯॥

ನಾಲ್ಕು ಪಯಣವನು ಎರಡು ಪಯಣವ ಮಾಡಿ
ನೂಕಿ ಮುಂದಕೆ ಬರುವಾಗ ।
ಲೋಕಾದಿ ಲೋಕವು ಅಡಿ ಕೆಳಗಾಗತ
ಯಾಕೆ ಸತ್ತನು ರಾಮನೆನುತ ॥೭೦॥

ಇಂದಿನ ದಿನದಲ್ಲಿ ದಂಡ ತೆರಳಬೇಕು
ಮಂದಿಯೆಲ್ಲಕೆ ಸಾರಿದನು ।
ಮುಂದು ಸಾಗುವರೆ ಶಕುನವ ನೋಡಬೇಕೆಂದು
ಅಂದು ಕರೆಸಿ ಸಾಮುದ್ರಿಕರ ॥೭೧॥

ಬಂದರು ಸಾಮುದ್ರಿಕರು ಆಗ ಬೇಗದಿ
ನಿಂದರು ಕರಗಳ ಮುಗಿದು ।
ಇಂದು ರಾಮನ ಮೇಲೆ ದಂಡ ತೆರಳುವರೆ
ಒಂದು ಶಕುನ ನೋಡಬೇಕು ॥೭೨॥

ತಗರನು ತರಹೇಳಿ ನೇಮಿಯಖಾನನು
ಆಗ ಕಳುಹಿದ ಊಳಿಗರ ।
ಬೇಗನೆ ತಂದು ನಿಲಿಸಲು ಆ ಕ್ಷಣ
ಸಾಗಿ ಕಾಳಗ ಮಾಡಿಸೆಂದ ॥೭೩॥

ಬಲ್ಲಿದ ತಗರನು ತರಿಸಿದ ನೇಮಿಯು
ಅಲ್ಲಿ ತನ್ನಯ ಹೆಸರಿಟ್ಟು ।
ಎಲ್ಲಿ ಹೊಂದದ ತಗರನು ತಂದು ರಾಮನ
ಸಲ್ಲಲಿತದ ಹೆಸರಿಟ್ಟು ॥೭೪॥

ತನ್ನ ಹೆಸರಿನ ತಗರಿಗೆ ಬಂದಿತು
ಉನ್ನತ ಮುತ್ತಿನ ದಂಡೆ ।
ಮನ್ನೆಯ ರಾಮನ ಹೆಸರಿನ ತಗರಿಗೆ
ಬಣ್ಣದ ಹೂವಿನ ದಂಡೆ ॥೭೫॥

ಕಡುಗಲಿ ನೇಮಿಯು ಹೆಸರಿನ ತಗರಿಗೆ
ಹಿಡಿಯಿತು ಮುತ್ತಿನ ಛತ್ರ ।
ಬಡವನುಯೆಂದು ರಾಮಯ್ಯನ ತಗರಿಗೆ
ಕೊಡೆಯ ಸತ್ತಿಗೆಯ ಹಿಡಿಸಿದನು ॥೭೬॥

ಬೊಬ್ಬಿರಿದರು ತಗರಿನ ಕಿವಿಯೊಳಗಾಗ
ಅಬ್ಬರಿಸಿಯೆ ಹೊಗಬಿಡಲು ।
ನಿಬ್ಬರದಲಿ ಬಂದು ತಾಗಿದವಾಕ್ಷಣ
ಗರ್ಭ ಕಲಕುವಂತೆ ತಗಲೆ ॥೭೭॥

ನಾಲ್ಕನೆ ಸನ್ನಿಗೆ ನೇಮಿಯ ತಗರನು
ತಾಕಿತು ತಲೆ ಮುರಿವಂತೆ ।
ನೂಕಿತು ಎದೆಗುಂಡಿಗೆ ಒಡೆ ಹಾಯಲು
ಸಾಕೆಂದು ನೇಮಿ ನಿಲಿಸಿದನು ॥೭೮॥

ಮಾರಿ[ಯ] ಮುಖದ [ರಕ್ಕಸರ ಕಳಿಸಿ ಆಗ]
ಕಾರಣಿಕರ ಕರೆಸಿದನು ।
ನೂರೊಂದು ಮಂದಿ ಶಾಸ್ತ್ರಕಾರರ ಕರೆಸಿದ
ಕಾರಣಿಕವನು ಹೇಳೆಂದ ॥೭೯॥

ವಿಪರೀತ ದಂಡು ಬರುವಾಗಲು ಮುಂದಕ್ಕೆ
ಶಪಥ ವಿಲ್ಲದೆ ಹೋಗಬೇಡ ।
ಗುಪಿತದಿ ಕಾರ್ಯವ ಮಾಡಬೇಕೆನುತಲಿ
ಉಪಕರಣಿಕರು ಹೇಳಿದರು ॥೮೦॥

ಬಲ್ಲಿದ ಹುಂಜನ ತರಹೇಳಿ ನೇಮಿಯು
ಉಲ್ಲಾಸದಿ ತನ್ನ ಹೆಸರ ।
ಅಲ್ಲದ ಕೋಳಿಯ ಹುಂಜನ ತರಿಸಿದ
ಅಲ್ಲಿ ರಾಮನ ಹೆಸರಿಟ್ಟ ॥೮೧॥

ಹೊಸ ಸಾಣೆಯ ಹಿಡಿಸಿದ ಕತ್ತಿ ನೇಮಿ
ನಿಸ್ಸೀಮ ಹುಂಜಕ ಕಟ್ಟಿ ।
ಮಸೆಯದ ಮೋಟ ಕತ್ತಿಯ ತಂದು ರಾಮನ
ಹೆಸರುಳ್ಳ ಕೋಳಿಗೆ ಕಟ್ಟಿ ॥೮೨॥

ಎರಡು ಹುಂಜವ ಮುಖದಟ್ಟಿಸಿ ರಣದೊಳು
ಉರುವಣಿಸುತ [ಹೋರ] ಬಿಡಲು ।
ಮುರಿದೊಡೆ ನೇಮಿಯ ಹೆಸರಿನ ಹುಂಜವು
ಬೆರಗಾಗಿ ನಿಂದು ನೋಡಿದರು ॥೮೩॥

ಒಂದು ಬಾರಿಗೆ ರಾಮನ ಹುಂಜನೊಳಪೊಕ್ಕು
ಸಂದು ಹರಿಯಲೊದೆವಾಗ ।
ನಿಂದಿರ್ದ ಖಾನರೆಲ್ಲರು ನೋಡಿ ಬೆರಗಾಗಿ
ಒಂದು ನುಡಿದರು ತಮ್ಮೊಳಗೆ ॥೮೪॥

ನಮ್ಮ ಹುಂಜವು ತೆಗೆದೋಡಿತು ಲೇಸಿಲ್ಲ
ನಿಮ್ಮ ಚಿತ್ತಕೆ ಏನಹುದೊ ।
ಬ್ರಹ್ಮದೇವರ ಕೃಪೆ ರಾಮನಿಗುಂಟೆಂದು
ನಮ್ಮ ಸಾಹಸಕಳವಲ್ಲ ॥೮೫॥

ಹಿಂದಕ್ಕೆ ತಿರಿಗಿದೆನಾದಡೆ ಸುರಿಗಾಳ
ಸಂದು ಹರಿಯ ಹೊಯ್ಯಿಸುವನು ।
ಮುಂದೇನು ಬಂದುದ ಕಾಬೆನುಯೆನುತಲಿ
ಮುಂದಕ್ಕೆ ದಂಡ ನಡೆಸಿದನು ॥೮೬॥

ಅಲ್ಲಿಂದ [ನೇಮಿಯ] ದಂಡು ತೆರಳಿ [ತಾನು]
ಕಲ್ಯಾಣಪುರಕೆ ಬರುವಾಗ ।
ತಲ್ಲಣಿಸಿತು ಸಗರದ ಸೀಮೆ ಮೊದಲಾದ
ಎಲ್ಲ ರಾಯರು ಭಯಗೊಂಡು ॥೮೭॥

ಬಿದರಿಯ ಪಟ್ಟಣದಿಂದ ನೇಮಿಯ ದಂಡು
ನದಿಯನು ದಾಟಿತು ಮುದದಿ ।
ಚದುರ ರಾಮಯ್ಯ ಸತ್ತುದು ಸುಳ್ಳೊ ಖರೆಯೆಂದು
[ಹೆದರಿ] ನಡೆದು ದಂಡು ಬರಲು ॥೮೮॥

ಅಲ್ಲಿಂದ ಮುಂದಕ್ಕೆ ನಡೆಯಿತು ತುರುಕರ
ಜಲ್ಲಿ ಸಂಮೋಹ ತೇಜಿಗಳು ।
ಬಲ್ಲಿದ ವಿಜಪುರಿಯಿಂದ ನೇಮಿಯ ದಂಡು
ಇಳಿಯಿತು ಮುಗಿಲಗಲದಲಿ ॥೮೯॥

ಇಳೆ ಬೆಸಲಾದಂತೆ ತುರುಕ ನೇಮಿಯ ದಂಡು
ಕಳವಳಗೊಳೆ ಅಹಿರಾಜ ।
ಪ್ರಳಯಕಾಲದ ದಂಡು ಬರುವಾಗ ಸೀಮೆಯು
ತಲೆ ಕೆಳಗಾಗಿ ತಲ್ಲಣಿಸೆ ||೯೦||

ಅಲ್ಲಿಂದ ಸಾಗಿ ಬಂದಿತು ನೇಮಿಯ ದಂಡು
ಮಲ್ಲಾಬಾದಿಗೆ ಸಾಗಿ ಬರಲು ।
ಮೆಲ್ಲನೆ ತುರುಕರ ದಂಡು ತೆರಳಿ ಬರೆ
ಎಲ್ಲ ಪಾಳೆಯವು ಗೂಳೆಯವು ||೯೧||

ನೇಮಿಯ ದಂಡಿನ ರಭಸಕ್ಕೆ ರಾಮನ
ಸೀಮೆಯೆಲ್ಲವು ವಲಸೆ ತೆಗೆಯೆ ।
ಭೂಮಿಯೆಲ್ಲವು ಗೂಳೆ ತೆಗೆಯೆ ||೯೨||

ಕಾಡ ಮೊಲ್ಲೆಯ ಸೊಪ್ಪ ಓಡಿಲಿ ಹುರಿತಿಂಬ
[ನಾಡ] ನಯಕ ಮಕ್ಕಳೆಲ್ಲ ।
ಕೂಡೆ ಕೈಯಲಿ ನಾಯಿ ಬಡಿಕೋಲು ಸಹವಾಗಿ
ಬೇಡರ ಗೂಳೆವು ನಡೆಯೆ ||೯೩||

ನೆತ್ತಿಯ ಮೇಲಣ ಗಂಟು ಬೇಡರಿಗಾಗ
ಹಸ್ತದ ಮೇಲಣ ಗಿಡಗ ।
ಕತ್ತಲೆಯೊಳು ಹಕ್ಕಿ ನಾಯಿಗಳು ಸಹವಾಗಿ
ಒತ್ತಿ ಬೇಡರು ನಡೆತರಲು ||೯೪||

ಹೆಬ್ಬಲೆ ಕಿರುವಲೆ ಮೊಲಬಲೆ ಹೆಗಲಲ್ಲಿ
ಗುಬ್ಬಿಯ ಹಕ್ಕಿಯ ಬಲೆಯ ।
ಗಬ್ಬಿ ಮೃಗವ ಕೊಲ್ಲುವ ಬೇಟೆಗಾರರು
ಕಬ್ಬೇರ ಗೂಳೆವು ನಡೆಯೆ ||೯೫||

ಬಿಡದೆ ಹಲಗೆ ಕುಂಟೆ ಕುಂಚಿಗೆ ಹೊರೆಗಟ್ಟಿ
ಒಡನೆ ಹೆಗಲ ಮೇಲೆ ಹೊತ್ತು ।
ಜಡಿದು ಸೀರೆಯ ನೇವ ಜಾಡರ ಗೂಳೆವು
ಒಡನೆ ಕುಮ್ಮಟಿಕೆ ನಡೆವಾಗ ॥೯೬॥

ಹುರಿಯ ಹಿಂಡನು ತೆರಳಿಸಿಕೊಂಡು ಮತ್ತೆ
ಮರಿಗಳಯೆತ್ತಿ ಹೆಗಲಲ್ಲಿ ।
ಮರುಗುತ ಹೆಂಡರ ಕೈಯಲ್ಲಿ ಹಿಡಕೊಂಡು
ಕುರುಬರ ಗೂಳೇವು ನಡೆಯೆ ॥೯೭॥

ಮುಸುಕು ಕತ್ತೆಯ ಮೇಲೆ ಕುಸುಬಿ ಹೂವಿನ ಹೇರು
ಹೊಸಪರಿ ಬಣ್ಣ ಗಂಟುಗಳ ।
ದೆಸೆಯುಳ್ಳ ಗಟ್ಟಣೆ ಕೊಡಲೆ ಹೆಗಲಮೇಲೆ
ಅಗಸರ ಗೂಳೇವು ನಡೆಯೆ ॥೯೮॥

ಓದುವ ಹಲಗೆಯು ಕಡತ ಬಳಪ ವಹಿ
ವೇದದ ಪೆಟ್ಟಿಗೆ ಮುಂದೆ ।
ಓದಿಸುವಣ್ಣಗಳೊಡನೆ ಹೆಮ್ಮಕ್ಕಳು
ಸಾಧಿಸಿ ಗೂಳೇವು ನಡೆಯೆ ॥೯೯॥

ಕುಂಬಾರ ತೆಲುಗರು ತಿಗುಳ ಕೊಮಟಿಗರು
ಕುಂಭೀನಿಯಗಲದಿ ನಡೆಯೆ ।
ಡೊಂಬರು ತಮ್ಮಯ ಗಣೆ ಮಿಣಿ ಸಹವಗಿ
ಇಂಬಿಲ್ಲದೆ ನಡೆತರಲು ॥೧೦೦॥

ಮುಟ್ಟಿ ಬೇಹರ ಮಾಡಿ ಲಾಭವ ಗಳಿಸುವ
ಕಟ್ಟಾಳು ಹಲವು ಹರದರು ।
ಪಟ್ಟಣಶೆಟ್ಟಿ ಎಲ್ಲರು ಕೂಡಿಕೊಂಡಾಗ
ಸೆಟ್ಟೇರ ಗೂಳೇವು ನಡೆಯೆ ॥೧೦೧॥

ಅಡಿಗಲ್ಲು ಇಕ್ಕುಳ ತಿದಿ ಸಹ ಕೈಯೊಳು
ಬಿಡದೆ ಕೆತ್ತುವ ಬಾಳಚಿಯು ।
ಎಡಗೈಯ್ಯುಲುಳಿ ಸಹ ವೀರ ಪಂಚಾಳರು
ಎಡದೆರವಿಲ್ಲದೆ ನಡೆಯೆ ॥೧೦೨॥

ಸಂಗೀತ ಸಾಹಿತ್ಯ ವಿದ್ಯೆ ನಿಪುಣ ಜಾಣ
ರಂಗನ ಶ್ರೀಪಾದವನು ।
ಹಿಂಗದೆ ಭಜಿಸುವ ಶ್ರೀವೈಷ್ಣವರಾಗ
ಸಂಗಡ ಗೂಳೆಯ ನಡೆಯೆ ॥೧೦೩॥

ಕೋಮಟಿಗರು ಗಾಣಿಗ ಗೋಣಿ ಚಿಪ್ಪಿಗ
ಬ್ರಾಹ್ಮಣ ವೈಶ್ಯ ಅರೆಯರು ।
ಭೂಮಿಯೊಳಗೆ ಸಕಲ ಜನರು ಸಹವಾಗಿ
ಪ್ರೇಮದಿ ಗೂಳೇವು ನಡೆಯೆ ॥೧೦೪॥

ಡಂಬಕ ಕರೆಗಳು ಕಿರುವಲೆ ಮೊದಲಾದ
ಬೊಂಬುಲಿ ವಾಲೆಗಳು ಸಹಿತ ।
ಸಂಭ್ರಮದಿಂದಲಿ ಹೊಲೆಯರ ಗೂಳೇವು
ಇಂಬಿಲ್ಲದೆ ನಡೆವಾಗ ॥೧೦೫॥

ಹಕ್ಕಿಯ ಬಲೆಗಳು ಕಂಕುಳ ಕತ್ತಿಯು
ಹಕ್ಕಲಿ ಮೊರ ಕಂಕುಳೊಳಗೆ ।
ಹಕ್ಕಲ ಗಂಟು ತಲೆಯ ಮೇಲಿಟ್ಟುಗೊಂಡು
ದೊಕ್ಕನೆ ಮಾದಿಗರು ನಡೆಯೆ ॥೧೦೬॥

ಒಕ್ಕಲಿಗರು ಹಟ್ಟಿಕಾರರು ಕೊರವರು
ಮಕ್ಕಳ ಹೊತ್ತುಕೊಂಡಯ್ದು ।
ಮಿಕ್ಕಿನ ನಾನಾ ಜಾತಿಯರೆಲ್ಲರು ಕೂಡಿ
ದೊಕ್ಕನೆ ಗೂಳೆಯದೊಳಗೆ ॥೧೦೭॥

ವಲಸೆಯ ಮುಂದಕೆ ನಡಸುತ ಬೇಡರು
ತಲೆವಿಲ್ಲುಗೊಂಡೆಸೆವುತಲಿ ।
ಬಲು ಕುದುರೆಯ ಖುರಪುಟವನು ಕಾಣುತ
ಛಲವ ತೊಟ್ಟರು ತಮತಮಗೆ ॥೧೦೮॥

ಎರಳೆಯು ಕುಪ್ಪಳಿಸುವವೊಲು ಬೇಡರು
ಬರುವ ಕುದುರೆಯನೆಸೆವುತ ।
ಭರದಿಂದ ಲವುಡಿ ಕಠಾರಿಗೆ ಕೈಯಿಕ್ಕಿ
ಮರಳಿಸಿದರು ರಾಹುತರ ॥೧೦೯॥

ಅಂಬು ಹಿಳುಕುಯಿಟ್ಟು ಮಂಡಗಾಲನು ಹೂಡಿ
ಮುಂಬರಿದ ಕುದುರೆ ಎಸೆವುತ ।
[ಕುಂ]ಬಿಸೆದೆಯ ಎಸೆದಿಟ್ಟರೆ ಕುದುರೆಯು
ಡೊಂಬ ಲಾಗವ ಹೊಡೆವಂತೆ ॥೧೧೦॥

ಕಾಲ ಮಂಡಿಯ ಹೂಡಿ ಕೋಲಿಂದಲೆಸೆದರೆ
ತೋಳು ಹರಿದು ನೆಲಕುರುಳೆ ।
ಮೇಲಾಳು ಬಿದ್ದುರುಳಿತು ಧರಣಿಯ ಮೇಲೆ
ಲೀಲೆಯಾಯಿತು ರಣದೊಳಗೆ ॥೧೧೧॥

ಎಡಬಲ ಬರುವಂಥ ಕುದುರೆಯನೆ [ಚ್ಚರೆ]
[ಮಡಕೆಯ ಹೊರೆ ನೆಗ್ಗಿದಂತೆ ।
ತಡವಿಡದಲೆ ಹಿಂದು ಮುಂದಾಗಿ ಬಾಹರ
ಕೆಡಹಿ ನೆಲಕೆ ಅಪ್ಪಳಿಸುತ ॥೧೧೨॥

ಮುಂಭಾಗದಲಿ ಬರುವ ಕುದುರೆಯನೆಚ್ಚರೆ
ಡೊಂಬ ಲಾಗವ ಹೊಡೆವಂತೆ ।
ಇಂಬಾಗಿ ಬರುವಂಥ ಕುದುರೆಯ ನೆ[ಚ್ಚ]ರೆ
[ಅಂಬುಧಿ] ಕಡೆಗೆ ಸಾರಿದವು ॥೧೧೩॥

ಇಕ್ಕೆಲದಲಿ ಕಡಿದಾಡುತ ಬೇಡರು
ಹೊಕ್ಕರು ಬಂದು ಕುಮ್ಮಟವ ।
ರಕ್ಕಸ ರಾಮನಿಲ್ಲದೆ ಕಾದುವವರಾರು
ದುಃಖವಾದರು ತಮತಮಗೆ ॥೧೧೪॥

ಏಳು ತಿಂಗಳಿಗೆ ಬಂದಿತು ನೇಮಿಯ ದಂಡು
ದಾಳಿಮಾಡುತ ನಾಡ ಸುಡುತ ।
ಕೋಳಾಹಳವ ಮಾಡುವೆನೆಂದು ನೇಮಿಯು
ಧೂಳಿಗೊಂಟೇಯ ಕೊಂಬೆವೆನುತ ॥೧೧೫॥

ಕೋಳುಹೋಯಿತು ಕುಮ್ಮಟದುರ್ಗವುಯೆಂದು
ಪಾಳೆಯವನು ಬಿಡಿಸಿದರು ।
ಹಾಳು ಮಾಡುವೆ ಕುಮ್ಮಟವನೀಕ್ಷಣ[ವೆಂದು]
ತಾಳಿದ ನೇಮಿ ಕೋಪವನು ॥೧೧೬॥

ಪಡೆಯನೆಲ್ಲವ ಕಡಿದೊಟ್ಟುವ ರಾಮನು
ಮಡಿದು ಹೋದನು ನಮಗಿಂದು ।
ತುಡುಕಿ ಕಾಳಗವ ಮಾಡುವ ಮನ್ನೆಯ [ರಾರು]
ಹಿಡಿವೆ ಕಂಪಿಲನ ಕೈಸೆರೆಯ ॥೧೧೭॥

ಭರದಿಂದ ನೇಮಿಯು ತಿಳಿದು ತನ್ನೊಳು ತಾನು
ಕರೆಸಿ ಭಟರ ಕಳುಹಿದನು ।
ಸರಸವು ಬೇಡ ನೇಮಿಯ ಕೂಡ ಕಂಪಿಲ
ಇರದೆ ಕೊಡು [ಬೇಗ] ಬಾದುರನ ॥೧೧೮॥

ಬಿಟ್ಟ ಸೂಟಿಯಲ್ಯೆದಿದವ್ಯೆದು ಕುದುರೆಯು
ಭಟ್ಟರು ಕೈವಾರಿಸುತ ।
ಅಟ್ಟಣೆಗಳ ಏರಿ ಗೋಡೆ[ಗಳ] ಮೇಲೆ
ಇಟ್ಟರು ಕಾಗದಗಳು ॥೧೧೯॥

ಬೆಟ್ಟವ ನಂಬಿ ಕೆಡಲಿಬೇಡ ಖಾನನ
ಕೊಟ್ಟು ಕಾಂಬುದು ಕಡು ಲೇಸು ।
ಹುಟ್ಟುಗೆಡಿಸಿ ಕೊಲಿಸುವ ಕೊಡದಿದ್ದರೆ
ಬೆಟ್ಟದ ಒಡೆಯ ಕಂಪಿಲನೆ ॥೧೨೦॥

ಮೊರೆಹೊಕ್ಕ ಖಾನನ ಕೊಡೆನೆಂಬ ಕಹಳೆಯು
ಒರಲಿತು ದುರ್ಗದ ಒಳಗೆ ।
ಭರದಿಂದ ಬಾದುರನ ಕೊಡದಿದ್ದುರಳಿ[ವಿ]ರೆ
ಇರಿವನೊ ನಿನ್ನ ಮನೆತನಕ ॥೧೨೧॥

ವಿಷದ ಹುತ್ತಿಗೆ ನೊಣವೆರಗಿ ಜೀವಿಸಲುಂಟೆ
ಅಸಮಾಕ್ಷನೊಡನೆ ಮನ್ಮಥನು ।
ಅಸುರ ನೇಮಿಯ ಕೂಡ ಕಲಹವು ಬೇಡೆಂದು
ಬೆಸಸಿ ಭಟರು ಆಡಿದರು ॥೧೨೨॥

ಮಂಜು ಮುಸುಕಿದರೆ ಅಂಜುವುದೆ ಗಿರಿಗಳು
ರಂಜಿಸುವುದೊ ಬೇಸಾಗಿ ।
ಕುಂಜರ ಸಾವಿರವಿದ್ದರೆ ಕೇಸರಿ
ಅಂಜಿ ಓಡುವುದೆ ಬರ ಹೇಳೊ ॥೧೨೩॥

ಬಂದ ಭಟರಿಗೆ ವೀಳ್ಯ ಉಡುಗೊರೆ ಕೊಟ್ಟು
ಚಂದದಿ ಮನದಣಿ ಉಣಿಸಿ ।
ಹಿಂದೆಬಿದ್ದ ಖಾನನ ಕೊಡೆನೆಂದು ಕಂಪಿಲ
ಬಂದವರೊಡನೆ ಹೇಳಿದನು ॥೧೨೪॥

ನಿಬ್ಬರದಲಿ ತಿರುಗಿದವೈದು ಕುದುರೆಯು
ಅಬ್ಬರದ ಸುದ್ದಿಯ ಕೊಂಡು ।
ತಬ್ಬಿ[ಬ್ಬು] ಕಂಪಿಲರಾಯಗೆ ತೀವ್ರದಿ
ಗಬ್ಬಿದವನ ಕಳುಹೆ[ಂದ] ॥೧೨೫॥

ಕೇಳಿದನಾಕ್ಷಣದೊಳು ನೇಮಿಖಾನನು
ಬಾಳ ಕೋಪದಲುರಿದೆದ್ದು ।
ಪಾಳಯದೊಳಗಿದ್ದ ಖಾನರ ಕರೆಸಿದ
ದಾಳಿ ಮಾಡೆಂದ ಕುಮ್ಮಟಕೆ ॥೧೨೬॥

ಸಾವುದನರಿಯದೆ ತುರುಕರು ಮುರಿದೆದ್ದಿ
[ದಾವ] ಕಲಿಯೆಂದು ಮೂದಲಿಸಿ ।
ತವಕದಿ ಕುಮ್ಮಟ ಹಾರಿಸುವೆವು [ಇಂದು]
ಎವೆಯಾಡುವನಿತರೊಳೆಂದು ॥೧೨೭॥

ಮುತ್ತಿದ ಫೌಜಿನ ಮೊತ್ತವ ಕಾಣುತ
ಇತ್ತರದಲಿ ಹರಿತಂದು ।
ಕತ್ತಿಗಳನು ಕಿತ್ತಿ ಝಳಪಿಸಿಕೊಳುತಾಗ
ಸುತ್ತು ಬಳಸಿತಾಗ ಫೌಜು ॥೧೨೮॥

ದುರ್ಗವನೇರಿ ಕಂಡರು ಪರಿವಾರವ
ಭರ್ಗನೆ ಬಲ್ಲನೆಂದೆನುತ ।
ಸ್ವರ್ಗವೋ ಎಂಬಂತೆ ತುರುಕರ ಹೃದಯದಿ
ಗರ್ಭವು ಕಲಕಿತು ನೋಡಿ ॥೧೨೯॥

ತಲ್ಲಣಿಸಿತು ತಲೆ ಕೆಳಗಾಗಿ ಪಟ್ಟಣ
ನಿಲ್ಲಲಾರದೆ ಭಯಬಡುತ ।
ಅಲ್ಲಲ್ಲಿ ಮಂದಿಯು ನೆರೆದು ಗುಜುಗುಟ್ಟುತೆ
ತಲ್ಲಣದಿಂದ ಬಾಯಾರಿ ॥೧೩೦॥

ಉದಕವಿಲ್ಲದ ತಾವರೆಯಂತೆ ಪಟ್ಟಣ
ಗದಗಂಪುಗೊಳುತ ಬಾಯಾರಿ ।
ಇದಿರಾಗಿ ಊರೊಳು ಕಾದುವರಿಲ್ಲೆಂದು
ಎದೆಬಿದ್ದರು ತಮತಮಗೆ ॥೧೩೧॥

ಬಂದು ನೋಡಿದನಾಗ ಕಂಪಿಲ ನೇಮಿಯ
ನಿಂದು ಹವ್ವನೆ ಹಾರಿದನು ।
ಇಂದಿಲ್ಲಿ ನಾನಿನ್ನು ಇರಲಾರೆ ಬೈಚಪ್ಪ
ಒಂದು ಕಡೆಗೆ ಎನ್ನ ಕಳುಹೋ ॥೧೩೨॥

ದಿಟ್ಟ ರಾಮುಗನಾದರೆ ನೇಮಿಯ ದಂಡ
ಬಿಟ್ಟಲ್ಲಿ ಬಿಡದೆ ಓಡಿಸುವ ।
ಕೆಟ್ಟೆನೊ ಬೈಚಪ್ಪ ಹೇಗೆ ಮಾಡಲಿಯೆಂದು
ಕುಟ್ಟಿಕೊಂಡನು ತನ್ನ ಎದೆಯ ॥೧೩೩॥

ಘಾತಕ ಮಾಡಿಕೊಂಡೆನು ಮಗನ ಬೈಚಪ್ಪ
ಭೀತಿ ಬಿಟ್ಟಿತು ತುರುಕರಿಗೆ ।
ಭೂತೇಶ ಬಲ್ಲನು ನೇಮಿಯ ದಂಡನು
ನಾ ತಾಳಲಾರೆ ಪ್ರಧಾನ ॥೧೩೪॥

ಹೊಕ್ಕಳ ಗಂಟೆಯ ಐನೂರು ಕುದುರೆಯ
ಒಕ್ಕಲ ಸಾಗಿಸೊ ಕಡೆಗೆ ।
ಸೊಕ್ಕಿದೆನಾದರೆ ಮಾನಭಂಗವುಯೆಂದು
ಪೊಕ್ಕು ಕಾದುವರನು ಕಾಣೆ ॥೧೩೫॥

ಬಂದ ದಂಡನು ಕಂಡು ಕಂಪಿಲರಾಯನು
ಕಂದನ ನೆನೆದು ಚಿಂತಿಸಿದ ।
ನೊಂದ ನೋವನು ಸಂತೈಸೆಂದು ಬೈಚಪ್ಪ
ಬಂದನು ಚಾವಡಿಗಾಗ ॥೧೩೬॥

ನೋ[ಡು] ಕಂಪಿಲ [ಆ ಧೈರ್ಯದ] ಬೇಡ [ರ]
ನೋಡೀಗ ನಮ್ಮ ಸಾಹಸವ ।
ರೂಢಿಯೊಳಗೆ ಹೊಸ ಪರಿಯಮಾಡುವೆವೆಂದು
ಬೇಡರಾಡಿದರು ಪೌರುಷವ ॥೧೩೭॥

ಬೇಡರಾಡಿದ ಮಾತಿಗೆ ಕಂಪಿಲರಾಯ
ರೂಢೀಶ ಕರೆಸಿ ಮಂತ್ರಿಯನು ।
ನೋಡಿದ ಮಂತ್ರಿಕುಲತಿಲಕ ಮಾರ್ತಾಂಡನು
ಕೂಡಿ ಚಾವಡಿಯೊಳು ಕುಳಿತು ॥೧೩೮॥

ಬಾರೆನ್ನ ಭಾಗ್ಯದ ನಿಧಿ(ಯೆ) ನೀ ಬೈಚಪ್ಪ
ಬಾರೆಂದು ಕರೆದ ಮಂತ್ರಿಯನು ।
ಬಾರೊ ಮಂತ್ರಿಗಳ ಶಿರೋಮಣಿ ಬೈಚಪ್ಪ
ಧೀರ ಇದಕೆಂತು ಪರಿಯೇನು ॥೧೩೯॥

ಸುಟ್ಟ[ರಂತೆ] ಬೆಳವ[ಲ] ನಾಡನೆಲ್ಲವ
ಬಿಟ್ಟರು ಬಂದು ಕುಮ್ಮಟದಿ ।
ಬಟ್ಟೆಯಾವುದು ಮಂತ್ರಿ ನಮಗೆಂದು ಕಂಪಿಲ
ಪಟ್ಟದ ರಾಮನ ನೆನೆದ ॥೧೪೦॥

ಕೆಟ್ಟೆನೆಂದು ಬಾಯ ಬಿಟ್ಟರೆ ಬರುವುದೆ
ಪಟ್ಟಣವನು ಶೃಂಗರಿಸೊ ।
ಅಷ್ಟದಿಕ್ಕಿನ ರಾಯರು ಮೆಚ್ಚುವಂದದಿ
ತೊಟ್ಟು ಕಾದುವೆ ಕೇಳು ನೃಪತಿ ॥೧೪೧॥

ರಕ್ಕಸ ರಣಬಲಿಯೆಂಬಂತೆ ಕೊತ್ತಳ
ಅಕ್ಕರವಾಗಿ ರಂಜಿ[ಸುತ] ।
ಧಿಕ್ಕನೆ ಹೊರ ಬಾಗಿಲ ಚೋರಗಂಡಿಗೆ
ಇಕ್ಕಿಸೊ ಕುರಿಕೋಣಗಳನು ॥೧೪೨॥

ಇಂದು ಕಡಿಸುವೆನು ತುರುಕರ ದಂಡನು
[ಎಂ]ದು ಬುದ್ಧಿಯನೆಣಿಸಿದನು ।
ಇಂದಿನಿರುಳಿ ಕಗ್ಗೊಲೆ ಬೀಳಬೇಕೆಂದು
ಮಂದಿಯ ಕರೆದು ಹೇಳಿದನು ॥೧೪೩॥

ಕರೆಸಿದ ಉನ್ನತ ಊಳಿಗದಾಳಿಗೆ
ತರಿಸಿ ಕರ್ಪೂರ ವೀಳ್ಯಯವ ।
ಅರಸು ಕಂಪಿಲನು ಓಲಗದ ಚಾವಡಿಮುಂದೆ
ಹರುಷದಿಂದಿತ್ತನೆಲ್ಲರಿಗೆ ॥೧೪೪॥

ವೀಳ್ಯಯವನು ಕೊಡೆ ವೀರಾಧಿವೀರರಿಗೆ
ಕಾಳಗವೆಂದು ಮೊದಲಿಸಿ ।
ಪಾಳೆಯದೊಳು ತರಿದೊಟ್ಟುವೆವೆಂದೆಂ[ದು]
ಹೇಳಿ ಹಿಡಿದರು ಹೊಂತಕಾರಿಗಳು ॥೧೪೫॥

ಅವಗೇಕೆ ಮುಂಚಿನ ವೀಳ್ಯಯವೆನುತಲಿ
ಭುವನದೊಳು ಬಾಗಿಸಿ ಶಿರವ ।
ಶಿವ ಶಿವಯೆಂದು ಸೃಷ್ಟಿಯ ಮೇಲೆ ಬೀ[ಳಿಸಿ]
ಅವ ತಂ[ದನೆ] ಲೋಕವರಿಯೆ ॥೧೪೬॥

ಗುತ್ತಿಯ ಜಗಳದಿ ದಂಡಿನಿಂದೊಬ್ಬನು
ನೆತ್ತಿಯ ತಾಕಲಿರಿಯಲು ।
ಕತ್ತಿಯ ಮೊನೆಯೆಂದು ಎತ್ತಿ ಬೀಸಾಟನು
ಎತ್ತಿ ತಂ[ದನು] ನಿನ್ನ(ದೆಂ)ದು ॥೧೪೭॥

ಹೋಗಲಾಡುವರೆ ಹೊಂತಕಾರಿ ನೀನಾದರೆ
ಈಗ [ಲಾದರು] ನಿನ್ನ ಸಾಹಸ ।
ತೂಗು ನಮ್ಮೊಡನೆ ಪರಾಕ್ರಮವೇಕೆಂದು
ಆ [ಹೊಣ್ಕೆ] ಯರಾಡಿದರು ॥೧೪೮॥

ಜಾಳು ಮಾತುಗಳೇಕೆ ಹೂ[ಣ್ಕೆ]ಯ ರಾಮನ
ಏಳಿಗೆಯೊಳು ಕೈಮರೆದು ।
ಪಾಳಿಯ ಹಿಂದುಳಿಯಲು ಕಂಡೆ ನಾನಾಗ
ಹೇಳಲೇನವರ ಮಾತುಗಳ ॥೧೪೯॥

ಆಳಾಳುಗಳು ಮೆಟ್ಟಿ ಮಸೆವುತ ಬರುವಾಗ
ಬೀಳಬೀಳಲಿ ನಾ ನಿನ್ನ ।
ಭಾಳದ ಲಿಪಿಯ ಕಾಯ್ದುಳಿದೆ ನಿನ್ನನು ನಾನು
ಕೋಳುಗೊಡದೆ ತಂದೆ ನಾನು ॥೧೫೦॥

ಒಬ್ಬರೊಬ್ಬರು ತಮತಮಗೆ ವಾದಗಳಾಡಿ
ನಿಬ್ಬರದಲಿ ಹರಿತಂದು ।
ಸರ್ಬ ದಂಡನು ಹೊಕ್ಕು ಕೊಳ್ವೆವು ನೋಡೆಂದು
ಉಬ್ಬಿ ಹೊಣಕೆ ಮೂದಲಿಸಿ ॥೧೫೧॥

ಹೊಣಕೇಲಿ ಹಿಡಿದರು ಹೊಂತಕಾರಿಗಳಾಗ
ಅಣಕವಾಡುವ ಪಟುಭಟರು ।
ಸೆಣಸುವರಾರಿಲ್ಲ ಸುರಿತಾಳನ ದಂಡ
ಎಣಿಕೆಯಿಲ್ಲದೆ ಮೂದಲಿಸೆ ॥೧೫೨॥

ಮೂದಲಿಸಿದ ಮಂದಿಯ ಪಂಥವಿಟ್ಟನು
ಮೇದಿನಿಯೊಳು ಕಂಪ ನೃಪತಿ ।
ಭೇದಿಸಿ ತನ್ನರಮನೆಯ ಬೊಕ್ಕಸಗಳ
ಕಾದುವ ಭಟರಿಗೆಯಿತ್ತ ॥೧೫೩॥

ಪೆಟ್ಟಿಗೆಯೊಳಗಣ ಬೊಕ್ಕಸಗಳ ತಂದು
ಕಟ್ಟಿದ ಮುದ್ರೆಗಳೊಡೆದು ।
ಪಟ್ಟೆದ ದಟ್ಟಿವೊಂಕುಡಿಯ ಜಲ್ಲಿಯನಾಗ
ಕೊಟ್ಟನು ಎಕ್ಕಟಿಗರಿಗೆ ॥೧೫೪॥

ಕಡಿತಲೆ ಹರಿಗೆ ಕತ್ತಿಯು ಬಾಕು ಮುಂತಾದ
ಹಿಡಿವ ಆಯುಧಗಳ ಕೊಟ್ಟ ।
ಕಡುಗಲಿಗಳು ತಾವು ಕಳುಹಿಸಿಕೊಂಡಾಗ
ನಡೆದರು ಕಗ್ಗೊಲೆಗೆಂದು ॥೧೫೫॥

ಪಡುವಣಾದ್ರಿಗೆ ಅಡರಿದ ದಿನನಾಯಕ
ಉಡುಪತಿ ತಲೆಯ ತೋರಿದನು ।
ಕಡೆಗೆ ಸಾರಿದವು ತಾವರೆಗಳು ಬಳಲುತ
ಒಡ ನೆಗೆದವು ಕುಮುದಗಳು ॥೧೫೬॥

ಚೋರಗಂಡಿಯಲಿಳಿಯಿತು ಹೊಣಕೆಯ ಮಂದಿ
ಕಾರಗತ್ತಲು ನಡುವಿರುಳೆ ।
ಸೇರಿತಾಗಳೆ ತುರುಕರ ಪಾಳಯವು
ಧೀರರು ಕೈಯ್ಯ ಮಾಡಿದರು ॥೧೫೭॥

ಬೊಬ್ಬೆಯಬ್ಬರವಾಗಿ ಹಬ್ಬಿತು ಪಾಳ್ಯದಿ
ನಿಬ್ಬರದಲಿ ಹೊಯಿ ಹೊಯಿದು ।
ತಬ್ಬಿಬ್ಬುಗೊಂಡರು ಖಾನ ವಜೀರರು
ತಬ್ಬಿ ತಮ್ಮೊಳು ಕಡಿದಾಡಿ ॥೧೫೮॥

ಹಿಡಿದರೈನೂರು ಕುದುರೆಯ ಕಾಲಾಳನು
ನಡು ಪಾಳ್ಯಯವ ಹೊಕ್ಕಿರಿದು ।
ನುಡಿದರು ನೇಮಿಯೆಲ್ಲಿಹನೆಂದು ಅರಸುತ
ಕಡುಗಲಿ ರಾಮನ ಮಂದಿ ॥೧೫೯॥

ಕಡಿದರು ಖಾನ ವಜೀರರ ಪಾಳ್ಯವ
ಗುಡಿ ಗುಡಾರವನೆಲ್ಲ ಹರಿದು ।
ಒಡನೆ ಕವಿದು ಬಂದು ಆನೆ ಕುದುರೆಗಳ
ಪಿಡಿದರು ಕೈಸೆರೆಗಳನು ॥೧೬೦॥

ನೇಮಿಯ ಪಾಳ್ಯವು ಎಲ್ಲಿದೆಯೆನುತಲಿ
ರಾಮನ ಮಂದಿ ಮೂದಲಿಸಿ ।
ಆ ಮಹಾ ತಳತಂತ್ರ ಮಾರ್ಬಲದೊಳಗೆಲ್ಲ ನಿ
ಸ್ಸೀಮರು ಕೈಯ ಮಾಡಿದರು ॥೧೬೧॥

ಆನೆ ಕುದುರೆ ಕಾಲಾಳು ರಾಹುತರನು
ಸೇನಾಧಿಪರನು ಪಿಡಿದರು ।
ಖಾನ ಮಲ್ಲುಕರ ಪಾಳೆಯವನೆ ಹೊಕ್ಕರು
ನಾನಾ ಪರಿಯ ಸೂರೆಮಾಡಿ ॥೧೬೨॥

ಎತ್ತಲೆಂದೆನಲಿ ಬಾರದು ಗಲಭೆಯ ಸುದ್ದಿ
ಸುತ್ತಲು ಹುಯ್ಯಲಾಗಿಹುದು ।
ಮತ್ತೆ ಬೊಬ್ಬೆಯರೊಡಗೂಡಿದ ಜನಗಳು
ಅತ್ತಿತ್ತಲೊಬ್ಬೊಬ್ಬರಾಗಿ ॥೧೬೩॥

ನೆತ್ತಿಯ ಗಾಯ ಸಹಿತ ಓಡಿ ಹೋದರು
ಕಿತ್ತರೂ ನಟ್ಟಂಬುಗಳನು ।
ಕತ್ತಲೆಯೊಳು ಅತ್ತಿತ್ತಲೆಂದರಿಯದೆ
ಮೊತ್ತವಾಯಿತು ಪರಿವಾರ ॥೧೬೪॥

ಬಿರಿದಿನ ಕಹಳೆ ಸಹಿತ ರಾಮನ ಮಂದಿ
ಅರಸು ಕಂಪಿಲನಿದ್ದೆಡೆಗೆ ।
ಸರಸದ್ಯೆನೂರು ಖಾನರ ತಲೆಗಳ ತಂದು
ಅರಸಗೊಪ್ಪಿಸಿ ಇರಲಿತ್ತ ॥೧೬೫॥

ಸಗರದ ನಡು ಸೀಮೆಗೆ ಓಡಿ ಹೋದರು
ಬೇಗ ಹಿಂದಕೆ ತೆರಳಿದರು ।
ಹೊಗಲಮ್ಮದೆ ಕಂಗೆಟ್ಟು ಖಾನರು ಕೂಡಿ
ಆಗ ಕರೆಸಿದರು ಹೊಲಬಿಗರ ॥೧೬೬॥

ಬೆಳಗಾಗೆ ಬಂದು ಬಿಟ್ಟರು ಗಾವುದ ದಾರಿ
ಕಳೆದೆವಿದೊಂದು ಕಂಟಕವ ।
ದಳದುಳವಾಗಿ ಹೋಯಿತು ಕುದುರೆಯ ಮಂದಿ
ಎಳೆದೊಯಿದರು ಹಿಡಿಯಾಳ ॥೧೬೭॥

ಮತ್ತೆ ಮರಳಿ ಪೌಜಿಕ್ಕಿ ತುರುಕರಾಗ
ಒತ್ತಿ ನಡೆದರಿದಿರಾಗಿ ।
ಸತ್ಯವಿನ್ನೇಕೆ ದುರ್ಗದ ಹಿಂದುವ ಮಂದಿ
ಕತ್ತಿಗಳಿಗೆ ಹಬ್ಬವೆನುತ ॥೧೬೮॥

ಕತ್ತಲೆಯೊಳು ಕೊಂದ ಗರ್ವವ ಬಿಡಿಸುವೆ
ಮುತ್ತಿ ಮುಸುಕಿದರು ದುರ್ಗವನು ।
ಸುತ್ತ ಸರ್ಪನ ಮುಸುಕಿದ ಗರುಡನ ಹಾಗೆ
ಮುತ್ತಿ ಸಂಹರವ ಮಾಡುವೆವು ॥೧೬೯॥

ಹೊಳೆವಾನೆ ಮುಖದಲಿ ಕನ್ನಡಿಯನು ಕಟ್ಟೆ
ಥಳಥಳಿ[ಸಲು] ಬಳ್ಳೀ ಮಿಂಚು ।
ಇಳೆಬೆಸಲಾದಂತೆ ತುರುಕ ನೇಮಿಯ ದಂಡು
ಇಳಿಯಿತು ಕುಮ್ಮಟಕೆ ಬಂದು ॥೧೭೦॥

ಸೂಲಂಗಿಯಿಕ್ಕಿದ ಹನ್ನೊಂದು ಸಾವಿರ
ಖಾನಖಾನರು ಪಾಳ್ಯದೊಳಗೆ ।
ದಾನವ ಸೇನೆಯ ಕಂಡು ಕಂಪಿಲರಾಯ
ಸೂನುವ ನೆನೆದು ಚಿಂತಿಸಿದ ॥೧೭೧॥

ಮದವೆದ್ದ ಮಾನ್ಯರ ಗಂಡನೆಂದೆನುತಲಿ
ಒದಗಿ ಪಾಳೆಯವನೆ ಬಿಡಿಸಿ ।
ಕದನಪ್ರಚಂಡ ನೇಮಿಯ ಖಾನ ಖಾನರು
ಒದಗಿತು ರಣಕೆ ಇದಿರಾಗಿ ॥೧೭೨॥

ಧರೆಯು ಹಿಡಿಯದಂತೆ ಪಾಳೆಯವನು ಬಿಡೆ
ಧುರದೊಳು ನಾಲ್ಕು ದಿಕ್ಕಿನಲಿ ।
ಹರಿದಾಡಿ ಖಾನಖಾನರು ಎಡಬಲದಲ್ಲಿ
ಭರದಲೇರುವ ಕುದುರೆಗಳು ॥೧೭೩॥

ಲಕ್ಷ ಸಂಖ್ಯೆಯ ಮಂದಿ [ಹೊತ್ತು] ದುಮ್ಮಾನವ
ಲಕ್ಷಲಕ್ಷವು ಗುಡಿ ಹೊಯಿದು ।
ದಿಕ್ಕು ದಿಕ್ಕಿನಲಿ ಪಸರಿಸಿ ಪಾಳೆಯ ಬಿಡೆ
ರಕ್ಕಸ ರಾಯರ ದಂಡು ॥೧೭೪॥

ಮುತ್ತಿನ ಗುಡಿ ಪಚ್ಚೆಯ ಗುಡಿ ಹೊಯ್ದವು
ಸುತ್ತ ಕಂಪಿಲನ ದುರ್ಗದಲಿ ।
ಮತ್ತೆ ಚಿನ್ನದ ಕಳಸಗಳೊಪ್ಪಿ ಮೆರೆದವು
ಎತ್ತ ನೋಡಿದರೆ ಕಣ್ಬರವು ॥೧೭೫॥

ನೇಮಿಯ ಗುಡಿಗಳು ಭೂಮಿಯೊಳಗೆ ಚಿತ್ರ
ಹೇಮಾಂಬರದ ಕಳಸಗಳು ।
ಕೋಮಲೆಯರ ಗುಡಿಗಳು ಒಂದು ಲಕ್ಷವು
ಆ ಮಹಾ ಪಾಳೆಯದೊಳಗೆ ॥೧೭೬॥

ಎತ್ತ ನೋಡಿದಡತ್ತ ಸತ್ತಿಗೆ ಸಾಲ್ಗಳು
ಎತ್ತ ನೋಡಿದರೆ ಚಾಮರವು ।
[ಮೊತ್ತ]ದಾನೆಗಳು ತೇಜಿಗಳು ಬಿರಿದುಗಳಿಂದ
ಮತ್ತೆ ನೇಮಿಯ ಪಾಳ್ಯದೊಳಗೆ ॥೧೭೭॥

ಸರವತ್ತಿಗೆಯು ಸಾವಿರ ದುಮ್ಮಾನವು
ಅರಸು ಕುಳ್ಳಿರವುವ ಚಾವಡಿಯು ।
ತುರಗ ಓಲೆಯ ಪೆಟ್ಟಿಗೆ ಭೋಜನಶಾಲೆ
ಅರಸು ನೇಮಿಯ ಪಾಳ್ಯದೊಳಗೆ ॥೧೭೮॥

ಪಟ್ಟೆಯ ಗುಡಿ ಪ[ಗ]ಡೆಯ ಗುಡಿಗಳು ಲಕ್ಷ
ಬಟ್ಟೆಯು ಗುಡಿಯು ಹೊಯ್ದಿಹವು ।
ಮೆಟ್ಟಿ ನಿಂದಿಹವು ಸಂಭ್ರಮದಿಂದ ಗುಡಿಗಳು
ದಿಟ್ಟಿಸಿ ನೋಡಲಳವಲ್ಲ ॥೧೭೯॥

ಚಿನ್ನದ ಕಳಸಗಳೊಪ್ಪಿ ತಾ ಮೆರೆದವು
ರನ್ನದ ಹರಡಿ ದಿಂಡಿಗಳು ।
ಸಣ್ಣ ಹೂವಿನ ಕುಂಚಿಗಳಿಂದ ಕಟ್ಟಿರೆ
ಕಣ್ಣ ಹಬ್ಬಕೆ ಕಡೆಯಾಗಿ ॥೧೮೦॥

ಗಾಜಿನ ಗುಡಿ ಬಲು ಮೇಗಳ ಸಂಭ್ರಮ
ಭೋಜನಶಾಲೆ ಮೊದಲಾದ ।
ಸಾಜದಿ ಸ್ತ್ರೀಯರು ಮಲಗುವ ಗುಡಿಗಳು
ರಾಜಿಸೆ ನೇಮಿಯ ದಂಡು ॥೧೮೧॥

ಪಟ್ಟೆದ ಗುಡಿ ಪಚ್ಚೆಯ ಗುಡಿ ಪರಕಾಳಿ
ಕಟ್ಟಿದರಲ್ಲಿ ಸಾರಥಿಯ ।
ಪಟ್ಟಾವಳಿಯ ದುಮ್ಮಾನಗಳನೆ ಹಾಕಿ
ಬಿಟ್ಟಿತು ತಮತಮಗಲ್ಲಿ ॥೧೮೨॥

ಹಳದಿಯ ಗುಡಿ ಹಸಿರ ಗುಡಿ ದುಮ್ಮಾನ
ಕಳೆಯುಳ್ಳ ನೀಲಿಯ ಗುಡಿಯು ।
ಹೊಳೆವ ರತ್ನದ ಕಳಸಗಳೊಪ್ಪಿ ಮೆರೆದವು
ಬಳಸಿ ಮೆರೆದವು ಪಾಳ್ಯದೊಳಗೆ ॥೧೮೩॥

ಗಂಧ ಕಸ್ತೂರಿ ಕುಂಕುಮ ಕಾದಂಬವು
ತಂದು ಪಿಂಗಾಳಿಯೊಳಿರಿಸಿ ।
ಮುಂದೆ ಸಂಬ್ರಾಣಿ ಧೂಪವು ಗಮಗಮಿಸುತ
ಗಂಧವಿಡಿಯೆ ಗುಡಿಹೊಯ್ದು ॥೧೮೪॥

ಮೊಲ್ಲೆ ಮಲ್ಲಿಗೆ ಪಾರಿಜಾತ ಸಂಪಗೆ ಜಾಜಿ
ಚೆಲ್ವಾದ ಚಂಗಣಗಿಲೆಯು ।
ಚೆಲ್ವಾದ ಮರುಗ ದವನ ಪಚ್ಚೆ ಮುಡಿವಾಳ
ವಲ್ಲಿ ಮಾರುವ ಗುಡಿ ಹೊಯ್ದು ॥೧೮೫॥

ಪಂಚವಣ್ಣಗೆ ವನ ಮಿಂಚುವ ಬಿಳಿಯೆಲಿ
ಕೆಂಚ ಹಾಲು ಗುಡಿ ಹೊಯ್ದು ।
ಮಿಂಚುವ ಕಳೆಯುಳ್ಳ ಪುನಗಿನಂಗಡಿಗಳು
ಸಂಚರಿಸಿ ಎಡಬಲದಿ ॥೧೮೬॥

ನಾಣ್ಯ ದೇವಾಂಗ ಜೇಬಿಯ ಪಟ್ಟಾವಳಿಗಳ
ಅಣಿಮುತ್ತು ಹವಳಗಳ ।
ಅಣಿಕಾರರು ಚಿನಿವಾಲರಂಗಡಿಗಳ
ಓಣಿ ಸಂಭ್ರಮಿಸೆ ಪಾಳೆಯದಿ ॥೧೮೭॥

ಸೊಂಪಿನ ಸೂಳೆಗೇರಿಯರ ಗುಡಾರವು
ಇಂಪ ನಾನೇನ ಬಣ್ಣಿಸುವೆ ।

-------------------- ॥೧೮೮॥

ಅಲ್ಲಲ್ಲಿ ಜಾಣರು ಅಲ್ಲಲ್ಲಿ ಪ್ರವೀಣರು
ಅಲ್ಲಲ್ಲಿ ಗಣಿಕಾರ ಗುಡಿಯು ।
ಬಲ್ಲ ಸುಜಾಣರ ಭಾವಕರ ಗುಡಿಗಳು
ಎಲ್ಲ ಬಿಟ್ಟಿತೊಂದೆಸೆಯ ॥೧೮೯॥

ವೇಣುಸರ ಮಂಡಲ ಕಿನ್ನರಿಗಳ ಧ್ವನಿ
ಜಾಣ ಪಾತ್ರಗಳ ಗೂಡಾರ ।
ಆಣಿಕಾರರು ಅಷ್ಟವಿಧ .... ವೇಣರು
ತ್ರಾಣವರಿತು ಗುಡಿ ಹೊಯ್ದು ॥೧೯೦॥

ಅಕ್ಕಸಾಲೆ ಕಂಚಗಾರ ಕಲ್ಲುಕುಟಿಕ
ಟಕ್ಕಿನ ಬಡಗಿ ಕಮ್ಮಾರ ।
ಅಂಕಕ್ಕೆ ಕಾದುವ ಮಾಸಾಳ ಗುಡಿಗಳು
ಶಂಕೆಯಿಲ್ಲದೆ ಪಾಳ್ಯದೊಳಗೆ ॥೧೯೧॥

ಕುರುಬ ಕುಂಬಾರ ಅಸಗ ನಾಯಿದರಿಂದ
ತರತರ ವರಿವ ಗೂಡಾರ ।
ನೆರೆಯಿತು ಹದಿನೆಂಟು ಜಾತಿಯು ಪಾಳ್ಯದಿ
ಪರಿಯ ನಾನೇನ ಬಣ್ಣಿಸುವೆ ॥೧೯೨॥

ಕೊಂಬು ಕೊಳಲು ವಾದ್ಯ ಡಂಬಕ ಹರೆಗಳು
ತುಂಬಿ ಭೋರಿಡುವ ವಾದ್ಯಗಳು ।
ಬೊಂಬು ತಮ್ಮಟ ಗಿಡಿಬಿಡಿ ನಾಗಸರ ಡೊಳ್ಳು
ಸಂಭ್ರಮಿಸಿದವು ಗೂಡಾರ ॥೧೯೩॥

ಮೇದಾರರಲ್ಲಲ್ಲಿ ಈಡಿಗರಲ್ಲಲ್ಲಿ
ಮಾದಿಗರೊಂದೆಸೆಯಲ್ಲಿ ।
ಕಾದುವರಿದಿರಲ್ಲವೆಂದು ನೇಮಿಯ ದಂಡು
ಮೇದಿನಿಯೊಳು ಮೋಹರದಿ ॥೧೯೪॥

ಕರ್ತನೆಂದೇ ವಂದಿಸಿ ನೇಮಿಖಾನ್‌ಗೆ
ಮುತ್ತಿನ ಗದ್ದುಗೆ ಮೇಲೆ ।
ಸುತ್ತ ಓಲೈಸುವ ಖಾನ ವಜೀರರು
ಕರ್ತುವೆ ಸಲಹೆಂದೆನುತ ॥೧೯೫॥

ಸುತ್ತಲು ಮುತ್ತಿಗೆ ಮೊತ್ತವಾಯಿತು ದಂಡು
ಮುತ್ತಿ ಮುಸುಕಿತೆಂಬಂತೆ ।
ಅತ್ಯಂತ ಹರುಷದಿ ಇರಲಿತ್ತ ಉದಯದಿ
ಮೊತ್ತ ರಾಜಿಸಿತು ಏನೆಂಬೆ ॥೧೯೬॥

ಪಗಲೊಡೆಯನು ಪಡುವಣಾದ್ರಿಗೆಯ್ದನು
ಖಗಜಾತಿ ಪಕ್ಕೆಗೆಯ್ದಿದವು ।
ಸೊಗಸುದೋರುತ ಸೋಮನ ಕಳೆಯೇರಲು
ಮಿಗಿಲು [ಕಮಲ] ಮುಖದಿರುವೆ ॥೧೯೭॥

ಮಂದಮಾರುವ ಬರೆ ಚಂದ್ರಕಳೆಗಳು ಏರೆ
ಕಂದರ್ಪನಾಳು ಝೇಂಕರಿಸೆ ।
ಗೊಂದಣ ಹರಿದು ಸೂರ್ಯನು ಮುಖದೋರಲು
ಬಂದರು ಭಟರು ಹುಯ್ಯಲಿಗೆ ॥೧೯೮॥

ಲಕ್ಕಸಂಖ್ಯೆಯ ಮಂದಿ ಸುತ್ತ ಲಗ್ಗೆಯ ಮಾಡೆ
ಲೆಕ್ಕವಿಲ್ಲದೆ ಕಾಳಾಳು ।
ದಿಕ್ಕುದಿಕ್ಕಿಗೆ ಕವಿದರು ಖಾನಖಾನರು
ಹೊಕ್ಕರು ಬಂದು ಕುಮ್ಮಟವ ॥೧೯೯॥

ನಿದ್ದೆಯಿಲ್ಲದೆ ಚಿಂತೆಯಿಂದ ಹೊರಳೆದ್ದನು
ಎದ್ದು ಬಂದನು ಚಾವಡಿಗೆ ।
ಗದ್ದುಗೆಯಲಿ ಕುಳಿತುಕೊಂಡು ಕಂಪಿಲರಾಯ
ಎದ್ದು ಮನ್ನೆಯರ ಕರೆಸಿದನು ॥೨೦೦॥

ಮತ್ತೆ ಮನದಿ ನೊಂದು ಆಗ ಕಂಪಿಲರಾಯ
ಚಿತ್ತಜರೂಪನ ನೆನದು ।
ಕರ್ತ ಪ್ರಧಾನಿಯ ಕರೆಸಿದ ಓಲಗಕೆ
ಇತ್ತ ಮಾನ್ಯರ ಕರೆಸಿದನು ॥೨೦೧॥

ಇದ್ದ ಮನ್ನೆಯ ನಾಯಕರೆಲ್ಲ ಸಹವಾಗಿ
ಬುದ್ಧಿಯಿಲ್ಲದಾಯಿತೆನುತ ।
ನಿರ್ಧಾರವಾಯಿತು ಅಂದು ಹೇಳಿದ ಮಾತು
ಅದ್ದಿ ಹೋಯಿತು ರಾಜಕಾರ್ಯ ॥೨೦೨॥

ಮಗ ಸತ್ತ ದುಃಖಕ್ಕೆ ಮಿಗಿಲಾಯಿತುಯೆಂದು
ಮೊಗಮುಚ್ಚಿ ಚಿಂತೆ ಮಾಡುತಲಿ ।
ನಗೆಗೇಡಾದೆವು ಪರರಾಯರಿಗೆಯೆಂದು
ದುಗುಡವ ತಾಳಿ ಕಂಪಿಲನು ॥೨೦೩॥

ತುತ್ತಾದೆವು ನಾವು ತುರುಕರ ಬಾಯಿಗೆ
ಮಿತ್ತಾದಳು ಪಾಪಿ ರತ್ನಿ ।
ಹೆತ್ತಾಗಲೇ ರಾಮ ಸ[ತ್ತುದುಂ]ಟಾದರೆ
ಮತ್ತೆ ಈ ದುಃಖ ಕಾಣಿಪುದೆ ॥೨೦೪॥

ಭುಗಿಲೆನಿಸುವ ಡೊಳ್ಳು ನಿಸ್ಸಾಳ ವಾದ್ಯವು
ಅಗಲಕ್ಕೆ ಚೀರುವ ಕಾಳೆ ।
ಹೊಗಹೋರಿ ಹೊಕ್ಕು ಮುತ್ತಿಗೆಯಾಯಿತುಯೆಂದು
ತೆಗೆದು ಬಿಟ್ಟಂತೆ ಕಂಪಿಲ ॥೨೦೫॥

ದಾಳಿಟ್ಟು ಬಂದ ನೇಮಿಯ ಕಂಡು ಕಂಪಿಲ
ಹೇಳಿದ ಬೈಚಪ್ಪನೊಡನೆ ।
ಹಾಳಾಯಿತು ಹೊಸದುರ್ಗ ಕುಮ್ಮಟವೆಂದು
ಗೋಳಿಟ್ಟು ಕಂಪಿಲ ಮರುಗಿ ॥೨೦೬॥

ಮಂದಿ ಕುದುರೆ ಹಾಳಾಗಲು ಕಂಪಿಲ
ನೊಂದುಕೊಂಡನು ಮನದೊಳಗೆ ।
ಕಂದನಳಿದ ಕಾರಣದಿ ಬಯಲಾಯಿತು
ಸಂದೇಹವೇತಕೆಂದೆನುತ ॥೨೦೭॥

ಕಬ್ಬಕ್ಕಿ ಕಾನನದೊಳು ಕವಿದಂದದಿ
ಬೊಬ್ಬಿಡುತದೆ ಬೇಡ ಪಡೆಯು ।
ಗರ್ಭ ತಲ್ಲಣಿಸಿ ಅಬ್ಬರಕೆಲ್ಲ ಪಟ್ಟಣ
ಗರ್ಭ ಕಲಕುವ ತೆರನಂತೆ ॥೨೦೮॥

ಕೃತಯುಗದಲ್ಲಿ ರೇಣುಕೆ ಹುಟ್ಟಿ ಕಾರ್ತವೀರ್ಯನ
ಹತಮಾಡಳೆ ವಂಶವೆಲ್ಲ ।
ತ್ರೇತಾಯುಗ ಜಾನಕಿ ಹುಟ್ಟಿ ಲಂಕೆಯ
ಹತಮಾಡದಿಹಳೆ ರಕ್ಕಸರ ॥೨೦೯॥

ದ್ವಾಪಾರ [ದಲ್ಲಿ] ದ್ರೌಪತಿಯಿಂದ ಕಲಹವು
ಪಾಪದಿ ಕೌರವ ಮಡಿದ ।
ಪಾಪಿ ರತ್ನಿಯ ಹುಟ್ಟಿ ಕುಮ್ಮಟವಳಿದಿತು
ಭೂಪ ಕಂಪಿಲನೆ ಕೇಳೆಂದ ॥೨೧೦॥

ಕರೆಸು ರತ್ನಿಯ[ನು] ತರಿಸು ಬೊಲ್ಲನಯೆಂದು
ಅರಸಗೆ ಮಂತ್ರಿ ನುಡಿದನು ।
ಇರಿಸು ಕಾಳಗಕೆಂದು ಕರೆಸು ಪತ್ನಿಯನೆಂದು
ಅರಸಯಿನ್ನೇಕೆ ನೋಡೆಂದ ॥೨೧೧॥

ಜೋಡ ತೊಡಿಸು ಕುದುರೆಯ ಕೊಟ್ಟು ಭಲ್ಲೆಯವ
ನೀಡಯ್ಯ ರತ್ನಿಯ ಕೈಯ್ಗೆ ।
ರೂಢೀಶ ನೇಮಿಯ ದಂಡು ಮುರಿಯಿಸೆಂದು
ಅಡಿದ ಮಂತ್ರಿ ಬೈಚಪ್ಪ ॥೨೧೨॥

ಯಾಕೆಲೊ ಬೈಚಪ್ಪ ಕಾಕುಮಾಡಲಿ ಬೇಡ
ಸಾಕು ಮೂಗಿನ ಮೇಲೆ ಸಣ್ಣ ।
ಪೋಕತನದಿ ನಿನ್ನ ಮಾತು ಕೇಳದೆ ನಾನು
ಲೋಕಪತಿಯ ಕೊಲಿಸಿದೆನು ॥೨೧೩॥

ತರಹರಿಸಲಾರೆನೊ ತನುಜನಳಿದ ಮಂತ್ರಿ
ಬೆರಸಿ ಬೇಗೆಯನಿಕ್ಕುವರೆ ।
ಹರನು ಎನಗೆ ಈ ಬುದ್ಧಿ ಇತ್ತನು ಬೇಗ
ಧುರದೊಳೀ ಹದನನರಿಯದೆ ॥೨೧೪॥

ಹಿತವೆ ಹೆಂಡತಿಯೆಂದು ಸತಿಗೆ ನೀನೊಲಿದರೆ
ಕಥೆಯ ಮಾಡಿದಳು ಕುಹಕವ ।
ಸುತ ರಾಮನಾಥನ ಹತವ ಮಾಡಿದೆಯಂದು
ಕಥೆಯಾದೆ ಮೂಲೋಕದೊಳಗೆ ॥೨೧೫॥

ರಾಮನಿಲ್ಲೆ ನೇಮಿ ಸೀಮೆಯ ದಾಟಿದ
ಭೂಮಿಯೊಳಗೆ ಪ್ರತಿವೀರ ।
ತಾಮಸ ಮಾಳ್ವನೆ ದಂಡನು ಕಂಡರೆ
ಕಾಮನ ಸಮರೂಪ ರಾಮ ॥೨೧೬॥

ಸತ್ತವರೆದ್ದು ಬಾಹರೆ ಕಂಪಿಲರಾಯ
ಮೃತ್ಯು ನುಂಗಿದ ಮತ್ತು ಬಹುದೆ ।
ಹೆತ್ತ ಮಗನ ಕೊಲ್ಲಿಸಿದ ಅಪಕೀರ್ತಿಯು
ಹತ್ತಿತ್ತು ಚಂದ್ರನುಳ್ಳನಕ ॥೨೧೭॥

ಅರಸಿಯರನು ಕೊಂಡು ಹೋಗು ನೀ ಹೊಸಮಲೆಗೆ
ತರುಬಿ ಕಾದುವೆ ದುರ್ಗದೊಳಗೆ ।
ಇಂದು ಮೆರೆದು ತುರುಕರ ಕೂಡೆ ಕಾದುವೆ
ಮರೆಯ ಮಾತೇನೊ ಮಂತ್ರೀಶ ॥೨೧೮॥

ತರತರದಲಿ ಕೂಡಿದ ಆಳು ಮಂದಿಯು
ಅರಸಿಯ ಕರೆಸ ಹೇಳಿದನು ।
ಅರಸಿಯರೆಲ್ಲರು ಹರುಷವೇರಿದರಾಗ
ತರಿಸಿ ಮುತ್ತಿನ ಚಾಳಿಗೆಯನು ॥೨೧೯॥

ಇಟ್ಟರ[ರ]ಸಿಯರು ಮುತ್ತಿನ ಸೇಸೆಯ
ಸೃಷ್ಟಿಯನಾಳ್ವ ರಾಮಯ್ಯನ ।
ಪಟ್ಟದ ಕುಮಾರರಾಮನ ಕೊಂದೀಗ
ಕಷ್ಟವಾಯಿತೆ ಕಂಪನೃಪತಿ ॥೨೨೦॥

ಬಲ್ಲಿದ ರಾಮನ ಕೊಂದು ನಿಲ್ಲದೆ ನೀನು
ಎಲ್ಲರೊಳಗೆ ಹೆಸರಾದೆ ।
ಖುಲ್ಲ ಮನದ ರತ್ನಿ ಕರಕೊಂಡು ನೀನೀಗ
ಬಲ್ಲಿದ ರಣಕೆ ಹೋಗೆನಲು ॥೨೨೧॥

ನಿನ್ನರಸಿಗೆ ಹಜಾರ ಮೇಕದ ಸೀರೆ
ಇನ್ನು ತೊಡಿಸೊ ಕಂಪನೃಪತಿ ।
ಚೆನ್ನಾಗಿ ತುರುಕರ ದಂಡ ನೀ ಹೊಡೆಯೆಂದೆ
ಎನ್ನುತ ಹರಿಯಮ್ಮ ನುಡಿಯೆ ॥೨೨೨॥

ಮಗ ರಾಮ ಏರುವ ಚೆನ್ನ ಬೊಲ್ಲನ ತಂದು
ಸೊಗಸಾದ ರತ್ನಿಗೆ ಕೊಡಿಸು ।
ಸಾಗಿಸಿ ತುರುಕರ ದಂಡ ಕೊಲಿಸುಯೆಂದು
ಆಗ ಸಿಂಗಮ್ಮ ನುಡಿದಳು ॥೨೨೩॥

ಸಂಗ್ರಾಮಕನುವಾಗಿ ಕಳುಹು ನೀಯೆಂದಾಗ
ತಂಗಿ ಸಿಂಗಮ್ಮನಾಡಿದಳು ।
ಮಂದಿ ಕುದುರೆ ಕಾಲಾಳು ಮಾರ್ಬಲವನು
ಇಂದು ರತ್ನಿಗೆ ಕೊಡಿಸಯ್ಯ ॥೨೨೪॥

ನುಡಿದಳು ತಂದೆಯ ಬೈದು ಶಾಪಿಸುತಾಗ
ಒಡನೆ ಮರುಗಿ ಅಳಲುತಲಿ ।
ಕೆಡೆದ್ದೊರಳಿದಳು ಸಿಂಗಮ್ಮ ಶಾಪಿಸುತಾಗ
ಸುಡು ಕಂಪ ನಿನ್ನ ಬಾಳುವೆಯ ॥೨೨೫॥

ಆಡಿ ಮಾಡುವುದೇನು ಅಮ್ಮಜ ರಾಮನ
ನೋಡಿ ಸೈರಿಸಲಾರದವಳ ।
ರೂಢಿಯೊಳಗೆ ಪಿಡಿದುದ ನಾನರಿಯೆನು
ಕಾಡಿತು ವಿಧಿ ತನ್ನನೆಂದ ॥೨೨೬॥

ಒಂದು ಮಾತನು ಕೊಂದು ತಾರೆಂದು ಮಂತ್ರಿಗೆ
ಅಂದು ಅಪ್ಪಣೆಯನಿತ್ತೆನು ।
ಮುಂದುಗಾಣದೆ ವಿಚಾರವ ಮಾಡದೆ
ಕೊಂದನು ಮಂತ್ರಿ ಬೈಚಪ್ಪ ॥೨೨೭॥

ಆಡಿದ ಮಾತನು ಕೇಳುತ ಬೈಚಪ್ಪ
ನೋಡಿ ಕಂಪಿಲಗೆ ನುಡಿದನು ।
ಆಡಿದ ಮಾತನು ಕೇಳದೆ ಇದ್ದರೆ
ಕೋಡಿಬಹುದೆನ್ನ ಮೇಲೆ ॥೨೨೮॥

ಘನ ಪಾಕವನಾಡುವರೆ ಕಂಪಿಲರಾಯ
ಮನಮುಟ್ಟಿ ಸುತನ ಕೊಂದೀಗ ।
ಎನಗೀ ಮಾತು ಸಲ್ಲದು ಹೀಗೆ ನುಡಿದರೆ
ಜನ ಮೆಚ್ಚದು ನಿನ್ನ ಮಾತು ॥೨೨೯॥

ನಿಮ್ಮೊಳು ತುಳಿದಾಟವೇಕೆಂದು ಹರಿಯಮ್ಮ
ಸುಮ್ಮನಿರಿಸಿ ಮಂತ್ರಿಯನು ।
ಗಮ್ಮನೆ ಕಾಳಗ ಬಂದದೆ ಹೋಗೆಂದು
ಕಮ್ಮಲರ್ಗಂಧಿ ಆಡಿದಳು ॥೨೩೦॥

ಸತಿ ಸುತೆಯಾಡಿದ ಮಾತ ಕೇಳುತ ರಾಯ
ಅತಿ ಮನದಲಿ ತಾ ನೊಂದು ।
ಪೃಥ್ವಿಗೊಡೆಯ ಜಟ್ಟಂಗಿಲಿಂಗವೆ ಸ್ವಾಮಿ
ಹಿತವನೊಬ್ಬರ ಕಾಣೆನೆಂದ ॥೨೩೧॥

ಮುತ್ತಿನ ಸೇಸೆಯನಿಟ್ಟು ರಾಣಿಯರೆಲ್ಲ
ಮತ್ತೆ ಶೃಂಗರದಿ ಪಾಡಿದರು ।
ಒತ್ತಿ ರಣದೊಳು ಕಾದಿ ಮಡಿದರೆ ನಾವೀಗ
ಮತ್ತೆ ಬಹೆವು ಕಂಪನ್ನಪತಿ ॥೨೩೨॥

ಕರವ ಮುಗಿದು ಕಾಂತೆಯರು ಸೇಸೆಯ ತುಂಬಿ
ಧುರಗಲಿ ಆಗೆಂದು ಹರಸಿ ।
ಭರದಿಂದ ಹೊಯ್ದಾಡಿ ರಣದೊಳು ಮಡಿದರೆ
ಬರುವೆವು ನಿನ್ನ ಬೆಂಬಳಿಯ ॥೨೩೩॥

ಕಾದುವ ದಿನವಲ್ಲ ಕಂಪಿಲರಾಯನು
ಭೂದೇವತೆ ಬಲ್ಲಳೈಸೆ ।
ಮಾದೇವ ಹರಿಬ್ರಹ್ಮ ತಾ ಬಲ್ಲನೆನುತಲಿ
ಕಾದಲೆಯರು ಆಡಿದರು ॥೨೩೪॥

ರಾಯನು ರಾಣಿಯರಾಡಿದ ಮಾತ ಕೇಳಿ
ಕಾಯವು ಹೆದರಿ ಮನದೊಳಗೆ ।
ಬಾಯ ಬಿಡುತ ಕಂಡವರ ಮುಖವ ನೋಡಿ
ಹಾಯೆಂದು ಮರುಗಿ ಮಾತಾಡಿ ॥೨೩೫॥

ಮುಗುಳು ನಗೆಯಲಿ ನಗುತ ಬೈಚಪ್ಪನು
ಬಗೆಯ ತಿಳಿಯಬೇಕೆಂದ ।
ತೆಗೆತಂದು ಕಾದಿಸಿ ಕಂಪಿಲರಾಯಗೆ
ಮಗನ ಸಮ್ಮುಖವ ಮಾಡುವೆನು ॥೨೩೬॥

ಕಾಯವ ಮರೆದು ಕಾಂತೆಯ ಮುಖವ ನೋಡಿ
ಹಾ ! ಎಂದು ಮರಳಿ ಮಾತಾಡಿ ।
ಮಾಯಕಾರ್ತಿಯ ಮಾತಿಗೆ ಕೊಂದೆ ಮಗನೆಂದು
ರಾಯನಾಡಿದ ದುಗುಡದಲಿ ॥೨೩೭॥

ರಾಮನಂಥವರು ಹುಟ್ಟಿರೆ ರಾಯ ರಾಹುತರು
ಭೂಮಿಯೊಳಗೆ ಹುಟ್ಟಿದಿಹರೆ ।
ನೇಮಿಯ ದಂಡನು ಹೊಯ್ಸವೆ ತುರುಕರ
ಸೀಮೆ[ಯ] ಬಿಟ್ಟೋಡಿಸುವೆನು ॥೨೩೮॥

ಅವನೆನ್ನ ಮಗ ರಾಮ ಅವನೆನ್ನ ತಾಯ್ತಂದೆ
ಅವನೆನ್ನ ವಂಶದ ತಿಲಕ ।
ಅವನೆನ್ನ ಹರಿಯಲದೇವಿ ಬಸಿರಲಿ ಬಂದ
ಅವನೀಗ ಚೆನ್ನಿಗ ರಾಮ ॥೨೩೯॥

ಬ್ರಹ್ಮಲೋಕವ ಪೊಕ್ಕರೆ ಮುರಿಯಲಿರಿವನು
ನಿಮ್ಮ ಮಗನ ಸರಿಯವನು ।
ಒಮ್ಮೆ ನೇಮಿಯ ದಂಡ ಮುರಿಯಲಿ ಇರಿದರೆ
ಇಮ್ಮಡಿ ರಾಮನೆನಿಸುವನು ॥೨೪೦॥

ಆವ ದೇಶದ ರಾಯರ ಮಗ ಬೈಚಪ್ಪ
ಆವ ದೇಶದ ಮನ್ನೆಯನು ।
ಆವ ಕಾಲದಿ ಸ್ನೇಹವ ಮಾಡಿದಿರಿಯೆಂದು
ದೇವ ಕಂಪಿಲ ಬೆಸಗೊಂಡ ॥೨೪೧॥

ಕಟಕದಿಂದಿ ಬಂದ ದಿಟವುಳ್ಳ ರಾವುತ
ಸಟೆಯ ಬಳಕೆಯವನಲ್ಲ ।
ಕುಟಿಲ ಕುಹಕರ ಮಾತನು ಕೇಳುವನಲ್ಲ
ನಿಟಿಲಾಕ್ಷನು ಬಲ್ಲನೈಸೆ ॥೨೪೨॥

ನರರೊಳಗೆಣಿಸುವನಲ್ಲ ಅವನುಯೆಂದು
ಸುರಪನ ಸುತನ ಪೊಲುವನು ।
ಧುರದೊಳು ಅವನಿಗೆ ಸರಿಯು ಆರಿಲ್ಲೆಂದು
ದೊರೆ ಕಂಪಿಲಗೆ ಹೇಳಿದನು ॥೨೪೩॥

ಹೇಳಿದ ಮಾತನು ಕೇಳಿ ಕಂಪಿಲರಾಯ
ಬಾಳ ಸಂತೋಷದಲೆದ್ದು ।
ಹೇಳಿದ ಮಂತ್ರಿ ಬೈಚಪ್ಪಗೆ ಕಂಪಿಲ
ನಾಳೆಯೆಂದೆನಬೇಡ ಕರೆಸು ॥೨೪೪॥

ಗಮ್ಮನೀಕ್ಷಣ ಬೇಗ ಕರೆಸೊ ಮಂತ್ರೀಶನೆ
ನಮ್ಮನುಳುಹೊ ನಿಮ್ಮ ದಯದಿ ।
ನಮ್ಮ ಕುಮಾರನಿಂದೆಗ್ಗಳವೆಂಬೆನೊ
ನಿಮ್ಮಾಣೆ ಮಂತ್ರಿ ಬೈಚಪ್ಪ ॥೨೪೫॥

ತಂದು ತೋರಿಸುವೆನು ಹಿಂದನೆಣೀಸದಿರು
ಮುಂದಣ ರಾಜ್ಯಕಾರ್ಯವನು ।
ಚಂದದಿಂದಲಿ ಮಾಡಿ ತುರುಕರ ಕೊಲಿಸುವೆ
ನೆಂದು ಬೈಚಪ್ಪನು ನುಡಿದ ॥೨೪೬॥

ಆದರೆ ಚಿತ್ರೈಸೆನುತ ಪ್ರಧಾನಿಯ ಮೋ
ದದಿ ಕಂಪಿಲ ಕಳುಹಿದನು ।
ಮೇದಿನಿಯೊಳು ಪೊಸಪರಿಯಾಗಿ ಕಾದಿಸುಗೆ
ಬಾದುರಖಾನಗರುಹಿದನು ॥೨೪೭॥

ಅಂತಸ್ಥನಾಗಿ ಬಾದುರಖಾನಗೆ ತಾನು
ಇಂತೆಂದ ಮಂತ್ರಿ ಬೈಚಪ್ಪ ।
ಕಂತು ಸಮಾನ ರಾಮನ ತರಹೋದೆನೊ
ಚಿಂತೆಯಿಲ್ಲದೆ ಕಾದುಯೆಂದು ॥೨೪೮॥

ನೆಲಮಾಳಿಗೆಯೊಳು ಮಡುಗಿದ ರಾಮನ
ಅರಗಳಿಗೆಯೊಳಗೆ ತೆಗತಹೆನು ।
ಎಳೆಬಿಸಿಲಾದಂತೆ ದಂಡು ಬಂದಿದೆಯೆಂದು
ತಿಳುಹಿ ಬಾದೂರ ಕಾದೆಂದ ॥೨೪೯॥

ಊರ ಪಟ್ಟಣವನು ಸೂರೆಮಾಡುವುದನು
ದೂರಟ್ಟು ಕಾದು ನೀನೆಂದ ।
ತೋರುವೆ ರಾಮನ ಈ ಕ್ಷಣವೆನುತಲಿ
ಧೀರ ಪ್ರಧಾನ ಹೇಳಿದನು ॥೨೫೦॥

ದೇವ ಜಟ್ಟಂಗಿ ದೇವನ ಗುಡಿಯೊತ್ತಿಲಿ
ಕಾವನ ಸನ್ನಿಭರಾಮ ।
ಈ ಗಳಿಗೆಯೊಳು ತೆಗೆದು [ತ] ಹೆನುಯೆಂದು
ಬೇಗದಿ ಬೈಚಪ್ಪ ಹೊರಟ ॥೨೫೧॥

ಎಂದಾಗ ಕಂಪಿಲರಾಯ ಬಿನ್ನಪದಿ
ನಿಂದು ಮಾರ್ನುಡಿದ ಬೈಚಪ್ಪ ।
ಇಂದ್ರನ ಸುತನ ಸಮಾನನ ತಹೆನೆಂದು
ನಿಂದು ಬಿನ್ನಹಮಾಡಿದನು ॥೨೫೨॥

ಆರ ಕುದುರೆಯನು ಆರೇರಬಹುದಯ್ಯ
ವೀರ ರಾಮನ ತೇಜಿಯನು ।
ಕಾರ್ಮುಗಿಲಗರೆದಂತೆ ಕಂಬನಿದುಂಬಿದ
ಧಾರುಣಿಯೊಳು ಬಿದ್ದುಹೊರಳಿ ॥೨೫೩॥

ಮೂರ್ಛೆಯ ತಿಳಿದೆದ್ದನು ಕಂಪಿಲರಾಯ
ಆಶ್ಚರ್ಯವಿಟ್ಟು ತಾಮಸದಿ ।
ವೆಚ್ಚವನುಳುಹೋ ನೀನೆನುತ ಬೈಚಪ್ಪನು
ಉತ್ಸಾಹದಿಂದ ತೇಜಿಯನು ॥೨೫೪॥

ಕುದುರೆಯ ತಂದು ಬಿಟ್ಟರೆ ಕಿಚ್ಚು ಘನವಾಗಿ
ಉದುರಿಸಿ ಕಣ್ಣೀರ ಕಂಪ ।
ಒದಗಿದ ಜಗಳಕ್ಕೆ ಇದಿರಾದ ಕಂದನ
ಮದಕರಿ ರಾಮನ ಕಾಣೆ ॥೨೫೫॥

ರಾಮನೇರುವ ತೇಜಿಯ ಕೊಳ್ಳೊ ಬೈಚಪ್ಪ
ಸೀಮೆ ರಾಹುತನ ತೋರೆಂದ ।
ಪ್ರೇಮದಿ ಕಳುಹಿಸಿಕೊಂಡನು ಬೈಚಪ್ಪ
ಸ್ವಾಮಿ ಜಟಂಗಿಯ ಗುಡಿಗೆ ॥೨೫೬॥

ಮಂದಿ ಕುದುರೆಯ ಒಂದೆಸೆಯಲಿ ನಿಲಿಸಿದ
ಬಂದನು ನೆಲಮಾಳಿಗೆಗೆ ।
ಅಂದಳವಿಳಿದು ಬೀಗವ ತೆಗೆಸಿದ ಮಂತ್ರಿ
ಇಂದುಧರನೆ ಸಲಹೆನುತ ॥೨೫೭॥

ಬಲಿಗೊಟ್ಟು ಲಿಂಗಕ್ಕೆ ಮಂತ್ರಿ ಬೈಚಪ್ಪನು
ಬಲದಲ್ಲಿಯಿದ್ದ ಪುಷ್ಪವನು ।
ತಲೆಯಲಿರಿಸಿಕೊಂಡು ತರಹರಿಸದೆ ಬಂದ
ಚೆದುರ ರಾಮಯ್ಯನ ಬಳಿಗೆ ॥೨೫೮॥

ಭಾಷೆಯ ಕೊಟ್ಟು ಬಂದನು ಬೈಚಪ್ಪನು
ಮೀಸರ ಗಂಡನ ಬಳಿಗೆ ।
ಆ ಸಮೀಪಕೆ ಬಂದ ಮುನ್ನ ತಾನಿರಿಸಿದ
ವಾಸಕೆ ಉತ್ಸಾಹದಿಂದ ॥೨೫೯॥

ಹೊಲಬ ತಿಳಿದು ನೆಲಮಾಳಿಗೆಯಹುದೆಂದು
ಕಲಿಗಳರಸ ತಾ ನುಡಿಯೆ ।
ಚೆಲುವ ರಾಮನ ನೋಡುವೆನೆಂಬ ತವಕದಿ
ಬಲಿಗಳ ತಂದು ನಿಲಿಸಿದನು ॥೨೬೦॥

ಹಸಿರು ಬಿಳಿದ ಕೆಂಪು ಹಸನುಳ್ಳ ರಾಜಾನ್ನ
ಪಸರಿಸಿ ಪಲ್ಲವ ತಂದು ।
ಹಸನುಳ್ಳ ಹಣ್ಣು ಕಜ್ಜಾಯ ಪಾಯಸಗಳ
ದೆಸೆಯೆಂಟು ದಿಕ್ಕಿಗೆ ಚೆಲ್ಲಿ ॥೨೬೧॥

ಕುರಿ ಕೋಳಿ ಕೋಣ ಕಬ್ಬನು ದಿಕ್ಕುದಿಕ್ಕಿಗೆ
ತರಿದೊಟ್ಟಿಸಿದ ಮುದ್ದೆಗೂಳ ।
ಉರಿವ ನಿಕ್ಷೇಪವ ತೆಗೆವಂತೆ ಬೀಗವ
ತೆಗೆಸಿದ ಮಂತ್ರಿ ಬೈಚಪ್ಪ ॥೨೬೨॥

ತಳುವಿಲ್ಲದೆ ಬೀಗ ಮುದ್ರೆಯ ತೆಗೆಸಿದ
ನಳಿನನಾಭನೆ ಸಲಹೆನುತ ।
ಒಳಗಿದ್ದ ರಾಮನಿಂತೆಂದನು ನಗುತಲಿ
ಇಳೆಯೊಳ ಅಪ್ರತಿಮ ಚೆನ್ನಿಗನು ॥೨೬೩॥

ಅಂದೆ ನಮ್ಮನು ನೀವು ಕೊಂದವರಲ್ಲವೆ
ಇಂದೇಕೆ ಎಮ್ಮ ಬಯಸಿದಿರಿ ।
ಮುಂದುಗಾಣದೆ ರತ್ನಿಯ ಮಾತ ಕೇಳುತ
ತಂದೆ ಕಂಪಿಲ [ಮಾ]ಡಿದನು ॥೨೬೪॥

ಸಂದು ಹೋ[ದುದರ] ಹಂಬಲ ಬೇಡ ಬೈಚಪ್ಪ
ಎಂದು ರಾಮಯ್ಯ ನುಡಿದನು ।
ಒಂದು ತಪ್ಪನೆ ಕಾಯೊ ನನಗೆಂದು ಬೈಚಪ್ಪ
ವಂದಿಸಿ ಕರಗಳ ಮುಗಿದು ॥೨೬೫॥

ನುಂಗಿದ ತುತ್ತಿಗೆ ರುಚಿಯುಂಟೆ ಬೈಚಪ್ಪ
ಭಂಗಿತವಾದೆ ರತ್ನಿಯೊಳು ।
ಇಂಗಿತವೆ ನಮ್ಮ ಕರೆವುದು ಉಚಿತವೆ
ಹಂಗಿಲ್ಲ, ಬೇರೆ ಹೋಗೆಂದು ॥೨೬೬॥

ಇದು ವೇಳೆಯಲ್ಲವೊ ಚೆದುರ ರಾಯರಗಂಡ
ಕಂದ ನೇಮಿಯ ಉಪಟಳವು ।
ಒದಗಿದೆ ನಿಮ್ಮಯ ಕುಮ್ಮಟದುರ್ಗಕರ
ಮದವೆದ್ದ ಮಾನ್ಯರ ಗಂಡ ॥೨೬೭॥

ಹೋಗಲಾಡಿಯೆ ಹೊದಕಳೆ ಹೊನ್ನಿನ
ಭಾಗ್ಯವ ಬಯಸುವರುಂಟೆ ।
ಆಗ ಎಚ್ಚರಗುಂದಿ ಈಗ ತಿಳಿಯ ಬರೆ
ನಾಗಭೂಷಣ ಗತಿಯೆನುತ ॥೨೬೮॥

ಏಳದಿದ್ದರೆ ನಿನ್ನ ತಂದೆ ಕಂಪಿಲನಾಣೆ
ಭಾಳಾಕ್ಷನಾಣೆ ಶಿವನಾಣೆ ।
ಬಾಲ ನಿನ್ನನು ಹೆತ್ತ ಹರಿಯಮ್ಮನಾಣೆಂದ
ಕುಲಗುರುವಿನ ಆಣೆ ನಿನಗೆ ॥೨೬೯॥

ಕೇಳುತ ಹರಹರಯೆನುತ ಕಿವಿಯ ಮುಚ್ಚಿ
ಭಾಳಾಕ್ಷನೆ ಬಲ್ಲನೆನುತ ।
ತಾಳಿದ ಹರುಷವ[ನಾಗಲೆ]ರಾಮಯ್ಯ
ಲೋಲ ನುಡಿದ ಮುದ್ದು ಮಾತ ॥೨೭೦॥

ಚಿತ್ತಯೆನ್ನ ಮೇಲೆ ಹರಿಯಿತೊ ಬೈಚಪ್ಪ
ಅಚ್ಯುತ ಕಣ್ಣತೆರದನೊ ।
ಅಚ್ಚರಿ ತರುವರೆನು ಇಹಪರಲೋಕಕ್ಕೆ
ಮೆಚ್ಚು ತಹೆನು ನಿನಗೆಂದು ॥೨೭೧॥

ಜಗವರಿಯಲು ನಿನಗೆಯು ಕೀರ್ತಿಯು ತಹೆ
ಖಗರಾಜನಾಣೆಯೆಂದೆನುತ ।
ಮಿಗೆ ಹೊಯಿದಪ್ಪಳಿಸುವೆ ಬಂದ ದಂಡನು
ನಗುತಲೆದ್ದನು ರಾಮನಾಥ ॥೨೭೨॥

ಎದ್ದು ನಿಂದನು ರಾಮನ ನೋಡಿ ಬೈಚಪ್ಪ
ಮುದ್ದು ಮುಖವನು ಮುಂಡಾಡಿ ।
ಕದ್ದೈಸದೆ ಕಳವಳಿಸದೆ ವನವಾಸ
ಇದ್ದೆಯೊ ವೀರಾಧಿವೀರ ॥೨೭೩॥

ದೊರೆಗಳ ದೇವನೆ ಬಿರಿದುಳ್ಳ ಸಿಂಹನೆ
ಗರುವನೆ ಸಕಲ ಸಜ್ಜನನೆ ।
ಹರಸಿದ ಬೈಚಪ್ಪನೊಲಿದು ರಾಮಯ್ಯನ
ಕರವ ಮುಗಿದು ಹೇಳೆಂದ ॥೨೭೪॥

ಎಂದ ಮಾತನು ಕೇಳುತ ರಾಮನಾಥನು
ಅಂದೇಳು ಮಂದಿ ಸಹವಾಗಿ ।
ನಂದಿವಾಹನ ಜಟ್ಟಂಗೀಶ[ನೆ] ಗತಿಯೆಂದು
ಮುಂದಿದ್ದ ಮಂತ್ರಿಗಿಂತೆಂದ ॥೨೭೫॥

ತಂದೆ ತಾಯಳು ನೀನೆ ಬಂಧು ಬಳಗ ನೀಗೆ
ಕೊಂದು ತೋರೆನಲು ಕಂಪಿಲನು ।
ಬಂದ ಕೊಲೆಯ ತಪ್ಪಿಸಿ ಎನ್ನು ರಕ್ಷಿಸಿ
ತಂದೆ ಕಂಪಿಲನ ಉಳುಹಿದೆ ॥೨೭೬॥

ಛಲದಂಕ ಮಲೆವರಾಯರ ಗಂಡ ರಾಮಯ್ಯ
ನೆಲಮಾಳಿಗೆಯಿಂದ ಹೊರಡೊ ।
ಬಲವಾಗಿದೆ ನೇಮಿಯ ದಂಡು ಖುರಪುಟವು
ಬಲೆಯ ಕೊಂಡೊಯ್ಯುವ ಬಿಡಿಸೊ ॥೨೭೭॥

ರಾಮ ನೀ ಸತ್ತ ಸುದ್ದಿಯ ಕೇಳಿ ಸುರಿತಾಳ
ನೇಮಿಯ ದಂಡ ಕಳುಹಿದನು ।
ಭೂಮಿ ಹಿಡಿಯದೆ ಬಂದಿತು ಕುದುರೆ ಮಂದಿ
ಕಾಮಸನ್ನಿಭನೆ ನೀನೇಳೊ ॥೨೭೮॥

ಕರಿಗ[ದ್ದಿಗೆ]ಯಲಿ ಬಿಳಿಯ ಕೂಳನುಂಬುವ
ಕರಿಪತಿಗಳ ಗಂಡನೇಳೊ ।
ತರುಣಿಯ ಮೇಲಿಕ್ಕುವರ ರಾಯರಗಂಡ
ಸುರಿತಾಳನ ಗಂಡನೇಳೊ ॥೨೭೯॥

ಚೊಚ್ಚ[ಲ] ಮಗನಾಸೆ ಮಾಡೊ ರಾಯರ ಗಂಡ
ಇಚ್ಚೇಯ ನುಡಿವರ ಗಂಡ ।
ಮೆಚ್ಚ ನುಂಗುವ ಲೋಭಿಯ ಗಂಡ ನೇಮಿಯ
ಹುಚ್ಚು ಮಾಡುವರೆ ನೀನೇಳೊ ॥೨೮೦॥

ಮೀಸೆ ಬಾಯೊಳು ಬೀಳ್ವನಕ ರಾಯರ ಗಂಡ
ಕೇಶ ಬಿಳುಪಾಗೋರ ಗಂಡ ।
ಹಾಸಿಗೆಯೊಳು ಕೂಸ ಮುದ್ದಾಡುವರ ಗಂಡ
ದೇಶಾಧಿಪತಿಯೆ ನೀನೇಳೊ ॥೨೮೧॥

ಕೊಂಡಾಡುವ ಭಟರಿಗೆ ಮನದಣಿಯಿತ್ತು
ಭಂಡಾರವನು ಸೂರೆಯಿತ್ತ ।
ಗಂಡುಗಲಿಯೆ ರಾಮ ಏಳೆಂದರಾಗಲೆ ಪ್ರ
ಚಂಡನೆದ್ದನು ಕಾಳಗಕೆ ॥೨೮೨॥

ಲಿಂಗಣ್ಣ ಕಾಟಣ್ಣ ಕೊಳ್ಳಿಯ ನಾಗಣ್ಣ
ಸಂಗಯ್ಯ ಮುಮ್ಮಡಿಯೆನುತ ।
ಸಂಗ್ರಾಮದೊಳು ಮಲೆವರ ರಾಯರ ಗಂಡ
ಸಂಗಡದವರು ನೀವೇಳಿ ॥೨೮೩॥

ಏಳಿರಿ ರಾಮನ ಪ್ರಾಣಕೆ ಸಂಗತಿ
ಏಳೆಂದು ಬೈಚಪ್ಪ ನುಡಿದ ।
ಬಾಳ ಸಂತೋಷದಿ ತಾವಾರು ಮಂದಿಯು
ದಾಳಿಯ ಮಾಡಿ ನೀವೆಂದ ॥೨೮೪॥

ಎದ್ದುನಿಂದರು ರಾಮನ ಸನ್ನಿಧಿಯಲ್ಲಿ
ಹೊದ್ದಿ ಬಳಲಿ ಹರುಷದಲಿ ।
ಮುದ್ದುರಾಮುಗ ನೀ[ನಿಲ್ಲವೆ]ನುತ ಡಿಳ್ಳಿ
ಭದ್ರ ಕಳುಹಿದ ನೇಮಿಯನು ॥೨೮೫॥

ಅರಿರಾಯದಲ್ಲಣ ಮರೆಹೊಕ್ಕ ಮಾನ್ಯರ
ಕರೆದು ಮನ್ನಿ[ಪ] ಬಿರಿದಂಕ ।
ಪರದಳ ಪ್ರಚಂಡನೆನುತಲಿ ಬೈಚಪ್ಪ
ಕರವೆರಡೆತ್ತಿ ಕೈಮುಗಿದು ॥೨೮೬॥

ಚಿತ್ತೈಸು ರಾಮಯ್ಯ ಮುತ್ತಿದ ದಳವನು
ಕಿತ್ತಿ ಬೀಸುಟಬೇಕೆನುತ ।
ಮತ್ತೆ ಪ್ರಧಾನಿ ಬಿನ್ನೈಸಿದ ನುಡಿ[ಗಳ]
ಅರ್ತಿಲಿ ಕೇಳಿ ರಾಮಯ್ಯ ॥೨೮೭॥

ಮಾತು ಮುಂಚದ ಮುನ್ನ ಆತ ಗರ್ಜಿಸುತೆದ್ದು
ದಾತನರಿದು ಕಣ್ದೆರೆದು ।
ಭೂತ ವೇತಾಳಿಕೆ ಉಣಬಡಿಸುವೆನಿಂದು
ಭೀತಿಯ ಬಲೆಯ ಬಿಡಿಸುವೆನು ॥೨೮೮॥

ಕಳುಹಿದ ದಂಡ[ದು] ಮರಳಿ ಬರಲಿವುಂಟೆ
ಅಳಿವೆನು ಯಮನ ಪಟ್ಟಣಕೆ ।
ಬಲುಹುಳ್ಳ ಕಂಪಿಲ ಉಳುಹುವೆ ಬೈಚಪ್ಪ
ತಳುಹದೆ ಪೌಜ ಕಳು[ಹೆಂ]ದ ॥೨೮೯॥

ಉಟ್ಟನು ದಟ್ಟಿಯ ಕಟ್ಟಿದ ಸುರಗಿಯ
ನೆಟ್ಟನೆ ಏಕಾಂಗವೀರ ।
ತೊಟ್ಟ ಮುತ್ತಿನ ಸರ ಏಕಾವಳಿಗಳಿಂದ
ಕಟ್ಟಾಳು ರಾಮನೊಪ್ಪಿದನು ॥೨೯೦॥

ಪುಣುಗು ಜವ್ವಾದಿಯು ಕಸ್ತೂರಿ ಗಂಧವ
ಅಗರು ಚಂದನ ಲೇಪನವು ।
ತೆಗೆದು ಚಿನ್ನದ ತೊಡಿಗೆಯನಲಂಕರಿಸಿದ
ನಗುಲತೆದ್ದನು ರಾಮನಾಥ ॥೨೯೧॥

ಆಗ ನೋಡಿದನು ಪ್ರಧಾನಿ ಬೈಚಪ್ಪನು
ಬೇಗ ವಜ್ರಾಂಗಿಯ ತೊಡಿಸಿ ।
ರಾಗವಳಿಯ ತಲೆಟವುಳೆ ಗುಬ್ಬಿಯ ಜೋಡು
ಬೇಗಲೊಪ್ಪಿದ ರಾಮನಾಥ ॥೨೯೨॥

ಕಾಯ ವಂಚಿಸಿದನು ರಾಮನಾಥಗೆ ಮತ್ತೆ
ಮಾಯಕಾರನು ಬೈಚಪ್ಪ ।
ರಾಯರಾಹುತನೆಂಬ ಪೆಸರವನಿಗೆಯಿತ್ತು
ಆಯತನಾಗಿ ನಡೆತಂದ ॥೨೯೩॥

ಶೃಂಗಾರವಾಗಿ ನೆಲಮಾಳೀಗೆ ಹೊರಟು ಜ
ಟಂಗಿರಾಮಗೆ ವಂದಿಸಿದ ।
ಸಂಗಡದಾರಾಳು ಬೈಚಪ್ಪ ಸಹವಾಗಿ
ಲಿಂಗಪ್ರಸಾದವ ಕೊಂಡು ॥೨೯೪॥

ಸೃಷ್ಟಿಗೀಶ್ವರ ಜಟ್ಟಂಗಿಲಿಂಗವೆ ನೀನು
ತೊಡ್ಡು ಕಾ[ಯ]ಲಿಬೇಕು ಎಮ್ಮ ।
ಇಟ್ಟಡೆ ಪುಷ್ಪವನದ ಕಂಡು ರಾಮಯ್ಯ
ಸೃಷ್ಟಿಗೀಶ್ವರ ಕೃಪೆಯಾದ ॥೨೯೫॥

ರಾಮಯ್ಯ ತೇಜಿಯ ಕೊಂಡು ಸಂತೋಷದಿ
ತಾ ಮೈದಡಹಿ ಸಂತೈಸಿ ।
ನಾ ಮುನ್ನ ಮಾಡಿದ ಫಲವೈಸೆ ಶಿವಯೆಂದು
ತಾಮಸವಿಲ್ಲದೆ ನಡೆದ ॥೨೯೬॥

ಒಡೆಯನ ಕಂಡುಲಿಯಿತು ರಾಜತೇಜಿಯು
ಒಡೆಯ ರಾಮುಗನೆಂದರಿತು ।
ಜಡಿದು ಮುಂಗಾಲ ಕೆದರಿ ಹಲ್ಲಣಸಿತು
ತೊಡಕಿ ನಾಸಿಕವ[ರ್ತಿ]ಯಿಂದ ॥೨೯೭॥

ಬಂದು ನಿಂದಂಥ ತೇಜಿಯ ತಬ್ಬಿ ಮುಖ ನೀವಿ
ಗಂಧಾಕ್ಷತೆಯನಿಕ್ಕಿದನು ।
ವಂದಿಸಿ ಬೇಗ ಹರುಷದಿ ರಾಮಯ್ಯನು
ಕಂಧರ ತಟ್ಟಿ ಬೋಳೈಸಿ ॥೨೯೮॥

ಬೋಳೈಸೆ ತೇಜಿ ಪಲ್ಲ[ವಿ]ಸಿತು ಘನವಾಗಿ
ಕಳೆಯೇರಿ ಹೆಚ್ಚಿ ನಲಿನಲಿದು ।
ಬಲ್ಲಿದ ರಾಮಯ್ಯ ಭಾಗೀರಥಿಯನೇರಿ
ಎಲ್ಲರೊಡನೆ ನಡೆತಂದ ॥೨೯೯॥

ನೆಲ ಮೇಲೆ ನಿಲ್ಲದು [ರಾಜ] ವಾಹನ
ನಲಿನಲಿದು ಕುಣಿವುತಲಿ ।
ಬಲಿದು ತೊಡೆಯನೊತ್ತಲು ಕಿತ್ತು ದಾಟಿತು
ಚೆಲುವ ಕಂಧರಕೆ ಕೈಯಿಕ್ಕೆ ॥೩೦೦॥

ಎತ್ತ ನೋಡಿದಡತ್ತ ಚಾಲುವರಿವುದು
ಮತ್ತೆ ರಾಮಯ್ಯನ ತೇಜಿ ।
ಕತ್ತಿಯ ಕಿತ್ತು ಜಡಿದರೆ ಬೋಳೈಸಿತು
ಮೃತ್ಯುಂಜಯನೆ ಜಯಯೇನುತ ॥೩೦೧॥

ನೆನೆದ ವೇಳ್ಯದಿ ಬಂದು ನಿಂದರು ಕುಮ್ಮಟದಿ
ಅನುವಾದ ರಾಜವೀಧಿಯಲಿ ।
ತನತನಗಲ್ಲಲ್ಲಿ ನೆರದು ಗುಜುಗುಟ್ಟುತ
ಜನರೆಲ್ಲ ನೆರದು ಹೇಳಿದರು ॥೩೦೨॥

ಎಲ್ಲಿಂದ ಬಂದನೆನುತ ಪರಿವಾರವು
ಎಲ್ಲರು ನಿಂದು ಕೇಳಿದರು ।
ಕಲ್ಯಾಣದಿಂದ ಬಂದನು ರಾಯರಾಹುತ
ಎಲ್ಲರು ಕೂಡೆ ಹೇಳಿದರು ॥೩೦೩॥

ಹೊಸತಾಗಿ ಬಂ[ದ] ಮನ್ನೆಯ ರಾಯರಾಹುತಗೆ
ವಶಮಾಡಿ ಹಳೆ[ಯ] ಪೈಕವನು ।
ದೆಸೆಯುಳ್ಳ ಕುದುರೆಯ ಕೊಟ್ಟು ಪೌಜುಮಾಡಿ
ಸಸಿನೆ ಮಾವಿನ ಮರದಡಿಯ ॥೩೦೪॥

ಕಾಟಣ್ಣಗೊಂದು ಕೆನ್ನೀಲನೆಂದೆನಿಸುವ
ಮೀಟಾದ ತೇಜಿಯ ತಂದ ।
ನೋಟದ ಸನ್ನಿಲಿ ತಿಳಿಯಿತು ತೇಜಿಯು
ಕೂಟದ ರಾಯರ ಕರೆಸಿ ॥೩೦೫॥

ಇತ್ತನವರ ಕೈಗೆ ತಕ್ಕ ಆಯುಧಗಳ
ಮುತ್ತಿದ ಬಲಕಿದಿರಾಗಿ ।
ಮತ್ತೆ ಪ್ರಧಾನಿ ಬೈಚಪ್ಪ ಮುಖವ ನೋಡಿ
ಇತ್ತ ಬೇಗನೆ ತಿರುಗಿದನು ॥೩೦೬॥

ನೋಡಿದರಿತ್ತರದಲ್ಲಿ ನೋಟಕ ಜನ
ರೂಢಿಯೊಳಗೆ ಪೊಸತೆನಿಸಿ ।
ನೋಡುವ ಮಂದಿ ಕೊಂಡಾಡುತ ಬೈಚಪ್ಪ
ಗಾಢ ಬಂದನು ಅರಮನೆಗೆ ॥೩೦೭॥

ಹರಿದು ಬಂದನು ಪ್ರಧಾನಿ ಬೈಚಪ್ಪನು
ಅರಸು ಕಂಪಿಲನಿದ್ದೆಡೆಗೆ ।
ತರಿಸು ನಿನ್ನಾಳು ಕುದುರೆಯ ಬಲವನು
ಕರಿ ರಥಗಳ ತರಹೇಳು ॥೩೦೮॥

ಕರ ವೇಗದಲ್ಲಿ ಪ್ರಧಾನವ ನುಡಿಗೇಳಿ
ಕರಿತುರಗವ ತರಹೇಳಿ ।
ಅರಸು ಕಂಪಿಲ ಬೆಸಸಲು ಮಾವುತರಾಗ
ತರತರದಲಿ ಶೃಂಗರಿಸಿ ॥೩೦೯॥

ಸೊಕ್ಕಿದ ಆನೆಗೆ ರಂಚಿಕೆ ಜೋಡಿಸಿ
ಇಕ್ಕೆಲದಲ್ಲಿ ಶೃಂಗರಿಸಿ ।
ಹೊಕ್ಕಳಗಂಟೆಯು ಮುಖದ ಕನ್ನಡಿಗಳು
ಇಕ್ಕಿ ಶೃಂಗಾರ ಮಾಡಿದರು ॥೩೧೦॥

ವಾಣೀಧರ ವೀರಭದ್ರನೆನಿಸಿಕೊಂಬ
ಮಾಣಿಕವನು ನೀಲಗಿರಿಯ ।
ಕ್ಷೋಣಿಯ ಬಲಕೆ ಕಂಠೀರವೆಂಬಾನೆಯ
ರಣಧೀರವೆಂಬಾನೆ ಸಹಿತ ॥೩೧೧॥

ಕುಂಕುಮ ಚಾರನು ಬಿಂಕವ ನಡುಗನು
ಪಂಕವರ್ಣ ಪಾಳವನು ।
ಲೆಂಕ ವಿಭಾಡನು ಹನುಮ ನಿಶ್ಯಂಕನು
ಅಂಕಕ್ಕೆ ಶೃಂಗರಿಸಿದರು ॥೩೧೨॥

ಹೊಡೆವವು ರವುಡೆ ತಮ್ಮಟವು ಜಾಗಟೆಗಳು
ನಡೆಯೆ ಗಂಟೆಯ ನಾದದಲ್ಲಿ ।
ಕಡು ಸೊಕ್ಕಿದಾನೆಗಳೆಡೆಯಲ್ಲಿ ನಿಂದಿ[ರೆ]
ನುಡಿಯಲ್ಲಿ ಬೈಸು ಬೈಸೆನುತ ॥೩೧೩॥

ಆನೆಯ ಪೌಜು ತೋರಲು ಬೆರಗಾಗಿಯೆ
ತಾಮಸದಲಿ ಬಿಸುಸುಯಿದು ।
ದಾನವ ಬಲವ ಗೆಲುವರ ಕಾಣೆನೆಂದು
ತಾ ಮನದಲ್ಲಿ ಚಿಂತಿಸಿದ ॥೩೧೪॥

ತುರಗ ತುರಗ ಸಂದಣಿ ಸಾಲು ಕಂಪಿಲ
ಅರಸು ರಾಜೇಂದ್ರನ ಬರಸಿ ।
ಇರದೇರುವ ನಾಲ್ಕು ಸಾವರಿ ಕುದುರೆಯು
ಮೊರೆದೆದ್ದರು ತಮತಮಗೆ ॥೩೧೫॥

ಮೋಹರಿಸುವ ಪೌಜನೊಬ್ಬುಳಿಯೆ ಮಾಡಿ
ದೇಹ ಹೆದರಿ ಕಡು ನೊಂದು ।
ಆಯತವಾದ ಆನೆ ಕುದುರೆ ಸಾಲು
ರಾಯನ ಇಕ್ಕೆಲದಲ್ಲಿ ॥೩೧೬॥

ಬರಹೇಳೊ ನಿನ್ನ ಪವುಜವೆಂದು ಕಂಪಿಲ
ಅರಸು ಮಂತ್ರಿಗೆ ಹೇಳಿದನು ।
ಬೆರೆಸಿ ಲಗ್ಗೆಯ ಮಾಡಿ ಹುಯ್ಯಲು ಇಡುಯೆಂದು
ಅರಿರಾಯ ಅಸುರರ ಮೇಲೆ ॥೩೧೭॥

ನೂಕಿ ಕಡಿಯಿರೊ ನಮ್ಮೊನೆ ಕುದುರೆ ಮಂದಿ
ಜೋಕೆಯೊಳೈದಿವೆವೆನುತ ।
ಈ ಕಡೆಯಲಿ ಬಂದು ರಾಮಗೆ ಹೇಳಿದ
ಹಾಕು ಸನ್ನೆಯಲಿ ಕಡಿವೆನು ॥೩೧೮॥

ಕೊಲುವ ಕಠಾರಿ ಹರಿಗೆ ಬಿಲ್ಲು ಸಬಳವು
ಮೇಲೆ ಸೂಲಂಗಿ ಈಟಿಗಳು ।
ಕಾಲಾಳು ಕವಿದೇರಿತು ರಾಮನ ಮಂದಿ
ಮೇಲೊಂದು ಹುಯ್ಯಲ ತಾಕಿದರು ॥೩೧೯॥

ದೊರೆ ಕಂಪರಾಯ ನೆರೆ ಜಾಣಮಂತ್ರೀಶ
ಧುರದೊಳು ಕಾದುವ ಭಟರ ।
ಪರಿಯ ನೋಡುವೆ [ವೆಂ]ದು ಭರದಿ ಉಪ್ಪರಿಗೆಯ
ಅರಸು ಮಂತ್ರಿಗಳೇರಿದರು ॥೩೨೦॥

ಪರಬಲದೊಳು ಕಾದುವ ಮಂದಿಗಳ ಬೇಗ
ಅರಸು ಕಂಪಿಲಗೆ ತೋರಿಸಿದ ।
ನೆರೆ ಜಾಣ ಕಂಪಿಲರಾಯ[ಗೆ] ಮಂತ್ರೀಶ
ಹರಿದು ಮುತ್ತಿನ ಛತ್ರವೆತ್ತಿ ॥೩೨೧॥

ಬಿರಿದೆತ್ತಿತಾಗ ಕಂಪಿಲರಾಯ ಬಾಳೆಂದು
ಹರಸುತ ಭಟರು ಕೊಂಡಾಡೆ ।
ಧುರದೊಳು ಕಾದಿ ಸೊಕ್ಕಿರಿವರ ನೋಡೆ[ನೆ]
ಪರಿ ಮೆಚ್ಚಿದ ಕಂಪನ್ನಪತಿ ॥೩೨೨॥

ನೋಡು ನೋಡೆಲೆ ಮಂತ್ರಿಶೇಖರ ಚೂಣಿಗೆ
ಕೂಡಿತು ತಮ್ಮ ಮಾರ್ಬಲವು ।
ನೋಡುತಲಹರೆ ನಿನ್ನಯ ಹೊಸರಾವುತರನ
ಪಡೆ ಯಾವುದೊ ಮಂತ್ರೀಶ ॥೩೨೩॥

ಚೆನ್ನಿಗೆ ಚೆಲುವನು ಮನ್ನೆಯ ಹಮ್ಮೀರ
ಎನ್ನ ಕುಮಾರನ ಸಮನು ।
ಮುನ್ನ ಮಾಡಿದ ಫಲ ಇನ್ನು ಇರುವನೆ ರಾಮ
ತನ್ನೊಳು ತಾ ಮರುಗಿದನು ॥೩೨೪॥

ಮುಂಗಡೆಯೊಳಿಹ ಕರಕೆ ಕನ್ನಡಿಯಾಕೆ
ಸಂಗ್ರಾಮದೊಳು ಇಕ್ಕಿರಿದು ।
ಭಂಗ ಬಡಿಸುವನ ನೋಡು ಈಕ್ಷಣವೆಂದು
ಹಿಂಗದೆ ಮಂತ್ರಿಯಾಡಿದನು ॥೩೨೫॥

ಇರಲಿತ್ತ ಸಂಗ್ರಾಮದಲ್ಲಿ ಕಂಪಿಲ [ರಸನ]
ನೆರೆ ಜಾಣನ ಮಂದಿಯೊಲಿದು ।
ತುರಗ ಮಾರ್ಬಲದೊಳು ಹೊಕ್ಕಿರಿವುದ ಕಂಡ
ದೊರೆ ರಾಮನ ಎಕ್ಕಡಿಗರ ॥೩೨೬॥

ಪಡೆ ಹುಸಿ ಹೋಗದಿರೆಂದು ಪ[ಚಾ]ರಿಸಿ
ಕಡುಗಲಿ ರಾಮನ ಮಂದಿ ।
ಜಡೆಯ ಹಿಡಿದು ಹಿಂದಕೆ ಬರಸೆಳೆದರು
ಕೆಡಹಿ ಕೊರಳ ಬಿಡಿಸಿದರು ॥೩೨೭॥

ಗಕ್ಕನೆ ರಾಮ ತೇಜಿಯನೇರಿ ರಣದೊಳು
ಮಿಕ್ಕಿದವರ ಕೊಲ್ಲುತಿರ್ದು ॥೩೨೮॥

ನೋಡು ಕಂಪಿಲರಾಯ ಆಡಿದ ಮಾತನು
ಕಾಡುವ ನೇಮಿಯ ದಂಡ ।
ಕೂಡೆ ರಾಹುತ ಬಾದುರಖಾನ ಸಹವಾಗಿ
ಓಡಿಸುತಹನೆ ನೋಡರಸ ॥೩೨೯॥

ವನ ಬೆಸಲಾದಂತೆ ದಿನಪನುದಯಿಸಿದಂತೆ
ಹೊಣಕೆಯ ಭಟರಿದಿರಾಗಿ ।

ಮೊನೆಮಾಡಿತು ಹತ್ತು ಸಾವಿರ ಕುದುರೆಯು
ಅನುವಾಗಿ ಕೈಗೆ ಸಿಕ್ಕಿದರು ॥೩೩೦॥

ಖಗರಾಜನ ಮೊಗೆದೆರಗುವ ಗಿಡುಗನ
ಮೃಗರಾಜನ ಹೊಸ ದಾಳಿ ।
ಮಿಗೆ ಎರಗಿದುದು ಅಪ್ಪಳಿಸಿ ನುಂಗುವವೊಲು
ಬಗೆ ತೋರುವೆನು ಮಹಾರಾಯ ॥೩೩೧॥

ಮಿಕ್ಕ ಪೌಜವು ಕವಿದೇರಲು ರಾಮನು
ಸಿಕ್ಕದವರೆಲ್ಲ ತಿರಿಗಿ ।
ಇಕ್ಕೆಲದಲ್ಲಿ ಖಂಡೆಯ ತೆಗೆದುಕೊಂಡನು
ಹೊಕ್ಕು ಹೊಯ್ದನು ದಾನವರ ॥೩೩೨॥

ಸಿಡಿಲು ಹೊಡೆದಂತೆ ಸಿಂಗಾಡಿ[ಯು] ಝೇಂಗೈದು
ಕಡುಗಲಿ ಮಳೆಸುರಿದಂತೆ ।
ಹಿಡಿದನು ಕುದುರೆ ಕಾಲಾಳು ಕೈಸೆರೆಯನು
ಒಡನೆ ನೋಡಿದನು ಕಂಪಿಲನು ॥೩೩೩॥

ಇದಿರಾಗಿ ಬಂದು ತಾಕಿದ ರಾಯರಾಹುತ
ಒದಗಿ ಹಿಡಿದ ಮಂದಿಯನು ।
ಕದುಬು[ವ] ತೆಲುಗ ಮನ್ನೆಯರಾಗ ದಂ[ಡಿನ]
ಚೆದುರರು ಹೆರೆ ಸಾರಿದರು ॥೩೩೪॥

ಹೊಕ್ಕನು ರಾಯ ರಾಹುತ ಅತಿಬಲವನು
ಇಕ್ಕೆಲದಲ್ಲಿ ಸಾರಿದನು ।
ಸಿಕ್ಕ ಬಿಡಿಸಿ ರಾಮನ ಮಂದಿ ತುರುಕರ
ಒಕ್ಕಲಿಕ್ಕುತ ಕೊಲ್ಲುತಿರಲು ॥೩೩೫॥

ರಾಮನೊಂದೆಡೆಯಲ್ಲಿ ಕಾದುತಲಿರ್ದ
ನೇಮಿಯ ದಂಡ ಮುತ್ತಿದನು ।

ಸೋಮನ ಮುಸುಕುವ ಮೋಡದ ತೆರೆಯಂತೆ
ಕಾಮಸನ್ನಿಭ ಮುತ್ತಿದನು ॥೩೩೬॥

ಅತಿವೇಗದಿಂದಲಾರ್ಭಟಿಸುತ ರಾಮಯ್ಯ
ಪೃಥುವಿಯೊಳಿದು ಹೊಸತೆನುತ ।
ಕ್ಷಿತಿಯೊಳು ತುರುಕರ ಭಂಗಬಡಿಪೆನೆಂದು
ಅತಿ ವೇಗದಿಂದ ಕೈದುಡುಕೆ ॥೩೩೭॥

ಕತ್ತಿಯ ಗಾಯಕ್ಕೆ ಹೆಚ್ಚುವವರ ನೋಡಿ
ಎತ್ತಿ ಹಾಕುವ ಕುದುರೆಗಳ ।
ಒತ್ತಿ ಕೊಡುವ ಗಾಯಕೆ ನಿಲ್ಲದೋಡುವ
ಮತ್ತೆ ರಾಮನ ಮೊಗ ನೋಡಿ ॥೩೩೮॥

ಹರಿಯು ಗಜದ ಮೇಲೆ ಬರುವಂತೆ ರಾಮನು
ಮೊರೆದೇರುವ ಮಾರ್ಬಲವ ।
ಉರವಣಿಸಿಯೆ ರಾಮನಿರಿದುಪಚರಿಸಿ
ತರುಬೆ ತುರುಕರ ವಾಜಿಗಳ ॥೩೩೯॥

ತುರಗವು ಒಂದು ಕಡೆಯಲಿ ಕಚ್ಚಿ ಕೊಲುವುದು
ಬರಸಿಡಿಲಂದದಿ ಜಗವ ।
ಸರಸದಿ ಕವಿದೇರುವ ಖಾನ ಮಲ್ಲುಕರ
ತರಿದನು ರಾಮ ಭಲ್ಲೆಯದಿ ॥೩೪೦॥

ಬೊಲ್ಲನು ರಣದಲ್ಲಲಿ ಕೊಂದುದು ಕಡೆಯಿಲ್ಲ
ನಿಲ್ಲದೆ ತುರುಕರ ಬಲವು ।
ತಲ್ಲಣಿಸುತ ಖಾನಖಾನರೆಲ್ಲರು ಓಡೆ
ನಿಲ್ಲದೆ ಕೆಲಬಲ ಸಾರಿ ॥೩೪೧॥

ಎತ್ತ ನೋಡಿದರೆ ಭೋಯೆಂದು ಬೊಬ್ಬಿರಿವುತ
ಇತ್ತರದಲ್ಲಿ ಕೈಸೆರೆಯು ।

ಮತ್ತೆ ಬೊಲ್ಲನು ಕುಪ್ಪಳಿಸುವ ಹೊಯ್ಲಿಗೆ
ಸುತ್ತ ಬಿದ್ದವು ವಾಜಿಗಳು ॥೩೪೨॥

ಮೇಘವಾಹನ ಬಾಯಿರಿಯಲು ವಾಜಿಗಳು
ಆಗ ಸಾವಿರ ಉರುಳಿದವು ।
ನಾಗಲೋಕವ ಹೋಗುವಂತೆ ಖಾನರು ಆಗ
ಹೋಗಿಬಿದ್ದರು ರಣದೊಳಗೆ ॥೩೪೩॥

ಚಾಟಿಗೆ [ಹಾ]ಯ್ದ ಬೊಲ್ಲನೆ ಬರವಿಗೆ ಒಂದು
ಸಾವಿರ ವಾಜಿಗಳುದುರೆ ।
ರಾಟಿಯ ತಿರುಗುವ ಬರವಿದೆ ಉದುರಲು
ದಾಟಿತು ಹತ್ತೆಂಟು ಮಾರ ॥೩೪೪॥

ಕಾಲ ಕೆದರೆ ಕರಿತುರಗ ಒಂಟೆಗಳವು
ಬಾಲವ ಬೀಸಲಂಜುವವು ।
ಮೇಲಾದ ಮಂದಿ ಸಂಕಟಗೊಂಡು ರಣದೊಳು
ಕೋಳು ಹೋದುದ [ಎಣಿಪರಿಲ್ಲ] ॥೩೪೫॥

ನಾಟಕವಲ್ಲ ಬೊಲ್ಲನು ಕೊಂದು ಕೆಡಹಿದ
ಲೂಟಿಯನೇನ ಬಣ್ಣಿಸುವೆ ।
ಕೋಟಾನು ಕೋಟಿ ಖಾನರು ಬಂದು ಮುತ್ತಿತು
ಕಾಟಕ ಮಂದಿಯ ಮೇಲೆ ॥೩೪೬॥

ನಿಂದರು ಇದಿರಾಗಿ ರಣಕೆ ಹಿಂತೊಲಗದೆ
ಒಂದಕ್ಕರಿಕೆ ಜೋಡುಗಳು ।
ಒಂದೊಂದು ಉರುಳುವಂದದಿ ಹೊಯ್ದಾ[ಡಿತು]
ಕಂದರ್ಪ ರಾಮನ ಮಂದಿ ॥೩೪೭॥

ಕದಬಿದಸುರ ತುಂಬರಖಾನ ತುಡುಕಲು
ಉದುರಿ ಹೋದುದು ಕಡೆಯಿಲ್ಲ ।

ಕದನಗಲಿಗಳು ಹಾಕಿದರು ಬಂದೂಕುಗಳ
ಎದೆವಡೆದರು ತುರುಕರು ॥೩೪೮॥

ಇಬ್ಬರೊಂದಾಗಿ ಸಂಹರಿಸಲಕ್ಷಣದೊಳು
ನಿಬ್ಬೆರಗಾಗಿ ನೋಡಿದರು ।
ಗಬ್ಬಿ ಕುಮಾರರಾಮನು ಖಾನ ತುರುಕರ
ಕಿಬ್ಬದಿಗಳ ಮುರಿದೊಟ್ಟಿ ॥೩೪೯॥

ಕಿಬ್ಬದಿ ಹರಿದು ನಿಟ್ಟೆಲುಗಳ ತುಂಡ್ರಿಸಿ
ಅಬ್ಬರದಲ್ಲಿ ಹೊಯಿದಾಡಿ ।
ಉಬ್ಬೇಳುವ ಮುಂಡ ತುಂಡುಗಳೆಲ್ಲವು
ಬೊಬ್ಬೆಯಾರ್ಭಟದಿಂದ ಕೂಗೆ ॥೩೫೦॥

ಕಡಿದಾಡೆ ನಳಿತೋಳು ತೊಡೆಗಳು ತುಂಡಿಸಿ
ನಡುಗುರುಳಿನ ಶಿರಮಾಲೆ ।
ಪೊಡವಿಯ ಮೇಲೆ ಬಿದ್ದುರುಳ್ವ ತುರುಕರ ಕಂಡು
ಒಡನೆ ರಾಮಯ್ಯ ನೋಡಿದನು ॥೩೫೧॥

ಕಾಳಜ ಹರಿದು ಗುಂಡಿಗೆ ಹತಹತಿಯಾಗಿ
ಹೋಳು ಹೋಳಾಗಿ ಹೊಯಿದಾಡಿ ।
ಬೀಳುತೇಳುತ ಮುಂದಲೆಗಳ ಪಿಡಿದಾಡಿ
ಆಳು ಬಿದ್ದುದು ಕ್ಷೋಣಿ ಬಲವು ॥೩೫೨॥

ತಮತಮಗೇರಿತು ವಾಸೆಪಂಥಗಳಿಂದ
ಕ್ರಮಗೆಡಿಸಿದರು ತುರುಕರನು ।
ನಿಮಿಷ ಮಾತ್ರದಿ ಕೊಂದನು ರಾಯರಾಹುತ
ಸಮರಂಗದೊಳು ರಣಮಯವು ॥೩೫೩॥

ಬರಹೇಳೊ ನೇಮಿಯ ಕದನಕ್ಕೆ ಇದಿರಾಗಿ
ಬರಿದೆ ಮರೆಯೆ ಪಂಥದಲ್ಲಿ ।

ನೆರೆಗಲಿ ರಾಮ ಮೂದಲಿಸಿದ ದಂಡನು
ಧುರಗಲಿ ನಿಂದು ಸಮರದಲಿ ॥೩೫೪॥

ಮೂದಿಸಿದ ಮಾತ ಕೇಳಿ ತುಂಬರಖಾನ
ಆಯುಧವನು ಜಡಿಜಡಿದು ।
ಕ್ರೋಧವ ಮಾಡಿ ರಾಮನ ಮೇಲೆ ಹೊಯ್ಯಲು
ಹೋದುದು ಜೋಡು ಗಗನಕೆ ॥೩೫೫॥

ಭಲರೆ ತುಂಬರಖಾನ ಬಂಟನಹುದು ನೀನು
ತೊಲಗದೆ ನಿಲ್ಲು ರಣದೊಳಗೆ ।
ಮರೆಹೊಕ್ಕು ತಾಯ ಬಸುರೊಳು ಪೊಕ್ಕ[ರು ಬಿಡೆ]
ಅರರೆ ನೋಡೆನುತ ಹೊಯಿದನು ॥೩೫೬॥

ಹಲ್ಲೆ ಮುರಿದೆನು ಸರಸದಿ ತುಡುಕಲು ಬಲು
ಪುಲ್ಲೆ ಹೆಬ್ಬುಲಿಯ ಸೆಣಸಲು ।
ಕೊಲ್ಲದೆ ಅದು ಬಿಡುವುದೆ ರಾಮ ನಿನಗೀಗ
ಸಲ್ಲದ ಬಿರುದ್ಯಾತಕೆಂದ ॥೩೫೭॥

ಬೀಳುವ ಮರನ ಕಡಿಯಲೇಕೆ [ಜವನ]
ಜಾಳಿಸಿದವರು ನುಡಿವರೆ ।
[ಹೋ]ಳಾಗ ಬೇಡ ತುಂಬರಖಾನ ನಡೆಯೆಂದು
ಹೇಳಿದ ರಾಯರಾಹುತನು ॥೩೫೮॥

ಸಾಕೆಲೊ ರಾಮ ಸಂಗ್ರಾಮ ಶೂರನು ನೀನು
ಜೋಕೆ ರತ್ನಿಗೆ ಸಿಲ್ಕುವರೆ ।
ಲೋಕಾಧಿಪತಿ ಕಂಪಿಲ ಕೊಂದು ತಾರೆನಲು
ಸಾಕಿಕೊಂಡನು ಮಂತ್ರೀಶ ॥೩೫೯॥

ಮತ್ಸವರಿಸುವರ ಮಸ್ತಕಶೂಲ ಸತ್ಯಕ್ಕೆ
ತಪ್ಪದೆ ನೆಲಮಾಳಿಗೆಯೊಳು ।

ಅಪ್ಪನ ಭಾಷೆಗೆ ತಪ್ಪ[ದಿದ್ದೆನು ಎಂದು]
ಅಪ್ಪಳಿಸಿದನು ತುಂಬರನ ॥೩೬೦॥

ಧುರದೊಳು ರಾಮ ಹೊಯ್ಯಲು ತೋಳು ತೊಡೆಗಳು
ಕೊರಳು ಖಂಡಿಸಿ ಕಂಡ ಚೆಲ್ಲಿ ।
ಕರುಳು ಹರಿದು ರಾಮನ ಮುಂದೆ ಬೀಳಲು
ಉರುಳಿತು ತನು ಬಯಲಾಗ ॥೩೬೧॥

ಅರರೆ ತುಂಬರ ಖಾನ ನುಡಿದೆ ನೀನೀಗಲಿ
ಗರುವ ಮುರಿದೆನು ಕೇಳೆನುತ ।
ಸಾರಿ ಹೇಳುವೆ ಕೇಳು ಜಾರಿ ಇರಬೇಡೆಂದು
ಉರವಣಿಸುತ ರಾಮ ನುಡಿದ ॥೩೬೨॥

ಇತ್ತಲಿ ರಣದೊಳು ಸಂಗ್ರಾಮಶೂರನು
ಮುತ್ತಿದ ದಳವ ಸಂಹರಿಸಿ ।
ಚಿತ್ತಜಹರನ ಪಾದವ ನೆನವುತ ರಾಮ
ಮತ್ತೆ ರಣದೊಳು ರಂಜಿಸಿದ ॥೩೬೩॥

ಅತ್ತ ಕಂಪಿಲರಾಯ ಮಂತ್ರಿಗೆ ನುಡಿದನು
ಮತ್ತೆ ಉಪ್ಪರಿಗೆಯ ಮೇಲೆ ।
ಇತ್ತಣ ರಾಜಕಾರಿಯ ಹದನವನು
ವಿಸ್ತರಿಸುವುದು ನೀನೆನಗೆ ॥೩೬೪॥

ಬೊಲ್ಲನಬ್ಬರ ಮೇಲೆ ಝಲ್ಲಿಯ ಲಲಾಟ
ನಿಲ್ಲದೆ ರಣದೊಳಗರಿದು ।
ಬಲ್ಲಿದ ರಾಮನಲ್ಲದೆ ರಾಜ ಬೊಲ್ಲನ
ಖುಲ್ಲ ರಾಯರು ಏರಲರಿದು ॥೩೬೫॥

ಹಿಂಡು ತುರುಕರ ತಲೆ ಚೆಂಡನು ಆಡುತ
ತಂಡತಂಡದ ಭೂತಗಳಿಗೆ ।

ಖಂಡೆಯ ಮೊನೆಯಿಂದ ಉಣಲಿಕ್ಕುವನೀಗ
ಲೆಂಡ ರಾಹುತನಾರೊ ಮಂತ್ರಿ ॥೩೬೬॥

ಎನ್ನಾಣೆ ಎನ್ನೊಳು ಮಾಜಬೇಡೆಲೊ ಮಂತ್ರಿ
ಚೆನ್ನಿಗನಿವರಾರು ಹೇಳೊ ।
ಮನ್ನೆಯ ಕಂಪಿಲ ಕೇಳು ಪರರ ಮಗ
ನಿನ್ನ ಮಗನ ಮಾಡುವರೆ ॥೩೬೭॥

ಅಂದೆ ರತ್ನಿಯ ನುಡಿಗೇಳಿಯೆ ರಾಮನ
ಕೊಂದುದಿಲ್ಲವೆ ನಿನ್ನ ಮಗನ ।
ಇಂದೇಕೆ ಹುಟ್ಟಿ ಬಂದನೆ ನಿನ್ನ ಮಗನೀಗ
ಅಂದವಲ್ಲವೊ ಬೈಚಪ್ಪ ॥೩೬೮॥

ಅರಸು ಮಂತ್ರಿಗಳು ತಮ್ಮೊಳು ತಾವೆ ನುಡಿವುತ
ಪರಿಪರಿ ವಿಭವದೊಳಿರಲು ।
ದೊರೆಶಿರೋಮಣಿ ರಾಮ ಪರಬಲದೊಳು ಬಂದು
ತರಿದನು ತುರುಕರ ದಂಡ ॥೩೬೯॥

ಕತ್ತರಿಸಿದ ತಲೆ ನೆತ್ತರೊಳಗೆ ಬಿದ್ದು
ಸುತ್ತಿಕೊಂಡವು ಕರುಳುಗಳು ।
ಮತ್ತುಂಟೆ ರಾಮಗೆ ಇದಿರೆಂದು ಬೈಚಪ್ಪ
ಮಸ್ತಕ ಒಲಿದು ತೂಗಿದನು ॥೩೭೦॥

ಮುಂಡಗಳೆದ್ದು ಕುಣಿದಾಡಲು ರಣದೊಳು
ಹಿಂಡು ದೈವದ ಬೊಬ್ಬೆಗಳು ।
ತಂಡದ ಭೂತಗಳುಂಟು ಹರಸಿದವು
ಕೊಂಡಾಡಿದವು ರಾಮಯ್ಯನ ॥೩೭೧॥

ಎಳೆದಾ[ಡಲು] ತುರಗ ಮಂದಿ ಮಕ್ಕಳು
ಇರುಳಿನ ಜೀವಗಳ್ಳರನು ।

ಸೆಳೆದಾ[ಡಲು] ಭೂತಂಗಳ ತಂಡವು
ಕಳವಳಿಸಿದರು ಗಾಯದಲಿ ॥೩೭೨॥

[ಅದರಿ] ಸುವರು ರಾಮಯ್ಯನ ಪರಿಯನು
ವಾದಿಸುವರು ಜೂಜನಾಡಿ ।
ಕಾದಿಸಿ ತಂದು ರಾಮಯ್ಯನ ಬೈಚಪ್ಪ
ಮೇದಿನಿಗೆ ಪೊಸಕರು ಮಾಡಿದನು ॥೩೭೩॥

ರಾಮ ಸತ್ತ ಸುದ್ದಿ ಕೇಳಿ ಸುರಿತಾಳನು
ನೇಮಿಯ ಕಳಹಿದನ್ನೈಸೆ ।
ಸೀಮೆಯ ಹೊಕ್ಕರೆ ಮುರಿಯಲಿ ಇರಿದನು
ನೇಮಿ ಚಿಂತಿಸಿ ತಿರುಗಿದನು ॥೩೭೪॥

ಠಮ್ಮೆಂದು ಠಮುಕು ಮಾಡಿಸಿ ರಾಮನಾಥನು
ಧರ್ಮಗಾಳೆಯ ಹಿಡಿಸಿದನು ।
ತಮ್ಮ ಮಂದಿಯ ಕರೆಕರೆಯ ಹೆಗ್ಗಾಳೆಗಳು
ಗಮ್ಮನೆ ಭೇರಿ ಸಾರಿದವು ॥೩೭೫॥

ರಣದೊಳಗೆಲ್ಲವು ಹೆಣಮಯವಾಗಲು
ರಣನೆತ್ತರು ಕೆಸರೇಳೆ ।
ಸೆಣಸುವರಿಲ್ಲದೆ ತಿರುಗಿದ ರಾಮಯ್ಯ
ಹೊಣಕೆಯ ಬಂಟರು ಸಹಿತ ॥೩೭೬॥

ರಾಮ ಕಾಟಣ್ಣನೈವರು ಮಂದಿ ಸಹವಾಗಿ
ನೇಮಿಯ ದಂಡನೆ ಕಡಿದು ।
ಪ್ರೇಮದಿ ತನ್ನಯ ಪವುಜನೊಬ್ಬುಳಿ ಮಾಡಿ
ರಾಮಸನ್ನಿಭ ನಡೆತಂದ ॥೩೭೭॥

ತುಗರವನೇರಲು ಪರಿವಾರ ಮುಸುಕಲು
ಅರರೆ ಭಟರು ಕೊಂಡಾಡೆ ।

ಭರದಿಂದ ಬಂದು ಕಂಪಿಲನ ಚಾವಡಿ ಮುಂದೆ
ಹಿರಿದು ಪವುಜ ಮಾಡಿದರು ॥೩೭೮॥

ಚಿನ್ನದುಪ್ಪರಿಗೆಯೊಳ್ಕುಳಿತಿರ್ದ ಕಂಪಿಲ
ಮನ್ನೆಯರನು ಒಡಗೊಂಡು ।
ತನ್ನ ಮಂತ್ರಿಯ ಬಲಗೈಯ್ಯ ಪಿಡಿದುಕೊಂಡು
ಮಾನ್ಯ ಚಾವಡಿಗಾಗಿ ಬಂದ ॥೩೭೯॥

ಬಂದು ಹಜಾರದ ಚಾವಡಿಯೊಳಗಾಗ
ನಿಂದು ಮನ್ನೆಯ ಸಹವಾಗಿ ।
ತಂದು ಗದ್ದುಗೆಯನಿಡಲು ಮಂತ್ರಿಶೇಖರ
ಅಂದು ಕುಳಿತ ಚಾವಡಿಯೊಳು ॥೩೮೦॥

[ತರುಗಿ]ದಂಬುಗಳು ಹಕ್ಕರಿಯೆ ಮೇಲೆಲ್ಲ
ತೆರಹಿಲ್ಲ ಮೈಜೋಡಿನೊಳಗೆ ।
ಹರಕೆಯ ಪೂಜೆ [ತೀ]ರಿಸುವಂದದಿ
ಗರಿಮೆರೆದವು ತುರಗದಲಿ ॥೩೮೧॥

ತೇಜಿಯ ಬೀದಿಯೊಳ್ತಿರಿವ್ಯಾಡುತಿರ್ದನು
ರಾಜಾಧಿರಾಯರಾವುತನು ।
ಭೋಜ ಕಂಪಿಲರಾಯ ಚಾವಡಿಯೊಳು ನಿಂದು
ತೇಜಿಯ [ನೋಡುತಲಿ]ರ್ದ ॥೩೮೨॥

ಕತ್ತಿಗಳೆರಡು ಕೈಯ್ಯಲಿ ರಕ್ತ ಸೋರುತ
ಮತ್ತೆ ವಜ್ರಾಂಗಿಯ ಜೋಡು ।
ಮುತ್ತಿ ನೋಡಲು ರಾಹುತನಲ್ಲನಿವನೀಗ
ಹತ್ತು ಇಮ್ಮಡಿ ರಾಮನಹುದು ॥೩೮೩॥

ಝುಲ್ಲಿ ಲಲಾಟ[ದ] ಕುದುರೆಯ ನೇರಲು
ನಿಲ್ಲದೆ ಎರಡು ಬೀದಿಯಲಿ ।

ಬಲ್ಲಂತ ಪರಿಪರಿ ಏರಾಟವು ಅಲ್ಲಿ
ಇಲ್ಲಿ ಕಂಪಿಲಗೆ ಸಂಶಯವು । ॥೩೮೪॥

ಅವನನು ಕರೆಯರೆ ದಳದುಳಿಕಾರನ
ಅವನ ಕರೆಯಿರಿ ನೀವೆನುತ ।
ಅನನನು ಕರೆಯೊ ಮಂತ್ರಿಗಳ ಶಿರೋಮಣಿ
ಅವನ ಕರೆಸು ಕರೆಸೆಂದ ॥೩೮೫॥

ವರ ಮಂತ್ರಿಶೇಖರ ವರವಿತ್ತು ರಣವೆತ್ತ
ನೆರೆ ಜಾಣ ಕರೆಸುಯೆಂದೆನುತ ।
ಹರಿಯಬಿಟ್ಟನು ಹೆಗ್ಗಡೆಯರ ಕರೆಯೆಂದು
ಅರಿರಾಜ ರಾಯರಾಹುತನ ॥೩೮೬॥

ಹರಿದರು ರಾಯಭಾರಿಗಳತಿ ಹರುಷದಿ
ಧುರಧೀರ ರಾಯನ ಬಳಿಗೆ ।
ಬರಹೇಳಿದನು ಕಂಪಿಲರಾಯನೆನೆ ಕೇಳಿ
ತರಹರಿಸದೆ ಕುದುರೆ ಇಳಿದು ॥೩೮೭॥

ಸಂಗ್ರಾಮಧೀರ ಕುಮಾರ ರಾಮಯ್ಯನು
ಬಂದನು ತುರುಗದಿಂದಿಳಿದು ।
ಅಂಗವ ಕಾಣಬಾರದು ರಾಮನಾಥನ
[ಹೊಂ]ಗೆಲಸದ ಮೈಜೋಡು ॥೩೮೮॥

ತಲೆಯ ಟಿವುಳಿಯ ವಜ್ರಾಂಗಿಯ ತೆಗೆತೆಗೆ
ಕಲಿಗಳರಸ ಮುಖದೋರೊ ।
ಒಲಿದು ಕಂಪಿಲರಾಯನು ಮಿಗೆ ಮೆಚ್ಚಿದ
ಇಳಿಯೊಳಗಿವನಾರೆನುತ ॥೩೮೯॥

ಎನಲಾಗ ತೆಗೆದನು ತಲೆಯ ಟಿವುಳಿಯ ರಾಮ
ತನುಜನ ಕಂಡು ಹಮ್ಮೈಸಿ ।

ತನತನಗಲ್ಲಲ್ಲಿ ಹಬ್ಬಿತು ರಾಮನು
ಮನೆಗೈದುದು ಹೊಸ ಸುದ್ದಿ ॥೩೯೦॥

ಹಮ್ಮೈಸಿದನು ಕಂಪಿಲರಾಯ ಹರುಷದಿ
ಗಮ್ಮನೆ ಮೈಮರೆದೊರಗಿ ।
ತಮ್ಮತಂದೆಯ ಕಾಣುತ ಎರಗಿದನಾಗ
ಉಮ್ಮಳಿಸುತ ರಾಮನಾಥ ॥೩೯೧॥

ಕಾಟಣ್ಣನ್ನೆವರು ಸಹವಾಗಿ ಕಂಪಿಲ[ಗೆ]
ನೀಟಿಲಿ ನಿಂದು ಶರಣೆಂದು ।
ನಾಟಕವಲ್ಲ ಬೈಚಪ್ಪನಾಟವುಯೆಂದು
ಕೋಟಲೆಯನು ಬಿಡಿಸಿದನು ॥೩೯೨॥

ಕಾಟಣ್ಣನೈವರೆಕ್ಕಟಿಗರು ಸಹವಾಗಿ
ನೋಟದಿ ನೋಡಿ ಸಂತೈಸೆ ।
ಪಾತಕಜನರು ಸಂತೈ(ಸಲು) ರಾಯನು
ಕೋಟಲೆಯ[ಲಿ] ಮನದೊಳಗೆ ॥೩೯೩॥

ನೆಲೆಗಾಣದೆ ಮರುಗಿದೆನೇಳು ತಿಂಗಳು
ದಳಪತಿ ರಾಮ ನಿನ್ನಿರವ ।
ಉಳುಹಿದ ಪ್ರಧಾನದೇವ ಮಂತ್ರೀಶನು
ತಿಳುಹಿದ ನಮ್ಮ ನೋವುಗಳ ॥೩೯೪॥

ಆವಲ್ಲಿ ವನವಾಸ ಇದ್ದಿಯೊ ನೀಯೆನ್ನ
ಭಾವಜರೂಪ ರಾಮಯ್ಯ ।
ನೋವು ತೋರಿಸದೆ ನಿನ್ನ ಮನಕೆ ನಿನ್ನಂಥ
ಜೀವಗಂಟಕರಿಲ್ಲವೆಂದ । ।೩೯೫॥

ಹುಟ್ಟಿದ ಮಗ[ನ] ಕೊಲ್ಲಿಸಿದ ಪಾತಕನೆಂದು
ಬಿಟ್ಟಿಯೊ ಎನ್ನ ಹಂಬಲವ ।

[ಕುಟ್ಟಯ್ಯಾ] ಎನ್ನ ತಲೆಯನೆಂದು ಕಂಪಿಲ
ಕೊಟ್ಟನು ತನ್ನ ಆಯುಧವ ॥೩೯೬॥

ಚೆಂದ [ದ] ಮಗನ ಕೊಲ್ಲಿಸಿದ ಪಾತಕನೆಂದು
ನೊಂದೆಯೊ ಎನ್ನ ಹಂಬಲದಿ ।
ಕುಂದದೆ ಧರೆಯೊಳು ಎನ್ನಂಥ ಪಾಪಿಯು
ಎಂದೆಂದು ಹುಟ್ಟಬೇಡೆಂದ ॥೩೯೭॥

ವಿಷವೇಳೆಗಳುವುಂಟು ಕೇಳೆನ್ನ ತಂದೆಯೆ
ವಶವೆ ವಿಧಿಯ ಮೀರಲಳವೆ ।
ವಸುಧೆಯೊಳೆನಗಿಂತು ಕೀರ್ತಿಯಾಯಿತುಯೆಂದು
ಶಶಿಧರನಿನ್ನುಳುಹಿದನು ॥೩೯೮॥

ಅಕ್ಕರ ಮಿಗೆ ಮೆಚ್ಚಿದನು ಕಂಪಿಲರಾಯ
ಗಕ್ಕನೆ ಕಂಬನಿ ತುಂಬಿ ।
ಚಕ್ರಧರನ ಕೃಪೆ ರಾಮಗೆ ಉಂಟೆಂದು
ಸತ್ಕರಿಸಿದನು ಮಂತ್ರಿಯನು ॥೩೯೯॥

ನೆತ್ತರ ಕೈಯನ್ನು ತೊಳೆದು ಜೋಡಂಗಿಯ
ಉತ್ತಮ ಜವಳಿಯ ಹೊದಿಸಿ ।
ಹತ್ತು ಸಾವಿರ ಹೊನ್ನ ಧರ್ಮವ ಮಾಡಿದ
ಮುತ್ತ ನಿವಾಳಿಸಿ ಚೆಲ್ಲಿ ॥೪೦೦॥

ಕೊಂದನು ಬೈಚಪ್ಪನೆಂದೆನುತಿದ್ದೆನು
ಮುಂದಕ್ಕೆ ಬಂದೀಗ ನಿಂತೆ ।
ತಂದೆ ಕಂಪಿಲರಾಯನು ಮಿಗೆ [ಮೆ]ಚ್ಚಿದ
ಚಂದಚಂದದಿ ಮನದಣೀದು ॥೪೦೧॥

ಗೋದಾನ ಭೂದಾನ ವಸ್ತ್ರದಾನಗಳನ್ನು
ಮೇದಿನಿಯೊಳು ದಾನವಿತ್ತು ।

ಮೋದದಿ ಅಶ್ವದಾನಗಳನು ಇತ್ತನು
ವೇದದ ಬುಧಜನರುಸುರೆ ॥೪೦೨॥

ಮುತ್ತಿನ ದಂಡಿಗೆ ಕಂತುಸನ್ನಿಭಗಿತ್ತು
ಮತ್ತೆ ಇಬ್ಬರು ಬೇಗ ಒಲಿದು ।
ಒತ್ತಿ ಬರಲು ಹಳೆಯ ಎಕ್ಕಟಿಗರು
ಇತ್ತರದಲಿ ಪರಿವಾರ ॥೪೦೩॥

ಬಂದನು ಮೂರುಜಲ್ಮದಲಿ ಬಾಳ್ವರ ಗಂಡ
ಬಂದನು ಕಾಲನೆಡೆಯಲಿ ।
ಬಂದನು ಮೂರುರಾಯರ ಗಂಡ ರಾಮಯ್ಯ
ಬಂದನು ರಣರಂಗಧೀರ ॥೪೦೪॥

ಬಂದನು ಆರು ಜಲ್ಮದಲಿ ಬಾಳ್ವರ ಗಂಡ
ಬಂದನು ಸಿಂಧು ಗಾಂಭೀರ್ಯ ।
ಚಂದ ಚಂದದ ವಾದ್ಯ ಭೋರೆಂದು ರಾಮಯ್ಯ
ತಂದೆ ಕಂಪಿಲ ಸಹವಾಗಿ ॥೪೦೫॥

ಇತ್ತ ತೆರಳೆ ಕಂಪಿಲ ರಾಮನಾಥರು
ಅರ್ತಿಯಿಂದಲಿ ಅರಮನೆಗೆ ।
ಹೆತ್ತತಾಯಿ ಹರಿಯಮ್ಮದೇವಿಯು ತಾನು
ಪುತ್ರನ ನೆನೆದು ಶೋಕದಲಿ ॥೪೦೬॥

ಅಂದಿನ ಕಾಳಗದಲ್ಲಿ ರಾಮನ ಸುದ್ದಿ
ಬಂದು ಹೇಳಿದರಡಿಗಡಿಗೆ ।
ಇಂದು ಬಂದು ಹೇಳುವರ ಕಾಣೆಯನುಯೆಂದು
ನೊಂದುಕೊಂಡಳು ಹರಿಯಮ್ಮ ॥೪೦೭॥

ಹಾಳಾಯಿತೇ ನಮ್ಮ ರಾಮನ ಸುದ್ದಿಯು
ಕೋಳು ಹೋಯಿತೆ ಕುಮ್ಮಟವು ।

ಬಾಳಲಿ ಸಂತೋಷದಲಿ ಕಂಪಿಲನೆಂದು
ಗೋಳಿಟ್ಟು ಹರಿಯಮ್ಮನೊರಲೆ ॥೪೦೮॥

ಹರಿದು ಬಂದು ಹೇಳಿದನೊಬ್ಬನೊಸಗೆಯ
ಕರ ಪರಿಣಾಮದ ಲೇಸ ।
ಧುರಧೀರ ರಾಮನಾಥನು ಬಂದು ಕಾದಿದ
ಧುರದೊಳು ಗೆಲಿದ ಸುದ್ದಿಯನು ॥೪೦೯॥

ಏನಪ್ಪಯೆಂದು ಕೇಳುತ ಬೀಳುತಲಾಗ
ಆನಂದ ಸುದ್ದಿಯ ಕೇಳಿ ।
ಮಾನಿನಿ ಮರಗುತ ಮನಸು ನಿರ್ಮಳವಾಗಿ
ತಾನು ಕೊಟ್ಟಳು ದಾನವನು ॥೪೧೦॥

ಬಿಟ್ಟ ಮಂಡೆಯ ಕಟ್ಟದ ಹೆಣ್ಣ ಸೋದರರು
ಕಟ್ಟಣಿಲ್ಲದೆ ನಡೆತಂದು ।
ಪಟ್ಟದರಸನ ಕೇಳುವೆನೆಂದು ಬಂದರು
ಕಟ್ಟಿ ಕಡೆಯ ಚಾವಡಿಗೆ ॥೪೧೧॥

ಅಕ್ಕ ಮಾರಮ್ಮ ಕಂಡಳು ರಾಮನಾಥನ
ಚಿಕ್ಕಸೋದರಳು ಸಿಂಗಮ್ಮ ।
ದೊಕ್ಕನೆ ಪಾದದ ಮೇಲೆ ಬಿದ್ದಳು ಬೇಗ
ಒಕ್ಕಳು ಕಂಬನಿಗಳನು ॥೪೧೨॥

ನಿನ್ನ ಕಾಣದೆ ಆರು ತಿಂಗಳು ರಾಮಯ್ಯ
ಅನ್ನ ವೀಳ್ಯಯವು ಹಗೆಯಾಗಿ ।
ಮುನ್ನ ಮಾಡಿದ ಪಾಪಗಳಿಂದಲಿ ನಾವು
ಖಿನ್ನರಾಗಿದ್ದೆವೆಂದೆನುತ ॥೪೧೩॥

ಕಂಡೆವು ಖಾನ ವಜೀರರ ಗಂಡನ
ಮಂಡಲೇಶ್ವರ ಮನ್ಮಥನ ।

ಹಿಂದು ತುರುಕರ ಮಸ್ತಕಶೂಲ ರಾಮನ ಪ್ರ
ಚಂಡನೆನುತ ಮರುಗಿದರು ॥೪೧೪॥

ಕಂಡಳು ಹಿರಿಯ ರಾಣಿಯ ರಾಣಿವಾಸ
ದಂಡಪ್ರಣಾಮ ಮಾಡಿದಳು ।
ದಿಂಡುರುಳಿಯೆ [ತಾವು] ಪಾದವ ಹಣೆಗೊತ್ತಿ
ಕೊಂಡಾಡಿ ತವಕದಿ ಮರುಗಿ ॥೪೧೫॥

ಕಂದನ ನೋಡಬೇಕೆಂದು [ತಾ] ತವಕದಿ
ಬಂದಳು ಹರಿಯಲದೇವಿ ।
ಅಂದಳಗಳ ಸಿಂಗರಿಸಲು ಸ್ತ್ರೀಯರು
ಹಿಂದೆ ಮುಂದೆಡದೆರವಿಲ್ಲ ॥೪೧೬॥

ಎಡದ ಕಡೆಯಲಿ ಪ್ರಧಾನ ಬೈಚಪ್ಪನು
ಬಲದ ಕಡೆಯಲಿ ಕಂಪಿಲನು ।
ಕಡೆ ಕಡೆಯಲಿ ಬಲು ಹಳೆಯ ಎಕ್ಕಟಿಗರು
ನಡುವೆ ಕುಮಾರರಾಮಯ್ಯ ॥೪೧೭॥

ಜನನಿ ಮೊಗವ ಕಾಣುತ ರಾಮನಾಥನು
ಘನದುಃಖವು ನೆಲೆಗೊಂಡು ।
ಮನದಲ್ಲಿ ಮರುಗಿ ತಾನಿಳಿದನು ತುರಗವ
ಜನನಿಯ ಪಾದಕ್ಕೆರಗಿದನು ॥೪೧೮॥

ನಿಡುಗಂಗಳಲಿ ತೋರುವ ಘನ ದುಃಖವು
ಕಡುಗಲಿ ತಾಯ ಕಾಣುತಲಿ ।
ಬಿಡದಡಿಗೆರಗುತ ಪಾದಕೆ ಕಾಣಿಕೆಯಿಕ್ಕೆ
ಒಡನೆ ನಡೆದ ರಾಮಯ್ಯ ॥೪೧೯॥

ಪನ್ನಗವೇಣಿಯು ಪರಿಪರಿಯಳಲುತ
ಹೊನ್ನಂದಣದಿ ಬಂದಿಳಿದು ।

ಚೆನ್ನಿಗ ರಾಮನೆಲ್ಲಿಗೆ ಹೋಗಿದ್ದೆನುತಲಿ
ತನ್ನ ಕಂದನ ಮುಂದೆ ಹೊರಳೆ ॥೪೨೦॥

ಕಾಲಿಗೆ ಬೀಳು ಬೀಳುತಲಿ ತಪ್ಪಿಸಿ ಕೊಂಡ
ಗೋಳಿಟ್ಟಿತು ಹೆಣ್ಣನಿಕರ ।
ಸಾಲುವಿಡಿದು ಸುತ್ತ ಮುತ್ತ ದುಃಖವ ಮಾಡೆ
ಹೇಳಲಿನ್ನೇನು ತನುಗಿಚ್ಚ ॥೪೨೧॥

ಎಲ್ಲಿ ಈ ವನವಾಸ ಇದ್ದಿಯೊ ನೀಯೆನ್ನ
ಪುಲ್ಲಶರನ ಸಮರೂಪ ।
ಎಲ್ಲಿ ನೀ ಪರದೇಶಿಯಾಗಿರ್ದೆ ಕಂದಯ್ಯ
ಎಲ್ಲಿ ದೇಸಿಗನಾಗಿ ಇದ್ದ್ಯೋ ॥೪೨೨॥

ಪಾಪಿಯ ಬಸುರಲಿ ಯಾಕೆ ಹುಟ್ಟಿದೊ ಕಂದ
ರೂಪು ಪರಾಕ್ರಮದಿಂದ ।
ಈ ಪರಿಯಲ್ಲಿ ಎನ್ನೊಡಲಿಗೆ ಬೆಂಕಿಯು
ನೀ ಪರದೇಶಿಯಾಗುವರೆ ॥೪೨೩॥

ನೀನೇಳು ತಿಂಗಳು ಬಿಟ್ಟೆನ್ನ ಅಗಲಿದೊ
ಏನೆಂದು ಇದ್ದಿಯೊ ಕಂದ ।
ನಾನು ಪರದೇಶಿಯಾಗಿದ್ದೆನು ಎಲೊ ಕಂದ
ಖಾನ ವಜೀರರ ಗಂಡ ॥೪೨೪॥

ಏನು ಮಾಡಲಿ ಕಂಪಿಲರಾಯ ತನ್ನಯ
ಮಾನಿನಿ ಮಾತನು ಕೇಳಿ ।
[ನ್ನಾ]ವ ಪರಿಯಲೆನ್ನ ಕೊಲಲೆಂದು ಕಳುಹಿದ
ಜ್ಞಾನಿ ಬೈಚಪ್ಪನುಳುಹಿದನು ॥೪೨೫॥

ಜಟ್ಟಂಗಿ ರಾಮನ ಗುಡಿಯಲೊತ್ತಿಲಿ ಎನ್ನ
ಮಾಟ ಮಾಡಿಯೆ ಮಡುಗೆನ್ನ ।

ಕುಟಿಲದ ಕೊಲೆಯನು ಕೊಲಿಸಿದ ಬೈಚಪ್ಪ
ಘಟವನುಳುಹಿದ ಕೇಳಮ್ಮ ॥೪೨೬॥

ಏನನರಿ[ದಂಥ] ಸತ್ಯದಿ ನಡೆವಂಥ
ಮಾನನಿಧಿಯ ಕರೆದೊಯ್ದು ।
ಮೋನದಿ ಬೈಚಪ್ಪ ಬಚ್ಚಿಟ್ಟ ಪರಿಯನು
ನಾನೇನ ಬಲ್ಲೆನೊ ಕಂದ ॥೪೨೭॥

ಇನ್ನು ದುಃಖವ ಮಾಡಲೇತಕ್ಕ ಕೇಳಮ್ಮ
ಎನ್ನ ನೋಡುವ ಫಲವಿರಲು ।
ನಿನ್ನ ಸೊಸೆಯ ಕೂಡಿಕೊಂಡರಮನೆಗಾಗಿ
ಭಿನ್ನವಿಲ್ಲದೆ ನಡೆಯೆಂದ ॥೪೨೮॥

ಮಡದಿಯರ ಮುಖವ ನೋಡಿ ರಾಮಯ್ಯ [ನು]
ಸಡಗರದಲಿ ನಸುನಗುತ ।
ಕಡು ಸಂತೋಷದಿ ತಾಯಿ ಮಡದಿ ಕೂಡಿ
ಒಡಗೂಡಿ ನಡೆಯೆಂದ ಮನೆಗೆ ॥೪೨೯॥

ತನ್ನ ಸತಿಯರ ನೋಡಿ ರಾಮನಾಥನು
ಉನ್ನತ ಹರುಷವ ತಾಳಿ ।
ಮನ್ನಿಸಿ ಸತಿಯರ ನಡೆಯೆಂದು ಕಳುಹಿದ
ಚೆನ್ನ ರಾಮಯ್ಯ ಹರುಷದಲಿ ॥೪೩೦॥

ಮತ್ತ ಪಲ್ಲಕ್ಕಿಯನೇರಿದ ರಾಮಯ್ಯ
ಒತ್ತಿಲಿ ಮಂತ್ರಿ ಬೈಚಪ್ಪ ।
ಸುತ್ತ ಎಕ್ಕಟಿಗರು ಬಲ ಸಹ ತೆರಳಿದ
ಕರ್ತು ರಾಮಯ್ಯ ವಹಿಲದಲಿ ॥೪೩೧॥

ಕಟ್ಟಾಳು ರಾಮನಾಥನು ಬಂದೆನುತಲಿ
ಪಟ್ಟಣವೆಲ್ಲ ಶೃಂಗರಿಸಿ ।

ಕಟ್ಟಿಸಿ ಮುತ್ತಿನಾರುತಿ ಗುಡಿ ತೋರಣ
ಶೆಟ್ಟಿಗಳರಮನೆಯೆಸೆಯೆ ॥೪೩೨॥

ಹೆಣ್ಣು ಗಂಡು ಹಸುಮಕ್ಕಳು ಸಹವಾಗಿ
ಕಣ್ಣಾರೆ ಕಂಡು ರಾಮಯ್ಯನ ।
ತಣ್ಣಗಿರಯ್ಯ ಬೈಚಪ್ಪ ನಮ್ಮೆಲ್ಲರ
ಪುಣ್ಯದಿಂದ ರಾಮನುಳಿದ ॥೪೩೩॥

ಇಂದು ಹುಟ್ಟಿದ ರಾಮನೆನುತಲಿ ಪ್ರಜೆಗಳು
[ಸಂ]ದರು ಪಟ್ಟಣದೊಳಗೆ ।
ತಂದೆತ್ತಿದರು ಹರಿವಾಣದಾರತಿಯರು
ತಂದೆ ತಾಯ್ ಸಹಿತ ರಾಮಯಗೆ ॥೪೩೪॥

ಕಾಟಣ್ಣನ ಕಳುಹಿದನು ರಾಮಯ್ಯನು
ನೀಟನಿಸುವ ಮನ್ನೆಯರ ।
ಕೂಟದ ನಾಯಕರೆಲ್ಲರ ಕಳುಹಿದ
ದೂಟಿಸಿ ಹೊಕ್ಕರರಮನೆಯ ॥೪೩೫॥

ನಡೆದರಲ್ಲಿಂದ ಒತ್ತರವಾಗಿ ಚಾವಡಿಗೆ
ಮಡದಿ ಹರಿಯಮ್ಮ ಸಹವಾಗಿ ।
[ಮು]ಡಿ ಬೆನ್ನನೋವುತ ನಡೆತಂದು ಬೇಗದಿ
ಒಡನೆ ಗದ್ದುಗೆಯನಿಕ್ಕಿದಳು ॥೪೩೬॥

ಕಂದ ರಾಮಯ್ಯ ಕಂಪಿಲ ಬೈಚಪ್ಪನು
ಬಂದು ಮುಹೂರ್ತವನು ಮಾಡಿದರು ।
ಇಂದುಮುಖಿಯು ಹರಿಯಲದೇವಿಯು ಬೇಗ
ಮಂದಿರದೊಳು ಹೊಕ್ಕು [ತಾನು] ॥೪೩೭॥

ತಂದಲು ನವರತ್ನ ಭೂಷಣಾಭರಣವ
ಮುಂದಿಟ್ಟು ಕರಗಳ ಮುಗಿದು ।

ಇಂದೆನ್ನ ಪಟ್ಟಣ ಪ್ರಜೆ[ಗಳು] ರಾಜ್ಯವ
ಇಂದು ನಿನುಳಿಹಿದೆಯೆನುತ ॥೪೩೮॥

ಉಡಕೊಟ್ಟು ಹರಿಯಲದೇವಿ ಬೈಚಪ್ಪನಿಗೆ
ತೊಡಿಸಿ ಮುತ್ತಿನ ಹಾರವನು ।
ಕಡುಗಲಿ ರಾಮನ ಮಡದಿಯರು ಸಹವಾಗಿ
ಬಿಡದೆ ಬೈಚಪ್ಪಗೊಂದಿಸುತ ॥೪೩೯॥

ತಂದೆ ಕಂಪಿಲರಾಯ ಕೊಲ್ಲೆಂದ ಮಾತಿಗೆ
ಕೊಂದನೆಂದಿದ್ದೆವೊ ನಾವು ।
ಇಂದೆನ್ನ ಓಲೆಭಾಗ್ಯವು ಬೈಚಪ್ಪ
ನಿನ್ನಿಂದ ಉಳಿದೆವು ಸಹಿತ ॥೪೪೦॥

ಪೊಡವಿಯೊಳಗೆ ತಮ್ಮೊಡೆಯನ ಚಿತ್ತವ
ಪಡೆದರಲ್ಲದೆ ಲೋಕದೊಳಗೆ ।
ಕೆಡಿಸುಯೆಂದಲ್ಲಿಗೆ ಉಳುಹಿ ಕಾರ್ಯವ ಮಾಳ್ಪ
ದೃಡವುಳ್ಳ ಮಂತ್ರಿಗಳಾದರು ॥೪೪೧॥

ಸಂತಾನ ಸ್ಥಿರರಾಜ್ಯವಾಗಲಿ ರಾಮಗೆ
ಅಂತು ಹರಸಿ ಪ್ರಜೆಸಹಿತ ।
ಕಾಂತೇರು ಹರಸಿ ಬೈಚಪ್ಪನ ಪಾದಾ
ಕ್ರಾಂತರಾಗುತ ತಿರುಗಿದರು ॥೪೪೨॥

ಕಂದನನುಳುಹಿದೆಯೆಂದು ಪ್ರಧಾನನ
ಮುಂದೆ ಕುಳ್ಳರಿಸಿ ಮಾತಾಡಿ ।
ತಂದೆಗಿಂದಗ್ಗಳ ನನಗೆ ನೀ ಮಂತ್ರೀಶ
[ಎಂ]ದು ನುಡಿದ ಮುದ್ದು ಮಾತ ॥೪೪೩॥

ಮುದ್ದು [ಮಾತನ್ನಾಡಿ] ಮೆಚ್ಚಿ ಕಂಪಿಲರಾಯ
ಹೊ[ದ್ದಿ]ಸಿ ಹಚ್ಚಡ ಕಬಾಯ ।
ಚಿದ್ರೂಪ ಶಿವ ಬಲ್ಲ ಮಂತ್ರಿನೀನಲ್ಲದೆ
ಇದ್ದವರೇನ ತಿಳಿದರು ॥೪೪೪॥

ಎತ್ತಣ ಮಾತು ಎನ್ನುತ ರತ್ನಾಜಿಯು
ತೊತ್ತು ಸಂಗಿಯ ಕಳುಹಿದಳು ।
ಇತ್ತ ಸುದ್ದಿಯನರಿತು ತಿರುಗಿ ಸಂಗಿ[ಯು]
ಅತ್ತ ಹೇಳಿದಳು ರತ್ನಿಯೊಳು ॥೪೪೫॥

ಸತ್ತ ರಾಮನು ಬಂದನೆನುತಲಿ ಸಂಗಿಯು
ವಿಸ್ತಾರವಾಗಿ ಬಿನ್ನೈಸೆ ।
ಮತ್ತೆ ಮನದೊಳು ಅತಿ ನೊಂದು ರತ್ನಮ್ಮ
ಚಿತ್ತ ಒಂದ ನೆನೆದಳು ॥೪೪೬॥

ಬೆರಗಾದಳು ರತ್ನಿ ಏನು ಕಾರಣವೆಂದು
ಮರೆಮಾಡಿದ ಗಂಡನೆಂದು ।
ನೆರೆ ನಂಬಿಯಿದ್ದನೆ ಸಂಗಾಯಿ ನಾನೆಂದು
ಮರೆಮಾಡುವುದರ ನಾನರಿಯೆ ॥೪೪೭॥

ನಂಬುಗೆ ಕೊಟ್ಟೆನ್ನ ಪ್ರಾಣವನುಳುಹಿದ
ನೊಂದಂಬಿಗೆ ಗುರಿಯಾದೆ ।
ಕೊಂದೆ ರಾಮನಯೆಂದು ಸತ್ಯವನಾಡಿದ
ನಂಬಿಗೆ ಇವನ ಇರಿಯಲಿ ॥೪೪೮॥

ಮುಪ್ಪು ತಿಪ್ಪೆಯ ಸೇರಲಿ ರಾಮನ ತಲೆ
ಒಪ್ಪ ಒಪ್ಪದಲಿ ತೋರಿದನು ।
ತಪ್ಪದೆ ಮಂತ್ರಿಯ ಕೈಯಿಂದ ಕೊಲಿಸಿದ
ಒಪ್ಪದೆ ಎನಗೆ ಹೇಳಿದನು ॥೪೪೯॥

ಪರವ್ರತೆತನವನು ಹಾಳು ಮಾಡಿದ ತನ್ನ
ವ್ರತವನು ಕೆಡಿಸಿದ ರಾಮ ।
ಸುತನೆಂದು ಬಚ್ಚಿಟ್ಟು ಕೃತಕವ ಮಾಡಿದ
ಪತಿಯೆಂದು ನಂಬಲಿಬಹುದೆ ॥೪೫೦॥

ಸಂತಾನ ಸೌಭಾಗ್ಯ ನಿಸ್ಸಂತಾನವಾಗಲಿ
ಮುಂತೆ ನಾನೇನ ನಂಬಲಿ ।

ಸಂತೋಷಕ ಶಿವ ಬೆಂಕಿಯನಿಕ್ಕಲಿ
ಚಿಂತಿಸಿ ಮನದಿ ರತ್ನಾಜಿ ॥೪೫೧॥

ನೋಡೆಲೆ ಸಂಗಿ ಕಂಪಿಲರಾಯನು [ತಾನು]
ಮಾಡಿದ ಮಾಟದಾಶ್ಚರ್ಯ ।
ಹೂಡಿ ಕೊಂಡಳು. ಕೊರಳಿಗೆ ನೇಣನು ಆಗ
ಈಡಾಡಿದಳು ಪ್ರಾಣವನು ॥೪೫೨॥

ಒಡತಿ ಸತ್ತುದ ಕಂಡು ಹಡಪದ ಸಂಗಿಯು
ಕಡು ದುಃಖದಿ ಮನನೊಂದು ।
ಕಡಿದುಕೊಂಡಳು ತಮ್ಮ ಅರಸಿ ಸತ್ತುದ ಕಂಡು
[ನಡೆತಂದು] ಊಳಿಗದವರು ॥೪೫೩॥

ಅರಮನೆಯೊಳು ತಮ್ಮ ಅರಸಿ ಸತುದ ಕಂಡು
ಪರಿತಂದು ಅಲ್ಲಿದ್ದವರು ।
ಅರುಹಿದರಾಗ ಕಂಪಿಲಗೆ ಸುದ್ದಿಯ ತಂದು
ತಿರುಗಿ ಬಂದರು ನಿಮಿಷದಲಿ ॥೪೫೪॥

ಆಗಲೆ ಸತ್ತಳೆಂಬುದ ಕೇಳಿ ಕಂಪಿಲ
ಮಗಗೆ ಹಗೆಯ ಮಾಡಿದವಳ ।
ಬೇಗದಿ ಅವಳ ಖರದ ಪಾದಕೆ ಕಟ್ಟಿ
ಒ[ಗೆಯೆಂ]ದನು ಕಂಪಿಲನು ॥೪೫೫॥

ಆ ಮಾತ ಕೇಳಿ ರಾಮಯ್ಯನಿಂತೆಂದನು
ಈ ಮಹಾ ಪಾಪದಾಶ್ಚರ್ಯ ।
ಸೋಮಧರನು ಬಲ್ಲ ಇದ ಕೇಳಬಾರದು
ಆ ಮಹಾ ಮಂತ್ರಿಯೊಳ್ನುಡಿದ ॥೪೫೬॥

ಯಾತಕ್ಕೆ ಸತ್ತಳೆನುತ ರಾಮನಾಥನು
ಮಾತನಾಡಿದ ಮಂತ್ರಿಯೊಡನೆ ।
ಕೀರ್ತಿಯಾಯಿತು ಮಂತ್ರಿ ಎನ್ನಿಂದ ಸತ್ತಳು
ಓತು ರಾಮಯ್ಯನಾಡಿದನು ॥೪೫೭॥

ಈ ಪರಿಯಲಿ ರತ್ನಿ ಸಾಯದಿದ್ದರೆ ಮುಂದೆ
ಪಾಪವು ನೆಲೆಗೊಳ್ಳದಿಹುದೆ ।
ಕಾಪಾಲಿಯ ಕರುಣವಿಲ್ಲದಿದ್ದರೆ [ಎನ್ನ]
ಭೂಪನೊಲಿದು ಉಳುಹಿದನೆ ॥೪೫೮॥

ಕುಳಿಯ ತೋಡಿಸಿ ಹೋಳಿಸ ಹೋ[ಗು] ಬೈಚಪ್ಪ
ಕಲಿ ರಾಮನ ಹಗೆಯವಳ ।
ಇಳೆಯೊಳಗಪಕೀರ್ತಿ ಮಾಡಿದಳು ತಾನೆಂದು
ಸಲೆ ಮಂತ್ರೀಶನೊಳುಸುರೆ ॥೪೫೯॥

ನಿರೂಪವ ಕೇಳಿ ಬಂದನು ಬೈಚಪ್ಪ
ಹರುಷದಿಂದಲಿ ಅರಮನೆಗೆ ।
ಪರಿಯ ತಿಳಿದು ರತ್ನಿಯ ಸಖಿಯರ ಕೈಯ
ಪರಿ ಏನಾಯಿತೆಂದೆನುತ ॥೪೬೦॥

ತೆಗೆಸಿದ ಕುಳಿಯನಾಕ್ಷಣದಲ್ಲಿ ಬೈಚಪ್ಪ
ಸುಗುಣಿಯ ಹಾಕುಯೆಂದೆನುತ ।
ಮಗನನು ಬಯಸಿದ ನಿನಗಪಕೀರ್ತಿಯು
ಜನದೊಳಗಾಯಿತುಯೆಂದ ॥೪೬೧॥

ಎಂದು ಹೇಳಿಯೆ ಪ್ರಧಾನಿಯು ತಿರುಗಲು
ನಿಂದು ಹೂಳಿದರು ರತ್ನಿಯನು ।
ಇಂದುಧರನ ಕೃಪೆ ರಾಮಗಾಯಿತುಯೆಂದು
ಸಂಧಿ ಇಲ್ಲಿಗೆ ಹನ್ನೊಂದು ॥೪೬೨॥

ಅಂತು ಸಂದಿ ೧೧ಕ್ಕಂ ಪದನು ೨೧೭೪ ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೧೨

❖

ಮಾದಗಿತ್ತಿಯ ಕಾಳಗ–ರಾಮನ ವೀರಮರಣ

ಛಪ್ಪೆನ್ನ ದೇಶವ ಕೋಳಾಹಳವ ಮಾಳ್ವ
ಕಪ್ಪದ ರಾಯವಿಭಾಡ ।
ಎಪ್ಪತ್ತುಯೆರಡು ನಿಯೋಗ ಮಧ್ಯದಲ್ಲಿ
ಒಪ್ಪುತಿರ್ದನು ಸುರಿತಾಳ ॥೧॥

ತನ್ನ ಸಮಾನದ ದೊರೆಗಳೆಲ್ಲರು ಬಂದು
ಹೊನ್ನ ಗದ್ದುಗೆಯೊತ್ತಿನಲಿ ।
ಬಿನ್ನಹ ಮಾಡುವ ಸಮಯದಿ ಸುರಿತಾಳ
ತನ್ನ ಮಲ್ಲುಕರ ಕರೆಸಿದನು ॥೨॥

ನಡೆಯೆಂದು ದಂಡ ಕುಮ್ಮಟನೆ ಪೋಗೆನಲಾಗಿ
ಹಿಡಿ ತನ್ನಿ ಬಾದುರನೆನುತ ।
ತಡೆದನು ನೇಮಿಯು ಎನುತ ಸುರಿತಾಳನು
ನುಡಿದನು ಚಾವಡಿಯೊಳಗೆ ॥೩॥

ಬಂದಿತು ಆಗಲೆ ನೇಮಿಯ ಸುದ್ದಿಯು
ಸಂದಿತು ಸುರಿತಾಳನೆಡೆಗೆ ।
ಇಂದು ರಾಮನು ಸಿಕ್ಕಿದೆ ಹದೆ ತುರುಕರ
ಕೊಂದನು ಕುಮ್ಮಟದೊಳಗೆ ॥೪॥

ಕೇಳಿ ತಾ ಹುಸಿಯೆನುತಲಿ ಸುರಿತಾಳನು
ಹೇಳಿದವನ ಬೆಸಗೊಂಡ ।
ದಾಳಿ ಮಾಡಿ ಬಂದು ರಾಮಯ್ಯ ಕಾದಿದ
ಪಾಳೆಯ ಮುರಿದೋಡಿಸಿದ ॥೫॥

ತಂದೆ ಕಂಪಿಲರಾಯ ಕೊಲಿಸಿದ ಸುದ್ದಿಯ
ಅಂದೆ ಕೇಳಿದೆವು ಎಂದೆನುತ ।
ಇಂದು ರಾಮಯ್ಯನು ಕಾದಿದ ಬಗೆ ಹೇಗೆ
ಎಂದು ಕೇಳಿದನು ಸರಿತಾಳ ॥೬॥

ಸತ್ತನೆಂದು ಹೋಯಿತು ರಾಮನ ಸುದ್ದಿ
ಮತ್ತೆ ಮಂತ್ರಿಯು ಬೈಚಿಟ್ಟು ।
ಕರ್ತು ಪ್ರಧಾನ ರಾಮನ ತಂದು ಕಾದಿಸಿ
ಹೆತ್ತ ತಂದೆಯನು ಕಾಣಿಸಿದ ॥೭॥

ಭಾಪುರೆ ಪ್ರಧಾನಿಗಳರಸನೆಂದೆನುತಲಿ
ಭೂಪ ಮೆಚ್ಚಿದ ಸುರಿತಾಳ ।
ಈ ಪರಿ ಬುದ್ಧಿ ಪ್ರಧಾನ ನಮಗಿಲ್ಲೆಂದು
ಕೋಪಿಸಿ ನೇಮಿಯ ಜರೆದ ॥೮॥

ಡಿಳ್ಳಿಯ ಹೊಗಲಮ್ಮದೆ ಖಾನ ಖಾನರು
ಮೆಲ್ಲಮೆಲ್ಲನೆ ಹುದುಗಿದರು ।
ಕಳ್ಳತನದಲಿ ಹೊಕ್ಕನು ನೇಮಿಯಖಾನ
ಡಿಳ್ಳಿಯ ಮಾಡಿ ಮಂದಿಯನು ॥೯॥

ಬಂದನು ನೇಮಿಯು ಅರಸಿನ ಓಲಗಕ್ಕೆ
ನಿಂದನು ಕರಗಳ ಮುಗಿದು ।
ಒಂದಾಗಿ ಮಾತನಾಡಲು ಮುಖದೋರನು
ನಿಂದಿರೆ ಕುಳ್ಳಿರು ಎನ್ನ ॥೧೦॥

ಭೂಮಿಯೊಳಗೆ ದಾನವರ ಕೈದಿಗ[ಳಾಗಿ]
ಕಾಮಿಸಿ ಹಿಡಿ[ತಂದಾಯ್ತು] ।
ಪ್ರೇಮದಿ ರಾಮನೊಬ್ಬನೆ ಬಲ್ಲಿದನೆಂದು
ಆ ಮಹಾ ಸುರಿತಾಳ ನುಡಿದ ॥೧೧॥

ಮಾಳವರಾಯ ಮುಂಗಲಿಯ ಕಪ್ಪಡಿರಾಯ
ಮಲರಾಯರೊಳು ಬಲ್ಲಿದನು ।
ನೆಲೆಗೊಂಡನು ರಾಮಯ್ಯ ಕುಮ್ಮಟದೊಳು
ಬಲುಹ ನಾನೇನ ಬಣ್ಣಿಸುವೆ ॥೧೨॥

ಕೊಟ್ಟದ ಬೇಡನೆಂಬಿರಿ ಜಗವೆಲ್ಲವು
ಮುಟ್ಟಿಲಮ್ಮದೆ ತಿರುಗಿದಿರಿ ।
ದಿಟ್ಟನು ರಾಯರೊಳಧಿಕನು ಅವನೆಂದು
ಸೃಷ್ಟಿಯೊಳಗೆ ರಾಮನಾಥ ॥೧೩॥

ಪೊಡವಿಯೊಳಗೆ ಓರುಗಲ್ಲ ಪ್ರತಾಪನ
ನುಡಿಯಿಂದ ಗರ್ವವ ಮುರಿದ ।
ತಡೆಯದೆ ತುರಗವ ತಂದ ಬಲ್ಲಿದನೆಂದು
ನುಡಿದನು ಸುರಿತಾಳ ಮುದದಿ ॥೧೪॥

ರಾಮನೆಂದರೆ ದಂಡು ಭೂಮಿಯೊಳ್ನಿಲ್ಲದು
ನೇಮಿಯೊಬ್ಬನು ಏನಹನೊ ।
ಭೂಮಿಯೆಲ್ಲವ ಸುತ್ತಿ ತಿರುಗಿದಿರಿ ನೀವೆಲ್ಲ
ರಾಮನ ಸೋಲಿಸಲಿಲ್ಲ ॥೧೫॥

ಮುಗಿಲ ಸೆರಗಿನಂತೆ ಮೀಸಲ ದುರ್ಗದ
ಬಗೆಯವನಾರು ಬಣ್ಣಿಪರು ।
ಹಗೆಯಾದೆವು ನಾವು ಕಂಪಿಲರಾಯಗೆ
ಹೊಗಬಾರದಿನ್ನು ಕುಮ್ಮಟವ ॥೧೬॥

ಹೆಂಗೂಸಾದೆವು ನಾವು ಹಿಂಗುವ ರಾಮಗೆ
ಎಂಬಾಗಲವನು ಬಲ್ಲಿದನು ।
ಭಂಗಬಡಿಸಿದ[ನು] ತುರುಕರ ದಂಡನವ
ನಂಗವ ತರುವರ ಕಾಣೆ ॥೧೭॥

ಎಲ್ಲಿಗಾದರು ಕಳುಹಯ್ಯ ನಮ್ಮನು ನೀನು
ಬಲ್ಲಿದ ರಾಮನ ಮೇಲೆ ।
ಅಲ್ಲಿಗೆ ನಮ್ಮನು ಕಳುಹಲಿ ಬೇಡಿಂದು
ಇಲ್ಲಿಗೆ ತರಿಸು ಕಪ್ಪವನು ॥೧೮॥

ಕಳುಹು ಗುಜ್ಜರ ತಿಗುಳ ತೆಲುಗರ ಮೇಲೆ
ಕಳುಹು ಬಲ್ಲಾಳನ ಮೇಲೆ ।
ಕಳುಹಯ್ಯ ಕೊಂಕಣ ಆರ್ಯರ ಮೇಲೆಯು
ಕಳುಹಬೇಡಯ್ಯ ಕುಮ್ಮಟಕೆ ॥೧೯॥

ಇಂತೆಂದ ಮಾತನು ಕೇಳುತ ಸುರಿತಾಳ
ಚಿಂತೆಯಾದನು ಮನದೊಳಗೆ ।
ಪಂಥವನಾಡಿ ಹೋದಿರಿ ತರಲಾರದೆ ಕಾ
ಲಾಂತಕ ರಾಮನ ಮೇಲೆ ॥೨೦॥

ಹೋದವರೆಲ್ಲರು ಕಾದಿ ನುಗ್ಗಾದಿರಿ
ಬಾದುರಖಾನನ ತರದೆ ।
ಸಾಧಿಸಿ ಕುಮ್ಮಟದುರ್ಗವ ಕೊಳಹೇಳಿ
ಮಾದಗಿತ್ತಿಯ ಕರೆಸಿದನು ॥೨೧॥

ಕರೆಸಲಾಕ್ಷಣದೊಳು ಶೃಂಗಾರವಾದಳು
ಹರುಷದಿಂದಲಿ ಮಾತಂಗಿ ।
ಇರದೆ ತನ್ನಯ ಅಂಗವಸ್ತ್ರಾಭರಣವನು
ಕರ ಬೇಗದಲಿ ಅಲಂಕರಿಸಿ ॥೨೨॥

ತುಂಬಿಗುರುಳೆ ಮಾತಂಗಿಯ ಸಂಭ್ರಮ
ಇಂಬಿನ ಜಡೆಯ ಸೂಸಕವು ।
ಬಿಂಬಾಧರದ ಕುಂಭಕುಚದ ನಗೆಮೊಗದ
ಅಂಬುಜದಳದ ಲೋಚನೆಯು ॥೨೩॥

ಶ್ಯಾಮವರ್ಣದ ಸರಸಿಜಮುಖಿ ಚೆಲುವಿಕೆಯ
ಹೇಮಕಳಸ ಕುಚಯುಗದ ।
ಕಾಮಿನಿ ನೋಡೆ ಪದ್ಮಿನಿಜಾತಿಯೆಂಬಂತೆ
ಕೋಮಲೆ ಮಾತಂಗಿ ಇಹಳು ॥೨೪॥

ಮರಕತ ಮೋಹ ಕುಪ್ಪಸ ಮಾತಂಗಿಗೆ
ತರಕಸೆ ಜೋಡು ಸಿಂಗಾಡಿ ।
ತುರುಕರ ದಳಕೆ ಒಪ್ಪುವ ಹೊನ್ನಾಯುಧ
ಸರಪಳಿ ಕೈ ಜಮದಂಡೆ ॥೨೫॥

ಇಂತಪ್ಪ ಶೃಂಗಾರ ಸಂಭ್ರಮದಿಂದಲಿ
ಮುಂದೆ ತುರುಕರ ದಳ ಸಹಿತ ।
ತಂತಳಿಯದೆ ಸುರಿತಾಳನ ಇದಿರಲಿ
ಕಾಂತೆ ತಾ ಬಂದೆರಗಿದಳು ॥೨೬॥

ಏರಗಿದ ಮಾತಂಗಿಯನು ಏಳೆನುತಲಿ
ಕರೆದು ಸಮ್ಮುಖದಿ ಕುಳ್ಳಿರಿಸಿ ।
ತಿರುಗಿ ಬಂದರು ಖಾನಖಾನರೆಲ್ಲರೂ ಕೂಡಿ
ತ್ವರಿತದಿ ಹೋ[ಗು] ಕುಮ್ಮಟಕೆ ॥೨೭॥

ಕೇಳುತ ಜೀಯ ಹಸಾದವೆಂದೆ [ನಲಾಕೆ]
ಬಾಳ ಸಂತೋಷವ ತಾಳಿ ।
ದಾಳಿಯ ಮಾಡು ಕುಮ್ಮಟವನುಯೆಂದು
ವೀಳ್ಯವ ಕೊಟ್ಟು ಸಂತೈಸಿ ॥೨೮॥

ಇತ್ತನು ವಸ್ತ್ರಾಭರಣವ ಮಾತಂಗಿಗೆ
ಮುತ್ತಿನ ಓಲೆ ಮೂಗುತಿಯ ।
ಮತ್ತೆ ಕುದುರೆ ಕೊಟ್ಟು ಮನ್ನಿಸಿ ಸುರಿತಾಳ
ಹೆತ್ತ ಮಗಳು–ನೀನೆಂದ ॥೨೯॥

ಹೋಗಯ್ಯ ನೇಮಿ ಕುಮ್ಮಟಕೆಯೆಂದನಲಾಗಿ
ಬೇಗ ತೆರಳೆ ಲಕ್ಷ ಕುದುರೆ ।
ಸಾಧಿಸಿದನು ಹತ್ತು ಲಕ್ಷ ಕಾಲಾಳನು
ಆಗ ರಥವ ಸಂದಣಿಯು ॥೩೦॥

ಎಂದ ಮಾತನು ಕೇಳಿ ನೇಮಿಯ ಖಾನನು
ಸಂದೇಹದಿಂದ ತೆರಳಿದನು ।
ಇಂದು ಮಾತಂಗಿಯ ದಂಡನು ಕೂಡಿಯೆ
ಬಂದುದು ಬರಲಿಯೆಂದೆನುತ ॥೩೧॥

ತೆರಳಿದ ನೇಮಿಯು ಡಿಳ್ಳಿಯ ಹೊರವಂಟು
ಹರಣದಿಂದಲಿ ಕುಮ್ಮಟಕೆ ।
ಹೊರಡೆಂದು ನೇಮಿಸಿ ತೆರಳಿಸಿಕೊಂಡಾಗ
ಹರುಷದಿ ಹೊರ ಬೀಡ ಬಿಟ್ಟ ॥೩೨॥

ಎದ್ದಳು ಸುರಿತಾಳನ ಪಾದಕೆ ಬಿದ್ದು
ಬುದ್ಧಿಗಲಿಸು ತನಗೆಂದು ।
ಹೊದ್ದ[ಲ]ಮ್ಮದೆ ತಿರುಗಿದರೆ ನಿಮ್ಮೆಲ್ಲರ
ಇದ್ದಲ್ಲಿ ಹರಿಯ ಹೊಯಿಸುವೆನು ॥೩೩॥

ಭಾಷೆಯ ಕೊಟ್ಟಳು ಆ ಸುರಿತಾಳಗೆ
ದೇಶವನರಿವೆ ಕಂಪಿಲನ ।
ಗಾಸಿಯ ಮಾಡುವೆನೆನುತಲಿ ಮಾತಂಗಿ
ಹಾಸ್ಯಗಾರ್ತಿಯು ಹೊರವಂಟು ॥೩೪॥

ಸಿಂಗಾಡಿ ತರಕಾಸೆ ಹೊಂಗೆಲಸದ ಜೋಡು
ಮಂಗಳ ಬೊಲ್ಲನ ಮೇಲೆ ।
ಸಂಗ್ರಾಮ ಸೂರೆಗಾರಳು ಹೊರವಂಟಳು
ಹಿಂಗಲಾರದೆ ದಂಡು ಸಹಿತ ॥೩೫॥

ತೆಂಕಣದೇಶದ ಹರ[ದಿ] ಮಾತಂಗಿಯು
ಶಂಕೆಯಿಲ್ಲದೆ ದಂಡ ಬರಲು ।
ಬಿಂಕವ ಮುರಿವೆನು ರಾಮನಾಥನಯೆಂದು
ಅಂಕಗಾರ್ತಿಯು ಹೊರವಂಟು ॥೩೬॥

ಗುಡಿಯು ಗುಡಾರ ಗುಮ್ಮಟ ಸರಗತ್ತಿಯು
ಬೀಡಿನ ಹೊರವಳಯದಲಿ ।
ಅಡರಿದ ಸತ್ತಿಗೆಗಳ ಖಾನ ಖಾನರು
ಎಡೆಯೆಡೆಯಲ್ಲಿ ಪಾಳೆಯವು ॥೩೭॥

ಕೊಟ್ಟಿಗೆ ಕೊಲ್ಲಾರ ಬಂಡಿ ಬೊಕ್ಕಸಗಳ
ಪೆಟ್ಟಿಗೆ ಲಾಯ ಸಂಭ್ರಮವು ।
ಕಟ್ಟಳಿಲ್ಲದೆ ಗುಡಿಗಳು ಸರವಟ್ಟಿಗೆ
ಇಟ್ಟಣಿಸುವುದನೇನೆಂಬೆ ॥೩೮॥

ಮುತ್ತಿನ ಗಾಡಿ ಸಾವಿರ ಮಾತಂಗಿಗೆ
ಒತ್ತಿಲಿ ಸಾವಿರ ಆನೆ ।
ಛತ್ರದ ಗುಡಿ ತೋಪಿನ ಗುಡಿ ಹೊಯಿದವು
ಸುತ್ತ ಗಾವುದ ತೆರಹಿಲ್ಲ ॥೩೯॥

ಹತ್ತು ಸಾವಿರ ಸಿಂಗಾಡಿಯ ತುರುಕರು
ಹತ್ತು ಸಾವಿರ ಸಬಳೆಯರು ।
ಹತ್ತು ಲಕ್ಷ ಕಾಲಾಳು ಕುದುರೆಗಳು
ಒತ್ತಿಲಿ ನೇಮಿಯ ದಂಡು ॥೪೦॥

ಇಲ್ಲಿಗೆ ಮುನ್ನೂರು ಅರುವತ್ತು ಗಾವುದ
ಅಲ್ಲಿಗೆ ಕುಮ್ಮಟದುರ್ಗ ।
ಅಲ್ಲಿಗಲ್ಲಿಗೆ ಅಂಚೆಯ ಕುದುರೆಯನಿಕ್ಕಿ
ನಿಲ್ಲದೆ ದಾಳಿ ಮಾಡಿದರು ॥೪೧॥

ಬಿಟ್ಟಲ್ಲಿ ಬಿಡದೆ ಬಂದಳು ಮಾತಂಗಿಯು
ಬೆಟ್ಟವಾವುದು ಕಂಪಿಲನ ।
ಮೆಟ್ಟಿ ತುಳಿದು ಹೆಡಗೈಯನು ಕಟ್ಟಿಯೆ
ಕೊಟ್ಟು ಕಳುಹುವೆ ರಾಮುಗನ ॥೪೨॥

ಗಡಿಯ ದಾಟಿದಳಾಗ ಮಾತಂಗಿಯ ಬೇಗ
ಹಿಡಿತಹೆನೆಂದು ಬಾದುರನ ।
ಕಡುಗಲಿ ರಾಮನ ಕಾಳಗದ ಕನಸಿಲಿ
ಬಿಡುವ ಬಿಡುವ ಪಯಣದಲ್ಲಿ ॥೪೩॥

ಲಕ್ಷದ ಮೇಲೆ ತೊಂಬತ್ತಾರು ಸಾವಿರ
ಲೆಕ್ಕವಿಲ್ಲದ ಪವುಜುಗಳನು ।
ಗಡಿಕೋಟೆಯ ಕಾವ ಕಾಟಿನಾಯಕ ಕಾಣುತ
ಕಡುಗಲಿ ಬೇಗ ತೆರಳಿದನು ॥೪೪॥

ನಾಟಕವಲ್ಲ ಕಾಳಗ ರಾಮನ ಕೂಡ
ಕೋಟಲೆ ಬೇಡ ಹೋಗೆಂದ ।
ಚಾಟಕತನ ಮಾಡಿ ಹೊಡೆದ ಬಾದುರನ
ಆಟ ಹಾಗೆಂದು ಇದಲ್ಲ ॥೪೫॥

ಕಬ್ಬಿಲಿಗರ ನಾಗ ಹೆಬ್ಬುಲಿ ಭೈರಣ್ಣ
ಹಬ್ಬೆಯ ನಾಯಕನವರು ।
ನಿಬ್ಬರದಲಿ ಕಾಣುತ ತಿವಿತಿವಿದಾಡಿ
ಒಬ್ಬರೊಬ್ಬರು ಮೂದಲಿಸಿ ॥೪೬॥

ಒಡೆಯರಿಲ್ಲದೆ ಕಾಳಗವನು ಜೈಸುತ
ನಡೆಸುತ ನಾಡ ಗೂಳೆಯವ ।
ಹಿಡಿದರರಿಂದ ತಲೆ ಸಹವಾಗಿ ಬಂದರು
ಕಡೆಯ ಪಟ್ಟಣವ ಕಾಣುತಲಿ ॥೪೮॥

ಹತ್ತು ದಿನಕೆ ಬಂತು ಖಾನರ ಪವುಜೆಲ್ಲ
ಸುತ್ತುಗಾವುದ ತೆರಹಿಲ್ಲ ।
ಎತ್ತ ನೋಡಲು ಕರಿತುರಗ ಸಬಳೆಯರು
ಮೊತ್ತವನೇನ ಬಣ್ಣಿಸುವೆ ॥೪೯॥

ಜಾನಿಯಕಲ್ಲದುರ್ಗದಲಿ ಮಾತಂಗಿಯ
ಸೇನೆ ಬಿಟ್ಟಿತು ಗುಡಿಹೊಯ್ದು ।
ದಾನಪತಿಗಳ ಕಡಿವೆನೆನುತ ರಾಮ
ತಾನಾಗ ಬಂದು ನೋಡಿದನು ॥೫೦॥

ದಂಡಿನ ಪಾರವ ತಿರುಗುತ ವಜೀರರು
ಅಂದಿನಿರುಳು ಕಳೆದುಳಿದು ।
ನಿಂದೆವಾದರೆ ಶಿವ ಕೊಟ್ಟಾಯುಷವೆಂದು
ಬಂದರುಯೆಂದು ಬೆದರುತಲಿ ॥೫೧॥

ಇಂದಿನ ಇರುಳನು ಕಳೆದೆವಾದರೆ ನಾವು
ಚಂದ್ರಶೇಖರನ ಕೃಪೆಯಿಂದ ।
ಇಂದು ಮರಳಿ ತಾಯಗರ್ಭದಿ ಬಂದಂತೆ
ಎಂದು ನುಡಿದರು ತಮ್ಮೊಳಗೆ ॥೫೨॥

ಬಂದ ದಂಡನು ಕಂಡು ರಾಮನಾಥನು ತನ್ನ
ತಂದೆಯ ಬಳಿಗಾಳ ಕಳಿಸಿ ।
ಒಂದು ದಿನಕೆ ಹತ್ತು ಸಾವಿರ ಹೊನ್ನನು
ಮಂದಿಯೆಲ್ಲಕೆ ಕೊಡಹೇಳಿ ॥೫೩॥

ವಸುಧೆಯಲ್ಲವು ಬೆಸಲಾದಂತೆ ತುರುಕರು
ದೆಸೆದೆಸೆಯಲ್ಲಿ ಪವುಜುಗಳು ।
ಅಸದಳವಾಗಿದೆ ಕಂಪಿಲರಾಯನ
ಹೊಸದುರ್ಗಕೆ ಹೋಗ ಹೇಳೊ ॥೫೪॥

ಇಂತೆಂದು ತಂದೆಗೆ ಹೇಳಿ ಕಳುಹಿದ ರಾಮ
ಸಂತೋಷದಿಂದ ನಗುತಿರ್ದ ।
ಸಂತೆಯ ತಗರಂತೆ ಹೊಳಚಿ ಕಾದುವೆನೆನ್ನ
ಪಂಥವ ನೋಡ ಹೇಳೆಂದ ॥೫೫॥

ದೇಶದಿಂದಲಿ ದೇಶಕೆ ಬಂದ ಬಾದುರ
ಆಸೆಯ ಮಾಡಿ ಮರೆಹೊಕ್ಕ ।
ಮೀಸಲಾಯಿತು ತಲೆ ಆ ಸುರಿತಾಳಗೆ
ಭಾಷೆಯ ಬಿ[ಡೆನೆಂ]ದ ರಾಮ ॥೫೬॥

ಸ್ವರ್ಗ ಮರ್ತ್ಯ ಪಾತಾಳದಿ ಕೀರ್ತಿಯ
ವೆಗ್ಗಳವಾಗಿ ಪಡೆವೆನುತ ।
ದುರ್ಗಕ್ಕೆ ತನಗೆ ಮದುವೆಯೆಂದು ರಾಮಯ್ಯ
ವೆಗ್ಗಳ ಮಾತನಾಡಿದನು ॥೫೭॥

ಎಂದು ನುಡಿದು ಕಂಪಿಲನೊಳು ರಾಮಯ್ಯ
ಮಂಡಲಪತಿಯೆ ನೇಮಿಯನು ।
ತಂಡು ಬೀಳಲಿ ಹೊಯ್ವೆನೆಂದು ನುಡಿದನಾಗ
ಗಂಡುಗಲಿ ರಾಮನಾಥ ॥೫೮॥

ಕದನಪ್ರಚಂಡ ರಾಮಯ್ಯನಾಡಿದ ಮಾತ
ಮುದದಿ ಮಾನ್ಯರು ಕೇಳಿ ಉಬ್ಬಿ ।
ಕದಬುತ ರಣಕೆ ಸಮ್ಮುಖನಾಗಿ ನಿಂದರು
ಚದುರ ರಾಮನ ಎಡಬಲದಿ ॥೫೯॥

ಹೇಳಿದ ಮಾತನು ಕೇಳುತ ಕಂಪಿಲ
ತಾಳಿದ ಮನದಿ ಚಿಂತೆಯನು ।
ಹಾಳಾಯಿತು ಹೊಸಮಲೆಯ ಕುಮ್ಮಟವೆಂದು
ಮೇಳೈಸಿದನು ಹೊಸಮಲೆಗೆ ॥೬೦॥

ಹೊಕ್ಕಳ ಗಂಟೆಯ ಐನೂರು ಕುದುರೆಯು
ಗಕ್ಕನೆ ರಾಮಗೆ ಕಳುಹಿ ।
ಎಕ್ಕಟಿಗರು ಕಾದುವ ಮಂದಿಯನೆಲ್ಲ
ಅಕ್ಕರಿಂದಲಿ ಕಳುಹಿದನು ॥೬೧॥

ಒಕ್ಕಲು ಮಕ್ಕಳು ಸಹವಾಗಿ ಪ್ರಜೆಗಳು
ಹೊಕ್ಕರು ದುರ್ಗವನೆಂದು ।
ದೊಕ್ಕನೆ ಹೊಸಮಲೆದುರ್ಗಕ್ಕೆ ಕಂಪಿಲ
ಚಕ್ಕನೆ ಬಾದುರ ಸಹಿತ ॥೬೨॥

ಹರಿಯಲದೇವಿಗೆ ಹರಿತಂದು ಸುದ್ದಿಯ
ಒರೆದರು ಊಳಿಗದವರು ।
ಅರಸಿ ಭಂಡಾರದ ಎರಡು ಬಿರಿದಿಗೆ ಹೊನ್ನ
ತರಿಸಿ ರಾಮಗೆ ಕಳುಹಿದಳು ॥೬೩॥

ಮನ್ನಿಸಿ ಮಂದಿಯ ತರುಬೆಂದು ಹರಿಯಮ್ಮ
ತನ್ನ ಮಗಗೆ ಹೇಳಿದಳು ।
ಹೊನ್ನನು ಕಳುಹಿಸಿಕೊಟ್ಟಳು ಹರಿಯಮ್ಮ
ಖಿನ್ನಳಾದಳು ಮನದೊಳಗೆ ॥೬೪॥

ಕೊಬ್ಬಿ ದಾಳಿಯಮಾಡಿ ಎನುತ ರಾಮಯ್ಯನು
ಸರ್ಬ ದಂಡಿಗೆ ಇದಿರಾಗಿ ।
ಹೆಬ್ಬಾಗಿಲ ತೆಗೆತೆಗೆಯೆಂದು ರಾವುತರು
ಗಬ್ಬಿ ರಾಮಗೆ ಭಾಷೆಗೊಡುತ ॥೬೫॥

ನಳಿನಸಖನು ಅಸ್ತಮಿಸಲು ಆಕ್ಷಣ
ಕಳೆಯ ದೋರಿತು ಕುಮ್ಮಟವು ।
ತಳೆದವು ಕೈದೀವಟಿಗೆ ಕೋಂಟೆಯ ಮೇಲೆ
ಹೊಳೆಯಿತು ಕಾವಲ ಮಂದಿ ॥೬೭॥

ಬಿಲ್ಲ ಮಂದಿಯು ಹರಿಗೆಯ ಮಂದಿ ಸಹವಾಗಿ
ಎಲ್ಲರೂ ಕೋಂಟೆಯ ಮೇಲೆ ।
ಎಲ್ಲಿ ನೋಡಿದರೆ ಆತುಳು ಎಕ್ಕಟಿಗರು
ಸೊಲ್ಲಿಗೆ ಎಡದೆರಹಿಲ್ಲ ॥೬೮॥

ಹರಿಯುತ ತಮ್ಮಟ ಭೇರಿಯ ರವದಲಿ
ಬಿರಿದನುಗ್ಗಡಿಸುವ ಭಟರು ।
ತರತರದಲ್ಲಿ ಕಾವಲುಮಂದಿ ದುರ್ಗದ
ಸಿರಿಯಾನನೇನ ಬಣ್ಣಿಸುವೆ ॥೬೯॥

ಈ ಪರಿಯಲಿ ಬೆಳಗಾಯಿತು ಕುಮ್ಮಟ
ಭೂಪನೆದ್ದನು ರಾಮನಾಥ ।
ಶ್ರೀಪತಿ ಶರಣೆಂದು ನಿಶ್ಚೈಸಿ ಕಾಳಗಕೆ
ಭಾಪುರೆಯೆಂದು ಮನದೊಳಗೆ ॥೭೦॥

ತನ್ನರಮನೆಗಾಗಿ ಬಂದನು ರಾಮಯ್ಯ
ಮನ್ನಯರೆಲ್ಲರ ಕರೆಸಿ ।
ಚೆನ್ನಾಗಿ ಊಟವ ಮಾಡಿಸಿ ಉಡಕೊಟ್ಟು
ಮನ್ನಿಸಿದನು ರಾಹುತರ ॥೭೧॥

ತಂದರು ವಸ್ತ್ರಾಭರಣವನು ಬೇಗದಿ
ಮುಂದಿರಿಸಿದರು ರಾಮಯ್ಯೆಗೆ ।
ಗಂಧ ಕಸ್ತೂರಿ ಕುಂಕುಮ ಕದಂಬವ
ಮಂದಿಯೆಲ್ಲಕೆ ಕೊಡುತಿರ್ದ ॥೭೨॥

ಎಡಗಾಲ ಬಿರಿದು ರಕ್ಕಸರಗಂಡನುಯೆಂದು
ಉಡಿಯ ಒಡ್ಡ್ಯಾಣ ವಂಕುಡಿಯು ।
ಜಡೆಗೆ ಮುತ್ತಿನ ದಂಡೆಗಳನಳವಡಿಸಿದ
ಕಡುಗಲಿ ಚೆನ್ನಿಗರಾಮ ॥೭೨॥

ಹರಳು ಕಡಗವನಿತ್ತನು ರಾಮನಾಥನು
ಬೆರಳ ಮುದ್ರಿಕೆಯನಳವಡಿಸಿ ।
ಧರೆಯ ರಾಯರ ಗಂಡನೆಂದೆಂಬ ಬಿರಿದನು
ಚರಣ ಪೆಂಡೆಯು ಉಲಿವುತಲಿ ॥೭೩॥

ಮುತ್ತಿನ ಖಂಡೆಯದೊಳಗೆ ಹೊಸತೆನಿಸುವ
ಉತ್ತಮ ನವರತ್ನಗಳು ।
ಹಸ್ತದಿ ಪಿಡಿದ ಗುಜ್ಜರಿ ಪಟ್ಟೆ ರಾಮಗೆ
ಮೃತ್ಯುಂಜಯನೆ ಜಯಯೆನುತ ॥೭೪॥

ಶರಧೀವ್ಯೆರಿಯ ಧುರಕೆ ಮುಂಚುವ ಬೊಲ್ಲನ
ಸುರಿತಾಳರಾಯ ಕುಠಾರ ।
ಅರಿರಾಯತಿಮಿರ ಮಾರ್ತಾಂಡನೆನಿಪ ರಾಮ
ಪಿರಿದು ಸಿಂಗರವ ಮಾಡಿದನು ॥೭೫॥

ಮುತ್ತಿನ ಜೋಡು ಚಿನ್ನದ ಜೋಡು ಪಚ್ಚದ
ಚಿತ್ರದ ಜೋಡು ವಜ್ರಾಂಗಿ ।
ಸುತ್ತ ಕಟ್ಟಿದ ಮೃಗದ ಜಲ್ಲಿಯ ಕುದುರೆಗೆ
ಮಸ್ತಕ ಮರೆವ ಲಲಾಟ ॥೭೬॥

ಬಿಟ್ಟು ಹೋಗದ ಸಂಗಡಿಗರೆಲ್ಲಕೆ ರಾಮ
ಕೊಟ್ಟನು ದಿವ್ಯಾಭರಣ ।
ಕಟ್ಟಣಿಲ್ಲದೆ ಪರಿವಾರಕ್ಕೆ ರಾಮಯ್ಯ
ಬಟ್ಟಲಲಿತ್ತ ವೀಳೆಯವ ॥೭೭॥

ಬಂದರು ಬಿರಿದಿನ ಬಂಟರು ಎಲ್ಲರು
ನಿಂದರು ರಾಮನಿದಿರಿನಲಿ ।
ಮುಂದೆ ಹೆಬ್ಬಾಗಿಲ ತೆರೆಯೆಂದು ರಾಮಯ್ಯ
ನಿಂದ ಮನ್ನೆರ ಪಚಾರಿಸುತ ॥೭೮॥

ಬಲುಹಾಯ್ತು ಕಾಳಗ ಕಾಟಣ್ಣ ನೀ ಹೋಗು
ಉಳುಹಬೇಡವೊ ಹೆಮ್ಮಕ್ಕಳನು ।
ತಳುಹದೆ ಪೋಗಿ ಹರಿಯಮ್ಮಗೆ ಹೇಳೆಂದು
ಒಲಿದು ನುಡಿದ ರಾಮನಾಥ ॥೭೯॥

ಎತ್ತಿತು ಮುತ್ತಿನ ಸತ್ತಿಗೆ ರಾಮಗೆ
ಮತ್ತೆ ಬಿರಿದಿನ ಟೆಕ್ಕೆಯವು ।
ಮತ್ತೊದರುವ ಬಿರಿದಿನ ಕಾಳೆ ರಾಮಯ್ಯ
ಮೊತ್ತದಿ ನಡೆದ ಕಾಳಗಕೆ ॥೮೦॥

ಅರರೆ ಕುಮಾರ ರಾಮಯ್ಯ ನೀನೆನುತಲಿ
ಧುರಧೀರ ನೀನಹುದೆಂದು ।
ಅರಿರಾಯರ ಕೆಣಕುವ ಛಲದಂಕನೆ
ಬಿರಿದನುಗ್ಗಡಿಸೆ ಪಾಠಕರು ॥೮೧॥

ಅಬ್ಬರದಲಿ ರಾಮನಿಳಿದನು ದುರ್ಗವ
ಹೆಬ್ಬಾಗಿಲ ತೆಗೆಸಿದನು ।
ನಿಬ್ಬರದಲಿ ಕಾಣುತಲೇರಿ ತಿವಿದರು
ಒಬ್ಬರೊಬ್ಬರು ಮೂದಲಿಸಿ ॥೮೨॥

ಸಾವಿರ ಡೊಳ್ಳು ಸಾವಿರ ನಿಸ್ಸಾಳವು
ಸಾವಿರ ಕಾಳೆ ಹೆಗ್ಗಾಳೆ ।
ಸಾವಿರದೇಳ್ನೂರು ವಾದ್ಯವು ಮೊಳಗುತ
ದೇವ ಹೊಕ್ಕನು ರಾಮನಾಥ ॥೮೩॥

ಎಡವಂಕವ ನೋಡಿದ ರಾಮನಾಥನು
ಬಿಡದಾಲುವ ಬಲವಂಕ ।
ಗಡಿಕೋಟೆಯ ಕಾಟನಾಯಕ ನೀ ಹೋಗು
ನಡೆ ಕೊಡಗಲ್ಲನೇರೆಂದ ॥೮೪॥

ಆಳುಗಳೆಲ್ಲರು ಪಿಳ್ಳಗೋಂಟೆಯನೇರಿ
ಕಳಿಪಿರಿ ಎಂದುಲಿವುತಲಿ ।
ಘೀಳೈಸಿತು ಮಾತಂಗಿಯ ದಂಡೆಲ್ಲ
ಕೊಳೆಯಾಡಿತು ಚೊದ್ಯವರಿಯ ॥೮೫॥

ಹಿಂದೆ ಕಟ್ಟಿತು ಕುಣಿಬಿಯ ಮಂದಿ ತುರುಕರ
ಮುಂದೆ ರಾಮನ ಸಬಳಿಗಳು ।
ಸಂಗಿದೆ ತುರುಬಿಕೊಂಡರು ಬಂದ ಮಂದಿಯ
ಕೊಂದರು ಕುಮ್ಮಟದಲ್ಲಿ ॥೮೬॥

ಹೋದ ಮಂದಿಯು ತಿರುಗದುಯೆಂದು ಮಾತಂಗಿ
ಮೂದಲಿಸುತ ಬಂದಳಾಗ ।
ಅಂದು ಕೊಲ್ಲಲು ರಾಮನ ಮಂದಿ ತುರುಕರ
ಮಾದಗಿತ್ತಿಯು ಬೆರಗಾಗಿ ॥೮೭॥

ಹೂಡೇದ ಒಳಗಿಂದ ಜೋಡಿಸಿ ಎಸೆದರೆ
ಜೋಡು ಹರಿದು ತಟಹಾಯ್ದು ।
ನೋಡಲಮ್ಮರು ಕೋಂಟೆಯ ಮೇಲೆ ತಲೆಯೆತ್ತಿ
ಬೇಡರು ಕವಿಕವಿದೆಸೆಯೆ ॥೮೮॥

ಹಲ್ಲಣ ಹಂಸಿಕೆ ಎಲ್ಲವ ಬಿಟ್ಟಾಗ
ಮೆಲ್ಲನೆ ತಗೆದೋಡಿದರು ।
ಬಲ್ಲಂತೆ ಕಡಿದಾಡಿ ಎನುತಲಿ ರಾಮಯ್ಯ
ಎಲ್ಲಕೆ ಕೈಬೀಸಿದನು ॥೮೯॥

ಹೊಣಕೆಯ ಮಂದಿ ಲಗ್ಗೆಯನೇರಿ ಕವಿದರು
ಒಳಗಾದರು ರಾಹುತರು ।
ತ(ಳೂ)ವಿಲ್ಲದೆ ಕುದುರೆಯನಾಳುಗಳನು
ಇಳೆಯೊಳು ಕೆಡಹಿ ಬೊಬ್ಬಿರಿದು ॥೯೦॥

ಹೆಣಮಯವಾಯಿತು ಕದನದೊಳೆಲ್ಲರು
ರಣಮಯವಭ್ರುತವಾಗಿ ।
ಹೊಣಕೆಯ ಮಂದಿ ಸರಿದು ಹೋಗೆ ರಾಮನ
ಕೆಣಕಿ ಕೆಟ್ಟೆವು ಎಂದೆನುತ ॥೯೧॥

ನುಗ್ಗು ಮಾಡಿಯೆ ಕಡಿದರು ಬಲವೆಲ್ಲವ
ಕಗ್ಗೊಲೆಯಲಿ ಹಲಕೆಲರ ।
ಮಗುಲೊಳಿರಿದು ಕೆಡಹಿದರು ಬೇಡರು
ನುಗ್ಗಾದುದೇನ ಬಣ್ಣಿಸುವೆ ॥೯೨॥

ಆನೆ ಕುದುರೆ ತಳತಂತ್ರ ಮಾರ್ಬಲವೆಲ್ಲ
ಆನಲಮ್ಮದೆ ಓಡಿದವು ।
ಖಾನ ವಜೀರರ ಎಬ್ಬಿಸಬೇಕೆಂದು
ಮಾನವಪತಿ ತೆರಳಿದನು ॥೯೩॥

ಅಟ್ಟಿ ಹೋದರೆ ರಾಮ ಬೆನ್ನಟ್ಟಿ ಕೊಲುವನೆಂದು
ಬಟ್ಟೆಯ ಹಿಡಿದು ಬೇಗದಲಿ।
ಕೆಟ್ಟೋಡಿತು ಮಾತಂಗಿಯ ದಂಡೆಲ್ಲ
ಅಷ್ಟದಿಕ್ಕಿಗೆ ಬಾಯಬಿಡುತ ॥೯೪॥

ದೆಸೆದೆಸೆಯಲಿ ಬಲು ಹೊಸಬಾಣ ಕರೆಯಲು
ಬಸಿವ ನೆತ್ತರು ಕೆಸರಾಗೆ ।
ಪೆಸರೆನಿಸುವ ಖಾನಖಾನರೆಲ್ಲರ ಕೊಂದು
ದೆಸೆವಡೆದನು ರಾಮನಾಥ ॥೯೫॥

ನಾಲ್ಕು ಕಾಲು ಹರಿದು ನೆಲದೊಳು ಬಿದ್ದರೆ
ನೂಕಲಮ್ಮವು ಕುದುರೆಗಳು ।
ಬೇಕೆಂದು ಮಾತಂಗಿ ಬಂದು ನಿಂತರೆ ರಾಮ
ತರ್ಕೈಸಿಕೊಂಡು ಕಾದಿದನು ॥೯೬॥

ಹರಿಗೆ ಹಲಗೆ ಕರುಷಾಣ ತೋಮರ ಖಂಡೆ
ಪರಶು ಪಟ್ಟೆಯು ಪಿಂಡಿವಾಳ ।
ಬೆರಸಿ ಹೋಯ್ದಾಡುವ ವಜ್ರಮುಷ್ಟಿಯಲಿ
ಧುರಧೀರ ರಾವುತರೇರಿದರು ॥೯೭॥

ಎರಡು ಲಕ್ಷವು ಕುದುರೆಯನೇರಿ ರಾಮನ
ತರುಬಿಕೊಂಡರು ಹೋಗಗೊಡದೆ ।
ಕೊರಳು ಹರಿದು ಕತ್ತರಿಸಲು ತುರುಕರು
ಒರಲುತಿರ್ದರು ಗಾಯದಲಿ ॥೯೮॥

ಕುದುರೆ ಕುದುರೆ ಸಂದಣಿಸೆ ರಾಮನ ಮೇಲೆ
ಕದುಬಿ ಕತ್ತಿಗಳ ಹೊಯ್ಲುಗಳು ।
ಕದಳಿಯ ವನದೊಳು ಮದಕರಿ ಹೊಕ್ಕಂತೆ
ಎದೆಗೆಡಿಸಿದನು ತುರುಕರನು ॥೯೯॥

ಖಂಡೆಯದಲಿ ಹೊಯ್ಯಲು ತಲೆ ತುಂಡ್ರಿಸಿ
ಗುಂಡಿಗೆ ಒಡೆದು ಡೆಂಡಣಿಸಿ ।
ತುಂಡು ತುಂಡಾಗಿ ಕಡಿದಾಡಿ ರಾಮನ ಮಂದಿ
ಗಂಡುಗಲಿಯ ಭಟರುಗಳು ॥೧೦೦॥

ತುರಕ ರಾವುತರೆಲ್ಲ ಕಾಡಿ ಮಡಿದರಾಗ
ಪರಿಯವನಾರು ಬಣ್ಣಪರು ।
ಮೊರೆವ ಮರುಳ ತಂಡಗಳುಣ ಬಂದವು
ಕರವ ಬಡಿದು ಕುಣಿವುತಲಿ ॥೧೦೧॥

ಕಂಡವ ಕಚ್ಚಿ ಹಾರುವ ಕಾಗೆ ಕರುಳಿನ
ಗೊಂಡೆವ ಪರಿವ ಜಂಬುಕನು ।
ತಂಡತಂಡದ ಭೂತಗಳುಂಡು ಕುಣಿದವು
ಕೊಂಡಾಡಿದವು ರಾಮಯ್ಯನ ॥೧೦೨॥

ತುರುಗರಾವುತರೆಲ್ಲ ಕಾದಿಯೆ ಮಡಿದರು
ಪರಿಯನಾನೇನ ಬಣ್ಣಿಸುವೆ ।
ಮೊರೆವ ಮರುಳ ತಂಡಗಳೂಣ ಬಂದವು
ಪರಿತಂದು ಹೀರಿ ತಿಂಬುತಲಿ ॥೧೦೩॥

ಹರಿದಲೆ ಕೋರೆದಾಡೆಯು ಪರಿದೊಡಲಿನ
ಪರಪೋಷಣನೆಂಬ ಮರುಳು ।
ಧುರದೊಳು ಸುರಿವ ನೆತ್ತರ ಹೆಣರಾಶಿಯ
ಸುರಿವುತ ಮರುಳು ಚಪ್ಪರಿಸಿ ॥೧೦೪॥

ಛಂದಛಂದದಲಿ ಭೂತಗಳುಂಡು ಬಂದವು
ಮುಂದೆ ಬೊಬ್ಬಿಡುತ ಕುಣಿವುತಲಿ ।
ಮುಂದಲೆಗಳ ಪಡಿದೆಳೆವುತ ಡಾಕಿನಿ
ಯಂದವನೇನ ಬಣ್ಣಿಸುವೆ ॥೧೦೫॥

ಬೆನ್ನ ಹತ್ತಿದ ಬಸುರಿನ ಕೆಂಗಣ್ಣಿನ
ಕೆನ್ನೆತನಕ ಪೆರ್ಬಾಯಿ ।
ಚೆನ್ನ ಡಾಕಿನಿಯರು ತಮಗೆಂದು ಕುಣಿವುತ
ಸನ್ನುತ ಭೂತವಲ್ಲಿಹವು ॥೧೦೬॥

ಒಪ್ಪಾದ ಹೆಣನ ಕಾಣುತ ಡಾಕಿನಿಯರು
ಚಪ್ಪಾಳೆಯಿಕ್ಕಿ ಕುಣಿವುತಲಿ ।
ಕುಪ್ಪಿರಿದಾಡಿ ಬೊಬ್ಬಿರಿವುತ ಭೂತವು
ಒಪ್ಪಿತು ಮರುಳ ತಿಂಥಿಣಿಯು ॥೧೦೭॥

ಈ ಪರಿಯಲಿ ಬಿಳಿವಿಡಿದು ಬಂದು ಬೇಗ
ಹೇಪವಾಹಿನಿಯೆಂಬ ಮರುಳು ।
ಆಪರೆ ತನಗೆ ತಂದಿಕ್ಕಿರಿಯೆನ್ನುತ
ಪಿಪ್ಪರಿವುತ ಚಿಪ್ಪರಿದು ॥೧೦೮॥

ಲೋಕದ ಮರುಳ ತಂಡಗಳೆಲ್ಲ ದಣಿದವು
ಲೋಕೈಕ ರಾಮ ನೋಡುತಲಿ ।
ಉಕ್ಕಿ ಕೋಯೆಂದು ಕೂಗಿಯೆ ಬೊಬ್ಬಿರಿವುತ
ಅಕ್ಕರಿಂದಲಿ ಏರಿದವು ॥೧೦೯॥

ಭಾಷೆಯ ಮಾಡಿ ಬಂದರು ಖಾನ ಖಾನರು
ಮೀಸಲ ತಲೆಗಳ ಕೊಂಡು ।
ಬೀಸುವ ಹೆ[ಬ್ಬ]ಲೆಯಂದದಿ ತುರುಕರು
ಘಾಸಿಯ ಮಾಡಿ ಮುತ್ತಿದರು ॥೧೧೦॥

ಹತ್ತಿತು ತಲೆವರಿಗೆಯನಿಕ್ಕಿ ತುರುಕರು
ಸುತ್ತ ಬಳಸಿ ಕೋಂಟೆಯನು ।
ಚಿತ್ರದ ಕೊಲೆಯ ಕೊಲಿಸುವುದ ನೋಡುತ
ಎತ್ತಿ ಹಾಕುವ ಲೆಗ್ಗೆದುಂಪು ॥೧೧೧॥

ಡೆಂಕಣಿ ಹರಿದು ಹೊಯ್ವ ಮರದಂಬಿಲಿ
ಬಿಂಕದ ಬೀಸುದೊಣ್ಣೆಗಳು ।
ಶಂಕೆಯಿಲ್ಲದ ಎಸುಗೆಯ ಕಂಡು ತುರುಕರು
ಅಂಕಶಂಕೆಯಲಿ ತಿರುಗಿದರು ॥೧೧೨॥

ಕಣಿಕಟಿಲೆಂದು ರಭಸವು ಕೋಂಟೆಯ ಮೇಲೆ
ಹಣೆ ಮೊಗವೊಡೆದು ಗಾಯದಲಿ ।
ಹೆಣಮಯವಾಯಿತು ಅಳವೇರಿಯ ಸುತ್ತ
ರಣವನಿಕ್ಕಿದರು ಕುಮ್ಮಟಕೆ ॥೧೧೩॥

ಕೋಟೆಗೆ ದಿಗುಬಲಿಗಳನಿಕ್ಕಿ ತುರುಕರ
ಕಾಟಣ್ಣ ಹಿಂದಕೆ ಮರಳಿ ।
ನಾಟಕವಲ್ಲ ರಾಮನ ಕೂಡೆ ಕಾಳಗ
ಕೋಟಲೆ ಬೇಡ ಹೋಗೆಂದ ॥೧೧೪॥

ಕಾದೆಣ್ಣೆಯ ಜೀರ್ಕೊಳವಿಯಲೆಸುಗೆಯ
ಬಾಧೆಗಳಿಗೆ ನಿಲ್ಲಬಾರದು ।
ಕಾದುವುದಸದಳವೆನುತ ಮಾತಂಗಿಯು
ಮೂದಲಿಸುತ ಹೇಳಿದಳು ॥೧೧೫॥

ಕಲ್ಲೊಳು ಕಾ(ಬಹು)ದು ರಾಮನ ಕೂಡ
ನಿಲ್ಲಬಾರದು ಮುಂದೆಯೆನುತ ।
ಬಲ್ಲಿದ ಖಾನಖಾನರು ಕೂಡಿ ತಾವಾಗ
ಬಿಲ್ಲರಖಾನಗೆ ಹೇಳೆ ॥೧೧೬॥

ಹಿಂದಕ್ಕೆ ತಿರಿಗಿ ಬಂದಳು ಮಾತಂಗಿಯು
ಒಂದು ಗಾವುದ ದಾರಿಯನು ।
ಸಂದೇಹವಾಯಿತು ಕಾದುವ ಬಗೆಯಲ್ಲ
ಎಂದು ಚಿಂತಿಸಿ ಮನದೊಳಗೆ ॥೧೧೭॥

ನಿಲ್ಲದೆ ತಮ್ಮೊಳು ತಾವು ಮಾತಾಡುತ
ಅಲ್ಲಿಹ ತೆಲುಗ ಮನ್ನೆಯರು ।
ಬಲ್ಲಿದ ರಾಮನ ಕೊಲಿಸಬೇಕೆನುತಲಿ
ಎಲ್ಲ ರಾಯರುಗಳ ಕರೆಸಿ ॥೧೧೮॥

ನವಲಕ್ಷ ತೆಲುಗರ ಗಂಡನೆಂಬ ಕಡೆಯವ
ಇವನಿಕ್ಕಬಹುದೆ ಕಾಲೊಳಗೆ ।
ತವಕದಿ ತಮ್ಮಮೊಳು ತಿಮಿತ ಕೋಪವ ತಾಳಿ
ಇವನ ಕೊಲ್ಲಿಸಬೇಕೆನುತ ॥೧೧೯॥

ಹೋಗಬೇಡವುಯೆಂದು ಆಗ ಮಾತಂಗಿಗೆ ।
ಏಗ್ಯೆದು ಎಲ್ಲ ಮನ್ನೆಯರು ।
ಬಾಗಿಲ ತೆಗೆದು ಕೊಟ್ಟೆವುಯೆಂದು ತೆಲುಗರು
ಕಾಗದಗಳ ಕಳುಹಿದರು ॥೧೨೦॥

ಬಂದ ಓಲೆಯ ನೋಡಿಕೊಂಡು ಮಾತಂಗಿಯ
ನಿಂದಳು ಸಂತೋಷದಿಂದ ।
ಮಂದಿ ಕುದುರೆ ಪರಿವಾರವು ಸಹವಾಗಿ
ಬಂದಳು ತಿರಿಗಿ ಕುಮ್ಮಟಕೆ ॥೧೨೧॥

ಹೇಳಿದ ಮಾತನು ಕೇಳಿ ಮಾತಂಗಿಯು
ದಾಳಿಯನಿಕ್ಕಿ ಕುಮ್ಮಟಕೆ ।
ಭಾಳಲೋಚನ ಕಣ್ಣುದೆರೆದಂತೆ ದುರ್ಗಕ್ಕೆ
ಕಾಳಗವನು ಗಂಟಿಕ್ಕಿದರು ॥೧೨೨॥

ತಿರಿಗಿ ಬಂದನು ಬೇಗ ಅಣ್ಣ ಕಾಟಣ್ಣನು
ಅರಮನೆಗಾಗ ತೆರಳಿದನು ।
ಅರಸಿಲ್ಲದ ಕಾಳಗ ಜಯಿಸದುಯೆಂದು
ಧುರಧೀರ ರಾಮ ನೀನೇಳೊ ॥೧೨೩॥

ಆಳ ಕಾದಿಸಿ ನೋಡುವರ ಗಂಡ ರಾಮಯ್ಯ
ಕೇಳಿ ಕಾಟಣ್ಣನ ಮಾತ ।
ತಾಳಿದನಾಗ ಮನದಿ ಸಂತೋಷವ
ಹೊಳೆವ ಚಂದ್ರನ ಪ್ರಭೆಯಂತೆ ॥೧೨೪॥

ಕಾಲನ ಕಡೆಯಾಟವಾಗಿದೆ ಕುಮ್ಮಟ
ಲೀಲೆಯಾಗಿದೆ ದುರ್ಗದೊಳಗೆ ।
ಬಾಲಕರೆಲ್ಲರು ಕೂಡಿ ಕಡಿದಾಡಿದರು
ಹೇಳಲಿನ್ನೇನ ತಲೆಗಿಚ್ಚ ॥೧೨೫॥

ಒಳಕೋಟೆ ಹೋಯಿತು ಕೇಳು ರಾಯರಗಂಡ
ಬಳಿಕ ನೀ ಮಾಡುವುದೇನು ।
ಒಳಗು ಕೊಟ್ಟರು ನಮ್ಮ ತೆಲುಗ ಮನ್ನೆಯರೆಲ್ಲ
ಇಳುಹೊ ಲೆತ್ತವ ಬೇಗಯೆನುತ ॥೧೨೬॥

ಹಾಸಂಗಿಯ ನೂಕಿದ ರಾಮನಾಥನು
ಕೇಶವ ಮುರಿದು ಸುತ್ತಿದನು ।
ಪೂಸಿದ ಗಂಧ ಪುನಗು ಕಸ್ತೂರಿಯನು
ದೇಶಾಧಿಪತಿಯೆದ್ದು ನಿಂದ ॥೧೨೭॥

ಮನ್ನೆ ಮನ್ನೆಯರೆಲ್ಲ ತುರುಕರಿಗೊಳಗಾದ
ರೆನ್ನುತ ಕೇಳಿ ಮನದೊಳಗೆ ।
ಇನ್ನಿದು ಚೋದ್ಯವೆಂದೆನುತಲಿ ರಾಮಯ್ಯ
ತನ್ನೊಳು ತಾನೆ ನಿಶ್ಚಯಿಸಿ ॥೧೨೮॥

ಈಗಲೆ ಕಡಿವೆನು ತುರುಕರ ದಂಡನು
ಹೋಗದೆ ಮಲೆತು ಕಾದುವೆನು ।
ಬೇಗದಿ ಎದ್ದು ಕಾಟಣ್ಣನ ಸಂಗಡ
ರಾಗದಿಂದಲಿ ಬೇಗ ನಡೆದ ॥೧೨೯॥

ತಿರುಗಿದ ತನ್ನರಮನೆಗಾಗಿ ರಾಮಯ್ಯ
ಅರಸಿಯರನು ಕಳಿಸಿದನು ।
ತರಿಸಿ ಮುತ್ತಿನ ಗದ್ದುಗೆ ಮೇಲೆ ಕುಳಿತಾಗ
ಹರುಷದಿ ಮಾತನಾಡಿದನು ॥೧೩೦॥

ಕಿಚ್ಚ ಕಂಡರೆ ಕಂಗೆಡಬೇಡಿ ಮನದೊಳು
ಒಚ್ಚೆಯ ತಂದುಕೊಳ್ಳೆನುತ ।
ನಿಶ್ಚೈಸಿ ತನ್ನ ಕೊಡೆನುತಲಿ ರಾಮಯ್ಯ
ಮೆಚ್ಚಿನ ಮಡದಿಗೆ ಹೇಳೆ ॥೧೩೧॥

ಮಡದಿಯರೆಲ್ಲರಿಗೆ ಉಸುರಿದ ರಾಮಯ್ಯ
ಮಡಿದನೆಂದರೆ ತನ್ನೊಳಗೆ ।
ಬಿಡುವುದು ಪ್ರಾಣವನೆನುತ ರಾಮಯ್ಯನು
ಮಡದೇರ ಮುಖವ ಮುಂಡಾಡಿ ॥೧೩೨॥

ಉಟ್ಟ ಪಟ್ಟೆಯ ದಟ್ಟಿ ಹೊನ್ನೋಲೆ ಸುರಗಿಯು
ನೆಟ್ಟನೆ ಏಕಾಂಗವೀರ ।
ಪಟ್ಟದರಸಿ ತಂದಳು ಅಮೃತಾನ್ನವ
ಬಟ್ಟಲೊಳಗೆ ಹದಮಾಡಿ ॥೧೩೩॥

ಮುಟ್ಟಿದ ಒಡಹುಟ್ಟಿದ ಕಾಟ ಮೊದಲಾಗಿ
ಬಟ್ಟಲೊಳಮೃತಾನ್ನವನು ।
ಕಟ್ಟಣೆಲ್ಲದೆ ಪರಿವಾರಕ್ಕೆ ರಾಮಯ್ಯ
ಬಟ್ಟಲೊ[ಳ್ಕೊಟ್ಟ] ವೀಳ್ಯಯವ ॥೧೩೪॥

ಉಂಬರೆ ವೇಳೆಯಿಲ್ಲೆನುತ ರಾಮನ ರಾಣಿ
ಕಂಬನಿ ತುಂಬಿ ಚಿಂತಿಸುತ ।
ತುಂಬಿತು ಹಣೆಯ ಬರೆಹ ಜಟ್ಟಂಗಿಯ
ಲಿಂಗನ ಕೃಪೆ ತಪ್ಪಿತೆನುತ ॥೧೩೫॥

ತನ್ನೊಡನೈದಿತು ನಾಲ್ಕು ಸಾವಿರ ಮಂದಿ
ಹೊನ್ನ ಕಟ್ಟಿನ ಬಿಲ್ಲಿನವರು ।
ಮನ್ನಿಸಿ ಕರ್ಪೂರ ವೀಳ್ಯವ ಕೊಟ್ಟನು
ಚೆನ್ನ ರಾಮುಗ ಧನುವಿಡಿದ ॥೧೩೬॥

ಧನುವ ಹಿಡಿದು ಚೆನ್ನಿಗ ರಾಮಯ್ಯನು
ಘನವಾದ ಕೋಪಾಟೋಪದಲಿ ।
ಚಿನುಮಯ ಜಟ್ಟಂಗಿ ರಾಮನೆ ಗತಿಯೆಂದು
ಅನುವಾಗಿ ಹೊರಟ ಕಾಳಗಕೆ ॥೧೩೭॥

ದಾರವಟ್ಟದಲಿ ನಿಂದನು ರಾಮನಾಥನು
ಆರಾರು ಬಿದ್ದರೆಂದೆನುತ ।
ವೀರಪರಾಕ್ರಮ ಮಂದಿ ಬಿದ್ದಿತುಯೆಂದು
ಸೂರೆಯಾದುದನೇನೆಂಬೆ ॥೧೩೮॥

ನಲ್ಲನಾಗನು ಬಿದ್ದ ಬಿಲ್ಲ ಸೋಮನು ಬಿದ್ದ
ಅಲ್ಲಿ ಮೀನಗೆ ಸಿಂಗ ಬಿದ್ದ ।
ಝಲ್ಲಿ ಬಿಲ್ಲಿನ ಬುಕ್ಕಿನಾಯಕ ಮೊದಲಾದ
ಕಲ್ಲಕೋಟೆಯ ಚಿಕ್ಕ ಬಿದ್ದ ॥೧೩೯॥

ಮೂದಲಿಸುತ ಮಾದಿಗರ ಹಂಪನು ಬಿದ್ದ
ಕಾದಿದ ಉದುರೆಗಳೊಡನೆ ।
ಸಾಧಿಸಿ ಒಳಹೊಕ್ಕು ಬಾಹಂತ ತುರುಕರ
ಬಾಧೆಯನೇನ ಬಣ್ಣಿಸುವೆ ॥೧೪೦॥

ಎಕ್ಕಟಿಗರು ಬಿದ್ದರು ಏಳು ರಾಮಯ್ಯನೆ
ಅಕ್ಕಸಾಲೆರ ಚಿಕ್ಕ ಬಿದ್ದ ।
ದಿಕ್ಕು ದಿಕ್ಕಿಗೆ ಬಲಿಗಳನಿಕ್ಕುವಂದದಿ
ರಕ್ಕಸ ಮನ್ನೆಯ ಬಿದ್ದ ॥೧೪೧॥

ಖಂಡೆಯಕಾರ ತುಳುವ ಮನ್ನೆಯ ಬಿದ್ದ
ಗಂಡುಗಲಿಯೆ ವೀರ ರಾಮ ।
ಕಂಡ ಜಗಳವನು ಕೊಂಡು ಬರುವನೀಗೆ
ಲೆಂಡ ಕೊಳ್ಳಿಯ ನಾಗ ಬಿದ್ದ ॥೧೪೨॥

ತೊಲಗದೆ ಹೊಯ್ದಾಡಿ ಅಲಗಿಗೆ ಗುರಿಯಾಗಿ
ಬಲವಂತ ಬೇವಿನ ಸಿಂಗ ।
ಕಲಿ ರಾಮ ನಿನ್ನ ಮೋಹದ ಎಕ್ಕಟಿಗನು
ಹೊಲೆಯರ ಬುಳ್ಳನು ಬಿದ್ದ ॥೧೪೩॥

ಹೇಳಿದ ಮಾತನು ಕೇಳಿ ರಾಮಯ್ಯನು
ತಾಳಿದ ಮನದಿ ಕೋಪವನು ।
ಹೋಳು ಹೋಳಾಗಿ ತುರುಕರನು ಕಡಿವೆನು
ಕಾಳಗದೊಳು ಮೊದಲಿಸಿ ॥೧೪೪॥

ಸಂಭ್ರಮದಲಿ ರಾಮನಿಳಿದನು ದುರ್ಗವ
ಕೊಂಬಿನ ನಾದ ಹೆಗ್ಗಾಳೆ ।
ಬೊಂಬುಳಿ ವಾದ್ಯ ನಿಸ್ಸಾಳದ ಧ್ವನಿಗಳು
ಭೋರಿಡುತೊದರೆ ನಾಲ್ದೆಸೆಗೆ ॥೧೪೫॥

ಸಾರಿ ಕೂಗುವ ಹೆಗ್ಗಾಳೆಯ ಧ್ವನಿಗಳು
ಭೋರಿಡುತೊದರೆ ನಾಲ್ದೆಸೆಗೆ ।
ಬರುತಾನೆ ದಾಳಿಯೆನುತ ರಾಮಯ್ಯನು
ಗಿರಿಗೆರಗುವ ಸಿಡಿಲಂತೆ ॥೧೪೬॥

ಭರದಿಂದ ದುರ್ಗವನಿಳಿದನು ರಾಮಯ್ಯ
ಅರಿಗಳು ನೋಡಿ ಬೆದರಿದರು ।
ಸರಸಿಜನಾಭನ ಪಾದವ ನೆನೆವುತ
ಸರಳ ಪಿಡಿದು ಝೇಂಕರಿಸಿ ॥೧೪೭॥

ವೀರ ರಾಮಯ್ಯನು ಧನುವ ಪಿಡಿದುಕೊಂಡು
ಸೇರಿಸಿ ಕೆನ್ನೆಗೆ ಸರಳ ।
ಬಾರುಬಾರಿನ ಮೇಲೆ ಎಚ್ಚರೆ ಕುದುರೆಯು
ಧಾರುಣಿಯೊಳು ಒರಗಿದವು ॥೧೪೮॥

ಕೋಲುಗಳಿಂದ ಎಚ್ಚರೆ ರಾಮಯ್ಯನು
ತೋಳು ನೊಂದವು ಬೆರಳೊಡೆದು ।
ಕಾಲಭೈರವನೆನಿಸುತಲಿ ರಾಮಯ್ಯನು
ಮೇಲುಗೈಯೆಂದು ಕೊಂಡಾಡೆ ॥೧೪೯॥

ವಾರುವನ ಮೇಲೆ ಬರುವ ಮಾತಂಗಿಗೆ
ತೋರಿದ ಶರದ ರಭಸವನು ।
ಧಾರುಣಿಯೊಳು ಚೆಲುವರ ಗಂಡ ರಾಮನ
ನೀರೆ ನೋಡಿದಳು ಮಾತಂಗಿ ॥೧೫೦॥

ಮಾದಗಿತ್ತಿಯ ತೋರೆನುತಲಿ ರಾಮಯ್ಯ
ಕಾದುತ ತವಕದಿ ಕೇಳೆ ।
ಮೂದಲಿಸುತ ಬಂದಳು ರಾಮಗಿದಿರಾಗಿ
ಕಾದುವೆನೆಂದು ಮಾತಂಗಿ ॥೧೫೧॥

ಉನ್ನತ ಬಹುಜಾಲ ನಾರಿ ಮಾತಂಗಿಯು
ಹನ್ನೆರಡು ಸಾವಿರ ಸಿಂಗಾಡಿ ।
ತನ್ನ ಸಮಾನ[ದ] ದೊರೆಗಳು ಸಹವಾಗಿ
ಚೆನ್ನಿಗ ರಾಮನ ಮೇಲೆ ॥೧೫೨॥

ರಕ್ಕಸ ಮಾದಗಿತ್ತಿಯು ತಾನೆಸೆದಳು
ಲೆಕ್ಕವಿಲ್ಲದೆ ಸಿಂಗಾಡಿ ।
ಸೊಕ್ಕಾನೆ ಕುದುರೆ ಕಾಲಾಳು ರಾಹುತರೆಲ್ಲ
ಇಕ್ಕೆಲದಲ್ಲಿ ಏರಿದರು ॥೧೫೩॥

ಸಿಡಿಲ ತಡಿಯು ಬಿಟ್ಟಂತೆ ಸಿಂಗಾಡಿಯು
ಕಡುಹಿಂದೆಸೆವ ಕಾರ್ಮುಳೆಯು ।
ಕಡುಗಲಿ ರಾಮನು ಮಾತಂಗಿಯ ಕಂಡು
ಪಿಡಿದೆಸೆದನು ಆರ್ಭಟದಿ ॥೧೫೪॥

ಪಡೆಮುರಿಯಿತು ಮಾತಂಗಿಯ ದಂಡೆಲ್ಲ
ಮಡಿದಳೆನುತ ಬೊಬ್ಬಿಡುತ ।
ತಡೆಯದೆ ರಾಮನು ಮುಖ ನೋಡಿ ಮನ್ನಿಸಿ
ನುಡಿದು ಮೂದಲಿಸಿ ಇಂತೆಂದ ॥೧೫೫॥

ಸಂಗ್ರಾಮದಲಿ ಕಾದಿ ಹೆಂಗೂಸ ಕೊಂದರೆ
ಭಂಗ ತಪ್ಪದು ಸ್ವರ್ಗದೊಳಗೆ ।
ಹಿಂದಿ ಹೋಗೆನುತಲಿ ಮುಂದಕ್ಕೆ ಬಿಡಲಾಗಿ
ಸಿಂಗಾಡಿಯನು ಪಿಡಿದೆಸೆಯೆ ॥೧೫೬॥

ಹೊಕ್ಕನು ಮೂದಲಿಸುತ ಮಾತಂಗಿಯ
ಇಕ್ಕೆಲದಲಿ ತರಕಸವು ।
ಲೆಕ್ಕವಿಲ್ಲದೆ ಅಂಬುಗಳ ತೆಗೆದೆಸೆಯಲು
ಗಕ್ಕನೆ ರಾಮನ ಮೇಲೆ ॥೧೫೭॥

ಆಳುತನದಿ ಬೊಬ್ಬರಿದೆಸೆಯಲು ಬಾಣ
ಕೀಲಿಸಿ ಎದೆಯ ತಟ್ಟುಚ್ಚೆ ।
ಕೋಳಾಹಳನು ನಸುನಗುತಲಿ ರಾಮಯ್ಯ
ಹಾಳಾಯ್ತು ಕುಮ್ಮಟವೆಂದ ॥೧೫೮॥

ಕಿತ್ತಿದ ರಾಮ ತನ್ನೆದೆಯ ಅಂಬುಗಳನು
ಒತ್ತಿ ಹರಿವ ರಗುತವನು ।
ಅತ್ಯಂತ ಹರುಷದಿ ನೋಡಿ ಮನದಿ ನೊಂದು
ಮತ್ತೆ ಖಾನರ ಗಂಡ ನುಡಿದ ॥೧೫೯॥

ರಾಮನು ಧರೆಯ ರಾಯರ ಗಂಡನೆಂದೆಂಬ
ನಾಮವಳಿಯಿತು ಇಂದಿನಲಿ ।
ಆ ಮಹಾವಿಧಿಯೆ ಎನ್ನುತ ನಿಸ್ಸೀಮನು
ಭೂಮಿಪಾಲಕ ರಾಮಯ್ಯ ॥೧೬೦॥

ಧಾರುಣಿಯೊಳು ತೋಳ ಬೀಸಿ ನಡೆವರ ಗಂಡ
ಗರುವ ರಾಯರ ಗಂಡನೆಂಬ ।
ಬಿರಿದುಗಳೆಯಿತೆ ಜಟ್ಟಂಗಿಯ ರಾಮನ
ವರಕೃಪೆ ತಪ್ಪಿತೆ ಎನುತೆ ॥೧೬೧॥

ಬಲವಂತ ರಾಮನ ಎಕ್ಕಟಿಗರು ತಮ್ಮ
ಅಲಗನುಗಿದು ಬೊಬ್ಬಿಡುತ ।
ಕೆಲಬಲದೊಳು ಬಾಣದ ಮಳೆಗರೆಯುತೆ
ಕೊಲರೊ ಎಂದು ಏರಿದರು ॥೧೬೨॥

ಸಮರದೊಳಗೆ ಕುಮಾರ ಕಾಟಣ್ಣನು
ಕ್ರಮಗೆಡಿಸಿದನು ಮಾರ್ಬಲವ ।
ಸಮರದೊಳಗೆ ಭೀಮನಿವನೆಂದು ತುರುಕರು
ಸಮನದಿ ಕೊಂಡಾಡಿದರು ॥೧೬೩॥

ಕೆಣಕಲು ಕಿಚ್ಚಿನ ರೋಷದೆಕ್ಕಟಿಗರು
ರಣಮಯವಭ್ರುತವಾಗೆ ।
ದಣಿಯದೆ ಬಾಣದ ಬಸವಯ್ಯನು ಬಂದು
ಹಣಿದನು ಖಾನ ಮಲ್ಲುಕರ ॥೧೬೪॥

ಹೆಬ್ಬುಲಿ ಪಶುವಿನ ಹಿಂಡಿನೊಳಗೆ ಪೊಕ್ಕು
ಅಬ್ಬರದಲಿ ಹೊಯ್ವಂತೆ ।
ತಬ್ಬಿಬ್ಬುಗೊಳ್ಳದೆ ಬಾಣದ ಬಸವಯ್ಯ
ಬಿದ್ದನು ಸಂಗ್ರಾಮದೊಳಗೆ ॥೧೬೫॥

ಇಟ್ಟಣಿಸುತ ಬಾಗಿಲ ಮುಂದೆ ತುರುಕರು
ಒಟ್ಟಿದರು ಹೆಣದ ರಾಶಿಗಳ ।
ಅಟ್ಟಟ್ಟಿ ಬಡಿದಾಡುತ ರಾಮನ ದಂಡು
ನೆಟ್ಟನೆ ರಾಯ ರಾಹುತರು ॥೧೬೬॥

ಹುಲಿಮುಖದಲಿ ಕವಿದೇರಲು ತುರುಕರು
ಕಲಿ ರಾಮನ ಕೆಲಬಲನ ।
ಅಲಗಿನ ತಡಿಯ ಬಿಟ್ಟಂತೆ ಕಾಲಾಳ
ತಲೆಗಳ ಚೆಂಡಾಡುತಿರಲು ॥೧೬೭॥

ಮುಂದಾಗಿ ಬಾಹಂತ ಮಂದಿಯ ಕೊಂದನು
ಮಂದಮತಿಯ ಖಾನರನು ।
ನಿಂದನು ಗೂಗೆಗಲ್ಲಿನ ಮೇಲೆ ರಾಮಯ್ಯ
ಮಂದಿ ಬಿದ್ದಿತು ಹಿಂದೆ ಮುಂದೆ ॥೧೬೮॥

ಜೋಡಿಸಿ ಕವಿದೆಸೆವ ಬಾಣಗಳ ನೋಡಿ
ರೂಢೀಶ ರಾಮ ನಗುತಿರ್ದ ।
ಕೊಡೆ ಗಾಯವು ಸೋಂಕಲು ಗೂಗೆಗಲ್ಲಿನ
ಅಡಿಯಲಿಳಿದ ರಾಮನಾಥ ॥೧೬೯॥

ಕಾಟಣ್ಣನೊಂದ ಕಡೆಯಲಿ ಕಾದುತಲಿರ್ದ
ನೋಟವು ರಾಮನ ಮೇಲೆ ।
ಕೂಟದ ಮಂದಿ ಸಂಗ್ರಾಮವನು ದಾಟಿ
ಕಾಡ ರಾಮನ ಕಂಡನಾಗ ॥೧೭೦॥

ಹರಿದು ಬಂದು ಹೊರಳಿದನು ಕಾಟಣ್ಣನು
ದೊರೆ ರಾಮನ ಕಾಲಮೇಲೆ ।
ಪರಬಲಾಂತಕ ವೈರಿಯ ಗಂಡನೆಂಬುವ
ಬಿರುದು ಸಲ್ವುದು ರಾಮ ನಿನಗೆ ॥೧೭೧॥

ಕಡುಗಲಿ ಕಾಟನ ಕರೆದು ಹೇಳಿದನಾಗ
ದೃಢಗಲಿ ಚೆನ್ನಿಗರಾಮ ।
ಪಡೆ ಮುಡಿಯಿತು ಅರಮನೆಗೆ ನೀ ಹೋಗಯ್ಯ
ಒಡೆಯರಿಲ್ಲವು ಹೆಮ್ಮಕ್ಕಳಿಗೆ ॥೧೭೨॥

ಒಡಹುಟ್ಟಿದನ ಬಿಟ್ಟು ಬಂದರೇನೆಂಬಳು
ಪಡೆದ ತಾಯಿಯು ಹರಿಯಮ್ಮ ।
ಕಡುಗಲಿ ನೀ ಹೋಗೆನುತ ಕಾಟಣ್ಣನ
ಅಡಿಗೆರಗಿದನು ರಾಮಯ್ಯ ॥೧೭೩॥

ಅಡಿಗೆರಗಿದ ರಾಮಯ್ಯನ ಮುಖನೋಡಿ
ಒಡಲ ಗಾಯವ ಸೋಂಕಿದಂತೆ ।
ತಡೆಯದೆ ನಮ್ಮ ಭಾಗ್ಯಕೆ ಕಡೆಯನುತಲಿ
ಒಡಹುಟ್ಟಿದ ರಾಮವೆನುತ ॥೧೭೪॥

ಪಡೆದ ತಾಯಿ ಹರಿಯಮ್ಮಗೆ ಬೇಗದಿ
ಕಡೆಯವನೊಪ್ಪಿಸೊ ಅಣ್ಣ ।
ಒಡಹುಟ್ಟಿದನ ಮಾತ ಕೇಳಿ ಕಾಟಣ್ಣನು
ಒಡಲೊಳು ಕಿಚ್ಚ ಕೊಂಡಂತೆ ॥೧೭೫॥

ಪುಣ್ಯವು ಇಲ್ಲಿಗೆ ಹಾಳಾಗಿ ಹೋಯಿತು
ಕಣ್ಣೊಳಗಲಗು ಮುರಿದಂತೆ ।
ಸುಣ್ಣ ಸಾಸುವೆಯನು ಒಡಲೊಳು ಹೊಯ್ದಂತೆ
ಎನ್ನುತ ಕಾಟಣ್ಣ ನುಡಿದ ॥೧೭೬॥

ಜೀವಗಳ್ಳರ ಗಂಡ ಎನ್ನ ಸೋದರ ರಾಮ
ಆವಲ್ಲಿ ಗಾಯವಡೆದೆಯೊ ।
ದೇವ ಜಟ್ಟಂಗಿ ರಾಮನ ಕೃಪೆ ತಪ್ಪಿತೆ
ಭಾವಜರೂಪ ರಾಮಯ್ಯ ॥೧೭೭॥

ದಾರು ಎಚ್ಚರೊ ಚೆಲ್ವರ ಗಂಡ ರಾಮಯ್ಯ
ಧಾರುಣಿ ರಾಯರ ಗಂಡ ।
ತೋರಿಸು ನನಗಾವ ಖಾನ ವಜೀರನೊ
ಬೇರ ಸಹಿತ ಕಿತ್ತಿ ತರುವೆ ॥೧೭೮॥

ಹೆಂಗುಸೆನುತ ಬಿಟ್ಟೆ ಮಾದಗಿತ್ತಿಯನು
ಸಂಗ್ರಾಮದಲಿ ಕವಿದೆಸೆಯೆ ।
ಹಿಂಗದೆ ಬಾಣ ಎದೆಯ ತಾಕಿದವಿನ್ನು
ಕಂಗೆಡಬೇಡ ಕಾಟಣ್ಣ ॥೧೭೯॥

ನನ್ನ ಸಂತೋಷಕ್ಕೆ ಕಿಚ್ಚನಿಕ್ಕಿದೊ ರಾಮ
ಮಾನ್ಯ ವಜೀರರ ಗಂಡ ।
ಇನ್ನಾವ ಕಾಲಕ್ಕೆ ನಿನ್ನಂಥ ಬಿರಿದುಳ್ಳ
ಮಾನ್ಯರ ಕಾಣೆನೊ ತಮ್ಮ ॥೧೮೦॥

ಇರುವೆಯ ಗೂಡಿಗೆ ಕಿಚ್ಚನಿಟ್ಟಂತಾಯ್ತು
ಅರಿಬಿರಿದಿನ ಪಂಥಕಾರ ।
ಹರಿಯಮ್ಮ ಗೇನೆಂದು ಹೇಳಲೊ ಅಪ್ಪಾಜಿ
ಸುರಿವರೊ ಕಂಗಳ ನೀರ ॥೧೮೧॥

ಕಂಗೆಡದಿರಲೆಂದು ಕಂಪಿಲ ಹರಿಯಮ್ಮ
ಸಂಗ್ರಾಮದಲಿ ರಾಮ ಕಾದೆ ।
ಹಿಂಗದ ಕೀರ್ತಿಯಾಯಿತು ನಮ್ಮ ತಂದೆಗೆ
ಅಂಗನೆಯರಿಗೆಲ್ಲ ಉಸುರೊ ॥೧೮೨॥

ಹೋಯಿತು ಎನ್ನ ಪರಾಕ್ರಮ ಕೀರ್ತಿಯು
ಬಯಲಾಯ್ತು ಇಂದಿನ ದಿನದಿ ।
ಸಾಹಸವಡಗಿತು ಸಾವು ತಾನೊದಗಿತು
ಮಾಯವ ವಿಧಿ ಬಂದು ಎನಗೆ ॥೧೮೩॥

ಹೋಗೋ ಬೇಗದಿ ನನ್ನ ಅಣ್ಣಾಜಿ ಕಾಟಣ್ಣ
ಹೋಗೋ ಅಭಿಮಾನಿಗಳ[ರಸ] ।
ಹೋಗೋ ಎನ್ನಾಣೆಯೆನ್ನುತ ರಾಮನಾಥನು
ಬಾಗಿದ ಕಾಟಗೆ ಶಿರವ ॥೧೮೪॥

ತಂದೆಯ ವಂಶಕೆ ಕುಂದ ತಂದವನಲ್ಲ
ಅಂದೆ ಕೊಂದಳು ಚಿಕ್ಕಮ್ಮ ।
ಕಂದರ್ಪರೂಪ ಕಾಟಣ್ಣ ಹೋಗೆನುತಲಿ
ನೊಂದು ನುಡಿದ ರಾಮನಾಥ ॥೧೮೫॥

ತಲೆ ಹೋಗುತನಕ ನೀ ನಿಲಬೇಡ ಕಾಟಣ್ಣ
ಕೊಲು ಹೋಗು ರಾಣಿವಾಸವನು ।
ತಳುಹು ಮಾಡಲಿ ಬೇಡ ಹೋಗೆಂದ ರಾಮನು
ಬಳಲುತ ಕಾಟ ಮನದೊಳಗೆ ॥೧೮೬॥

ಇನ್ನು ಈ ಗಾಯದಿ ಉಳಿದೆ ಎಂಬುವುದೀಗ
ನಿನ್ನಾಣೆ ಕಾಣೆನೊ ತಮ್ಮಾ ।
ಮನ್ನಿಸೋ ನಿನ್ನ ಪ್ರಾಣವನೊಂದು ಗಳಿಗೆಯಲಿ
ನಿನ್ನ ಕೂಡುವೆನೊ ರಾಮಯ್ಯ ॥೧೮೭॥

ಅಂಗವ ಕೊಡಬೇಡ ನಾನು ಬರುವ ತನಕ
ಸಂಗ್ರಾಮವನು ಮಾಡಬೇಡ ।
ಕಂಗಳು ಮೂರುಳ್ಳ ಮಂಗಳ ಜಟ್ಟಂಗಿ
ಲಿಂಗನ ಕೃಪೆ ತಪ್ಪಿತಣ್ಣ ॥೧೮೮॥

ತರಹರಿಸದೆ ಓಡಿ ಬಂದನು ಕಾಟಣ್ಣ
ಉರಿಗೊಂಡ ಪುತ್ಥಳಿಯಂತೆ ।
ಅರಸಿಯರರಿತರು ಆಗಲೆ ಸುದ್ದಿಯ
ಧುರಧೀರ ರಾಮನೇನಾದ ॥೧೮೯॥

ಅಂಬಿನ ಮಳೆಯಲೋಲಾಡಿದ ರಾಮಯ್ಯ
ಇಂಬುಗೊಡದೆ ತರಿದೊಟ್ಟಿ ।
ಅಂಬರ ಕುಸುಮದ ತೆರನಂತೆ ರಾಮನು
ನಂಬಿದ ವೈಕುಂಠವನು ॥೧೯೦॥

ಹೇಳಿದ ಕಾಟನ ನುಡಿಗೇಳಿ ಕಂಪಿಲ
ಒರಗಿದನಾಗ ಮೂರ್ಛೆಯಲಿ ।
ಕೇಳಿದಾಗಳೇ ಹರಿಯಮ್ಮನು ಸುದ್ದಿಯ
ಗೋಳಿಟ್ಟು ಹುಡಿಯಲ್ಲಿ ಹೊರಳಿ ॥೧೯೧॥

ಕಡುಗಲಿ ರಾಮನ ಒಡಹುಟ್ಟಿದರೆಲ್ಲ
ಹುಡಿಯಲ್ಲಿ ಬಿದ್ದು ಹೊರಳಿದರು ।
ಮಡದಿಯರು ದುಃಖದ ಕಡಲೊಳು ಮುಳುಗುತ
ಗಡಗಡ ಉರುಳತಲಿಹರು ॥೯೨॥

ತಡಮಾಡ ಸಲ್ಲದು ಎನುತ ರಾಮಯ್ಯನ
ಮಡದಿಯರೆಲ್ಲ ಶೃಂಗರಿಸಿ ।
ತಡೆಯದೆ ಕರೆತನ್ನಿ ಎನುತ ಕಾಟಣ್ಣನು
ನುಡಿದನು ಹರಿಯಮ್ಮನೊಡನೆ ॥೯೩॥

ಗಾಢದಿ ಕೊಂಡವ ಮಾಡಿಸಿ ಆಗಲೆ
ರೂಢಿಗೆ ಹೊಸ ಪರಿಯೆನಿಸಿ ।
ಪಾಡುಪಾಡಿಲಿ ಶ್ರೀಗಂಧದ ಕೊರಡನು
ಜೋಡಿಸಿ ಕಿಚ್ಚನಿಕ್ಕದರು ॥೯೪॥

ಧಗಧಗಿಸುವ ಕೊಂಡವನಾಗ ನೋಡಿದರು
ಮಿಗೆ ಚೆಲ್ವ ರಾಮನರಸಿಯರ ।
ಆಗ ಬೇಗದಿ ಬರಹೇಳೆಂದ ಕಾಟಣ್ಣ
ಸಾಗಿಸಿದನು ಕೊಂಡದೆಡೆಗೆ ॥೯೫॥

ಕರೆಸಲಾಕ್ಷಣದಲ್ಲಿ ರಾಮನ ಮಡದೇರು
ಹರುಷದಿಂದೈವರು ಕೂಡಿ ।
ನೆರೆದಿದ್ದ ಪ್ರಜೆ ಪಟ್ಟಣವೆಲ್ಲ ಮರುಗುತ
ಇರದೆ ದುಃಖದಿ ಲೋಲಾಡಿದರು ॥೯೬॥

ಬಂದರು ರಾಮನ ಮಡದಿಯರೆಲ್ಲರು
ಚೆಂದ ಚೆಂದದಿ ಮರೆವುತಲಿ ।
ಇಂದೆಮ್ಮ ಜೋಡನಗಲುವರೆ ಚೆನ್ನಿಗರಾಮ
ಕಂದರ್ಪರೂಪ ಹಾ ಎನುತ ॥೯೭॥

ವೀರಾಧಿವೀರ ಹಾ ಧೀರ ಶೂರಾ ಹಾ ಹಾ
ಮೂರಾಂತರ ಗಂಡ ಹಾ ಹಾ ।
ಧಾರುಣಿಯೊಳು ಚೆಲ್ವರ ಗಂಡ ಹಾ ಎಂದು
ನಾರಿಯರೆಲ್ಲ ಮೆರೆದರು ॥೧೯೮॥

ಮಳಲಗೌರಿಯ ನೋಂತರು ಏಳು ಜಲ್ಮಕೆ
ಕಳೆಯುಳ್ಳ ರಾಮನೆ ಗಂಡ ।
ಇಳೆಗಧಿಪತಿ ಕಂಪಿಲ ಮಾವನಾಗಲಿ
ಹರಿಯಮ್ಮನೆ ಅತ್ತೆ ನಮಗೆ ॥೧೯೯॥

ಓಡಿಬಂದರು ಕೊಂಡವಸುತ್ತಿ ಕಟ್ಟೆಯ
ಗಾಢದಿ ಹತ್ತಿಕೊಂಡಿಹರು ।
ರೂಢೀಶ ಕಾಟಣ್ಣ ನೋಡುತ ನಿಂದನು
ಪಾಡುತ ಧುಮುಕಿದರಾಗ ॥೨೦೦॥

ಕಿಚ್ಚು ಹಾಯ್ವಾಗಲೇ ಹೆಚ್ಚಿತ ಬೊಬ್ಬೆಯು
ಬೆಚ್ಚಿತು ಹೊಸಮಲೆದುರ್ಗ ।
ಮತ್ಸ್ಯಗಂಗಳೆಯರಿಗೆ ಕಿಚ್ಚು ಕಾಣಿಸಿ ಕಾಟ
ನಿಶ್ಚೈಸಿ ತಿರುಗಿದನಾಗ ॥೨೦೧॥

ತನ್ನರಮನೆಗಾಗಿ ಬಂದನು ಕಾಟಣ್ಣ
ಪುಣ್ಯಾಂಗನೆಯರ ನೋಡಿದನು ।
ಮನ್ನೆಯ ರಾಮನ ಮಡದೇರ ಕೊಂದೆನು
ನಿನ್ನ ಹದನ ಹೇಳೆಂದ ॥೨೦೨॥

ತಡಮಾಡಲೇತಕೆ ಕಡಿ ಬೇಗಯೆನುತಲಿ
ಕಡು ಬೇಗ ಕಾಟಣ್ಣನರಸಿ ।
ಬಿಡು ತನ್ನ ಮೇಲಣಾಸೆಯನೆಂದು ನುಡಿದಳು
ಮಡದಿ ತನ್ನರಸನ ಕೂಡೆ ॥೨೦೩॥

ಮರೆಮಾತು ಯಾಕೆ ಎನಗೆ ಜೀವದಾಸಿಲ್ಲ
ಇರಿಯೆಂದು ಎದೆಯನೊಡ್ಡಿದಳು ।
ಕರದಲ್ಲಿ ಪಿಡಿದ ಖಂಡೆಯವನ್ನು ಝಳಪಿಸಿ
ಉರದ ಮೇಲಿರಿದ ಕಾಟಣ್ಣ ॥೨೦೪॥

ಸುರಿದ ರಗುತವ ಕಂಡು ಬಾಯೊಳು ಬಾಯಿಟ್ಟು
ಒರಗಿಸಿ ತನ್ನರಸಿಯನು ।
ಉರಿಗೆಂಡವುಡೆದಲ್ಲಿ ಹೋದನು ಮರುಗುತ
ತಿರಿಗಿದ ರಾಮನಿದ್ದೆಡೆಗೆ ॥೨೦೫॥

ಹತ್ತು ಸಾವಿರದ ಸಿಂಗಾಡಿಯ ತುರುಕರು
ಮತ್ತೆ ರಾಮನ ಮುಸುಕಿದರು ।
ಸುತ್ತ ತಿರಿಗಿ ನೋಡಿದ ಕಾಟಣ್ಣನು
ಎತ್ತ ಹೋದಳೋ ಮಾದಗಿತ್ತಿ ॥೨೦೬॥

ಕರುಳು ಹರಿದು ಚೆಲ್ಲಿ ಈಡಾಡಿ ಅವಳ ಸೀಳಿ
ಸುರಿವೆನು ರಗುತವನೆನುತ ।
ದೊರೆ ರಾಮ ತಮ್ಮನ ಕೊಂದಳೆನುತಲಿ
ಇರದ ಗಾಯದಲಿ ಬೊಬ್ಬಿರಿದ ॥೨೦೭॥

[ಅದ್ಧ]ರಿಸುತ ಖಾನಖಾನರ ಕಡಿದನು
ಹದ್ದು ಸರ್ಪನ ಪೊಯ್ವಂತೆ ।
ಮೇದಿನಿಯೊಳು ಇಂಥ ಒಡಹುಟ್ಟುಯಿಲ್ಲೆಂದು
ಕಾದಿದ ರಣವನೇನೆಂಬೆ ॥೨೦೮॥

ಮಡದಿಯ ಎನ್ನ ಒಡಹುಟ್ಟಿದ ಕಾಟಣ್ಣ
ಕಡಿದೆಯೊ ಖಾನಮಲ್ಲುಕರ ।
ಬಿಡದೆ ನಾ ನಿಮ್ಮೊಡನೆ ಪಯಣವಾದೆನೊ
ನುಡಿದನು ಚೆನ್ನಿಗರಾಮ ॥೨೦೯॥

ನಟ್ಟವು ಸರಳು ರಾಮಯ್ಯನ ಮೈತುಂಬ
ಬಟ್ಟನೂರಲು ತೆರಹಿಲ್ಲ ।
ದಿಟ್ಟ ಕುಮಾರ ರಾಮಯ್ಯ ಬೊಬ್ಬರಿದರೆ
ಬೆಟ್ಟವೆಲ್ಲವು ಆರ್ಬಟಿಸೆ ॥೨೧೦॥

ನೆಟ್ಟಿದ್ದ ಕೂರಂಬುಗಳ ಗಾಯಕ್ಕೆ
ಕೆಟ್ಟಿತು ಕುಮ್ಮಟವೆಂದ ।
ದಿಟ್ಟ ಕಂಪಿಲನ ದೆಸೆಯು ಹರಿಯಿತುಯೆಂದು
ಬಿಟ್ಟನು ಪ್ರಾಣ ರಾಮಯ್ಯ ॥೨೧೧॥

ಧುರಧೀರ ರಾಮನ ಮನವ ನೋಡುವೆನೆಂದು
ಪರಮೇಶ್ವರ ಪ್ರಾಣನಿಟ್ಟ ।
ತೆರೆದನು ಕಣ್ಣು[ಗಳನು] ತುರುಕರನಾಗ
ಇರಿದು ಕೊಲ್ಲುವೆನೆಂದು ಗಮಿಸಿ ॥೨೧೨॥

ಇರಿವೆನೆನುತ ರಾಮ ಮುಂದಕ್ಕೆ ನಡೆದನು
ಸುರಲೋಕದ ನಾರಿಯರು ।
ಕರೆದೊಯ್ವೆವೆನುತ ತಮ್ಮೊಡನೆ ಯೋಚನೆಮಾಡಿ
ಚರಣವ [ಹಿಂಬಾಲಿಸಲು] ॥೨೧೩॥

ಪರನಾರಿಯರ ಸಹೋದರನೆಂಬ ಸತ್ಯವು
ಬರಿದು ದಕ್ಕಿದರೆ ಸಾಕೆನುತ ।
ಧರೆಯೊಳು ವ್ರತಗೆಟ್ಟನೆಂದೆಂಬುದಪಕೀರ್ತಿ
ಹೊರಬಾರದೆಂದು ತಿರುಗಿದನು ॥೨೧೪॥

ಜರಿದು ನಾರಿಯರ ರಾಮನು ನೋಡೆ ನಿಂದರು
ಹರುಷದಿ ನುಡಿದ ನುಡಿಗೇಳಿ ।
ವರಕರ್ಣಗಳ ಮುಚ್ಚಿ ಇದ ಕೇಳಬಾರದು
ಹರಹರಯೆನುತ ಹಿಮ್ಮೆಟ್ಟೆ ॥೨೧೫॥

ಬಿಟ್ಟಗಣ್ಣುಗಳ ಕಾಣುತ ಬರುತಹನೆಂದು
ಬಿಟ್ಟೋಡಿತು ಖಾನರುಗಳು ।
ಮುಟ್ಟಲಮ್ಮದೆ ಮಾತಂಗಿಯ ಪರಿವಾರ
ಕಟ್ಟಕಡೆಯಲಿ ನಿಂದಿಹರು ॥೨೧೬॥

ಕೂಗುತ ಬಂದು ರಾಮಯ್ಯನ ಮೇಲೊಂದು
ಕಾಗಿ ಕುಳ್ಳಿರೆ ಸತ್ತನೆಂದು ।
ಸಾಗಿ ಬಂದಿತು ಮಾತಂಗಿಯ ದಂಡೆಲ್ಲ
ಬೇಗ ರಾಮನ ಸುತ್ತ ಬಳಸಿ ॥೨೧೭॥

ಮುತ್ತಿತು ಸಬಳದ ಮಂದಿ ರಾಮಯ್ಯನ
ಒತ್ತಿ ತಿವಿದು ನೂಕಿದರು ।
ಹತ್ತೆನಿಂದಾಗ ಮಾತಂಗಿಯ ಖಾನರು
ಸತ್ತನೆನುತ ತಲೆಗೊಯೆ ॥೨೧೮॥

ಮುತ್ತು ಮಾಣಿಕ್ಯ ನವರತ್ನ ಬಾಯೊಳು ತುಂಬಿ
ಕಸ್ತೂರಿಯನು ಪೂಸುತಲಿ ।
ಸುತ್ತಿ ದೇವಾಂಗದ ರಾಮನ ತಲೆ ನೋಡಿ
ಅತ್ತರು ಖಾನ ಮಲ್ಲುಕರು ॥೨೧೯॥

ಸಾಯಬಹುದೆ ಚೆನ್ನಿಗ ರಾಮನೆನುತಲಿ
ರಾಯ ವಜೀರರ ಗಂಡ ।
ಕಾಯಜರೂಪಯೆನುತ ಖಾನ ಮಲ್ಲುಕರು
ಹಾಯೆಂದು ಬಟ್ಟ ಕಚ್ಚಿದರು ॥೨೨೦॥

ಗಂಧ ಕುಂಕುಮ ಕದಂಬ ಕಸ್ತೂರಿ ತುಂಬಿ
ತಂದು ರಾಮಗೆ ಉಪಚರಿಸಿ ।
ತಂದರು ಖಾನರು ಮಲ್ಲಿಗೆ ಮಾಲೆಯ
ಛಂದ ಛಂದದಲಿ ಶೃಂಗರಿಸಿ ॥೨೨೧॥

ಮನವೇಗ ತೇಜಿಯ ತಂದರು ಬೇಗದಿ
ಘನವೀರ ರಾಮನ ತಲೆಯ ।
ದಿನಕರ ಉದಯವಾಗದ ಮುನ್ನ ಹೋಗೆಂದು
ಜನಪತಿ ಸುರಿತಾಳ ಬಳಿಗೆ ॥೨೨೨॥

ಬಂದರು ನಾಲ್ಕು ದಿವಸ ಒಂದು ದಿನಮಾಡಿ
ಬಂದಿತು ಡಿಳ್ಳಿ ಪಟ್ಟಣಕೆ ।
ಮುಂದಾಗಿ ಬಂದು ಹೇಳಿದರು ಸುರಿತಾಳಗೆ
ನೊಂದು ವೀಳ್ಯವನುಗುಳಿದನು ॥೨೨೩॥

ತರಹೇಳೊ ತಲೆಯ ಎನುತ ಸುರಿತಾಳನು
ವರಸುತೆ ಸಹಿತಲಿ ಬಂದು ।
ಹಿರಿದು ದುಃಖವ ಮಾಡಿದ ಸುರಿತಾಳನು
ದೊರೆ ದೊರೆಮಗಳು ಮರುಗಿದರು ॥೨೨೪॥

ಇದ್ದ ಹಾಗೆ ತರಹೇಳಿದ ರಾಮನ
ನಿರ್ದೈಸಿ ಕೊಲ್ಲಲುಬಹುದೆ ।
ಮುದ್ದುಮೊಗದ ಚೆನ್ನಿಗ ರಾಮನಹುದೆಂದು
ಬಿದ್ದು ಹೊರಳಿದನು ಸುರಿತಾಳ ॥೨೨೫॥

ಸುರಿತಾಳನ ಮಗಳು ತಲೆಯನು ಕಂಡಾಗ
ತ್ವರತದಿ ಮುಖವ ನೋಡಿದಳು ।
ಸ್ಥಿರಕಾಲ ನಂಬಿ ಬಯಸಿದ್ದೆನೊ ರಾಮಯ್ಯ
ಪುರುಷ ನೀನಳಿಯಲಿಬಹುದೆ ॥೨೨೬॥

ನಿನ್ನ ಪ್ರಾಣವನುಳುಹಿಕೊಂಡುಬಹರೆಂದು
ಚೆನ್ನಿಗ ನಂಬಿರ್ದೆ ರಾಮ ।
ಇನ್ನು ನೀನಳಿಯಲಿಬಹುದೆಯೆಂದೆನುತಲಿ
ಉನ್ನತ ಶೋಕವ ಮಾಡೆ ॥೨೨೭॥

ನೋಡಿದ ಸುರಿತಾಳ ತನ್ನ ಮಗಳ ಶೋಕ
ಬೇಡಿಕೊಂಡೆತ್ತಿ ಮುದ್ದಿಸಿಯೆ ।
ಬೇಡಮ್ಮ ಇದು ಇನ್ನು ರೂಢಿಯೊಳಪಕೀರ್ತಿ
ಆಡಿದ ಮಗಳಿಗೆ ಬಂದು ॥೨೨೮॥

ಕಡುಗಲಿ ರಾಮನ ಬಿಡಲಾರೆನೆನುತಲಿ
ಜಡೆಯ ಮುತ್ತಿನ ಗೊಂಡೆಗಳ ।
ಬಿಡಿಸಿ ತನ್ನಯ ತುರುಬಿನ ಮೇಲೆ ಕಟ್ಟಿಯೆ
ಕಡು ದುಃಖ ಮಾಡುತಲಿಹಳು ॥೨೨೯॥

ದೇಶದೊಳುಳ್ಳ ವಸ್ತುವನೆಲ್ಲ ತರಿಸಿಯೆ
ರಾಶಿಗಳನು ಮಾಡಿಸಿದೆ ।
ಭೂಸುರರಿಗೆ ದಾನ ಧರ್ಮವನಿತ್ತೆನು
ಮೀಸರ ಗಂಡಬಹನೆಂದು ॥೨೩೦॥

ಕಡುಗಲಿ ರಾಮನ ತಲೆಯ ತೆಗೆದುಕೊಂಡು
ತೊಡೆಯ ಮೇಲಿಟ್ಟು ನೋಡಿದಳು ।
ಪಡೆದಿಯೊ ನೀ ಚೆಲುವಿಕೆಯ ಬ್ರಹ್ಮನ ಕೈಯ್ಯ
ನುಡಿದು ದುಃಖವನು ಮಾಡಿದಳು ॥೨೩೧॥

ಕಳೆಯುಳ್ಳ ಚಂದ್ರನೊ ರೂಪಿಲಿ ನೋಡಲು
ಇಳೆಯೊಳು ನೀನೆ ಮನ್ಮಥನು ।
ತಳುಹದೆ ನಾ ನಿನ್ನ ಬಯಸಿದೆ ಸುರಿತಾಳ
ಕಳುಹಿದ ನನಗಾಗಿ ದಂಡ ॥೨೩೨॥

ಪೊಡವಿಪ ತಂದೆ ಎನಗೆ ಕಿಚ್ಚಕೊಡುಯೆಂದು
ಕಡುಗಲಿ ರಾಮನ ಕೂಡೆ ।
ಕಡು ದುಃಖಗೊಂಡು ಕಾತರದಿಂದ ರಾಮನ
ಕಡಿಯಬಹುದೆಯೆಂದು ಹೊರಳೆ ॥೨೩೩॥

ಉಡಿಯಲಿ ತಲೆಯನು ಕಟ್ಟಿ ಬೀಳುವೆನೆಂದು
ಮಡದಿ ದೃಢವನು ನಿಶ್ಚೈಸೆ ।
ಪೊಡವಿಯೊಳಗೆ ಅಪಕೀರ್ತಿ ಮಾಡಲಿಬೇಡ
ಒಡನೆ ಮಗಳಿಗೆ ಹೇಳಿದನು ॥೨೩೪॥

ಅಪಕೀರ್ತಿಯನು ಮಾಡಿಕೊಂಬರೆ ಕಂದಯ್ಯ
ವಿಪರೀತವು ನಿನ್ನ ಮಾತು ।
ತಪವಿರುವರೆ ಸತ್ತ ತಲೆಯನು ಪಿಡಿಕೊಂಡು
ಅಪಹರಿಸೆಂದೆರಗಿದನು ॥೨೩೫॥

ತಂದೆಯ ಮಾತನು ಕೇಳದೆ ತಲೆ ನೋಡಿ
ಕಂದರ್ಪರೂಪ ಹಾ ಎನುತ ।
ಎಂದಿಗೆ ನಿನ್ನಂಥ ಚೆಲುವ ಹುಟ್ಟುವನೆಂದು
ಕುಂದದೆ ಬಿಗಿದಪ್ಪಿದಳು ॥೨೩೬॥

ಪ್ರಾಣವಿಲ್ಲದೆ ಅಷ್ಟ ಕಳೆಯಲಿ ನಗುತದೆ
ಜಾಣತನವ ನೋಡಿ ಮರುಗಿ ।
ಕಾಣಿಸಿ ನೆರೆವರೆ ಸುರಲೋಕ ನರಲೋಕ
[ಪುಣ್ಯ]ಲ್ಲವೆ ಮುದ್ದು ರಾಮ ॥೨೩೭॥

ಒಂದು ಗಳಿಗೆ ನಿನ್ನ ಭೋಗದೂಳಿದ್ದರೆ
ಹಿಂದೇಳು ಮುಂದೇಳು ಜಲ್ಮ ।
ಚಂದದಿ ಸುಕೃತವಾಗದೆ ಇರ್ಪುದೇಯೆಂದು
ಕಂದರ್ಪರೂಪನ ಪೊಗಳೆ ॥೨೩೮॥

ನಿನ್ನೊಳು ಸುರತ ಭೋಗದೊಳಿರ್ದ ಸ್ತ್ರೀಯರು
ಕನ್ನೆಯರೆಂತು ಧರ್ಮಿಗಳು ।
ಮುನ್ನಾವ ನೋಂಪಿಯ ತಪವಡದರುಯೆಂದು
ಉನ್ನತ ಶೋಕಮಾಡಿದಳು ॥೨೩೯॥

ದುಂಡು ಮಲ್ಲಿಗೆ ಸಂಪಗೆ ಕೇದಗೆಯನು
ಮಂಡೆಯ ತುಂಬ ಮುಡಿಸಿದಳು ।
ಗಂಡರಗಂಡ ಚೆಲುವರ ಗಂಡನೆಯೆಂದು
ಮುಂಡಾಡಿ ಮುಖವ ನೋಡಿದಳು ॥೨೪೦॥

ಕಾಳಗದಲಿ ಪಾರ್ಥ ಭೀಮನೊ ರಾಮನೊ
ಆಳುತನದಲಿ ಹನುಮಂತ ।
ಸೂಳಿಟ್ಟು ಮುಂಡಾಡಿ ಮುದ್ದಿಸಿ ಮುಖನೋಡಿ
ಊಳಿಗದವರ ಕೈಲಿತ್ತು ॥೨೪೧॥

ತಂದು ಕಟ್ಟಿದರು ಸುರಹೊನ್ನೆಯ ಮರದಲ್ಲಿ
ಬಂದು ಕುಳಿತ ಸುರಿತಾಳ ।
ಬಂದರು ಪುರಜನರೆಲ್ಲರು ರಾಮನ
ಅಂದವ ನೋಡಿ ಮರುಗಿದರು ॥೨೪೨॥

ಒಂದು ದಿವಸದಲ್ಲಿ ಇರಲು ರಾಮನ ತಲೆ
ಮುಂದುಗೆಡಿಸಿತು ಪಟ್ಟಣವ ।
ಸಂದಿತು ಮಧ್ಯರಾತ್ರಿ ನಡುವಿರುಳಿಲಿ
ಬಂದವು ಅದ್ಭೂತಗಳು ॥೨೪೩॥

ಹಿಂದುವ ರಾಮನ ತಲೆ ನಮ್ಮ ಪಟ್ಟಣವ
ಮುಂದುಗೆಡಿಸಿ ಕೊಲ್ಲುತಿಹುದು ।
ತಂದ ತಲೆಯು ನಮ್ಮ ಲೋಕವ ಕೊಲುವದು
ಹಿಂದುಳಿಯಿತು ಪಟ್ಟಣವು ॥೨೪೪॥

ಡಿಳ್ಳೆಲ್ಲ ನಡುಗಿತು ರಾಮನ ಬೊಬ್ಬೆಗೆ
ನಿಲ್ಲಲಾರದೆ ಕಂಗೆಡುತ ।
ಇಲ್ಲಿ ಇದ್ದರೆ ಪಟ್ಟಣವೆಲ್ಲ ಕೆಡುವುದು
ಎಲ್ಲ ಶಾಸ್ತ್ರಿಕರು ಹೇಳಿದರು ॥೨೪೫॥

ಬಂದರು ಖಾನ ವಜೀರರು ತಲೆಯನು
ತಂದು ಹಾಕೆನುತ ಅಗುಳೊಳಗೆ ।
ಚೆಂದದಿ ಹಾಕಲು ತಲೆಯನು ಆ ಕ್ಷಣ
ನಿಂದೆಲ್ಲ ರಾಮನ ತಲೆಯು ॥೨೪೬॥

ಬೇರು ಸಹಿತ ಕಿತ್ತಿಡುವಂತೆ ಪಟ್ಟಣ
ಚೀರಲು ನಡುವಿರುಳಿನಲಿ ।
ಭೋರಿಡುತಿರೆ ನಡುರಾತ್ರಿಯದ್ಭುತವು
ಹೀರಿ ಬಿಟ್ಟಂತೆ ಪಟ್ಟಣವ ॥೨೪೭॥

ನೀಗಿ ಬಿಟ್ಟೆವು ಎಂದೆನುತಲಿ ಇದ್ದೆವು
ಬೇಗೆಯನಿಕ್ಕಲು ಬಂತು ।
ಕೂಗಲು ರಾಮನ ತಲೆಯೊಂದು ವೇಳೆಯು
ಆಗ ಸಾವುದು ಲಕ್ಷ ಬಲವು ॥೨೪೮॥

ದಿನವೊಂದಕೆ ಲಕ್ಷಲಕ್ಷೋಪ ಮಡಿಯಿತು
ಘನ ರಾಮನ ಧ್ವನಿಗೇಳಿ ।
ಮನದೊಳು ಅನುಮಾನ ಮಾಡುತ ಸುರಿತಾಳ
ಘನ ಚಿಂತೆಯನು ಮಾಡಿದನು ॥೨೪೯॥

ಕರೆಸಿ ಖಾನರಿಗೆ ಅಪ್ಪಣೆಯಿತ್ತು ತಲೆಯನು
ಕರ ಬೇಗದಿಂದ ಕೊಂಡೊಯ್ದು ।
ಇರಿಸಿ ಬರುವುದು ಕುಮ್ಮಟದೊಳಗೆನಲಾಗ
ಹರಿದರು ಖಾನ ಮಲ್ಲುಕರು ॥೨೫೦॥

ಹಿಡಿದು ತೆಗೆಯೆ ವಸುಕದೆ ಬೇರೂರಲು
ತಡೆಯದೆ ಬಂದು ಸುರಿತಳಿಗೆ ।
ಅಡಿಗೆರಗಿಯ ಸಾಧ್ಯವಲ್ಲೆಂದು ಖಾನರು
ಪಿಡಿಯಲು ಬಾರದುಯೆನುತ ॥೨೫೧॥

ತರಹೇಳು ಮದಕರಿಯಿಂದ ತೆಗೆಸುಯೆನೆ
ಇರದೆ ತಂದರು ಮಾವುತರು ।
ಭರದಿಂದ ಹಿಡಿದು ತೆಗೆಯೆ ಬಾರದಿರಲಾಗ
ಕರೆದು ಕೇಳಿದ ತನ್ನವರ ॥೨೫೨॥

ಇದಕಿನ್ನು ದಾವುದುಪಾಯವೆನುತ ರಾಯ
ಅಧಿಕ ಚಿಂತೆಯ ಮಾಡಿದನು ।
ಅಧಮರಾಗುತಲಿರೆ ಇದ[ಕಿನ್ನು]ಭಟ್ಟರು
ವಿಧವನರಿಯ[ಬಹು]ದೆಂದ ॥೨೫೩॥

ಬಂದನು ಸುರಿತಾಳರಾಯನ ಭಟ್ಟನು
ನಿಂದು ಕುಮ್ಮಟವ ಬಾಗಿಲೊಳು ।
ಅಂದು ಕೊಂಡಾಡಿ ಕಂಪಿಲಗೆ ಬಿನ್ನೈಸಿದ
ತಂದುಕೊ ರಾಮನ ತಲೆಯ ॥೨೫೪॥

ನೀವೆ ತಂದು ಕೊಡುವುದೆಂದು ಭಟ್ಟನ
ದೇವ ಕಂಪಿಲ ಬೆಸಗೊಂಡ ।
ಖೋ ಎಂದು ಕೂಗುತ ಲಕ್ಷ ತಲೆವಳಿವುದು
ನಾವು ಮುಟ್ಟುವರಳವಲ್ಲ ॥೨೫೫॥

ನಿಮ್ಮಲ್ಲಿ ಇರುವಂಥ ಭಟ್ಟನ ಕಳುಹಲು
ನಿಮ್ಮ ಕುಮಾರನ ಬಿರುದುಗಳ ।
ಸುಮ್ಮಾನದಿಂದ ಕೊಂಡಾಡಲು ಬರುವುದು
ನಮ್ಮಲ್ಲಿ ಮುಟ್ಟುವರಿಲ್ಲ ॥೨೫೬॥

ಎಂದ ಭಟ್ಟನಿಗೆ ಕೊಟ್ಟನು ದಟ್ಟಿ ಹಚ್ಚಡ
ಚೆಂದದಿ ನೂರು ಹೊನ್ನುಗಳ ।
ಇಂದು ನಮ್ಮಯ ಭಟ್ಟನ ಕರೆಕೊಂಡೀಗ
ನಿಂದಲ್ಲಿ ನಿಲದೆ ಹೋಗೆಂದ ॥೨೫೭॥

ಭಟ್ಟನ ರೂಪಿದೇವಯ್ಯನ ಕರೆಸಿದ
ದಟ್ಟಿ ಕಬಾಯು ಹಚ್ಚಡವ ।
ಕೊಟ್ಟು ಕಂಪಿಲರಾಯ ಕಳುಹಲು ಡಿಳ್ಳೀಗೆ
ಬಿಟ್ಟಲ್ಲಿ ಬಿಡದಾಗ ಬಂದ ॥೨೫೮॥

ಈ ಪರಿಯಲಿ ಬಂದ ಭಟ್ಟನ ಸುದ್ದಿಯ
ಭೂಪ ಸುರಿತಾಳ ತಾ ಕೇಳಿ ।
ರೂಪಿದೇವಯ್ಯ ಭಟ್ಟ ಬಂದಹನೆಂದು
ಸೋಪಚಾರದಲಿ ಹೇಳಿದರು ॥೨೫೯॥

ಕರೆಸಿದ ಭಟ್ಟ ರೂಪಿದೇವಯ್ಯನ
ಸುರಿತಾಳರಾಯ ಬೇಗದಲಿ ।
ಹರುಷದಿ ಬೇಗ ಪಲ್ಲಕ್ಕಿಯನಿಳಿದಾಗ
ಸುರಿತಾಳನ ಪೊಗಳಿದನು ॥೨೬೦॥

ಮಲೆತ ಮಾನ್ಯರ ಗಂಡ ಮಾರ್ಮಲೆವರ ಕೊಲ್ವ
ಬಲವಂತರಿಗೆ ಅಂಕುಶವೆ ।
ಕುಲದೀಪ ಡಿಳ್ಳಿಯ ಸುರಿತಾಳನೆಯೆಂದು
ಒಲಿದು ಕೊಂಡಾಡಿದ ಭಟ್ಟ ॥೨೬೧॥

ಕೊಂಡಾಡಿದ ಭಟ್ಟನ ನೋಡಿ ಸುರಿತಾಳ
ದಿಂಡು ದಿಂಡುಗಳುಡುಗೊರೆಯ ।
ದಂಡಿಗೆ ಸತ್ತಿಗೆ ದಣಿವಷ್ಟು ವಸ್ತ್ರವ
ಮಂಡಲೇಶ್ವರನು ಕರೆದಿತ್ತ ॥೨೬೨॥

ಇತ್ತನು ಸುರಿತಾಳರಾಯನು ಭಟ್ಟಗೆ
ಮುತ್ತಿನ ಕಡಗ ಪದಕವನು ।
ಚಿತ್ತಜಸಮರೂಪ ರಾಮನ ತಲೆಯನು
ಎತ್ತಿಕೊಂಡಿನ್ನು ಪೋಗೆನಲು ॥೨೬೩॥

[ಎತ್ತಿ]ಕೊಂಡೊಯ್ಯೊ ರಾಮನ ತಲೆಯನು ಎಂದು
ಇ(ತ್ತೆ) ಸಹಾಯವೆಂದೆನುತ ।
ತುರ್ತು ಕೊಂಡೊಯ್ವುದು ರಾಮನ ತಲೆ[ಯೆಂದು]
ಮತ್ತೆ ಸುರಿತಾಳನು ನುಡಿದ ॥೨೬೪॥

ಎಂ[ದು] [ಮತ್ತೆಯು] ಮೆಚ್ಚಿ ಸುರಿತಾಳ ರಾಯನು
ಛಂದದಿಂದಲಿ ಮನ್ನಿಸಿದ ।
ಸಂದೇಹವಿಲ್ಲದೆ ಹೋಗೆಂದು ಹೇಳಲು
ನಿಂದು ಸುರಿತಾಳಗಿಂತೆಂದ ॥೨೬೫॥

ನಾಳಿನ ಉದಯಕ್ಕೆ ರಾಮನ ತಲೆಯನು
ಹೇಳಿ ನಾ ಕೊಂಡೊಯ್ವೆನೆಂದ ।
ಕೇಳಿ ಸಂತೋಷದಿ ಸುರಿತಾಳ ರಾಯನು
ವೀಳ್ಯವ ಕೊಟ್ಟು ಮನ್ನಿಸಿದ ॥೨೬೬॥

ಬೀಡಿಕೆ ಮನೆಯ ತೋರಲು ಕುದುರೆಯ ಕಟ್ಟಿ
ನೋಡಿ ಪಲ್ಲಕ್ಕಿಯ ತರಿಸೆ ।
ಭಾಂಡವು ಸಣ್ಣಕ್ಕಿ ಕಣಕವ ಕೊಡಲಾಗ
ಗಾಢದಿ ಅಡಿಗೆ ಮಾಡಿದರು ॥೨೬೭॥

ಬೀಡಾರದೊಳು ರೂಪಿದೇವ ಊಟವ ಮಾಡಿ
ಕಡುನಿದ್ರೆ ಮಾಡ ಕನಸಿಲಿ ।
ರೂಢಿಯ ರಾಯರ ಗಂಡ ರಾಮಯ್ಯನು
ಆಡಿದನವನ ಸ್ವಪ್ನದಲಿ ॥೨೬೮॥

ಡಿಳ್ಳಿಯ ಗಂಡ ಹಳ್ಳಿಯನಾಳ್ವರ ಮಿಂಡ
ಬಲ್ಲಿದ ರಾಯರ ಗಂಡ ।
ಎಲ್ಲ ಖಾನರ ಗಂಡನೆಂಬ ಬಿರುದನು
ಇಲ್ಲಿ ಹೊಗಳು ನಾನು ಬಹೆನು ॥೨೬೯॥

ಸುರಿತಾಳನು ಇರುವಂಥ ಠಾವಿಗೆ ತಂದು
ಅಲ್ಲಿ ಆತನ ಮುಂದೆ ಪೊಗಳೆ ।
ಪರಿಪರಿಯಲಿ ಕೊಂಡಾಡಲು ನಿಮ್ಮೊಳು
ಬರುವೆವೆನುತ ರಾಮ ನುಡಿದ ॥೨೭೦॥

ಛಪ್ಪನ್ನ ದೇಶದ ರಾಯರಗಂಡನೆಂದು
ತಪ್ಪದೆ ಎನ್ನ ಬಿರಿದನು ।
ಒಪ್ಪದಿ ಕೊಂಡಾಡೆ ಬರುವೆನಲ್ಲದೆ ಈಗ
ಅಪ್ಪಳಿಸುವೆನು ಡಿಳ್ಳಿಯನು ॥೨೭೧॥

ಕಣ್ಣುದೆರೆದು ರೂಪಿದೇವಯ್ಯ ಮನದಲ್ಲಿ
ಇನ್ನಿದು ಚೋದ್ಯವೆಂದೆನುತ ।
ಚೆನ್ನಿಗ ರಾಮಯ್ಯ ಆಡಿದುದೆಲ್ಲವ
ಇನ್ನು ಕೊಂಡಾಡಿ ಹೇಳುವೆನು ॥೨೭೨॥

ದೈವವೆ ಬಲ್ಲನೆನುತ ರೂಪಿದೇವಯ್ಯ
ಸುಯ್ಯುತ ಸುರಿತಾಳನೆಡೆಗೆ ।
ಒಯ್ವರೆ ಕೂಡದು ರಾಮನ ತಲೆಯನು
ಕೈಯ ಮುಗಿದು ಇಂತೆಂದ ॥೨೭೩॥

ಎನಲಾಗ ಮಾತಿಗೆ ಸುರಿತಾಳ ರಾಯನು
ಘನ ಚಿಂತೆಯನು ತಾಳಿದನು ।
ಮನಸಿನೊಳಗೆ ಅಲ್ಲಾ ಖುದಾ ಬಲ್ಲನೆನುತಲಿ
ವಿನಯದಿ ಮೆಲ್ಲನೆ ನುಡಿದ ॥೨೭೪॥

ಗಂಡರ ಗಂಡ ಡಿಳ್ಳಿಯ ಖಾನರ ಗಂಡ
ಮಂಡಳೇಶ್ವರ ಗಂಡನೆಂದು ।
ಹಿಂದು ತುರುಕರ ಗಂಡನೆಂಬ ಬಿರುದನು
ಕೊಂಡಾಡಲು ಬಹೆನೆಂದ ॥೨೭೫॥

ಹೀಗೆಂದು ಕೊಂಡಾಡೆ ಬರುವೆನೆಂದನು ರಾಮ
ಬೇಗ ಕೊಂಡಾಡದುಳಿದರೆ ।
ನೀಗುವೆ ಸುರಿತಾಳನ ಡಿಳ್ಳಿಯನೆಂದು
ಈಗ ಹೇಳಿದ ಸ್ವಪ್ನವನು ॥೨೭೬॥

ಸಾವುದೊಳ್ವಿತೆ ಈಗ ಬಂದೆನು ನಡಿ ರಾಮನ
ಆವ ಪರಿಯಲಿ ನೀನು ಪೊಗಳೊ ।
ನಾವು ಮಾಡಿದ ಫಲ ಇಷ್ಟೆಂದು ಸುರಿತಾಳ
ನೋವುತ ಬಂದನು ಎಡೆಗೆ ॥೨೭೭॥

ನಡೆದು ಬಂದನು ಬೇಗ ವೀರ ರಾಮಯ್ಯನ
ಮುಡಿಕೇಶ ಇರುವ ವಾಲಗಕೆ ।
ಎಡೆಯಲ್ಲಿ ನಿಂದು ಸುರಿತಾಳನು ಭಟ್ಟನ
ನುಡಿದನು ಕೊಂಡಾಡುಯೆನುತ ॥೨೭೮॥

ಎಂದು ರಾಮಯ್ಯನ ಬಿರುದುಗಳೆಲ್ಲವ
ಮುಂದೆ ಕೊಂಡಾಡಲು ತಲೆಯು ।
ಬಂದೀತು ನಿನ್ನ ಬಳಿಗೆಯೆಂದು ಸುರಿತಾಳ
ಕುಂದದರೆ ನುಡಿದ ಭಟ್ಟನಿಗೆ ॥೨೭೯॥

ಗಂಡುಗಲಿಯು ರಾಮಯ್ಯನ ಬಿರಿದನು
ಕೊಂಡಾಡಲು ಬಾರದಿರಲು ।
ತುಂಡು ತುಂಡಾಗಿ ಕಡಿಸು ಎನ್ನನು ಎಂದು
ಕೊಂಡಾಡಿದ ವೀರಭಟ್ಟ ॥೨೮೦॥

ಧರೆಯ ವೈರಿಯ ಗಂಡ ಡಿಳ್ಳಿರಾಯರ ಗಂಡ
ಸುರಿತಾಳನ ಗಂಡನೆಂದು ।
ತುರುಕರ ಗಂಡ ಚೆನ್ನಿಗರ ಗಂಡನೆಂದು
ದೊರೆ ರಾಮನ ಹೊಗಳಿದನು ॥೨೮೧॥

ಕಾಟಣ್ಣ ಕಂಪಿಲನಲ್ಲದೆ ಉಳಿದೊಂದು
ಕೋಟಾನುಕೋಟಿ ವೈರಿಗಳ ।
ನೀಟಿನ ನಾಲ್ಕು ದಿಕ್ಕಿನ ರಾಯರ ಗಂಡ
ಸಾಟಿಯಿಲ್ಲವೊ ರಾಮ ನಿನಗೆ ॥೨೮೨॥

ಎಂದು ಪೊಗಳಿದ ಭಟ್ಟನ ನುಡಿಯನು ಕೇಳಿ
ಮಂಡಲೇಶ್ವರ ನೋಡದಂತೆ ।
ಹಿಂಡು ತುರುಕರ ಎದೆಗುಂಡಿಗೆ ಒಡೆವಂತೆ
ಬಂದಿತು ತಲೆಯು ಬೇಗದಲಿ ॥೨೮೩॥

ಎದ್ದಿತು ತಲೆ ಭಟ್ಟನ ಕೈಯೊಳು ಬರೆ
ಬಿದ್ದರು ಕೆಲಬಲದವರು ।
ಇದ್ದಂತೆ ಖಾನ ಮಲ್ಲುಕರು ಸುರಿತಾಳನು
ನಿರ್ಧರದಲಿ ಬೆರಗಾಗೆ ॥೨೮೪॥

ಕಸ್ತೂರಿ ನಾಮವ ತಿದ್ದಿದ ಸುರಿತಾಳ
ಮುತ್ತಿನ ಚೌಕುಳಿಯಿಟ್ಟು ।
ಮತ್ತ ಹೆಣಿಸಿದ ಮೀರಜಡೆಯ ಶೃಂಗಾರಕ್ಕೆ
ಸುತ್ತಿದ ಜಾಜಿ ಮಲ್ಲಿಗೆಯ ॥೨೮೫॥

ಗಂಧ ಕಸ್ತೂರಿ ಕುಂಕುಮ ಕದಂಬವ
ತಂದು ರಾಮಯ್ಯನ ತಲೆಗೆ ।
ಮುಂದೆ ಶೃಂಗಾರವ ಮಾಡಿ ಭಟ್ಟನ ಕೈಯ್ಗೆ
ತಂದಿತ್ತನು ಸುರಿತಾಳ ॥೨೮೬॥

ಇನ್ನಾದರೆ ಹೋಗೆನುತಲಿ ಸುರಿತಾಳ
ತನ್ನ ಕರಗಳನು ಮುಗಿದು ।
ಚೆನ್ನಿಗೆ ರಾಮನ ಕಳುಹಿ ತನ್ನರಮನೆಗೆ
ಉನ್ನತ ಹರುಷದಿ ಬಂದ ॥೨೮೭॥

ಡಿಳ್ಳಿಯ ಕಳೆದು ಬಂದನು ರೂಪಿದೇವಯ್ಯ
ನಿಲ್ಲದೆ ಒಂದಾರು ದಿವಸ ।
ಬಲ್ಲಿದ ರಾಮನ ತಲೆಯನಿಳುಹಿ ತಾ
ಅಲ್ಲಿ ವಿಶಾಲ್ಯಕ್ಕೆ ಹೋದ ॥೨೮೮॥

ಹೋದ ಸಮಯದಲಿ ತಲೆಯು ತಾ ಬೇಗದಿ
ಮೇದಿನಿಯಂ ಪುಟನೆಗೆದು ।
ಎದ್ದಿತಾಕ್ಷಣದಲ್ಲಿ ಮರದಲ್ಲಿ ಕುಳ್ಳಿರೆ
ಎದ್ದು ನಿಂದಲ್ಲಿ ನೋಡಿದನು ॥೨೮೯॥

ತಿರುಗಿ ಬಂದು ರಾಮನ ತಲೆ ನೋಡಲು
ಇರಿಸಿ ಹೋದಲ್ಲಿ ಇಲ್ಲದಿರೆ ।
ಕರೆದನು ಚೆಲ್ವರ ಗಂಡ ರಾಮಾಯೆಂದು
ಮರದ ಮೇಲೋಯೆಂದೆನುತ ॥೨೯೦॥

ಅಡಗದೆ ನಿನ್ನ ಪರಾಕ್ರಮ ಶಕ್ತಿಯು
ನುಡಿ ಹಾಳಾಗದೆಯೆನುತ ।
ಕಡು ಬೇಗದಿ ರೂಪಿದೇವಯ್ಯ ಮರಹತ್ತಿ
ಪಿಡಿಯಲು ಪ್ರಾಣವಳಿಯಿತು ॥೨೯೧॥

ಭಟ್ಟನ ಶಾಪದಿ ರಾಮನ ಪ್ರಾಣವು
ಬಿಟ್ಟು ಹೋಯಿತು ಆ ತಲೆಯ ।
ನೆಟ್ಟನೆ ಆ ತಲೆಯನು ಪಿಡಿದಿಳಿದನು
ಪಟ್ಟಣಕ್ಕಾಗಿ ನಡೆದನು ॥೨೯೨॥

ಅಷ್ಟದಿಕ್ಕಿನ ರಾಯರ ಗಂಡನೆಂದೆಂಬ
ಕೊಟ್ಟದ ರಾಮನ ತಲೆಯ ।
ಇಟ್ಟ ಕದಂಬ ಕಸ್ತೂರಿ ತಿಲಕದಿ ಬಂದು
ಕೊಟ್ಟನು ಕಂಪಿಲ ನೃಪಗೆ ॥೨೯೩॥

ಬೆಟ್ಟದೊಡೆಯ ಕಂಪಿಲರಾಯ ಕಾಣುತ
ಕೊಟ್ಟ ದೇವಾಂಗ ಹಚ್ಚಡವ ।
ಕೊಟ್ಟು ಮನ್ನಿಸಿದನು ರೂಪಿದೇವಯ್ಯಗೆ
ಇಟ್ಟ ಆಭರಣದ ವಸ್ತುವನು ॥೨೯೪॥

ತಲೆಯ ಕಾಣುತ ಕಂಪಿಲ ರಾಮ ದುಃಖದಿ
ಹೊಲಬು ತಪ್ಪಿದ ಮೃಗದಂತೆ ।
ಬಲಹು ಹಾಳಾಯಿತು ಕೆಟ್ಟೆನು ಮುಪ್ಪಿಲಿ
ಚೆಲುವರ ಗಂಡ ರಾಮಯ್ಯ ॥೨೯೫॥

ಅಂದೆ ರತ್ನಿಯ ಮಾತ ಕೇಳಿ ನಾ ನಿನ್ನನು
ಕೊಂದೆನೊ ಎನ್ನಯ ಕಂದ ।
ಬಂಧನವಿಟ್ಟೆನ್ನು ಮುಪ್ಪಿನ ತಂದೆಗೆ
ಎಂದಿಗೆ ಮರೆವೆನೊ ಮಗನೆ ॥೨೯೬॥

ಮೂಜಗದೊಳು ನಿನ್ನ ದೆಸೆಯಿಂದ ಕಂದಯ್ಯ
ರಾಜ್ಯವನಾಳಿದೆ ನಾನು ।
ಪೂಜ್ಯ ಹಾಳಾಯಿತು ದೆಸೆಗೇಡಿಯಾದೆನು
ತೇಜ ನಿನ್ನನು ಪೋಲ್ವರುಂಟೆ ॥೨೯೭॥

ಆವ ಮಗನ ನಂಬಿ ರಾಜ್ಯವನಾಳಲೋ
ಆವ ಮಗನ ನೋಡಿ ನಿನ್ನ ।
ಆವ ಪರಿಯ ನಿನ್ನ ಗುಣ ಹೇಗೆ ಮರೆಯಲೊ
ದೇವ ಕಂಪಿಲ ಮರುಗಿದನು ॥೨೯೮॥

ಹೀನ ಜಾತಿಯ ಕೈಯ ಅಳಿಯೆಂದು ಹಣೆಯಲ್ಲಿ
ಏನೆಂದು ಬರೆದನೊ ಬ್ರಹ್ಮ ।
ನಾನೀಗ ಪುತ್ರಶೋಕವನೆಂತು ಮರೆಯಲೊ
ಖಾನ ವಜೀರರ ಗಂಡ ॥೨೯೯॥

ಕಂತು ಸಮಾನ ಚೆನ್ನಿಗ ರಾಮ ನಿನಗಿರಿ
ರಾಂತು ಬಾಳುವರು ಇನ್ನಾರು ।
ಸಂತೋಷದಲಿ ನಂಬಿ ಇದ್ದೆನೊ ನಾ ನಿನ್ನ
ಇಂತು ಕೆಡಿಸಿ ಪೋಗುವರೆ ॥೩೦೦॥

ಮಾದಿಗಿತ್ತಿಯ ಕೈಯ ಅಳಿಯಲಿ ನೀನೆಂದು
ಸಾಧಿಸಿ ಬರೆದನೊ ಬ್ರಹ್ಮ ।
ಹೋದ ದಾರಿ ಹಾಳಾಯಿತೆ ಅಣ್ಣಾ ಎಂದು
ಸೋದರರು ತಾವು ಮರುಗಿದರು ॥೩೦೧॥

ಪೊಡವಿಯೊಳಗೆ ನನಗಿದಿರಿಲ್ಲವೆನುತಲಿ
ಕಡು ನಂಬಿಯಿದ್ದೆನೊ ಮಗನೆ ।
ಬಿಡದೆ ಹರಿಯಮ್ಮನ ಬಾಯಲಿ ಮಣ್ಣಿನ
ಹುಡಿಯನು ಹೊಯ್ದು ಹೋಗುವರೆ ॥೩೦೨॥

ಲೆಕ್ಕವಿಲ್ಲದೆ ಎನ್ನೊಡಲಿಗೆ ನೀ ಕಿಚ್ಚ
ಇಕ್ಕಿ ಹೋಗುವರೆ ಕಂದಯ್ಯ ।
ದಿಕ್ಕುಗೇಡಿಗಳಾದೆವೆನುತಲಿ ಹರಿಯಮ್ಮ
ದುಃಖದಿ ಹೊರಳಿದಳಾಗ ॥೩೦೩॥

ಅರೆ ಆಯುಷ್ಯವ ಬರೆದನೋ ಬ್ರಹ್ಮನು
ಉರಿಯಲೊ ಯಮಲೋಕವೆಂದು ।
ಹರ ನಾರಾಯಣ ಬ್ರಹ್ಮನ ಬರಹವು
[ಅರೆ]ಯಾಯಿತೊ ಕಂದಯ್ಯ ॥೩೦೪॥

ಸಿರಿಯು ಸಂತೋಷವು ದೊರೆತನ ಭಾಗ್ಯವು
ಉರಿದು ಹೋಯಿತು ಕಂದಯ್ಯ ।
ಬರಿಯ ಕೈಯಾದೆನೊ ಎನುತಲಿ ಹರಿಯಮ್ಮ
ಇರದೆ ದುಃಖದಲಿ ಹೊರಳಿದಳು ॥೩೦೫॥

ದೇವ ಬ್ರಹ್ಮನು ನಾರಾಯಣ [ರಿಂ]ತೆನ್ನ
ಮೂವರು ಚಾರಿವರಿವುದ ।
ಆವ ಕಾಲಕೆ ಕೇಳುವೆನೆಂದು ಹರಿಯಮ್ಮ
ದೇವಿ ಬಿದ್ದಳು ದುಃಖದಲಿ ॥೨೦೬॥

ನೋಡು ನೀ ಹರಿಯಲದೇವಿ ದುಃಖವ ಬಿಡು
ಮಾಡಲು ನಿಮ್ಮಯ ವಶವೆ ।
ನೋಡು[ನೀ] ನಿಮ್ಮ ರಾಮಯ್ಯನ ವಹಿಲದಿ ಮಾ
ತಾಡು ದುಃಖವಿನ್ನೇಕೆ ॥೨೦೭॥

ಇರುವೆಯ ಗೂಡಿಗೆ ಕಿಚ್ಚನಿಕ್ಕಲುಬಹುದೆ
ಅರೆಮಾಡಿ ನಮ್ಮ ಮೋಹವನು ।
ಬರಿಯ ಕೈಯನು ಮಾಡಿ ಹೋಗುವರೆ ಕಂದಯ್ಯ
ಸ್ಥಿರ [ದುಃಖ] ಎಮಗೆ ಇಕ್ಕುವರೆ ॥೨೦೮॥

ಮಂಡಲಪತಿ ಕಂಪಿಲರಾಯ ತಲೆಯನು
ಮುಂಡಾಡಿ ಮುಖವ ನೋಡಿದನು ।
ಕೊಂಡು ಹೋಗೆನುತ ಕಾಶಿಯ ಪಟ್ಟಣಕೆಂ[ದ]
[ಕೊಂಡರು] ರಾಮನ ತಲೆಯ ॥೨೦೯॥

ದೇಶಾಧಿಪತಿ ರಾಮಯ್ಯನ ತಲೆಯನು
ಕಾಶಿಯ ಪಟ್ಟಣಕೊಯ್ದು ।
ವಿಶ್ವನಾಥನ ಪಾದಕರ್ಪಿಸುಯೆನುತಲಿ
ಆ ಸಮಯದಿ ಕಳುಹಿದನು ॥೨೧೦॥

ರಾಮನ ಚರಿತೆಯ ಕೇಳಿದ ಜನರಿಗೆ
ಭೂಮಿದಾನವನಿತ್ತ ಫಲವು ।
ಪ್ರೇಮದಿ ಸಕಲೈಶ್ವೈರ್ಯವು ದೊರಕುವುದು
ಆ ಮಹಾದೇವ ರಕ್ಷಿಸಲಿ ॥೨೧೧॥

ಸಂಗ್ರಾಮಧೀರ ರಾಮಯ್ಯನ ಚರಿತೆಯ
ಹಿಂಗದೆ ಕೇಳೆ ಸಂಪದವು ।
ಬಂಗಾರ ರಾಜ್ಯ ಸ್ಥಿರಾಯುಷ್ಯ ಜಟ್ಟಂಗಿ
ಲಿಂಗನ ಕೃಪೆಯಿಂದಲಹುದು ॥೩೧೨॥

ಕಂದರ್ಪರೂಪ ರಾಮಯ್ಯನ ಚರಿತೆಯ
ಚೆಂದದಿ ಕೇಳ್ದ ಜನರಿಗೆ ।
ಬಂಧನವು ಪೋಗಿ ಸಂತೋಷ ಬರಲೆಂದು
ಸಂಧಿ ಹನ್ನೆರಡು ಸಂಪೂರ್ಣ ॥೩೧೩॥

ಅಂತು ಸಂಧಿ ೧೨ಕ್ಕಂ ಪದನು (೨೪೪೯)ಕ್ಕಂ ಮಂಗಳ ಮಹಾಶ್ರೀ

❖❖

ಪಾಂಚಾಳ ಗಂಗ ವಿರಚಿತ

ಹಳೆಯ ಕುಮಾರರಾಮನ ಸಾಂಗತ್ಯ

ಸಂಪಾದಕ

ಎಂ.ಎಂ. ಕಲಬುರ್ಗಿ

ಸಪ್ನ ಬುಕ್ ಹೌಸ್

ತುಂಗಾ ಕಾಂಪ್ಲೆಕ್ಸ್, ಗಾಂಧಿನಗರ, ಬೆಂಗಳೂರು - 560 009

ದೂರವಾಣಿ : 2266088

೨೦೦೮

*

ಪ್ರಸ್ತಾವನೆ

ಎಂ. ಎಂ. ಕಲಬುರ್ಗಿ

೧೩ - ೧೪ನೆಯ ಶತಮಾನ, ಮುಸಲ್ಮಾನರು ದಕ್ಷಿಣ ಭಾರತದ ಮೇಲೆ ಆಕ್ರಮಣ ಆರಂಭಿಸಿದ್ದ ಕಾಲ. ದೇವಗಿರಿ ಯಾದವರು, ದ್ವಾರಸಮುದ್ರದ ಹೊಯ್ಸಳರು, ಓರಂಗಲ್ಲಿನ ಕಾಕತೀಯರು - ಹೀಗೆ ಒಬ್ಬೊಬ್ಬರಾಗಿ ಸೋತ ಸಂದರ್ಭವಿದು. ಈಗ ಉಳಿದಿದ್ದ ಏಕೈಕ ಕನ್ನಡ ಅರಸು ಮನೆತನ, ಕುಮ್ಮಟದುರ್ಗದ ಕಂಪಿಲರಾಯನದು. ಕರ್ನಾಟಕವನ್ನು ಕಾಪಾಡುವುದಕ್ಕೋಸುಗ ಈ ಕಂಪಿಲರಾಯನ ಮಗ ಕುಮಾರರಾಮನು ಏಕಾಂಗವೀರನಾಗಿ ಕೈಕೊಂಡ ಯುದ್ಧಗಳು ಚರಿತ್ರಾರ್ಹವೆನಿಸಿವೆ. ಎರಡು ಸಲ ಸೋತುಹೋದ ದಿಲ್ಲಿಯ ತುಘಲಕನ ಸೈನ್ಯ, ಮೂರನೆಯ ಸಲದ ನಿರ್ಣಾಯಕ ಯುದ್ಧದಲ್ಲಿ ಕುಮಾರ ರಾಮನ ರುಂಡ ಕತ್ತರಿಸುವ ಮೂಲಕ ಅಂತಿಮವಾಗಿ ಜಯ ಗಳಿಸಿತು. ಒಂದು ಕುತೂಹಲದ ವಿಷಯವೆಂದರೆ, ಸುಲ್ತಾನನು ಸೋತ ಮೊದಲಿನ ಎರಡು ಯುದ್ಧಗಳಲ್ಲಿ ಅವನ ಸೇನಾಪತಿಯಾದವನು ಪುರುಷ, ಗೆದ್ದ ಕೊನೆಯ ಯುದ್ಧದಲ್ಲಿ ಸೇನಾಪತಿಯಾದವಳು ಸ್ತ್ರೀ.

ಭಾರತದಲ್ಲಿ ಜರುಗಿದ ಸಾವಿರಾರು ಸಣ್ಣ-ದೊಡ್ಡ ಯುದ್ಧಗಳಲ್ಲಿ ಹೆಣ್ಣು ಸೇನಾಪತಿಯಾದ, ಅದರಲ್ಲಿಯೂ ದಿಲ್ಲಿ ಸುಲ್ತಾನನ ದೊಡ್ಡ ಸೈನ್ಯವನ್ನು ಮುನ್ನಡೆಸಿ, ಅಭಿಮನ್ಯು ಪರಾಕ್ರಮಿ ಕುಮಾರರಾಮನನ್ನು ಕೊಂದ ಘಟನೆ, ಭಾರತಮಟ್ಟದ ಏಕೈಕ ನಿದರ್ಶನವೆನಿಸಿದೆ, ಭಾರತೀಯ ಪರಿಸರದಲ್ಲಿ ನಂಬಲು ಅಸಾಧ್ಯವಾದ ಸಂಗತಿಯೆನಿಸಿದೆ. ಅದೇನೆ ಇದ್ದರೂ ಭಾರತೀಯರು ಹೊರಗಿನವರೊಂದಿಗೆ ನಡೆಸಿದ ಯುದ್ಧಗಳಲ್ಲಿ, ಗೆದ್ದುದಕ್ಕಿಂತ ಸೋತುದೇ ಹೆಚ್ಚು. ಮೊದಲಿನಿಂದಲೂ ಹೊರಗಿನ ಹೂಣರು, ಶಕರು, ಮುಸಲ್ಮಾನರು, ಆಂಗ್ಲರು, ಡಚ್ಚರು, ಪೋರ್ಚುಗೀಸರು, ಫ್ರೆಂಚ್‌ರು ಭಾರತೀಯರನ್ನು ಸೋಲಿಸಿ, ಈ ದೇಶವನ್ನು ಆಗಾಗ ಆಳುತ್ತ ಬಂದರು. ಇದಕ್ಕೆ ಪ್ರತಿಯಾಗಿ ಒಬ್ಬ ಭಾರತೀಯನೂ ಹೊರದೇಶದವರನ್ನು ಸೋಲಿಸಿ, ಅವರ ಭೂಮಿಯನ್ನು ಆಳಿದ ಉದಾಹರಣೆಗಳಿಲ್ಲ. ಇದನ್ನು ಗಮನಿಸಿದರೆ ಇವರ ರಕ್ತದಲ್ಲಿಯೇ ಒಂದು ಬಗೆಯ ದೋಷವಿರುವಂತೆ ಕಾಣುತ್ತದೆ, ಅದು:

ಭಾರತೀಯರದು ಆತ್ಮವಾದಿ (ವ್ಯಕ್ತಿವಾದಿ) ಸಿದ್ಧಾಂತವೇ ಹೊರತು, ಸಮಾಜವಾದಿ ಸಿದ್ಧಾಂತವಲ್ಲ. ಇದು ಕಾರಣವಾಗಿ "ಭಾರತೀಯರು ವೈಯಕ್ತಿಕವಾಗಿ ಸಬಲರು, ಸಾಮಾಜಿಕವಾಗಿ ದುರ್ಬಲರು"ಎಂಬಂಥ

ವಾತಾವರಣ ಇಲ್ಲಿ ಸೃಷ್ಟಿಯಾಗುತ್ತ ಬಂದಿತು. ಅದಕ್ಕೆ ಪೂರಕವಾಗಿ ಈ ದೇಶದಲ್ಲಿ ಮೊದಲಿನಿಂದಲೂ ಸಂಘಟನೆಗೆ ಮಾರಕವೆನಿಸುವ ಜಾತಿಭೇದ, ಪ್ರಾಂತಭೇದ ಮೊದಲಾದ ಅನೈಕ್ಯತೆಯ ಗಟ್ಟಿ ಕಾರಣಗಳಿವೆ. ಹೀಗಾಗಿ ಎರಡು ಸಲ ತನ್ನ ಸೈನ್ಯದ ಏಕತೆ ಕಾರಣವಾಗಿ ಗೆದ್ದ ಕುಮಾರರಾಮ, ಮೂರನೆಯ ಸಲ ಅನೈಕ್ಯತೆಯಿಂದಾಗಿ ಸೋತನು. ಇದಕ್ಕೆ ಕಾರಣವಾದುದು ಕನ್ನಡ -ತೆಲುಗು ಎಂಬ ಪ್ರಾಂತಭೇದ, ಅಂದರೆ ದೇಶಭೇದ.

ರಾಜಧಾನಿ ಕುಮ್ಮಟದುರ್ಗವಿರುವುದು ಕರ್ನಾಟಕ-ಆಂಧ್ರಪ್ರದೇಶಗಳ ಗಡಿ ಪ್ರದೇಶದಲ್ಲಿ. ಇಂಥ ಗಡಿ ಪ್ರದೇಶದಲ್ಲಿರುವ ಅನ್ಯರ ಸಂಬಂಧ ತುಂಬ ಸೂಕ್ಷ್ಮವಾಗಿರುತ್ತದೆ. ತಾವು ದುರ್ಬಲವಾಗಿರುವ ವರೆಗೆ ವಿಧೇಯರಾಗಿರುವ ಅವರು, ಪ್ರಬಲರಾಗುತ್ತಲೇ ಅಥವಾ ಅವಕಾಶ ಪ್ರಾಪ್ತವಾಗುತ್ತಲೇ ಶತ್ರುಗಳಾಗುತ್ತಾರೆ. ಕುಮಾರರಾಮನ ಸೈನ್ಯದಲ್ಲಿದ್ದ ಬಹುಸಂಖ್ಯೆ ತೆಲುಗರು ಅನುಸರಿಸಿದ ಇಂಥ ಸಮಯಸಾಧಕ ನೀತಿಯಿಂದಾಗಿ, ಅಂದರೆ ಅಂತಿಮ ಗಳಿಗೆಯಲ್ಲಿ ಮುಸಲ್ಮಾನ ಸೈನ್ಯದೊಂದಿಗೆ ನಡೆಸಿದ ಒಳಸಂಚು ಕಾರಣವಾಗಿ, ಕನ್ನಡಿಗರು ತಮ್ಮ ನೇತಾರ ಕುಮಾರ ರಾಮನನ್ನು ಕಳೆದುಕೊಂಡು, ಸೋಲಬೇಕಾಯಿತು. ಆದುದರಿಂದ ಇದು ಬಾಹ್ಯದಲ್ಲಿ ಹಿಂದೂ-ಮುಸಲ್ಮಾನ ಯುದ್ಧದಂತೆ ಕಂಡರೂ, ನಿಜದಲ್ಲಿ ಗಡಿಪ್ರದೇಶದ ಕನ್ನಡಿಗ-ತೆಲುಗರ ನಡುವಿನ ಯುದ್ಧವಾಗಿದೆ. ಒಂದು ವೇಳೆ ರಾಜಧಾನಿ ಕುಮ್ಮಟದುರ್ಗ ಗಡಿನಾಡಿನಲ್ಲಿರದೆ ನಡುನಾಡಿನಲ್ಲಿದ್ದರೆ ಈ ಯುದ್ಧದ ಸ್ವರೂಪ, ಫಲಿತಾಂಶ ಬೇರೆಯಾಗಬಹುದಿತ್ತು ಎನಿಸುತ್ತದೆ.

ಇಂಥ ದ್ರೋಹಕಾರಣದ ಮತ್ತು ಬೇರೆ ಕಾರಣದ ಅನೇಕ ಯುದ್ಧಗಳು ಕರ್ನಾಟಕದಲ್ಲಿ ಜರುಗಿವೆ. ಅವುಗಳನ್ನು ಬಿಟ್ಟು ಇದನ್ನು ಮಾತ್ರ ಸಾಹಿತ್ಯಕ್ಕೆ ವಸ್ತುವಾಗಿ ಸ್ವೀಕರಿಸಿದ ಮೊದಲ ಉದಾಹರಣೆಯಾಗಿದೆ, ಈ ಕೃತಿ. ಏಕೆಂದರೆ ನಮ್ಮವರಾದ ಕನ್ನಡಿಗರ ಆಂತರಿಕ ಯುದ್ಧಗಳಿಗಿಂತ, ಅನ್ಯರಾದ ಮುಸಲ್ಮಾನರ ಕೈಯಲ್ಲಿ ಕನ್ನಡಿಗರು ಅಂತಿಮವಾಗಿ ಸೋತ ಈ ಯುದ್ಧ, ಕನ್ನಡ ಕವಿಗಳಿಗೆ ದಾಖಲುಯೋಗ್ಯವೆನಿಸಿರಬೇಕು. ಮೇಲಾಗಿ ಕುಮಾರರಾಮ ಹೆಣ್ಣಿನ ಆರೋಪ ಹೊತ್ತು ನಲುಗುವಲ್ಲಿ, ಇದು ಕೇವಲ ರಾಜರ ಯುದ್ಧವಾಗಿ ಉಳಿಯದೆ ಸಾಂಸ್ಕೃತಿಕ ಮೌಲ್ಯದ ಒಂದು ಮಾದರಿಯಾಗಿ ಪರಿಣಮಿಸಿರಬೇಕು. ಹೀಗಾಗಿ, ಒಬ್ಬರಲ್ಲ ಐದು ಜನ ಕವಿಗಳು ಇದನ್ನು ಕಾವ್ಯದಲ್ಲಿ ದಾಖಲು ಮಾಡಿದರು- ಜನಪದ ಕವಿಗಳು ಕಥೆ, ಕಾವ್ಯ ಕಟ್ಟಿದರು- ಜನತೆ ಸ್ಮಾರಕ ನಿಲ್ಲಿಸಿದರು, ದೇವರೆಂದು ಪೂಜಿಸಿದರು. ಹೀಗೆ, ಕೇವಲ ರಾಜಕೀಯ ವೀರನಾಗಿ ಇತಿಹಾಸ ಪುಟಗಳಲ್ಲಿ ಉಳಿಯದೆ, ಸಾಂಸ್ಕೃತಿಕ ವೀರನಾಗಿ ಸಮಾಜದ ನೆನಪಿನಲ್ಲಿ ಬೆಳೆದಿದ್ದಾನೆ, ಬೆಳೆಯುತ್ತಲಿದ್ದಾನೆ, ಕುಮಾರರಾಮ.

ಹೀಗಾಗಿ ಇವನನ್ನು ಕುರಿತು, ರಾಜಕೀಯ, ಸಾಮಾಜಿಕ, ಆಚರಣಾತ್ಮಕ, ಭಾಷಿಕ ಅವಶೇಷಗಳು ನೂರಾರು ಸಂಖ್ಯೆಯಲ್ಲಿ ಹುಟ್ಟಿಕೊಂಡವು. ಸಮಕಾಲೀನಗೊಳ್ಳುತ್ತಲೂ ಬಂದವು. ಸಾಲದುದಕ್ಕೆ ತೆಲುಗು, ತಮಿಳು, ತುಳು, ಭಾಷೆಗಳಲ್ಲಿಯೂ ಸೃಷ್ಟಿಯಾಗುತ್ತ ಬಂದವು.

ರಾಜಕೀಯ ಅವಶೇಷಗಳನ್ನು ಕುರಿತು ಹೇಳುವುದಾದರೆ ಇಂದಿಗೂ ಕುಮ್ಮಟದಲ್ಲಿ ಕೋಟೆ, ರಾಮನ ದೊಣೆ, ಕಾಟಪ್ಪನ ಗುಡ್ಡ, ಬೊಲ್ಲನ ಗುಂಡು, ಬಾದೂರನ ಬಂಡೆ, ಮಾದಿಗ ಹಂಪಯ್ಯನ ಗುಡ್ಡಗಳನ್ನು ಕಾಣುತ್ತೇವೆ. ಹೊಸಮಲೆದುರ್ಗದಲ್ಲಿ (ಇಂದಿನ ರಾಮಗಡ) ಕೋಟೆ, ಬೊಲ್ಲನ ಬಂಡೆ, ಟಗರಿನ ಬಯಲು. ಬೊಲ್ಲನ ಹೆಜ್ಜೆ, ಕಾಟಣ್ಣನ ಶಿಲ್ಪ, ಕುಮಾರರಾಮನ ಹಟ್ಟಿ, ಮಾದಿಗ ಹಂಪಯ್ಯನ ಕಲ್ಲು, ಹರಿಯಾಲದೇವಿ ಬಚ್ಚಲು, ರತ್ನಾಜಿ ಮಡಿಲು ಇತ್ಯಾದಿ ಸ್ಮಾರಕಗಳು ಸಿಗುತ್ತವೆ. ಹೊಳಲಗುಂದಿ (ಆದವಾನಿ ತಾಲೂಕು)ಯ ಸಿದ್ಧೇಶ್ವರ ದೇವಾಲಯದ ಗೋಡೆಯ ಮೇಲೆ ಕುಮಾರರಾಮನ ಚೆಂಡಿನಾಟದ ಬಣ್ಣದ ಚಿತ್ರ ಬಿಡಿಸಲಾಗಿದ್ದು, ಇದರ ಕೆಳಗೆ 'ರಾಮಣ್ಣ' ಎಂಬ ಬರಹವೂ ಇದೆ. ಇದು ೧೮ನೆಯ ಶತಮಾನದ ಕಲಾಕೃತಿ.

ಸಾಮಾಜಿಕವಾಗಿ ಹೇಳುವುದಾದರೆ, ರತ್ನಾಜಿ ಪರಂಪರೆಯ 'ದೊಂಬರು' ಹೆಸರಿನ ಒಂದು ಜನಾಂಗವೇ ಶಿವಮೊಗ್ಗ ಜಿಲ್ಲೆಯಲ್ಲಿ ಕಂಡುಬರುತ್ತದೆ.

ಆಚರಣೆಗೆ ಬಂದರೆ ಕುಮ್ಮಟ ಮತ್ತು ಹೊಸಮಲೆದುರ್ಗಗಳಲ್ಲಿ ಕುಮಾರ ರಾಮನ ಜಾತ್ರೆ, ಅನೇಕ ಬಿಡಿ ಆಚರಣೆಗಳು ಕಂಡುಬರುತ್ತವೆ. ಕುಮಾರರಾಮನ ರುಂಡದ ಮೆರವಣಿಗೆ, ಪೂಜೆ, ಯುದ್ಧದ ಅಣುಕು ಇತ್ಯಾದಿಗಳು ಇಲ್ಲಿ ಇನ್ನೂ ಜೀವಂತವಾಗಿವೆ. ನಾಡಿನ ಅನೇಕ ಕಡೆಗಳಲ್ಲಿ ರಾಮಸ್ವಾಮಿ, ಕುಮಾರ ರಾಮದೇವರು, ರಾಮೇಶ್ವರ ಹೆಸರುಗಳಿಂದ ಈತ ಪೂಜೆಗೊಳ್ಳುತ್ತಲಿದ್ದಾನೆ.

ಭಾಷಿಕ ರಚನೆಗಳು ಅಂದಿನಿಂದ ಇಂದಿನ ವರೆಗೂ ಹುಟ್ಟುತ್ತಲಿವೆ. ಇವು ಮೌಖಿಕ ಮತ್ತು ಲಿಖಿತವೆಂದೂ, ಮೌಖಿಕದಲ್ಲಿ ವದಂತಿಕ, ಸಾಹಿತ್ಯಕವೆಂದೂ,* ಲಿಖಿತದಲ್ಲಿ ದಾಖಲಾತ್ಮಕ, ಸಾಹಿತ್ಯಿಕವೆಂದೂ ಬಿಚ್ಚಿಕೊಂಡಿವೆ. ಈ ಎಲ್ಲ ಶಾಖೋಪಶಾಖೆಗಳ ಶೋಧ, ಸಂಗ್ರಹ, ಅಧ್ಯಯನಗಳ ಸಮಗ್ರ ಯೋಜನೆಯೊಂದು ಅಸ್ತಿತ್ವಕ್ಕೆ ಬರಬೇಕಾಗಿದೆ. ಈ ಸಮಗ್ರದ ಒಂದು ಭಾಗವೆಂಬಂತೆ ಕುಮಾರರಾಮನನ್ನು ಕುರಿತು ಲಿಖಿತ ಸಾಹಿತ್ಯಕೃತಿಗಳು ಹೀಗೆ ಹುಟ್ಟಿಕೊಂಡಿವೆ :

II

ಕುಮಾರರಾಮನನ್ನು ಕುರಿತು ಲಿಖಿತ ಸಾಹಿತ್ಯ

ಕುಮಾರರಾಮನನ್ನು ಕುರಿತು ಚೆನ್ನಬಸವ ಪುರಾಣ, ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ನವರತ್ನ ಮಾಲಿಕೆ ಮೊದಲಾದ ಕೃತಿಗಳು ಪ್ರಾಸಂಗಿಕವಾಗಿ ಪ್ರಸ್ತಾಪ ಮಾಡುತ್ತವೆ.

ಇವುಗಳನ್ನು ಬಿಟ್ಟರೆ, ನೇರವಾಗಿ ಇವನನ್ನು ಕುರಿತು ಹುಟ್ಟಿದ ಸ್ವತಂತ್ರ ಕಾವ್ಯಗಳ ಸಂಖ್ಯಾನಿರ್ಣಯ ಇನ್ನೂ ಚರ್ಚೆಯ ವಸ್ತುವಾಗಿ ಉಳಿದಿದೆ. ಈ ವಿಷಯವಾಗಿ ಮೊದಲು ತಲೆಕೆಡಿಸಿಕೊಂಡವರು ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು. ಅವರ ಪ್ರಕಾರ ಈತನನ್ನು ಕುರಿತು ಕಾವ್ಯ ಬರೆದವರು ಐದು ಜನ. ೧. ನಂಜುಂಡ, ೨. ಪಾಂಚಾಳಗಂಗ, ೩. ಗಂಗ, ೪. ನಾಗಸಂಗಯ್ಯ, ೫. ಮಹಾಲಿಂಗಸ್ವಾಮಿ. ಈ ಸಮಸ್ಯೆಯನ್ನು ಪಿಎಚ್.ಡಿ ಅಧ್ಯಯನದ ಮೂಲಕ ಸಮಗ್ರವಾಗಿ ಕೈಗೆತ್ತಿಕೊಂಡ ಡಾ. ವರದರಾಜರಾವ್ ಅವರು, ಪಾಂಚಾಳ ಗಂಗ, ಗಂಗ, ನಾಗಸಂಗಯ್ಯ ಹೆಸರಿನಲ್ಲಿರುವ ಕೃತಿಗಳು ಒಂದೇ ಪಠ್ಯದ ವಿಸ್ತೃತ -ಸಂಕೋಚ ಆವೃತ್ತಿಗಳೆಂದು ಹೇಳುತ್ತ, ಇವುಗಳ ಸಂಖ್ಯೆಯನ್ನು ೫ರಿಂದ ೩ಕ್ಕೆ ಇಳಿಸಿದ್ದಾರೆ.

ಇಂಥ ಸಂದರ್ಭದಲ್ಲಿ ಈ ಸಮಸ್ಯೆಗೆ ಕೈಹಾಕಿದ ನಮಗೆ ಮೇಲುಕೋಟೆಯ 'ಸಂಸ್ಕೃತ ಸಂಶೋಧನ ಸಂಸತ್'ದಲ್ಲಿ **'ಹಳೆಯ ಕುಮಾರರಾಮನ ಸಾಂಗತ್ಯ'**[೧] ಶೀರ್ಷಿಕೆಯ ತಾಳೆಗರಿ ಪ್ರತಿ, ಕಂಪಲಿಯ ಶ್ರೀ ದೊಡ್ಡನಗೌಡರ ಮನೆಯಲ್ಲಿ **'ಹೊಸಕುಮಾರರಾಮನ ಸಾಂಗತ್ಯ'**[೨] ಶೀರ್ಷಿಕೆಯ ಕಾಗದ ಪ್ರತಿ ಲಭ್ಯವಾದವು.

---

* ಸಂಡೂರಿನ ಮ್ಯಾಸನಾಯಕರ ಕೆಂಚಯ್ಯನೆಂಬ ವೃದ್ಧನು ಪಾಂಚಾಳ ಗಂಗನ ಕೃತಿಯನ್ನು ಮೂರು ದಿನಗಳ ವರೆಗೆ ಹಾಡುತ್ತಾನೆ.(ಕುಮಾರರಾಮನ ಸಾಂಗತ್ಯಗಳು -ಜಿ. ವರದರಾಜರಾವ್.ಪು.೧೧೫. ಅ. ಟಿ.)

೧. ಈ ಹಸ್ತಪ್ರತಿಯ ಆರಂಭದಲ್ಲಿ "ಹಳೆ ಕುಮಾರರಾಮನ ಚರಿತ" ಎಂಬ ಪಾಠವಿದೆ. ಇದನ್ನು ನಾವು "ಹಳೆಯ ಕುಮಾರರಾಮನ ಸಾಂಗತ್ಯ" ಎಂದು ಇಟ್ಟುಕೊಂಡಿದ್ದೇವೆ.

೨. ಈ ಹಸ್ತಪ್ರತಿಯ ಅಂತ್ಯದಲ್ಲಿ "ಹೊಸ ರಾಮ ಸಾಂಗತ್ಯ", "ಹೊಸ ರಾಮನ ಸಾಂಗತ್ಯ" ಎಂಬ ಪಾಠಗಳಿವೆ.ಇವನ್ನು ನಾವು "ಹೊಸ ಕುಮಾರರಾಮನ ಸಾಂಗತ್ಯ" ಎಂದು ಇಟ್ಟುಕೊಂಡಿದ್ದೇವೆ.

ಇವು ಲಿಪಿಕಾರರು ಬರೆದ ಶೀರ್ಷಿಕೆಗಳಾಗಿದ್ದರೂ ಆ ಕಾಲದಲ್ಲಿ ರೂಢವಾಗಿದ್ದ ಪರ್ಯಾಯನಾಮಗಳೆನಿಸುತ್ತದೆ. ಇವೆರಡರ ಸಂಧಿ, ಪದ್ಯಸಂಖ್ಯೆ ಮತ್ತು ಅಂತರ್ಗತ ವಿಷಯ ಹೀಗಿದೆ:

ಹಳೆಯ ಕುಮಾರರಾಮನ ಸಾಂಗತ್ಯ

(ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್ ಪ್ರತಿ)

ಸಂಧಿ	ಪದ್ಯ ಸಂಖ್ಯೆ
೧. ಹೊಸಮಲೆದುರ್ಗ ವರ್ಣನೆ	೮೮
೨. ಕುಮ್ಮಟದುರ್ಗ ವರ್ಣನೆ	೭೬
೩. ಬಹಾದೂರನು ಕುಮ್ಮಟಕೆ ಬಂದುದು	೭೮
೪. ನೇಮಿಯ ಕಾಳಗ	೧೪೦
೫. ಓರುಗಲ್ಲ ಯುದ್ಧ	೨೫೫
೬. ನೀರಾಟ-ಚಂಡಿನಾಟ-ರತ್ನಾಜಿ ವ್ಯಾಮೋಹ	೪೪೧
೭. ನೆಲಮಾಳಿಗೆಯಲ್ಲಿ ಕುಮಾರರಾಮ	೨೦೮
೮. ನೇಮಿಯ ಕಾಳಗ -ಸೋಲು	೧೫೯
೯. ಮಾದಿಗಿತ್ತಿ ಕಾಳಗ	೧೭೮
೧೦. ತೆಲುಗರ ಸಂಚು-ರಾಮನ ಮರಣ	೧೫೪
ಒಟ್ಟು	೧೭೫೭

ಹೊಸ ಕುಮಾರರಾಮನ ಸಾಂಗತ್ಯ

(ಕಂಪಲಿ ಶ್ರೀ ದೊಡ್ಡನಗೌಡರ ಪ್ರತಿ)

ಸಂಧಿ	ಪದ್ಯಸಂಖ್ಯೆ
೧. ದೇವಗಿರಿ ಯಾದವರಲ್ಲಿ ಮುಮ್ಮಡಿಸಿಂಗ	೯೯
೨. ರಾಯದುರ್ಗದಲ್ಲಿ ಮುಮ್ಮಡಿಸಿಂಗ -ಕಂಪಿಲ	೧೦೨
೩. ಕುಮಾರರಾಮನ ಜನನ - ಹೊಸಮಲೆಯಲ್ಲಿ ಕಂಪಿಲ	೧೦೩
೪. ಗುತ್ತಿಯ ಜಗದಪ್ಪನೊಡನೆ ಕಾಳಗ	೮೯
೫. ಓರುಗಲ್ಲ ಪ್ರವೇಶ	೧೪೭
೬. ಓರುಗಲ್ಲ ಯುದ್ಧ	೧೩೭
೭. ಶೂಲದ ಹಬ್ಬ -ರತ್ನಾಜಿ ವ್ಯಾಮೋಹ	೧೧೨

ಈ ಎರಡೂ ಯಾದಿಯಿಂದ ಇವುಗಳ ವ್ಯತ್ಯಾಸ ತಕ್ಕಮಟ್ಟಿಗೆ ಸ್ಪಷ್ಟವಾಗುತ್ತದೆ. ಹಳೆಯ ಕುಮಾರರಾಮನ ಸಾಂಗತ್ಯದ ಕಥೆ ನೇರವಾಗಿದೆ. ಹೊಸ ಕುಮಾರರಾಮನ ಸಾಂಗತ್ಯದ ಆರಂಭದಲ್ಲಿ ಮುಮ್ಮಡಿಸಿಂಗನು ದೇವಗಿರಿ ಯಾದವರಲ್ಲಿ ರಾಜಸೇವೆಗೆ ನಿಂತನೆಂಬ, ಅಲ್ಲಿಂದ ಮಲೆಪಲ್ಲಿದೇಶದ ರಾಯದುರ್ಗದಲ್ಲಿ ಆಳಿದನೆಂಬ ಎರಡು ಸಂಧಿಗಳನ್ನು ಹೊಸದಾಗಿ ಸೇರಿಸುವ ಮೂಲಕ ಕಥೆಯನ್ನು ಒಂದಿಷ್ಟು ಹಿಂದಕ್ಕೆ ಒಯ್ಯಲಾಗಿದೆ. ಹಳೆಯ ಕುಮಾರಾಮನ ಸಾಂಗತ್ಯದಲ್ಲಿ ಬರುವ ಬಾದೂರನು ಕುಮ್ಮಟದುರ್ಗಕ್ಕೆ ಬಂದ ವಿವರ, ನೇಮಿಯ ಮೊದಲನೆಯ ಕಾಳಗಗಳನ್ನು ಕೈಬಿಟ್ಟು, ಶೂಲದ ಹಬ್ಬದ ವಿವರವನ್ನು ಹೊಸಕುಮಾರರಾಮನ ಸಾಂಗತ್ಯದಲ್ಲಿ ಹೊಸದಾಗಿ ಸೇರಿಸಲಾಗಿದೆ. ಕುಮ್ಮಟದುರ್ಗದ ವರ್ಣನೆ ಹಳೆಯ ಕುಮಾರರಾಮನ ಸಾಂಗತ್ಯದಲ್ಲಿ ೨ನೆಯ ಸಂಧಿಯಾಗಿ ಬಂದರೆ, ಹೊಸ ಕುಮಾರರಾಮನ ಸಾಂಗತ್ಯದಲ್ಲಿ ೮ನೆಯ ಸಂಧಿಯಷ್ಟು ದೂರ ಬಂದಿದೆ. ಇನ್ನೂ ಕೆಲವು ಸಣ್ಣ ಪುಟ್ಟ ಘಟನೆಗಳನ್ನು (ರಾಮದೇವರಾಯನ ಆಸ್ಥಾನದಲ್ಲಿ ಚಾಮಿದೇವನ ಡೊಂಬರಾಟ, ರತ್ನಾಜಿಯ ತವರುಮನೆ ವಿವರ ಇತ್ಯಾದಿ) ಅಲ್ಲಲ್ಲಿ ಹೆಚ್ಚಿಗೆ ಸೇರಿಸಲಾಗಿದೆ. ಹಳೆಯ ಕುಮಾರರಾಮನ ಸಾಂಗತ್ಯದ ೫, ೬, ೭ ನೆಯ ಸಂಧಿಗಳಿಂದ ಮಾತ್ರ ಹೊಸ ಕುಮಾರರಾಮನ ಸಾಂಗತ್ಯವು ಪದ್ಯಗಳನ್ನು ಸ್ವೀಕರಿಸಿದ್ದು, ಈ ಪದ್ಯಗಳು ಸುಮಾರು ೩೦೦ರಷ್ಟಿವೆ. ಹೀಗಿದ್ದೂ ಕೃತಿಶಿಲ್ಪ, ಹೊಸಪದ್ಯಗಳ ಪ್ರಮಾಣ ಇತ್ಯಾದಿಗಳನ್ನು ಗಮನಿಸಿದರೆ ಇವೆರಡಕ್ಕೂ ಸ್ವತಂತ್ರ ಕೃತಿಸ್ಥಾನ ಕೊಡಬೇಕೆಂಬುದು ಸ್ಪಷ್ಟವಾಗುತ್ತದೆ.

ಈ ಎರಡೂ ಕೃತಿಗಳಿಗೆ ಕವಿ ಇಟ್ಟ ಹೆಸರೇನು? ಎಂಬುದು ಈಗ ಬಗೆಹರಿಯದ ಸಮಸ್ಯೆಯಾಗಿದೆ. ಆದರೆ ಪ್ರಾಚೀನ ಕಾಲದಲ್ಲಿ ಒಂದನ್ನು "ಹಳೆಯ", ಇನ್ನೊಂದನ್ನು "ಹೊಸ" ವಿಶೇಷಣದಿಂದ ಕರೆಯುವುದು ರೂಢಿಯಲ್ಲಿದ್ದಿತೆಂಬುದು ಕುತೂಹಲದ ಸಂಗತಿಯಾಗಿದೆ.

ಹೀಗೆ ಈ ಕೃತಿಗಳ ನಿಜನಾಮದಂತೆ, ಇವುಗಳ ಕವಿನಾಮವೂ ಚರ್ಚೆಗೆ ಎಡೆಮಾಡಿಕೊಡುತ್ತದೆ. ಎರಡರಲ್ಲಿಯೂ

> ಕನ್ನಡದೇಶಕ್ಕೆ ರನ್ನದ ಪದಜಾತಿ
> ಇನ್ನು ಮುನ್ನಿನ ಪಾಂಚಾಳ ।
> ಚೆನ್ನ ಭುಜಂಗನ ಪುತ್ರ ಗಂಗಯ್ಯ ಸಂ
> ಪನ್ನ ಹೇಳಿದನೀ ಕೃತಿಯ ॥

ಎಂಬ ಪದ್ಯವಿದೆ. ಇದು, ಈ ಎರಡರಲ್ಲಿ ಮೂಲತಃ ಯಾವ ಕೃತಿಗೆ ಸಂಬಂಧಿಸಿದೆ? ಎಂಬುದು ಇಲ್ಲಿಯ ಮುಖ್ಯ ಪ್ರಶ್ನೆ. ಈ ವರೆಗೆ ವಿದ್ವಾಂಸರು ಭಾವಿಸಿದಂತೆ, ಈ ಪದ್ಯದಿಂದ ಪ್ರಸ್ತುತ ಕಾವ್ಯದ ಕರ್ತೃ ಪಾಂಚಾಳಗಂಗನೆಂಬ ಅರ್ಥ ಹೊರಡುವುದಿಲ್ಲ; ಈ ಮೊದಲು ಪಾಂಚಾಳಗಂಗನೆಂಬವನು (ಈ ವಸ್ತುವನ್ನು ಕುರಿತ) ಕೃತಿಯನ್ನು

ಹೇಳಿದ್ದಾನೆ- ಎಂಬ ಅರ್ಥಹೊರಡುತ್ತದೆ. ('ಇನ್ನು ಮುನ್ನಿನ' ಗಮನಿಸಿರಿ. ಕೆಲವು ಪ್ರತಿಗಳಲ್ಲಿ 'ಇನ್ನು ಮುನ್ನಿನಲಿ; ಇನ್ನು ಮುನ್ನವನು' ಎಂದು ಸ್ಪಷ್ಟವಾಗಿಯೇ ಇದೆ). ಆದುದರಿಂದ ಇದು ಹೊಸ ಕುಮಾರ ರಾಮನ ಸಾಂಗತ್ಯಕ್ಕೆ ಸಂಬಂಧಿಸಿದ ಪದ್ಯವೆಂದು ನಮ್ಮ ಭಾವನೆ. ಹಾಗಿದ್ದಲ್ಲಿ ಹಸ್ತಪ್ರತಿಗಳಲ್ಲಿ ಗಂಗನನ್ನು ಪ್ರಸ್ತಾಪಿಸುವ

ಪದಜಾತಿಗೆ ಪಾಂಚಾಳ ಗಂಗಯ್ಯನು
ಮುದದಿ ಪೇಳಿದೆನು ಈ ಕೃತಿಯ ।
ಸುಧೆಯ ಸೋನೆಯೊ ಮಾನಿತ ಮಂತ್ರದೇಳಿಗೆಯೊ
ಚದುರ ಸೊಬಗಿನಾ ಗರುವ ॥
ಗರಿಯಿಲ್ಲದಂಬನೊಂದರು ನೂರನೆಚ್ಚರೆ
ಗುರಿ ತಾಗುವುದೆ ಲೋಕದೊಳಗೆ ।
ಗರಿ[ಗ]ಣೆ ಸುದ್ದ ರಾಮಕೃತಿಬಾಣದಿ
ಧುರಧೀರನೆಚ್ಚ ಗಂಗಯ್ಯ॥

ಈ ಪದ್ಯಗಳು ಮಾತ್ರ ಪಾಂಚಾಳ ಗಂಗಯ್ಯ ಬರೆದ ಹಳೆಯ ಕುಮಾರರಾಮನ ಸಾಂಗತ್ಯಕ್ಕೆ ಸಂಬಂಧಿಸಿವೆಯೆಂದು ಹೇಳಬಹುದಾಗಿದೆ. ಈ ವರೆಗಿನ ಚರ್ಚೆಯಿಂದ ಹಳೆಯ ಕುಮಾರರಾಮನ ಸಾಂಗತ್ಯದ ಕರ್ತೃ ಪಾಂಚಾಳಗಂಗ[೧], ಹೊಸ ಕುಮಾರರಾಮ ಸಾಂಗತ್ಯದ ಕರ್ತೃ ಗೊತ್ತಿಲ್ಲವೆಂದು ಒಪ್ಪಿಕೊಳ್ಳಬೇಕಾಗುತ್ತದೆ.

ಈ ಎರಡು ಕೃತಿಗಳ ಬಗೆಗೆ ಸ್ಪಷ್ಟಮಾಡಿಕೊಂಡು ಮುಂದುವರಿಯುವಲ್ಲಿ ಚಿತ್ರದುರ್ಗದ ಪ್ರೊ. ಬಿ. ರಾಜಶೇಖರಪ್ಪ ಅವರಿಂದ ಕುಮಾರರಾಮನನ್ನು ಕುರಿತ ಒಂದು ತಾಳೆಗರಿ ಹಸ್ತಪ್ರತಿ ನಮಗೆ ಲಭಿಸಿತು. ಇದು ಈ ಹಿಂದೆ ಹುಲ್ಲೂರು ಶ್ರೀನಿವಾಸ ಜೋಯಿಸರು ಹೆಸರಿಸಿದ ನಾಗಸಂಗಯ್ಯನ ಕೃತಿಯೇ ಆಗಿದೆ. ಇದರ ಇನ್ನೊಂದು ಕಾಗದ ಪ್ರತಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿದೆ. ಮೈಸೂರು ಕಾಗದ ಪ್ರತಿಯಲ್ಲಿಯ

ಆಧಾರವಿಡಿದು ಹೇಳಿದ ನಾಗಸಂಗಯ್ಯ
ಈ ಧರೆಯ ವಿದ್ವಾಂಸರೊಳಗೆ ।
ಸಾಧಿಸಿ ಅವರ ಸೇವಕರಾಗಿ ಪೇಳ್ವೆನು
ಯಾದವಸಖ ಪಾರ್ಥ ಕಥೆಯ ॥

ಎಂಬ ಪದ್ಯವನ್ನು ಗಮನಿಸಿ ಹುಲ್ಲೂರು ಅವರು, ಇದು ಸ್ವತಂತ್ರ ಕೃತಿಯೆಂದೂ, ಇದರ ಕರ್ತೃ ನಾಗಸಂಗಯ್ಯನೆಂದೂ ಪ್ರಚುರಪಡಿಸಿದ್ದಾರೆ. ಆದರೆ ಇದು ಗಂಗನ ವಿಸ್ತೃತ ಪಾಠವೇ ಹೊರತು ಸ್ವತಂತ್ರ

---

೧. ಶ್ರೀ ಎಸ್.ಆರ್.ಕೂಡ್ಲಿಗಿ ಅವರು ಇದರ ಕರ್ತೃ ಗಂಗಾಧರ ಎಂದು ಹೇಳುತ್ತಾರೆ. (ಜಯಕರ್ನಾಟಕ, ಜೂನ್ ೧೯೪೨.) ಇದಕ್ಕೆ ಆಧಾರ ಕೊಟ್ಟಿಲ್ಲ. ಗಂಗ ಎಂಬುದನ್ನೇ ಗಂಗಾಧರ ಎಂದು ಸುಧಾರಣೆ ಮಾಡಿರುವರೆ? ಕುಮಾರರಾಮನ ಸಾಂಗತ್ಯವನ್ನು ಕುರಿತು ಹುಲ್ಲೂರು ಶ್ರೀನಿವಾಸ ಜೋಯಿಸರು ವಾಗ್ಭೂಷಣದಲ್ಲಿ (೧೯೪೮) ಲೇಖನ ಬರೆದಿರುವರೆಂದೂ, ಇದರಲ್ಲಿ ೬ ಸಂಧಿ, ೧೮೮೫ ಪದ್ಯಗಳಿದ್ದು, ಇದನ್ನು ಬೂದಿಹಾಳ ಗಂಗ ಬರೆದಿರುವನೆಂದೂ ಹೇಳಿರುವರೆಂದು ತಿಳಿದುಬರುತ್ತದೆ. ಗಂಗಾಧರ ಮತ್ತು ಬೂದಿಹಾಳ ಇವೆರಡೂ ಪರಿಶೀಲನಾರ್ಹವಾಗಿವೆ.

ಕೃತಿಯಲ್ಲವೆಂದು ಡಾ, ವರದರಾಜರಾವ್ ಹೇಳುತ್ತಾರೆ. ಇಲ್ಲಿ ಒಂದಿಷ್ಟು ಚರ್ಚೆ ಅವಶ್ಯ. ಪ್ರೊ. ರಾಜಶೇಖರಪ್ಪ ಅವರಿಂದ ಬಂದ ತಾಳೆಪ್ರತಿಯಲ್ಲಿ "ಆಧಾರವಿಡಿದು ಹೇಳಿದ ನಾಗಸಂಗಯ್ಯ' ಎಂಬುದಕ್ಕೆ ಬದಲು "ಆಧಾರವಿಡಿದು ಪೇಳಿದನಾಗ ಗಂಗಯ್ಯ" ಎಂಬ ಪಾಠವಿದೆ. ಗಂಗಯ್ಯನೆಂಬವನು (ಐತಿಹಾಸಿಕ) ಆಧಾರಗಳನ್ನವಲಂಬಿಸಿ ಪೂರ್ವಕಾಲದಲ್ಲಿ ಕೃತಿಯೊಂದನ್ನು ಬರೆದಿರುವನೆಂದು ಈ ಪದ್ಯ ಸೂಚಿಸುವಂತಿದೆ. ಆತ ಪಾಂಚಾಳ ಗಂಗನೇ ಆಗಿದ್ದಾನೆ. "ಅವರ ಸೇವಕನಾಗಿ ಪೇಳ್ವೆನು" ಅಂದರೆ, ನಾನು ಆ ಪಾಂಚಾಳ ಗಂಗನ ಸೇವಕನಾಗಿ ಈ ಕೃತಿ ಬರೆಯುತ್ತೇನೆ ಎಂಬುದು ಇಲ್ಲಿಯ ಆಶಯ. ಇವನ ಹೊಸತನವೆಂದರೆ, ಇದರಲ್ಲಿ ಪಾರ್ಥನ ಕಥೆಯನ್ನು ಸಮೀಕರಿಸುತ್ತೇನೆ -ಎಂಬುದು. ಈ ಹೇಳಿಕೆಯಂತೆ ಅರ್ಜುನನೇ ಕುಮಾರರಾಮನಾಗಿ ಊರ್ವಸಿಯೇ ರತ್ನಾಜಿಯಾಗಿ ಹುಟ್ಟಿದಳೆಂಬ ತಂತ್ರ ಬಳಸಿ, ತನ್ನ ಕಾವ್ಯವನ್ನು ಈತ ಬರೆದಿದ್ದಾನೆ. ಈ ವಿವರಣೆಯ ಹಿನ್ನೆಲೆಯಲ್ಲಿ ಹುಲ್ಲೂರ ಅವರು ಒಪ್ಪಿಕೊಂಡ ನಾಗಸಂಗಯ್ಯ ಹೆಸರನ್ನು ಕೈಬಿಡಬೇಕಾಗುತ್ತದೆ. ಆದರೆ ಈ ಕವಿ ತನ್ನ ಹೆಸರನ್ನು ಎಲ್ಲಿಯೂ ಹೇಳಿಕೊಂಡಿಲ್ಲ. ಹೀಗಾಗಿ ಸದ್ಯ ಇವನ ಕಾಲ, ದೇಶಗಳ ವಿಷಯವಾಗಿ ಏನನ್ನೂ ಹೇಳುವಂತಿಲ್ಲ. ಕೃತಿ ನಾಮವನ್ನೂ ಇವನು ನಿರ್ದಿಷ್ಟವಾಗಿ ಉಲ್ಲೇಖಿಸಿಲ್ಲವಾಗಿ, ಲಿಪಿಕಾರ ಸೂಚಿಸಿದ "ಕೊಮಾರ ರಾಮಯ್ಯನ ಚರಿತ್ರೆ" ಎಂಬುದನ್ನು ನಾವು ಸ್ವೀಕರಿಸಿದ್ದೇವೆ. ಈ ಕೃತಿಯೂ 'ಹಳೆಯ ಕುಮಾರರಾಮನ ಸಾಂಗತ್ಯ'ದಿಂದ ಸುಮಾರು ೩೦೦ ಪದ್ಯಗಳನ್ನು ಸ್ವೀಕರಿಸಿದೆ.

ಒಟ್ಟಾರೆ, ಒಂದು ಮೂಲಕೃತಿ(ಹಳೆಯ ಕುಮಾರರಾಮನ ಸಾಂಗತ್ಯ)ಗೆ ಈ ಎರಡು ಕೃತಿ(ಹೊಸ ಕುಮಾರರಾಮನ ಸಾಂಗತ್ಯ, ಕೊಮಾರ ರಾಮಯ್ಯನ ಚರಿತ್ರೆ)ಗಳು ಋಣಿಯಾಗಿದ್ದರೂ ಇದು ಅನುದ್ದೇಶಿತವಾಗಿ ಲಿಪಿಕಾರರಿಂದ ಕಾಲಕಾಲಕ್ಕೆ ಘಟಿಸುತ್ತ ಬಂದ ಕ್ರಿಯೆಯಲ್ಲ. ಇಬ್ಬರು ಕವಿಗಳು ಉದ್ದೇಶಪೂರ್ವಕವಾಗಿ ಬೆಳೆಸಿದ ರಚನೆ ಎನಿಸುತ್ತದೆ. ಒಬ್ಬ ಹೊಸ ಘಟನೆ ಸೇರಿಸಿದರೆ, ಇನ್ನೊಬ್ಬ ಕುಮಾರರಾಮ - ಅರ್ಜುನ ಸಮೀಕರಣ ತಂತ್ರ ಬಳಸಿದ್ದಾನೆ. ಮೂಲದ ಸುಮಾರು ೧೭೫೦ರಷ್ಟು ಪದ್ಯಗಳ ಕಾವ್ಯದಿಂದ ೩೦೦ ಪದ್ಯಗಳ ಸ್ವೀಕರಣಕ್ಕೆ ಋಣವನ್ನು ಮುಗಿಸಿ, ಒಬ್ಬನು ಸುಮಾರು ೨೫೦೦ ಪದ್ಯದಷ್ಟು ಬೆಳೆಸಿದರೆ, ಇನ್ನೊಬ್ಬ ಸುಮಾರು ೩೦೦೦ದಷ್ಟು ಪದ್ಯಕ್ಕೆ ಬೆಳೆಸಿದ್ದಾನೆ. ಆದುದರಿಂದ ಡಾ. ವರದರಾಜರಾವ್ ಹೇಳುವಂತೆ ಈ ಮೂರೂ ಒಂದೇ ಪಠ್ಯದ ಸಂಕೋಚ -ವಿಸ್ತೃತ ಪಠ್ಯಗಳೆನ್ನುವುದಕ್ಕಿಂತ ಸ್ವತಂತ್ರ ಪಠ್ಯಗಳೆಂದೇ ಹೇಳುವುದು ಸೂಕ್ತ.

ಈ ಮೂರು ಕೃತಿಗಳನ್ನಲ್ಲದೆ ಹಂಪೆಯ ಮಹಾಲಿಂಗಸ್ವಾಮಿ "ಬಾಲರಾಮನ ಸಾಂಗತ್ಯ" ಹೆಸರಿನ ಕೃತಿ ಬರೆದುದು (ವರದರಾಜರಾವ್ ಪ್ರಕಾರ ಇದರ ಹೆಸರು "ಬಾಲಕೊಮಾರ ರಾಮನ ಸಾಂಗತ್ಯ") ಎಲ್ಲರಿಗೂ ಗೊತ್ತು. ಇವುಗಳಲ್ಲದೆ ಕುಮಾರರಾಮನನ್ನು ಕುರಿತು ನಂಜುಂಡ ಬರೆದ ಐದನೆಯ ಕೃತಿ 'ರಾಮನಾಥ ಚರಿತೆ' ಸರ್ವಶ್ರುತ. ಆದುದರಿಂದ ಮೇಲೆ ವಿವೇಚಿಸಿದಂತೆ ಈವರೆಗೆ ಕುಮಾರ ರಾಮನನ್ನು ಕುರಿತು ಈ ಕೆಳಗಿನಂತೆ ೫ ಕೃತಿಗಳು ಹುಟ್ಟಿವೆ:

೧. ಹಳೆಯ ಕುಮಾರ ರಾಮನ ಸಾಂಗತ್ಯ -ಪಾಂಚಾಳ ಗಂಗ

೨. ಹೊಸ ಕುಮಾರ ರಾಮನ ಸಾಂಗತ್ಯ -ಅನಾಮಧೇಯ ಕವಿ: ೧

೩. ಕೊಮಾರ ರಾಮಯ್ಯನ ಚರಿತ್ರೆ - ಅನಾಮಧೇಯ ಕವಿ: ೨

೪. ಬಾಲರಾಮನ ಸಾಂಗತ್ಯ -ಮಹಾಲಿಂಗಸ್ವಾಮಿ

೫. ರಾಮನಾಥ ಚರಿತೆ -ನಂಜುಂಡ

ಈ ಐದರಲ್ಲಿ ಈ ವರೆಗೆ ನಂಜುಂಡನ ಕೃತಿ ಮಾತ್ರ ಪ್ರಕಟವಾಗಿದ್ದಿತು. ಇತ್ತೀಚೆ ನಾನು ಹೊಸಕುಮಾರರಾಮನ ಸಾಂಗತ್ಯ, ಕೊಮಾರ ರಾಮಯ್ಯನ ಚರಿತ್ರೆ, ಬಾಲ ರಾಮನ ಸಾಂಗತ್ಯಗಳನ್ನು ಪರಿಷ್ಕರಿಸಿ ಪ್ರಕಟಿಸಿದ್ದು, ಈಗ ಹಳೆಯ ಕುಮಾರ ರಾಮನ ಸಾಂಗತ್ಯವನ್ನು ಬೆಳಕಿಗೆ ತರುತ್ತಲಿದ್ದೇನೆ.ಈ ಐದೂ ಕೃತಿಗಳ ಸಂಬಂಧ ಹೀಗಿವೆ :

೧. ಹಳೆಯ ಕುಮಾರರಾಮನ ಸಾಂಗತ್ಯ   ೪. ಬಾಲರಾಮನ ಸಾಂಗತ್ಯ   ೫. ರಾಮನಾಥ ಚರಿತೆ

೨. ಹೊಸ ಕುಮಾರರಾಮನ ಸಾಂಗತ್ಯ   ೩. ಕೊಮಾರರಾಮಯ್ಯನ ಚರಿತ್ರೆ

III

ಹಳೆಯ ಕುಮಾರ ರಾಮನ ಸಾಂಗತ್ಯ

"ಹಳೆಯ ಕುಮಾರರಾಮನ ಸಾಂಗತ್ಯ" ಕೃತಿಯು ಹೊಸ ಕುಮಾರರಾಮನ ಸಾಂಗತ್ಯ, ಕೊಮಾರ ರಾಮಯ್ಯನ ಚರಿತ್ರೆಗಳಿಗೆ ನೇರ ಮಾತೃ ಸ್ಥಾನದಲ್ಲಿದ್ದರೆ, ಮಿಕ್ಕವುಗಳಿಗೆ ಪರ್ಯಾಯ ಮಾತೃ ಸ್ಥಾನದಲ್ಲಿದೆ. ಇದರ ಕರ್ತೃ, ಕಾಲ, ಕೃತಿನಾಮ, ಕೃತಿಗಾತ್ರ ಇತ್ಯಾದಿಗಳ ವಿವೇಚನೆ ಇಲ್ಲಿ ಪ್ರಸ್ತುತವೆನಿಸಿದೆ.

ಕವಿ-ಕಾಲ :

ಕುಮಾರ ರಾಮನ ಜೀವನ ಗತಿಯನ್ನು ಸಾಹಿತ್ಯ ಕೃತಿಯನ್ನಾಗಿಸಿದ ಗಂಗಯ್ಯ ಈ ಕೃತಿಯಲ್ಲಿ ಮೂರು ಸಲ ತನ್ನ ಬಗ್ಗೆ ಹೀಗೆ ಪ್ರಸ್ತಾಪಿಸಿದ್ದಾನೆ.

ಪದ ಜಾತಿಗೆ ಪಾಂಚಾಳ ಗಂಗಯ್ಯನು
ಮುದದಿ ಪೇಳಿದನು ಈ ಕೃತಿಯ ।
ಸುಧೆಯ ಸೋನೆಯೊ ಮಾನಿತ ಮಂತ್ರದೇಳಿಗೆಯೊ।
ಚದುರ ಸೊಬಗಿನಾ ಗರುವ ॥

ಗರಿಯಿಲ್ಲದಂಬನೊಂದರುನೂರನೆಚ್ಚರೆ
ಗುರಿ ತಾಗುವುದೆ ಲೋಕದೊಳಗೆ ।
ಗರಿ ಗಣೆ ಸುದ್ದ ರಾಮಕೃತಿಬಾಣದಿ ।
ಧುರಧೀರನೆಚ್ಚ ಗಂಗಯ್ಯ ॥

ಹೊಸ ನುಡಿ ರಸಕಾವ್ಯ ನೀತಿ ಬಂಧವ ಕಂಡು
ನಸು ಕವಿಗಳು ಮಚ್ಚರಿಸೆ ।
ಒಸೆದು ಕೇಳ್ವರಿಗೆ ಕರ್ಜುರದ ಮಾವಿನ ಹಣ್ಣು
ರಸಿಕನಿಂತೆಂದ [ಗಂಗ]ಯ್ಯ ॥

ಇಲ್ಲಿ ತಾನು ಪಾಂಚಾಳ (ಜಾತಿಯವ?) ನೆಂದೂ, ತನ್ನ ಹೆಸರು ಗಂಗಯ್ಯನೆಂದೂ ಹೇಳಿದ್ದಾನೆ. "ಹೊಸ ಕುಮಾರ ರಾಮನ ಸಾಂಗತ್ಯ"ದ ಅನಾಮಧೇಯ ಕರ್ತೃ

ಕನ್ನಡ ದೇಶಕೆ ರನ್ನದ ಪದಜಾತಿ
ಇನ್ನು ಮುನ್ನಿನ ಪಾಂಚಾಳ ।
ಚೆನ್ನ ಭುಜಂಗನ ಪುತ್ರ ಗಂಗಯ್ಯ ಸಂ
ಪನ್ನ ಪೇಳಿದನೀ ಕೃತಿಯ ॥

ಎಂಬ ಪದ್ಯದಲ್ಲಿ ತನಗಿಂತ ಮೊದಲು ಪಾಂಚಾಳ (ಜಾತಿಯ?) ಗಂಗಯ್ಯನು ಈ ವಸ್ತುವನ್ನು ಕುರಿತು ಕೃತಿ ಬರೆದನೆಂದೂ, ಆತನು (ಚೆನ್ನ) ಭುಜಂಗನ ಪುತ್ರನೆಂದೂ ಹೇಳುತ್ತಾನೆ. "ಪುತ್ರ" ಎಂಬುದಕ್ಕೆ ಬದಲು ಕೆಲವು ಪ್ರತಿಗಳಲ್ಲಿ "ಭೃತ್ಯ" ಎಂಬ ಪಾಠವೂ ಇದೆ. ಇನ್ನು ಅನಾಮಧೇಯ ಕವಿಯ "ಕೊಮಾರ ರಾಮಯ್ಯನ ಚರಿತ್ರೆ"ಯಲ್ಲಿ

ಆಧಾರವಿಡಿದು ಹೇಳಿದನಾಗ ಗಂಗಯ್ಯ
ಈ ಧರೆ ವಿದ್ವಾಂಸರೊಳಗೆ ।
ಸಾಧಿಸಿ ಅವರ ಸೇವಕನಾಗಿ ಪೇಳ್ವೆನು
ಯಾದವಸಖ ಪಾರ್ಥ ಕಥೆಯ ॥

ಎಂದು ಹೇಳುತ್ತ, ಈ ಮೊದಲು ಗಂಗಯ್ಯನೆಂಬುವನು ಪ್ರಾಚೀನ ಆಧಾರಗಳನ್ನಾಧರಿಸಿ ರಚಿಸಿದ ಕೃತಿಯನ್ನು ಈಗ ತಾನು ಅರ್ಜುನನೊಂದಿಗೆ ಕುಮಾರ ರಾಮನನ್ನು ಸಮನ್ವಯಗೊಳಿಸಿ ಮತ್ತೆ ರಚಿಸುತ್ತೇನೆ ಎಂದು ಸಾರಿದ್ದಾನೆ.

ಇವೆಲ್ಲವುಗಳನ್ನು ಸಂಗ್ರಹಿಸಿದರೆ ಇದರ ಕರ್ತೃ ಗಂಗಯ್ಯ, ತಂದೆ ಅಥವಾ ಗುರು (ಚೆನ್ನ)ಭುಜಂಗ, ಬಹುಶಃ ಜಾತಿಯಿಂದ ಪಾಂಚಾಳ. ಇಷ್ಟನ್ನು ಬಿಟ್ಟರೆ ಬೇರೆ ಯಾವ ಮೂಲಗಳಲ್ಲಿಯೂ ಹೆಚ್ಚಿನ ಸಂಗತಿ ಸಿಗುವುದಿಲ್ಲ. ಹೀಗಿದ್ದೂ ಇವನ ಹೆಸರು ಗಂಗಾಧರನೆಂದು ಶ್ರೀ ಎಸ್.ಆರ್. ಕೂಡ್ಲಿಗಿ ಅವರು, ಇವನ ಊರು ಬೂದಿಹಾಳವೆಂದು ಶ್ರೀ ಹುಲ್ಲೂರು ಅವರು ಹೇಳುತ್ತಾರೆ. (ಹಿಂದಿನ ಅ.ಟಿ. ನೋಡಿರಿ) ಇವರಿಗೆ ಏನು ಆಧಾರವೋ ಗೊತ್ತಾಗುವುದಿಲ್ಲ. ಕರ್ನಾಟಕದಲ್ಲಿ ಬೂದಿಹಾಳ ಹೆಸರಿನ ಅನೇಕ ಗ್ರಾಮಗಳಿರುವುದರಿಂದ ಈ ಬಗ್ಗೆ ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಈ ಕವಿಯ ಜಾತಿ ಪಾಂಚಾಳ ಅಂದರೆ ವಿಶ್ವಕರ್ಮನೆಂದು ಹೇಳಲು ಮನಸ್ಸಾಗುತ್ತಿದ್ದರೂ ಇದಕ್ಕಿರುವ 'ಪಂಚಾಸ್ಯ' ಎಂಬ ಪಾಠಾಂತರ ಇವನ ಜಾತಿಯ ಬಗ್ಗೆ ಸಂದೇಹ ಹುಟ್ಟಿಸುತ್ತದೆ. ಪಾಂಚಾಳವೆಂಬುದು ಮಾಸ್ಯಾಳ, ಬಂದಾಳಗಳಂತೆ ಗ್ರಾಮನಾಮವಾಗಿರಲೂಬಹುದು. ಈ ಗಂಗನನ್ನು ಹೊರತುಪಡಿಸಿ ಮಿಕ್ಕ ನಾಲ್ಕೂ ಜನ ಕವಿಗಳು ವೀರಶೈವರಾಗಿದ್ದಾರೆ. ಮತ್ತು ಈ ಕೃತಿಯ ತುಂಬ ಶೈವ ವಾತಾವರಣವಿದೆ. ಕಿಟೆಲ್ ಅವರು ಛಂದೋಂಬುಧಿಗೆ ಬರೆದ ಸಾಹಿತ್ಯಚರಿತ್ರೆ ರೂಪದ ಪ್ರಸ್ತಾವನೆ(೧೮೭೨)ಯಲ್ಲಿ, ಬಿ.ಎಲ್.ರೈಸ್ ಅವರು ಕರ್ನಾಟಕ ಭಾಷಾಭೂಷಣಕ್ಕೆ ಬರೆದ ಪ್ರಸ್ತಾವನೆ (೧೮೮೪)ಯಲ್ಲಿ ಗಂ(ರಂ)ಗಯ್ಯನು ಲಿಂಗಾಯತನೆಂದು ದಾಖಲಿಸಿದ್ದಾರೆ. ಹೀಗಿದ್ದೂ ಕರ್ನಾಟಕದಲ್ಲಿ ಶಿವೋಪಾಸಕರು ಬೇರೆ ಬೇರೆ ಜಾತಿಯವರಿರುವುದರಿಂದ ಈ ಕವಿಯ ಜಾತಿಯ ಬಗ್ಗೆ ಸಂದೇಹವಿಟ್ಟುಕೊಳ್ಳುವುದು ಲೇಸು.

ಕವಿ ಪಾಂಚಾಳ ಗಂಗನ ಕಾಲ ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಈತ ತನ್ನ ಹಿಂದಿನ ಕವಿಗಳನ್ನು ಸ್ತುತಿಸಿಲ್ಲ, ಮುಂದಿನ ಕವಿಗಳೂ ಇವನನ್ನು ಹೆಸರಿಸಿಲ್ಲ, ಹೆಸರಿಸಿರುವ ಕುಮಾರ ರಾಮನ ಎರಡು ಕೃತಿಕರ್ತೃಗಳೇ

ಅನಾಮಧೇಯರಾಗಿರುವುದರಿಂದ ಇವನ ಕಾಲ ನಿರ್ಣಯಕ್ಕೆ ಈ ಕೃತಿಗಳೂ ಅಪ್ರಯೋಜಕವೆನಿಸುತ್ತವೆ. ಕವಿ ಚರಿತೆಕಾರರು ಮಾತ್ರ ಕ್ರಿ.ಶ. ೧೬೫೦ ಎಂದು ಹೇಳಿದ್ದಾರೆ.

ಕೃತಿನಾಮವೂ ಹಸ್ತಪ್ರತಿಗಳಲ್ಲಿ ಭಿನ್ನರೂಪದಿಂದ ಸಿಗುವುದರಿಂದ, ಈ ಬಗ್ಗೆಯೂ ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಹಸ್ತ ಪ್ರತಿಗಳಲ್ಲಿ ಪದ್ಯಸಂಖ್ಯೆಯೂ ಏಕರೂಪವಾಗಿಲ್ಲ. ಕಡಿಮೆಯೆಂದರೆ ೧೫೦೦ರಷ್ಟು ಹೆಚ್ಚೆಂದರೆ ೩೦೦೦ದಷ್ಟು ಪದ್ಯಗಳು ಕಂಡುಬರುತ್ತವೆ. ನಾವು ಬಳಸಿದ ೧೭೫೭ ಪದ್ಯಗಳ ಹಸ್ತಪ್ರತಿಯು ಹಳೆಯ ಕುಮಾರರಾಮನ ಸಾಂಗತ್ಯವೆನ್ನುತ್ತ 'ಹಳೆಯ' ಶಬ್ದದ ಮೇಲೆ ಒತ್ತು ನೀಡುತ್ತಲಿರುವುದರಿಂದ, ಗಂಗನ ಕೃತಿಯ ಗಾತ್ರ ಇಷ್ಟೇ ಆಗಿರಬಹುದು.ಕವಿ ಚರಿತೆಕಾರರು ಮಾತ್ರ ಕ್ರಿ. ಶ. ೧೬೫೦ ಎಂದ ಹೇಳಿದ್ದಾರೆ.

ಕೃತಿ-ಆಕೃತಿ-ಸಂಸ್ಕೃತಿ

ಜೀವನವೆನ್ನುವುದು ಕ್ರಿಯಾಸರಣಿಯಾಗಿರುವುದರಿಂದ ಪ್ರತಿಯೊಬ್ಬನ ಜೀವನ ಚರಿತ್ರೆ ಬೃಹತ್ 'ಕೃತಿ' ಎನಿಸುತ್ತದೆ. ಈ ಅರ್ಥದಲ್ಲಿ ಕುಮಾರರಾಮನ ಜೀವನಚರಿತ್ರೆಯನ್ನು ಪರಿಭಾವಿಸಲು ಹೊರಟರೆ ಶಾಸನಗಳಲ್ಲಿ ಅವನ 'ಜೀವನಕೃತಿ'ಗೆ ಸಂಬಂಧಪಟ್ಟ ವಿವರಗಳು ಕಡಿಮೆ. ಜನಪದ ಸಾಹಿತ್ಯದಲ್ಲಿ ಒಂದಿಷ್ಟು ವಿವರಗಳಿದ್ದರೂ ಅದು ಬಾಯಿಯಿಂದ ಬಾಯಿಗೆ ಬದಲಾಗುತ್ತ ಬಂದ ಪಾಠ. ಆದುದರಿಂದ ತುಂಬ ವಿವರಣಾತ್ಮಕವಾಗಿರುವ ಕಾವ್ಯಗಳಲ್ಲಿ ಮಾತ್ರ ಅವನ 'ಜೀವನಕೃತಿ' ವಿಸ್ತಾರವಾಗಿ ಮೂಡಿದೆಯೆಂದು ಹೇಳಬಹುದಾಗಿದ್ದು, ಈ ಕಾವ್ಯದಲ್ಲಿ ಕಾಣಿಸಿಕೊಂಡ ವಿವರಗಳನ್ನು ಹೀಗೆ ಸಂಗ್ರಹಿಸಬಹುದು.

ಕೃತಿ :

ಕುಮಾರ ರಾಮನನ್ನು ಕುರಿತು ಹುಟ್ಟಿರುವ ಐದು ಕಾವ್ಯಗಳಲ್ಲಿ ಚರಿತ್ರೆಯ ನಿರೂಪಣೆ ಒಂದಿಷ್ಟು ವಿಭಿನ್ನವಾಗಿದೆ. ಕಾವ್ಯವಾಗಿರುವ "ಹಳೆಯ ಕುಮಾರರಾಮನ ಸಾಂಗತ್ಯ"ವು ತನ್ನ ಅಳವಿಗೆ ಸಿಕ್ಕಷ್ಟು, ನಿಲವಿಗೆ ತಕ್ಕಷ್ಟು ಸೆರೆ ಹಿಡಿದಿರುವ ಇವನ "ಜೀವನಕೃತಿ" ಹೀಗಿದೆ.

ಸಂಧಿ : ೧

ಆಗಮವಂದಿತ ಹರನೆ, ತುಂಗಭದ್ರೆಯ ವಿರೂಪಾಕ್ಷನೆ, ಲಕ್ಷ್ಮೀರಮಣನಾದ, ಕೃಷ್ಣನೆ, ಪುಂಡರೀಕನ ಸುತನಾದ ಬ್ರಹ್ಮನೆ, ಗಿರಿಜೆಯ ವರಸುತ ಗಣಪನೆ, ಚಿತ್ರದೋಲೆಯ ಸರಸ್ವತಿಯೆ-ನಿಮ್ಮನ್ನು ಬಲಗೊಳ್ಳುತ್ತೇನೆ. ನಾಲ್ಕು ಯುಗದ ಕವಿಗಳಿಗೆ ವಂದಿಸುತ್ತೇನೆ. ಈ ಕಾವ್ಯದಲ್ಲಿ ಕುಂದಿಲ್ಲ, ಇರಬಹುದಾದ ತಪ್ಪು ತಿದ್ದುವುದು. ಗರಿಯುಳ್ಳ ಬಾಣದಂತೆ ಗಂಗನ ಕಾವ್ಯ ಗುರಿಮುಟ್ಟುತ್ತದೆ. ಪಾಂಚಾಳ ಗಂಗನಾದ ನಾನು ಈ ಕೃತಿ ಹೇಳಿದೆನು. ರಾವಣನನ್ನು ಕೊಂದ ರಾಮನಂಥ, ಕ್ಷತ್ರಿಯರನ್ನು ನಾಶಮಾಡಿದ ಬಲರಾಮನಂಥ ಕಂಪಿಲನ ರಾಮಯ್ಯನ ಕಥೆ ಕೇಳಿರಿ.

ಈ ಧರೆಯ ಮೇಲೆ ಪರ್ವತದ ದಕ್ಷಿಣಕ್ಕೆ ಕನ್ನಡದೇಶ ಒಪ್ಪಿದೆ. ಲೋಕದ ಎಪ್ಪತ್ತಾರು ನದಿಗಳಲ್ಲಿ ಶ್ರೇಷ್ಠವಾಗಿರುವ ತುಂಗಭದ್ರೆ ಅಲ್ಲಿ ಶೋಭಿಸುತ್ತದೆ. ಆ ಪ್ರದೇಶದಲ್ಲಿ ಮುಮ್ಮಡಿ ಸಿಂಗಯ್ಯನ ರಾಜ್ಯವಾಳುತ್ತಿದ್ದು, ಬೇಟೆಯಾಡಲು ಒಮ್ಮೆ ಹೊಸಮಲೆಗೆ ಹೋದನು. ಗಿರಿ-ಗಹ್ವರ, ಹುಲಿ-ಕರಡಿ, ಕಾಡೆಮ್ಮೆ-ಕೋಣ, ಎಕ್ಕಲ-ಹುಲ್ಲೆಗಳಿಂದ ಅದು ತುಂಬಿಹೋಗಿದೆ. ಇಲ್ಲಿ ಸಿಂಗಯ್ಯನ ನಾಯಿ ೨ ಮೊಲಕ್ಕೆ ಬೆನ್ನಟ್ಟುವಷ್ಟರಲ್ಲಿ ಮೊಲವೇ ನಾಯಿಗೆ ಬೆನ್ನಟ್ಟಿತು. ಇದು 'ಕಲಿಭೂಮಿ' ಎಂದು ಭಾವಿಸಿ, ಅವನು ಕುರಿಗಳನ್ನು ಬಲಿಕೊಟ್ಟು, ದುರ್ಗದಿಂದ ಸುತ್ತವರಿದ ರಾಜಧಾನಿ ಪಟ್ಟಣ ಕಟ್ಟಿಸಿದ. ಕುಂಭಕರ್ಣ- ರಾವಣ ಹೆಸರಿನ ಕೊತ್ತಳ, ನಾರಸಿಂಹ- ವೀರಬ್ರಹ್ಮ-

ಆದಿಬ್ರಹ್ಮ- ರುದ್ರ ಹೆಸರಿನ ಕೊತ್ತಳ, ಬಸವನ ಮೂರು ಮೂಲೆಯ ಕಲ್ಲ ಕೊತ್ತಳ, ಜಟ್ಟಿಗ - ಮರುಳ ಕೊತ್ತಳ, ಹುಲಿಮುಖ ಕೊತ್ತಳಗಳು ತಲೆಯೆತ್ತಿದವು. ಮುತ್ತಿನ ಸತ್ತಿಗೆ, ಮಕರತೋರಣ, ಉಪ್ಪರಗುಡಿ, ಹೊನ್ನಕಳಸ, ಪೆಟಲು ಡೆಂಕಣಿ, ಹುರಿದ ಮಳಲ ಕೊಪ್ಪರಿಗೆ, ಮದನ ಹಸ್ತ, ಹೊಗೆಬಾಣ, ಚೋರಗಂಡಿ, ಅಂಬುಗಂಡಿ, ಚಾವಡಿ ಅಲ್ಲಿ ಶೋಭಿಸಿದವು. ಬಾಗಿಲದ ಇಕ್ಕೆಲಗಳಲ್ಲಿ ದುರ್ಗಿ, ಹನುಮ, ವೀರಭದ್ರ ವಿಗ್ರಹಗಳು ರಕ್ಷಕರಾಗಿ ನಿಂತಿವೆ. ಅಂಗಡಿ, ರಾಜಬೀದಿಗಳಿವೆ. ಅಂಗಡಿಗಳಲ್ಲಿ ಮುತ್ತು, ಹವಳ, ಪಚ್ಚೆಗಳು ಎದ್ದು ಕಾಣುತ್ತಿವೆ. ಚಿನಿವಾರ ಅಂಗಡಿ, ಕಂಚಿನ ಪಸರ, ಬಳೆಯ ಅಂಗಡಿ, ಪರಿಮಳದಂಗಡಿ, ಪಟ್ಟೆಸಾಲೆ, ದೊರೆಗಳ ಮನೆ, ಮಂತ್ರಿಮಾನ್ಯರ ಮನೆ, ತುಳುವರಕೇರಿ, ಅರಮನೆಯಲ್ಲಿ ಭೋಜನ ಶಾಲೆ, ಲಕ್ಷ್ಮೀಗೃಹ, ಗರಡಿ, ಚಾವಡಿಗಳು ಶೋಭಿಸುತ್ತಿವೆ. ಸೂಳೆಗೇರಿಯಲ್ಲಿ ಬಿಡುಮುಡಿ, ಕುಡಿಹುಬ್ಬು, ಜಡಿವ ಮಾಣಿಕಹಾರ, ಬಡನಡು, ಬಟ್ಟಕುಚ, ಕುಡಿನೋಟದ ಕನ್ನೆಯರು ಒಪ್ಪಿದರು. ಕಿರುವಂಜಿ, ರಾವಣಹಸ್ತ, ಮುಖರ ದಂಡಿಗೆಗಳನ್ನು ನುಡಿಸುತ್ತ ಹಾಡುತ್ತಿದ್ದರು. ನವಿಲುಯ್ಯಲೆಯಾಡುತ್ತಿದ್ದರು. ಹೀಗೆ ಹೊಸಮಲೆದುರ್ಗ ರಂಜಿಸುತ್ತಿತ್ತು.

ಸಂಧಿ : ೨

ಈಗ ಕುಮ್ಮಟದುರ್ಗದ ಶೃಂಗಾರವನ್ನು ವರ್ಣಿಸುತ್ತೇನೆ. ಕಲ್ಲುಗುಂಡು, ಮೆಳೆ, ಕೆರೆ, ಬಾವಿ, ಉದ್ಯಾನಗಳು ಇಲ್ಲಿವೆ. ನಿಂಬೆ, ಹೇರೀಳೆ, ದಾಳಿಂಬ, ಚಂದನ, ಅರೆನೆಲ್ಲಿ, ತೆಂಗು, ಮಲ್ಲಿಗೆ, ಜಾಜಿ, ಸೇವಂತಿಗೆ, ಪಡ್ಡಳಿ ಗಿಡಗಳು ಬೆಳೆದು ನಿಂತಿವೆ. ಹಂಸ, ಮರಾಳ, ಅರಗಿಳಿ, ನವಿಲು, ಕೋಗಿಲಗಳು ವಿಹರಿಸುತ್ತವೆ. ಕೋಟೆ, ವಂಕದ್ವಾರ, ಹುಲಿಮುಖ, ಹೇರಂಬ ಕೊತ್ತಳ, ಮಾರಿ ದುರ್ಗಿ ಭೈರವನ ಕೊತ್ತಳ, ವೀರಭದ್ರನ ಕೊತ್ತಳಗಳು ಒಪ್ಪಿವೆ. ಕೋಟೆಯ ಸುತ್ತ ಆಳ್ವೇರಿ, ಅಟ್ಟಣೆ, ಡೆಂಕಣಿ, ಚೋರಗಂಡಿ, ಅಂಬುಗಂಡಿ, ಕೋವಿ, ಮರುಳಕೈ, ಉರಿಬಾಣ, ಹುರಿದ ಮಳಲ ಕೊಪ್ಪರಿಗೆ, ಕವಣೆಗಲ್ಲು, ಕಾಸುವ ಅಂಬಲಿ ಕೊಪ್ಪರಿಗೆ, ಮದನ ಹಸ್ತ ನವರಂಗ, ಒಂಬತ್ತು ಬಾಗಿಲ ಉಪ್ಪರಿಗೆ, ಸೋಮವೀಧಿ, ಸೂರ್ಯವೀಧಿಗಳು ಶೋಭಿಸಿವೆ.

ಕನಕದಂಗಡಿ, ಕಂಚಿನಂಗಡಿ, ಕಸ್ತುರಿ ಅಂಗಡಿ, ಗಂದಿಗರ ಅಂಗಡಿಗಳು ಸಾಲು ಸಾಲಾಗಿದ್ದವು. ಕರಿ, ತುರಗಗಳನ್ನು ತರಬೇತಿಗೊಳಿಸುವವರ, ಶಕುನ ಹೇಳುವವರ, ಜೋಯಿಸರ, ಬ್ರಾಹ್ಮಣರ, ಮಲ್ಲರ, ಮಾಲವರ, ತಳವಾರ - ಭಟಗೊಲ್ಲ-ತೆಲುಗರ ಕೇರಿಗಳಿದ್ದವು. ಟಗರ ಕಾಳಗ, ಕಬ್ಬಿನ ಜೂಜು, ಬೂರಲ ಹಕ್ಕಿ ಕಾಳಗ, ಲೆತ್ತ -ಪಗಡೆ- ಚದುರಂಗಗಳಲ್ಲಿ ತೊಡಗಿದವರು ಅಲ್ಲಿದ್ದರು. ವಿಸ್ತಾರವಾದ ಸೂಳೆಗೇರಿಗಳಲ್ಲಿ ಪದ್ಮಿನಿ, ಚಿತ್ತಿನಿ, ಶಂಕಿನಿ, ಹಸ್ತಿನಿ ಜಾತಿಯ ಸ್ತ್ರೀಯರಿದ್ದರು. ವಿಷಯಾಸಕ್ತ ವಿಟರು, ಮಗಳಿಗೆ ಬೇಟ ಕಲಿಸುವ ವೇಶ್ಯಾಮಾತೆಯರು, ಕೊಂತ ಹಿಡಿದ ಹೊಂತಕಾರಿಯನು ಅಲ್ಲಿದ್ದರು.

ಮಂತ್ರಿಮನ್ನೆಯ ಮಾಂಡಲಿಕರ ಅರಮನೆ, ಚಾವಡಿ, ಉಪ್ಪರಿಗೆ, ಆನೆ ಕುದುರೆ ಕಟ್ಟುವ ಶಾಲೆ, ಗವುಳ, ಗುಜ್ಜರ ಮನೆಗಳು ಶೋಭಿಸುತ್ತಿದ್ದವು. ಪುರಮಧ್ಯದ ರಾಜಬೀದಿಯಲ್ಲಿ ಹೊಂಗಳಸದಿಂದ ಆಕರ್ಷಿಸುವ ಕಂಪಿಲನ ಅರಮನೆಯಲ್ಲಿ ನಾಟಕಸಾಲೆ, ಚಾವಡಿ -ಅದರಲ್ಲಿ ಚಿತ್ರಗೆಲಸ, ಗದ್ದುಗೆಗಳು ವ್ಯವಸ್ಥೆಗೊಂಡಿದ್ದವು. ಇತ್ತರದಲ್ಲಿ ಮನ್ನೆಯರು, ಮಂತ್ರಿ ಪ್ರಧಾನರು ಕುಳಿತಿದ್ದರು. ಅಷ್ಟದಿಕ್ಕಿನ ರಾಯಗಜ ಗಂಡಭೇರುಂಡನಾದ ಕಂಪಿಲನಿಗೆ ಸೃಷ್ಟಿಯ ರಾಜರು ಕಪ್ಪಕಾಣಿಕೆ ಸಲ್ಲಿಸುತ್ತಿದ್ದರು. ಕಹಳೆಗಳು ಬಿರುದನ್ನು ಸಾರುತ್ತಿದ್ದವು. ಎಡಬಲದಲಿ ಚಾಮರದವರು, ಹಡಪಿಗರು, ತುಳುವ, ತುರಕ, ಪಾರುಕರು ನೆರೆದಿದ್ದರು. ಬೊಮ್ಮನಾಯಕ, ಅಳಿಯ ಸೋಮಣ್ಣ, ಕೊಪ್ಪಳ ಮಾಯಿದೇವ, ದಳಪತಿ ಕರಿಯ ಸಿಂಗಣ, ಕಲ್ಲೆನಾಯಕ, ವಾಣಿಯ ನಾಗಣ್ಣ, ಸಂಗಮ, ಹಂಪರಾಜ, ಕಂಪರಾಜ, ಮಾಯಿದೇವ, ಕೊಂಡೆಯಕಾರ ವಿರುಪ, ಸೋವಿದೇವರಸ, ಮಲೆವರ ಗಂಡ ಮಲಿದೇವ, ಲೆಗ್ಗೆ

ಹನುಮ, ನಲ್ಲನಾಗ, ಕಂಪನಾಯಕ ಮೊದಲಾದ ಮನ್ನೆಯರ ನಡುವೆ ಕಂಪಿಲನಿದ್ದನು. ಬಿಲ್ಲುಮಂದಿ, ಎಕ್ಕಟಿಗರು, ಕಟ್ಟಿಗೆಯವರು ನೆರೆದಿರಲು ಆನೆ, ಕುದುರೆ ಕಾಲಾಳು ಕಂಪಿಲನೊಡನೆ ಮೇಳೈಸಿದ್ದವು.

ಸಂಧಿ : ೩

ಸುರಿತಾಳನ ಓಲಗವನ್ನು ವರ್ಣಿಸುತ್ತೇನೆ. ಹಸ್ತಿನಿ ಕಾರಣವಾಗಿ ಹಸ್ತಿನಾಪುರವು ಅಸ್ತಿತ್ವಕ್ಕೆ ಬಂದಿದೆ. ಈ ಡಿಳ್ಳಿಯಲ್ಲಿ ಮುತ್ತು ಮಾಣಿಕದ ಅಂಗಡಿ, ಕನಕ-ಕಂಚಿನ ಅಂಗಡಿ, ಸೂರ್ಯಬೀದಿ-ಚಂದ್ರಬೀದಿ, ಸೂಳೆಗೇರಿ ಶೋಭಿಸುತ್ತಿವೆ. ಇಂಥ ರಾಜಧಾನಿಯಲ್ಲಿ ಸುರತಾಳನ ಅರಮನೆ ಆಕರ್ಷಕವಾಗಿದೆ. ಒಂದು ದಿನ ಸುರಿತಾಳನು ಚಾವಡಿಯಲ್ಲಿ ಆಸೀನನಾದನು. ಮಂತ್ರಿ ಪ್ರಧಾನರು ನೇಮಿಖಾನ ಎಡಬಲದಲ್ಲಿದ್ದರು. ಅನೇಕ ಜನ ಖಾನರು ನೆರೆದಿದ್ದರು. ಆಗ ಮುಂಗುಲಿರಾಯನಿಂದ ಒಂದು ಬಿಲ್ಲು ಕಾಣಿಕೆಯಾಗಿ ಬಂದಿತು. ಹೆದೆಯೇರಿಸಿ ಪ್ರಯೋಗಿಸಲು ಅಸಾಧ್ಯವಾದ ಬಿಲ್ಲನ್ನು ಬಾದೂರಖಾನನು ಕೈಗೆತ್ತಿಕೊಂಡು, ಏಳುಕೊಪ್ಪರಿಗೆಗಳನ್ನು ಗುರುಯಿಟ್ಟು ಭೇದಿಸಿದನು. ಇಂಥ ಬಲಶಾಲಿ ನಮ್ಮಲ್ಲಿ ಬೆಳೆಯುವುದು ನಮಗೆ ಹಿತವಲ್ಲವೆಂದು ಸುರಿತಾಳ ಮತ್ತು ನೇಮಿಖಾನ ರಹಸ್ಯವಾಗಿ ಮಾತನಾಡಿಕೊಂಡರು. ಇದನ್ನು ಕೇಳಿದ ಬಾದೂರ ೫೦೦ ಕುದುರೆಗಳೊಂದಿಗೆ ರಾತ್ರಿಯೇ ದಿಲ್ಲಿಯಿಂದ ಹೊರಟ. ನೇಮಿಯ ದಂಡು ಬೆನ್ನಟ್ಟಿತು. ಬಾದೂರಖಾನ ಕಂಪಿಲರಾಯನ ಮೊರೆಹೊಕ್ಕನು. ಬಾದುರನಿಗೆ ನಂಬುಗೆ ಕೊಟ್ಟು, ಕುಮ್ಮಟದಲ್ಲಿ ಬಿಡಾರ ಒದಗಿಸಲಾಯಿತು.

ಸಂಧಿ : ೪

ಬೆನ್ನಟ್ಟಿದ ನೇಮಿಯ ಸೈನ್ಯ ದಾರಿಯಲ್ಲಿಯೇ ಬಾದೂರನಿಂದ ಸೋತು ಹಿಂದಿರುಗಿತು. ಸುರತಾಳನು ಸಿಟ್ಟಿಗೆದ್ದು ನೇಮಿಖಾನನನ್ನು ದಂಡು ಸಹಿತ ಕುಮ್ಮಟಕ್ಕೆ ಕಳಿಸಿದನು. ರಾಮನ ಬೇಡರ ದಂಡು ಸಜ್ಜಾಯಿತು. ಹೊಸಮಲೆದುರ್ಗ, ಕುಮ್ಮಟದುರ್ಗ, ವಾಲಿಭಂಡಾರ, ಹಂಪಿಯ ಹೊಳೆ-ಹೀಗೆ ಗಮನಿಸುತ್ತ ನೇಮಿಯ ದಂಡು ಬಂದಿತು. ಬೇಹಿನವರು ಕಂಪಿಲಗೆ ವೈರಿ ಸೈನ್ಯದ ಸುದ್ದಿ ಮುಟ್ಟಿಸಿದರು. ನೇಮಿಯ ದಂಡು ಕುಮ್ಮಟವನ್ನು ಮುತ್ತಿತು. ಕಾಟಣ್ಣ ಹುಲ್ಲುಹೊರೆ ಮಾರುವವನಂತೆ ನಟಿಸಿ ನೇಮಿಯ ದಂಡಿನ ಜಾಯಿಮಲ್ಲೂಕನನ್ನು ಗಾಸಿಗೊಳಿಸಿದನು. ರಾಮನಾಥನನ್ನು ಸೋಲಿಸುವೆನೆಂದು ಕಾಟಣ್ಣ ನೇಮಿಖಾನನಿಗೆ ಕೃತಕ ನಂಬುಗೆ ಕೊಟ್ಟು, ಅವನಿಂದ ಐವತ್ತು ಕುದುರೆಗಳನ್ನು ಪಡೆದು ಮೂಗು ಕೊಯ್ದು, ಗಡ್ಡ ಕೀಳಿ, ವೈರಿಗಳನ್ನು ಸವರುತ್ತ ಹಿಂದಿರುಗಿದನು. ರಾಮಯ್ಯ ಅಣ್ಣನ ಕಾಳಗಕ್ಕೆ ಸಂತುಷ್ಟವಾಗಿ ಅವನನ್ನು ತಬ್ಬಿಕೊಂಡನು.

ಸಂಧಿ : ೫

ಗುತ್ತಿಯ ಜಗತಾಪಿಯನ್ನು ಸೋಲಿಸಿ ರಾಮಯ್ಯನು ಸುಖವಾಗಿದ್ದನು. ಒಮ್ಮೆ ಕಂಪಿಲರಾಯ ಓಲಗದಲ್ಲಿರುವಾಗ ಅವನ ಐದು ಜನ ಮಕ್ಕಳು ಬಂದು, "ನಮ್ಮ ಕುದುರೆಗಳನ್ನು ಕುಮಾರ ರಾಮ ಕಸಿದುಕೊಂಡ"ನೆಂದು ಚಾಡಿ ಹೇಳಿದರು. "ನಮಗೂ ರಾಮಯ್ಯನಿಗೂ ಹೊಂದಿಕೆಯಿಲ್ಲ, ಒಂದು ಗ್ರಾಮವನ್ನು ಕೊಡು, ಅಲ್ಲಿ ಸುಖವಾಗಿರುತ್ತೇವೆ"- ಎಂದು ದೂರಿದರು. ಕಂಪಿಲರಾಯ ರಾಮನನ್ನು ಕರೆಯಿಸಿದ. "ಕುಮಾರರ ಗಂಡ" ಎಂದು ಸಾರುವ ಬಿರುದಿನೊಂದಿಗೆ ಆಸ್ಥಾನಕ್ಕೆ ಬಂದ ರಾಮಯ್ಯನಿಂದ ಕಂಪಿಲನು ಕುದುರೆಗಳನ್ನು ತರಿಸಿ, ಕುಮಾರರಿಗೆ ಕೊಡಿಸಿದನು. "ನಾನು ಯುದ್ಧದಲ್ಲಿ ಗೆದ್ದು ತಂದ ಕುದುರೆಗಳನ್ನು ಈ ಕುಮಾರರಿಗೆ ಕೊಡಿಸಿದೆ. ಗೆದ್ದು ತರದ ಇವರು ಹೆಣ್ಣುಗಳಿಗೆ ಸಮಾನರು" ಎಂದು ರಾಮಯ್ಯ ಹಂಗಿಸಿದ. "ಈ ಕುದುರೆಗಳೇಕೆ? (ಎಪ್ಪತಿರಾಜನ) ಬೊಲ್ಲ ಕುದುರೆಯನ್ನೇ ಗೆದ್ದು ತರುತ್ತೇನೆ" ಎಂದು ಪ್ರತಿಜ್ಞೆಮಾಡಿ, ತಾಯಿ ಹರಿಯಲದೇವಿಯಿಂದ ಆಶೀರ್ವಾದ ಪಡೆದು, ಹೊನ್ನ ಕಟ್ಟಿನ ಬಿಲ್ಲು, ಹರಿಗೆಗಳ ಹನ್ನೆರಡು ಸಾವಿರ ಸೈನ್ಯ, ಇನ್ನೂರು ತುಳಿಲಸಂದರು,

ಮುನ್ನೂರು ಪಾಯಿಕರೊಂದಿಗೆ ಓರುಗಲ್ಲಿಗೆ ಪ್ರಯಾಣ ಬೆಳೆಸಿದ. ತೆಕ್ಕಲಕೋಟೆ, ಆದವನ್ನಿ ಮೂಲಕ ಕಂದನವೊಳಲಿಗೆ ಬಂದು, ರಾತ್ರಿ ವಾಸ್ತವ್ಯ ಮಾಡಿದ. ಮುಂಜಾನೆ ಎದ್ದು ಸಿದ್ಧವಟ್ಟಕ್ಕೆ, ಬಳಿಕ ಪಾತಾಳಗಂಗೆಗೆ ಬಂದ. ಅಲ್ಲಿ ಸ್ನಾನಮಾಡಿ ಜ್ಯೋತಿಲಿಂಗವನ್ನು ಕಂಡು, ಕೃಷ್ಣವೇಣಿಗೆ ಬಂದ. ಸೈನ್ಯಕ್ಕೆ ಹೆದರಿದ ತೆಲುಗರು ಊರಬಾಗಿಲ ಹಾಕಿ, ಆಳುವೇರಿ ಹತ್ತಿ ಪಾಳೆಯವನ್ನು ನೋಡಿದರು. ಸ್ತ್ರೀಯರು ರಾಮನ ರೂಪಕ್ಕೆ ಮರುಳಾದರು. ಅಷ್ಟದಿಕ್ಕಿನ ರಾಯರು ಕಾಣಿಕೆ ಸಲ್ಲಿಸಿದರು. ಪ್ರಯಾಣ ಬೆಳೆಸಿದ ಕುಮಾರ ರಾಮ ಗುಂಡಬ್ರಹ್ಮಯ್ಯನ ದೇವಾಲಯಕ್ಕೆ ಬಂದು, ಬೀಡುಬಿಟ್ಟನು. ತಂದೆ ಕಂಪಿಲನೊಂದಿಗೆ ಜಗಳವಾಡಿ ಬಂದ ಸುದ್ದಿಯನ್ನು ಸ್ಥಾನಪತಿಗಳು ಅಂಗಡಿಯ ಲಿಂಗನ ಮೂಲಕ ಪ್ರತಾಪರುದ್ರನಿಗೆ ತಿಳಿಸಿದರು. ನಾಳೆ ರಾಮನು ತನ್ನನ್ನು ನೋಡಬಹುದೆಂದು ಪ್ರತಾಪರುದ್ರ ಸೂಚಿಸಿದ. ರಾತ್ರಿ ಮಲಗುವ ಮುನ್ನ "ತಂದೆಯೊಂದಿಗೆ ಜಗಳಾಡಿ ಬಂದ ನನಗೆ ನೀವೇ ಗತಿ. ಹಿಂದೆ ಕದ್ದ ಕಳ್ಳನನ್ನು ರಕ್ಷಿಸಿದಿರಿ. ಈಗ ನನ್ನ ಪಂದ್ಯವನ್ನು ಗೆಲಿಸಿರಿ. ಎಪ್ಪತಿರಾಜನ ಬೊಲ್ಲ ಕೈವಶವಾದರೆ ಶೂಲದ ಹಬ್ಬ ಆಚರಿಸುತ್ತೇನೆ" ಎಂದು ಗುಂಡಬ್ರಹ್ಮಯ್ಯ ದೇವರಿಗೆ ಬೇಡಿಕೊಂಡು ರಾಮಯ್ಯ ಮಲಗಿದ. ಕನಸಿನಲ್ಲಿ ಗುಂಡಬ್ರಹ್ಮಯ್ಯ ಬಂದು ವರವನ್ನು ದಯಪಾಲಿಸಿದ. ಮುಂಜಾನೆ ಪ್ರತಾಪರುದ್ರ ಮಜ್ಜನಮಾಡಿ ಗುರುಲಿಂಗಜಂಗಮಕ್ಕೆ ವಂದಿಸಿ, ನಿರಾಸಿಯ ಮಠಕ್ಕೆ ಹೋಗಿ, ಪಂಚವರ್ಣದ ಕಂಥೆ, ಬೆಳ್ಳಿಯ ಕಂಥೆ, ಪಟ್ಟೆ ಕಂಥೆ, ಕಬ್ಬಿಣ ಕಂಥೆ, ರುದ್ರಾಕ್ಷಿ ಕಂಥೆಯ ಜಂಗಮರಿಗೆ ನಮಸ್ಕರಿಸಿ, ತನ್ನ ವಾಲಗಕ್ಕೆ ಬಂದು, ರಾಮನನ್ನು ಕರೆದುಕೊಂಡು ಬರಲು ಲಿಂಗನನ್ನು ಕಳಿಸಿದ. ಲಿಂಗನ ವೈಹಾಳಿಯನ್ನು ರಾಮಯ್ಯ, ರಾಮಯ್ಯನ ವೈಹಾಳಿಯನ್ನು ಲಿಂಗ ಪರಸ್ಪರ ಮೆಚ್ಚಿ ಸ್ನೇಹಿತರಾದರು. ಕುಮಾರರಾಮ ತಾನು ಬಂದ ಕಾರಣವನ್ನು ವಿವರಿಸಿ, ನೆರವಾಗಲು ಲಿಂಗನಿಗೆ ಬೇಡಿಕೊಂಡನು. ಲಿಂಗ ಒಪ್ಪಿಗೆ ಸೂಚಿಸಿದ. ವೇಷಭೂಷಣದಿಂದ ಸಜ್ಜಾದ ರಾಮಯ್ಯನು ಸೈನ್ಯ, ವಾದ್ಯಗಳೊಂದಿಗೆ ಪಟ್ಟಣ ಪ್ರವೇಶಿಸಿದ. ಹೆಣ್ಣುಗಳು ಹೊರಗೆ ಬಂದು ಕುಮಾರರಾಮನ ಕಾಮಸನ್ನಿಭ ರೂಪ ನೋಡಿ ಮೋಹಗೊಂಡರು. ಕಂಚಿನ ಬಾಗಿಲು, ಗಳಿಯಾರದ ಬಾಗಿಲು ದಾಟಿ, ಕುದುರೆಯಿಳಿದು ರಾಮಯ್ಯ ಕಾಟಣ್ಣನೊಡನೆ ಓಲಗ ಪ್ರವೇಶಿಸಿದ. ಕಾಟಣ್ಣ ಕಾಣಿಕೆಯಿಕ್ಕಿದ. ಮಕ್ಕಳೊಡನೆ ಮನಸ್ತಾಪ ಮಾಡಿಕೊಂಡು ಕಂಪಿಲ ತಪ್ಪು ಮಾಡಿದನೆಂದು ರುದ್ರರಾಯ ತನ್ನ ಮಂತ್ರಿಯೊಂದಿಗೆ ನುಡಿದ. ರಾಮನನ್ನು ಕಡಕು ಕಂಠಮಾಲೆಗಳಿಂದ ಮನ್ನಿಸಿದ. ರಾಮಯ್ಯ ಓಲಗದಿಂದ ನಿರ್ಗಮಿಸುವಾಗ ಅವನ ಪಾಠಕರು "(ದೇವಗಿರಿಯ) ರಾಮದೇವರಾಯನನ್ನು ಹೊರತುಪಡಿಸಿ ಮಿಕ್ಕ ರಾಯರಗಂಡ" ಎಂದು ಮುಂತಾಗಿ ಹೊಗಳಿದರು. ಇದನ್ನು ಕೇಳಿ ರುದ್ರರಾಯ ಕೃದ್ಧನಾದ. ರಾಮಯ್ಯನನ್ನು ಕರೆದುತಂದ ಲಿಂಗನಿಗೆ ಬರಹೇಳಿದ. ಬಂದ ಲಿಂಗಣ್ಣನಿಗೆ "ರಾಮನ ವರ್ತನೆ ಸರಿಯಿಲ್ಲವೆಂದೂ, ಬಿರುದುಗಳನ್ನು ಬಿಟ್ಟರೆ ಮಾತ್ರ ಅವನು ನಮ್ಮಲ್ಲಿ ಓಲೈಸಿಕೊಂಡು ಇರಲಿ, ಇಲ್ಲದಿದ್ದರೆ ತೊಲಗಲಿ" ಎಂದು ಗದರಿಸಿದ. "ವೀರನಾದವ ಬಿರುದು ಹೊಗಳಿಕೊಳ್ಳುವುದು ಸಹಜ. ಗುತ್ತಿಯ ಜಗದಪ್ಪ, ಹಳೆಬೀಡ ಬಲ್ಲಾಳ, ಡಿಲ್ಲಿಯ ನೇಮಿ, ಹುಳಿಯಾರ ಮಾರ ಮೊದಲಾದವರನ್ನು ಗೆದ್ದವನಾಗಿದ್ದಾನೆ" ಎಂದು ಲಿಂಗ ರಾಮನ ಪರವಾಗಿ ನುಡಿದ. ರುದ್ರರಾಯ ಲಿಂಗನನ್ನು ತೆಗಳಿ ಕಳಿಸಿದ. ಆಸ್ಥಾನದಿಂದ ಹೊರ ಬಂದ ಲಿಂಗ ಎಲ್ಲವನ್ನು ರಾಮನಿಗೆ ವಿವರಿಸಿದ. ಇಬ್ಬರೂ ರುದ್ರನ ಮೇಲೆ ಕೋಪತಾಳಿದರು. ಇದನ್ನು ಕೇಳಿದ ಲಿಂಗನ ತಂದೆ ದೇವಿಸೆಟ್ಟಿ ತನ್ನ ಸಂಪತ್ತನ್ನೆಲ್ಲ ಪೆಟ್ಟಿಗೆ ತುಂಬಿಸಿದ. ಲಿಂಗ ತನ್ನ ಹೆಣ್ಣುಮಕ್ಕಳಿಗೆ ಕಾಲುಕುಪ್ಪಸ ಕೊಟ್ಟ. ತನ್ನ ಮನೆಗೆ, ಅಲ್ಲಿಯ ಕಣಜಕ್ಕೆ ಬೆಂಕಿಯಿಟ್ಟ. ಎಲ್ಲರೂ ಓರುಗಲ್ಲನ್ನು ಬಿಟ್ಟು ಹೊರಟ ಸುದ್ದಿ ತಿಳಿದು, ರುದ್ರರಾಯ ಸೈನ್ಯಕಳಿಸಿದ. ಯುದ್ಧ ಆರಂಭವಾಯಿತು. ದೇವಿಸೆಟ್ಟಿಯಿಂದ ಸಾಲ ಪಡೆದ ಮನ್ನೆಯರೂ ಲಿಂಗನ ಪರವಾಗಿ ಹೋರಾಡಿದರು. ರುದ್ರರಾಯನ ಸೈನ್ಯ ಮುರಿದೋಡಿತು. ಇದನ್ನು ಕೇಳಿ ರುದ್ರನ ಮಗ ಎಪ್ಪತಿರಾಜ ಬೊಲ್ಲನನ್ನೇರಿ ಯುದ್ಧಕ್ಕೆ

ಬಂದನು. ಬೊಲ್ಲ ರಣದಲ್ಲಿ ವೈರಿಗಳನ್ನು ನಾಶಮಾಡಿತು. ಇದು ಮೂಲತಃ ಮುಂಗಲಿರಾಯನ ಲಾಯದೊಳಗೆ ವಿಷಗಳಿಗೆಯಲ್ಲಿ ಹುಟ್ಟಿತು. ಇದನ್ನು ಹೊರಹಾಕಬೇಕೆನ್ನುವಷ್ಟರಲ್ಲಿ ಎಪ್ಪತಿರಾಜನ ಕಡೆಯವರು ಖರೀದಿಸಿ ತಂದರು - ಎಂದು ಬೊಲ್ಲನ ವಿವರವನ್ನು ರಾಮನಿಗೆ ಲಿಂಗ ಹೇಳಿದನು. ರಾಮ ಎಪ್ಪತಿರಾಜ ಪರಸ್ಪರ ಹೋರಾಡಿದರು. ಎಪ್ಪತಿರಾಜನನ್ನು ಸೋಲಿಸಿದ ರಾಮನ ಪರಾಕ್ರಮಕ್ಕೆ ಮೆಚ್ಚಿ ಬೊಲ್ಲನು ಅವನಿಗೆ ಬೆನ್ನುಕೊಟ್ಟಿತು. ರಾಮ ಎಪ್ಪತಿರಾಜನ ಹೆಡಗೈ ಕಟ್ಟಿದ. ಲಿಂಗನ ಬಿನ್ನಹದ ಮೇರೆಗೆ ಅವನನ್ನು ಕ್ಷಮಿಸಿ ಕಳಿಸಿದ.

ಗುಂಡಬ್ರಹ್ಮಯ್ಯನ ದೇವಾಲಯದಲ್ಲಿ ರಾತ್ರಿ ಕಳೆದು, ರಾಮಯ್ಯ ಲಿಂಗ ಕುಮ್ಮಟದುರ್ಗಕ್ಕೆ ನಡೆದರು. ದಾರಿಯಲ್ಲಿ ಬೊಲ್ಲನನ್ನು ಬಿಡಿಸಿಕೊಳ್ಳಲು ಹೋರಾಡಿದ ಮದಗಜರಡ್ಡಿ, ಮಾಚನರಡ್ಡಿ, ಕಲ್ಲಿರೆಡ್ಡಿ, ಮದನರಡ್ಡಿ, ಮನ್ಮಥರಡ್ಡಿ ಮೊದಲಾದ ತೆಲುಗರನ್ನು ಸೋಲಿಸಿ, ಪ್ರಯಾಣ ಮುಂದುವರಿಸಿದರು.

ಮಗ ಜಯಶಾಲಿಯಾಗಿ ಬಂದ ಸುದ್ದಿಯನ್ನು ಕೇಳಿ ಕಂಪಿಲರಾಯ ಜೋಳದ ರಾಶಿ ಬಯಲಿನಲ್ಲಿ ಎದುರುಗೊಂಡನು. ಓಲಗದಲ್ಲಿ ಕುಳಿತು ಲಿಂಗನ ವಿವರ ಕೇಳಿ, ಅವನಿಗೆ ಬಿಡಾರ ಕೊಟ್ಟನು. ತಾಯಿ ಹರಿಯಲದೇವಿ ರಾಮನಿಗೆ ಆರತಿ ಎತ್ತಿದಳು.

ಸಂಧಿ : ೬

ಗುರುವಿನ ಕೃಪೆಯಿಂದ ಈ ಕೃತಿ ರಚಿಸುತ್ತೇನೆ. ಗರಿಯುಳ್ಳ ಬಾಣದಂಥ ರಾಮನ ಕೃತಿರಚನೆಯಲ್ಲಿ ಗುರಿಮುಟ್ಟುತ್ತೇನೆ. ಸಹೃದಯರು ದೋಷವನ್ನು ತಿದ್ದಿ ಗುಣವನ್ನು ಸ್ವೀಕರಿಸುವುದು. ನಸುಕವಿಗಳು ಮತ್ಸರಿಸಬಹುದು, ಮಿಕ್ಕವವರಿಗೆ ಇದು ಕರ್ಜೂರ ಮಾವಿನ ಹಣ್ಣಿನಂತಿದೆ.

ಕೊನೆಯ ಬೇಟೆಯಾಡಲು ಕಂಪಿಲ ಹೋದ. ಇತ್ತ ಪಟ್ಟಣಕ್ಕೆ ಮರಳಿದ ರಾಮಯ್ಯ ಊರಲ್ಲಿಯ ಹರಿಗೋಲುಗಳನ್ನು ಸಂಗ್ರಹಿಸಿ, ಸ್ನೇಹಿತರೊಡನೆ ಹಂಪಿಯ ಹೊಳೆಗೆ ನೀರಾಟವಾಡಲು ಬಂದ. ಕಂಪರಾಜ, ಹಂಪರಾಜ, ಕೊಂಡೆಯರಾಜ, ಸಂಪಿಗೆಗೇರಿ ಲಿಂಗರಾಜ, ಹಡಪದ ಬೋಗ, ನಡೆಕೋಟಿ ನಿಂಗಮಂಗಣ, ಗುಜ್ಜಮಲ್ಲ, ಸಾಳುವ ತಿಮ್ಮ ಇವರನ್ನು ಕೂಡಿಕೊಂಡು ವಿರೂಪಾಕ್ಷನಿಗೆ ವಂದಿಸಿ ನೀರಿಗಿಳಿದನು. ಹೊನ್ನಂಡೆ, ರನ್ನದ ಜೀರ್ಕೊಳವಿ, ಬೆಳ್ಳಿಯ ಕೊಂಬುಗಳಲ್ಲಿ ನೀರು ತುಂಬಿ ರಾಮನು ಮಾನ್ಯರ ಮೇಲೆ ತೂರಿದ. ಕಾಟಣ್ಣ ಏರಿ ಬಂದು ರಾಮನ ಮೇಲೆ ನೀರು ಸುರಿಸಿದ. ಎಲ್ಲರೂ ನೀರಾಟವಾಡಿ, ಮೀನು ಹಿಡಿಯುತ್ತ ನಲಿದು, ಗಿಡಿಬಿಡಿ, ಕೊಳಲು, ಕಂಚಟ ವಾದ್ಯಧ್ವನಿಯೊಂದಿಗೆ ಪಟ್ಟಣಕ್ಕೆ ಮರಳಿದರು. ಎಲ್ಲರನ್ನು ಮನೆಗೆ ಕಳುಹಿ, ರಾಮಯ್ಯ ರಾಮಲದೇವಿ ಮನೆಗೆ ಬಂದು ಸ್ನಾನ, ಊಟ ಮುಗಿಸಿ, ತೂಗು ಮಂಚದಲ್ಲಿ ನಿದ್ರೆಮಾಡಿ, ಹೊತ್ತು ಹೋಗದ ಕಾರಣ ಚೆಂಡಾಟವಾಡಲು ನಿರ್ಧರಿಸಿ ಮನ್ನೆಯರನ್ನು ಕರೆಯಿಸಿದ. "ಮಾಳವ ರಾಯರ ಗಂಡ" ಎಂಬ ತೋಳಬಾಪುರಿಗಳನ್ನು ಧರಿಸಿದ. "ಸಾಳುವ ರಾಯರದಲ್ಲಣ" ಹೆಸರಿನ ಕೀಲ ಕಡೆಯವನಿಟ್ಟ. "ಮುಂಗುಲಿರಾಯರ ಗಂಡ" ಎಂಬ ಮುಂಗಯ್ಯ ಮುರಿಗೆಯ ತೊಟ್ಟ. "ರಾಯ ರಾವುತರ ಗಂಡ" ಹೆಸರಿನ ಒಡ್ಡಣವನ್ನಿಟ್ಟ. "ಕೊಟ್ಟ ಭಾಷೆಗೆ ತಪ್ಪುವ ರಾಯರ ಗಂಡ"ನಾದ ರಾಮನು ಮುತ್ತು ರತ್ನದ ಉಂಗುರಗಳನ್ನಿಟ್ಟನು. "ಸಾಲು ಮನ್ನೆಯರ ಗಂಡ" ಎಂಬ ಕಡೆಯವಿಕ್ಕಿದ. ಹೀಗೆ ರಾಮಯ್ಯ ಶೃಂಗಾರ ಮಾಡಿಕೊಳ್ಳುತ್ತಿರಲು, ರಾಮಲದೇವಿ ಮುತ್ತಿನಾರುತಿ ಎತ್ತಿ, ಗಂಧ ಕಸ್ತೂರಿಯ ಪನ್ನೀರ ಚಿಮುಕಿಸಿದಳು.

ಪಟ್ಟಸಾಲೆಗೆ ಬಂದ ರಾಮಯ್ಯ ಕಟ್ಟಿಗೆಯವರನ್ನು ಕರೆದು, ಚೆಂಡಿನಾಟ ನೋಡಲು ಪಟ್ಟಣದೊಳಗುಳ್ಳ ಪ್ರಜೆಗಳನ್ನು ಶೃಂಗರಿಸಿಕೊಂಡು ಬರಲು ತಿಳಿಸಿರೆಂದು ಆಜ್ಞಾಪಿಸಿದ. ಸ್ತ್ರೀಯರೆಲ್ಲ ಅಲಂಕರಿಸಿಕೊಂಡು ಮನೆಯಿಂದ

ಹೊರಬಿದ್ದರು. ಸೂಳೆ ಹಂಪಾಯಿ, ಬೊಮ್ಮಿ, ಕುಂಭಕೋಣೆಯ ವಿರುಪಾಯಿ, ಪಿನುಗುಂಡಿಯ ಸೋಮಿ, ಓರುಗಲ್ಲ ಯಲ್ಲಾಯಿ -ಇವರೆಲ್ಲ ಬಂದರು. ದೇವಿಸೆಟ್ಟಿಯ ಲಿಂಗ, ಬೇವಿನ ಸಂಗಯ್ಯ, ಕೋಟೆಗರ ಹೇಮ, ಹಾವಳಿಕಾರ ಹಂಪ, ರೂಪನಂದನ ಸೇರಿದರು.

ರಾಮಯ್ಯ ಚೆಂಡು ಬೇಡಲು ತಾಯಿ ಹರಿಯಲ ದೇವಿಯ ಅರಮನೆಗೆ ನಡೆದ. ಅವನ ರೂಪ ಲಾವಣ್ಯಕ್ಕೆ ಸ್ತ್ರೀಯರ ಕಾಮಜ್ವರ ಕೆರಳಿತು. ಅವರು ಕೈಯ್ಯಲ್ಲಿ ಹಿಡಿದ ವೀಳ್ಯ ಜ್ವರದ ಝಳಕೆ ಪುಡಿಯಾಯಿತು. ಇವನನ್ನು ವಶಪಡಿಸಿಕೊಳ್ಳಲು ಕೆಲವರು ತಮ್ಮ ಹಣೆಗೆ ಮದ್ದನಿಟ್ಟುಕೊಂಡರು. ಮುದಿಸೂಳೆಯೊಬ್ಬಳು ರಾಮನು ಬರುವ ಬೀದಿಯಲ್ಲಿ ಮಂತ್ರಿಸಿದ ಹರಳನಿಟ್ಟಳು. ರಾಮಯ್ಯ ಇವರೆಲ್ಲ ತನ್ನ ತಾಯಿ ಸಮಾನವೆಂದು ಭಾವಿಸುತ್ತ ಹರಿಯಲದೇವಿಯ ಅರಮನೆಗೆ ಬಂದ. ಸಿಂಗರಿಸಿಕೊಂಡು ಬಂದ ಮಗನನ್ನು ಕಂಡು "ಯಾರ ಮೇಲೆ ಯುದ್ಧಕ್ಕೆ ಹೊರಟಿರುವಿ?" ಎಂದು ತಾಯಿ ಕೇಳಿದಳು. "ಮುತ್ತಯ್ಯ ಮುಮ್ಮಡಿ ಸಿಂಗ ಆಡಿದ ಚೆಂಡಿನಾಟಕ್ಕೆ ಸಿದ್ಧನಾಗಿರುವೆ.ಮನೆಯಲ್ಲಿರುವ ಅದನ್ನು ಕೊಡು" ಎಂದು ಕೇಳುತ್ತಲೇ ಹರಿಯಲದೇವಿ ಕುಸಿದುಹೋದಳು. "ಇದು ವಿನಾಶಕಾರಿ ಚೆಂಡು. ಈ ಆಟ ಬೇಡ, ಲೆತ್ತ ಚದುರಂಗ ಇತ್ಯಾದಿಗಳನ್ನು ಆಡು. ಹುಂಜ ಕಾದಿಸು, ಟಗರ ಕಾದಿಸು, ಮಲ್ಲಯುದ್ಧ ನೋಡು" ಎಂದು ಹೇಳಿದರೂ ಕೇಳಲಿಲ್ಲ. "ವಿಧಿಲಿಖಿತ ಯಾರಿಗೂ ತಪ್ಪಿದ್ದಲ್ಲ. ಶೂದ್ರಕ, ಹರಿಶ್ಚಂದ್ರ ಮೊದಲಾದರೇ ಇದಕ್ಕೆ ಸಾಕ್ಷಿ. ಚೆಂಡು ಕೊಡು" ಎಂದು ಒತ್ತಾಯಿಸಿದ. ನೀನು ಆಟವಾಡುವುದನ್ನು ನೋಡಿ ಸತಿಯರು ಮೋಹಗೊಳ್ಳುತ್ತಾರೆ. ಈ ಚೆಂಡು ಮುಮ್ಮಡಿ ಸಿಂಗನನ್ನು ಕೆಡಿಸಿತು. ಈ ಹಿಂದೆ ಲೆತ್ತದಲ್ಲಿ ದಾಳವಾಗಿ ಪಾಂಡವರನ್ನು ಸೋಲಿಸಿತು. ಹೊಮ್ಮಿಗವಾಗಿ ರಾಮನನ್ನು ಗತಿಗೆಡಿಸಿತು. ಸೂಕರನಾಗಿ ಸುಳಿದು ಹರಿಶ್ಚಂದ್ರನನ್ನು ಹಾಳು ಮಾಡಿತು. ಅದೇ ಈಗ ಚೆಂಡಾಗಿದೆ. ಅದೇ ಈಗ ರತ್ನಿಯಾಗಿದೆ" ಎಂದು ಹೇಳಿದರೂ ಕೇಳಲಿಲ್ಲ. "ಭೂತ ಬಲಿಕೊಟ್ಟು ಒಯ್ಯು" ಎಂದು ಹೇಳಿದಳು. ಆ ಪ್ರಕಾರ ಮಾಡಿದ. 'ಪರನಾರಿ ಸೋದರ' ಪ್ರತಿಜ್ಞೆ ಮಾಡಿಸಿಕೊಂಡು ತಾಯಿ ಚೆಂಡು ಕೊಟ್ಟಳು. ನಾರಿಯರು ಚೆಂಡಿಗೆ ಆರತಿ ಬೆಳಗಿದರು. ಬಿರುದು ಉಗ್ಗಡಿಸುತ್ತ ಎಲ್ಲರೂ ರತ್ನಾಜಿ ಅರಮನೆ ಬಳಿಯ ಬಯಲಿಗೆ ಬಂದರು. ಬೆಳ್ಳಿಯ ಹಲ್ಲೆ, ಚಿನ್ನದ ಹಲ್ಲೆಗಳನ್ನು ತೆಗೆದುಕೊಂಡು ಲೆಗ್ಗೆ ಹೂಡಿ, ಆಳು ಹಂಚಿದರು. ಮರಿಯಾನೆ ಮಾದಯ್ಯ, ಉರಿಗೋಳಿ ಬೈಚಪ್ಪ, ಕಿರಿಯ ಮಲ್ಲ, ಸಂಗಯ್ಯ, ಕಿರುಬುಲಿ ನಾಗಣ್ಣ, ತಿರಿಬೇಕ ಕೊಂಡ, ಕಾಟಣ್ಣ, ಉದ್ದಗಿರಿಯ ತಿಪ್ಪ, ಚವುಡ, ಕೇಶವ, ಸಣ್ಣ, ದುರ್ಗಿಸೆಟ್ಟಿ, ಅಗಸರ ತಿಪ್ಪ, ನಾವಿದ ಬಸವ, ಬೇಡರ ಕಂಪ, ಕಸವ, ಕೊಳ್ಳಿಯ ನಾಗ, ಅಂಗಮಂಗಣ್ಣ, ಕೊಂಡೆಯಕಾರ ವಿರುಪ, ಸಿಂಗ, ಚವುಲದ ಸಿಂಗ, ಕಾಳಂಜಿ ಕೆಂಪ, ಕಡಹರಿ ವನಗ, ಕಾಳಭೈರವ, ಚವುಲದ ಸಂಗ, ಬೇಡರ ಬೊಮ್ಮ, ತಾಳಿಕೋಟೆಯ ರಾಮ, ದೇವಿಸೆಟ್ಟಿಲಿಂಗ, ಕಾಮ , ಉಪ್ಪಲಿಗರ ಸಂಗ, ಅಕ್ಕಸಾಲೆಯ ಮುದ್ದ, ತೂಗಾಡೆ ಬೈಚಪ್ಪ, ಉಗ್ರಾಣದ ನಾಗ, ಚಿಂಪಿಗ, ಹೊಲೆಯರ ಹಾಳೆನಾಯಕ, ಬಿಕ್ಕಿ ಬೈರವ, ನಾಗ, ಮಾದಿಗ ಹಂಪ, ತೊಲಗದ ಕಂಬನಾದ ತಳವಾರ ಮಾಯಿದೇವ, ನಲ್ಲನಾಗ,ಕಲ್ಲಕೋಟೆಯ ಚಿಕ್ಕ, ಸಾಯಿದೇವ, ಬಾದುರಖಾನ ಇವರೆಲ್ಲ ಆಟಕ್ಕೆ ಅಣಿಯಾದರು. ಬೊಬ್ಬೆಯ ಅಬ್ಬರ ಕೇಳಿ ನಾಗಾಯಿಯು ಒಡತಿ ರತ್ನಾಜಿಗೆ ರಾಮಯ್ಯ ಚೆಂಡನಾಡಲು ಬಂದುದನ್ನು ಹೇಳಿದಳು.

ಇದನ್ನು ಕೇಳುತ್ತಲೇ ರತ್ನಾಜಿ ಮಿಂದು, ಮಡಿಯುಟ್ಟು, ದೇವರ ಮನೆಗೆ ಬಂದು "ಹರನೆ, ಮೃಡನೆ, ಶಂಕರನೆ ರಾಮನ ಚೆಂಡು ತನ್ನ ಅರಮನೆಯಲ್ಲಿ ಬೀಳುವಂತೆ ಮಾಡು" ಎಂದು ಬೇಡಿಕೊಂಡಳು. ಹರಕೆ ಪತ್ರ ಕಟ್ಟಿದಳು. "ಹೂವಿನಿಂದ ಅರ್ಚಿಸುವೆ, ಕರ್ಪೂರ ಜ್ಯೋತಿ, ನೈವೇದ್ಯ ಅರ್ಪಿಸುವೆ, ಉಪ್ಪರಿಗೆ ಕಟ್ಟಿಸುವೆ, ಕಪಿಲೆಗಳನ್ನು ಬಿಡಿಸುವೆ, ಕೆಂಡದೋಕುಳಿಯಾಡುವೆ, ಮಂಡೆಯ ಕುರುಳ ಕೊಡುವೆ, ಚಿನ್ನದ ಪ್ರಭಾವಳಿ ಮಾಡಿಸುವೆ" ಎಂದು ಬೇಡಿಕೊಂಡಳು. "ಉಚ್ಚಂಗಿ ಎಲ್ಲಮ್ಮನಿಗೆ ಬಾಯಿಬೀಗ ಆಚರಿಸುವೆ. ಕನ್ನೆಮ್ಮನಿಗೆ ಬೇವಿನಸೀರೆ, ಮುನ್ನೂರು

ಕಳಸ ಹರಕೆ ಸಲ್ಲಿಸುವೆ. ಜನ್ನಿಗೆ ಬೋಗೇರ ಕರೆಸಿ ಚಿನ್ನದ ಪಾತ್ರೆ, ಬೆಳ್ಳಿ ಪಾತ್ರೆ ಅರ್ಪಿಸುವೆ. ಓರುಗಲ್ಲ ವೀರಭದ್ರನಿಗೆ ಚಿನ್ನದ ಪಾದುಕೆ, ಕಾಸೆ ಕಳಿಸುವೆ, ಹೊಸವೂರ ದೇವರಿಗೆ ಹೊಮಡಿಯನ್ನು ಅರ್ಪಿಸುವೆ. ಹಂಪಿಯ ಅರಸನಿಗೆ ಲಕ್ಷ ಹೊನ್ನಿನ ಪಲ್ಲಕ್ಕಿ ಕೊಡುವೆ. ಬೆಟ್ಟದ ದೇವಿಗೆ ಮುಡುಹಿನ ಕಂಡ, ಬಿಟ್ಟಮಂಡೆ ಹರಕೆ ಕಳಿಸುವೆ. ಕಂಪಿಲಿಯ ರಾಯನಿಗೆ ಹೆಡಗೈಕಟ್ಟುವ ಸೇವೆ ನಡೆಸುವೆ. ರಾಮನ ಸಂಭೋಗದಿಂದ ಒಂದು ಶಿಶುಹುಟ್ಟಿದರೆ ತಿರುಮಲ ರಂಗನಿಗೆ ತಿರುಮುಡಿ ಸಲ್ಲಿಸುವೆ, ಬೆನ್ನಸಿಡಿ-ಬಾಯಿಬೀಗ ಹರಕೆಯನ್ನು ಕಂಪಿಲನಿಗೆ ನಡೆಸುವೆ. ಮೈಲಾರನಿಗೆ ಕೆಂಡ ತುಳಿವೆ. ಹೊನ್ನತ್ತೆಮ್ಮಗೆ ಕಾಣಿಕೆ ಸಲ್ಲಿಸುವೆ. ಗುತ್ತೆಮ್ಮನಿಗಾಗಿ ಐದು ಮುತ್ತೈದೆಯರಿಗೆ ಮುತ್ತಿನ ಉಡಿಯಕ್ಕಿ ತುಂಬುವೆ. ಗುತ್ತಿಯ ಕನ್ನೆಗೆ ಹಿಡಿಹೊನ್ನ ಕಳಿಸುವೆ. ಒಪ್ಪೊತ್ತಿನೂಟ ಹಿಡಿವೆ. ಟಗರು ಕುರಿಗಳನ್ನು ಕಡಿಸುವೆ, ಹತ್ತು ಬಂಡಿಗಳಲ್ಲಿ ವಸವಂತ ಆಡುವೆ. ಧರ್ಮಸುರೆಯ ಬಡಿಸುವೆ. ಪರ್ವತಕ್ಕೆ ಕಳಸ ಸಲ್ಲಿಸುವೆ. ಪರುವತ ಮಲ್ಲಯ್ಯಗೆ ಅರುವತ್ತು ಚಿನ್ನದ ಕಂಬಿ ಕಳಿಸುವೆ. ಜಟ್ಟಿಂಗ ರಾಮ, ನನ್ನ ತವರು ಮನೆಯ ಭೈರವಲಿಂಗ ರಾಮನ ಚೆಂಡು ಇತ್ತ ಬರುವಂತೆ ಮಾಡು. ಬೆನವ ನಿನಗೆ ಚಿಗಳಿ, ತಂಬಿಟ್ಟು, ಕಬ್ಬಿನ ಕೋಲು ಎಳನೀರು ಸಲ್ಲಿಸುವೆ. ಆರು ಲಕ್ಷ ಅಡಕೆ, ನೂರು ಕೊತ್ತಲ ಎಲೆ, ಹೇರುಗಟ್ಟಲೆ ಬೆಲ್ಲವನ್ನು ಮುನ್ನೂರು ಮೂವತ್ತಾರು ದೇವರಿಗೆ ಅರ್ಪಿಸುವೆ" ಎಂದು ಬೇಡಿಕೊಂಡಳು.

"ಈ ಹರಕೆ ಯಾತಕ್ಕಾಗಿ?" ಎಂದು ಕಂಪಿಲ ಕೇಳಿದರೆ ನೀನು ಬೇಟೆ ಪ್ರಸಂಗದಲ್ಲಿ ದುರಂತಕ್ಕೆ ಗುರಿಯಾಗಬಾರದೆಂದು ಬೇಡಿಕೊಂಡಿದೆ " ಎಂದು ಉತ್ತರಿಸುವೆನೆಂದು ನಾಗಿಗೆ ಹೇಳಿದಳು. ಇವರ ಪ್ರಾರ್ಥನೆಗೆ ಶಿವ ಮೆಚ್ಚಿ" ರಾಮನ ಶುಚಿತ್ವವನ್ನು ನಾನೂ ಪರೀಕ್ಷಿಸಬೇಕು, ಅದಕ್ಕಾಗಿ ಚೆಂಡನ್ನು ಎತ್ತಿಕೊಂಡು ಅರಮನೆಯಲ್ಲಿ ಹಾಕಬೇಕು" ಎಂದು ವಾಯುದೇವನಿಗೆ ಆಜ್ಞೆಮಾಡಿದ. ಚೆಂಡಿನಾಟ ನೋಡಲು ಹೊರಟ ರತ್ನಾಜಿಯನ್ನು ಬಗೆಬಗೆಯಲ್ಲಿ ಸಿಂಗರಿಸಿದರು. ಎಲ್ಲರೂ ಸಡಗರದಿಂದ ಉಪ್ಪರಿಗೆ ಏರಿದರು. ರತ್ನಾಜಿ ಸೆಳೆಮಂಚದ ಮೇಲೆ ಕುಳಿತು "ಎನ್ನ ತನುವ ಸೂರೆಗೊಂಬ ರಾಮನ ತೋರು" ಎಂದು ಊಳಿಗದವಳಿಗೆ ಹೇಳಿದಳು. ಕಾಟಣ್ಣ, ಬಾದುರಖಾನ, ಬೇವಿನಸಿಂಗ, ಗೋವಿಂದ, ನೆಗಳೂರು ತುಳುವರ ಹರಿಯ, ಹಸಗರ ಮಾಳ, ಚವುಲದ ನಾಗ, ಡೊಂಬರ ಸಾಳುವ ನಾಯಕ, ಉರಿಗೊಳ್ಳಿನಾಗ, ಕೆಂಡದ ಬಸವ, ವೀರ, ಕೋಮಟಿಗರ ಮಲ್ಲ, ನಾವಿದ ಚೆನ್ನ, ಮಿಂಡಗುದ್ದಲಿಯ ಬೊಮ್ಮಣ್ಣ, ಅಕ್ಕಸಾಲೆ ಚೆನ್ನ, ದುಮ್ಮಿಯ ಬಸವ, ಕಳಬಂಟ, ಬೋಗಾರ ಕಳಸ, ಹಾರುವ ಲಿಂಗ, ಕುಂಬಾರ ಕಲ್ಲ, ಮುದಗಲ್ಲ ಬೋಚ, ಚಿಪ್ಪಿಗ ಕೆಸವ, ಮಾದಿಗ ಹಂಪ, ಒಕ್ಕಲಿಗರ ಗೊಂಡ, ಮುದ್ದ ಮುಚ್ಯಾಲಖಾನ, ದೇವಿಶೆಟ್ಟಿಯ ಲಿಂಗ, ಕಾಳುಗಟ್ಟಿಯ ಯರಮಾರ, ಸಿಡಿಲಕಲ್ಲ ಸಿಂಗ, ಗುಜ್ಜಲ ಹರಿಯ, ಬಂಟರಭಾವ ಹನುಮ, ಮೀಸೆಗ ತಿಮ್ಮ, ಸಾದರ ಮಲ್ಲ, ಪರದೇಶಿ ಭೈರ, ಕೊಟೆಗರ ಮಲ್ಲ, ಜೇನಕಲ್ಲದುರ್ಗದ ಬೈರನಾಯಿಕ, ಮಲ್ಲೂಕಖಾನ, ಜಗುರ ರಾಮ, ಮನ್ನಾಲ ಮಾಚ, ಉಪ್ಪಲಿಕರ ಸಂಗಯ್ಯ, ಮಂದಲ ಮಾರ, ಗಚ್ಚಿನಾಯಕ, ಪಿನುಗುಂಡಿ ಸೋಮ, ಹಗ್ಗದ ಮಲ್ಲ, ಬೆಳುಗಾವಿ ಮಲ್ಲನಾಯಕ, ಕೂಗುವ ಭೈರ, ಸಿದ್ಧರಾವುತ - ಹೀಗೆ ಒಬ್ಬೊಬ್ಬರನ್ನು ಬೆರಳು ಮಾಡಿ ನಾಗಿ ತೋರಿದಳು. "ಇಂಥವರಿಂದ ಮನ್ನಣೆ ಪಡೆಯುವ ರಾಮನು ಇನ್ನೆಂಥವನು? ಅವನನ್ನು ತೋರು ಎಂದು ರತ್ನಾಜಿ ಒತ್ತಾಯಿಸಿದಳು. ರಾಮನನ್ನು ತೋರುಸತ್ತಲೇ ರತ್ನಾಜಿ ನೋಡಿ ಮೂರ್ಛೆಹೋದಳು. ಊಳಿಗದವರು ಎತ್ತಿತಂದು ಮಂಚದಲ್ಲಿ ಮಲಗಿಸಿ ಉಪಚರಿಸಿದರು. ಎಚ್ಚತ್ತ ರತ್ನಾಜಿ ರಾಮನಿಗಾಗಿ ಹಲುಬಿದಳು. "ಪ್ರಾಯದವಳಾದ ನಾನು ಮುಪ್ಪಿನ ಗಂಡನನ್ನು ಕೂಡುವುದಕ್ಕಿಂತ ಸಾಯುವುದು ಲೇಸು" ಎಂದು ನುಡಿದಳು. ಮದ್ದ-ಮಾಟದಿಂದಲಾದರೂ ರಾಮನನ್ನು ವಶಮಾಡಿಕೊಡುವೆ"ನೆಂದು ನಾಗಾಯಿ ಭರವಸೆ ನೀಡಿದಲು. ರತ್ನಾಜಿ ನಾಗಾಯಿಯ ಕಾಲು ಹಿಡಿದು "ನಿನ್ನ ಮಗಳೆಂದು ತಿಳಿದು ನನ್ನನ್ನು ರಕ್ಷಿಸು" ಎಂದು ಬೇಡಿಕೊಂಡಳು.ಅಷ್ಟರಲ್ಲಿ ಆಟದ ಗದ್ದಲ ವರ್ಧಿಸಿತು. ಭೇರಿ, ಕಹಳೆ, ಕುಡುಮು, ಡೊಳ್ಳು

ಬಾರಿಸಿದರು. ಕಾಟಣ್ಣ, ಜಗಲೂರ ನಾಗ, ಬೇವಿನ ಸಿಂಗ, ನಲ್ಲನಾಗ, ಕಬ್ಬಿಲನಾಗ, ಬಾದುರಖಾನ, ದೇವಿಸೆಟ್ಟಿಲಿಂಗ, ಮನ್ನೂಲ ಮಾಚ, ಚೆನ್ನಕಂಪ, ಕಾಸೆಯ ವಿರುಪ, ರಭಸದಿಂದ ಆಟದಲ್ಲಿ ತೊಡಗಿದರು. ಕೊನೆಯಲ್ಲಿ ರಾಮ ತೂರಿದ ಚಂಡು ರತ್ನಿಯ ಅಂಗಳದಲ್ಲಿ ಬಿದ್ದಿತು. ತಕ್ಷಣ ಆಕೆ ಚಂಡಿನ ಮೇಲೆ ಬಿದ್ದು, ಅದನ್ನು ಒಳಗೆ ಒಯ್ದು, ಇದು ರಾಮನಿಗೆ ಸಮಾನವೆಂದು ಭಾವಿಸಿ, ಉರದಲ್ಲಿ ಅಪ್ಪಿದಳು. ಕಸ್ತೂರಿ ಜವಾದಿ ಲೇಪಿಸಿ ಆರತಿ ಬೆಳಗಿದಳು.

ರಾಮನ ಪರಿವಾರ ಹೌಹಾರಿತು, ಕಾಟಣ್ಣ ಚೆಂಡು ತರಲು ಹೋಗಿ ಕೇಳಿದ. ಚೆಂಡು ಬಂದಿಲ್ಲವೆಂದೂ, ತೋಟದಲ್ಲಿ ಬಿದ್ದಿರಬಹುದೆಂದೂ ಹೇಳಿ, ಕಾಟಣ್ಣನೊಡನೆ ಹುಡುಕಿದಂತೆ ನಟಿಸಿದಳು. ಕೊನೆಗೆ "ಮಗನಾದ ರಾಮನ ಮುಖ ನೋಡುವ ಆಸೆಯಾಗಿದೆ. ಅವನನ್ನು ಕಳಿಸಿದರೆ ಚೆಂಡು ಕೊಡುವೆ"ನೆಂದು ಹೇಳಿದಳು. ಮರಳಿದ ಕಾಟಣ್ಣ ರಾಮನಿಗೆ ವಿಷಯ ವಿವರಿಸಿದ. ರಾಮ ತನ್ನ ಒಂದೊಂದೆ ಆಭರಣ, ಬಿರುದಗಳನ್ನು ಬಿಚ್ಚಿ ಸರಳವೇಷದಿಂದ ರತ್ನಾಜಿ ಮನೆ ಪ್ರವೇಶಿಸಿದ. ಈ ಸುದ್ದಿಯನ್ನು ನಾಗಿ ರತ್ನಾಜಿಗೆ ತಿಳಿಸಿದಳು. ಅರಮನೆಯ ಗಿಣಿ ರಾಮನಿಗೆ "ಪ್ರವೇಶಿಸಬೇಡ" ಎಂದು ಎಚ್ಚರಿಸಿತು. 'ದೈವವಿದ್ದಂತೆ ಆಗಲಿ' ಎನ್ನುತ್ತ ರಾಮಯ್ಯ ಒಳಗೆ ಬಂದು, ತಾಯಿಗೆ ಮುತ್ತಿನಚೆಂಡ ಬೇಡಿದನು. "ನಿನ್ನ ಮೇಲೆ ನನ್ನ ಮನಸ್ಸಾಗಿದೆ" ಎಂದು ನುಡಿದ ರತ್ನಾಜಿಗೆ, ನಾನು ನಿನ್ನ ಬಸುರಲ್ಲಿ ಬಂದ ಮಗ, ನೀನು ಅಪ್ಪನ ರಾಣಿ" ಎಂದು ಉತ್ತರಿಸಿದ. "ನಾನು ತೆಲುಗ ಹೆಣ್ಣು, ನಿನ್ನ ತಾಯಿ ಬೇಡರ ಹೆಣ್ಣು. ಹೀಗಾಗಿ ನಿನ್ನ ಭೋಗದಿಂದ ಪಾಪವಿಲ್ಲ, ಬ್ರಹ್ಮನು ತನ್ನ ಮಗಳನ್ನೇ ಭೋಗಿಸಿದ, ಕಂಪಿಲನಿಗೆ ವಿಷವಿಕ್ಕಿ ಕೊಲ್ಲುವೆ; ನಾನೂ ನೀನೂ ಗಂಡ ಹೆಂಡಿರಾಗಿ ಬಾಳೋಣ; ನಿನಗೆ ಪಟ್ಟಕಟ್ಟುವೆ" ಎಂದು ನುಡಿಯುತ್ತಲೇ ರಾಮಯ್ಯ ಹಿಂದುರಿಗಿದ. ತಕ್ಷಣ ರತ್ನಾಜಿ ರಾಮನ ಮುಂಗೈ ಹಿಡಿದು "ಕೊಂದು ಹೋಗೆಲೊ ರಾಮ ನಿಂದು ಸೈರಿಸಲಾರೆ" ಎಂದು ಹಲುಬಿದಳು. "ತಂದೆಯೇರುವ ಪಲ್ಲಕ್ಕಿ ಮಗ ಏರುವುದಿಲ್ಲವೆ?" ಎಂದೂ ಸವಾಲೆಸೆದಳು. ಇದು ಪಾಪಕಾರ್ಯವೆಂದು ತಿಳಿಹೇಳಿದ. "ಸತಿಯರ ಪಾಪ ನಿನ್ನನ್ನು ಕಾಡುತ್ತದೆ. ನಿರಾಕೃತಳಾದ ಊರ್ವಶಿಯ ಶಾಪದಿಂದ ಅರ್ಜುನನ ಕೈಗೆ ಬಳೆ ಬಂದವು. ಸತಿಯರ ಶಾಪದಿಂದ ಷಣ್ಮುಖನ ಪಿತನ ಶಿರಹೋಯಿತು. ಕಲ್ಯಾಣದಲ್ಲಿ ರಾಮಯ್ಯನ ಹೆಂಡತಿಯ ಮೋಹವನ್ನು ನಿರಾಕರಿಸಿದ ಚಿಕ್ಕಯ್ಯನ ತಲೆ ಹೋಯಿತು" ಎಂದು ಮುಂತಾಗಿ ನುಡಿದಳು. "ಪರಸತಿಗೆ ತಪ್ಪಿದ ಕೀಚಕನ ಗತಿ ಏನಾಯಿತು?" ಎಂದು ಉತ್ತರಿಸಿ, ರತ್ನಾಜಿಯನ್ನು ನೂಕಿ ಮರಳಿದನು. ಮುಚ್ಚಿದ ಎಲ್ಲ ಬಾಗಿಲುಗಳು ತಾನಾಗಿಯೇ ತೆರೆದವು. ರಾಮ ಹೊರಗೆ ಹೋಗಲು ರತ್ನಾಜಿ, "ಇವನ ಕೊರಳ ಕೊಯಿಸದೆ ಬಿಡೆ"ನೆಂದು ನಿರ್ಧರಿಸಿದಳು. ಬಳೆ ಒಡೆದುಕೊಂಡು, ಕುಪ್ಪಸ ಸಡಿಲಿಸಿಕೊಂಡು, ಮುತ್ತಿನ ಹಾರ ಹರಿದುಕೊಂಡು ಎದೆಗೆ ಚೂರುಗಾಯ ಮಾಡಿಕೊಂಡು, ಕೂದಲು ಅಸ್ತವ್ಯಸ್ತಗೊಳಿಸಿಕೊಂಡು, "ರಾಮನ ತಲೆಯನ್ನು ಮೆಟ್ಟಿದಲ್ಲದೆ ಸ್ನಾನ ಮಾಡಲಾರೆ, ಊಟ ಮಾಡಲಾರೆ" ಎಂದು ನಿಶ್ಚಯಿಸಿದಳು. ಕಂಪಿಲರಾಯ ಬೇಟೆ ಮುಗಿಸಿ ಪಟ್ಟಣ ಪ್ರವೇಶಿಸಿದ. ಹರಿಯಮ್ಮ ಆರತಿ ಬೆಳಗಿದಳು. ಪ್ರಿಯ ಮಡದಿ ರತ್ನಾಜಿ ಕಾಣದಿದ್ದುದನ್ನು ಕಂಪಿಲರಾಯ ಗಮನಿಸಿದ.

ಸಂಧಿ : ೭

ಕಂಪಿಲರಾಯ ರತ್ನಾಜಿಯ ಮನೆಗೆ ಅವಸರದಿಂದ ಬಂದನು. ಮಡದಿಯ ಸ್ಥಿತಿ ನೋಡಿ ಕಾರಣ ಕೇಳಿದನು. "ಬ್ರಹ್ಮ ಜಟ್ಟಿಗನ ಸೋಂಕು ಆಯಿತೆ ?" ಎಂದು ಚಿಂತಿಸಿದ. ಆಗ ರತ್ನಾಜಿ "ಚೆಂಡು ಬಿದ್ದ ನೆವದಲ್ಲಿ ಮನೆಯೊಳಗೆ ಬಂದ ರಾಮಯ್ಯ ಸೆರಗ ಸೆಳೆದ, ತುರುಬಿಗೆ ಕೈಯಿಕ್ಕಿದ, ನನಗೆ ಗಂಡರಿಬ್ಬರಾದರು"- ಎಂದು ಹೇಳುತ್ತಲೇ ಕಂಪಿಲ ಬೈಚಪ್ಪನನ್ನು ಕರೆಯಿಸಿ, ರಾಮನನ್ನು ಕೊಲ್ಲಲು ಅಜ್ಞಾಪಿಸಿದ. ಈ ಕುಹಕಕ್ಕೆ ಅವನು

ಮರುಗಿದನಾದರೂ ರಾಮನನ್ನು ಕೊಲ್ಲಿಸುವುದಾಗಿ ಹೇಳಿ ಹೊರಟ. ಆರು ಜನ ಪ್ರಧಾನರೊಂದಿಗೆ ಸಮಾಲೋಚಿಸಿ, ರಾಮನನ್ನು ಬಚ್ಚಿಡಲು ನಿರ್ಧರಿಸಿ, ಅವನಲ್ಲಿಗೆ ಬಂದು ಎಲ್ಲವನ್ನು ವಿವರಿಸಿದ. "ಅಪ್ಪನ ರಾಣಿಗೆ ತಪ್ಪಿದೆನಾದರೆ ಸರ್ಪಭೂಷಣ ಶಿವ ಬಲ್ಲ" ಎಂದು ರಾಮ ಮರುಗಿದ. ಬೈಚಪ್ಪ ಉಪ್ಪಲಿಗರ ಸಿಂಗನಿಂದ ನೆಲಮಾಳಿಗೆ ತೋಡಿಸಿ ರಾಮನನ್ನು ಅಲ್ಲಿ ಇಟ್ಟ. ಏಳು ತಿಂಗಳಿಗೆ ಸಾಲುವಷ್ಟು ಆಹಾರಧಾನ್ಯ, ಎಣ್ಣೆ, ಉಪ್ಪು, ಮೆಣಸು ಇತ್ಯಾದಿ ಅಲ್ಲಿ ಇಡಿಸಿದ. ಜೊತೆಗೆ ಐದು ಜನ ಸಂಗಡಿಗರನ್ನು ಇಟ್ಟು ಬೀಗಹಾಕಿ, ಬೈಚಪ್ಪ ಹೊರಟು ಹೊಸಮಲೆಗೆ ಬಂದನು. ರಾಮನ ಸಮರೂಪದ ಕಳ್ಳರಾಮನಲ್ಲಿಗೆ ಬಂದು, ಎಲ್ಲ ಸಂಗತಿ ವಿವರಿಸಿದ. ರಾಮನಿಗೆ ಬದಲು ನನ್ನ ರುಂಡ ಕತ್ತರಿಸಿ ಕಂಪಿಲನಿಗೆ ತೋರಿಸೆಂದು ಕಳ್ಳರಾಮ ಹೇಳಿದ. ಕಳ್ಳರಾಮನ ಮೀಸೆ ಹುಬ್ಬು, ಗದ್ದಗಳನ್ನು ರಾಮಯ್ಯನಂತೆ ತಿದ್ದಿಸಿ, ಬೈಚಪ್ಪ ರುಂಡ ಕತ್ತರಿಸಿ, ರಾಮನ ವಸ್ತ್ರಾಭರಣ ತೊಡಿಸಿದನು. ಕತ್ತರಿಸಿದ ರುಂಡವನ್ನು ಚಿನ್ನದ ಹರಿವಾಣದಲ್ಲಿ ತರಲಾಯಿತು. ಜೊತೆಗೆ ಐದು ರುಂಡಗಳನ್ನು ತಂದನು. ಇದನ್ನು ನೋಡಿ ಕಂಪಿಲ ದುಃಖಿಸಿ, ರತ್ನಾಜಿಗೆ ತೋರಿಸಲು ಹೇಳಿದ. ತಲೆಯನ್ನು ರತ್ನಾಜಿಯ ಅರಮನೆಗೆ ತರಲಾಯಿತು. ಆಕೆ ಮಂಡೆ ಹಿಡಿದು, ಮೀಸೆ ಹಿಡಿದು ನೋಡಿ, ತಲೆಯನ್ನು ಪಾದದಿಂದ ಮೆಟ್ಟಿದಳು. ಅದನ್ನು ಕಂದಕಕ್ಕೆ ಹಾಕಲಾಯಿತು.

ರಾಮಯ್ಯ ಸತ್ತನೆಂಬ ಸುದ್ದಿ ಹಬ್ಬಿತು. ಹರಿಯಲದೇವಿ ಬಿದ್ದು ಹೊರಳಿ ದುಃಖಿಸಿದಳು. ಬೇರೊಂದು ಮನೆಯಲ್ಲಿದ್ದ ಮಡದಿಯರು ರಾಮಯ್ಯ ಬರದೇ ಇದ್ದುದಕ್ಕೆ ಹಳಹಳಿಸುತ್ತಿದ್ದರು. ಅರಮನೆ ಕಂಬ ಮುರಿದ, ತಾಯಿ ಕೊಟ್ಟ ಕರಬೋನ ಒಡೆದ, ರಾಮನ ಸತ್ತಿಗೆ ಮುರಿದ, ತಮ್ಮ ವಾಲೆ ಭೂಮಿಗೆ ಬಿದ್ದ, ರಾಮಯ್ಯನ ಕುದುರೆ ಬೊಲ್ಲನು ಸತ್ತ ಕನಸು ಕಂಡುದನ್ನು ನೆನೆದು ಅತ್ತರು. "ರಾಮಯ್ಯ ಸತ್ತ ಬಳಿಕ ಬಾಳಬಾರದು"- ಎಂದು ನುಡಿದು ಸಿಂಗರಿಸಿಕೊಂಡು ಬಲಗೈಯಲ್ಲಿ ಕಠಾರಿ, ಎಡಗೈಯ್ಯಲ್ಲಿ ಕನ್ನಡಿ ಹಿಡಿದು ಕಂಪಿಲನಲ್ಲಿಗೆ ಕಿಚ್ಚು ಬೇಡಲು ನಡೆದರು. "ಅಂಬಲಿಗಾಗಿ ಅಮೃತವ ಕೆಡಿಸುವರೆ?" ಎಂದು, "ರಾಮ ಸತ್ತ ಸುದ್ದಿ ಕೇಳಿ ಸುರಿತಾಳ ಏರಿ ಬಂದು ಹೊಸದುರ್ಗವನ್ನು ನಾಶಮಾಡುವ" ನೆಂದು ಅಳಲಿದರು. "ಉಚ್ಛಾಹದಲಿ ಗಂಡನ ಕೂಡಿಕೊಳಬೇಕು ಕಿಚ್ಚ ಪಾಲಿಸು ಕಂಪ ಮಾವ "ಎಂದು ಬೇಡಿಕೊಂಡರು. "ಬೇಡ ನಿಮ್ಮ ಅತ್ತೆಯ ಜೊತೆ ಬಾಳಿರಿ, ನಾಡ ಹಂಚಿಕೊಡುವೆ" ಎಂದು ಹೇಳಿದ ಕಂಪನ ಮಾತನ್ನು ನಿರಾಕರಿಸಿದರು. ಬೈಚಪ್ಪನ ಸೂಚನೆಯಂತೆ ಕಂಪಿಲ ಅವರಿಗೆ ಕಿಚ್ಚು ಹೊಗಲು ಒಪ್ಪಿಗೆ ಕೊಟ್ಟು, ಚಿಪ್ಪಿಗರನ್ನು ಕರೆಯಿಸಿ, ಐದು ಕಾಲ ಕುಪ್ಪಸಗಳನ್ನು ಸಿದ್ಧಪಡಿಸಿದ. ಕನ್ನಡಿ , ಕಾಲಕುಪ್ಪಸ, ನಿಂಬೆಯಹಣ್ಣು ರಾಮನ ರಾಣಿಯರಿಗೆ ಕೊಡಲಾಯಿತು. ಐದೂ ಜನ, ಕಮ್ಮೆಣ್ಣೆ ಪೂಸಿ ಸ್ನಾನ ಮಾಡಿದರು. ಉಡಿಗೆ, ತೊಡಿಗೆಗಳಿಂದ ಅಲಂಕೃತರಾಗಿ, ಊಟಮಾಡಿದರು. ತರತರದ ಹೂಮಾಲೆಗಳನ್ನು ಮಾಸ್ತಿಯರಿಗಾಗಿ ಸಿದ್ಧಪಡಿಸಿದರು. ಕಾಲಕುಪ್ಪಸ ರವಿಕೆ ತೊಟ್ಟರು. ಹೊಂಗರಿಗಳನ್ನು ಮುಡಿದರು. ಮುಡಿದಂಡೆ ಸೂಸಕ ಧರಿಸಿದರು. ಗಂಧ, ಕಸ್ತೂರಿ, ಕುಂಕುಮ ಜವಾದಿ ಲೇಪಿಸಿಕೊಂಡು ರಾಮಯ್ಯನ ರಾಣಿಯರು ಮಾಸಾಳಿನಂತೆ ಶೋಭಿಸಿದರು. ಹೆಗ್ಗಾಳೆ, ಮದ್ದಳೆ, ತಂಬಟೆ, ಡೊಳ್ಳು ವಾದ್ಯ ಮೊಳಗಿದವು, ರಾಣಿಯರು ಕುದುರೆ ಏರಿದರು. ಪಲ್ಲವದ ಸತ್ತಿಗೆ ಹಿಡಿಯಲಾಯಿತು. ಧೀರಮಾಸ್ತಿಯರು ಬೈಚಪ್ಪನ ಮನೆಯಿಂದ ಹೊರಟುರು. "ನೇಮಿಯ ದಂಡನ್ನು ಸದೆಬಡೆಯುವ ಧೀರನೆ ನಮ್ಮನ್ನು ಬಿಟ್ಟಿರುವುದು ಯೋಗ್ಯವೇ?" ಎಂದು ರಾಮಲೆ ವಾಲಾಡಿದಳು. ಐದೂ ಜನ ಹೆಂಡಿರನ್ನು ನೋಡಿ ಪಟ್ಟಣವೆಲ್ಲ ರೋಧಿಸಿತು. ರಾಮಲದೇವಿ ದುಃಖ ನಿಲ್ಲಿಸಿ "ಕಂತುಹರನ ಲೋಕಕೆ ಹೋಗುತ್ತೇವೆ" ಎಂದು ವಾಲಾಡಿದಳು. ಎರಡೂ ಬದಿಯಲ್ಲಿ ತೂರಾಡಿದ ಕಂಚಿ, ಲಿಂಬೆಗಳನ್ನು ಜನ ಆಯ್ದುಕೊಳ್ಳುತ್ತಿದ್ದರು. ಕಾಟಣ್ಣ ನಾದಿನಿಯರಿಗಾಗಿ ಮರುಗುತ್ತ, ಅವರನ್ನು ಮನೆಗೆ ಕರೆದೊಯ್ದು ಊಟ ಮಾಡಿಸಿದ. ಉಪ್ಪಲಿಗರ ಸಿಂಗ ಆರು ಮಾರು ಮೂರು ಮಾರು ಉದ್ದಗಲದ ಕೊಂಡವನ್ನು ರುದ್ರಭೂಮಿಯಲ್ಲಿ ಸಿದ್ಧಪಡಿಸಿದ. ಕೊರಡು, ಕುಂಟೆ, ಎಣ್ಣೆಯ ಕೊಡ, ತುಪ್ಪದ ಕೊಡ, ಬಣ್ಣದ ರಾಸಿ, ಎಳ್ಳು, ಶ್ರೀಗಂಧದ ಕಟ್ಟಿಗೆ

ಹಾಕಿ ಕಿಚ್ಚು ಸಿದ್ಧಪಡಿಸಿದರು. ಮೂರು ಸುತ್ತು ಕೊಂಡವಾಯಿತು. ಒಂದು ಸುತ್ತಿಗೆ ಸೀರೆ ಸುತ್ತಲ್ಪಟ್ಟಿತು. ಒಂದು ತಾಳೆ ಮರದಷ್ಟು ಎತ್ತರ ಉರಿ ಎದ್ದಿತು. ಮಣಿಹಾರ ಮಲ್ಲನು ಬಂದು, ಕೊಂಡ ಸಿದ್ಧವಾದುದನ್ನು ಮಂತ್ರಿಗೆ ಹೇಳಿದನು. ಕಾಟಣ್ಣನ ಮನೆಗೆ ಬಂದ ಬೈಚಪ್ಪ "ಏಳಿರಿ, ವೇಳೆಯಾಯಿತು, ರಾಮನ ಬೀಡಾರ ತೋಳುಗೊಂಬರೆ ಬಿಜಮಾಡಿ " ಎಂದು ರಾಣಿಯರಿಗೆ ಹೇಳಲು, ಅವರು ಎದ್ದರು. ದುಃಖಿಸತೊಡಗಿದ ಕಾಟನ ಸತಿಯನ್ನು ರಾಮಲದೇವಿ ಸಂತಯಿಸಿ, ಅರಮನೆಗೆ ಬಂದು ಅತ್ತೆ-ಮಾವಂದಿರಿಗೆ ವಂದಿಸಿ "ನಮ್ಮನ್ನು ಕರೆತರಲು ರಾಮಯ್ಯ ಅಗ್ನಿಯನ್ನು ಕಳಿಸಿದ್ದಾನೆ. ಹೋಗುತ್ತೇವೆ. ನೀವು ಸ್ಥಿರರಾಜ್ಯವಾಳಿರಿ" ಎಂದು ಹೇಳುತ್ತಲೇ ಹರಿಯಮ್ಮ ರೋಧಿಸುತ್ತ ಸೊಸೆಯಂದಿರಿಗೆ ಸೀರೆ ಉಡಿಸಿ, ಬಂಗಾರ ತೊಡಿಸಿ ಕಳಿಸಿದಳು. ಐವರೂ ಕೈಮುಗಿದು, ಕುದುರೆ ಏರಿದರು. "ನಿಮ್ಮೂರ ಬಿಟ್ಟು ಸೋಮಧರನ ಪುರಕೆ ಹೋಗುತ್ತೇವೆ." ಎಂದು ಹಳಬರಿಗೆ ಹೇಳುತ್ತಲೇ ಅವರೆಲ್ಲರು ದುಃಖಿಗೊಂಡರು. ವೀರ ಮಾಸ್ತಿಯರಿಗೆ ವೀರವರೆ ಮೊಳಗಿದವು. ರಾಮನ ಹೆಂಡಿರು ಕೆರೆಯ ಬಾಗಿನಕೆ ಸಾಗಿದರು. ಏಳು ಜನ್ಮದಲ್ಲಿ ರಾಮ ಗಂಡನಾಗಲಿ, ಕಂಪಿಲ ಹರಿಯಮ್ಮ ಮಾವ ಅತ್ತೆಯಾಗಲಿ"- ಎಂದು ಗಂಗೆಗೆ ಬೇಡಿಕೊಂಡರು. ಮಳಲಗೌರಿಯ ಗುಡ್ಡೆಮಾಡಿ, ಮುತ್ತಿನ ಅಕ್ಷತೆ ಗಂಧ ಸಹಿತ ಮುತ್ತೈದೆಯರಿಗೆ ಬಾಗಿನ ಕೊಟ್ಟರು. ಬಳಿಕ ಕೊಂಡದ ಹತ್ತಿರ ಬಂದರು. ಎಲ್ಲರನ್ನೂ ದೂರ ಕಳಿಸಿ ತೆರೆ ಹಿಡಿಯಲಾಯಿತು. ಐವರೂ ಕೊಂಡಕ್ಕೆ ಕೈಮುಗಿದು ಎಣ್ಣೆಯಲ್ಲಿ ನೆಳಲನ್ನು ನೋಡಿದರು. ಅಲ್ಲಿ ರಾಮ ಪ್ರತಿಬಿಂಬಿಸಲಿಲ್ಲ. "ರಾಮನು ಸತ್ತುದೇ ಆದರೆ ಎಣ್ಣೆಯಲ್ಲಿ ಪ್ರತಿಬಿಂಬಿಸುತ್ತಿದ್ದ. ಕಾರಣ ಅವನನ್ನು ಎಲ್ಲಿ ಮಡಗಿದೆ?" ಎಂದು ಕೇಳಲು ಬೈಚಪ್ಪ ಎಲ್ಲವನ್ನೂ ವಿವರಿಸಿ, ಅವರನ್ನು ರಹಸ್ಯವಾಗಿ ಅರಮನೆಗೆ ಸಾಗಿಸಿದನು. ಕುರಿಗಳನ್ನು ತರಿಮರಗಳನ್ನು ಕೊಂಡಕೆ ಹಾಕಿ, ರಾಣಿಯರು ಮಾಸ್ತಿಯಾದರೆಂದು ಜನರಲ್ಲಿ ನಂಬುಗೆ ಹುಟ್ಟಿಸಿದನು. ಅಷ್ಟರಲ್ಲಿ ಕತ್ತಲೆಯಾಯಿತು. ಬೈಚಪ್ಪ ರಾಣಿಯರನ್ನು ನೆಲಮಾಳಿಗೆಯಲ್ಲಿ ರಾಮನೊಂದಿಗೆ ಕೂಡಿಸಿದ. ಅಷ್ಟರಲ್ಲಿ ಸೂರ್ಯೋದಯವಾಯಿತು.

ಸಂಧಿ : ೮

ರಾಮ ಸತ್ತ ಸುದ್ದಿ ಸುತ್ತಲೂ ಹರಡಿತು. ಸುರಿತಾಳನು ಆಸ್ಥಾನಕ್ಕೆ ಬಂದು ವಾಲಗ ಸೇರಿಸಿದ. ಸುತ್ತಲೂ ಪ್ರಮದೆಯರು, ಗಿಂಡಿ-ಹಡಪ-ಚಾಮರ ಧಾರಿಣಿಯರು ಸೇರಿದರು. ಮನ್ನೆಯರು ಮಾಂಡಲಿಕರು ಇತ್ತರದಲ್ಲಿದ್ದರು. ಕೊಂಗ, ಕೊಂಕಣ, ಹೊಯ್ಸಣ, ಅರಬ, ಕೂರಸಾಲೆ, ಕನ್ನಡ, ಕಾಂಭೋಜ ಮೊದಲಾದ ದೇಶದವರು ಕುಳಿತಿದ್ದರು. ಆಗ ರಾಮನು ಸತ್ತ ಸುದ್ದಿ ದಿಲ್ಲಿಯನ್ನು ಮುಟ್ಟಿತು. ಇದನ್ನು ನಿಶ್ಚಯ ಮಾಡಿಕೊಳ್ಳಲು ಬೇಹಿನವರನ್ನು ಕಳಿಸಿದನು. ಅವರು ಅಲ್ಲಲ್ಲಿ ನಿಂತು ರಾಮನ ಮರಣದ ವಿವರವನ್ನು ಸಂಗ್ರಹಿಸಿದರು. ಇದೆಲ್ಲ ಕೇಳಿ ಸುರಿತಾಳ ನೇಮಿಯನ್ನು ದಂಡನೊಡನೆ ಕಳಿಸಿದನು. ಡೊಳ್ಳು ಭೇರಿಯೊಂದಿಗೆ, ಸೈನ್ಯ ಕುಮ್ಮಟದತ್ತ ಮುನ್ನಡೆಯಿತು. ಕಲ್ಲಿಕೋಟೆ ಬಯಲಲ್ಲಿ ಬೀಡು ಬಿಟ್ಟಿತು. ಕೊಪ್ಪಳ, ಕೊಲ್ಲೂರು, ಮಾಯಸಮುದ್ರ, ದುಪ್ಪಿಗಡ್ಡೆ, ಹುಳಿಕಳ್ಳಿ, ಅಪ್ಪರಾಜನ ಬೀಡು, ಮಾರ್ಗವಾಗಿ ಏಳಿ ತಿಂಗಳಿಗೆ ದಂಡು ಬಂದಿತು. ಕಂಪಿಲನ ಪಟ್ಟಣ ಕಂಪಿಸಿತು. ಕಂದನನ್ನು ನೆನೆದು ಚಿಂತಿಸದ ಕಂಪಿಲ, ಇಂದು ರಾತ್ರಿ ಕಗ್ಗೊಲೆ ಮಾಡಬೇಕೆಂದು ಸಾರಿದ. ಸೈನ್ಯ ಚೋರಗಂಡಿಯಿಂದ ಇಳಿದು, ಖಾನರನ್ನು ಕೊಂದು ಹಾಕಿತು. ನೂರಾರು ಕುದುರೆ, ಕಾಲಾಳುಗಳನ್ನು ಸೆರೆಹಿಡಿದರು. ಸುರಿತಾಳನ ದಂಡು ಸಗರದ ಸೀಮೆಯ ವರೆಗೆ ಹಿಂದೆ ಸರಿಯಿತು. ಮರುದಿನ ಮತ್ತೆ ಸಿದ್ಧವಾಗಿ ಮುತ್ತಿದರು. ಕಂಪಿಲ ಮಗನನ್ನು ನೆನೆದು ಚಿಂತಿಸಿದ. ಸುರತಾಳನ ಸೈನ್ಯಕ್ಕೆ ಕುಮ್ಮಟ ನಡುಗಿತು. "ನಿನ್ನ ರತ್ನಾಜಿಯನ್ನು ಯುದ್ಧಮಾಡಲು ಹೇಳು" ಎಂದು ಬೈಚಪ್ಪ ಕಂಪಿಲನಿಗೆ ಹಂಗಿಸಿದ. "ಅರಸಿಯರನ್ನು ಕರೆದುಕೊಂಡು ಕುಮ್ಮಟದಿಂದ ಹೊಸಮಲೆಗೆ ಹೊರಡು. ನಾನು ಕಾದುತ್ತೇನೆ"ಂದು ಕಂಪಿಲ ಬೈಚಪ್ಪನಿಗೆ ನುಡಿದ. ಅರಸಿಯರು ಕಂಪಿಲನಿಗೆ ಆರತಿ ಎತ್ತಿದರು. "ನೀನು ವೀರಸ್ವರ್ಗವೇರಿದರೆ ನಾವೂ ನಿನ್ನೊಡನೆ ಬರುವೆವು" ಎಂದು ನುಡಿದರು. ಆಗ "ರಾಮನಾಥನಿಗೆ

ಇಮ್ಮಡಿ ಪರಾಕ್ರಮಿಯೊಬ್ಬನಿದ್ದಾನೆ. ಅವನನ್ನು ಕರೆತಂದು ಕಾದಿಸುವೆ" ಎಂದು ಬೈಚಪ್ಪ ಕಂಪಿಲನಿಗೆ ಹೇಳಿದ. ಸಂತಸ ತಾಳಿದ ಕಂಪಿಲನಿಂದ ಬೀಳ್ಕೊಂಡು, ಲಾಯಕ್ಕೆ ಬಂದು, ಸೊರಗಿ ಹೋದ ಬೊಲ್ಲನನ್ನು ಹಿಡಿದುಕೊಂಡು, ನೆಲಮಾಳಿಗೆ ಹತ್ತಿರ ಬಂದು, ಬೀಗ ತೆಗೆಸಿದ. ಯುದ್ಧದ ವಿವರವನ್ನು ರಾಮನಿಗೆ ನಿವೇದಿಸಿ "ಏಳು ಮನ್ನೆಯ, ಕಂಪಿಲನಾಣೆ, ಕುಲಗುರುವಿನ ಆಣೆ, ಹರಿಯಮ್ಮನ ಆಣೆ" ಎಂದು ಒತ್ತಾಯ ಮಾಡಿದ. ರಾಮಯ್ಯ ಎದ್ದು ಯುದ್ಧವಸ್ತ್ರ, ಆಯುಧ ಧರಿಸಿ ಬೊಲ್ಲನನ್ನೇರಿದ. ಸೈನ್ಯಕೂಡಿಸಿಕೊಂಡು ರಾಮ ಯುದ್ಧ ಆರಂಭಿಸಿದ. ದುಂಬಿರಖಾನ, ಬೊಬ್ಬರಖಾನ ಮೊದಲಾದವರು ಸತ್ತರು. "ರಾಮನು ಸತ್ತನೆಂದು ಬಂದು ಮೋಸಹೋದೆವು" ಎಂದು ನೇಮಿ ಚಿಂತಿಸಿ ಹಿಂದಿರುಗಿದ. ರಾಮಯ್ಯ ಧರ್ಮಕಹಳೆ ಹಿಡಿಸಿ ಕಂಪಿಲನ ವಾಲಗಕ್ಕೆ ಬಂದನು. ನೆರೆದವರೆಲ್ಲ ರಾಮನನ್ನು ಗುರುತಿಸಿದರು. ಈ ಸುದ್ದಿಯನ್ನು ಕೇಳಿ ರತ್ನಾಜಿ ಕೊರಳಿಗೆ ನೇಣು ಹೂಡಿಕೊಂಡು ಸತ್ತಳು. ಅವಳ ಶವವನ್ನು ಸೀಳಿ ತೋರಣ ಕಟ್ಟಲು ಕಂಪಿಲ ಆಜ್ಞಾಪಿಸಿದ. ರಾಮಯ್ಯ ತಡೆದು, ಶವವನ್ನು ಹೂಳಿಸಿದ.

ಸಂಧಿ : ೯

ಎಪ್ಪತ್ತೆರಡು ನಿಯೋಗ ಮಧ್ಯದಲ್ಲಿ ಸುರಿತಾಳನು ಕುಳಿತಿದ್ದನು. ರಾಮನು ಕುಮ್ಮಟದಲ್ಲಿ ತುರುಕರನ್ನು ಕೊಂದ ಸುದ್ದಿ ತಿಳಿದುಬಂದಿತು. ಬೈಚಪ್ಪನ ಬುದ್ಧಿವಂತಿಕೆಗೆ ಸುಲ್ತಾನ ಹೊಗಳಿದ. ಅಷ್ಟರಲ್ಲಿ ಸೋತ ನೇಮಿ ಸಮ್ಮುಖನಾದ. "ಹೋದವರು ಹುಲ್ಲುಹುಟ್ಟದೆ ಹಿಂದುರಿಗಿದಿರಿ. ನಾವು ನಗೆಗೇಡೆಯಾದೆವು. ಓರುಗಲ್ಲ ಪ್ರತಾಪರುದ್ರ, ಹಮ್ಮೀರರಾಯ, ರಾಮದೇವ, ಪಾಂಡ್ಯರನ್ನು ಸೆರೆಹಿಡಿದು ತಂದೆವು. ಇವರಿಗಿಂತ ಬಲಶಾಲಿ ಈ ಕಂಪಿಲನು" ಎಂದು ಸುಲ್ತಾನ ಉದ್ಗಾರ ವ್ಯಕ್ತಮಾಡಿದ. "ನಮ್ಮನ್ನು ಎಲ್ಲಿಗಾದರೂ ಕಳಿಸು, ಕುಮ್ಮಟದುರ್ಗಕ್ಕೆ ಮಾತ್ರ ಬೇಡ" ಎಂದು ನೇಮಿ ಬಿನ್ನವಿಸಿದನು.

ಆಗ ಸುರಿತಾಳನು ಮಾದಿಗಿತ್ತಿನ್ನು ಕರೆಸಿದನು. ಕುಮ್ಮಟದುರ್ಗವನ್ನು ಮುತ್ತಿ, ಕಂಪಿಲನನ್ನು ಸೋಲಿಸಿ, ಬಾದೂರಖಾನನ್ನು ಹಿಡಿದು ತರುತ್ತೇನೆಂದು ಸಾರಿ, ನೇಮಿಯನೊಡಗೊಂಡು, ಸೈನ್ಯದೊಂದಿಗೆ ಬಂದಳು. ಗಡಿಯ ಕೋಟೆಯ ಕಾಟನಾಯಕ, ಕಬ್ಬಿಲ ನಾಗ, ಹೆಬ್ಬುಲಿ ಕಾಟ, ಚಿಕ್ಕ ಏರಿಹೋದರು. ಜೇನಕಲ್ಲ ಹತ್ತಿರ ಮಾದಿಗಿತ್ತಿಯ ಸೈನ್ಯ ಬೀಡು ಬಿಟ್ಟಿತು. ನಾಡು ಬೀಡು ಸುಡುತ್ತ ಮುಂದೆ ನಡೆದರು. ಜನತೆ ಹೊಸಮಲೆಗೆ ಗೂಳೆಹೋಯಿತು, ರಾಮನನ್ನು ಬಂಧಿಸಿ ಸುರಿತಾಳನಿಗೆ ಒಪ್ಪಿಸುವೆನೆಂದು ಮಾದಿಗಿತ್ತಿ ಸೈನ್ಯ ಮುನ್ನಡೆಸಿದಳು. ವಾದ್ಯ, ಅಂಗಡಿ, ಲೇಸಿಯರು, ಬಂಡಿ ಮೊದಲಾದವು ಸೈನ್ಯದಲ್ಲಿದ್ದವು. ಸುರಿತಾಳ ಅವಳಿಗೆ ವೇಷಭೂಷಣ ನೀಡಿ ಪ್ರಶಂಸಿಸಿದ. ಇತ್ತ ರಾಮನಾಥನು ಸೈನ್ಯ ಸಂಗ್ರಹಿಸಿದ. "ದುರ್ಗಕ್ಕೆ ತನಗೆ ಮದುವೆ" ಎಂದು ಸಾರಿದ. ಅಪಾರ ಸೈನ್ಯ ನೋಡಿ ಕಂಪಿಲ ಚಿಂತಿಸಿದ. "ಹೆಂಡಿರು ಮಕ್ಕಳ ಕೊಂದು, ಭಂಡಾರವನ್ನು ಸಾಗಿಸು" ಎಂದು ಬೈಚಪ್ಪನಿಗೆ ಹೇಳಿದ. ಮಗನಿಗೆ ಎರಡು ಬಿಂದಿಗೆ ಹೊನ್ನು, ಚಿನ್ನದ ಹರಿವಾಣ ಕಳಿಸಿ, ಚೆನ್ನಾಗಿ ಕಾದಲು ಹೇಳಿ ಕಳಿಸಿದ. ರಾತ್ರಿ ಕುಮ್ಮಟದಲ್ಲಿ ಕಾಳಗ ಮುಂದುವರಿಯಿತು. ಬೆಳಗಾಯಿತು. ರಾಮಯ್ಯ ಸೈನ್ಯಕ್ಕೆ ಸನ್ಮಾನ ಮಾಡಿ ತಾನು ಎಡದ ಕಾಲಿನಲ್ಲಿ ರನ್ನ ಬೊಂಬೆಯ ಕಡೆಯ ಧರಿಸಿದ. ತನ್ನ ಕುದುರೆಯನ್ನು ಸಿಂಗರಿಸಿದ. ಕಾಟಣ್ಣನಿಗಿ ರಣವೀಳ್ಯ ನೀಡಿ ರಾಮ ರಣರಂಗದತ್ತ ನಡೆದ. ವೈರಿಗಳ ಅಪಾರ ಸೈನ್ಯವನ್ನು ನೋಡಿ "ಹೆಮ್ಮಕ್ಕಳನ್ನು ಉಳಿಹಬೇಡ, ಹರಿಯಮ್ಮನಿಗೆ ಹೇಳು" ಎಂದು ನುಡಿದ. ಯುದ್ಧ ರಭಸದಿಂದ ಮುನ್ನಡೆಯಿತು. ಮಾದಿಗಿತ್ತಿ ಆನೆಯನ್ನೇರಿ ಸೈನ್ಯವನ್ನು ಹುರಿದುಂಬಿಸಿದಳು. ರಾಮನು ಕುದುರೆ ಕಾಲಾಳುಗಳನ್ನು ಕತ್ತರಿಸಿ ಹಾಕಿದನು. ಮರುಳ ತಂಡ ರಣರಂಗದಲ್ಲಿ ತಣಿಯಿತು. ತುರುಕರ ಸೈನ್ಯ ಆವೇಶದಿಂದ ಇರಿಯಲು, ನಲ್ಲನಾಗನು ಬಿದ್ದ, ಬಿಲ್ಲ ಸಿಂಗನು ಬಿದ್ದ, ನಗೆತಿಮ್ಮ ಬಿದ್ದ, ಜಲ್ಲಿಬುಲ್ಲಿಯ ಬುಕ್ಕಿನಾಯಕ ಬಿದ್ದ, ಕಲ್ಲುಕೋಟೆಯ ಚಿಕ್ಕ ಬಿದ್ದ, ಕಂಡೆಯಕಾರ

ತುಳುವರ ಮಂದಿ ಬಿದ್ದಿತು, ಕೊಳ್ಳಿಯ ನಾಗ ಬಿದ್ದ. ಹೀಗಿದ್ದೂ ಬೇಡ ಪಡೆ ರಭಸದಿಂದ ಕಾದಿತು. ತಮ್ಮ ಸೈನ್ಯ ಹಾಳಾಯಿತೆಂದು ಜಲ್ಲರಿಖಾನ ಹೇಳಿದುದನ್ನು ಕೇಳಿ ಮಾದಿಗಿತ್ತಿ ಎದೆಗುಂದಿ, ಒಂದು ಗಾವುದ ಹಿಂದೆ ಸರಿದಳು.

ಸಂಧಿ : ೧೦

"ಬಲ್ಲಿದಳೆಂದು ನಿನ್ನೊಡನೆ ಬಂದು ಗಾಸಿಯಾದೆವು" ಎಂದು ಜಲ್ಲರಿಖಾನ ಹೇಳಿದ. ಕೊನೆಗೂ ಈ ದುರ್ಗವನ್ನು ವಶಮಾಡಿಕೊಳ್ಳುವುದಾಗಿ ಮಾತಂಗಿ ಹೇಳಿದಳು. ಅಷ್ಟರಲ್ಲಿ ಸೈನ್ಯದಲ್ಲಿದ್ದ ತೆಲುಗರು ರಹಸ್ಯವಾಗಿ ಸಭೆ ಸೇರಿ, ರಾಮನನ್ನು ಕೊಲ್ಲಿಸಬೇಕೆಂದು ನಿರ್ಣಯಿಸಿ, 'ಕೋಟೆಯ ಬಾಗಿಲು ತೆರೆದುಕೊಡುತ್ತೇವೆ. ಮರಳಿ ಬಾ" ಎಂದು ಮಾದಿಗಿತ್ತಿಗೆ ಪತ್ರ ಕಳಿಸಿದರು. ಅವಳು ಉತ್ಸಾಹದಿಂದ ಸೈನ್ಯ ಸಮೇತ ಕುಮ್ಮಟವನ್ನು ಮುತ್ತಿದಳು. ಕಾಟಣ್ಣನಿಂದ ಈ ಸುದ್ದಿ ತಿಳಿದು, ಲೆತ್ತವಾಡುತ್ತಿದ್ದ ರಾಮಯ್ಯ ಯುದ್ಧಕ್ಕೆ ಸಿದ್ಧನಾದ. "ಕಿಚ್ಚುಕಂಡು ಬೆಚ್ಚುವುದಿಲ್ಲ" ಎಂದು ಮಡದಿಯರು ನುಡಿದರು. ತನ್ನೊಡನೆ ಮಡಿಯುವುದರ ಸಲುವಾಗಿ ಅವರಿಗೆ ವೀಳ್ಯ ನೀಡಿ, ಸೈನ್ಯದೊಂದಿಗೆ ದುರ್ಗ ಇಳಿದ. ಅಷ್ಟರಲ್ಲಿ ಹೊರಬಾಗಿಲು ಸೂರೆಯಾಯಿತು. ಅಕ್ಕಸಾಲೆಯ ಚಿಕ್ಕ ಬಿದ್ದ, ಪಲ್ಲಿಯಖಾನ ಬಿದ್ದ, ಮಾದಿಗ ಹಂಪ ಬಿದ್ದ. ರಾಮ ಅವಸರದಿಂದ ದುರ್ಗವನ್ನಿಳಿದು ಬಾಣದ ಮಳೆಗರೆದ. ಹಿಂಡಿನೊಳಗೆ ಹುಲಿ ಹೊಕ್ಕಂತಾಯಿತು. ಬಣವೆಗೆ ಬಸವನು ಕವಿದಂತೆ ಕಾಟಣ್ಣ ವೈರಿಗಳ ಮೇಲೆ ಎರಗಿದ. ಕಬ್ಬಿಲ ನಾಗ ಬೊಬ್ಬೇರಿಖಾನನನ್ನು ಹೊಡೆದ. ಗೂಗೆಕಲ್ಲಿನ ಅಡಿಯಲ್ಲಿ ವೈರಿಗಳನ್ನು ಇರಿದ ರಾಮಯ್ಯನ ಮೈ ರಕ್ತಮಯವಾಯಿತು. ಆಗ ಕಾಟಣ್ಣನನ್ನು ಕರೆದು "ನಮ್ಮ ಸೈನ್ಯ ಮುಗಿಯುತ್ತ ಬಂದಿತು. ನನ್ನ ಕಾಲ ಕಡೆಯವು ವೈರಿ ಕೈಗೆ ಸಿಗಬಾರದು. ಇದನ್ನು ಒಯ್ದು ಕಂಪಿಲನಿಗೆ ಕೊಟ್ಟು ಬಾ" ಎಂದು ಹೇಳಿದ. ಕಾಟಣ್ಣ ಕುಮ್ಮಟಕ್ಕೆ ಹೋಗಿ ಯುದ್ಧ ವಿವರ ಹೇಳಿ, ಭಂಡಾರಕ್ಕೆ ಅರಮನೆಗೆ ಕಿಚ್ಚನಿಕ್ಕಿದ. ಆಮೇಲೆ ಹೊಸಮಲೆಗೆ ಸಾಗಿ ಕಂಪಿಲನಿಗೆ ಕಡೆಯವನ್ನು ಒಪ್ಪಿಸಿ, ಹರಿಯಲದೇವಿಯನ್ನು ಕಂಡು, ರಾಮಯ್ಯನಲ್ಲಿಗೆ ಮರಳಿದ. ಆಗ ಬೇವಿನ ಲಿಂಗಣ್ಣ, ತುಳುವರ ಹರಿಯ, ಅಗಸರ ಮಾಳ, ಚೌರದ ನಾಗ, ಉರಿಗೊಳ್ಳಿ ಲಿಂಗ, ದೊಣ್ಣೆಯ ವೀರ, ಕೋಮಟಿಗರ ಮಲ್ಲ, ನಾವಿದ ಚೆನ್ನ, ಮಿಂಡಗುದ್ದಲಿ ಬೊಮ್ಮ, ಅಕ್ಕಸಾಲೆಯ ಮುದ್ದ, ಕಳಬಂಟ ದೇಪ, ಜೋಗೇರ ಕಾಳ, ಲಿಂಗ, ಕಂಬರ ಕಲ್ಲ ಯುದ್ಧದಲ್ಲಿ ಬಿದ್ದರು.

(ಇಲ್ಲಿ ೪೦ ಪದ್ಯಗಳಷ್ಟು ಗರಿ ಕಳೆದಿವೆ)

ಸಂಪಗೆ, ಶಾವಂತಿಗೆ ಮೊದಲಾದ ಹೂಗಳಿಂದ ರುಂಡ ಸಿಂಗರಿಸಿದರು. ಅದರ ಕೂಗುವಿಕೆಯಿಂದ ದಿಲ್ಲಿ ಪಟ್ಟಣ ಅಂಜಿತು. ಅದನ್ನು ಮರಳಿಸಬೇಕೆಂದು ಶಾಸ್ತ್ರಿಗಳು ಸೂಚಿಸಿದರು. ಸುರಿತಾಳನ ಮಗಳು ಬಿಬ್ಬಿ ರುಂಡವನ್ನು ಮುಂಡಾಡಿದಳು. "ನೀನು ಜೀವ ಸಹಿತ ಬರಲೆಂದು ದಾನ-ಧರ್ಮ ಮಾಡಿದುದು ವ್ಯರ್ಥವಾಯಿತು" ಎಂದು ಹಲುಬಿದಳು. ಇದು ಅಪಹಾಸ್ಯಕ್ಕೆ ದಾರಿಮಾಡಿಕೊಡುವುದೆಂದು ಮಗಳಿಗೆ ಸುರಿತಾಳ ಬುದ್ಧಿ ಹೇಳಿದ. ರುಂಡವನ್ನು ಮರಳಿ ಕಳಿಸಲಾಯಿತು.

ಆಕೃತಿ

ಕವಿಯೊಬ್ಬ, ಕಥಾನಾಯಕನ ಜೀವನವೆಂಬ 'ಕೃತಿ'ಯನ್ನು ಒಂದು ಆಕೃತಿ ವಿನ್ಯಾಸದಲ್ಲಿ ಕಟ್ಟಿಕೊಡುತ್ತಾನೆ. ಈ ಆಕೃತಿ ಪದ್ಯವಾಗಿದ್ದ ಪಕ್ಷದಲ್ಲಿ ಇದು ಕಥಾವಿನ್ಯಾಸದ ಜೊತೆಗೆ ಛಂದೋವಿನ್ಯಾಸವನ್ನೂ ಒಳಗೊಳ್ಳುತ್ತದೆ. ಛಂದೋನಿಷ್ಠವಾಗಿರುವ ಹಳೆಯ ಕುಮಾರರಾಮನ ಸಾಂಗತ್ಯದ ಕಥಾವಿನ್ಯಾಸ ಹೀಗಿದೆ.

ಕುಮಾರರಾಮ ರಾಜಕೀಯ ಕ್ಷೇತ್ರದ ವ್ಯಕ್ತಿ. ಈ ಹೊತ್ತಿಗೆ ಕರ್ನಾಟಕದ ಸಾರ್ವಭೌಮತ್ವ ಬಿರುಕುಬಿಟ್ಟು, ರಾಜರನ್ನು ಕುರಿತು ಮಹಾಕೃತಿ ನಿರ್ಮಾಣಮಾಡುವ ಆಸ್ಥಾನ ಕವಿಗಳ ವಾತಾವರಣ ನಾಶವಾಗಿದ್ದಿತು. ಇದಲ್ಲದೆ ಅಂದಿನ ಎತ್ತರ ಪ್ರತಿಭೆಯ ಕವಿಗಳು ದೈವತ್ವಕ್ಕೆ ಮುಖಮಾಡಿ ರಾಜತ್ವಕ್ಕೆ ಬೆನ್ನು ತಿರುಗಿಸಿದ್ದರು. ಇಂಥ ಪರಿಸ್ಥಿತಿಯಲ್ಲಿ ರಾಜರ ಮೇಲೆ ಸಾಮಾನ್ಯ ಕವಿಗಳ ಗಮನ ಮಾತ್ರ ಕೇಂದ್ರೀಕೃತವಾಗಿದ್ದಿತು. ಇದಲ್ಲದೆ ಸಾಹಿತ್ಯಕ್ಕೆ ಸಾಮಾನ್ಯರೇ ಸಹೃದಯರಾಗಿದ್ದ ಮತ್ತು ಅವಸರದಿಂದ ವೀರಮೌಲ್ಯ ಪ್ರಸಾರಮಾಡಬೇಕಿದ್ದ ಮುಸಲ್ಮಾನರ ಆಕ್ರಮಣದ ಕಾಲವದು. ಹೀಗಾಗಿ ಸಾಹಿತ್ಯದ ಶ್ರೇಷ್ಠತೆಯ ಮೇಲಿನ ಒತ್ತು ಕಡಿಮೆಯಾಗಿ, ಅದು ಮೌಲ್ಯಪ್ರಸಾರ ಮತ್ತು ಜನಪ್ರಿಯತೆಗಳ ಕಡೆಗೆ ಸರಿಯಿತು.

ಇಷ್ಟು ಹಿನ್ನೆಲೆಯಲ್ಲಿ ಈ ಕೃತಿಯ ಕಥಾವಿನ್ಯಾಸವನ್ನು ಕುರಿತು ಹೇಳುವುದಾದರೆ, ಪ್ರಾಚೀನ ಕರ್ನಾಟಕದಲ್ಲಿ ಪುರಾಣ, ಚರಿತ್ರೆ, ಪುರಾಣದ ಚರಿತ್ರೀಕರಣ, ಚರಿತ್ರೆಯ ಪುರಾಣೀಕರಣ ಇತ್ಯಾದಿ ಸಾಹಿತ್ಯಿಕ ಪ್ರಯೋಗಗಳು ಉದ್ದಕ್ಕೂ ನಡೆದು ಬಂದಿವೆ. ಆದಿ ಪುರಾಣವು ಪುರಾಣ, ವಿಕ್ರಮಾರ್ಜುನ ವಿಜಯವು ಪುರಾಣದ ಚರಿತ್ರೀಕರಣ, ಕಂಠೀರವ ನರಸರಾಜ ವಿಜಯವು ಚರಿತ್ರೆ, ಸಿದ್ಧರಾಮ ಚರಿತೆಯು ಚರಿತ್ರೆಯ ಪುರಾಣೀಕರಣ. ಈ ಅಂಶವನ್ನು ಗಮನಿಸಿ ಹೇಳುವುದಾದರೆ ಕುಮಾರರಾಮನ ಕಥೆಯು ಗಂಗ, ಅನಾಮಧೇಯ ಕವಿ-೧ ಇವರಲ್ಲಿ ಚರಿತ್ರೆಯಾಗಿ, ನಂಜುಂಡ, ಅನಾಮಧೇಯ ಕವಿ-೨, ಮಹಾಲಿಂಗಸ್ವಾಮಿ ಇವರಲ್ಲಿ ಚರಿತ್ರೆಯ ಪುರಾಣೀಕರಣವಾಗಿ ಹುಟ್ಟು ಪಡೆದಿದೆ. ಅಂದರೆ ಕುಮಾರ ರಾಮನನ್ನು ಮಹಾಲಿಂಗಸ್ವಾಮಿಯಲ್ಲಿ ಪರಶುರಾಮನೊಂದಿಗೆ, ನಂಜುಂಡ ಮತ್ತು ಅನಾಮಧೇಯ ಕವಿ-೨ರಲ್ಲಿ ಅರ್ಜುನನೊಂದಿಗೆ ಸಮೀಕರಿಸಲಾಗಿದೆ. ಇದರಿಂದ ಕನ್ನಡಿಗರ ಮನಸ್ಸಿನಲ್ಲಿ ಕುಮಾರರಾಮ "ಲೌಕಿಕವೀರ"ನಾಗಿ ಹುಟ್ಟಿ, "ಪುರಾಣವೀರ"ನಾಗಿ ಬೆಳೆದುದು ಸ್ಪಷ್ಟವಾಗುತ್ತದೆ. "ದೇವರಾಗಿ" ಅಲ್ಲಲ್ಲಿ ಪೂಜೆಗೊಳ್ಳುತ್ತಲಿರುವುದು ತಿಳಿದ ವಿಷಯವೇ ಆಗಿದೆ. ಇಷ್ಟು ವಿವರಗಳೊಂದಿಗೆ ಗಂಗನ ಕೃತಿ ವಿನ್ಯಾಸವನ್ನು ಗಮನಿಸಬಹುದು.

೧೦ ಸಂಧಿ, ೧೭೬೧ ಸಾಂಗತ್ಯ ಪದ್ಯಗಳ ಈ ಕೃತಿಯಲ್ಲಿ (೧) ಹೊಸಮಲೆದುರ್ಗ ಸಂಧಿ, (೨) ಕುಮ್ಮಟದುರ್ಗ ಸಂಧಿ, (೩) ಬಾದೂರನು ಕುಮ್ಮಟದುರ್ಗಕ್ಕೆ ಬಂದ ಸಂಧಿ, (೪) ನೇಮಿಯ ಕಾಳಗ ಮತ್ತು ಸೋಲು ಸಂಧಿ, (೫) ಓರುಗಲ್ಲಿನಿಂದ ಬೊಲ್ಲನನ್ನು ತಂದ ಸಂಧಿ, (೬) ನೀರಾಟ-ಚೆಂಡಿನಾಟ-ರತ್ನಾಜಿಯ ಮೋಹ ಸಂಧಿ, (೭) ನೆಲಮಾಳಿಗೆಯಲ್ಲಿ ಕುಮಾರ ರಾಮ ಸಂಧಿ, (೮) ನೇಮಿಯ ಕಾಳಗ - ಸೋಲು ಸಂಧಿ, (೯) ಮಾದಿಗಿತ್ತಿ ಕಾಳಗ ಸಂಧಿ, (೧೦) ತೆಲುಗರ ಸಂಚು - ರಾಮನ ವೀರಮರಣ ಸಂಧಿ -ಹೀಗೆ ವಿಷಯ ಮುಂದುವರಿದುದನ್ನು ನೋಡಿದರೆ, ಇದು ನೇರವಾಗಿ ಕಥೆಯನ್ನು ಕೃತಿಯಾಗಿಸುವ ಧೋರಣೆ ಹೊಂದಿರುವುದು ಸ್ಪಷ್ಟವಾಗುತ್ತದೆ. ಅಂದರೆ ಎಡಬಲಗಳಲ್ಲಿ ಅಲ್ಲಿಷ್ಟು ಇಲ್ಲಿಷ್ಟು ಬೆಳೆಸಿರುವ ಮುಂದಿನ ಕವಿಗಳಿಗೆ ಅವಶ್ಯವಿರುವ ಕಥಾ ನೀಲನಕ್ಷೆಯನ್ನು ಬರೆದುಕೊಟ್ಟ ಪ್ರಥಮ ಶ್ರೇಯಸ್ಸು ಈ ಕೃತಿಗೆ ಸಲ್ಲುತ್ತದೆ. ಕವಿ ಗಂಗ ಈ ಕೃತಿ ರಚಿಸುವ ಮೊದಲು ಆಕರ ಸಾಮಗ್ರಿಯನ್ನು ಸಂಗ್ರಹಿಸಿದ್ದಾನೆ. ಗುತ್ತಿಯ ಜಗದಪ್ಪ, ಹಳೆಬೀಡ ಬಲ್ಲಾಳ, ಹುಳಿಯಾರ ಮಾರ, ನೇಮಿಖಾನರನ್ನು ರಾಮಯ್ಯ ಸೋಲಿಸಿದುದು (೫-೧೫೦, ೧೫೧), ರಾಮನಿಗೆ ೫ ಜನ ಹೆಂಡಿರಿದ್ದುದು (೭-೧೧೯, ೧೨೬), ದಿಲ್ಲಿಯ ಸುರಿತಾಳನು ಪ್ರತಾಪರುದ್ರ, ಹಮ್ಮೀರರಾಯ, ರಾಮದೇವ, ಪಾಂಡ್ಯ ರಾಜರನ್ನು ಸೆರೆಹಿಡಿದುದು (೯-೧೯), ಕಂಪಿಲನು ದೇವಗಿರಿ ಯಾದವರ ಸಾಮಂತನೆಂಬುದು (೫-೧೩೬, ೬-೨೭೩) ಇತ್ಯಾದಿ ಸಂಗತಿಗಳು ಈತನಿಗೆ ಗೊತ್ತಿವೆ. ಹೀಗಿದ್ದೂ ಸಂಗ್ರಹಿಸಿದ ಇವೇ ಮೊದಲಾದ ಘಟನೆಗಳಿಂದ ಮುಖ್ಯವಾದವುಗಳನ್ನು "ಆಯ್ಕೆ" ಮಾಡಿಕೊಳ್ಳುವಲ್ಲಿ ಔಚಿತ್ಯವನ್ನು, "ಅಭಿವ್ಯಕ್ತಿ"ಯಲ್ಲಿ

ಕಲಾನಿಷ್ಠತೆಯನ್ನು ತೋರಿದ್ದಾನೆ. ಮುಂದಿನವರು ತಮ್ಮ ಕಾವ್ಯಗಳನ್ನು ಎಷ್ಟೇ ನವೀಕರಿಸಿದರೂ ಈ ಕೃತಿಯ ಘಟನೆ ಮತ್ತು ಅಭಿವ್ಯಕ್ತಿಗಳಿಗೆ ಋಣಿಯಾಗುತ್ತಲೇ ನಡೆದಿದ್ದಾರೆ.

ಪೌರಾಣಿಕ ಮತ್ತು ಧಾರ್ಮಿಕ ಪುರುಷರ ಚರಿತ್ರೆ ಬರೆಯುವ ಪರಂಪರೆಯ ವಾರಸದಾರನಾಗಿದ್ದರೂ ಗಂಗಯ್ಯ ಅದನ್ನು ಬಿಟ್ಟು, ಕುಮಾರ ರಾಮನೆಂಬ ರಾಜಕೀಯ ವ್ಯಕ್ತಿಯನ್ನು ವಸ್ತುವನ್ನಾಗಿ ಸ್ವೀಕರಿಸಿದುದು ದಿಟ್ಟ ನಿಲವೇ ಸರಿ. ಬಹುಶಃ ತರುವಾಯದ ಜನರು ಈ ನಿಲುವಿನ ಬಗ್ಗೆ ಹುಬ್ಬೇರಿಸಿರಬಹುದು. ಅದಕ್ಕಾಗಿಯೇ ಆಮೇಲೆ ಹುಟ್ಟಿದ ಹೊಸ ಕುಮಾರ ರಾಮನ ಸಾಂಗತ್ಯವು "ನರಕೃತಿಯೆಂದು ಜರಿಯಲಾಗದು" (೮-೧೧), "ನರಸ್ತುತಿ ಕೇಳಿ ಫಲವಿಲ್ಲವೆನುತಲಿ ಬರಿದೆ ನಿಂದೆ ಮಾಡುವರೆ?" (೯-೮) ಎಂದು ಮುಂತಾಗಿ ಹೇಳಿದಂತಿದೆ. ಅದೇನೇ ಇದ್ದರೂ, ಈತ ಶಿಷ್ಟ ಕಾವ್ಯಪರಂಪರೆಯವನಾದರೂ ಜಾನಪದ ದಾರಿಯಲ್ಲಿ ನಡೆದವನಾದುದರಿಂದ ಅವನ ಸ್ವತಂತ್ರ ಮನಸ್ಸು ಮೇಲೆ ಹೇಳಿದ ಹೊಸ ತಿರುವಿನ ಹಿಂದೆ ಕೆಲಸಮಾಡಿದಂತಿದೆ.

ಹೀಗಿದ್ದೂ ನಮಗೆ ಕಾಡುವ ಮುಖ್ಯ ಪ್ರಶ್ನೆಯೆಂದರೆ, ಮಾದಿಗಿತ್ತಿಯೆಂಬ ಒಬ್ಬ ಸ್ತ್ರೀ ಸುಲ್ತಾನನ ಸೈನ್ಯದ ನೇತೃತ್ವ ವಹಿಸಿದ್ದಳೇ? ಅರಿಭಯಂಕರನಾದ ಕುಮಾರರಾಮನ ರುಂಡ ಕತ್ತರಿಸಿದಳೇ? ಎಂಬುದು. ಏಕೆಂದರೆ ಭಾರತೀಯ ಪರಂಪರೆಯಲ್ಲಿ ಇಂಥ ಬೇರೆ ಉದಾಹರಣೆ ಕಂಡುಬರುವುದಿಲ್ಲ. ಮತ್ತು ಸ್ತ್ರೀಗೆ ಇಂಥ ತರಬೇತಿ ನೀಡುವ ವ್ಯವಸ್ಥೆಯೂ ೧೩ನೆಯ ಶತಮಾನದಷ್ಟು ಪೂರ್ವದಲ್ಲಿ ಇರಲಿಲ್ಲ. ಹೀಗಾಗಿ ಇದು ಗಂಗಯ್ಯನ ಕಲ್ಪನೆಯಾಗಿರಬಹುದೇ? ಎಂಬ ಸಂದೇಹ ಹುಟ್ಟುತ್ತದೆ.

ಕುಮಾರ ರಾಮನ ವ್ಯಕ್ತಿತ್ವದ ಕೇಂದ್ರ ಲಕ್ಷಣ ಪರನಾರೀ ಸೋದರತ್ವ. ಇದನ್ನು ಗಂಗಯ್ಯ ಸರಿಯಾಗಿಯೇ ಗ್ರಹಿಸಿದ್ದಾನೆ. ನಿಜ ಘಟನೆಯಾದ ರತ್ನಾಜಿಯ ಮೋಹನಿರಾಕರಣೆಯೆಂಬ 'ಪರನಾರಿ ಸೋದರ' ಮೌಲ್ಯಕ್ಕೆ ಇನ್ನೂ ಅರ್ಥ ತುಂಬುವುದು, ಮತ್ತು ಅವನ ಯುದ್ಧಮರಣವನ್ನು ಸಮರ್ಥಿಸುವುದು ಗಂಗನ ಆಶಯಗಳೆನಿಸಿವೆ. ಏಕಕಾಲಕ್ಕೆ ಇವೆರಡನ್ನೂ ಒಂದು ಕಾಲ್ಪನಿಕ ಘಟನೆಯಿಂದ ಪೂರೈಸಬೇಕೆಂದು (ಬ್ರಹ್ಮಚಾರಿ ಭೀಷ್ಮನು ನಪುಂಸಕ ಶಿಖಂಡಿಯ ಎದುರು ಶಸ್ತ್ರಸನ್ಯಾಸಮಾಡಿ ಸತ್ತಂತೆ) ಅವನು ಯತ್ನಿಸಿದಂತಿದೆ. ಅದು, ಮಾದಿಗಿತ್ತಿಯೆಂಬ ಹೆಣ್ಣನ್ನು ಸೇನಾಪತಿಯನ್ನಾಗಿ ಚಿತ್ರಿಸಿದರೆ ರಾಮನ ಶುಚಿತ್ವ, ಶೌರ್ಯ ಎರಡಕ್ಕೂ ನ್ಯಾಯ ಒದಗಿಸಿದಂತಾಗುವುದೆಂದು ಭಾವಿಸಿ, ಅವನು ಈ ಘಟನೆಯನ್ನು ಕಲ್ಪಿಸಿರುವ ಸಾಧ್ಯತೆಯಿದೆ. ಮಿಕ್ಕಂತೆ ಯುದ್ಧದಲ್ಲಿ ರಾಮಯ್ಯನ ರುಂಡ ಹಾರಿದುದು, ಅದನ್ನು ದಿಲ್ಲಿಗೆ (ಬಹುಶಃ ಚಿಕ್ಕ ದಿಲ್ಲಿಯಾಗಿರುವ ಸಮೀಪದ ದೇವಗಿರಿಗೆ) ತೆಗೆದುಕೊಂಡು ಹೋಗಿರುವುದು, ಅಲ್ಲಿಂದ ರುಂಡ ಮರಳಿ ಬಂದಿರುವುದು - ಇವೆಲ್ಲ ನೈಜ ಘಟನೆಗಳಾಗಿರಬಹುದು. ಇದಲ್ಲದೆ ರಾಮಯ್ಯನ ರೂಪ ಪರಾಕ್ರಮಗಳಿಗೆ ಸುಲ್ತಾನನ ಮಗಳು ಮರುಳಾಗಿದ್ದುದು ಕಲ್ಪನೆಯೋ, ನೈಜವೋ ಹೇಳುವಂತಿಲ್ಲ. ಮುಂದಿನ ಕವಿಗಳು ಮಾತ್ರ ಮಾದಿಗಿತ್ತಿ ಮತ್ತು ಸುಲ್ತಾನನ ಮಗಳು ಈ ಎರಡೂ ಅಂಶಗಳನ್ನು ತಪ್ಪದೇ ಸ್ವೀಕರಿಸಿ, ಕಥೆಯ ಮೌಲಿಕತೆಯನ್ನು ಮುಂದುವರಿಸಿದ್ದಾರೆ.

ಛಂದೋವಿನ್ಯಾಸ ದೃಷ್ಟಿಯಿಂದ ಹೇಳುವುದಾದರೆ, ಸಾವಿರ ವರುಷಗಳ ಇತಿಹಾಸದಲ್ಲಿ ಕನ್ನಡ ಸಾಹಿತ್ಯ ವಿದ್ವಜ್ಜನ ಸಮುದಾಯದಿಂದ ಜನಸಮುದಾಯದತ್ತ ಸಾಗಿಬಂದಿದೆ. ಈ ಪ್ರಕ್ರಿಯೆ ಕಾರಣವಾಗಿ ಅದು ವಾಚನಪಾತಳಿಯಿಂದ ಶ್ರವಣಪಾತಳಿಗೆ ನಡೆಯುತ್ತ ಬಂದಿತು. ಈಗ ಸಹಜವಾಗಿಯೇ ಸಾರ್ವಜನಿಕರು ಕೇಳಲು ಯೋಗ್ಯವಾದ ಗೇಯಬಂಧಗಳನ್ನು ಹುಡುಕುತ್ತ ಬರಲಾಯಿತು. ಇದರ ಫಲವೆಂಬಂತೆ ವಾರ್ಧಕ, ಭಾಮಿನಿಗಳು ಬಿಚ್ಚಿಕೊಂಡವು. ಇನ್ನೂ ಗೇಯತೆಯನ್ನು ಬಯಸಿದಾಗ ಸಾಂಗತ್ಯ ಸಾಕಾರಗೊಂಡು, ನೂರಾರು ಕೃತಿಗಳು ಹುಟ್ಟಿಕೊಂಡವು. ಈ ಪರಂಪರೆಯಲ್ಲಿ ಸಿರುಮನನ್ನು ಕುರಿತು ೩ ಕೃತಿಗಳು, ಇಮ್ಮಡಿ ಚಿಕ್ಕ ಭೂಪಾಲನ

ಸಾಂಗತ್ಯ, ಕಂಠೀರವ ನರಸರಾಜ ವಿಜಯಗಳಂತೆ, ಕುಮಾರ ರಾಮನನ್ನು ಕುರಿತು ೫ ಕೃತಿಗಳು ಕನ್ನಡದಲ್ಲಿ ಹುಟ್ಟಿಕೊಂಡವು.

ವೀರ, ಪ್ರಾಚೀನ ಕಾಲದಲ್ಲಿ ಬಹುಮುಖ್ಯ ಮೌಲ್ಯವಾಗಿದ್ದಿತು. ವೀರನೊಬ್ಬ ಯುದ್ಧದಲ್ಲಿ ಮಡಿಯುತ್ತಲೇ ಒಂದೆಡೆ ವೀರಗಲ್ಲ ಪೂಜೆ ನಡೆದರೆ, ಇನ್ನೊಂದೆಡೆ ಸಾಹಿತ್ಯ (ಶಿಷ್ಟ, ಜಾನಪದ) ಮಾಧ್ಯಮದಲ್ಲಿ ಅವನ ಕೀರ್ತಿಪ್ರಸಾರಕಾರ್ಯ ನಡೆಯುತ್ತಿದ್ದಿತು. ಚಕ್ರವರ್ತಿಗಳಿಲ್ಲದ ಕರ್ನಾಟಕದಲ್ಲಿ ಸಂಭವಿಸಿದ ಚಿಕ್ಕಪುಟ್ಟ ಪಾಳೆಯಗಾರರ ಘರ್ಷಣೆ ಮತ್ತು ಮುಸಲ್ಮಾನರ ಆಕ್ರಮಣಗಳಿಂದಾಗಿ ಈ ವೀರ ಮತ್ತು ಅದರ ಪ್ರಸಾರ ಇನ್ನೂ ಮಹತ್ವ ಪಡೆದವು. ಸಾಮಾನ್ಯವಾಗಿ "ವೀರನ ಸಾವು ಕತೆಯಾಗಿ ಪರಿದುದು" ಎಂಬ ಶಾಸನ ಮಾತಿನಂತೆ ಸಾವನ್ನು ಸಾಹಿತ್ಯ ಮಾಡುವ ಮತ್ತು ಅದನ್ನು ಸಮಾಜದ ತುಂಬ "ಪರಿಯಿಸುವ" ಸಲುವಾಗಿ ಚಾರಣ ಕವಿಗಳು, ಜಾನಪದ ನೀಲಗಾರರು (ಲೀಲೆಗಾರರು) ಹುಟ್ಟಿಕೊಂಡರು.

ಹೀಗಾಗಿ ಕುಮಾರರಾಮನನ್ನು ಕುರಿತ ಎಲ್ಲ ಕೃತಿಗಳು ಸಾಂಗತ್ಯದಲ್ಲಿಯೇ ಹೆಪ್ಪುಗಟ್ಟಿದವು. ಇವುಗಳಲ್ಲಿ ನಂಜುಂಡನದು ವಿದ್ವತ್ತು ಕಾರಣವಾಗಿ ಭಾಷಾಲಯ ಒಂದು ಕಡೆ, ಛಂದೋಲಯ ಇನ್ನೊಂದು ಕಡೆ ನಡೆದು, ಬಹಳಷ್ಟು ಸಲ ಹಿತವಾದ "ಸಾಂಗತ್ಯಪಾಕ" ಅಲ್ಲಿ ಸಿದ್ಧವಾಗಲಿಲ್ಲ. ಮಿಕ್ಕವರು ಜಾನಪದಪ್ರಜ್ಞೆಯ ಕವಿಗಳಾದ ಕಾರಣ, ಜಾನಪದ ನೆಲೆಯ ಸಾಂಗತ್ಯದಲ್ಲಿ ಭಾಷಾಲಯ -ಛಂದೋಲಯಗಳು ಬಹುಮಟ್ಟಿಗೆ ಕೈಹಿಡಿದು ನಡೆಯಲು ಸಾಧ್ಯವಾಯಿತು. ಹಳೆಯ ಕುಮಾರ ರಾಮನ ಸಾಂಗತ್ಯದ ಶೃಂಗಾರ ಸಂದರ್ಭದಲ್ಲಿ ಇದಕ್ಕೆ ವಿಪುಲ ನಿದರ್ಶನಗಳು ಸಿಗುತ್ತವೆ. ಕೆಲವೊಮ್ಮೆ ಆಶುಕವಿತ್ವದಂತೆ ಸಾಂಗತ್ಯಪದ್ಯಗಳು ರೂಪುಗೊಳ್ಳುತ್ತ ಹೋಗುತ್ತಲಿರುವುದು ಇಲ್ಲಿಯ ವಿಶೇಷತೆಯಾಗಿದೆ.

ಸಂಸ್ಕೃತಿ

ಸಾಹಿತ್ಯವೆನ್ನುವುದು ಸಮಕಾಲೀನ ವಾಸ್ತವ ಮತ್ತು ಸಾರ್ವಕಾಲೀನ ಆದರ್ಶಗಳ ಪ್ರಸಾರ ಮಾಧ್ಯಮವಾಗಿದೆ. ಸಾಮಾನ್ಯವಾಗಿ ಎಲ್ಲ ಕೃತಿಗಳಲ್ಲಿ ಸಾರ್ವಕಾಲೀನ ಆದರ್ಶ ಚಿತ್ರಿತವಾಗಿದ್ದರೆ, ಕೆಲವು ಕೃತಿಗಳಲ್ಲಿ ಮಾತ್ರ ಸಮಕಾಲೀನ ವಾಸ್ತವ ದಾಖಲಾಗಿ, ಅವು ಸಾಂಸ್ಕೃತಿಕ ಮಹತ್ವ ಪಡೆಯುತ್ತವೆ. ಇಂಥ ಕೃತಿಗಳೆಂದರೆ ವಡ್ಡಾರಾಧನೆ, ಪಂಪಭಾರತ, ಬಸವಣ್ಣನವರ ವಚನ, ಹರಿಹರನ ರಗಳೆ, ಬ್ರಹ್ಮಶಿವನ ಸಮಯಪರೀಕ್ಷೆ ಇತ್ಯಾದಿ. ಈ ಮಾಲಿಕೆಯಲ್ಲಿ ಹಳೆಯ ಕುಮಾರರಾಮನ ಸಾಂಗತ್ಯ ತಪ್ಪದೇ ಸೇರಿಕೊಳ್ಳುತ್ತದೆ.

ಸಂಸ್ಕೃತಿಯೆನ್ನುವುದು ಸಮೂಹಸಮ್ಮತ ಜೀವನಪದ್ಧತಿಯಾಗಿದೆ. ಪ್ರಕ್ರಿಯಾತ್ಮಕವಾಗಿರುವ ಇದು, ಆಯಾ ಕಾಲದ ಆದರ್ಶ-ವಾಸ್ತವಗಳ ನಿರಂತರ ಕ್ರಿಯೆಯಾಗಿದೆ. ಪ್ರಾಚೀನ ಕಾಲದಲ್ಲಿ ಇದನ್ನು ರೂಪಿಸುತ್ತಿದ್ದ ಮುಖ್ಯ ಶಕ್ತಿಗಳೆಂದರೆ ಧರ್ಮ ಮತ್ತು ರಾಜಧರ್ಮ.

ಧರ್ಮಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಮುಮ್ಮಡಿಸಿಂಗ - ಕಂಪಿಲರಾಯರ ತಲೆಮಾರಿನಲ್ಲಿ ಕಂಪಲಿಯ ಸೋಮೇಶ್ವರ, ಕಂಪಿಲರಾಯ-ಕುಮಾರರಾಮರ ಕಾಲದಲ್ಲಿ ಜಟ್ಟಂಗಿ ರಾಮೇಶ್ವರ ಈ ಮನೆತನಕ್ಕೆ ಮುಖ್ಯದೇವತೆಗಳೆನಿಸಿದ್ದವು. ಹೀಗಾಗಿ ಈ ಕಾವ್ಯದ ತುಂಬ ಹೆಚ್ಚಾಗಿ ಶಿವಭಕ್ತಿವಾತಾವರಣವೇ ತುಂಬಿದೆ. ಕಂಪಲಿಯ ಸೋಮೇಶ್ವರನ ಪ್ರಸಾದದಿಂದ ಕಂಪಿಲರಾಯ, ಜಟ್ಟಂಗಿ ರಾಮೇಶ್ವರನ ಪ್ರಸಾದದಿಂದ ಕುಮಾರರಾಮ ಹುಟ್ಟಿದರೆಂಬುದು ಮಕ್ಕಳ ಜನನದ ಬಗೆಗೆ ಜನರಿಗಿದ್ದ ನಂಬಿಕೆಯನ್ನು ದ್ಯೋತಿಸುತ್ತದೆ.

ಓರುಗಲ್ಲಿನ ಗುಂಡ ಬ್ರಹ್ಮಯ್ಯನ ವರದಿಂದ ಕುಮಾರರಾಮ ಯುದ್ಧ ಗೆದ್ದ ಸೂಚನೆ ಇಲ್ಲಿದೆ. ಕಾಕತೀಯ ಪ್ರತಾಪರುದ್ರನ ಸಂದರ್ಭದಲ್ಲಿ ನೇರವಾಗಿ ವೀರಶೈವ ವಾತಾವರಣ ಮೂಡಿನಿಂತಿದೆ. ಜಂಗಮರ ವಿವಿಧ ಕಂಥೆಗಳ,

ನಿರಾಸೆಯ ಮಠ ಮೊದಲಾದವುಗಳ ಉಲ್ಲೇಖ ಇಲ್ಲಿ ಗಮನಾರ್ಹವೆನಿಸಿದೆ. ಕ್ಷುದ್ರ ದೇವತೆಗಳಿಗೆ ಕುರಿ ಕೋಳಿ ಕೋಣಗಳನ್ನು ಬಲಿ ಕೊಡುವುದು ಇಲ್ಲಿ ಅನೇಕ ಬಾರಿ ಗೋಚರಿಸುತ್ತದೆ. ಇಷ್ಟಾರ್ಥ ಸಾಧನೆಗಾಗಿ ರತ್ನಾಜಿ ಹಲವು ದೈವಗಳನ್ನು ಹಲವು ಬಗೆಯಲ್ಲಿ ಬೇಡಿಕೊಳ್ಳುವ ಸಂದರ್ಭದಲ್ಲಿ ಆ ಕಾಲದ ಪ್ರಭಾವಶಾಲಿ ದೇವತೆಗಳ, ಹರಕೆಗಳ ಸುದೀರ್ಘ ಪಟ್ಟಿಯನ್ನೇ ಕೊಡಲಾಗಿದೆ.

ರಾಜಧರ್ಮಕ್ಕೆ ಬಂದರೆ ಅಂದಿನ ರಾಜಸತ್ತಾಯುಗದ ಚಿತ್ರ ಇಲ್ಲಿ ಸ್ಪಷ್ಟವಾಗಿ ಮೂಡಿದೆ. 'ವೀರಭೋಜ್ಯಾ ವಸುಂಧರಾ' ಎಂಬಂತೆ ತೋಳ್ಬಲದ ಮೇಲೆ ಅಂದಿನ ರಾಜ್ಯಭಾರ ನಡೆಯುತ್ತಿದ್ದಿತು. ಸಣ್ಣಪುಟ್ಟ ಪಾಳೆಯಗಾರರನ್ನು ಕಂಪಿಲ ಅರಸು ಸೋಲಿಸುವುದು, ದಿಲ್ಲಿ ಸುರತಾಳ-ಕಂಪಿಲರಾಯ-ಓರುಗಲ್ಲಿ ಕಾಕತೀಯರು ತಮ್ಮ ಮೇಲಧಿಕಾರ ನಡೆಸುವುದು ಸಮಕಾಲೀನ ಪ್ರಭುತ್ವದ ದ್ಯೋತಕವೆನಿಸಿದೆ. ಹೀಗಿದ್ದೂ ಕಂಪಿಲರಾಯ ದೇವಗಿರಿ ಯಾದವರಿಗೆ ವಿಧೇಯನಾಗಿದ್ದನೆನಿಸುತ್ತದೆ. "ರಾಮದೇವರಾಯನೊಬ್ಬನೆ ತಪ್ಪಲು ಭೂಮಿಯ ರಾಯರ ಗಂಡ" (೫-೧೩೫) ಎಂದು ಈ ಕಾವ್ಯದಲ್ಲಿ ಕುಮಾರರಾಮ ಹೊಗಳಿಸಿಕೊಳ್ಳುವುದು ಇದಕ್ಕೆ ನಿದರ್ಶನವೆನಿಸಿದೆ. "ಸಾರಿದವರ ಕಾಯ್ವ ಹೋರಿದವರ ಕೊಲ್ವ" ಎಂಬ ನೀತಿ ಅಂದು ಬೆಲೆ ಪಡೆದಿದ್ದ ಕಾರಣ, ಅನೇಕ ಯೋಧರ ವೀರಮರಣ ಇಲ್ಲಿ ಚಿತ್ರಿತವಾಗಿದೆ. ಸಂಶಪ್ತಕ ಶಬ್ದಕ್ಕೆ ಪ್ರತಿಯಾದ "ತೊಲಗದ ಕಂಬ" ಪದವನ್ನು ಈ ಕವಿ ಎರಡು ಸಲ ಬಳಸಿದ್ದಾನೆ (೬-೧೧೪, ೧೯೫). ಸ್ತ್ರೀಯರೂ ವೀರಪತ್ನಿಗೆ ನಿದರ್ಶನವೆಂಬಂತೆ "ಮಾಸ್ತಿ"ಯಾಗುವ ವಿವರಗಳು ಇಲ್ಲಿ ದಟ್ಟವಾಗಿ ಮೂಡಿವೆ. ಕೈಯಲ್ಲಿ ಕನ್ನಡಿ, ಲಿಂಬೆಹಣ್ಣು ಹಿಡಿದು ಕುದುರೆ ಹತ್ತಿ ಬರುವುದು, ಮಳಲ ಗೌರಿಯನ್ನು ಪೂಜಿಸುವುದು, ಹೊಂಗರಿಯನ್ನು ತಲೆಯಲ್ಲಿ ಮುಡಿದು, ಕಾಲ ಕುಪ್ಪಸ ತೊಟ್ಟು, ಗಂಡನ ಗುಣಗಾನ ಮಾಡುತ್ತ ಕಿಚ್ಚಿನ ಸುತ್ತ ಕುಣಿಯುವುದು, ಎಣ್ಣೆಯಲ್ಲಿ ಪ್ರತಿಬಿಂಬ ನೋಡುವುದು, ಕಿಚ್ಚಿನಲ್ಲಿ ಧುಮುಕುವುದು - ಇತ್ಯಾದಿ ಅಪೂರ್ವ ಚಿತ್ರಗಳು ಇಲ್ಲಿವೆ. ಕಳ್ಳರಾಮನ ಪ್ರಸಂಗವಂತೂ ವೇಳೆವಾಳಿ ಸಂಪ್ರದಾಯವನ್ನು ನೆನಪಿಸುತ್ತದೆ.

ಯುದ್ಧಕ್ಕೆ ಸಂಬಂಧಪಟ್ಟ ಕೋಟೆ, ಕೊತ್ತಳ, ಅಗಳು, ಅನೇಕ ಬಗೆಯ ಆಯುಧಗಳು, ಪೆಟಲು ಹೆಸರಿನ ಮದ್ದು ಉಪಯೋಗಿಸುವ ಬಂದೂಕು ಇತ್ಯಾದಿಗಳು ರಣರಂಗದ ಚಿತ್ರವನ್ನೀಯುತ್ತವೆ. ದಾಳಿ ಸಂದರ್ಭದಲ್ಲಿ ಸಾಮಾನ್ಯ ಕುಟುಂಬಗಳು ಅನುಭವಿಸುತ್ತಲಿದ್ದ ಬವಣೆ, ಗುಳೆ ಹೋಗುತ್ತಲಿದ್ದ ರೀತಿ ದಟ್ಟವಾಗಿ ಮೂಡಿದೆ.

ಮೊರೆ ಹೊಕ್ಕವರ ಕಾಯ್ವುದು ರಾಜಸತ್ತಾಯುಗದ ಮುಖ್ಯ ಲಕ್ಷಣ. ಕುಮ್ಮಟದುರ್ಗದ ಯುದ್ಧಕ್ಕೆ ಮುಖ್ಯಕಾರಣ ಮೊರೆ ಹೊಕ್ಕ ಬಹಾದ್ದೂರ (ಬಹಾವುದ್ದೀನ) ನಿಗೆ ಕುಮಾರರಾಮ ರಕ್ಷಣೆ ಕೊಟ್ಟುದು. ಈ ಒಂದು ವಿಷಯ, ದಿಲ್ಲಿ ಸುಲ್ತಾನನ್ನು ಎದುರುಹಾಕಿಕೊಳ್ಳುವಂತೆ ಮಾಡಿತು. ಒಂದಲ್ಲ, ಎರಡಲ್ಲ, ಮೂರು ಸಲ ಯುದ್ಧವೇರ್ಪಟ್ಟು, ಅಭೇದ್ಯ ಕುಮ್ಮಟದುರ್ಗದ ನಾಶಕ್ಕೆ ಇದು ಕಾರಣವಾಯಿತು.

ರಾಜಸತ್ತಾಯುಗದ ಶೌರ್ಯಮೌಲ್ಯಕ್ಕೆ ಮೆರುಗು ಬರುವುದು, ಪರಸ್ತ್ರೀ ವಿಷಯದ ಶುಚಿತ್ವದಿಂದ-ಎಂದು ನಂಬಿದ್ದ ಕಾಲವದು. ಹೀಗಾಗಿ ಈ ಪೂರ್ವದ ರಾಜರ ಶೌರ್ಯ ಘಟನೆಗಳಿಗಿಂತ, ಶುಚಿಘಟನೆಯನ್ನೂ ಒಳಗೊಂಡ ಕುಮಾರಾಮನ ಜೀವನ ಕವಿಗಳಿಗೆ ಹೆಚ್ಚು ಇಷ್ಟವಾಯಿತು, ಜತೆಗೆ ಆದರ್ಶವಾಯಿತು. ಕುಮಾರ ರಾಮನ ಜೀವನದಲ್ಲಿ ಹೆಣ್ಣು ಮೂರು ರೂಪಗಳಲ್ಲಿ ಕಾಡಿದೆ. ಕಂಪಿಲನ ಕಿರಿಯ ರಾಣಿ ರತ್ನಾಜಿ "ಮುನಿದರೆ ಮಾರಿಯಾಗಿ", ಸುರಿತಾಳನ ಮಗಳು ಬಾಬಮ್ಮ "ವಿಫಲ ಪ್ರೇಮಿಯಾಗಿ", ಏರಿಬಂದ ಮಾದಿಗಿತ್ತು "ಜೀವಹಂತಕಿಯಾಗಿ" ಅವನ ಸುತ್ತ ಪಾತ್ರವಾಡಿದ್ದಾರೆ. ಇವರಲ್ಲಿ ಮೊದಲಿನ ಇಬ್ಬರ ವಿಷಯದಲ್ಲಿ ಅವನು ಶುಚಿಮೌಲ್ಯವನ್ನು ಮೆರೆದು, ತನ್ನ "ಪರನಾರಿ ಸೋದರ" ಬಿರುದಿಗೆ ಅರ್ಥ ತುಂಬಿದ್ದಾನೆ.

ಈತನ ಹೆಸರು ರಾಮ. 'ಕುಮಾರ'ವೆನ್ನುವುದು ವಿಶೇಷಣ. ಇದು ಷಣ್ಮುಖನ ಹೆಸರು. ಬ್ರಹ್ಮಚಾರಿಯಾಗಿರುವ ಷಣ್ಮುಖ ಶುಚಿಯೂ ಹೌದು, ಶೂರನೂ ಹೌದು. ಹೀಗಾಗಿ 'ಕುಮಾರ' ವಿಶೇಷಣವನ್ನು ರಾಮನಿಗೆ ಅಂಟಿಸಲಾಯಿತು. ಕರ್ನಾಟಕದಲ್ಲಿ ಈ ಪರಂಪರೆಗೆ ಕುಮಾರರಾಮನೇ ಮೊದಲಿಗನಾದ. ಇದರ ಮುಂದುವರಿಕೆಯೆಂಬಂತೆ ಸಿರುಮನ ಸಾಂಗತ್ಯದಲ್ಲಿ ಕುಮಾರ + ಮಲ್ಲ, ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯದಲ್ಲಿ ಕುಮಾರ + ತೋಂಟದರಾಯ ಎಂಬ ಹೆಸರುಗಳು ಕಾಣಿಸಿಕೊಳ್ಳುವುದನ್ನು ಅವಶ್ಯ ಗಮನಿಸಬೇಕು.

ರಾಜರ ಇನ್ನೊಂದು ಲಕ್ಷಣ "ಶೃಂಗಾರ ಜೀವನ". ಕುಮಾರ ರಾಮನ ಸಾಂಗತ್ಯದಲ್ಲಿ ಕಂಪಿಲರಾಯನು ಹರಿಯಲದೇವಿಯನ್ನು ಹೊರತುಪಡಿಸಿ ಇನ್ನೂ ಹಲವರನ್ನು ಮದುವೆಯಾದುದು, ಹೆಚ್ಚಿನದಾಗಿ ತಾನು ವಯೋವೃದ್ಧನಾಗಿದ್ದರೂ ತೆಲುಗು ಮೂಲದ (೬- ೩೯೦) ಯುವತಿ ರತ್ನಾಜಿಯನ್ನು ಮನದನ್ನೆಯಾಗಿ ಕರೆತಂದುದು, ಇಲ್ಲಿಯ ಮುಖ್ಯ ಅಂಶವೆನಿಸಿದೆ. ರತ್ನಾಜಿ ಕುಮಾರ ರಾಮನನ್ನು ಪ್ರೇಮಿಸಿದ ಪ್ರಸಂಗವಂತೂ ಈ ಕಾವ್ಯದ ಮುಖ್ಯ ಆಕರ್ಷಣೆಯೆನಿಸಿದೆ. ಇದಲ್ಲದೆ ಹೊಸಮಲೆದುರ್ಗ, ಕುಮ್ಮಟದುರ್ಗಗಳ ಸೂಳೆಗೇರಿ ವರ್ಣನೆ, ಚೆಂಡಿನಾಟ ನೋಡಲು ಬಂದ ಸೂಳೆಯರ ವರ್ಣನೆಗಳು ಇಲ್ಲಿಯ ಶೃಂಗಾರ ಜೀವನದ ಇನ್ನೊಂದು ಮುಖವೆನಿಸಿವೆ.

ಹೀಗೆ ಮಧ್ಯಕಾಲೀನ ಕರ್ನಾಟಕದ ವೀರಜೀವನವನ್ನು, ಅದಕ್ಕೆ ಪೂರಕವಾದ ಎಲ್ಲ ಮುಖಗಳನ್ನು ಚಿತ್ರಿಸುವ ಮಹತ್ವದ ಕೃತಿಯಾಗಿದೆ, "ಹಳೆಯಕುಮಾರ ರಾಮನ ಸಾಂಗತ್ಯ".

IV

ಪರಿಷ್ಕರಣ

ಪ್ರಾಚೀನ ಕನ್ನಡ ದೇಶೀಕಾವ್ಯಗಳಲ್ಲಿ ಅತಿಹೆಚ್ಚು ಪಾಠಾಂತರಕ್ಕೆ ಗುರಿಯಾದುದು ಗಂಗನ 'ಹಳೆಯ ಕುಮಾರರಾಮನ ಸಾಂಗತ್ಯ'. ಈ ಕೃತಿಯನ್ನು ಆತ "ಪದಜಾತಿ" ಎಂದು ಕರೆದಿರುವುದನ್ನು ನೋಡಿದರೆ, ಇದು ಸಾಕ್ಷರರ ಮಧ್ಯೆ ವಾಚನ ಪಾತಳಿಗಿಂತ, ಸಾಮಾನ್ಯರ ಮಧ್ಯೆ ಶ್ರವಣ ಪಾತಳಿಯ ಮೇಲೆ ಹೆಚ್ಚು ವ್ಯವಹರಿಸಿರಬೇಕೆನಿಸುತ್ತದೆ. ಸ್ವತಃ ಗಂಗನೂ ತರುವಾಯದ ಸಹೃದಯರೂ ಇದನ್ನು ಗೋಷ್ಠಿರೂಪದಲ್ಲಿ ಹಾಡುತ್ತ ಬಂದಿರುವ ಸಾಧ್ಯತೆಯಿದೆ. ಹಸ್ತಪ್ರತಿಗಳಲ್ಲಿ ಪಾಠಾಂತರಗಳು ರೂಪಾಂತರಕ್ಕೆ ದಾರಿಮಾಡಿಕೊಟ್ಟುದೇ ಇದಕ್ಕೆ ಸಾಕ್ಷಿಯಾಗಿದೆ. ಹೀಗಾಗಿ ಇಂದಿನ ಸಂದರ್ಭದಲ್ಲಿ ಗಂಗನ ಮೂಲಪಾಠವನ್ನು ನಿರ್ಧರಿಸಿಕೊಡುವುದು ಅಸಾಧ್ಯದ ಮಾತೇ ಸರಿ. ಹೀಗೆ ಪಾಠಾಂತರದ ಗೊಂಡಾರಣ್ಯದಲ್ಲಿ ಪಾಂಚಾಳಗಂಗನ ಕೃತಿ ಯಾವುದು? ಎಂದು ಪತ್ತೆ ಹಚ್ಚುವುದು ಅಸಾಧ್ಯವಾಗಿರುವಾಗ, "ಹಳೆಯ ಕುಮಾರರಾಮನ ಸಾಂಗತ್ಯ" ಎಂದು ಕರೆಯುವ ಮೂಲಕ, ಅದನ್ನು ಗೊತ್ತುಮಾಡಿಕೊಟ್ಟ ಹಸ್ತಪ್ರತಿಯನ್ನು ನಾವು ಇಲ್ಲಿ ಬಳಸಿದ್ದೇವೆ. ಅದು ಮೇಲುಕೋಟೆ "ಸಂಸ್ಕೃತ ಸಂಶೋಧನ ಸಂಸದ"ಕ್ಕೆ ಸಂಬಂಧಿಸಿದುದು. ಇದಕ್ಕೆ ಲಿಪಿಕಾರ ಕೊಟ್ಟ ಹೆಸರು "ಹಳೆ ಕುಮಾರರಾಮನ ಚರಿತೆ". ಈ ಹೆಸರು ಅಂದು ಹೊಸದಾಗಿ ಹುಟ್ಟಿದ ಬೇರೊಂದು ಕುಮಾರರಾಮನ ಚರಿತ್ರೆಯಿಂದ ತಾನು ಭಿನ್ನವೆಂದು ಸೂಚಿಸುವುದರಿಂದ, ಇದನ್ನು ಗಂಗನ ಕೃತಿಯ ವಿಶ್ವಾಸಾರ್ಹ ಪ್ರತಿಯೆಂದು ನಾವು ಭಾವಿಸಿದ್ದೇವೆ.

ಗಂಗನ ಹೆಸರಿನಲ್ಲಿ ೧೦-೧೫ ಪ್ರತಿಗಳು ಕರ್ನಾಟಕದಲ್ಲಿ ಸಿಗುತ್ತಿದ್ದರೂ ಪ್ರಸ್ತುತ ಹಸ್ತಪ್ರತಿಯನ್ನು ಹೋಲುವ ಇನ್ನೊಂದು ಪ್ರತಿ ಎಲ್ಲಿಯೂ ದೊರೆಯಲಿಲ್ಲ. ಹೀಗೆಯೇ ಬಿಟ್ಟರೆ ಈಗಾಗಲೇ ಜೀರ್ಣವಾಗಿರುವ ಈ ವಿಶ್ವಾಸಾರ್ಹ ಪ್ರತಿಯೂ ನಾಶವಾಗಿ ಹೋಗುವುದೆಂಬ ಅಂಜಿಕೆಯಿಂದ ಇದನ್ನು ಪರಿಷ್ಕರಣಕ್ಕಾಗಿ

ಎತ್ತಿಕೊಳ್ಳಲಾಯಿತು. ಆದರೆ ಅಲ್ಲಲ್ಲಿ ತ್ರುಟಿತವಾಗಿರುವ (ಕೊನೆಯಲ್ಲಿ ಈ ಪ್ರಮಾಣ ಅಧಿಕ), ಬರೆವಣಿಗೆ ತುಂಬ ಅಶುದ್ಧವಾಗಿರುವ (ಉದಾ: ಕೂಡು ಹುಬ್ಬೆಗೆ ಕಂಬವಿಲ್ಲಾ>ಕುಡಿ ಹುಬ್ಬಿಗೆ ಕಬ್ಬುವಿಲ್ಲ, ಯಮಕಾಳಸ ಕಚ> ಹೇಮ ಕಳಸಕುಚ, ದೂರದಿರನ ಕಾಳಗಾಲೂ> ಧುರಧೀರನ ಕಾಳಗವು ಇತ್ಯಾದಿ), ಒಂದು ಸಂದರ್ಭದ ಪದ್ಯ ಇನ್ನೊಂದು ಸಂದರ್ಭದಲ್ಲಿ ಬಂದ, ಪದ್ಯ ಪುನರುಕ್ತಗೊಂಡ - ಮಿಶ್ರಣಗೊಂಡ ಇದರ ಪರಿಷ್ಕರಣ ತುಂಬ ಕಷ್ಟವೆಂದು ಆರಂಭದಲ್ಲಿಯೇ ಮನವರಿಕೆಯಾಯಿತು. ಪ್ರತಿಯ ಉದ್ದಕ್ಕೂ ಹಬ್ಬಿರುವ ಲಿಪಿಕಾರನ ಇಂಥ ಭಾಷಾ ಅಶುದ್ಧಿಯನ್ನು ಅಂತಃಸಂಭಾವ್ಯತೆಯ ಬಲದಿಂದ ದೂರುಮಾಡುವಲ್ಲಿ ನಮ್ಮ ಪುಣ್ಯವೆಲ್ಲಾ ಖರ್ಚಾಯಿತು. ಹೊಸಕುಮಾರ ರಾಮನ ಸಾಂಗತ್ಯ, ಕೊಮಾರ ರಾಮಯ್ಯನ ಚರಿತ್ರೆಗಳಲ್ಲಿ ಕಂಡು ಬರುವ ಸುಮಾರು ೩೦೦ ಸಮಾನ ಪದ್ಯಗಳಿಂದಲೂ ಭಿನ್ನಪಾಠಗಳನ್ನು ಬಳಸಿಕೊಂಡಿದ್ದೇವೆ. ಈ ಭಿನ್ನಪಾಠಗಳಿಗೂ ನಾವು ಮಾಡಿದ ಊಹೆಗೂ ಚೌಕಕಂಸ ಬಳಸಿದ್ದೇವೆ. ಅಸ್ತವ್ಯಸ್ತ ಪಾಠಾಂತರ ಕಾರಣವಾಗಿ ಈ ಗುರುತಿಸುವಿಕೆಯ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಲು ನಮಗೆ ಸಾಧ್ಯವಾಗಲಿಲ್ಲವೆಂದು ಹೇಳಲು ವಿಷಾದವೆನಿಸುತ್ತದೆ. ಕೈಬಿಟ್ಟ ಅಪಪಾಠಗಳನ್ನು ಅಡಿಯಲ್ಲಿ ಕೊಡುವುದು ಪರಿಷ್ಕರಣ ಪದ್ಧತಿ. ಆದರೆ ಇಲ್ಲಿಯವು ಬಹಳಷ್ಟು ಅಪ್ರಯೋಜಕ, ಕೆಲವು ಭಿನ್ನಪಾಠಗಳಾಗಿ ಕೊಡಲು ಬಾರದಷ್ಟು ಅಸ್ತವ್ಯಸ್ತ. ಹೀಗಾಗಿ ಆ ಪದ್ಧತಿಯನ್ನೇ ಇಲ್ಲಿ ಕೈಬಿಟ್ಟಿದ್ದೇವೆ. ಊಹಿತ ಪಾಠ, ಹೊಸಕುಮಾರರಾಮನ ಸಾಂಗತ್ಯ, ಕುಮಾರಾಮಯ್ಯನ ಚರಿತೆಗಳಿಂದ ಸ್ವೀಕರಿಸಿದ ಪಾಠಗಳಿಗೆ ಚೌಕ ಕಂಸ, ತ್ರುಟಿತ ಪಾಠಕ್ಕಾಗಿ....ಈ ಚಿಹ್ನೆ ಬಳಸಿದ್ದೇವೆ. ಇಷ್ಟಾಗಿಯೂ ಕೆಲವೆಡೆ ಅಪಪಾಠ, ತ್ರುಟಿತ ಪಾಠ ಉಳಿದುಕೊಂಡವು.

ಹಸ್ತಪ್ರತಿ ಪರಿಚಯ

ಈ ಕೃತಿಗೆ ಮೇಲುಕೋಟೆ "ಸಂಸ್ಕೃತ ಸಂಶೋಧನ ಸಂಸದ"ದ ಏಕೈಕ ತಾಳೆ ಪ್ರತಿಯನ್ನು ಬಳಸಲಾಗಿದೆ. ಈ ಪ್ರತಿಯ ಆಕಾರ ೧೫"x೨". ಇದು ತುಂಬ ಜೀರ್ಣವಾಗಿದೆ. ಅಂಚುಗಳು ಮುರಿದಿವೆ. ಅಲ್ಲಲ್ಲಿ ಗರಿಗಳೂ ಮುರಿದಿವೆ. ಕೊನೆಯ ಗರಿಗಳು ಇನ್ನೂ ಹಾಳಾಗಿವೆ. ಗರಿಗಳ ಮೇಲೆ ಕಾಡಿಗೆ ಆವರಿಸಿ, ಅಕ್ಷರ ಮಸುಕಾಗಿವೆ.

ಭಾಷೆ ತುಂಬ ಅಶುದ್ಧ, ಅಕ್ಷರ ತಕ್ಕಮಟ್ಟಿಗೆ ಸುಂದರ, ಬರವಣಿಗೆಯಲ್ಲಿ ಲಿಪಿಕಾರನ ಅಧಿಕ ಹೊಣೆಗೇಡಿತನ ಕಂಡುಬರುತ್ತದೆ. ಅಲ್ಲಲ್ಲಿ ಬರೆದ ಪದ್ಯವನ್ನೇ ಮತ್ತೆ ಬರೆಯಲಾಗಿದೆ. ಕೆಲವೊಮ್ಮೆ ಪದ್ಯಗಳು ಲಿಪಿಕಾರನ ವಿಸ್ಮೃತಿಯಿಂದ ಬಿಟ್ಟು ಹೋದಂತಿವೆ.

ಈ ಪ್ರತಿಯ ಆರಂಭದಲ್ಲಿ "ಮೈದುನ ರಾಮಯ್ಯನ ಸಾಂಗತ್ಯ"ವಿದ್ದು, ಗರಿಗಳು ಕಳೆದು ಹೋಗಿ ಅಪೂರ್ಣ ಕೃತಿ ಉಳಿದುಕೊಂಡಿದೆ. ಈ ಕೃತಿಯ ಬಳಿಕ ಪ್ರಸ್ತುತ ಕೃತಿ ಆರಂಭವಾಗಿ, ಪುಟ ೧ ರಿಂದ ೪೫ರ ವರೆಗೆ ಹಬ್ಬಿದೆ. ಕೊನೆಯ ಪುಟ ಅರ್ಧ ಕಳೆದು ಹೋಗಿದೆ.

ಆರಂಭ : ಶ್ರೀ ಗಣಧಿಪತಯಂ ನಮ । ಹಳೆ ಕುಮರ ರಾಮನಾ ಚರಿತೆ ಬರೆಉದಕ್ಕೆ ಶುಭಮಸ್ತು। ಐಸುರ್ಯ್ಯಮಸ್ತು ಆಯರಾರೋಗ್ಯಮಸ್ತು ।

ಅಂತ್ಯ: ಋಧೂ। ಅರಿತು ಬರದವರಿಗೆ ಹರಿತು ಬರದವರಿಗೆ ದುರಿತಗಳಾ। ಸಂಹರಿಸುವ ಕಣ್ವಪುರಗೋಪ ಕುಲ್ಲಾಪೂರ .... ನ ಚಾರಿತೆಯ ಪಸ್ತುಕಾ ಸಂಪೂರ್ಣ ಮಹಾಶ್ರೀ ಕೊಲ್ಲಂಪುರದು ಮುಕಾಂಭೆಕೆಯಂಮನವರ ಶ್ರೀ ಚೆರಣಾಂಧವೆ ಗತಿ ಶ್ರೀಶ್ರೀಶ್ರೀ ....ಬರದು ಮುಗಿಯಿತ್ತು ಯಿಂತ್ತಿ ಪಸ್ತುಕಕೆ ಸುಬಮಸೂ । ಪಸ್ತುಕಕೆ ಹೆಗ್ಗೆರೆಯ ಯಲ್ಲಮಾಯಕನ ಪಸ್ತುಕಕೆ ಸುಬಮಸ್ತು। ರಾಮ.....

ಕೃತಜ್ಞತೆ

"ಸಮಗ್ರ ಸಿರುಮನ ಸಾಹಿತ್ಯ ಪ್ರಕಟನ ಯೋಜನೆ"ಯ ಅಂಗವಾಗಿ ಮೂರು ಪ್ರಾಚೀನ ಕೃತಿಗಳನ್ನು ಪ್ರಕಟಿಸಿದ ಮರುಕ್ಷಣದಲ್ಲಿ "ಸಮಗ್ರ ಕುಮಾರರಾಮ ಸಾಹಿತ್ಯ ಪ್ರಕಟನ ಯೋಜನೆ"ಯನ್ನು ಕೈಗೆತ್ತಿಕೊಳ್ಳಲಾಯಿತು. ಆದರೆ ಸಮಯದ ಅಭಾವ, ಹಸ್ತಪ್ರತಿಗಳ ಅಲಭ್ಯತೆ ಕಾರಣವಾಗಿ ಈ ಯೋಜನೆ ಕ್ರಿ.ಶ. ೨೦೦೦ರಷ್ಟು ತಡವಾಗಿ ಆರಂಭವಾಯಿತು. ಇದರ ಅಂಗವಾಗಿ ಈವರೆಗೆ ಹೊಸಕುಮಾರ ರಾಮನ ಸಾಂಗತ್ಯ (೨೦೦೦), ಕೊಮಾರ ರಾಮಯ್ಯನ ಚರಿತ್ರೆ (೨೦೦೧), ಬಾಲ ರಾಮನ ಸಾಂಗತ್ಯ (೨೦೦೬)ಗಳನ್ನು ಪ್ರಕಟಿಸಿ, ಈಗ ಯೋಜನೆಯ ಕೊನೆಯ ಕೃತಿಯಾಗಿರುವ, ಆದರೆ ಕಾಲದೃಷ್ಟಿಯಿಂದ ಮೊದಲನೆಯದಾಗಿರುವ ಹಳೆಯ ಕುಮಾರ ರಾಮನ ಸಾಂಗತ್ಯ(೨೦೦೮)ವನ್ನು ಪ್ರಕಟಿಸುತ್ತಿದ್ದೇನೆ. ಈ ಹಸ್ತಪ್ರತಿಯನ್ನು ನೀಡಿದ ಮೇಲುಕೋಟೆಯ ಸಂಸ್ಕೃತ ಸಂಸದ ಸಂಸ್ಥೆಗೆ ಋಣಿಯಾಗಿದ್ದೇನೆ. ಇದನ್ನು ಹೊರತರುತ್ತಲಿರುವ ನಮ್ಮ ನಾಡಿನ ಪುಸ್ತಕ ಸಂಸ್ಕೃತಿಯ ಹರಿಕಾರರೂ, ಸಪ್ನ ಬುಕ್ ಹೌಸ್ ಮಾಲಿಕರೂ ಆಗಿರುವ ಶ್ರೀ ನಿತಿನ್ ಶಹಾ ಅವರಿಗೆ, ಈ ಸಂಸ್ಥೆಯ ಕನ್ನಡ ವಿಭಾಗದ ವ್ಯವಸ್ಥಾಪಕರೂ, ಆತ್ಮೀಯರೂ ಆಗಿರುವ ಶ್ರೀ ದೊಡ್ಡೇಗೌಡ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

❖❖

*

ಪರಿವಿಡಿ

*ಸಂಧಿ : ಒಂದು

❖

ಹೊಸಮಲೆದುರ್ಗ ನಿರ್ಮಾಣ

ಶ್ರೀಗುರುಲಿಂಗವೆ ಭವದೂರ ಮತಿಸಾ[ರ]
ಆಗಮ ವಂದಿತ [ಹ]ರನೆ ।
ನಾಗಕುಂಡಲ[ಧರ] ಜಯ ಸುರವಂದ್ಯನೆ
ಸಾಗಿಸುವುದು ಎನ್ನ ಕೃತಿಯ ॥೧॥

ಗಂಗೆಯ ಜಡೆಯೊಳು ಧರಿಸಿದ ಲಿಂಗವೆ
ತಿಂಗಳ ಸೂಡಿದಭವನೆ ।
ಮಂಗಳ ನಿಳಯನೆ ಹಿಂಗದೆ ಬಲಗೊಂಬೆ
ತುಂಗಭದ್ರೆಯ ವಿರುಪಯ[ನೆ] ॥೨॥

ಶ್ರೀಲಕ್ಷ್ಮಿ[ವಲ್ಲಭ] ಶ್ರೀಕೃಷ್ಣರಾಯನೆ
ಮೂಲೋಕವಂದ್ಯ ಪಾ[ಲಕ]ನೆ ।
ಲೋಲ ಚಿಂತಾಮಣಿ ಗೋಪಿಯರರಸನೆ
ಪಾಲಿಸುವುದು ಮೂಜಗವ ॥೩॥ ೬-೨ & ೯-೨/[1]...

ದಂಡ ಕಮಂಡಲ ಕುಂಡಲ [ಕರ್ಣ]ನೆ
ಪುಂಡರೀಕ[ನ ವ]ರ ಸುತನೆ ।
ಮಂಡಲಪತಿಯೆ ನಿರ್ವಿಘ್ನ ಬ್ರಹ್ಮನೆಯೆಂದು
ಕೊಂಡಾಡುವೆ ಕೃತಿಯೊಳಗೆ ॥೪॥೯-೩/...

---

* +ಶ್ರೀ ಗಣಾಧಿಪತೆಯಂ ನಮ। ಹಳೆಕುಮಾರ ರಾಮನಾ ಚರಿತ ಬರೆವುದಕ್ಕೆ ಶುಭಮಸ್ತು। ಐಸುರ್ಯಮಸ್ತು। ಆಯುರಾರೋಗ್ಯಮಸ್ತು। (ಮೂ).

1. ಈ ಲಂಬ ಗೆರೆಯ ಹಿಂದಿನ ಅಂಕಿ ಹೊಸ ಕುಮಾರರಾಮನ ಸಾಂಗತ್ಯದ, ಮುಂದಿನ ಅಂಕಿ ಕೊಮಾರ ರಾಮಯ್ಯನ ಚರಿತ್ರೆಯ ಪದ್ಯಗಳನ್ನು ಸೂಚಿಸುತ್ತವೆ.

ಹರನಣುಗನ ಗಿರಿಜೆಯ ವರಸುತನ
ಕರಿಮುಖನನ್ನು ಭಜಿಸುವೆ ।
ಉರಗಭೂಷಣ ಗಣನಾಥನ ನೆನೆವೆ [ಕು]
ವರ[ರಾಮ]ನ ಕೃತಿಯೊಳಗೆ ||೫|| ೯-೫/...

ವಿಸ್ತರಿಸಿದ ಮುಡಿ ಸೂಸಕ ಭುಜಕೀರ್ತಿ
ಹಸ್ತಕಡಗ ಚಿತ್ರದೋಲೆ ।
ಸತ್ಯಪ್ರಶಂಸೆ ಸರಸ್ವತಿ ನಾ ನಿನ್ನ
ನಿತ್ಯದಿಂದಲಿ ಬಲಗೊಂಬೆ ||೬|| ೧-೭/...

ಯುಗ ನಾಲ್ಕರೊಳು ಕವಿ ಜಾಣ ಜಾಣರಿಗೆಲ್ಲ
ಮಿಗಿಲಾಗಿಯೆ ಶರಣೆಂಬೆ ।
ಬಗೆಯನರಿತು ನಡೆಸುವೆನು ಈ ಕೃತಿಯನು
ಸುಗುಣ ಜಾಣರು ಲಾಲಿಪುದು ||೭||

ಛಂದವಲಂಕಾರ ಯತಿ[ವೃತ್ತ] ರಸಕಾವ್ಯ
[ಅಂದ ವಿ]ಭಕ್ತಿ ವಸ್ತುಗಳು ।
ಕುಂದಿಲ್ಲ ಗಣನಾಮ [ಆಕಾರ] ಹದಿನೆಂಟು
ಅಂದವನೊಲಿದು ಲಾಲಿಪುದು ||೮||

ಬಲ್ಲಂತೆ ಪೇಳುವೆ ಇಲ್ಲಿ ಕವಿಗಳಿದ
ಇ[ಲ್ಲಿಯ] ತಪ್ಪು ತಿದ್ದುವುದು ।
ಸೊಲ್ಲ ಲಾಲಿ[ಸಿ] ಕೇಳುವುದು ಸುಜಾಣರು
ಎಲ್ಲರು ರಾಮನ ಕೃತಿಯ ||೯||

ಕಿಚ್ಚುಗಣ್ಣನ ಕರುಣದಲಿ ಪೇಳಿದೆನಿದ
ನಿಚ್ಚದ ರಾಮನ ಕೃತಿಯ ।
.... ದಿಂದ ಕೇಳಿದನಿದ
..... ಗಚ್ಚಾತಿರಬೇಕು ||೧೦||*

---

*+ ಕನ್ನಡ ಕವಿಜಾಣ .... ಧಿಜ ತಾ
ಇನ್ನು ಮುಂ ಪಂಚಾಳನೆನಿಪ ।
ಚೆನ್ನಭುಜಂಗನ ಭೃತ್ಯಗಂಗಯ್ಯ ಸಂ
ಪನ್ನ ಪೇಳಿದನು ಈ ಕೃತಿಯ ।

ಈ ಪದ್ಯ ಹೊಸ ಕುಮಾರ ರಾಮನ ಸಾಂಗತ್ಯಕ್ಕೆ (೧-೯) ಸಂಬಂಧಿಸಿದುದೆಂದು ಭಾವಿಸಿ ಅಡಿಯಲ್ಲಿ ವರ್ಗಾಯಿಸಿದ್ದೇವೆ. (ಸಂ)

ಗರಿಯಿಲ್ಲದಂಬನೊಂದರು ನೂರನೆಚ್ಚರೆ
ಗುರಿ ತಾಗುವುದೆ ಲೋಕದೊಳಗೆ ।
ಗರಿ[ಗ]ಣೆ ಸುದ್ದ ರಾಮಕೃತಿ ಬಾಣದಿ
ಧುರಧೀರನೆಚ್ಚ ಗಂಗಯ್ಯ ||೧೧||

ಪದಜಾತಿಗೆ ಪಾಂಚಾಳ ಗಂಗಯ್ಯನು
ಮುದದಿ ಪೇಳಿದನು ಈ ಕೃತಿಯ ।
ಸುಧೆಯ ಸೋನೆಯೊ ಮಾನಿತ ಮಂತ್ರದೇಳಿಗೆಯೊ
ಚದುರ ಸೊಬಗಿನಾ ಗರುವ ||೧೨||

ಅಗಣಿತ ಕಾವ್ಯಕೆ ಸುಗುಣತನದಲೊಂದು
ತೆಗೆದು ಹಾ[ಕ]ದೆ ಸವಿಮಾತ।
ಜಗಳವಾಗಿಹ ರಾಮನಾಥನ ಕೃತಿಗೆಲ್ಲ
ಮಿಗಿಲು ಚಿಂತಾಮಣಿ ಎನಿಸಿ ||೧೩||

ಸೊಗಸು[ಳ್ಳ]ವ[ರಿ]ಲ್ಲಿ ಸೊಗಸಾಗಿ ಕೇ[ಳ್ವರು]
ಮಿಗೆ ಜಾಣರು ಕೋವಿದರು।
ಬಗೆ [ಹಳಿಯದೆ] ಎಲ್ಲರು [ಕೇಳ್ವುದು] ಮಾತ
ರಘುರಾಮನಾಥನ ಕೃತಿಯ ||೧೪||

ಶರಧಿಯ ಕಟ್ಟಿ ಲೆಂಕೆಗೆ ಹೋಗಿ ರಘುರಾಮ
ಶಿರವು ಹತ್ತುಳ್ಳನ ಕೊಂದ ।
ಧರಣಿ ಅರಿಯಲು ಸೀತೆಯ ತಂದ ರಾಮ[ನ]
ಪರಿಯ ಕೇಳಿ[ರಿ] ಕೋವಿದರು ||೧೫||

ಕ್ಷತ್ರಿಯ ಕುಲವನಿಪ್ಪತ್ತೈದು ಸೂಳಿಲಿ ನಿ
ಕ್ಷತ್ರನೆರಹಿದ ರಾಮ।
ಪೃಥ್ವಿಯರಿಯೆ ರಾಮಯ್ಯನ [ಕಂಪಿಲ]
ಪುತ್ರನ ಕಥೆಯ ಲಾಲಿಪುದು ||೧೬||

ಮೇದಿನಿಯೊಳು [ಹರಡಿದ] ಸತ್ಯಕೀರ್ತಿಯ
ಆದರಿಸುವುದು ಸಜ್ಜನರು ।
ಸಾಧಕ [ಕವಿವ್ಯಾಸ] ಕವಿ ವಾಲ್ಮೀಕರು
ಓದಿಸಿ ಕೇಳಿ ತಿದ್ದುವುದು ||೧೭||

ಈ ಸಾಂಗತ್ಯಕ್ಕೆ ಮೊದಲಾವುದೆನೆ ಈ
ರಽಸೆಯ ಮೇಲೆ ಪರ್ವತವು ।

ದೇಶ ದಕ್ಷಿಣದೊಳು ಇಹುದೊಂದು ಕನ್ನಡ
ದೇಶ ಒಪ್ಪಿತು ಅದರೊಳಗೆ ||೧೮||*

ಗಿರಿಯು ಒಪ್ಪಿತು ರಜತಾದ್ರಿ ಈಶ್ವರನಿಗೆ
ಸಿರಿಯರಸಗೆ ಹೇಮಾದ್ರಿ ।
ಸುರಪತಿಗಮರಾವತಿ ರಸೆಗೆ ನೂಪುರ
ಕ್ಷೀರಾಬ್ಧಿಯ ಒತ್ತಿನಲ್ಲಿ ||೧೯||

ಧರೆಯೊಳಗಿಹ ಎಪ್ಪತ್ತಾರು ನದಿಗಳೊಳು
ಭರದಿ ತಾನಲ್ಲದಿನ್ನಿಲ್ಲ ।
ಪರಿ[ವ]ಳು ಪಶ್ಚಿಮ ಮುಖವಾಗಿ ಹರುಷದಿ
ನರರ ಪಾತಕ ಹಿಂಗಲೆಂದು ||೨೦||

ಈ ತೆರದಲ್ಲಿ ಕೋಟಿಸ್ಥಾನ ತೀರ್ಥಂಗಳು
ಅಕ್ಕರಿಂದಲಿ ನಮಿಸುವರು ||೨೧||

ತೆರೆನೊರೆ ಬೊಬ್ಬುಳಿ ಸುಳಿವ [ಪೆಮ್ಮೀ]ನ ಪೆ
ರ್ದೊರೆ ತುಂತುರುವನಿಯ ।
ಸರಯೂ [ಮೀನಂ]ಗಳಿಗೆ ಇಂದ್ರಗೋಪದ
ನದಿ ತುಂಗಭದ್ರೆ ರಂಜಿಸಿತು ||೨೨||

ಧರೆಯೊಳು ಮುಮ್ಮಡಿ ಸಿಂಗಯ್ಯನಿಹ [ಬೀ]ಡು
ದೊರೆತನದಲ್ಲಿ ಸುಖರಾಜ್ಯ ।
ಪರಿವಾರ ಸಹಿತ ಬೇಂಟೆಯನಾಡ ಹೋದನು
ಪಿರಿದೆನಿಸುವ ಹೊಸಮಲೆಗೆ ||೨೩||

ಹೊಗಬಾರದ ಮಲೆ ಗಿರಿಯ ಗಹ್ವರ[ವ]ಲ್ಲಿ
ಉ[ಗಿ]ದು ನುಂಗುವ ಹುಲಿಕರಡಿ ।
ಬಗೆಗೊಳ್ಳ[ದ] ಕಾಡೆಮ್ಮೆ ಕಾಡ್ಕೋಣನು
ನೆಗೆದು ಹೊಯಿವ ಎಕ್ಕಲನು ||೨೪||

ಅಳವಾವೆಗ್ಗಳ [ಹೀ]ಲಿವಾಲನು ಬಿಳಿಗನು
ಕಾಲಕಪ್ಪುರಿಗನು ಅಲ್ಲಿ ।
ನೆಲಹತ್ತಿ ನೆಗೆದು ಹಿಡಿವ ಜಲ ನಾಯ್ಗಳು
[ಬಗೆದಂದು] ನೆಗೆವ ಹುಲ್ಲೆಗಳು ||೨೫||

---

* ೧೮-೨೨ ವರೆಗಿನ ಪದ್ಯಗಳು ೭ನೆಯ ಪದ್ಯದ ಬಳಿಕ ಸೇರಿಕೊಂಡಿದ್ದವು. ಕಥೆಯ ಸಕ್ರಮತೆಗಾಗಿ ಇವುಗಳನ್ನು ಇಲ್ಲಿ ವರ್ಗಾಯಿಸಿಕೊಳ್ಳಲಾಗಿದೆ. (ಸಂ)

ಕೆಂಚ ಕೆಂಜರಿಯು ಸಂಪನು ದಾಳ ಸುಂಕನು
ಮಿಂಚುವದೊಂದೆಡೆ ದುಂಡ ।
ಗೊಂಚರಿವಾಲಗೆಂದೂಳಗಳಿಯ ಬಲ್ಲ
ದುಂಚಾಸಿದ್ದಲ ಕಂಡೆಯನು ॥೨೬॥

ಬೆಟ್ಟದೊಳಗೆ ಬ್ಯಾಂಟೆಯನಾಡುತ ನೃಪ
ಬಿಟ್ಟನು ಮೊಲಕೆ ನಾಯಿಗಳ ।
ಅಟ್ಟಿ ಮೊಲನು ಕುಕ್ಕು[ರ]ನ ಬೆನ್ನಲಿ ಬರೆ
ನೆಟ್ಟರಸನು ಕಂಡು ನಿಂದ ॥೨೭॥

ಮರಳಿ ಬರುತಲಿದೆ ಎನುತ ಸಿಂಗಯ ನೃಪ
ದೊರೆಗಳೆಲ್ಲರನು ಕೇಳಿದನು ।
ತಿರುಗಿ ನಾಯನು ಮೊಲ ಅಟ್ಟಿ ಓಡಿಸುತಿದೆ
ಪರಿಯ ಹೇಳೆನುತ ..... ॥೨೮॥

.... ಲನ ಕಂಡರು ಪರಿ
.... ।
ಕೆಲ ಬಲನ ನೋಡಿತು ಮೊಲ ಹತ್ತಿತು
........ಡಿತು ಕೋಡಗಲ್ಲ ॥೨೯॥

ಇದು ಒಳ್ಳೆಯ ಠಾವು ಇದು ನೃಪರೇಳಿಗೆ
ಇದು ಕಲಿಭೂಮಿ ಎಂದೆನುತ ।
ಇದಕೆಣೆಯಿಲ್ಲ ದುರ್ಗವು[ಯೆಂದು ಎನ್ನು]ತಲಿ
ಹದನ ಪೇಳಿದರು ಮಂತ್ರಿಗಳು ॥೩೦॥

ತಿರುಗಿ ಬಂದರು ನೋಡಿದರು ಆ ದುರ್ಗವ
ಪಿರಿದು ಜಂಗೆಗಲ್ಲುಗಳು ।
ಪರಿ ಪರಿ ಮೇಗಲ್ಲು ಗಹ್ವರಗಳಲ್ಲಿ
ಸರಿ ಬಾಹ ದುರ್ಗ[ವಿ]ಲ್ಲಿಲ್ಲ ॥೩೧॥

ಚಂದ್ರಬಲವು ತಾರಾಬಲವುಂಟೆನುತಲಿ
[ಇಂದುವಾರವು] ಶುಭದಿನವು ।
ಚಂದ ಚಂದದ ಬಹಳೈಶ್ವರ್ಯ ಇಹುದೆಂದು
ಬಂದು ಪೇಳಿದರು ಮೂರ್ತವನು ॥೩೨॥

ಸೋಮಧರನು ಹೊರ ಸೀಮೆಯೊಳೆಸೆದಿಹ
ಪ್ರೇಮದಿ ಹೊಸದುರ್ಗದಲ್ಲಿ ।

ಭೂಮಿಯೊಳಗೆ ಹೊಸದುರ್ಗವು [ಮುಂದೆ]ಂದು
ನಾಮ ಪಡೆವುದನೇನೆಂಬೆ ||೩೩||

ಮಲೆಯು ಒಳ್ಳಿತು ಪೊಸಮಲೆ ಮಹಾಭೂಮಿಗೆ
ಶಿಲೆಯು ಒಳ್ಳಿತು ಪೊಸಮಲೆಯ ।
ನೆಲ ಒಳ್ಳಿತು ಪಟ್ಟಣಕೆಂದು ಕಂಪಿಲ
[ಬ]ಲಿಸಿದನಾ ದುರ್ಗವನು ||೩೪||

ಪೊಡೆಸಿದ ದಿಕ್ಕು ದಿಕ್ಕಿಗೆ ನೂರು ಕುರಿಯನು
ಸಡಗರದಲ್ಲಿ ಬಲಿಗೊಟ್ಟು ।
[ಕಡು]ಗಲಿಯು ಆಗ ಹೊಸದುರ್ಗ ಕುಮ್ಮಟ
ವೆಂದು ಮಂತ್ರಾಕ್ಷತೆಯಿಟ್ಟ ||೩೫||

ಅಗಳು ಪಾತಾಳವು ಮುಗಿಲು ಮುಟ್ಟುವ ಕೋಟೆ
ಹೊಗಬಾರದೊಡ್ಡು ಕಲ್ಲುಗಳು ।
ಮಿಗೆ ನೋಟಕೊಪ್ಪುವ ಪಚ್ಚೆ[ಯ] ತೆನೆಗಳು
ಬಗೆಯಲೆಸೆವ ಹೊಸದುರ್ಗ ||೩೬||

ಕುಂಭಕರ್ಣನು ರಾವಣನು ಎಂದೆನಿಸುವ
ಎಂಬತ್ತು ನಾಲ್ಕು ಕೊತ್ತಳವು ।
ಅಂಬರವನು ಮುಟ್ಟುವ ಮುಗುಳಟ್ಟಳೆ
ಸಂಭ್ರಮದಲಿ ನೋಡಿದರೆ ||೩೭||

ನಾರಸಿಂಹನ ಕೊತ್ತಳ ಹೊಸ ಹಲಗೆಯ
ವೀರಭದ್ರನ ಕೊತ್ತಳವು ।
ಆದಿಬ್ರಹ್ಮನ ಕೊತ್ತಳ ಪಂಚಮೂಲೆಯ
ವಾರುಧಿ ರುದ್ರ ಕೊತ್ತಳವು ||೩೮||

ಬಸವನ ಮೂರು ಮೂಲೆಯ ಕಲ್ಲ ಕೊತ್ತಳ
ವಸುಧೆ[ಗೆಸೆವ] ಕೊತ್ತಳವು ।
ಎಸೆವ ಹೆಬ್ಬಿಲ ಕೊತ್ತಳವು ಅಲ್ಲಿ ಬಲು
ದೆಸೆ ರೀತಿಯ ಕೊತ್ತಳವು ||೩೯||

ರಣಧೀರ ಜಟ್ಟಿಗ ಮರುಳ ಕೊತ್ತಳವು
[ರ]ಣಸಿರಿ ಮಾಕಾಳಿ ಕೊತ್ತಳವು ।
ಹೆಣ[ನ] ತಿಂಬುವ ಮಾ[ರಿ]ಯಂತಿಹ ಕೊತ್ತಳವು
ಹುಲಿಮುಖ ಮಹಾಕೊತ್ತಳವು ||೪೦||

ಕೊತ್ತಳಕಲ್ಲಲ್ಲಿ ಮುತ್ತಿನ ಸತ್ತಿಗೆ
ಟೆಕ್ಕೆಯ ಮಕರ ತೋರಣವು ।
ಕಟ್ಟಿದ ಜಲ್ಲಿ ಪೂಸರ ಮಾಲೆ ಎಸೆದಿಹ
ಉಪ್ಪರಗುಡಿ ಹೊನ್ನ ಕಳಸ ॥೪೧॥

ಕೋಟೆಯ ಸುತ್ತಲೆಸೆವ ನೇಜೆಯ ಪಟ
ಕನಕದ ಚವರ ಡಾಳಿಸುತ ।
ತಳಿತ ಪಲ್ಲವದ ಸತ್ತಿಗೆಗಳ ಸಾಲು
ಇಳೆಯೊಡೆಯನ ದುರ್ಗದಲ್ಲಿ ॥೪೨॥

ಹೊಕ್ಕು ಹೊಯಿದು ಊರ ಹೊಗುವಾಳರ ಜೆಟ್ಟಿ
ಅಟ್ಟಳೆ ಪೆಟಲ ಡೆಂಕಣಿಯು ।
ಬತ್ತಿಸಾಯುಧದ ಬೆಳಕು ಪ್ರಜ್ವಲಿಸಲು
ಚಿತ್ರವ ಅದನು ಏನೆಂಬೆ ॥೪೩॥

ಡೆಂಕಣಿ ಮಕರ ಬಿಬ್ಬಿಗಳೊಪ್ಪಿ ಮೆರೆದಿಹ
ಬಿಂಕದಲಿಹ ಕೋಟೆಯೊಳಗೆ ।
ಅಂಕುಶ ಪರರಾಯರ ಎದೆದಲ್ಲಣ
ಸಂಖ್ಯೆ ಇಲ್ಲದ ಹೊಸಮಲೆಯು ॥೪೪॥

ಹಿರಿಯ ಗುಂಡು ಹುರಿವ ಮಳಲ ಕೊಪ್ಪರಿಗೆಯು
ಸರಿದು ಹೊಯ್ವ [ಮರುಳಗೈಯು] ।
ಪರಬಲದೆ ಹಾಕುವ ಗುಂಡು ಬಂಡಿಯ ಗಾಲಿ
ತರತರದಲ್ಲಿ ತೆನೆ ಮೆರೆಯೆ ॥೪೫॥

ದೆಸೆ[ಗೊ]ಪ್ಪಿದವೆಂಟು ದೆಸೆಯ ಕೊಪ್ಪಳವಲ್ಲಿ
ಹೆಸರೆನಿಸುವ ಒಡ್ಡುಗೋವಿ ।
ಪೊಸತೆನಿಸುವ ಹೊಸಪರಿಯು ಎಂದೆನಿಸುವ
ಕುಸುರಿದರಿವ[ವು] ಬಲ್ಲಂತೆ ॥೪೬॥

ಅಡದಚ್ಚಾರಡಿ ಮದನಹಸ್ತಗಳಲ್ಲಿ
ಎಡೆ ಎಡೆಯಲ್ಲಿ ನಿರ್ಮಿಸಿದ ।
ಬಿಡದೆಂಟು ದೆಸೆಯ ಕುರುಜ ಪಲ್ಲ ಸತ್ತಿಗೆ
ಹೊಸಪರಿ ಹೊನ್ನ ಕಳಸವು ॥೪೭॥*

---

*+ ಅಡರಿದ ಚಾವಡಿ ಮದನಹಸ್ತಗಳಲ್ಲಿ
ಎಡೆ ಎಡೆಗವ ನಿರ್ಮಿಸುವ ।
ಬಿಡದೆಂಟು ದೆಸೆಯ ಕೂರುಜ ಮಾಲೆ ಸಮವೆಂಬ
..........ಹೊನ್ನ ಕಳಸವು (ಮೂ)
ಇದು ೪೭ನೆಯ ಪದ್ಯದ ವ್ಯತ್ಯಸ್ತರೂಪ.

ಕಟ್ಟಿದ ಹೊನ್ನ ಹೂವಿನ ದಂಡೆ ನೆಳಲಿಗೆ
ಒ[ಟ್ಟಿ]ಹಾಕುವ ಕವಣೆಗಲ್ಲು ।
ಮುಟ್ಟಿ ಬಿಡುವ ಪೆಟಲಂಬು ಕೋವಿಗಳಲ್ಲಿ
[ಕೊತ್ತಳ] ಆಗ ರಂಜಿಸಿತು ॥೪೮॥

ಬೀಸುವಗ್ಗವು ಬಾರಲು ಗುಂಡುಗಳಲ್ಲಿ
ಸೂಸುವ ತುಂಡುವಲಗೆಯು ।
ಲೇಸೆನಿಸುವ ಪಿರಂಗಿ ದಾಬಿನ ಕೋವಿಗಳಲ್ಲಿ
ಸಾಸಿರ ಮುಖದಲೊಪ್ಪಿದವು ॥೪೯॥

ಹೊಗೆ ಬಾಣಗಳು ಅಲ್ಲಿ ಬಿಗೆ ಗಜ ಬಾಣವು
ಅಗಣಿತವಹ ದುರ್ಗದಲ್ಲಿ ।
ಬಗೆ ಬಗೆಯಲಿ ಕಕ್ಕುವರಿ ಚೋರಗಂಡಿಯು
ಮಿಗೆ ಶೃಂಗರವನೇನೆಂಬೆ ॥೫೦॥

ಸುತ್ತ ಕೋಟೆಯು ಬಳಸಿರ್ದ ಡೆಂಕಣಿಗಳು
ಮೊತ್ತವು ಮುಗಿಲ ನೋಡುತಲಿ ।
ಒತ್ತಿ ಹೊಯಿವ ಮಾರಿ ಮುಖಲದಿದುಣ ಸೇರಿ
.... ಲೊಪ್ಪಿದವು ॥೫೧॥

ಹುಲಿಮುಖ ಅಂಬುಗಂಡಿಗಳು ಒಪ್ಪಿದವಲ್ಲಿ
ಕಳಯೆನಿಸುವ ಹೊಸಮಲೆಗೆ ॥೫೨॥

ಕಡಸಾಯ ಸಾಮದ ಧೀರ ಚೊಚ್ಚಲ ಮಗ
ಗಡಣದ ಪುರದಗುಸೆಯನು ।
ಗಡಿಗೆ ಬೋದಿಗೆ ಕಂಬ ಸಡಗರ ತೊಲೆಗಟ್ಟು
ಕಡುಗೆಲಸವು ಚುಂಚುಲೋವೆ ॥೫೩॥

ಎದ್ದವು ಒಚ್ಚಿದ ಮನೆ ನವರಂಗದಿ
ಹೊದ್ದಿದ ಬಾಯ ಮುಚ್ಚಳವು ।
ಇದ್ದ ಮಾತೇನು ಏರುವ ಹೊನ್ನ ಕಳಸವು
ಮುದ್ದು ನಿರ್ಮಿಸಿದ ಅಗುಸೆಯು ॥೫೪॥

ಒಪ್ಪುವ ಬಾಗಿಲ ಇಕ್ಕೆಲಗಳಲಿ
ಇಪ್ಪರು ದುರ್ಗಿ ಹನುಮರು ।
ತಪ್ಪದೆ ವರ[ವೀವ] ವೀರಭದ್ರನು ತಾ।
ನಿಪ್ಪನು ಪುರವ ರಕ್ಷಿಸುತ ॥೫೫॥

ಹಿರಿಯ ಅಂಗಡಿ ರಾಜಬೀದಿ ಚವುಬಾರಿಗೆ
ಪರಿ ಪರಿ ಚಿತ್ರಗೆಲಸಗಳು ।
ತರತರದಲಿ ಅಂಗಡಿಗೇರಿ ಮಳಿಗೆಯು
ಸಿರಿಯದನೇನ ಬಣ್ಣಿಸುವೆ ||೫೬||

ಮುತ್ತು ಪವಳ ಪಚ್ಚೆಗೊಪ್ಪುವ ನೀಲವು
ಮತ್ತೆ ಮಾಣಿಕ ಪುಷ್ಯರಾಗ ।
ಚಿತ್ರದೇವಾಂಗ ಅಂಗಡಿ ಮಳಿಗೆ ಸಾಲು
ವಿಸ್ತಾರದಲಿ ಕಣ್ಗೆಸೆಯೆ ||೫೭||

ಚಿನಿವಾರರಂಗಡಿಗಳ ಒತ್ತಿನಲ್ಲಿ
ಮೆರೆದಿಹ ಕಂಚಿನ ಪಸರ ।
ಕನ್ನಡಿ ಹರಿವಾಣವು ತಟ್ಟೆ ವಹಾಲು
ಚೆನ್ನಿಗರಂಗಡಿಯೊಳಗೆ ||೫೮||

ಒಂಕಿಕಾರ ಚೂರಿ ಬಿಂಕದ ಜಮದಾಡೆ
ಕೊಂ[ಕಿದ] ಕತ್ತಿ ಬಲ್ಲೆಯವು।
ಪಂಕಜನಾಭನ ತನಯನ ಕುಲದವು
ಶಂಕಿಲ್ಲದಿಟ್ಟು ಮಾರುವರು ||೫೯||

ಬಳೆಯ ಅಂಗಡಿಯೊಳು ಹೊಳೆ[ವ] ಕನ್ನಡಿಗಳು
ತಳತಳಿಸುವ ಶಿಲೆಮಣಿಯು ।
ಕಳಕಳಿಸುವ ಜಂತ್ರ ಬಳೆಯುಂಗುರಗಳಲ್ಲಿ
ಚೆಲುವರಂಗಡಿ ಒಪ್ಪುತಿಹವು ||೬೦||

ಪರಿಮಳದಂಗಡಿ ಇರವಾಣನೆಂಬ
ಪರಿಪರಿ ಕುಸುಮ ಕಸ್ತುರಿಯು ।
ವರ ಶ್ರೀಗಂಧ ಕಸ್ತುರಿ ಜವಾದಿಯು
ಮೆರೆದಿಹವಲ್ಲಿ ನೋಡಿದರೆ ||೬೧||

ಅಂಗಡಿಗೇರಿಯ ಇಡುಗಲ್ಲಿನಲ್ಲಿ
ಹೊಂಗೆಲ[ಸದ ಅ]ದರುಗಳು ।
ಕಣ್ಗೆ ಮಂಗಳವೆನಿಸುವ ಪಟ್ಟೆಸಾಲೆಯು
ಅಂಗಜ ಪಟ್ಟಣದೊಳಗೆ ||೬೨||

ಪಟ್ಟಣದೊಳಗೆ ಒಪ್ಪುವ ದೊರೆಗಳ ಮನೆ
ಕಟ್ಟಣೆಲ್ಲದೆ ರಂಜಿಪವು ।

ಇಟ್ಟಣಿಸಿಹ ಮಂತ್ರಿ ಮಾನ್ಯರ ಅರಮನೆ
ನೆಟ್ಟನೆ ತುಳುವರ ಕೇರಿ ||೬೩||

ಪುರದಾ .... ರಾಜಮಂದಿರ
ಇರುವದ[ನೇನ] ಬಣ್ಣಿಸುವೆ ।
ತರತರದಲಿ ಗಾಜು ತೂಗಲು ಮೊದಲಾದ
ಸಿರಿ ಒಪ್ಪುತಿಹ ಅರಮನೆಗೆ ||೬೪||

ಭೋಜನಶಾಲೆ ಲಕ್ಷ್ಮಿಯಗೃಹ ಮಂಟಪ
ಸೋಜಿಗವಹ ಮೇ[ಲುಪ್ಪರಿಗೆ] ।
ರಾಜಿಸುತಿಹ ಗರಡಿಯ ಚಾವಡಿಗಳು
ಬಾಗಿಲೆ[ಸೆವ] ಗಳಿಯರದ ||೬೫||

ಇಂತೆಸೆದಿಹ ಅರಮನೆಯ ಸಂಭ್ರಮವನು
ಎಂತು ಬಣ್ಣಿಪರಳವಲ್ಲ।
ಕಂತು ಸನ್ನಿಭ ಸಿಂ[ಗನೃ]ಪನ ಪಟ್ಟಣದೊಳ
ನಂತ ಪರಿಯ ಶೃಂಗರವು ||೬೬||

ಕರ್ಪೂರ ಗಿರಿಯಂತೆ ಉಪ್ಪರಿಗೆಗಳಲ್ಲಿ
ಇಪ್ಪವು ನೃಪನ ಪಟ್ಟಣದಿ ।
ಮುಪ್ಪುರದೊಳಗೆ ಎರಡು ಸುರ[ಗೃಹ] ತಂ
ದಿಟ್ಟಂತೆ ಪುರರಂಜಿಸುವುದು ||೬೭||

ಸೂಳೆಗೇರಿಯು ಇದ್ದುದು ಕಾ[ಮ]ನ ಮೇಲೆ
ದಾಳಿಯಿಡುವ ಸೊಬಗಿಂದ ।
ಬಾಳಪರಿಯ ಮೇಲುಪ್ಪರಿಗೆಗಳಲ್ಲಿ
ಆಲಯಂಗಳು ರಂಜಿಸಿದವು ||೬೮||

ಮದಗಜ ಸುಳಿವಂತೆ ನಡೆವ ಭಾವಕಿಯರು
ಮೃದುನುಡಿಗಳ ಬಾಲೆಯರು ।
ಸದನದೊಳಗೆ ಶಕುನಿಯ ಮಂಚದ ಮೇಲೆ
ಚದುರೆ ಏರಿದರು ಅರ್ತಿಯಲಿ ||೬೯||

ಬಿಡುಮುಡಿ ಕುಡಿಹುಬ್ಬು ಜಡಿವ ಮಾಣಿಕ ಹಾರ
ಬಡನಡುವಿನ ಬಟ್ಟ ಕುಚದ ।
[ಕುಡಿ]ನೋಟದಲಿ ಹರಿಣನ ಸೋಲಿಸುತಿಹ
ಮಡದಿಯರೊಂದು ಮೇ[ರೆಯಲಿ] ||೭೦||

ಕೋವಿದರನು ಕಾಲಾಳೆಂದು ಕರುಬುವ
ಭಾವಜಮುಖಿಯರಂದದಲಿ ।
ಪ್ರೇಮದಿಂದಲಿ ನಿಂದ ಸ್ತ್ರೀಯರುಗಳ [ಸ್ವ]
ಭಾವ ಬಣ್ಣಿಸಲಳವಲ್ಲ ॥೭೧॥

[ಪದೆ]ದು ನುಡಿಗೊಡುವರು ಕೋವಿದರೊಳು
ಭದ್ರವಾಗಿಲೊಳಗೆ ನಿಂದು ।
ವಿದ್ಯೆ ಪ್ರಸಂಗವಲ್ಲದೆ ಕಾಕು ನುಡಿಗಳ
ಪೊದ್ದರು ಗಜಗಮನೆಯರು ॥೭೨॥

ಉಂಗುರ ನಡು ಕುಂಭಕುಚ ಹೇಮಕಳಸವು
ಅಂಗಜನಧಿದೇವತೆಯರು ।
ಶೃಂಗಾರದಿ ಸೋರ್ಮುಡಿಯ ನೊಸ[ಲೆಳ]
ದಿಂಗಳಂತೆಸೆವ ಬಾಲೆಯರು ॥೭೩॥

ನಸು ಮುನಿದರೆ ಹೊಸ ಗಳಿಗೆಯ ಸೀರೆಯ
.... ದುಡಿಗೆಯ ಕಂಡು ।
ಬೆಸಗೊಂಬೆ ಶಶಿಮುಖಿ ನೀ ಮುನಿದಿರಲಾಗ
ನಸುವೇ ನೆನೆ ಲಲಿತಾಂಗಿ ॥೭೪॥

ಚಿಮ್ಮುರಿದುರುಬಿನ ಮೆರೆವ ಎಣ್ಣೆಯ ಗಂಟು
ಮುಮ್ಮಾತ............... ।
ಗಮ್ಮನೆಸೆವ ಪರಿಮಳದ ಭೋಗಿಗಳಿಹ
ರಮ್ಯ[ವದೇನ] ಪೇಳುವೆನು ॥೭೫॥

ಕಿನ್ನರಿ ಸಮ ಮಂಡಲ ವೇಣಿ ಜಂಗುಗಳ
ವನ್ನು ನುಡಿಸುವ ಕೊನಬುಗಳು ।
[ಭಿ]ನ್ನವಿಲ್ಲದೆ ಸ್ತ್ರೀಯರ ಕೂಡೆ ನಗುತಿಹ
ಚೆನ್ನಿಗರಿಹ ಕೇರಿಯೊಳಗೆ ॥೭೬॥

ತೋಳ ಬಾ[ಪುರಿ] ಸರಪಣಿ[ಯು] ಮುಂಗೈ ಮುರಿ
ಕೀಲಣೆ ಬೆರಳ ಮುದ್ರಿಕೆಯು ।
ಮೇಲೆ ರಂಜಿಪ ಪದಕವು ಪೊಂಗಲನಿಟ್ಟು
ಬಾಳದೊಡಿಗೆಯ ವಸ್ತುಗಳು ॥೭೭॥

ಸುತ್ತು ಗುಲಾಯದ ನೆತ್ತಿ[ಯ] ಚುಂಗಿನ
ಕತ್ತರಿಸಿದ ಬಿಳಿ ಎಲೆಯ ।

ಉತ್ತಮ [ದೇವಾ]ಂಗವನುಟ್ಟು ಓಲಾಡುತಿಹರು
ಚಿತ್ರದಂತಿಹ ಕೊನಬುಗಳು ||೭೮||

ಕಿರುವಂ[ಜಿ]ಯು ರಾವಣಹಸ್ತ ಗೆಜ್ಜೆಯು
ಮೆರೆವುದು ಮುಖರದಂಡಿಗೆಯು ।
ತೆರವು ಇಲ್ಲದೆ ಆನಂದದಿ ಪಾಡುವ
ಬೆರಗು ಚೆನ್ನೆಯರೊಪ್ಪಿದರು ||೭೯||

ಬಡನಡುವಿನ ಸಿಂಹ ವಸವಲ್ಲದಿಡುವರು
ಕುಡಿಹುಬ್ಬಿಗೆ ಕಬ್ಬುವಿಲ್ಲ ।
ತೊಡೆಗೊತ್ತಿ ಮುರುಡಿಕೋ ಹುಡುಗರಿಗೆಂಬ
ಮಡದಿಯರಿಕ್ಕೆಲದಲ್ಲಿ ||೮೦||

ಗಿಳಿ ನುಡಿಗಳ ಹಳಿವರು ತುಂಬಿ ಕೋಗಿಲೆ
ಗಳ ದಡ್ಡಿಗಳನು ಹಳಿವರು ।
ತಳತಳಿಸುವ ಮುದ್ದುಮುಖ ದೇಹಕಾಂತಿಯ
ಎ[ಳವೆರೆ] ಹೊಳೆವಂದದಲಿ ||೮೧||

ಅಂಚೆಗಮನೆಯರಿರ್ದರು ಅಲ್ಲಲ್ಲಿಗೆ
ಮಿಂಚುವ ಸುಲಿಪಲ್ಲಿನವರು ।
ವಂಚಿಸಿ ಮಾತನಾಡುವ ಜಾಣವಿಟರೊಳು
ಪಂಚಬಾಣನ ಕೇರಿಯೊಳಗೆ ||೮೨||

ತಾರೆಗಳಾದಂತೆ ತೋರ ಮುತ್ತುಗಳಲ್ಲಿ
..... ನಾರಿಯರುರದೆಡೆಯ ।
.... ಬಾರಿ ಸುಜಾಣೆಯರುಗಳು
.... ಹೊಯಿದು ನಗುವರು ||೮೩||

ಸೂಳೆಗೇರಿಯ ಒಪ್ಪುವ ನವಿಲುಯ್ಯಲೆ
ವಿಸ್ತಾರವೇನ ಪೇಳುವೆನು ।
ಮೇಳೈಸಿದ ನವಿಲುಯ್ಯಲೆ ಮೇಲ್ಮಣೆ
ದಾಳಿಡುವಂತೆ ಅಂಬರಕೆ ||೮೪||

ನಾಂಟಿರಾಗದ ಕಂಬ ಮೇಘರಂಜೆಯ ಕಟ್ಟು
ಸಾರಿಳಿಗಳು ಆಹರಿಯು ।
ನಟ್ಟಣೆಯಿಂದಲಿ ಅಡಿಯಿಂದ ಶಂತರಾಗ
ನಟ್ಟಣೆಯಿಂದೆಸೆವ ಉಯ್ಯಲೆ ||೮೫||

ಭಾವಜಮುಖಿಯರು ಮಣಿಮೆಟ್ಟಿ ನಿಲುವಾಗ
ಆಹ್ಲಾದದಿ ಕೂಗುವರು ।
ಕೋವಿದೆಯರು ಆಡುತ ಹಾಡುತ ಪಾಡುತಲಿರೆ
ತೀವಿ ನೋಡುವ ಪರಿಜನರು ||೮೭||

ದೊರೆ ರಾಯರ ಮಾನ್ಯ ಮಂಡಲಿಕರನೆಲ್ಲ
ಸೂರೆಗೊಂಬರು ಮಿಕ್ಕಿನವರ ।
ಮೀರಲು ಪಂಚಬಾಣನ ಸೆರೆವಿಡಿವರು
ನೀರೆಯರುಗಳರ್ತಿಯಲಿ ||೮೭||

ಈ ಪರಿಯಲಿ ಮೆರೆದಿಹ ಸೂಳೆಗೇರಿಯ
ರೂಪ ಬಣ್ಣಿಸಲಳವಲ್ಲ ।
ಭೂಪ ಕಂಪಿಲರಾಯನಾ ಹೊಸಮಲೆದುರ್ಗ
ಯಾಪರಿಯಲಿ ಬಣ್ಣಿಸುವೆ ||೮೮||

ಅಂತು ಸಂಧಿ ೧ಕ್ಕೆ ಪದನು ೯೩ [>೮೮]ಕ್ಕೆ ಮಂಗಳ ಮಹಾಶ್ರೀ.

❖❖

ಸಂಧಿ : ಎರಡು

❖

ಕುಮ್ಮಟದುರ್ಗ ನಿರ್ಮಾಣ

ಇನ್ನು ಪೇಳುವೆನು ಕಮ್ಮಟದುರ್ಗ ಶೃಂಗಾರವ
ಚೆನ್ನಾಗಿ ನಾನಿದರಿರವ।
ಭಿನ್ನವಿಲ್ಲದೆ ಕೇಳುವರಿಗೆ ಕರ್ಣಾಮೃತ
ಉನ್ನತವಹ ಸೊಬಗಿನಲಿ ॥೧॥

ಜರಿಗುಂಡು ಪಡೆ ಸುತ್ತಲುರುಬಿ ಹಬ್ಬಿದ ಮೆಳೆ
ತುರುಗಿದ ಮಲೆ ಬೆಟ್ಟ ಬಿದಿರು ।
ಪೊರವಳಯದಿ ಕೆರೆ ಬಾವಿ ಉದ್ಯಾನ
ಮೆರೆದು[ವು] ಕುಮ್ಮಟದ ಒತ್ತಿನಲಿ ॥೨॥

ನಿಂಬೆ ಹೇರಿಳೆ ದಾಳಿಂಬ ಚಂದನಶೋಕೆ
ಅಂಬರೆ ಅರೆನೆಲ್ಲಿ ಇಹವು ।
ತುಂಬೆವಾಗೆಯು ಪಾದರಿ ರಾಯಬೋರೆಯು
ಸಂಭ್ರಮಿಸಿತು ವನದೊಳಗೆ ॥೩॥

ತುತ್ತುವಿರ ಪಲಸು ತೆಂಗು ದ್ರಾಕ್ಷಿಯು
ತುಂಬಿತು ವನದ ಮಧ್ಯದಲಿ ॥೪॥

ಅಲ್ಲ ಮಗುಳಿ ಅರಿಸಿನ ಪಚ್ಚೆ ಮುಡಿವಾಳ
ಎಲ್ಲಿ ನೋಡಲು ರಂಜಿಸಿತು ।
ಮಲ್ಲಿಗೆ ಜಾಜಿ ಸೇವಂತಿಗೆ ಪಡ್ಡಳಿ
ಸೊಲ್ಲಿಸಲರಿದಾರಾಮ ॥೫॥

ಅಂಚೆ ಮರಾಳನು ಮಿಂಚುವ ಅರಗಿಳಿ
ಉಂಚರ ನಯ ನವಿಲುಗಳು ।

ವಂಚನೆಯಿಲ್ಲದೆ ಸ್ವರಗೈವ ಕೋಗಿಲು
ಪಂಚಬಾಣನ ವನದೊಳಗೆ ||೬||

ಸುತ್ತ ಪರಿವ ಕಾಲು[ವೆ] ಕೆರೆಗಳು ಅದ
ರೊತ್ತಿಲೆಸೆವ ವನ ಮಧ್ಯದಲಿ ।
ಒತ್ತಿಲಿಪ್ಪ ತೋಟ ಕೆರೆ ಅರವಂಟಿಗೆ
ಇತ್ತದನಾರು ಬಣ್ಣಿಪರು ||೭||

ಹರನ ಒಲಿಸಿಯಸುರ ಪಡೆದನು ಪುರಗಳ
ಪರಿಗಾರು ಮಡಿ ಎಂದೆನಿಸಿ ।
ಸಿರಿಕಾಂತೆಗೊಪ್ಪುವ ಕುಮ್ಮಟನಗರಿಯ
ಇರವನು ಜಾಣರು ಕೇಳಿ ||೮||

ಕುಂತಿಗೆತ್ತೆಸೆಯೆಗಲು ಭೀಮ ಗದೆಯಲಿ
ಅಂತರಿಸದೆ ಹೊಯಿದಂತೆ ।
ಕಾಂತೆಗೊಪ್ಪುವ ರಾಗಳಿಸುತ್ತಲಿ ಸು
ದಂತಿಹ ಒಡ್ಡುಗಲ್ಲುಗಳು ||೯||

ಲೆಂಕೆಯು ಪಡುಲೆಂಕೆಯು ಭಾವಿಸುತಿರ್ಪ
ಬಿಂಕದಲಿಹ ಕೋಟೆಗಳು ।
ವಂಕದ್ವಾರವು ಹುಲಿಮುಖ ಶಿಲೆದೆಸೆಗಳು
ಪಂಕಜಸಖನೊಪ್ಪುವಂತೆ ||೧೦||

ಹೇರಂಬನ ಕೊತ್ತಳ ಮಾರಿ ದುರ್ಗೆಯ
ಭಾರಿ ಕೊತ್ತಳವು ಭೈರವನ ।
ವಾರಿಧಿಯನು ಲೆಂಗಿ[ಸಿದನ] ಕೊತ್ತಳವು
ವೀರಭದ್ರನ ಕೊತ್ತಳವು ||೧೧||

ಕುಲಗಿರಿಗಳು ಬಂದು ನೆಲೆಸಿದ ತೆರನಂತೆ
ಶಿಲೆ ಗೊ[ತ್ತು]ಗಲ್ಲು ಒಪ್ಪಿದವು ।
ನೆಲೆಗಾಣದಾಳ್ವೇರಿ ಕೋಟೆ ಸುತ್ತಿಲಿ
ನೆಲೆಸಿತು ಕುಮ್ಮಟದೊಳಗೆ ||೧೨||

ನೆಗೆದವು ಮುಗಿಲಟ್ಟ[ಣ] ಖಗರಾಜನು
ಗಗನದೊಳಗೆ ಆಡುವಂತೆ ।
[ಝು]ಗಮಗಿಸುವ ತಾರಾಮಂಡಲವನು ಮಿಗೆ
ಉ[ಗಿ]ವಂತೆ ಕಣ್ಗೆಸೆದಿಹವು ||೧೩||

ಎತ್ತಿದ ಖಂಡೆ ಡೆಂಕಣಿ ಅಷ್ಟದಿಕ್ಕಿನಲಿ
ಕತ್ತರಿಸಿ[ದ] ಕೈಯವಲಗೆ ।
ಹತ್ತಿರೆ ಸಾರಿ ಬರುವ ಬೀಸುವ ಪೊಸ
ಕೊತ್ತಳದಲಿ ದಸಿ ಬಾಳು ||೧೪||

ಬಲುದೊಲೆ ಬಂಡಿಯ ಗಾಲಿ ತೆನೆಗಳಲ್ಲಿ
ಮಲೆತಿಹ ಆ ವೈರಿಗೆ ।
ಕಲಿ ಭಟರುಗಳು ಉರಿವ ಚೋರಗಂಡಿಯು
ಬ[ಲಿ]ದೆಸೆವ ಅಂಬುಗಂಡಿಗಳು ||೧೫||

ಒಡ್ಡುಗೋವಿಗಳಂಬು ಗೋವಿಗುಂಡಿನ ಕೋವಿ
ದೊಡ್ಡಣವಿಗಳು ಕೊತ್ತಳದಿ ।
ಅಡ್ಡೆಯಿಂದೆಸೆವಂಬು ಮರುಳ್ಳೆಯನಿಟ್ಟರು
ದೊಡ್ಡಿಯಾ[ಗ]ಸಂಖ್ಯ ಮಂದಿ ||೧೬||

ಉರಿಬಾಣ ಅಕಾಶಬಾಣ ಹೊಗೆಯ ಬಾಣ
ತರತರದಲ್ಲಿ ತೆನೆಗಳು ।
ಧುರಕೆ ಹುರಿದ ಮರಳು ಕೊಪ್ಪರಿಗೆಯ
ಳಿ[ರಿ]ಸಿಯೆ ಸಾಲು ಸಾಲಿನಲಿ ||೧೭||

ಭರದಿಂದ ಬೀಸುವ ಕವಣೆಗಲ್ಲಿನ ರಾಶಿ
ಕಾಸುವಂಬಲಿಯ ಕೊಪ್ಪರಿಗೆ ।
ಸೂಸುವ ಚಿಮ್ಮುವ ಡೆಂಕಣಿ ಸುತ್ತಲು
ಲೇಸೆನಿಸುವ ದುರ್ಗದೊಳಗೆ ||೧೮||

ಮಾರಿ ಮುಖವು ಲಾಳವಿಲ್ಲು ಮಕರ ಬಿಬ್ಬಿ
ಸೇರಿಸಿದಾ ಕಾಕು ಧರೆಯು ।
ಹೋರುವ ರಾಯರಿಗಳವಲ್ಲವಾ ದುರ್ಗ
ವೀರ ಕುಮ್ಮಟದೊಪ್ಪುತಿಹುದು ||೧೯||

ಕಂಬ ಬೋದಿಗೆ ಕೀಲಣೆ ಚಚ್ಚರ ಮಹಾ
ಬೊಂಬೆಯ ಮದನಹಸ್ತಗಳು ।
ಸಂಭ್ರಮದಲಿ ತೊಲೆಕಟ್ಟು ಮೇಲ್ವಲಗೆಗಳು
ಎಂಬಿವು ರಂಜಿಸುತಿಹವು ||೨೦||

ಕಂಚಿನ ಮೊಳೆಯು ಕೆತ್ತಿಸಿ ನವರಂಗಕ್ಕೆ
ಇಂಚಿಹ ನಿಡಿ ಲೋ[ವೆ]ಗಳು ।

ಮುಂಚುವ ಉಭಯ ಮುಚ್ಚಳಗದವಿಂಡಿಗೆ
ಸಂಚನೆ ಚಿಡ್ನ ಕಣ್ಗೆಸೆಯೆ ॥೨೧॥

ಪಟ್ಟಣದೊಳು ಒಂಬತ್ತು ಬಾಗಿಲ ಉಪ್ಪರಿಗೆ
ಇಟ್ಟ ಹಾಹೆಯ ಕಳಸವು ।
ನೆಟ್ಟನೆ ಸೋಮವೀಧಿಯು ಸೂರ್ಯವೀಧಿಯು
ದಿಟ್ಟಿಸಿ ನೋಡೆ ಕಣ್ಗೆಸೆಯೆ ॥೨೨॥

ಚೀರಣಗೈಲಾದ ಮಾಳಿಗೆ ಚಿತ್ತರದಲ್ಲಿ
ಸೇರುವೆ ಮೇಲು ಭದ್ರಗಳು ।
ಮೇರುವೆಗ್ಗಳ [ಮೇ]ಲೆ ಭಾರಿ ಹೊಂಗಳಸವು
ಕೇರಿಕೇರಿಗೆ ರಂಜಿಸಿತು ॥೨೩॥

ತಳತಳಿಸುವ ಸಣ್ಣ ತತ್ತುವೆಯ
ಮಾಳಿಗೆಯಾದಿತ್ಯಗೆಲಸ ।
ಸಾಲಿ ಪಟ್ಟೆಯ ಮಾರವರಾ [ಬೇ]ಹರಗಳ
ಕೇರಿಯೊಪ್ಪವುದನೇನೆಂಬೆ ॥೨೪॥

ಕನಕದಂಗಡಿ ಕಂಚಿನಂಗಡಿ ಒಳಗಿನ್ನು
ದಿನಪನ ಕಳೆ ನೆಲಿಸಲ್ಲಿ ।
ವ[ನ]ಸಿ[ಜ] ರೂಪಿನಂತಹ ಕಂಚಗಾರರು
ಘನತರವಾದರೇನೆಂಬೆ ॥೨೫॥

ಮುತ್ತು ಮಾಣಿಕ ಅಂಗಡಿಗಳಲ್ಲಲ್ಲಿಗೆ
ಉತ್ತಮ ನೀಲ ಪಚ್ಚೆಗಳು ।
ಒತ್ತಿ ಸಾದು ಕಸ್ತುರಿಯ ಅಂಗಡಿಗಳು
ಅತ್ಯಂತದಿಂದೆಸೆದಿಹವು ॥೨೬॥

ಬೆಲೆವೆಣ್ಣೆನಂಗಡಿಯ ಒಳಂಗಡಿಯಲ್ಲಿ
ತರವೆಣ್ಣೆನ ಅಂಗಡಿಯು ।
ಬಲು ಗಂದಿ[ಗ]ನ ಅಂಗಡಿ[ಯ]ಲ್ಲಿಗಲ್ಲಿಗೆ
ನೆಲೆಸಿತು ಕುಮ್ಮಟದೊಳಗೆ ॥೨೭॥

ಇಂತೊಪ್ಪಿತು ಅಂಗಡಿಗೇರಿ ಮಳಿಗೆಯು
ಅಂತವರಿದು ಪೇಳುವೆನು ।
ಸಂತೋಷ ಮಿಗೆ ಸೊಬಗಿನ ಕೇರಿ ಕೇರಿಯ
ನಂತ ಪರಿಯಲುಸುರುವೆನು ॥೨೮॥

ಕರಿ ತುರಗವ ತಿದ್ದುವ ಲಾಕ್ಷಣಿಕರು
ದೊರೆ ಶಕುನಿಗರು ಜೋಯಿಸರು ।
ಪಿರಿದೆನಿಸುವ ವಿಪ್ರಜಾತಿಯ ಕೇರಿಯೊ
ಳಿರುವ ಸುಭ್ರಮವನೇನೆಂಬೆ ॥೨೯॥

ಮಲ್ಲರ ಕೇರಿ ಮಾಲವಕೇರಿ ತಳವಾರ
ಬಲ್ಲಿದ ಭಟರ ಕೇರಿಗಳು ।
ಗೊ[ಲ್ಲ]ರ ಕೇರಿ ತೆಲುಗರ ಕೇರಿಗಳಲ್ಲಿ
ಎಲ್ಲರ ಕೇರಿಗಳೆಸೆಯೆ ॥೩೦॥

ನೆತ್ತರಿಲ್ಲದ ಪ್ರಾಣಿಗಳ ಶಿರ ಕೊರೆದೊತ್ತಿ
ಮತ್ತೆ ಅವಕೆ ಕಿಚ್ಚನಿಕ್ಕಿ ।
ಸತ್ತವೋ ಸಾಯವೋ ಎನುತ ತೆಗೆದು ನೋಡಿ
ಮತ್ತೆ ಮಾರುವರ ಕೇರಿಗಳು ॥೩೧॥

ಹರಿಯ ಮಗನ ವೈರಿಯ ಉದ್ಧರಿಸಿದಂತೆ
ಪರಿಪರಿಯಿಂದಲಿ ಎಸೆಯೆ ।
ತರತರದಿ ಉಪ್ಪರಿಗೆ ಉಯ್ಯಾಲೆಯು
ಇರುವ ಸಂಭ್ರಮವಲ್ಲಿಗಲ್ಲಿ ॥೩೨॥

ಟಗರ ಕಾಳಗ ಕಬ್ಬಿನ ಜೂಜು ಬೂರಲೆಯ
ಮಿಗೆ ಕಾಳಗವು ಕುಕ್ಕುಟವು ।
ಬಗೆಬಗೆಯಲಿ ಲೆತ್ತ ಪಗಡೆಯು ಚದುರಂಗ
ಸೊಗಸಿರ್ಪ ಜೂಜಿನ ಕೇರಿ ॥೩೩॥

ಪಟ್ಟಸಾಲೆಗೆ ಪವಳದ ಕಂಬ ಬೋದಿಗೆ
ಇ[ಟ್ಟಣಿ]ಸಿದ ಮೇಲ್ಮಣೆಯು।
ನೆಟ್ಟನೆ ಸೂಳೆಗೇ[ರಿಯ] ವಿಸ್ತರದಲಿ
ಕಟ್ಟಾಣಿ ಪೆಣ್ಣೊಪ್ಪುತಿಹವು ॥೩೪॥

ಅಂಗಜ ನನೆಯ ಬಣ್ಣವೊ ದೇವೇಂದ್ರನ
ಶೃಂಗರಿಸಿದ ಮುಖರಕಿಯೊ ।
ತಿಂಗಳ ಬೆಳಗೊ ಕನಕ ಲೋವೆ ತೆನೆಯೆಂಬ
ಅಂಗನೆಯರು ಒಪ್ಪಿದರು ॥೩೫॥

ತಳಿರ ಪೋಲುವ ಪಾದ[ಗ]ಳ ಹೂವಿನ ಗರಿ
ತೆಳುವಸಿರಿನ [ಕುಚ]ಯುಗದ ।

ಗಿಳಿನುಡಿ ಪೊಳೆವ [ಕದಪು] ಪದ್ಮಿನಿಯರು
ಅಳವಟ್ಟು ನಿಂದರೀಕ್ಷಣದಿ ||೩೬||

[ಕೊಂಕು] ನಡೆಯು [ಪಿಡಿನಡುವಿಂ]ದೆಸೆದಿಹ
ಪಂಕಜಮುಖಿ ಅಳಿಗುರುಳು |
ಬಿಂಕದ ನಗೆಮುಖದಾ ಸುಲಿಪಲ್ಲಿನ
ಶಂಕಿನಿಯರು ನೆರೆದಿಹರು ||೩೭||

ಪೊರವಾರಿಗೊಪ್ಪುವ ನಿರಿ ಸೆಳೆ ನಡುವಿನ
ಇಡಿಕಿರಿದಂತೆ ಯೌವನವು |
ಪರಿದಿಹನ್ನಕ [ಹೊಲಬ] ನೋಟ ತೋರುವ
ಮೆರೆವ ಚಿತ್ತಿನಿಯರೊಪ್ಪಿದರು ||೩೮||

ಕರಿ ಗಮಕದ ನಡೆ ಉರವು ತುಂಬಿದ ಮೊಲೆ
ಶಿರವು ತುಂಬಿದ ಸೋಲ್ಮುಡಿಯು |
ಭಾರವು ತುಂಬಲು[ಮೆಸೆವ] ಹಸ್ತಿನಿಯರು
ಕರ ಸೊಬಗಿಂದೊಪ್ಪುತಿಹರು ||೩೯||

ದರ್ಪಣವನು ನೋಡಿ ತಿಲಕವ ತಿದ್ದುತ
ಪುಷ್ಪದುರುಬ ಅಲಂಕರಿಸಿ |
ಕರ್ಪಿನಿಗಂಧಿಯರು ಶೃಂಗಾರವಾಗೆ
ಒಪ್ಪುತಿಹರು ಭದ್ರದೆಡೆಯ ||೪೦||

ಹಳದಿ ಬಿಳಿದು ಕೆಂಡಗಾವಿ ಸಂಪಿಗೆಗಾವಿ
ಎಳೆಯ ಮಾದಲಗಾವಿ ಚೆಂದ |
ತಳತಳಿಸುವ ಕೈಬರಹ ದಿವ್ಯಾಂಬರ
ಅಳವಟ್ಟ ನೀರೆಯರಿಹರು ||೪೧||

ಚೆಳಕಿ ಕಂಕಣ ಹೊಂಬಳೆಯು ಸೂಡಂಗವು
ನಳಿತೋಳಿಲೆಸೆವ ಬಂದಿಗಳು |
ತಳತಳಿಸುವ ಹೀರಾವಳಿ [ಭುಜಕಟ್ಟು]
ನಳಿನಾಕ್ಷಿಯರಿಗೊಪ್ಪಿದವು ||೪೨||

ಚಿತ್ತ ಪಲ್ಲಟವಾಗದೆ ವಾಣಿ ಅರಸನು
ಮೊತ್ತದಲೆಸೆದ ಗಣಿಕೆಯರ |
ಉತ್ತಮ ಚೆಲ್ವಿಕೆಯವ ಸಾರವನು ತೆಗೆ
ದಿತ್ತನು ಈ ಸತಿಯರಿಗೆ ||೪೩||

ಗಂಧ ಕಸ್ತೂರಿಯ ಕಂಪೆಸೆವ ಚೆನ್ನಿಗರಲ್ಲಿ
ಅರ್ತಿಯಿಂದಲಿ ಇರುತಿಹರು ।
ಇಂದುಮುಖಿಯರ [ಕೈ] ಪೊಯಿದು ನಗುತಲಿಹ
ಕಂದರ್ಪಸಮರೂಪಿನವರು ||೪೪||

ಬೆರಳ ಉಂಗುರ [ಪೆರೆ ನೊಸಲ] ಮುತ್ತಿನ ಬಟ್ಟು
ಕೊರಳಲ್ಲಿ ಪದಕಗಳಿಹವು ।
ಪರಿಪರಿಯಾಭರಣ[ದಿ] ಭೂಷಿತರಾಗಿ
ಇರವ ಬಣ್ಣಿಪನಿಗರಿದು ||೪೫||

ಮರಿಗಿಳಿಗಳಿಗೋದ ಕಲಿ[ಸುವ] ತೆರನಂತೆ
ಕಿರು [ಹ]ರೆಯದ ಹೆಣ್ಣುಗಳಿಗೆ ।
ನೆರೆ ಬುದ್ಧಿಯನು ಪೇಳುವ [ಮುದಿ]ವೆಣ್ಗಳು
ಮೆರೆದಿಹವಾ ಕೇರಿಯೊಳಗೆ ||೪೬||

ಮಗಳೆ ಕೇಳೆನ್ನ ಬುದ್ಧಿಯ ಹಣವುಳ್ಳನ
ಮಿಗೆ ಉಪಚರಿಸು ಬೊಚ್ಚರಿಸು ।
ನಗೆ ನುಡಿ[ಯಲಿ] ಮಾತಿನಲಿ ಹಣವನು ತೆಗೆ
ಮಿಗೆ ಮುದಿ ವೇಶಿ ಹೇಳಿದಳು ||೪೭||

ರೊಕ್ಕವಿಲ್ಲದೆ ಬರಿ ಮಾತಿನವನು [ಭಂಡ]
ಲೆಕ್ಕಿಸದಿರು ನೀನು ನನ್ನ ।
.... ತನುಚೆಯೆಂ[ಬ]
ಟಕ್ಕಿನ ವೇಶಿಯರಿಹರು ||೪೮||

ತುಂಬಿಗುರುಳು [ಪಿರಿ] ಮೊಲೆ ಮುಡಿಯ[ಲ್ಲಾಡೆ]
[ಬಿಂ]ಬ ಭಾವಕಿಯರು ಕೂಡಿ ।
ಸಂಭ್ರಮದಿಂದಲೆಸೆ[ವ] ಕೇರಿಯೊಳಗೆಲ್ಲ
ತಂಬೇಸಗೆಯ [ಲಾ]ಡುತಿಹರು ||೪೯||

ಶೃಂಗಾರವತಿ ಶೋಭಿನಾ ಸೂಳೆಗೇರಿಯ
ಮುಂಗಡೆಯ ಕೇರಿಯೊಳಗೆ ।
ಬಗೆಬಗೆಯಲ್ಲಿ ಜೋಗೇರಿಗವಾಡ್ಸಂಥ
ಅಗಣಿತ ಸ್ತ್ರೀಯರೊಪ್ಪಿದರು ||೫೦||

[ಕೊಂತ]ವ ಹಿಡಿದಿಹ ಕಿರು ಹರೆಯದ
ಹೊಂತಕಾರಿಯರಲ್ಲಿಗಲ್ಲಿ ।

ನಿಂತಿರುತಿಹರು ಮನ್ಮಥನ ಪಂಥದಿ
ಅಂತರ ಕಣನೇರುವಂತೆ ॥೫೧॥

ನಡೆಯಾಡುವರಂಚೆ ನಡೆಯ ಕಲಿಯ[ಲೆಂ]ದು
ನುಡಿ[ವ]ರು ಗಿಳಿಗೆ ಮೆಲ್ನುಡಿಯ ।
ನವಿಲಿಗೆ [ಇ]ಕ್ಕುತಿಹರು ಶೃಂಗಾರ[ವ]
ಗಡಣದಿ ಸ್ತ್ರೀಯರೊಪ್ಪಿದರು ॥೫೨॥

ಇಂಥ ಪರಿಯಲೊಪ್ಪುತಿಹ ಸೂಳೆಗೇರಿಯ
ಕಂತುಸನ್ನಿಭನ ಪಟ್ಟಣದ ।
ಮಂತ್ರಿ[ಮನ್ನೆಯ] ಮಂಡಲಿಕರ ಕೇರಿಯು ಅ
ನಂತ ಪರಿಯಲೊಪ್ಪಿದವು ॥೫೩॥

ಮುಗಿಲು ಮುಟ್ಟುವ ಮಹಲುಗಳೆಲ್ಲಿ ನೋಡಲು
ಮಿಗೆ ದೊರೆಗಳ ಅರಮನೆಯು।
[ಜ]ಗಿ[ಜ]ಗಿಸುವ ಚಾವಡಿಯು ಉಪ್ಪರಿಗೆಯು
ಸೊಗಯಿಪ ಗರಡಿಗಳೆಸೆಯೆ ॥೫೪॥

ಆನೆಯ ಕಟ್ಟುವ ಸಾಲಿನ ಕುದುರೆಯ
[ಜೀ]ನ ಸಾಲುಗಳಲ್ಲಲ್ಲಿ ।
ಜಾನಿಗ ಗವುಳ ಗುಜ್ಜರ ಮನೆಗಳಲ್ಲಿ
ಭಾನುವೆ ಕಣ್ದೆರೆದಂತೆ ॥೫೫॥

ಪುರದ ಮಧ್ಯದಲೆಸೆದಿಹ ರಾಜಬೀದಿಯಿ
ತ್ತೆರದಲಿ ಬದ್ಧ ಹೊಂಗಳಸ ।
ತರತರದಲಿ ಉಪ್ಪರಿಗೆ ನಾಟಕ ಸಾಲೆ
ಅರಸು ಕಂಪಿಲನರಮನೆಗೆ ॥೫೬॥

ಮದನ ಮಂಟಪವೊ ಚೆಲ್ವಿನ ಮೊದ[ಲೊಂ]ದೊ
ಚದುರರ ಮನದ ಮಂಗಲವೊ ।
[ಜ]ಗ[ಜ]ಗಿಸುವ ಮೌಕ್ತಿಕದ ಧರೆಗಂಬ
ಸದಮಲ ಮಂಗಳ ನಿಳಯ ॥೫೭॥

ವರ್ಣಿಸುವರೆ ಅಳವಲ್ಲ ಚಾವಡಿಯಲ್ಲಿ
ಸಣ್ಣ ಬರಹದ ಚಿತ್ರಗಳು ।
ಉನ್ನಂತ ಗದ್ದುಗೆ ಮೇಲೆ ಒರಗ ಮಾಡೆ
ಕರ್ಣಸಮಾನ ಕುಳ್ಳಿರ್ದ ॥೫೮।

ಚಿತ್ರದ ಚಾವಡಿಯಲಿ ಕಂಪಿಲರಾಯ
ಇತ್ತರದಲಿ ಮನ್ನೆಯರು ।
ಒತ್ತಿಲಿ ಮಂತ್ರಿ ಪ್ರಧಾನರು ದೊರೆಗಳು
ಕರ್ತು ನೃಪನ ವಾಲಗದಿ ॥೫೯॥

ಅಜನ ವಾಲಗದಂತೆ [ಪುದಿದಿತ್ತು] ವಾಲಗ
[ಅಜ] ಸುರರಿಗೆ ಅಗೋಚರವು ।
ಗಜಬಜಿಸುವ ವಾಲಗದ ಸಂಭ್ರಮದಲ್ಲಿ
ಭುಜಬಲ ಬಲಿಷ್ಠೈತಪ್ಪ ॥೬೦॥

ದೇಶದೊಳಗೆ ಹೊಸಮಲೆಯೆಂಬ ದುರ್ಗವ
ಮೀಸರಗಂಡ ಕಂಪಯ್ಯ ।
[ಬಿಸಿಲೆಸಕದ] ತೇಜದಲಿ ಮೆರವುದೊಂದು
ಲೇಸಿನ ಸುದ್ದಿ ಚಿತ್ತಯಿಸು ॥೬೧॥

ಅಷ್ಟದಿಕ್ಕಿನ ರಾಯಗಜ ಗಂಡಭೇರುಂಡ
ದಿಟ್ಟ ಕೋದಂಡ ಕಂಪಿಲನು ।
ಸೃಷ್ಟಿಯ ರಾಯರೆಲ್ಲರು ತಂದು ಕಪ್ಪವ
ಕೊಟ್ಟು [ತಾ] ಬಹರು ಕಂಪಿಲನ ॥೬೨॥

ಕದನಗಲಿಯು ಪ್ರಚಂಡ ಕಂಪಿಲರಾಯ
ಸುಧೆಯ ಪೆಳ್ಳೆಯ ವಾಲಗದಿ ।
ಪದುಮನಾಭನ ಶ್ರೀ ಚರಣಕ್ಕೆ ನಮಿಸುತ
ಮುದದಿ ಮೇದಿನಿಯ ಪಾಲಿಪನು ॥೬೩॥

ನಾಲ್ಕು ಯುಗದ ರಾಯರ ವಾರ್ತೆಯ ಕೇಳಿ
ಕಲಿಯುಗದೊಳಗೆ ಕಂಪಿಲನು ।
ಬಲವೆಂಬ ರಾಯಮಾನ್ಯರ ಮಸ್ತಕಶೂಲ
ಚಲದಂಕನೆನಿಸಿ ಮೆರೆದನು ॥೬೪॥

ಉಗ್ಗಡಿಸುವ ರಾಯಮಸ್ತಕಶೂಲ
ಹಿಗ್ಗಿ ನಗುವ ಕಂಪಿಲನು ।
ದುರ್ಗಕೆ ಗಜಸಿಂಹನೆಂದು ವಿಸ್ತರಿಸುವ
ಹೆಗ್ಗಾಳೆಗಳು ಒದರಿದವು ॥೬೫॥

ವೀರ ಕಂಪಿಲನ ವಾಲಗವಾಯಿತೆನುತಲಿ
ಸಾರಿ ಹೊಗಳುವ ಹೆಗ್ಗಾಳೆ ।

ಸಾರಿ ಕುಳ್ಳಿರೆ ಎಪ್ಪತ್ತೆರಡು ನಿಯೋಗದಿ
ಅರಸು ಕಂಪಿಲ ಒಪ್ಪುತಿರ್ದ ||೬೬||

ಕನಕದ ಗಿಂಡಿ ಕನಕದ ಚಾಮರಗಳು
ಎಡಬಲದಲ್ಲಿ ಹಡಪಿಗರು ।
ಕನಕದ ಕಾಳಂಜಿಯ ಕೈಸೇವೆಯ
ವನಜಮುಖಿಯರೊಪ್ಪಿದರು ||೬೭||

ತುಳುವ ತುರುಕ ಪಾರುಕರಂಕ ಕಾಯ್ವರು
[ಬಲ]ವಂತ ಮನ್ನೆಯರುಗಳು।
ದಳದುಳ ಬೊಮ್ಮೆನಾಯಕ[ನೊ]ಳ[ಗಿರುತಿ]ಹ
ಕಾಲಭೈರವ[ನ ಪೋಲುವರು] ||೬೮||

ಅಳಿಯ ಸೋಮಣ್ಣ ಕೊಪ್ಪಳ ಮಾಯಿದೇವನು
ದಳಪತಿ ಕರಿಯ ಸಿಂಗಣನು ।
ದಳದುಳಿ ಕಲ್ಲೆನಾಯಕನು ನಗುತಿರ್ದನು
ಇಳೆಯೊಡೆಯನ ಎಡಬಲಕೆ ||೬೯||

ದೊರೆಗಳೊಳಗೆ ವಾಣಿಯ ನಾಗಣ್ಣನು
ದೊರೆ ನೀತಿಯಲ್ಲಿ ಸಂಗಮನು ।
ಅರಸುಮಕ್ಕಳು ಹಂಪರಾಜ ಕಂಪಿಲರಾಜ
ಅರೆಬಿರಿದಿನ ಮನ್ನೆಯರು ||೭೦||

ಮಾಯಿದೇವನು ಕೊಂಡೆಯಕಾರ ವಿರುಪನು
ಸೋವಿದೇವರಸನೆಂದೆನಿಪ ।
ಮಾಯಿದೇವನು ಮಲೆವರಗಂಡ ಮಲಿದೇವ
ಧೀರನೆನಿಪ ಲೆಗ್ಗೆ ಹನುಮ ||೭೧||

ನಲ್ಲರಾಜನು ಮಿಗೆ ಕಂಪನಾಯಕ ಬಿಳಿ
ಸಿಂಗಣ್ಣನು ದೊರೆ ನೀತಿ ।
ಮಲ್ಲೆ ಭೂರಿಯ ಬುಕ್ಕನಾಯಕರೆಂದೆಂಬ
ಕಲ್ಲುಕೋಟೆಯ ಚಿಕ್ಕನವರು ||೭೨||

ಎಪ್ಪತ್ತು [ಎರಡು] ಮನ್ನೆಯರ ಮಧ್ಯದಿ ಕುಳಿ
ತಿರ್ಪ ದೊರೆಯು ಕಂಪಿಲನು ।
ತಪ್ಪದೆ ವಿಶ್ವಾಸಿ ಅರಿರಾಯರೆಲ್ಲರು
ಕಪ್ಪವ ತೆತ್ತು ಬಿನ್ನವಿಸೆ ||೭೩||

ಎತ್ತಿದ ನೇಜೆಗಳು ಟೆಕ್ಕೆ ಸಾಲು ಸಬಳ
ಹತ್ತುಸಾವಿರ ಬಿಲ್ಲು ಮಂದಿ।
ಇತ್ತರದಲ್ಲಿ ತುಳುವರ ಹರಿಗೆಯ ಸಾಲು
ಮತ್ತೆ ಚೌಲದ ಎಕ್ಕಟಿಗರು ||೨೪||

ಕಟ್ಟಿಗೆಯವರು ಉಗ್ಗಡಿಸೆ ಇಕ್ಕೆಲದಲ್ಲಿ
ಪಟ್ಟಕರೊಲಿದು ಕೊಂ[ಡಾ]ಡೆ ।
ತೊಟ್ಟಿ ಬೇಡವೊ ಕಂಪಿಲನೊಳಗೆಂದಿದಿ
ರಿಟ್ಟು ಕಾಳೆ ಸಾರುವವು ||೨೫||

ವಾರಣ ತುರಗ ಕಾಲಾಳುಗಳೈವರು
ಧರಣಿ[ಪ] ಕಂಪಿಲನೊಡನೆ ।
ಭೋರನೆ ಬಂದು ವಾಲಗವಿತ್ತು ಕರಿಗಟ್ಟಿ
ಸೇರಿ ಇಂಗಡದಲೊಪ್ಪಿದವು ||೨೬||

ಅಂತು ಸಂಧಿ ೨ಕ್ಕಂ ಪದ ೧೨೩ [> ೧೬೫]ಕ್ಕಂ ಮಂಗಳ ಮಹಾಶ್ರೀ.

❖❖

ಸಂಧಿ : ಮೂರು

❖

ಬಾದುರನು ಕುಮ್ಮಟಕ್ಕೆ ಬಂದುದು

ಗಂಗೆಯ ಶಿರದಲ್ಲಿ ಧರಿಸಿದ ಲಿಂಗವೆ
ತಿಂಗಳ ಸೂಡಿದಭವನೆ ।
ಮಂಗಳ ಮಹಿಮನೆ ಹಿಂಗದೆ ಬಲಗೊಂಬೆ
ತುಂಗಭದ್ರೆಯ ವಿರುಪಯ[ನೆ] ॥೧॥

ಜಡೆಮುಡಿಗಡಲುಡುಪತಿ ನಡುಗ[ಣ್ಣ] ಬೊ
ಬ್ಬಿಡು ವಾಕ್ಯ[ತಿ] ತಲೆ ವಿಷ[ದ] ।
ಪೊಡವಿ ಪಾಲಕ ಕಡು ಚೆಲ್ವ ಭುಜಂಗೇಶ
ಕೊಡುಗೆಮ್ಮ ಮತಿಗೆ ಮಂಗಳವ ॥೨॥

ಅ[ಲ್ಲಿಂ]ದಲಿ[ತ್ರ] ಸುರಿತಾಳ ವಾಲಗವನು
ಬಲ್ಲ ಪರಿಯ[ಲಿ] ಪೇಳುವೆನು ।
ಬಲ್ಲಿದ ಬಾದೂರ ಓಡಿ ಬಂದಿರೆ ನೇಮಿ
ನಿಲ್ಲದೆ ದಾಳಿ ಮಾಡಿದನು ॥೩॥

ಕರ್ತರನಲಾದರಿಯದಿಹ ದಾನವ
ಮೊತ್ತದಿಹ ದಿಕ್ಕು ದೆಸೆಯ ।
ಇತ್ತುದಿಂದ ಬಂದುದವಂದೂ ತಿಳಿಗೊಳ
ಒತ್ತಿಲಿ ಸೋಕೆಯ ದಾನವು ॥೪॥

ನಳಿನುಡನ ಚೆಚ್ಚೆಂಗಣ ನಿಲವಾನಕಾಗಿ
ಇಳಿದು ಬಂದವು ಬೇಗ ತುಂಬೆ ।
ನಳಿನುತಾ ನಗರಿಗೊಪ್ಪುವದೊಂದು ತಿಳಿಗೊಳ
ಗಳನ ಬಣ್ಣಿಪರಳವಲ್ಲ ॥೫॥

ಅಂದು ಹಸ್ತಿನಿ ಒಪ್ಪುತಿಹಲೊಂದು ನಾಮದಿ
ನಿಂದು ಡಿಳ್ಳಿಯು ತಾನೆಂದೆನಿಸಿ ।
ಚೆಂದ ಚೆಂದದಲಿ ಬಾಗಿಲವಾಡ ಹುಲಿಮುಖ
ಒಂದಾದ ಕೋಟೆ ಕೊತ್ತಳವು ॥೬॥

ಏಳೆಂಟು ನೆಲೆಗಳುಪ್ಪರಿಗೆ ಪಟ್ಟಣದೊಳು
ಮಾಳಿಗೆಗಳು ಮಂಟಪವು ।
ಪೇಳುವೆ[ನೇನು] ಹೊಂಗಳಸದ ಚಿತ್ರದ
[ಸಾ]ಲು ಚಾವಡಿ ಮೆರೆದಿಹವು ॥೭॥

ಡಿಳ್ಳಿಯೊಳಗೆ ಇರ್ದ ಸಂಪನ್ನರುಗಳು
ಎಲ್ಲ ಸೊಲ್ಲಿಸುವರೆ ಅಳವಲ್ಲ ।
ಬಲ್ಲ ಪರಿಯಲಿ ಪೇಳುವೆನು ಕೋವಿದರೆಲ್ಲ
ಅಲ್ಲಿಗಲ್ಲಿಗೆ ತಿದ್ದುವುದು ॥೮॥

ಇತ್ತರದಲಿ ಮುತ್ತು ಮಾಣಿಕದಂಗಡಿ
ಚಿತ್ರ ಚಿತ್ರದಿ ಮಾಳಿಗೆಯು ।
ಒತ್ತಿಲೆಸೆವ ಕನಕದ ಕಂಚಿನಂಗಡಿ
ಮತ್ತೆ ಸುಂದರರಸಮಗೇರಿ ॥೯॥

ಸೋಮವೀಧಿಯು ಸೂರ್ಯವೀಧಿಯು ಮೆರೆದಿಹ
ಕಾಮನಾಡುವ ಸೂಳೆಗೇರಿ ।
ಸೀಮೆಯ ಅವಕೇರಿಯ ಕಡುಕಟ್ಟಳೆ
ಮಹಾಪೂರವು ನೋಳ್ಪರಿಗೆ ॥೧೦॥

ಪರಿವ ಸಾಲೆಯಪರಿಮಿ[ತದ ಚೌ]ಕಿಗಳಲ್ಲಿ
ಪೊನ್ನ ಕಾಲಿನ ಸೆಳೆಮಂಚ ।
ಎಳೆಯ ಪನ್ನೀರ ಗಿಂಡಿ ಹಿಡಿದಿಹ ಸಂ
ಪನ್ನೆಯರಿಹ ಸೂಳೆಗೇರಿ ॥೧೧॥

[ನವಕುಸು]ಮದ ಚಂದ್ರಗಾವಿಯ ಸೀರೆಯ
[ರವಿಕೆಯನು]ಟ್ಟು ಸೊಗಯಿಪರು ।
[ತೀ]ವಿದ ರತ್ನ ಬಂಗಾ[ರ]ವು ಸರ್ವಾಂಗ
ಕೋವಿ[ದೆಯರ] ಸೂಳೆಗೇರಿ ॥೧೨॥

ಮೆಲ್ಲನೆ ಗಜಗಮನೆಯರು ಭಾವಿಸಿ ನೋಡೆ
[ಬಿಲ್ಲುಬಾಣ] ಇಟ್ಟಂತೆ ।

ಫುಲ್ಲನಾಭನ ಸೋಲಿಸುವಂತೆ ಚೆಲ್ವಿಕೆ
ಕೊಲ್ಲದಿಹರೆ ಮೂಜಗವ ||೧೩||

ಜಗುಳಿದುಡಿಗೆ ನೆಗಳಿದ ಯೌವನಾಗಮ
ಮುಗುಳು ಮೊಗ್ಗೆಯ ಮೊಲೆಯವರು ।
ನಿಗಳ ಹರವು ಬಾಳೆ ಮುದ್ರಿಕೆ ಕಂಕಣ
ಅಗಣಿತ ಸತಿಯರಿಗಿಹುದು ||೧೪||

ನುಡಿದರೆ ಗಿಳಿ ಕಲಿತವು ಎಂದು ಮೆಲ್ಲನೆ
ನುಡಿಗಳ ನುಡಿಯ ತೋರುವರು ।
ನಡೆಯೆ ಮರಾಳ ಕಲಿತವು ಎಂದು ಮೆಲ್ಲನೆ
ಅಡಿಯಿಟ್ಟು ನಡೆ[ವರೇ]ನೆಂಬೆ ||೧೫||

ಇಂತಪ್ಪ ಸತಿಯರೊಪ್ಪಿದರು ಡಿಳ್ಳಿಯಲ್ಲಿ
ಕಂತುನಾಮನ ಪುರದೊಳಗೆ ।
[ಸಂ]ತವಿಡಿದು ನಡೆತಂದನಾ ಸುರಿತಾಳ
ಸಂತೋಷದಿಂದ ಚಾವಡಿಗೆ ||೧೬||

ತರು ಗಿರಿ ಪರ್ವತ ತೆರನೋರಂತೆ
ಸುರಿತಾಳನ ಅರಮನೆಯು ।
ಪರಿಪರಿ ಚಿನ್ನಗೆಯ್ಕಂ ರಂಜಿಸುತಿಹ
ಸಿರಿಯನಿನ್ನೇನ ಬಣ್ಣಿಸುವೆ ||೧೭||

ಚಿತ್ರದ ಚಿನ್ನಗೆಯ್ಕದ ಕುಪ್ಪಸವಲ್ಲಿ
ರತ್ನ ಮೆರೆವ ಅರಸಿಯು ।
ತೆತ್ತಿಸಿದವು ಜ[ಮದಾ]ಡಿಗೆ ರತ್ನವು
ಮುತ್ತಿ ನೇಜೆ ಗೊಂಡೆಯದ ||೧೮||

ಉಪ್ಪದಕೊಪ್ಪುವ ಜಂಗುಲಿಲಾದ ಹವಿಗೆ
ಮೇಲೆ ರತ್ನದ ಕೀರಣೆಯು ।
ಮೇಲುಗುಲಾಯದವರು ಸುರಿತಾಳನು
ಆಲಯವನು ಹೊರವೊಂಟ ||೧೯||

ನೇಮಿಖಾನನ ಕೈಯ ತಳುಕಿ ಸುರಿತಾಳ
ಪ್ರೇಮದಿಂದಲಿ ಚಾವಡಿಗೆ ।
ಚಾಮರವನು ಢಾಳಿಸಿಕೊಳುತಾಗಳೆ
ಕಾಮಸನ್ನಿಭ ನಡೆತಂದ ||೨೦||

ಸುರಿತಾಳನ ಚಾವಡಿಯ ಶೃಂಗಾರವು
[ಮೆ]ರೆದ ಮುತ್ತಿನ ಕಂಬಗಳು ।
ಪರಿಪರಿಯಲಿ ಚಿನ್ನಗೆಲಸ ರಂಜಿಸುತಿರೆ
ಸಿರಿಯ ನಾನೇನ ಬಣ್ಣಿಸುವೆ ॥೨೧॥

ಕನ್ನ ಕತ್ತರಿಗೆ ವಂದಿಸಿ ಸುರಿತಾಳನು
ಹೊನ್ನ ಗದ್ದುಗೆಯಲ್ಲಿ ಕುಳಿತು ।
ಉನ್ನತ ಗಾನ ಕೀರ್ತಿಯ ಹೆಗ್ಗಾಳೆಯು
ಸನ್ನೆಯ ಕಾಳೆ ಸಾರಿದವು ॥೨೨॥

ಒತ್ತಿಲಿ ಮಂತ್ರಿ ಪ್ರಧಾನ ಕೊಮಾರರು
ಮತ್ತೆ ನೇಮಿಯ ಒತ್ತಿನಲಿ ।
ಹತ್ತು ಸಾವಿರ ಕುದುರೆಯ ಜಾಲಾಂದರು
ವಿಸ್ತಾರದಲಿ ಒಪ್ಪಿದರು ॥೨೩॥

ಬಾದೂರಖಾನ [ಖಾದರಖಾನ]ಚ್ಚುಜಖಾನ
ಮೇದೂರಖಾನ ಹೇರಾಜ ।
ಮಾರಿ ಮುಖದ ಮಲ್ಲೂಖಾನರು ಸಹಿತಲಿ
ಮಾದಗಿತ್ತಿಯು ಸಹಿತಲಿ ॥೨೪॥

[ಚೀನ] ಹಮ್ಮೀರ ತಿಗುಳ ಗೌಳ ಗುಜ್ಜರ
ದೀನ ತೆಲುಗ ಕೊಂಕಣನು ।
ನಾನಾ ದೇಶದ ರಾಯರು ಬಂದು ಕುಳ್ಳಿರೆ
ದಾನವನೋಲಗದೊಳಗೆ ॥೨೫॥

ಹಿರಿಯ ಖಾನರುಗಳು ನೆರೆ ಬೊಬ್ಬಿರಖಾನ
ಸುರಗಿಯ ಶೂಲ ಭೈರವನು ।
ತರತರದಲಿ ಕುಳಿತೋಲೈಸುತ್ತಿದ್ದರು
ಹರುಷದೊಳೆಲ್ಲ ಮಲುಕರು ॥೨೬॥

ತೊಟ್ಟ ಕುಪ್ಪಸ ಕಟ್ಟಿಹ ಶೂಲ ಭೈರವ ತಾ
ಕಟ್ಟಿದ ಜವದಾಡೆಯೂ ।
ಕಟ್ಟಿದ ಕಾಸಿ ಮುಚ್ಚಾಯದ ಬಿಟ್ಟ ಜಡೆಯೂ
ಕಟ್ಟು ವಾಲಗದೊಳೊಪ್ಪಿದರು ॥೨೭॥

ಆ ಸಮಯದಲೊಬ್ಬ ಶಕುನಿಗನಿಂತೆಂದ
ಆ ಸುರಿತಾಳನ ಕೂಡೆ ।

ದೇಶಾಧಿಪತಿ ಚಾ[ಪ] ರಾಯರ ಬಳಿಯಿಂದ
ಲೇಸಿನ ಸುದ್ದಿ ಈ ಕ್ಷಣಕೆ ||೨೮||

ಮೆಚ್ಚುಂಟು ನಿನ್ನ ಶಕುನ ದಿಟವಾದರೆ
ಅಚ್ಚರಿಯಿದು ಲೋಕದೊಳಗೆ |
ಇಚ್ಛೆಗೆ ನೆನೆದ ಚಾಪವು ಬಂದಿತಾದರೆ
ಹೆಚ್ಚಿನ ಮನ್ನಣೆಯೆಂದ ||೨೯||

ಮುಂಗುಲಿರಾಯರ ಚಾಪ ಬಂದಿತು ಎಂದು
ಅಂಗರಕ್ಷಕ ಹರಿತಂದು |
ಕಣ್ಗೆ ಮಂಗಳವೆನೆ ನಿಂದು ಬಿನ್ನೈಸಿದ
ಮಾನ್ಯ ತಾ ಸಮರ ರಾಯೊಡನೆ ||೩೦||

ಬಂದು [ಭ]ಟ್ಟರು ಹರುಷದಿ ಹರಸುತ ನಾಡೆ
ತಂದುಕೊಟ್ಟರು ಚಾಪವನು |
ನಿಂದು ಚಾಪವ ನೋಡಿ ಕೂಡೆನೀಗರಿದೆಂದು
ಮುಂದಿರ್ದು ನೆಗೆದಾಡಿದನು ||೩೧||

ಪರಿಣಾಮದಲ್ಲಿ ಇದ್ದೇನೆಂದು ಮುಂಗುಲಿ
ಸುರಿತಾಳನು ಕೇಳಿದನು |
ಧರಣೇಶ ನಿಮ್ಮಾಶ್ರಯದ ಪರಿಣಾಮವು
ಇರಲು ಹರುಷವೆಂದೆನುತ ||೩೨||

ಭಟ್ಟರಿಗೆ ಉಡುಗೊರೆ ಕೊಡಬೇಕೆಂದು ಸುರಿತಾಳ
ಪೆಟ್ಟಿಗೆಗಳ ಕಳುಹಿದನು |
ಪಟ್ಟೆ ದೇವಾಂಗ ವಸ್ತ್ರಾಭರಣಗಳನು
ಕೊಟ್ಟು ಮನ್ನಿಸಿ ಕಳುಹಿದನು ||೩೩||

ರಾಯ ಲಕ್ಷಣ [ಶಾ]ಲ ತೆಗೆ[ಸಂ]ದು ಭಟರು ಹೇಳೆ
ತಲ್ಲಣಿಸಿದರು ಮಲುಕರು |
ಬಲ್ಲಿದ ಬಾದೂರಖಾನನೆಂದೆನುತಲಿ
ಅಲ್ಲಿರ್ದ ಖಾನರಾಡಿದರು ||೩೪||

ನೋಡದ ಮುನ್ನವೆದ್ದನು ಬಾದೂರಖಾನ
ಕೂಡಿದ ಮಂದಿಯ ಮುಂದೆ |
ಬೇಡಿದ ದೇಶವ ಕೊಡುವೆನೆ[ನಲವ]
ಪಿಡಿದನು ಚಾಪವನಾಗ ||೩೫||

ತೋರಖಂಡದ ಭುಜ ಮೀರಿದ ಕಡುಗೆಂಪು
ಸೇರಿ ಬೆಳೆದ ಜುಂಜುದಲೆಯ ।
ವೀರದಾನವ ಚಾಪವನೂರಿಯೆದ್ದನು
ಮಾರಿಯ ಮುಖದ ಬಾದೂರನು ||೩೬||

ಅಂದಿನ ದಾನವನಿವನೊಬ್ಬ ಶಾಪದಿ
ಬಂದು ಜನಿಸಿ ಡಿಳ್ಳಿಯೊಳಗೆ ।
ಸಂಧಿಸಿ ಕಡಿತಿಂಬ ಕೋರೆದವಡೆಗಳಿಲ್ಲ
ಒಂದು ಕೊರತೆ ಬಾದೂರಗೆ ||೩೭||

ತಂದಿರಿಸಿದರೇಳು ಕೊಪ್ಪರಿಗೆಗಳನು
ಒಂದರ [ಮುಂದೊಂದಾಗಿರಿಸಿ] ।
ಒಂದಂಬಿಲೆಸೆದು ಪೋಗುವೆನೆಂದು ಬಾದೂರ
ನಿಂದು ಬಿನ್ನಹವ ಮಾಡಿದನು ||೩೮||

ಅಂಬುಗಂಡಿಯ ಸೆಳೆವ ಖಾನರಿದ್ದರು
ಜಂಬುಗಂಡಿಯ ಆಲಂದರರು ।
ಅಂಬರಖಾನ ತುಂಬುರಖಾನ ಮೊದಲಾದ
ತುಂಬಿದೋಲಗವು ಸಂಭ್ರಮದಿ ||೩೯||

ಸಿಂಗಾಡಿಯನು ತೆಕ್ಕೊಂಡು ಬಾದುರಖಾನ
ಅಂಗಳಕಾಗಿ ನಡೆದ[ನು] ।
ನಿಂದು ಧನುವ ಕೈಕೊಂಡೆಚ್ಚ ಕೊಪ್ಪರಿಗೆ
ಹೊಂಗಿದುಗುಳು ಹಗೆಯೊಳಗೆ ||೪೦||

ಮಝು ಬಾಪುರೆ ಡಣಡಣಲೆಂದು ಕೊಂಡಾಡೆ
ಭುಜಬಲದವನ ಧೈರ್ಯವನು ।
ಸುಜನರಾ[ಜ]ನು ಸುರಿತಾಳನು ತಲೆದೂಗೆ
ಗಜಬಜಿಸಿತು ಆಸ್ಥಾನ ||೪೧||

ಎಚ್ಚು ಬೊಬ್ಬಿರಿದು ಧನುವನೂರಿ ನಿಂದನು
ಕೆಚ್ಚುಳ್ಳ ಮೀಸೆಯ ತಿದ್ದಿ ।
ಮೆಚ್ಚಿಯೆ ಸುರಿತಾಳನು ಬಾದೂರಗೆ
ಕೊಟ್ಟ ಧನುವ ಕುಲತಿಲಕ ||೪೨||

ಬಿಸುಟನು ಪಾವಡವನು ಬಾದೂರಗೆ
ಕೊಟ್ಟ ಬೇಡಿದ ದೇಶವನು ।

ಪಟ್ಟದಾನೆಯನೇರಿಸಿ ಮೆರೆಸಿದನಾಗ
ಪಟ್ಟಣವೆಲ್ಲ ನೋಡಿದರು ||೪೩||

ಎದ್ದನು ಸುರಿತಾಳನು ನೇಮಿ ಸಹಿತಲಿ
ಕ್ಷುದ್ರವ ತಾಳಿ ಮನದೊಳಗೆ ।
ಇದ್ದರೆ ಬದುಕಲೀಸನು ಬಾದುರಖಾನ
ಬುದ್ಧಿಯಿಂದಲಿ ಓಡಿಸುವೆ ||೪೪||

ಎಂದ ಮಾತನು ಕೇಳಿದವನೊಬ್ಬ ಹಿತವನು
ಬಂದು ಪೇಳಿದನು ಬಾದುರಗೆ ।
ಇಂದೀಕ್ಷಣ ನೀನು ಹೋಗದಿರ್ದರೆ ನಿನ್ನ
ಸಂದಿ ಸಂದಿಗೆ ಕಡಿಸು[ವ]ನು ||೪೫||

ಎಂದ ಮಾತನು ಕೇಳಿ ಬಾದೂರಖಾನ
ಬಂದುದ ಕಾಣ್ವೆನೆಂದೆನುತ ।
ಮಂಡಲದೊಳು ಹೊಸದುರ್ಗ ಕುಮ್ಮಟದಲ್ಲಿ
ಕಂಡು ಕಂಪಿಲ ಆತ್ಮಜನ ||೪೬||

ಚಂಡ ವಿಕ್ರಮ ಕೊಮಾರ ರಾಮಯ್ಯನು
ಕಂಡು ಬದುಕುವೆನೆಂದೆನುತ ।
ಹೆಂಡರು ಮಕ್ಕಳು ಸಹಿತಲಿ ಬಾದೂರ
ಭಂಡಾರವನು ತೆರಳಿಸಿದ ||೪೭||

ತನ್ನ ಲಾಯದ ಐನೂರು ಕುದುರೆಯನ್ನು
ಚೆನ್ನಾಗಿಯೇ ಜೀನಮಾಡಿ ।
ತನ್ನ ಒಕ್ಕಲುತನ ಸಹಿತಲಿ ಬಾದೂರ
ಬಿನ್ನಾಣದಿ ಹೊರಹೊರಟ ||೪೮||

ಹೋದನು ಬಾದೂರ[ಖಾನ] ಎನುತಲಿ
ಕೂಡೆ ನೇಮಿಗೆ ಹೇಳಿದರು ।
ನೋಡಿ ಬನ್ನಿರೊ ಹುಸಿ ಮಾತುಗಳೆನುತಲಿ
ಬೀಡಿಗೆ ಕಳಿಹಿದನಾಗ ||೪೯||

ಆಗಲೆ ಹೋದನು ಬಾದೂರಖಾನನು
ಬೇಗದಲೆದ್ದು ಗಾವುದವ ।
ಸಾಗುವ ಕುದುರೆ ಐನೂರು ಪವುಜನಿಕ್ಕಿ
ಬೇಗ ಒಕ್ಕಲ ತೆರಳಿದ ||೫೦||

ಹೋಗ ಹೇಳಿದ ಹತ್ತು ಸಾವಿರ ಕುದುರೆಯ
ಬೇಗ ಹುಯ್ಯಲ [ನಡೆ]ಸೆಂದ ।
ತಾಗಿದರಾಗಲೆ ಬಾದೂರಖಾನಗೆ
ಡಾಗಿನ ಕುದುರೆ ಏರಿದವು ॥೫೧॥

ಒಕ್ಕಲು ಸಾಗಿ ಬಂದಾ ಬಾದೂರನು
ಹೊಕ್ಕು ಹೊಯಿದು ಕಡಿದೊಟ್ಟೆ ।
ಮಿಕ್ಕಿನವರು ಓಡಿದರತ್ತ ಬಾದೂರ
ಅರ್ತಿಯಿಂದಲಿ ಸಾಗಿದನು ॥೫೨॥

ಹೆಬ್ಬಾಗಿಲನಿಕ್ಕಿದರು ಆ ಡಿಳ್ಳಿಯ
ಅಬ್ಬರ ಪಟ್ಟಣದೊಳಗೆ ।
ಒಬ್ಬರು ಹೇಳಲಾಪರು ಸುರಿತಾಳಗೆ
ಹಬ್ಬಿತು ಭಯ ನಗರಿಯಲಿ ॥೫೩॥

ಅಸುರಗುದುರೆ ಐನೂರು ದುವ್ವಾಳಿಸೆ
ಒಸರಿ ಬೆವರಿ ಕೆಸರೇಳೆ ।
ಬಿಸಿ ನೊರೆಯು ಕಟವಾಯೊಳು ಸೋರುತೆ
ಸಸಿನೆ ಕುಮ್ಮಟಕೈತಂದ ॥೫೪॥

ಹಿಂದುವ ರಾಯ ಬಲ್ಲಿದನೆಂದು ಬಾದೂರ
ಬಂದನು [ಕು]ಮ್ಮಟಕಾಗಿ ।
ನಿಂದು ನೀರನು ಕಡಿದು ತುಂಗಭದ್ರೆಯ
ಮಂದಿ ಕುದುರೆ ಸಹವಾಗಿ ॥೫೫॥

ಬೆಟ್ಟದ ಕಾವಲರು ಮಂದಿಯ ಕಂಡು
ಮುಟ್ಟುಸಿದರು ಕಂಪಿಲಗೆ ।
ಬಿಟ್ಟು ಎಯ್ದನೆ ಬಾದೂರಖಾನನೆಂಬವ
ಕಟ್ಟಿದವನ್ನೆನೂರು ಕುದುರೆ ॥೫೬॥

ಎಲ್ಲಿಯ ಮಂದಿ ಕುದುರೆಯೆಂದು ಕಂಪಿಲ
ಬಲ್ಲಿದರಿಬ್ಬರ ಕಳುಹೆ ।
ಅಲ್ಲಿ ಪೋಗಿ ಮಾತಾಡಿಸಿದರು ನೀ
ವೆಲ್ಲಿಂದ ಬಂದಿರೆಂದೆನುತ ॥೫೭॥

ಓಡಿ ಹೋದನು ಬಾದೂರ[ನು] ಎನುತಲಿ
ಕೂಡೆ ನೇಮಿಗೆ ಪೇಳಿದರು ।

ನೋಡಿ ಬನ್ನಿರೊ ಹುಸಿ ಮಾತಾಗಳೆನುತಲಿ
.... ವರಡಿಪಿ ||೫೮||

ಇಲ್ಲಿಗೆ ಮುನ್ನೂರು ಅರವತ್ತು ಗಾವುದ
ಡಿಳ್ಳಿಯ ಪಟ್ಟಣದೊಳಗೆ।
ಬಲ್ಲಿದ ಬಾಲೆಯಖಾನರೆಲ್ಲರ ಕೊಂದು
ಇಲ್ಲಿಗೆ ನಾನೋಡಿ ಬಂದೆ ||೫೯||

ಬಲ್ಲಿದ ಬಾದೂರಖಾನನು ಹೇಳಿದ
[ಇಲ್ಲಿಹ] ಐನೂರು ಕುದುರೆ ।
ಹಿಂದಿಕ್ಕಿಕೊಳ್ಳ ಪೇಳಿರೊ ನಿಮ್ಮ ಒಡೆಯಗೆ
ಎಂದಿಗೆಂದಿಗೆ ಹೆಸರಹುದು ||೬೦||

ಜೋಳಿಕಾರರು ತಿರುಗಿದರು ವಹಿಲದಲ್ಲಿ
ಹೇಳಿದರೊಡೆಯನ ಕೂಡೆ ।
ಕಾಳಗವಾಗಿ ಬಂದೆನು ಡಿಳ್ಳಿಯಿಂದಲಿ
ಗೂಳೆಯ ಸಹವಾಗಿ [ಎಂ]ದ ||೬೧||

ಬಿರಿದನು ಕೇಳಿ ಬಂದೆನು ಸ್ವಾಮಿ ನಾನಿಲ್ಲಿ
ಇರಬಾರದವನ ದೇಶದಲಿ ।
ಬೆರಸಿ ಹುಯ್ಯಲ ಬಂದಿತು ನೇಮಿಯ ದಂಡು
ಕರೆಸ ಹೇಳೆಂದ ಬೇಗದಲಿ ||೬೨||

ಕರೆಸಿಕೊಂಬೆವು ಬಾದೂರನ ಬೇಗಲಿ
ಅರಸು ಮಂತ್ರಿ ಕೇಳಿದನು ।
ಕರೆಸಿದರಾಗಲೆ [ಕು]ಮ್ಮಟ ಕೆಡುವುದು
ಇರಿಸಬಾರದು ಸುರಿತಾಳನಾ[ಳ] ||೬೩||

ಸುರಿತಾಳ ನೆರೆ ಬಂದರೆ ಕಾದುವೆನೆಂದು
ಧರೆ ಅರಿಯಲಿ ಹೊಸ ಪರಿಯ ।
ಅರಿಯನೆ ವೀರ ಕಂಪಿಲನೆಂಬುದನು ಈಗ
ಕರೆತನ್ನಿರೋ ಆ ಬಾದೂರನ ||೬೪||

ಎಂದ ಮಾತನು ಕೇಳುತಲೆ ರಾಮಯ್ಯನು
ಚಂದದಿಂದಲೆ ನಡೆತಂದ ।
ಇಂದುಧರನ ನೆನೆಯುತಲಿ ರಾಮಯ್ಯನು
ಬಂದನು ಬಾದೂರನೆಡೆಗೆ ||೬೫||

ಮಂದಿ ಕುದುರೆ ಸಹಿತಲಿ ಬಂದ ರಾಮಯ್ಯ
ನಿಂದು ಕಂಡನು ಬಾದುರನ ।
ಸಂಧಾನವ ಮಾಡಿ ತಬ್ಬಿಕೊಂಡಾತನ
ಒಂದಾಗಿ ಒಡಗೊಂಡು ಬಂದ ॥೬೬॥

ಎಡದ ಕೈಯ್ಯಲಿ ಬಿಲ್ಲು ಬಲದ ಕೈಯ್ಯಲಿ ಹೊನ್ನು
ನಡೆಯೆಂದು ಕಾಣಿಕೆಯಿಕ್ಕಿ ।
ಕಡುಗಲಿಗಳ ದೇವನ ಕಾಣ ಬಂದರೆ
ಬಿಡದೆ ಬೇಗದಿ ತಬ್ಬಿಕೊಂಡು ॥೬೭॥

ಎಸೆಯು[ವ] ಗಡ್ಡವು ಮಸಗುವ ಕೆಮ್ಮೀಸೆ
ಪೊಸತೆನಿಸಿದನು ಬಾದೂರ ।
ಹಸುರುಗುಪ್ಪಸ ಹೊನ್ನ ದ[ಸರಿ]ಯ ನಿಡುಜಡೆ
ಅಸು[ರೊಳ್ಪಿರ್ದ]ನೊತ್ತಿನಲಿ ॥೬೮॥

ಉಡಗೊಟ್ಟು ಮನ್ನಿಸಿ ಬಾದೂರಖಾನನ
ಒಡನೆ ಬಂದರುಪಚರಿಸಿ ।
ಕೊಡ ಹೇಳು ಬೀಡಾರವನು ಎಂದರೆ ಬೇಗ
ತಡೆಯದೆ ಎರಡು ಕೇರಿಯನು ॥೬೯॥

ಬುದ್ಧಿವಂತರು ಸಹಿತಲಿ ಕಂಪಿಲರಾಯ
ಬದ್ಧವ ಕೇಳೆ ಬಾದೂರನ ।
ಇದ್ದೆಡೆ ಹಗೆಯಾಗಿ ಓಡಿಬಂದೆನು ನಿಮ್ಮ
ಹೊದ್ದಿದೆನೆಂದ ಬಾದುರನು ॥೭೦॥

ಕದನ ಮಾತೇಕೆ ಬಂದಿತು ಎನುತ ಕಂಪಿಲರಾಯ
ಹದನ ಕೇಳಿದ ಬಂದ ಪರಿಯ ।
ಒದವಿದೋಲಗಕೆ ಮುಂಗುಲನಿಂದ ರಾಯಗೆ
ಮುದದಿ ಚಾಪವು ಬಂದಿತೆಂದ ॥೭೧॥

ಬಲ್ಲಿದ ಬಿಲ್ಲು ಮುಂಗುಲಿರಾಯ ಕಳುಹಿದ
ಡಿಳ್ಳಿಯ ಸುರಿತಾಳನಿಗೆ ।
ಎಲ್ಲ ಖಾನರು ಇದ್ದ ಹಗೆಯು ಸುರಿತಾಳ
ಬಿಲ್ಲ ತೆಗೆಸಿ ನೋಡಿದನು ॥೭೨॥

ಏಳು ಕೊಪ್ಪರಿಗೆಯ ಥಟ್ಟುಚಿಟ್ಟಿ ಎಸೆ[ದೆನು]
ತಾಳಿದ ಕಡು ಕೋಪವನು ।

ನಾಳೆ ಇಷ್ಟೊತ್ತಿಗೆ ಹಿಡಿತನ್ನಿ ಕೊಲ್ಲೆಂದು
ಹೇಳದ ನೇಮಿಯ ಕೂಡೆ ||೭೩||

ಹಿಡಿದುದ ಕಾಬೆನೆನುತ ಒಕ್ಕಲುಕೊಂಡು
ನಡೆಸಿದೆ ಐದು ಗಾವುದವ ।
ಒಡನೆ ಬಂದಿತು ಹತ್ತುಸಾವಿರ ಕುದುರೆಯು
ಕಡಿದೊಟ್ಟಿ ಬಂದೆ ನಾನೆಂದ ||೭೪||

ಬಂದುದು ಲೇಸೆಂದು ಭಾಷೆಯ ಕೊಟ್ಟರು
ತಂದೆ ಮಕ್ಕಳು ಕೈವಿಡಿದು ।
ಒಂದಾಗಿ ಸಾವೆನೆನುತ ಕಂಪಿಲರಾಯ
ಸಂದೇಹವನು ಬಿಟ್ಟು ನುಡಿದ ||೭೫||

ಆವ ರಾಯರು ದಂಡೆತ್ತಿ ಬಂದರೆ ನಿಮ್ಮ
ಜೀವದೊಳೆಮ್ಮ ಜೀವವನು ।
ಕಾಯ್ವೆನೆಂದನು ಕಂಪಿಲರಾಯನು
ಭಾವಿಸಿ ನಂಬುಗೆ ಕೊಟ್ಟ ||೭೬||

ಈ ಪರಿ ತಂದೆ ಮಕ್ಕಳು ಸಹ ಬಾದುರಗೆ
ಕಾಪಾಲಿಯ ಕರುಣದಲಿ ।
ಶ್ರೀಪಾದವೇ ಗತಿಯೆಂದು ಕುಮ್ಮಟದೊಳು
ಭೂಪ ಕಂಪಿಲನಿರುತಿಹನು ||೭೭||

ಹರನ ಪಾದವನು ನೆನೆಯುತ ರಾಮಯ್ಯ
ಹರುಷದಿ ಹರಭಕ್ತನಾಗಿ ।
ಧರೆಯೊಳು ಸುಖಕೀರ್ತಿ ಪಡೆದ ಸೌಭಾಗ್ಯದಿ
ಇರಲಿತ್ತ ಮೂರು ಸಂಧಿಗಳು ||೭೮||

ಅಂತು ಸಂಧಿ ೩ಕ್ಕಂ ಪದ ೨೫೩ (>೨೪೩)ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ನಾಲ್ಕು

❖

ನೇಮಿಯ ಕಾಳಗ ಮತ್ತು ಸೋಲು

ಗಂಗೆಯ ಜಡೆಯೊಳು ಧರಿಸಿದ ಲಿಂಗವೆ
ತಿಂಗಳ ನೊಡಿದಭವನೆ ।
ಮಂಗಳ ನಿಳಯ[ನೆ] ಹಿಂಗದೆ ನೆನೆವೆನು
ತುಂಗಭಗದ್ರೆಯ ವಿರುಪಯ[ನೆ] ॥೧॥

ಮೇದಿನಿಪತಿ ರಾಮನಾಥನ ಚರಿತೆಯ ನಿ
[ವೇ]ದಿಸುವೆನು ಬಲ್ಲಂತೆ ।
ಸಾಧಕ ಸಕಲ ಸಜ್ಜನರುಗಳೆಲ್ಲ
ಆದರಿಸಿಯೆ ಕೇಳುವುದು ॥೨॥

ಅತ್ತ ಡಿಳ್ಳಿಯ ಪಟ್ಟಣದಲ್ಲಿ ಸುದ್ದಿಯು
ಮುಟ್ಟೆ ಹೇಳುವರಲ್ಲಲ್ಲಿ ।
ಎತ್ತಣ ಸುದ್ದಿ ಎನುತ ಸುರಿತಾಳನು
ಚಿತ್ತದೊಳಗೆ ಉಮ್ಮನದಿ ॥೩॥

ಎಂದನು ಸುರಿತಾಳನು ಕೋಪದಲಿ
ಸುದ್ದಿಯ ಕೇಳಿ ಬಾದುರನ ।
ಇದ್ದವರೆಲ್ಲ ಗಾಯದ ಮಂದಿ ಖಾನರು
ಹೊದ್ದಲಮ್ಮದೆ ತಿರುಗಿದರು ॥೪॥

ಹೋದ ಮಂದಿಯನೆಲ್ಲರ ಕೊಂದು ಬಾದೂರ
ಹರಣ ಮಾಡಿದನು ಎಲ್ಲರನು ।
ಹೋದ ಒಕ್ಕಲು ಸಹಿತ ಗಾಯದಲಿರ್ದರು
ಮೇದಿನಿಯೊಳಗವನಹುದೋ ॥೫॥

ಕಣ್ಣ ಮುಂದೆಯು ಹೋದನು ಬಾದುರಖಾನ
ಹಣ್ಣ ಮಾಡಿದನು ಎಲ್ಲರನು ।
[ನು]ಣ್ಣ[ನೆ] ನಮ್ಮ ಕೈಯಲಿ ಜೀತವ ಕೊಂಡು
ಬಣ್ಣಿಸುತಿರಿ ಗಡಬಡೆಯ ||೬||

ಎಲ್ಲ ಖಾನರು ಹೋಗಿ ಕೊಲ್ಲದೆ ಬಂದಿರಿ
ಬಲ್ಲಿದನೆ ಬಾದುರನು ।
ಅಲ್ಲಿಗೆಲ್ಲರು ಹೋಗಿ ಹಿಡಿತರದಿರ್ದರೆ
ಎಲ್ಲರ ಹರಿಯ ಹೊಯ್ಸುವೆನು ||೭||

ಹೋದಲ್ಲಿ ಹೋಗುವೆನೆಂದು ನೇಮಿಯ ಖಾನ
ಬೇಗ ಲಕ್ಷದ ಕುದುರೆಯನು ।
.... ಕೆಲದಲಿ ಆವೊಲುಗುದುರೆಗಳ್ಬರೆ
ಹೊಕ್ಕು ನೆಲನ ಹೊದ್ದಿಸುವೆ ||೮||

ದಾಳಿ ಬಂದಿ ....
.... ಲೇನದರ ಟಂಕಸ ।
ಗಾಳಿಪೂಜೆಯ ಹಬ್ಬುಗೆ ನಡುಗುಳು
.... ಬಿಟ್ಟಲ್ಲಿ ತಾನು ಬಿಡದೆ ||೯||

ಗಡಿಯ ಬ್ಯಾಡರು ಒಡ್ಡ ಒಡೆದು ಬೆಟ್ಟವ ಹತ್ತಿ
....
.....ಹೊಡೆವವು ಬೆರೆಸಿ ನಿಸ್ಸಾಳ ।
ಗಡನೆ ಮುಸುಕಿತಾಗ ಒಡನೆ ||೧೦||

ಜಲ್ಲಿಯ ಬೇಡರು ಹಳ್ಳವ ಹೊಕ್ಕರು
ಅಲ್ಲಿ ಒಕ್ಕಲು ಇರಿಸುತಲಿ ।
ಬಿಲ್ಲ ಕೈವಿಡಿದು [ಮ]ಲೆಯ[ನಂ]ಡುಗೊಂಡರು
ಹುಲ್ಲ [ಸೊಪ್ಪೆತ್ತ] ಸಾಗಿದರು ||೧೧||

ಕೊಟ್ಟಿಗೆ ಎತ್ತು ಕೊ[ಲ್ಲಾರಿ] ಬಂಡಿಯ ರೊಟ್ಟಿ
ಪೆಟ್ಟಿಗೆ ಘುಡಿ [ಸರವಲೆ] ।
ಅಟ್ಟಡಿಬಟ್ಟರು ಸೂರೆಗೊಂಡರು ಮತ್ತೆ
ಕಟ್ಟಾಳು ರಾಯಗೊಪ್ಪಿಸುತ ||೧೨||

ಆಗ [ನಡೆ]ದನು ಕುಮ್ಮಟ[ಕೆ] ನೇಮಿಯ ಖಾನ
ಬೇಹಿನವರ ಬೆಸಗೊಂಡ ।

ಗಾವುದ ಇಲ್ಲಿಗೆ ಇದೆಯೆಂದು ಕುಮ್ಮಟ
ಬೇಹಿನವರು ಬಿನ್ನೈಸೆ ||೧೩||

ಕಗ್ಗೊಲೆಯನು ಹೊಕ್ಕು ಕಡಿದರ [ತ]ಡೆಯದೆ
ಬೊಬ್ಬೆ ನಿಸ್ಸಾಳದಬ್ಬರಕೆ ।
ದುರ್ಗವ ಸುತ್ತಿ ಬಾದೂರನ ಹಿಡಿವೆನೆಂದು
ಹೆಗ್ಗಾಳೆಗಳು ಒದರಿದವು ||೧೪||

ಇದು ಹೊಸಮಲೆದುರ್ಗವೆಂದು ಕುಮ್ಮಟವೆಂದು
ಇದು ತನ್ನ ವಾಲಿ ಭಂಡಾರ ।
ಇದು ವಿರುಪಾಕ್ಷದೇವರ ಹಂಪೆಯ ಹೊಳೆ
ಇದು ಆನೆಗೊಂದಿ ಎಂದೆನುತಲಿ ||೧೫||

ಧೂಳಿಗೋಂಟೆಯ ಕೊಳ್ಳಿರೋ ಎಂದು ಬೇ[ಗದೊ]ಳು
ಹೇಳಿದನು ನೇಮಿಖಾನ ।
ಸೂಳೈಸುತ ಹೊಯಿದವು ಡೊಳ್ಳು ನಿಸ್ಸಾಳ
ಗೀಳಿಟ್ಟು ಗುಂಡುಗಳುದುರೆ ||೧೬||

ನೆಗೆವ ಕೆಂಧೂಳು ಮುಸುಕೆ ಕತ್ತಲಾಯಿತು
ಹೊತ್ತಾರೆ ಬಹೆನೆಂದೆನುತ ।
ಕರ್ತ ರಾಮನ ಕರುಣವು ಅವಗುಂಟೆಂದು
ಕಿತ್ತ ಕತ್ತಿಯ ಒರೆಗೊಳಿಸಿ ||೧೭||

ತಿರುಗಿ ಬಂದಿತು ನೆಲೆಗೊಂಡಿತು ಹೊಸದಂಡು
ಪರಿಪರಿಯಲಿಗೂಡಿ ಪೊಯಿದು ।
ತರತರದಲಿ ಮುತ್ತು ಮಾಣಿಕವೆಸೆಯಲು
ತುರುಕರ ಸಿರಿಯನೇನೆಂಬೆ ||೧೮||

ನೇಮಿಯ ಹೊರದಂಡು ಭೂಮಿಯೊಳೆಣೆಯಿಲ್ಲ
ಹೇಮಕಸದ ಉಮ್ಮಾನ ।
ಸೀಮೆಯ ತಿರುಗುವ ಸಾವಿರ ಕುದುರೆಯು
ಸೋಮಧರನು ಶಿವ ಬಲ್ಲ ||೧೯||

ಹೇಳಲರಿಯೆ ಹೊಸ ಪರಿಯಲ್ಲಿ ಚಿತ್ರವ
ಹೇಳುವರೆನ್ನಳವಲ್ಲ ।
ಕಾಳಕೂಟದ ವಿಷವೆಂಬಂತೆ ಅಸುರರ
ಪಾಳೆಯ ಎಲ್ಲಿ ನೋಡಿದರೆ ||೨೦||

ಧರೆಯ ರಾಯರ ಗಂಡ ಧುರಧೀರ ಕಂಪಿಲ
ಪರಿವಾರ ಸಹಿತ [ಕುಳ್ಳಿರಲು]
ಹರಿದು ಬೇಹಿನವರು ಹಿರಿದು ಸುದ್ದಿಯ ತಂದು
ಇರದೆ ವಿಸ್ತರಿಸಿ ಬಿನ್ನವಿಸೆ ॥೨೧॥

ದಂಡ ಬಿಟ್ಟುದ ಕಂಡು ಬೇಹಿನವರು ಹರಿ
ತಂದು ಕಂಪಿಲಗೆ ಹೇಳಿದರು ।
ದಂಡು [ಕೂ]ಡಿತು ತುರುಕರ ಹಿಡಿತರುವೆವೆಂದು
ಗಂಡುಗಲಿಗಳಾಡಿದರು ॥೨೨॥

ಗದ್ದುಗೆಯನು ಹೊಯಿದೆದ್ದ ಕಂಪಿಲರಾಯ
ಇದ್ದ ಬಿದುರಿನ ಮನ್ನೆಯರು ।
[ಮಧ್ಯ ನೆರವಿ] ತುರುಕರ ಪಾಳ್ಯವನು
ಬುದ್ಧಿವಂತರು ಆಡಿದರು ॥೨೩॥

ಇತ್ತೆರದಲ್ಲಿ [ಎಪ್ಪತ್ತೆ]ರಡು ನಾಯಕರು
ಒತ್ತಿ ಬಿನ್ನಹವ ಮಾಡಿದರು ।
ಚಿತ್ತಯಿಸೆಲೆ ರಾಯ ಕಂಪಿಲ ಗುಡಿಗಳ
ಕಿತ್ತು ಹಾ[ಕುವೆವು] ಕಡಿದೊಟ್ಟಿ ॥೨೪॥

ಲಕ್ಷ ಕುದುರೆಗೊಂದು ಲವುಡಿಯೆ ಸೈ ಕೆಂಚ
ಎಕ್ಕಾದೇವಿಯ ರಾಣಿಯರ್ಗೆ ।
ದಿಕ್ಕು ದಿಕ್ಕಿಗೆ ದಿಗುಬಲಿಯ ಕೊಡುವೆನೀಗ
ಹೊಕ್ಕು ಹೊಯಿವೆ ತುರುಕರನು ॥೨೫॥

ಎಡವಂಕ ಬಲವಂಕವು [ಕೂ]ಡಿ ರಾಮಗೆ
ಕಡುಗಲಿಗಳು ಬಿನ್ನೈಸೆ ।
ತಡೆಯದೆ ಕೊಡು ವೀಳ್ಯವ ಬೇಗ ನಮಗೆಂದು
ಪೊಡವಿಪ ಚಿತ್ತೈಸೆನುತ ॥೨೬॥

ಡಿಳ್ಳಿಯ ನಾಡ ಟಕ್ಕಿನ[ರು] ಬೇಡರ ಮೇಲೆ
ಹಳ್ಳವಳ್ಳಿಯರೆಂದು ನಡೆಯೆ ।
ಚೆ[ಲ್ಲ] ಬಡಿದು ಹಲ್ಲುಗಳನು ಹೊಯಿವೆವೆಂದು
ನಿಲ್ಲದೆ ಬಿನ್ನೈಸಿದರು ॥೨೭॥

ಲಕ್ಷ ಕುದುರೆಯೆಂದು ಸೊಕ್ಕಿ ನೇಮಿಯು ಬಂದು
ರಕ್ಕಸರೆಂದು ಅರಿಯದೆ ।

ಮಿಕ್ಕ ಮಾತೇನು ಕುಮ್ಮಟದುರ್ಗಕೆ ತಾನು
ಇಕ್ಕ ಬಂದನು ದಿಗುಬಲಿಯ ||೨೮||

ಎಪ್ಪತ್ತು [ಎರಡು] ಮನ್ನೆಯರು ರಾಮಯ್ಯನ ಮುಂದೆ
ಸರ್ಪನ ತಡೆವಡೆದಂತೆ ।
ಸತ್ವವ ಮುರಿದು ನೇಮಿಯ ಹಿಡಿತಹೆವೆಂದು
ಒಪ್ಪದಿಂದಲಿ ಪಟುಭಟರು ||೨೯||

ಹುಲ್ಲು ಹೊರೆಯ ಮಾರಲು ಬಂದ ಕಾಟಣ್ಣ
ಅಲ್ಲಿ ದಾನವರುಗಳ ।
ಬಲ್ಲ ಬಲ್ಲಿದ ಖಾನರ ಕೊಂದ ಪರಿಯನು
ಬಲ್ಲಂತೆ ನಾನುಸುರುವೆನು ||೩೦||

ದಿನಕರ ಸರಿ[ಯಲು] ವನಜಾ[ಳಿ] ಮುಗಿಯಲು
[ಕುಮುದ ಸಖಿನು] ಗುಡಿಗಟ್ಟಿ ।
ಉದಯವಾಗಲು ರಾಮನಾಥನು ಪೊಡಮಟ್ಟ
ಪದುಮನಾಭನ ಚರಣವನು ||೩೧||

ತಮತಮಗಾಡುತಿರ್ದರು ವೀರ ಪರಿವಾರ
ಕಮಲಾಸ್ಯ[ನು] ಕಂಡು ನಲಿದು ।
ಮುದದಿಂದ ನೆನೆಯುತ ವಾಲಗವಿತ್ತನು
ಕದನವ ನಾಳೆ ನೋಡೆಂದ ||೩೨||

ಚಾವಡಿಯಲಿ ಕುಳಿತಾತನು ರಾಮನು
ಬೇಗ ಮಂತ್ರಿಯ ಒಡಗೂಡಿ ।
ಜೀವ[ಕೆ] [ಜೀ]ವನು ಈವ[ನು] ಬೈಚಪ್ಪ
ವಾಲಗದೊಳಗೆ ಒಪ್ಪಿದನು ||೩೩||

ಲೆತ್ತವನಾಡ ಕುಳಿತ ರಾಮನಾಥನು
ಒತ್ತಿಲಿ ಪರಿವಾರ ಸಹಿತ ।
ಬತ್ತೀಸಾಯಾಧದ ಭಟರ ಕೂಡ ಕೆಲದಲ್ಲಿ
ಕರ್ತು ನೃಪನ ವಾಲಗದಿ ||೩೪||

ಆ ಸಮಯದಲಿ ನುಡಿದನು ಕಾಟಣ್ಣನು
ದೇಶಾಧಿಪತಿ ರಾಮನೊಡನೆ ।
ಲೇಸೆನೆಸಿದ ನೇಮಿಯ ದಂಡನು ಹೊಕ್ಕು
ಗಾಸಿ ಮಾಡುವೆ ಹೊಯಿ[ದೆಂ]ದ ||೩೫||

ಎಂದ ಮಾತನು ಕೇಳಿಯೆ ರಾಮನಾಥನು
[ಒಂದ] ನುಡಿದನು ಕಾಟಣಗೆ ।
ಸಂಧಿಸಂಧಿಗೆ ಕಡಿಸುವೆನು [ನೀನರಿತಿರು]
ಚೆಂದವೆಲ್ಲವ [ನೋ]ಡೆಂದ ||೩೬||

ಅಂಜಿ ಬದುಕಿದನೆ ಅರ್ಜುನನಾ ಮಗ
ಅಂಜದೆ ಹನುಮ ಲಂಕೆಯನು ।
ಕಂಜ[ದ] ರಾಣಿಯ ಅರಸನ ಸತಿಯ[ಳ]
ಕೊಂದು [ತಂದ]ನು ದಾನವನ ||೩೭||

ನಿನ್ನ ಪ್ರಾಣಕೆ ಸರಿಯೆನುತಲಿ ಹರಿಯಮ್ಮ
ಭಿನ್ನವಿಲ್ಲದೆ ಎನ್ನ ಸಲಹೆ ।
ನಿನ್ನ ಹೆಸರನು ಹೇಳುವೆನು ಕಡಿದಾಡುವೆ
[ಬೆ]ನ್ನಲುದಿಸಿ [ಬ]ಹೆನೆಂದ ||೩೮||

ಅಣ್ಣನ ಸಂಗಡ ನಾನೂರು ಮಂದಿಯು
ಹೊನ್ನಕಟ್ಟಿನ ಬಿಲ್ಲಿನವರು ।
ಬಿನ್ನಣದಲಿ ಹೋಗಿ [ಬಾಯೆಂದು] ಮನ್ನಿಸಿ
ಚೆನ್ನರಾಮನು [ಕಳುಹಿ]ದನು ||೩೯||

ಕಳುಹಿಸಿಕೊಂಡು ರಾಮಯ್ಯನ ಕೈಯಲಿ
ಚಲದಂಕ ಮಲೆವರ ಗಂಡ ।
ನಳಿನನಾಭನ ಶ್ರೀಚರಣವ ನೆನೆಯುತ
ಇಳಿದನು ಕುಮ್ಮಟದಿಂದ ||೪೦||

ಮುಂದ[ಣ ರಾ]ವುತ ಮಂದಿ ಕುದುರೆ ಸಹ
ಬಂದ ಬೇಹಿನ ಸಿಂಗ ಕೂಡಿ ।
ನಿಂದು ತುರುಕರ ಪಾಳೆ[ಯ]ವನು ಕಾಣುತೆ
ಒಂದು ಬುದ್ಧಿಯನೆಣಿಸಿದನು ||೪೧||

ಬಿಲ್ಲ ಮಂದಿಯನಡಗಿಸಿ ಒಂದು ಠಾವಿಲಿ
ಹುಲ್ಲ ಹೊರೆಯನಳವಡಿಸಿ ।
ನಿಲ್ಲದೆ ನೇಮಿಯ ಪಾಳೆಯವನು ಹೊಕ್ಕ
ಎಲ್ಲರು ನೋಡುವಂದದಲಿ ||೪೨||

ಭರದಿಂದ ಜಾಯಿ ಮಲ್ಲೂಕನ ಮನೆಮುಂದೆ
ಇರಿಸಿದನಾ ಹುಲ್ಲ ಹೊರೆಯ ।

ಸು[ರೆ] ಸೇವಿ[ಸಿ] ಮತ್ತೆ ಹುರಿದ ಬಂಗಿಯ ಮುಕ್ಕಿ
ಹಿರಿದಿಹ ರೊಟ್ಟಿಯ ತಿಂದು ||೪೩||

ಕರಿ ಮದವೇರಿ ಕಾಟನ ಹುಲ್ಲ ಜಡಿದನು
ಪರದೇಶಿ ಬಿಡು [ಹುಲ್ಲ]ನೆಂದ ।
ಸ್ಥಿರದಿಂದ ಹುಲ್ಲ ಹೊರೆಯ ಬೆಲೆ ಹೇಳೆಂದರೆ
ಭರದಿಂದ ಹತ್ತು ಟೆಂಕಿಯನು ||೪೪||

ಹತ್ತು ಟೆಂಕಿಯ ಹಡೆವುದೆ ಹುಲ್ಲ ಹೊರೆಯೆಂದು
ಸುತ್ತಲಿರ್ದವರಿಗೆ ಹೇಳಿ ।
ಕುಟ್ಟಿಕೋ ಇವನ ಬಾಯನು ಎಂದೆನುತಲಿ
ಮತ್ತೆ ಕೋಪದಿ ಮೊರೆದೆದ್ದ ||೪೫||

ಒಲ್ಲದಿದ್ದರೆ ಪೋಗೊ ಜಾಯಿಮಲ್ಲುಕ[ನೆನೆ]
ಹುಲ್ಲ ಸೆಳೆದುಕೊಂಡನಾಗ ।
ಬಲ್ಲಿದ ಖಾನನು ಹುಲ್ಲ ಸೆಳೆದುಕೊಂಡ
ಎಲ್ಲ ಖಾನರು ನೀವು ಕೇಳಿ ||೪೬||

ಹುಲ್ಲ ಹೊರೆಯ ನಾ[ನು] ಹೋಗಲೀಸೆನೊ ನಿನ್ನ
ಬಲ್ಲಿದತನವೆ ಎನ್ನೊಡನೆ ।
ಸಲ್ಲ ಬಡುವ ಕೊಡನೆ? ಎಂದೆನುತಲಿ
ಅಲ್ಲಿರ್ದ ಖಾನರು ಆಡಿದರು ||೪೭||

ಅವರೆಂದ ಮಾತಿಗೆ ಬಂದನು ಕಾವಣ್ಣ
ಸಂದಿಸಿ ಜಾಯಿಮಲ್ಲಿಕನ ।
ಚೆನ್ನಾದ ಕೊಲೆಯ ಕೊಲ್ಲುವೆನು ನಾನೀಗಲೆ
ಇಂದುಧರನು ಮೆಚ್ಚುವಂತೆ ||೪೮||

ಕೆಡೆದನು ಜಾಯಿಮಲ್ಲುಕ ಹುಲ್ಲ ಹೊರೆಯನು
ಹೊ[ಡೆ]ದನು ಇವನೆದೆಗಳನು ।
ದಡಬಡಿಸುತ ಮಲ್ಲುಕಾನನ ....
ಜಡೆಯನು ಹಿಡಿದು ಜಡಿಯುತ ||೪೯||

ಮಲ್ಲವಿದ್ಯೆದೊಳು [ಹೊಕ್ಕು ಹೊಯ್ದನು] ಈಗ
ಹಲ್ಲನೆಲ್ಲವ ಹೊಡೆ ತಿವಿದು ।
ಎಲ್ಲರು ಬೆರಗಾಗೆ ನೇಮಿ ರಾವುತನನು
ಕೊಲ್ಲುತೈದನೆ ಕಾಟಣ್ಣ ||೫೦||

ಅಡಗಿಕ್ಕಿ ಕಡುವಾಯ ಎಡಗೈಯ ಹಿಂದಿಕ್ಕಿ
ಕೆಡಹಿದ ಪೊಡವಿಯ ಮೇಲೆ ।
ಮಡಲೊ[ತ್ತುತ] [ತಂ]ಡವ ನೆರೆಗಟ್ಟಿಸಿ
[ಉ]ಡಿದನು ಕಾಟ ದಾನವ[ರ] ||೫೧||

ಬಡವನೆಂದೆನ್ನನು ಗಡಣೆಗೊಳ್ಳದೆ ಹೋದೆ
ಕಡುಪ ತೋರೆಲೊ ಎನ್ನೊಡನೆ ।
[ಕು]ಡಿದ [ಸುರೆ]ಯು ನಾಸಿಕದಲ್ಲಿ ಹೊರ[ವೊ]ಡೆ
ನಡೆವೆ ನೇಮಿಯ ಬಳಿಗೆಂದ ||೫೨||

ಹತ್ತಿದ ಮೂಗು ಕಿತ್ತು ಮುರಿದ ಹಲ್ಲು
ನೆತ್ತರ ದವಡೆಲಿ ಸುರಿಯೆ ।
ಕಿತ್ತಿಹ ಕೂದಲ ಎಡಗೈಯ ಹಿಡಕೊಂಡು
ಮತ್ತೆ [ನೇಮಿಯ] ವಾಲಗಕೆ ||೫೩||

ತಂದು ನೇಮಿಯ ಮುಂದೆ ನಿಲ್ಲಿಸೆ ಖಾನನ
ಚಂದದ ಗಡ್ಡ ಒಂದಿಲ್ಲ ।
ಬಂದ ಪರಿಯನು ಹೇಳಿದನು ಕಾಟಣ್ಣನು
ನಿಂದು ನೇಮಿಗೆ ಬಿನ್ನೈ[ಸಿ] ||೫೪||

ಹುಲ್ಲ ಮಾರಲು ಬಂದರೆ ನಿನ್ನ ಖಾನ[ನು]
ಎಲ್ಲರು ಬೇಡ ಬೇಡೆನಲು ।
ಬಲ್ಲಿದನಾಗೆನ್ನ ಹುಲ್ಲ ಸೆಳೆದುಕೊಂಡ
ಎಲ್ಲರು ಅಹರೆ ನೀ ಕೇಳು ||೫೫||

ಅಲ್ಲಿರ್ದ ಹಲಬರ ಕರೆಯಲಟ್ಟಿದ ನೇಮಿ
ಎಲ್ಲರು ಹರಿದೈತಂದು ।
ಎಲ್ಲರು ನೇಮಿಯೊತ್ತಿಲಿ ಬಂದು ನಿಂದರು
ಎಲ್ಲ ಮಾತುಗಳ ಹೇಳಿದರು ||೫೬||

ಹುಲ್ಲನು ಸೆಳೆದುಕೊಂಡನು ಜಾಯಿ ಮಲ್ಲುಕ ತ
ಪ್ಪಿಲ್ಲ ಪರದೇಶಿಯಲ್ಲಿ ।
ಎಲ್ಲರರಿ ಯೆ ಖಾನನು ತಪ್ಪ ಮಾಡಿದ
ಬಲ್ಲಂತೆ ಮಾಡೆಂದರವರು ||೫೭||

ಬಲು ಬೇಹಾರವ ಮಾ[ಡ]ಲು ನಿನ್ನ ಪಾಳೆಯ
ಕಲಹವೆ ನಿನ್ನ ಕಟ್ಟಳೆಯು ।

ಹಲವು ಮಾತೇನು ಕೆಲಬರು ಒಡೆಯರಾದರು
ಎಲೆ ನೇಮಿಯೆಂದು ಬಿನ್ನೈ[ಸೆ] ||೫೮||

ಕಿತ್ತವು ಎಡಬಲದಲಿ ಸಾವಿರ ಕತ್ತಿ
ಒತ್ತರಿಸುತ ಕಾಟಣನ ।
ಹತ್ತೆ ಸಾರಿದ ನೇಮಿ ಚಿತ್ತೈಸುತಲಿ
ಒತ್ತಿ ಬಿನ್ನಹವ ಮಾಡಿದನು ||೫೯||

[ತ]ಡೆಯದೆ ಹಿಂದೆ ಮುಂದೆ[ಯು ಈಗ] ನಾನು
ಕಡಿದು ಒಕ್ಕುವೆ ತಲೆಗಳನು ।
ನುಡಿಗೇಳಿ ಕಿಡಿಗೊಳುತ ಕಾಟಣ್ಣನು
ಕಡುಗೋಪದಿಂದ ಇಕ್ಕಿದನು ||೬೦||

ಆದರೆ ಚಿತ್ತೈಸೆಲೆ ನೇಮಿ ಮಲ್ಲುಕ
ಕಾದುವೆ ನಾನಿವನೊಡನೆ ।
ಮೇದಿನಿಯೊಳು ರಾಯ ರಾವುತರ ಗಂಡನು
ಮೂದಲಿಸುತ ಕಾಟಣ್ಣ ||೬೧||

ಗಡ್ಡದ ಇದಿರು ಒದ್ದರೆ ....
ದೊಡ್ಡ ಕತ್ತಿಯ ಜಡಿಯುತಲಿ ।
ಸಡ್ಡೆ ಮಾಡದೆ ತುರುಕರ ಕಾಟಣ್ಣನು
ಒಡ್ಡೋಲಗದಿ [ಓ]ಡಿಸಿದನು ||೬೨||

ನಾಡ ಮನ್ನೆಯರಿಗೆ ರೂಢಿಗೆ ಅತಿಛಲ
ನೋಡು ಕಂಪಿಲರಾಯ ಸುತನ ।
ಕೂಡೆ ಸೆಣಸಿ ಹೊಡೆವೆನು ರಾಮನಾಥನ
ನೋಡು ಎನಗೆ ಎಣೆಯಿಲ್ಲ ||೬೩||

ನಿನ್ನ ಪಾಳೆಯದಲಿ ನಿನ್ನ ನಾ ಕೆಣಕೆನು
ನನ್ನ ನೀನೊಮ್ಮೆ ಚಿತ್ತೈಸು ।
ಭಿನ್ನವಿಲ್ಲದೆ ಬೀದಿವರಿದು ಕೊಲ್ಲುವೆ ನಾನು
ಚೆನ್ನ ಕುದುರೆಯ ಕೊಡಿಸೆಂದ ||೬೪||

ರಾಮನಾಥನ ಮೇಲೆ ದಾಳಿಯನಿಡುವೆನು
ಸ್ವಾಮಿ ಚಿತ್ತೈಸು ಬಿನ್ನಪವ ।
ನೀನು ಮೆಚ್ಚಲು ಕಡಿದಾಡುವೆ ನಾನೀಗ ಮೇ
ದಿನಿಯೊಳು ಹೊಸಪರಿಯ ||೬೫||

ನಗುತಲಿ ನುಡಿದ ನೇಮಿಯು ಕಾಟಣ್ಣಗೆ
ಹೋಗು ನೀನಿಂದು ಲಾಯದಲಿ ।
ಬಗೆಗೆ ಸಿಕ್ಕಿದ ಕುದುರೆಯನು ತೆಕ್ಕೊಳ್ಳೆಂದು
ಮಿಗೆ ಕಳುಹಿದನು ಕಾಟಣನ ॥೬೬॥

ಲಾಯಕೆ ನಡೆದು ಬಂದನು ಕಾಟಣ್ಣನು
ಜಾಯಿ ಮಲ್ಲುಕನು ಇಂತೆಂದ ।
ಐವತ್ತು ತುರುಕ[ರ] ದಾಮವಳಿವುದು ಉ
ಪಾಯವ ತಿಳಿಯಲರಿಯರು ॥೬೭॥

ಕಳುಹಿದ ಮಾತಿಗೆ ಲಾಯವ ಹೊಕ್ಕನು
'ಫಲವ ಉಣ್ಣಲಿ' ಇಂತೆಂದು ।
ಘಳಿಲನೆ ಆಸ್ಥಾನ ಗಜಬಜೆನಲು
ಕಲಿಗಳರಸ ನಡೆತಂದ ॥೬೮॥

ಹಿಂದುವ ಕುದುರೆಯ ಲಾಯಕೆ ಹೊಡೆದನು
ಕಂದರ್ಪ [ಹರ] ಬಲ್ಲನೆನುತ ।
ಚೆಂದದಿಂದಲಿ ಇಬ್ಬರು ಹರಿತಂದರು
ಬಂದರು ಕಾಟಣ್ಣನೆಡೆಗೆ ॥೬೯॥

ಹಸಿದರೆ ನರಮಾಂಸವ ತಿಂಬುದು ಬೊಲ್ಲ
ಬಿಸಿಯ ರಕ್ತವನು ನೀರೆಂದು ।
ಕುಡಿವುದು ಒದೆದು ಕೊಲ್ಲುವುದು ಸಾವಿರಮಂದಿ
ಹೆಸರುಗೆಟ್ಟರು ಇದರಿಂದ ॥೭೦॥

ಲಾಯಕೆ ನಡೆದು ಬಂದನು ಬೇಡಿಕೊಂಡನು
ವಾಯುವೇಗದ ತೇಜಿಯನು ।
ನೋಯದೆ ಕಮ್ಮಟಕೊಯ್ಯೆನ್ನ ಸಲಹೆಂದು
[ತೇಜಿಮ]ಣಿಯ ಬೇಡಿದನು ॥೭೧॥

ನುಡಿದ ಮಾತನು ಕೇಳಿ ಗುಡಿಗಟ್ಟಿ ಬಾಲವ
ಪೊಡವಿಯ ಖುರದಲಪ್ಪಳಿಸಿ ।
ಜಡಿದು [ತು]ಳಿದು ಉಳಿವೆನು [ಇಂ]ದು ಕಾಟಣ್ಣಾ
ಕೊಡುವೆನು ರಾಮನಾಥನಿಗೆ ॥೭೨॥

ಮುಂದೆ ಕಚ್ಚಿಯು ಕೊಲ್ಲುವುದು ಹಿಂದೆ ಒದೆವುದು
ಚಂದದಿ ಉಳಿಯೆದ್ದು ಕುಣಿ[ದು] ।

ಬಂದು ಕಾಟಣ್ಣ[ನ] ವಶವಾ[ದ] ಬೊಲ್ಲ[ನ]
[ನಂ]ದು ನೋಡಿ[ದ] ಅನುಮನದಿ ||೭೩||

ಹೊನ್ನ ಹಲ್ಲ[ಣ]ವು ಚಿನ್ನದ ಪೊಡಮಟ್ಟು
ತುರಗವನಡರಿ ಬೇಗದಲಿ।
ಹೊಡೆದನು ಮುನ್ನಿನ ಜಾಯಿ ಮಲ್ಲುಕನನು
ಕೆಡಹಿದ ಇರಿ[ವ] ದಾನವರ ||೭೪||

ಅಟ್ಟಿಹೊಯಿದ ಜಾಯಿ ಮಲ್ಲುಕಖಾನನ
ಮುಟ್ಟಿ ಸೆಳೆದ ಮುಂದಿದ್ದವರ।
ಒಕ್ಕಲಿಕ್ಕಿದ ಹೆಣ ರಾಶಿಯ ಕಂಡರು
ಕೆಟ್ಟೆವೆನುತ ಹಿಮ್ಮೆಟ್ಟಿದರು ||೭೫||

ಕತ್ತಿಯ ಹಾಕಿ ಕಂಗೆಟ್ಟು ಖಾನರು ಓಡೆ
ಹತ್ತಿದನವರ ಬೆನ್ನಟ್ಟಿ।
ಚಿತ್ರದ ಕೊಲೆಯನು ಕೊಂದನು ಕಾಟಣ್ಣ
ಹತ್ಯೆದಿದರು ನೇಮಿಯನು ||೭೬||

ಮಾರಿಮುಖದ ಸಿಂಡನು ಕೊಲ್ಲುತೈದಾನೆ
ಸೆರೆ ಹೋಗ[ಬೇಡಿ] ಎಂದೆನುತ।
ಸೇರಿದ ಖಾನರು ದೂರದೊಳಿದ್ದರು
ಕಾರಮಳೆ ಕರೆವಂತೆ ||೭೭||

ನಾನೊಂದ ಹೇಳ್ವೆನು ಕೇಳಿರೊ ಖಾನರು
ನಾನು ಮೋಸದಿ ಕೊಲ್ಲೆನೆಂದು।
ನಾನಾದರೆ ರಾಮನ ಬಂಟ ಕಾಟಣ್ಣ
ಹೀನ ತಪ್ಪದು ನಿಮಗೆಂದ ||೭೮||

ಎಂದ ನುಡಿಯ ಕೇಳಿದ ಜಾಯಿ ಮಲ್ಲುಕ
ನೊಂದು ನುಡಿದ ಖಾನರೊಡನೆ।
ಸಂದೇಹವೇತಕೆ ನೇಮಿ ಬೊಲ್ಲನ ಕೊ
ಟ್ಟಂದೆ ಕೆಟ್ಟೆವು ನಾವುಯೆಂದ ||೭೯||

ನೊಂದ ಖಾನರು ಬಂದು ಹಿಂದೆ ಹೊಕ್ಕುತಲಿರೆ
ಮುಂದೆ ತುರಗ ಅಡ್ಡಗಟ್ಟಿ।
ಕಂದವ ಕಟ್ಟಿ ಕತ್ತಿಗೆ ಸಾವ ತಟ್ಟನಿಕಿ
ಮುಂದೆ .... ದವ ಕಡಿದ ||೮೦||

ಮಡದಲೊತ್ತಲು ಮುಗಿಲಿಗೆ ಅಡ[ರಲು] ಬೊಲ್ಲ
ಸಡಗರದಲಿ ಸರಳಿಸಲು ।
ಗಡಣದಿ ಮೆರೆವ ನೇಮಿಯ ವಾಲಗದೊಳು
ನುಡಿದನು ಪಂಥದ ಮಾತ ॥೮೧॥

ರೊಟ್ಟಿ ತುಪ್ಪವ ತಿಂಬರು ನಿನ್ನ ಖಾನರು
ಕೊಟ್ಟ ಕುದುರೆಯನೇರುವರು ।
ದಿಟ್ಟ ರಾಮನ [ಸಾ]ರುವ ಬಂಟ ನಾನೀಗ ಎಂ
ದಟ್ಟಿ ಹೊಯಿವನು ಖಾನರನು ॥೮೨॥

ಕರ್ತನು ಬಲ್ಲನು ಎಂದು ನೇಮಿಯ
ಸತ್ತರು .... ।
ಒತ್ತಿ ನಿಮ್ಮಿರ್ದ [ಮಲ್ಲ]ಗಂಬಕೆ ನೇಮಿ
ಮೃತ್ಯು ಬಂದಿತು ನಮಗೆಂದ ॥೮೩॥

ಹದ್ದು ಹೊಯಿದ ಹಾಗೆ ಆದನು ನೇಮಿಯು
ರಕ್ಕಸನಿವನಹುದೆಂದ ।
ಹೊಕ್ಕಲ್ಲಿ ಬಿಡಬೇಡ [ಎನೆ] ಕುದುರೆ ಮಂದಿ
ಇಕ್ಕೆಲದಲ್ಲಿ ಕವಿದೇರೆ ॥೮೪॥

ಅಬ್ಬರವಾಯಿತು ಪಾಳೆಯದೊಳಗೆಲ್ಲ
ಸರ್ಬ ದಳವು ಜಾಡಿಸಿತು ।
ಅಬ್ಬಿತು ಖಾನರ ದಾಳಿ ಕಾಟನ ಮೇಲೆ
ಒಬ್ಬೊಬ್ಬರು ಮೂದಲಿಸಿ ॥೮೫॥

ಮೀರಿ ಹೋದನು ಇಂದು ರಾಮನು ತಾನೆಂದು
ಆರುಸಾವಿರ ಕತ್ತಿ ಕೀಳೆ ।
ತೋರುವೆ ನಮ್ಮ ಗುಣವನು ಎಂದೆನುತಲಿ
ಏರಿದರೆಲ್ಲ ದಾನವರು ॥೮೬॥

ಎಡಬಲದಲಿ ತೊಡೆ ಎದೆ ಏರಿ ಕಡಿದರು
ಕೆಡಹಿದ ಅಡಿವಿಡಿದವರ ।
ಪಡೆ ಕವಿಯಿತ್ತಸುರರ ದಾಳಿ ಏರಿತು
ತುಡುಕಿ ಸಿಂಗಾಡಿ ರಭಸದಿ ॥೮೭॥

ಹೊಡೆವುತ ಡೊಳ್ಳು ನುಡಿಸುತ ನಾಗಸರ ಕಾಳೆ
ಒಡನೆ ಹೆಗ್ಗಾಳೆ ಗುರ್ಮಿಸಾಲು ।

ತಡೆಯೊಡೆದಂತೆ ಖಾನರು ಕವಿದೆಸೆಯಲು
ದೃಢದಲಿ ಕಾಟನ ಮೇಲೆ ||೮೮||

ಹೆಬ್ಬಿದಿರಿಗೆ ಉರಿಕೊಂಡಂತೆ ಸಿಡಿಯಲು
ಹಬ್ಬಿದ ಸಿಂಗಾಡಿ ರಭಸ ।
ಬೊಬ್ಬೆಗೊಡುವ ಖಾನರು ಕವಿದೆಸೆಯಲು
ಒಬ್ಬ ಕಾಟಣ್ಣನ ಮೇಲೆ ||೮೯||

ಮಡವೊತ್ತಿ [ನೇಜೆಯ] ತುಡುಕುತ ಕುದುರೆಯ
ಕೆಡಹಿದ ಖಾನ ಖಾನರನು ।
ಕಡಿದು ಹರಹಿದನು ತುಂಡು ಇಕ್ಕೆಲದಲ್ಲಿ
[ಮಡಿವವ]ರಿಗೆ ಕಡೆಯಿಲ್ಲ ||೯೦||

ಕತ್ತಿಗಳೋ ಕಾರಮಿಂಚೋ ಕಾಳು[ರ]ಗ[ನ]
ನೆತ್ತಿಯ ಮಣಿಯೋ ಮಾಣಿಕವೋ ।
ನೆತ್ತರ ಮುಖದ ಖಾನರು ಕವಿದೆಸೆಯಲು
ಮುತ್ತಿ ಮುಸುಕಿ ಹಿಡಿಯೆನುತ ||೯೧||

ನೆಟ್ಟ ಸರಳುಗಳ ಕಿತ್ತಿಟ್ಟು ಹಾಕಿದ
ನೆತ್ತರ ಬಸಿದು ಬಿಸುಡುತ ।
ಹೊತ್ತ ಕೋಪದಿ ಹೊಗಲೇರಿದ ತುರಗವ
ಕತ್ತಿಲಿ ಜಡಿಯಲೋಡಿದರು ||೯೨||

ಹಿಡಿದ ಕತ್ತಿಯ ಜಡಿವೊಡಹಿದ ಕಾಟನು
ಕಡಿದನು ತುರಕ ರಾವುತರ ।
ಕೆಡೆದ ಕುದುರೆಯ ಕಾಲಾಳ ಕಡೆಯ ಕಾಣೆ
ಕಡುಗಲಿ ಕಾಟ ಕೊಂದುದನು ||೯೩||

ದಿಟ್ಟ ದಾನವರುಗಳಟ್ಟಿ ಆಡುತ ಬರೆ
ಮುಟ್ಟಿ ಕೊಂದನು ಕಾಟಣ್ಣ ।
ಬಿಟ್ಟಲ್ಲಿ ಬಿಡದಡ್ಡಗಟ್ಟಿ [ರ]ಕ್ಕಸರ ಬೆ
ನ್ನಟ್ಟಿದ ದೊಡ್ಡ ರಾವುತರ ||೯೪||

ಸನ್ನದ್ಧನಾಗಿ ಕಾದುತ ಬಂದ ಕಾಟಣ್ಣ
ತನ್ನ ಮಂದಿದ್ದೆಡೆಗಾಗಿ ।
ಚೆನ್ನಹ ರಾಮನೆಕ್ಕಟಿಗರು ಬೇಗದಿ
ಬೆನ್ನ ಪತ್ತಳಿಯನು ಬಿಗಿದು ||೯೫||

ಹತ್ತಿಸಿದರು ಬಿಲ್ಲ ರಾಮನ ಬಂಟರು
ಒತ್ತಿ ಗೊಲೆಯನೇರಿಸುತ್ತ ।
ಸತ್ತರು ನಮ್ಮ ಕೈಯಲಿ ದಾನವರೆಂದು
ಮೃತ್ಯುವ ಕೆಣಕಿದರೆಂದು ॥೯೬॥

ಅಡಗಿದ ಪರಿವಾರ ಪಡೆಯ ಇದಿರಾಗಿ
ಕೊಡಬೆ ಬಾಣವ ಬಿಡುತಿರಲು ।
ಅಡಿಗೆ ಅಟ್ಟಂತೆ ಕುದುರೆ ಪವುಜೆಲ್ಲವು
ಮಿಡುಕಲಮ್ಮರು ಮುಂದುಗಡೆಯೆ ॥೯೭॥

ಜೋಡನೊಡೆದು ಮೊನೆ ಮೂಡಿತು ಆಚೆಗೆ
ಕೇಡ ನಾನೆಂತು ಬಣ್ಣಿಸುವೆ ।
ಇರಿದಾಡಿದನು ತೇಜಿಗಳ ರಾವುತರನು
ನೋಡಿ ನಗುತ ಕಾಟಣ್ಣ ॥೯೮॥

ಕಂಡರು ಪರಿವಾರ ಕಾಟನ ಧೈರ್ಯವ
ಹಿಂಡು ವೈರಿಯ ಗಂಡನೆಂದು ಪ್ರ।
ಚಂಡ ವಿಕ್ರಮ ಕಾಟ ಸಲುವುದು ನಿನಗೆಂದು
ಕೊಂಡಾಡಿದರು ಪರಿವಾರ ॥೯೯॥

ಒಂದಾಯಿತು ಪರಿವಾರ ಖಾನರೇರಿದುದನು
ಕೊಂಡಾಡಲೆಯಿದಿದರು ।
ಕಂಡೆಯ ಕರಕಸ ಸಿಂಗಾಡಿಗಳನು ತಾ
ತುಂಡು ತುಂಡಾಗೆಚ್ಚು ಕೆಡಹಿ ॥೧೦೦॥

ತರಹರಿಸುತ ತಾಳಿ ಹಿರಿದು ಸಂತೋಷವ
ಸುರಿತಾಳ ವೈರಿ ನೀನಹುದೊ ।
ಧುರಧೀರ ಕಾಟಗೆ ಸರಿಯಹರಿಲ್ಲೆಂದು
ಪರಿವಾರವೆಲ್ಲ ಕೊಂಡಾಡೆ ॥೧೦೧॥

ದೊಡ್ಡ ಹೊಟ್ಟೆಯ ಡೊಳ್ಳಿನ ರಾವುತರೆಲ್ಲ
ರಡ್ಡಗಟ್ಟಿದನು ಕಾಟಣ್ಣ ।
ಗಡ್ಡದಣ್ಣಗಳಿರಾ ಎಲ್ಲಿಗೋಡುವಿರೆಂದು
ಸಡ್ಡೆ ಮಾಡದೆ ನಗುತಿರ್ದ ॥೧೦೨॥

ಹಕ್ಕರಿಕೆಯ ಕೊಯಿವುತ ತಲೆ ಟವುಳಿಯ
ಧಿಕ್ಕನೆ ಕಳಚಿ ಬಿಸುಡುತ ।

ಜಕ್ಕಿಣಿಯಾಟ[ವ] ಆಡಿಸಿ ಖಾನರ
ಧಿಕ್ಕನೆ ಕೊಯ್ದನು ಮೂಗ ||೧೦೩||

ಅಲ್ಲಿ ಬೇಡರ ಪಡೆ ಕೋಲ ಕೊಂಡೆಸೆಯಲು
ಕೀಲಿಸಿ ಕಾಲ ಹಕ್ಕರಿಕೆ।
ಕೋಲ ಕುದುರೆ ತಟ್ಟುಚ್ಚಿ ಎರಡು ಕಾಲು
ಬೀಳಲು ಹಲ್ಲುಗಿರಿವುತ ||೧೦೪||

ಹರಿದ ಹಕ್ಕರಿಕೆಯ ಕೊರಳು ಕೊಯಿಸಿಕೊಂಡು
ತರಿದರು ಮಂಡೆ ಜಡೆಗಳ।
ಮುರಿದರು ಹಲ್ಲನು ತಪ್ಪಕ್ಕೆ ಬಾರಿಸುತ
ಮರಳಿ ಬಿದ್ದರು ದಾನವರು ||೧೦೫||

ಹೋಗಲು ಕೈಗಳ ಹಿಡಿದುಕೊಂಡರು ಮತ್ತೆ
ಬಾಗಿ ಜೋಲುವ ಬಸವಳಿದು।
ಈಗಲು ನಮಗೆಯು ನೀನೆ ಕರ್ತನು ಎಂದು
ಲಾಗಿಸಿ ಪುಟನೆಗೆಯುತಲಿ ||೧೦೬||

ಮಂಡೆಯ ಹೂಡಿ ತಿರುವುಗಳ ಕೊಂಡರು
ದಿಂಡುರುಳುಗಳ ಉರುಳುತ್ತ।
ಕಂಡರೆ ಪರಿವಾರ ಕಾಟಣ್ಣ ನಮ್ಮನು
ಬಂಡದೆಯು ಬಿಟ್ಟು ಕಳುಹೋ ||೧೦೭||

ಕೆಲೆದು ಎಲ್ಲ ರಾವುತರಿಗೆ ಕವಿಚಿಕೊಂಡು
ಹಲವು ಜಕ್ಕಣಿಯ ಆಡುತಲಿ।
ಚಲದಂಕ ಕಾಟಣ್ಣಾ ಕೊಲಬೇಡ ನಮ್ಮನು
ಕಳುಹೆಂದು ಕಾಲ ಹಿಡಿದರು ||೧೦೮||

ಮುಂದಳ ಮೂಗನು ಹಿಂದಳ ಜಡೆಯನು
ಭಂಗಿಸಿ ಕೊಯಿದ ಕಾಟಣ್ಣ।
ಇಂದೆಮ್ಮ ಕುದುರೆಯನಿತ್ತು ಕಳುಹಿದರೆ
ಮುಂದಣ ಶಿಶು ನಿನ್ನ ಹೆಸರು ||೧೦೯||

ಎಂದರೆ ಕುದುರೆಯ ಬಿಟ್ಟು ಕಳುಹಿದರೆ
ಇಂದು ನೇಮಿಗೆ ಹೇಳೆಂದ।
ಬಂದನು ಹಿಂದೆ ತಿರುಗಿ ನೋಡುತಾತನು
ಒಂದು ಬುದ್ಧಿಯನೆಣಿಸಿದನು ||೧೧೦||

ಸತ್ತ ಖಾನರು ಕುದುರೆಯ ಹಿಡಿಕೊಂಡರು
ಎತ್ತಿಕೊಂಡರು ಬಿದ್ದಾಯುಧವ ।
ಇತ್ತೆರದಲಿ ಕುದುರೆ[ಯು] ಮೂರು ತನಗಿಲ್ಲ
ಮತ್ತೆ ಬಂದ[ರು] ನೇಮಿಯೆಡೆಗೆ ||೧೧||

ಬಂದು ನೇಮಿಯ ವಾಲಗದೊಳು ನಿಂದರು
ಚಂದದಿ ಸಲಾಮ ಮಾಡಿ ।
ಕೊಂ[ಡ]ರೆ ಆಯುಧವನೆಲ್ಲವ ನೋಡಿ
ಮುಂದಣ ಮೂಗೇನಾಯಿತೆಂದ ||೧೨||

ಒಡನೆ ಹಿಡಿದ ಕಾಟಿರಾವುತ ಕುದುರೆಯ
ಬಿಡದೆ ರಾಮನಾಥ[ನಿಗೆಂ]ದು।
ಕಡಿದನು ಮೂಗ ದಾನವ ಹೋಗಾಡಿದ
ಹಿಡಿದೆ ರಾಮನ ಕುದುರೆಯನು ||೧೩||

ತಡೆಯದೆ ನಾ ಬೇಡರ ಕೊಂದು ಹರಡಿದೆ
ಒಡೆಯನೆ ನೇಮಿ ಚಿತ್ತೈಸು ।
ಸುಡು ಸಂಸಾರವ ಬಿಡುವೆನು ಪ್ರಾಣವ
ಹಿಡಿವೆನು ಕಾಟ ರಾವುತನ ||೧೪||

ಏನೆಲೆ ಜೀವಗಳ್ಳ ನೀ ಓಡಿ ಬಂದೆಮ್ಮ
ಮಾನಭಂಗವ ಮಾಡಿದೆಯಾ ।
ಹೀನದ ಮಾತನಾಡಿದೆ ತಿವಿಯೆನುತಲಿ
ಆ ನೇಮಿ ಕಡಿಸೆಂದನವನ ||೧೫||

ಅಂದ ಅಷ್ಟೊತ್ತಿಗೆ ಬಂದರು ಖಾನರು
ಅಂದವ ನೋಡು ನಿನ್ನವರ ।
ಚಂದದ ಮೈಜೋಡುಗಳು ಕುದುರೆಗಳೆಲ್ಲ
ಮುಂದೇನಾದವು ನೀವು ಕೇಳಿ ||೧೬||

ಹಿಡಿದ ಸಿಂಗಾಡಿ[ಯ] ಜ[ಡಿದ] ಕುದುರೆಗಳ
ಒಡೆಯರಿ[ಗೆರವು] ಮಾಡಿದನು ।
ಬಿಡಿಸಿಕೊಂಡೆವು ಅಂಬೆಗಾಲಿಕ್ಕಿ ಕಾಟನ
ಒಡನೆ ಶಿಶು[ವಿ]ನ ಹೆಸರಿಟ್ಟು ||೧೭||

ಹರಿದ ಹಲ್ಲಣಗ[ಳ] ಮುರಿದ ಹಕ್ಕರಿಕೆ[ಯ]
ತರಿವುತ್ತದೆಲ್ಲರನವನು ।

ಹೊರೆಯ ಹೊತ್ತು ಜಕ್ಕಣಿಗಳನಾಡಿದ
ಪರಿ ತೋರಿಸೆಂದ ಒಡೆಯರಿಗೆ ||೧೧೮||

ನೊಂದು ಭಂಗಿತರಾಗಿ ಬಂದರು ಖಾನರು
ಬಂದೆವು ಭಂಗವು [ಆ]ಗಿ।
ಕೊಂದ ಕೈಗಳನೆತ್ತಿ ಕೈಸೆರೆಗೊಟ್ಟೆವು
ಎಂದು ಬಿದ್ದರು ಪಾದದಲಿ ||೧೧೯||

ಅತ್ತ ಕಾಟನ ಕಾಳಗವ ನಾನೇನೆಂಬೆ
ಮೊತ್ತದ ಬಿಲ್ಲುಗಾರಿಕೆಯು ।
ಸುತ್ತಲಡ್ಡಗಟ್ಟಿ ಕೆಡಹಿದನೆಲ್ಲರ
ಸತ್ತರು ತುರುಕ ರಾವುತರು ||೧೨೦||

ಕರುಳು ಬಾಯಲಿ ಕಾರಿತು ಪರಿವಾರವು
ಸರಳು ತಾಗಿದ ದಾನವರ ।
ನರಳುತಿಹರು ಕಾಟ ಕೆರಳಿದನೆಂದಂಜಿ
ಹೊರಳುತಿಹರು ರಕ್ತದಲ್ಲಿ ||೧೨೧||

ಮುರಿದರು ಖಾನರ ಹುರಿದರು ಕಾಲಾಳ
ಇರಿದು ತೇಜಿಯ ಕೆಡಹಿದರು ।
ಬರಿಕೈದರು ರಾಮನ ಎಕ್ಕಟಿಗರು
ಉರಿವ ಪೌಜ ತುರುಕರನು ||೧೨೨||

ಕೊರಳಿಗೆ ಸಿಂಗಾಡಿಯ ಹಾಕಿ ಕೊಂದರು
ಬೆರಳ ಕಚ್ಚಿಯೆ ಬಾಯಬಿಡುತ ।
ಸರಳು ತಾಗಿದೆಯೆಂದು ಕಾಟನ ಹಿಂದಕೆ
ಮರೆಬಿದ್ದು ಬಿನ್ನವಿಸಿದರು ||೧೨೩||

ಹಿರಿಯ ಖಾನರು ಕಾಟನ ಬಳಿಗೈತಂದು
ಮರಳಿ ಬಂದೆವು ನಿಮ್ಮ ಬಸುರ ।
ಸುರಿತಾಳ ನಮ್ಮನು ಕಡಿಯಲಿ [ಇ]ರಿಯಲಿ
ತಿರುಗಿ ನೋಡೆವು ನಿಮ್ಮ ಕಡೆಗೆ ||೧೨೪||

ರಣದೊಳಗೆಲ್ಲವು ರಣಮಯ ಹೆಣಮಯ
ನೆಣ ನೆತ್ತರ ಕೆಸರೇಳೆ ।
ತೆಗೆವರಿಲ್ಲೆಂದು ತಿರುಗಿದ ಕಾಟಣ್ಣ
ಹೊಣಕೆಯ ಪರಿವಾರ ಸಹಿತ ||೧೨೫||

ಕರ್ತನು ನಿಮಗೆ ಕರುಣವಾಗಲಿ ಸ್ವಾಮಿ
ಕರ್ತ ಕಾಟಣ್ಣನೆಂದೆನುತ ।
ಅತ್ತಲಿತ್ತಲಿ ತಿರುಗಿ ನೋಡುತ ಕಾಟ
ಮತ್ತ ಬಾಹೆ[ವು] ಎಂದೆನುತ ||೧೨೬||

ಕರೆದನು ತನ್ನ ಮಂದಿಯ ಕಾಟಣ್ಣನು
ಧುರದೊಳು ಅವರ ಮನ್ನಿಸಿದ ।
ಕರದ [ಕೈದುಗಳನು] ತಕ್ಕೊಂಡು ಕಾಟಣ್ಣ
ಕೊರತೆ ಬಂದವು ಓಡಿರೆಂದ ||೧೨೭||

ಕಿ[ತ್ತು] ಕತ್ತಿಯ [ಕಣೆ]ವೆಯ ಅಡ್ಡಗಟ್ಟಿರೆ
ಒತ್ತಿ [ತು]ಳಿದು ಖಾನರನು ।
ಇತ್ತೆನು ಪ್ರಾಣವ ನಿಮ[ಗೆ] ಎಂದೆನುತಲಿ
ಮತ್ತೆ ಕಾಟಣ[ನ] ಕರುಣದಲಿ ||೧೨೮||

ಬಿದ್ದು ಕೆಡೆದ ಮಂದಿಯ ಕಂಡು ಒಯ್ಯೆಂದು
ಇದ್ದ ಖಾನರಿಗೆ ನಂಬುಗೆಯ ।
ಹೊದ್ದಿ ನಡೆ[ಯಿರೆಂದ ಬೆಸಗೊಂ]ಡು ಹೋಯೆಂದು
ಬಿದ್ದ ಹೆಣನು ನರಳು[ತಿರೆ] ||೧೨೯||

ಚಿನ್ನಗಾಳೆಯ[ನೆತ್ತಿ]ಸಿ ಕಾಟ ಮರಳಿದ
ತನ್ನಯ ಪರಿವಾರ ಸಹಿತ ।
ಮನ್ನಿಸಿಕೊಂಬ ನಾನೂರು ಬಿಲ್ಲಾಳನು
ಸನ್ನೆ ಮಾಡಲು ತಿರುಗಿದರು ||೧೩೦||

ಕಂಪಿಲರಾಯನ ಸುತನು ರಾಮಯ್ಯನು
ಚಿಂತೆ ದುಮ್ಮಾನದೊಳಿರ್ದ ।
ಸಂತೋಷ ಸಹಿತವ[ಗಲಿ] ಒಳಹೊಕ್ಕನು
ಮತ್ತೆ ರಾಮನು [ಬಳಲಿದ] ||೧೩೧||

ವನಜಾಕ್ಷಿ ಹರಿಯಮ್ಮ ಮಗಗೆ ಹರುಷದೊಳು
ತ[ನಿರಸವನು] ಕಳುಹಿದಳು ।
ಮನದೊಳು ಬೇಯೆ ರತ್ನಾಜಿ[ಯು ಇತ್ತಲು]
ಹಿರಿಯ ಕಾಟಣ್ಣನೇನಾದ ||೧೩೨||

ಒಂದಾಗಿ ಉಂಡು ಒಡನೆ ಕೈತೊಳೆದ[ನು]
[ಇಂ]ದು ಹೆಂಡಿರು ಹೊರತಾಗಿ ।

ಇಂದೆಮಗೆಣೆಯಿಲ್ಲವೊ ಒಬ್ಬ[ನಾ]ಡಿದೆ
ನಿಂದೆಯೊ ಸಂಗ್ರಾಮ ಧೀರ ||೧೩೩||

ಎಂದು ಚಿಂತಿಸುತಿರೆ ಗಡಿಯ ಮಂದಿಯು ಹೋಗಿ
ಬಂದನು ಎಂದು ಹೇಳಿದರು ।
ಬಂದವಗುಡುಗೊರೆಯಿತ್ತುಪಚರಿಸಲು
ಬಂದನು ಕಾಟಣ್ಣನಾಗ ||೧೩೪||

ಹೊಕ್ಕನು ತುರುಕರ ಲೆಕ್ಕವಿಲ್ಲದೆ ಕೊಂದ
ಸಿಕ್ಕಿದ ಖಾನರ ಕೊಂದ ।
ಹಕ್ಕರಿಕೆಯು ಹಲ್ಲಣವು ಸಂಜೋಗವು
ಲಕ್ಕಸ ಕುದುರೆಯ ತಂದ ||೧೩೫||

ಆಡಿದ ಮಾತಿಗೆ ಮೆಚ್ಚಿ ತೋರಣ ಕಟ್ಟಿ
ಹೊಡೆದವು ಭೇರಿ ನಿಸ್ಸಾಳ ।
ಪೊಡವೀಶ ಬಂದು ಕುಳಿತನು ವಾಲಗದಲ್ಲಿ
ಬಿಡದೆ ಹೆಗ್ಗಾಳೆ ಸಾರಿದವು ||೧೩೬||

ಚಿನ್ನಗಾಳೆಯ ಧ್ವನಿ ಕೇಳಿದ ರಾಮನು
ಚೆನ್ನಾಗಿ ಹರುಷವ ತಾಳಿ ।
ಹೊನ್ನ ಆರಿತಿಯನೆತ್ತಲು ಕಾಟಣ್ಣಗೆ
ಕನ್ನೆಯರೆಯಿದರೊಗ್ಗಿನಲಿ ||೧೩೭||

ಹಿಡಿಯಾಳು ಕುದುರೆಯು ತುರುಕರ ಹಿಡಿಕೊಂಡು
ಕಡುಗಲಿ ಕಾಟ ಬರುತಲಿ ।
ಮಿಡುಕುವರಿಗೆ ಕಡೆಯಿಲ್ಲೆಂದು ಪಥದೊಳು
ನಡೆತಂದನು ಕಾಟಣ್ಣ ||೧೩೮||

ಒಡೆಯನ ಪಾದಕ್ಕೆ ತಂದು ನಿವಾಳಿಸಿ
ಪೊಡಮಟ್ಟು ಒಡನೆ ಎತ್ತಿದನು ।
ಕಡೆಯ ಪೊಂಗ[ಳನಿ]ತ್ತು ಮನ್ನಿಸಿ ಕಾಟನ
ಬಿಡದೆ ಬಿಗಿದು ತಬ್ಬಿಕೊಂಡ ||೧೩೯||

ಹರನ ನೆನೆದು ಹರಿಯಮ್ಮಗೆ ವಂದಿ[ಸೆ]
ದೊರೆ ತನ್ನ ಮಗನ ಹರಿಸಿದನು ।
ತರತರದ ಸ್ತ್ರೀಯರಾರತಿಯ ಎತ್ತಲು
ಭರದಿ ಹೊಕ್ಕಲ್ಲಿ ಸಂಧಿ ಮುಗಿಯೆ ||೧೪೦||

ಅಂತು ಸಂಧಿ ೪ಕ್ಕಂ ಪದ ೩೬೯ [>೩೮೩]ಕ್ಕಂ ಮಂಗಳ ಮಹಾಶ್ರೀ.

❖❖

ಸಂಧಿ : ಐದು

❖

ಓರುಗಲ್ಲಿನಿಂದ ಬೊಲ್ಲನನ್ನು ತಂದುದು

ಸಕನ ಸಾಕನ ದೇಹ ಸಕನ ಮಧ್ಯದೊಳಿಟ್ಟು
ಸಕವೈರಿ ಸಕಲವೊಸಾವೇಶ ||೧||

ಗೋವ ಪಿಡಿದನನುಜೆಗೆ ಗೋವನಿ[ತ್ರ]ನೆ
ಗೋವ ಪಿಡಿದವಗೆ ಪಿತನೆ ।
ಗೋವಿಂದ ಗೋಪನ ಶಿವನೆಚ್ಚನೆ ಶಿವ
ಗೋವಿಂದ ಜನರ ಪೆತ್ತವನೆ ||೨||

ಬಿರಿದುಳ್ಳ ಎಪ್ಪತಿರಾಜನ ಬೊಲ್ಲನ
ಧುರಧೀರ ರುದ್ರರಾಯನೊಳು।
ಭರದಿಂದ ಓರುಗಲ್ಲಲಿ ಕಾದಿ ರಾಮನು
ತರುವ ಚರಿತೆಯನು ಕೇಳುವುದು ||೩||

ಇತ್ತ ವಾಲಗಕೆ ಕಂಪಿಲರಾಯ ಹೋಗಲು
ಮತ್ತೆ ಕುಮಾರರು ಬಂದು ।
ಉತ್ತಮ ಹತ್ತು ತೇಜಿಯ ಮಾಜಿದರಯ್ಯ
ಚಿತ್ರೈಸುಯೆಂದು ಬೆಸಸಿದರು ||೪||*

ಒಂದೊಂದು ಜಗಳವ ಪೇ[ಳುತ ಬಿದ್ದರು]
ತಂದೆಯ ಪಾದದ ಮೇಲೆ ।
ಒಂದೂರ ಪಾಲಿಸು ನಾವು ಇಲ್ಲಿದ್ದರೆ
ಕುಂದದು ಜಗಳವಿಂದಿನಲಿ ||೫|| ೪-೭೫/....

---

* ಕಥೆಗೆ ಸಂಬಂಧ ಕಲ್ಪಿಸುವ ಸಲುವಾಗಿ ಈ ಪದ್ಯವನ್ನು 'ಹೊಸಕುಮಾರ ರಾಮನ ಸಾಂಗತ್ಯ" (೪-೭೩) ದಿಂದ ಇಲ್ಲಿ ಎತ್ತಿಕೊಳ್ಳಲಾಗಿದೆ. (ಸಂ)

ಮಕ್ಕಳ ದುಃಖದ ನುಡಿಗೇಳಿ ಕಂಪಿಲ
ಧಿಕ್ಕನೆ ರಾಮನ ಕರೆ[ಸೆ] ।
ಕಕ್ಕಸದಿ[ಹ] 'ಕುಮರರ ಗಂಡ'ನೆಂದು
ಉಕ್ಕಡಗಾಳೆ ಸಾರಿದವು ॥೬॥ ೪-೭೭/....

ಸ್ವಾಮಿ ಚಿತ್ತೈಸೆಂದು ನುಡಿಯೆ ಕುಮಾರರು
ರಾಮನ ಕಾಳೆಯ ಬಿರಿದು ।
ಕಾಮಸನ್ನಿಭ ಬಂದ ವಹಿಲದಿಂದ ನಿ
ಸ್ಸೀಮ ಕಂಪಿಲಗೆರಗಿದೆ[ನು] ॥೭॥ ೪-೭೬/...

[ತಂದೆ] ಕಂಪಿಲರಾಯ ತುಂಬಿದೋಲಗದೊಳು
ತಂದ ತೇಜಿಯ ತರಿಸೆಂದ ।
ಒಂದು ಮಾತಿಗೆ ಕರ ಬೇಗ ತರಿಸಿದನು
ಚೆಂದವುಳ್ಳ ತೇಜಿಗಳನು ॥೮॥ ೪-೭೮/...

ತುರಗವ ನೋಡಿ ಕಂಪಿಲ[ರಾಯ] ತನ್ನ[ಯ]
ಹಿರಿಯ ಕುಮಾರರಿಗಿತ್ತ ।
ಧುರದೊಳು ಹಿಡಿದಂಥ ಕುದುರೆ ಅವರಿಗಿತ್ತೆ
[ನಿರಿ]ಯ ಹೊತ್ತವ[ರೆ] ಹೆಣ್ಣಾಗಿ ॥೯॥ ೪-೭೯/...

ಎನ್ನ ಎಕ್ಕಟಿಗರು ಹಿಡಿತಂದ ತೇಜಿಯ
ನಿನ್ನ ಕುಮಾರರಿಗಿತ್ತೆ ।
ಅನ್ಯಾಯ ನ್ಯಾಯ[ವೆಂಬುವದ] ವಿಚಾರಿ[ಸು]
[ನನ್ನಿಯು]ಳ್ಳ ರಾಯ [ನೀವೆಂಬೆ] ॥೧೦॥ ೪-೮೨/...

ಕುಂದನಾಡಿದೆಯೊ ನೀ ಹಿರಿಯ ಕುಮಾರರ
ಮುಂದೆ ಅವರ ಗಂಡನೆಂ[ದೆ] ।
ಒಂದು ಪರಿಯಲಿ ಬಿರಿದನು ಹೊಗಳಿಸಿದೆ
ನಿಂದೆಯ ನುಡಿದೆ ಪಾತಕನೆ ॥೧೧॥ ೪-೮೩/....

ಗಂಡನು ಗಳಿಸಿ ತಂದರೆ ಹೆಂಡಿರುಂಬೋರು
ಮಂಡಲದೊಳಗದನರಿಯಾ ।
ಕಂಡೆ ಕಂಪಿಲ ನಿ[ನ್ನೈವರು] ಕುವರರು
ಮುಂಡೆಗೂಳನು ತಿಂಬುತಹರೆ ॥೧೨॥ ೪-೮೦/...

ಬಾಯ ಹೊಯಿಸಿಕೊಂಬ ಮಾತನಾಡಿದೆ ರಾಮ
ನ್ಯಾಯದ ಮೇಗಳಿನಿತಿಲ್ಲ ।

ತಾಯ ತಕ್ಕೈಸಿಕೊಂಬರೆ ತೋ[ಳು] ಹಿರಿದೆಂದು
ಕಾಯ ಸೊಕ್ಕಿನ ಮಾತ ಬೇಡ ||೧೩|| ೪-೮೧/...

ಲಾಯದೊಳಗೆ ಹುಲ್ಲ ಕವಣವ ಹಾಕಿನ್ನು ಪಾ
ಡಿ[ಯ]ಕಾನ ಮಾಡ[ಲಿಯ]ವರು ।
ರಾಯ ಮನ್ನೆಯ ಮಂಡಲಿಕ[ರಿಂದ ತಂದುರೆ]
ಆಯ್ದು ತೇಜಿಯ ನಾನೇರುವೆನು ||೧೪||

ಜಗತಾಪಿ ತೆಲುಗನ ಹಿಡಿದ ಪಂಥವು ಬೇಡ
ಉಗಿಸುವೆ ನಿನ್ನ ಚರ್ಮವನು ।
ಹಗೆಯವನಲ್ಲದೆ ಹಿತವನಲ್ಲವೊ ರಾಮ
ಹೋಗೆನ್ನ ಪಟ್ಟಣದಿಂದ ||೧೫||

ಧರೆಯ ರಾಯರು ಆಳ್ವುದು ಎನ್ನ ಪಟ್ಟಣ
ಬರಿಸು ಭಾಷೆಯ ಎನ್ನ ತಂದೆ ।
ಉರವಣಿ[ಸುವ] ಬೊಲ್ಲ[ನ] ಬಿ[ಡೆ]ನು [ನಾನು]
ಬೆರಸಿ ಹೋಗುವೆ ಮೂರು ದಿನಕೆ ||೧೬||

[ಬೊಲ್ಲ]ನೆಂಬೋದು ಕಲ್ಲ [ಪ್ರ]ಯಾಸವದು
ಹೊಲ್ಲ ನುಡಿಯ ಬೇಡ ರಾಮ ।
ಬಲ್ಲಿದತನದಲ್ಲಿ ನಮ್ಮ ಮಕ್ಕಳ ಕೂಡೆ
ನಿಲ್ಲದಾಡಿದ ಪಂಥ ಬೇಡ ||೧೭||

ಚೆನ್ನಿಗ ರಾಮನೊಡನೆ ಕಾಳೆ ಸಾರಿತು
ಬಿನ್ನಾಣ ಬಿರಿದನುಗ್ಗಡಿಸಿ ।
ಹೊ[ನ್ನನು] ಕೊ[ಟ್ಟು] ಕುದುರೆಯ [ಕೊಂಡೆನೆಂಬಂಥ]
ಉನ್ನಂತ ರಾಯರ ಗಂಡ ||೧೮|| ೪-೮೫/...

ತಂದೆಯ ಕೈಯಲಿ ಜೀತವನು ತಿಂಬ
ಹಂದೆ ಕುಮಾರರ ಗಂಡ ।
ಚಂದ ಚಂದದಿ ಬಿದಿರಿನ ಕಾಳೆ ಸಾರಲು
ಅಂದು ಕೊಮಾರ ರಾಮನಿಗೆ ||೧೯||

ತಂದೆ ಎಂಬುದಕೆ ತಾಳಿದೆನು ನಾನೀಗಲೆ
ಒಂದೊಂದು ಹಲ್ಲ ಕೀಳಿಸುವೆ ।
ಕೊಂದು ಅಟ್ಟುವೆನು ನಿನ್ನಯ ಕುಮಾರರ
ಎಂದು ಕೊಮರರಾಮ ನುಡಿದ ||೨೦||

ಕಣ್ಣ ಕೀಳಿಸಿ ಕಲ್ಲ ಗಾಣಕೆ ಹಾಕುವೆ
ಬೆನ್ನ ಹೊಯಿದು ಅಟ್ಟಿಸುವೆನು ।
ಬಲ್ಲಿದ ರಾಮ ನೀನಿಲ್ಲಿರಬೇಡೆಂದು
ಅಲ್ಲಿ ಕಂಪಿಲರಾಯನೆದ್ದ ॥೨೧॥

ಕಿತ್ತನು ಕಠಾರಿಯ ಕಂಪಿಲರಾಯ
ಮತ್ತೆ ರಾಮನ ಕೊಲ್ಲಬೇಕು ।
ಒತ್ತಿಲಿ ಬೈಚಪ್ಪ ಮಂತ್ರಿಗ........ ನು
ಮತ್ತೆ ಬಿದ್ದನು ಚರಣದಲಿ ॥೨೨॥

ತಂದೆಯು ಮಗನ ಇರಿದು ಕೊಂದ ಸುದ್ದಿಯು
ಎಂದೆಂದಿಗೆ ಲೋಕದೊಳಗೆ ।
ಮುಂದರಿಯದೆ ಕುಮಾರರ ನುಡಿಗೇಳಿ
ಕೊಂದೇನು ಎಂದೆನ್ನಬಹುದೆ ॥೨೩॥

ತಪ್ಪದೆ ನಿನಗೆ ಬಿರಿದು ಸಲುವುದು ರಾ[ಮ]
ಎಪ್ಪತಿರಾಜ ಬೊಲ್ಲನನು ।
ಇಪ್ಪತು ದಿನಕೆ ತಂದರೆ ಬೊಲ್ಲನ ನೀನು
ಇಪ್ಪವರೆಲ್ಲ ಹೆಣ್ಣುಗಳು ॥೨೪॥ ೪-೮೬/...

ಬಿರಿದ [ನು]ಡಿದ ಪಂಥ ಹೆರೆ ಹಿಂಗುವುದೆ ಕೇಳು
ಧುರಧೀರ ಕಂಪಿಲರಾಯ ।
ತರುವೆನು ಎಪ್ಪತಿರಾಯನ ಬೊಲ್ಲನ
ಧುರಗಲಿ ನೀ ಮೆಚ್ಚುವಂತೆ ॥೨೫॥ ೪-೮೭/...

ತಂದೆಯ ಕೂಡೆ ಪಂಥವಮಾಡಿ ರಾಮಯ್ಯ
ಅಂದು ಉದಯದ ವೇಳೆಯಲಿ ।
ಬಂದು ಬಿನ್ನವಿಸಿದ ಹರಿಯಲದೇವಿಗೆ
ಒಂದೊಂದು ಪರಿಯ ಜಗಳವ ॥೨೬॥ ೫-೩/...

ತಾಯ ಪಾದಕೆ ಶರಣೆಂದು ರಾಮಯ್ಯನು
ರಾಯ ಕಂಪಿಲಗೆ ವಂದಿಸಿದ ।
ಪ್ರೀಯದ ರಾಣಿಯರನು ಮನ್ನಿಸಿ ತನ್ನ
ಆಯುಧವನು ಅಳವಡಿಸಿ ॥೨೭॥

ಇರಿ[ಸಿ]ದ ತಂದೆಯೊತ್ತಿಲಿ ಬಾದೂರನ
ಧುರಧೀರ ಚೆನ್ನಿಗರಾಮ ।
ದೊರೆದೊರೆಗಳ ಕೂಡಿಕೊಂಡು ಚೆನ್ನಿಗರಾಮ
ಹೊರಹೊಂಟ ತನ್ನ ಪಟ್ಟಣವ ॥೨೮॥

ಹಲವು ದೈವಕೆ ನಿನ್ನ ಹರಸಿ ಹೆತ್ತೆನೊ ಕಂದ
ಚೆಲುವರ ದೇವ ಚೆನ್ನಿಗನೆ ।
ಕಲಹವ ಮಾಡಿ ಬೊಲ್ಲನ ತರಹೋಗುವ
ಛಲವು ಯಾತಕೊ ಕಂದ ನಿನಗೆ ॥೨೯॥ ೫-೪/...

ಹುಟ್ಟಿದ ಮೊದಲು ಕಂಪಿಲರಾಯ ನಮ್ಮನು
ಕಷ್ಟವ ನುಡಿವುದ ಬಲ್ಲೆ ।
ಸೃಷ್ಟಿಯ ರಾಯ[ನ] ಲೋಲ ಕುಮಾರ[ನು]
ಕೆಟ್ಟು ಹೋ[ಗಲಿ] ಎಂಬುತಹನೆ ॥೩೦॥ ೫-೫/...

ಜಾತಸ್ಯ ಮರಣ ತಪ್ಪದು ಕೇಳು ಹರಿಯಮ್ಮ
ಭೂತಳದೊಳು ರುದ್ರಸುತ[ನ] ।
ಧಾತುಗೆಡಿಸಿ ಕಾದಿ ಬೊಲ್ಲನ ತರುವೆನು
ಮಾತ [ಲಾ]ಲಿ[ಸಿ] ಕೇಳು ಅಮ್ಮ ॥೩೧॥ ೫-೬/...

ರನ್ನ ಮಾಣಿಕ ಕಾಲ್ಕಡೆಯವನಿತ್ತಳು
ಚೆನ್ನಾಗಿ ಮೈದುಡಿಗೆಗಳ।
ಹೊನ್ನನಿತ್ತಳು ಲಕ್ಷ ಸಂಖ್ಯೆಯನಾ ಕ್ಷಣ
ಉನ್ನಂತ ಹರಕೆಯ ಕೊಟ್ಟು ॥೩೨॥ ೫-೭/...

ಹೆತ್ತ ತಾಯ ಕೈಯಲಿ ಕಳುಹಿಸಿಕೊಂಡು
ಮೊತ್ತದ ಪರಿವಾರ ಸಹಿತ ।
ಚಿ[ತ್ತಜ] ಸಮರೂಪ ದುರ್ಗವನೇರಿದ
ಮತ್ತೆ ನೋಡಿದ ತನ್ನ ಫೌಜ ॥೩೩॥ ೫-೮/...

ಹೊನ್ನ ಕಟ್ಟಿನ ಬಿಲ್ಲು ಹರಿಗೆಯ ಪರಿವಾರ
ಹನ್ನೆರಡು ಸಾವಿರ ಮಂದಿ ।
ಇನ್ನೂರು ತುಳಿ[ಲ] ಮುನ್ನೂರು ಪಾಯಿಕರೆಲ್ಲ
ಚೆನ್ನಾಗಿ ಫೌಜುದೋರಿದರು ॥೩೪॥ ೫-೯& ೧೦/...

ಧೀರರು ನಡೆಯಿತು ಆರು ಸಾವಿರ ಮಂದಿ
ಭೋರನೆ ಐನೂರು ತುರಗ ।

ಧಾರುಣಿಯನು ಹೊತ್ತ ಸರ್ಪನ ಹೆಡೆಯಂತೆ
ಸೇರಿತು ಸಾಲು ಸತ್ತಿಗೆಯು ||೩೫||*

ಲಗ್ಗೆವರೆಯು ತಪ್ಪಕ್ಕೆ ವೇಣುನಾದವು
ಬೊಬ್ಬು ಬೊಬ್ಬುಳು ವೀರ ರವುಡೆ ।
ಹೆಚ್ಚಾರಿಯಸು ಎಡಬಲದ ಗಡಣದಲ್ಲಿ
ಹಿಗ್ಗಿ ನಗುತ ರಾಮ ನಡೆದ ||೩೬||

ಮೊತ್ತದ ಪರಿವಾರವನು ಎಲ್ಲರ ನೋಡಿ
ಸತ್ಯಸಾಗರ[ನು] ನಗುತ ।
ಮೃತ್ಯುಂಜಯ ಬಲ್ಲನೆನುತ ರಾಮಯ್ಯನು
ಹತ್ತಿ ಓರ್ಗಲ್ಲ ಪಥವ ||೩೭||]

ಎಕ್ಕಟಿಗರು ಪರಿವಾರ ಸಹಿತ ರಾಮ
ತೆಕ್ಕಲಕೋಟೆಗೆ ಬಂದ ।
ಇಕ್ಕೆಲದಲ್ಲಿ ಮಂತ್ರಿ ಮನ್ನೇರು ಸಹಿತಲಿ
ದೊಕ್ಕನೆ ಮುಂದಕೆ ಕದಲಿ ||೩೮||

ಮೇದಿನಿ ಮೀಸರ ಗಂಡ ಚೆನ್ನಿಗರಾಮ
ಮಾದೇವನ ಕರುಣದಲಿ ।
ಸಾಧಿಸಿ ಬೊಲ್ಲನ ಹಿಡಿತಹ ಪಂಥದಲಿ
ಆದವಾನಿಗೆ ಬಂದನಾಗ ||೩೯||

ಮಂದಿ ಕುದುರೆ ಸಹ ಪಯಣ ಪಯಣದಲಿ
ಕಂದನ[ವೊಳಲಿ]ಗೆ ಬಂದ ।
ಚಂದ್ರನ ಕಾಲವೆನಿ[ಸೆ] ಸೂರಿ[ಯ ಸ್ವಾಮಿ]
ಬಂದು ಇಳಿದ ಪಡುವಲಕೆ ||೪೦||

ಪಟ್ಟೆಯ ಮೇಲುಕಟ್ಟಿನ ಶೃಂಗಾರಕೆ
ಇಟ್ಟಿಹ ಹೊನ್ನ ಕಳಸವು ।
ಬಿಟ್ಟಿಹ ಹಲವು ಪರಿಯ ಉಪ್ಪರಗುಡಿ
ದಿಟ್ಟ ರಾಮನ ಪಾಳ್ಯದೊಳಗೆ ||೪೧||

ಎದ್ದು ರಾಮಯ್ಯ ಮಜ್ಜನ ಮುಖದೊಳೆದನು
ಸರ್ಬದಳವು ಸಹವಾಗಿ ।

* ಇಲ್ಲಿ ೨೭ನೆಯ ಪದ್ಯ (ತಾಯಪಾದಕೆ....) ಪುನರುಕ್ತವಾಗಿದೆ (ಮೂ)

[ಸಿದ್ಧವಟ್ಟದಿ] ದಂಡ ಬಿಡಿಸಬೇಕೆನುತಲಿ
ಸಿದ್ಧಾಪುರಕೆ ಬಂದನಾಗ ||೪೨||

ಸಿದ್ಧಾಪುರದಿಂದ ಮುಂದಕೆ ಕದಲಿದ
ಮುದ್ದು ಕುಮಾರ ರಾಮಯ್ಯ ।
ಹೊದ್ದಿದ ಪಾಪ ಹರಿಯಲು ಪಾತಾಳಗಂಗೆ
ಇದ್ದ ಠಾವಿಲಿ ದಂಡ ಬಿಟ್ಟ ||೪೩||

ಪಾತಾಳ ಗಂಗೆಯ ಮಿಂದು ಧರ್ಮವ ಮಾಡಿ
ಆತ ಕೊಮರ ರಾಮಯ್ಯ ।
ಜ್ಯೋತಿಲಿಂಗವ ಕಂಡು ಸಾಷ್ಟಾಂಗವೆರಗಿದ
ಭೂತೇಶನ ಕರುಣದಲಿ ||೪೪||

ಅಲ್ಲಿಂದ ಮುಂದಕೆ ಕದಲಿದ ರಾಮಯ್ಯ
ಎಲ್ಲರು ಪಯಣ ಗತಿಯಲಿ ।
ಎಲ್ಲ ಮಾನ್ಯರು ಸಹ ಕೃಷ್ಣವೇಣಿಗೆ ಬಂದು
ಅಲ್ಲಿ ಪಾಳ್ಯವ ಬಿಡಿಸಿದನು ||೪೫||

ಎಲ್ಲಿಯ ದಂಡು ಎತ್ತಣದೆಂದು ಕೇಳಲು
ಅಲ್ಲಿಯ ತೆಲುಗ ಮನ್ನೆಯರು ।
ತಲ್ಲಣಿಸುತ ಊರ ಬಾಗಿಲ ಹಾಕಿಸಿ
ನಿಲ್ಲದೂಳಿಗನ ಅಟ್ಟಿದರು ||೪೬||

ಊರ ಬಾಗಿಲ ಹಾಕಿ ಆಳವೇರಿಯ ಹತ್ತಿ
ಭೋರೆಂಬ ಪಾಳ್ಯವ ನೋಡಿ ।
ಕಾರ್ಮುಗಿಲಾದಂತೆ ನೋಡಲು ದುಮ್ಮಾನ
ವೀರ ರಾಮನ ಪಾಳ್ಯದೊಳಗೆ ||೪೭||

ಕಟ್ಟಿಗೆಯವರು ಅಳ್ವೇರಿಯಲಿ ನಿಂದು
ದಿಟ್ಟ ರಾಮನವರ ಕರೆಸಿ ।
ಬಿಟ್ಟುಹೋದವನಾವ ದೇಶ ರಾಯೆಂದು ಕಂ
ಗೆಟ್ಟು ಕೇಳಿದರು ಆ ಕ್ಷಣದಿ ||೪೮||

ಸುತ್ತಣ ದೇಶದ ರಾಯ ಚೆನ್ನಿಗರಾಮ
ಹೆತ್ತ ತಂದೆಯ ಕೂಡೆ ಮುನಿದು
ಇತ್ತ ಓರುಗಲ್ಲ ಪ್ರತಾಪನಲ್ಲಿಗೆ
ಅರ್ತಿಯಿಂದಲಿ ಹೋಗುತಹನೆ ||೪೯||

ನೆಟ್ಟನೆ ಆ ಮಾತ ಕೇಳುತ ತೆಲುಗರು
ಇಕ್ಕಿದ ಬಾಗಿಲ ತೆಗೆದು ।
ಚಿಕ್ಕರಾಮಯ್ಯನ ನೋಡಬೇಕೆನುತಲಿ
ಅಕ್ಕರ ಮಿಗೆ ಹರುಷದಲಿ ॥೫೦॥

ಶಾಲು ಸೀರೆಯು ಚಂದ್ರಗಾವಿ ಮಾದಲಗಾವಿ
ಬಾಲೆಯರೆಲ್ಲ ಶೃಂಗರಿಸಿ ।
ಭಾವಜ ಕಳೆಯ ನೋಡಬೇಕೆನುತಲಿ
ಬಾಲೆಯರೆಲ್ಲ ಎಯ್ದಿದರು ॥೫೧॥

[ಪಂಗ]ನಾಮವನಿಟ್ಟು ತೆಲುಗ ಮನ್ನೆ[ರಿಗೆ]ಲ್ಲ
ಶೃಂಗರಿಸಿಯು ಅಲಂಕರಿಸಿ ।
ಶೃಂಗಾರ ಕಳೆಯನ ನೋಡಬೇಕೆನುತಲಿ
ಚೆನ್ನೆಯರೆಲ್ಲ ಎಯ್ದಿದರು ॥೫೨॥

ಉನ್ನಂತ ಕೃಷ್ಣವೇಣಿಗಳುಳ್ಳ ಸ್ತ್ರೀಯರು
ಚೆನ್ನಾಗಿಯು ಅಲಂಕರಿಸಿ ।
ಚೆನ್ನಿಗ ಕಳೆಯನ ನೋಡಬೇಕೆನುತಲಿ
ತುಂಗ ಕುಚೆಯರೆಯ್ದಿದರು ॥೫೩॥

ಬಂದು ಕಂಡರು ಪ್ರಜೆ ಪರಿವಾರ ರಾಮನ
ಕಂಡು ನಿಂದರು ಸ್ಯೆವೆರಗಿನಲಿ ।
ಕಂದರ್ಪರೂಪ ಚೆನ್ನಿಗರಾಮನಹುದೆಂದು
ತಮ್ಮೊಳು ಮೂರ್ಚೆ ತಲ್ಲಣಿಸಿ ॥೫೪॥

ತಲೆಬೇನೆ ಕೆರಳಿತು ಕೆಲವು ಸ್ತ್ರೀಯರಿಗೆಲ್ಲ
ಚೆಲುವ ರಾಮನ ಮುಖ ನೋಡಿ ।
ನಿಲ್ಲಲಾರದೆ ಎಡಬಲದ ಗಣಿಕೆರ ಮೇಲೆ
ಸಲೆ ಮೋಹಿಗಳು ಮ್ಯೆಯೊರಗಿ ॥೫೫॥

ಬ್ರಹ್ಮನೆಂಬವ ಪಾಪಿ ಇಂಥ ರಾಮನ ತಂದು
ನಮಗೆ ಗಂಡನ ಮಾಡದ್ಹೋದ ।
ಗಮ್ಮನೆ ಈತನ ಒಲಿಸಿಕೋ ಬೇಕೆಂದು
ತಮ್ಮ ಹಣೆಗೆ ಮದ್ದನೂಡಿ ॥೫೬॥

ಅಷ್ಟದಿಕ್ಕಿನ ರಾಯರು ಬಂದು ರಾಮಗೆ
ಇಟ್ಟರು ಕಾಣಿಕೆ ಒಲಿದು ।

ನೆಟ್ಟನೆ ಕೈಗಳ ಮುಗಿದು ರಾಮನ ಮುಂದೆ
ಇಟ್ಟಣಿಸಿಯೆ ವಾಲಗದಿ ||೫೭||

ಬಂದ [ಮ]ನ್ನೆಯರಿಗೆ ಗಂಧವಿಳ್ಯವ ಕೊಟ್ಟು
ಚಂದ ಚಂದದಲುಡಗೊಟ್ಟು।
ನಿಂದು ಕೈಮುಗಿದು ಮನ್ನೆಯರ ಕಳುಹಿದನು
ಬಂದು ತೇಜಿಯನು ಏರಿದನು ||೫೮||

ಕಟ್ಟಣಿ[ಲ್ಲದ] ಪಯಣದ ಪಯಣದ ದಂಡು
ದಿಟ್ಟ ರಾಮನು ನಡೆತಂದ ।
ಸೃಷ್ಟಿಯನಾಳುವ ಗುಂಡಬ್ರಹ್ಮ [ದೇ]ವಾಲ್ಯದಿ
ಬಿಟ್ಟನು ಬಿಡಾರಗಳನು ||೫೯|| ೫-೧೩ & ೧೪/...

ಬಿಟ್ಟನು ಬೀಡಾರಗಳ ಚೆನ್ನಿಗರಾಮ
ನೆಟ್ಟನೆ ರಾಯರ ಬಳಿಗೆ ।
ಅಷ್ಟಾವಧಾನದ ಸ್ಥಾನಪತಿಗಳನೀಗ
ಅಷ್ಟ ದಾನದಿ [ವಹಿ]ಲದಲಿ ||೬೦||

ಸಡಗರ ಮಂತ್ರಿ ಮನ್ನೆಯರ ವಾಲಗವಿರೆ
ಒಡೆಯ ಪ್ರತಾಪರುದ್ರ ರಾಯ ।
ಕಡು ವಹಿಲದಿ ಸ್ಥಾನಪತಿಗಳು ಬರೆ
ತಡೆದರು ಕಡೆಯ ಬಾಗಿಲಲಿ ||೬೧||

ಕಂಡು ರಾಮಯ್ಯ ವಾಲೈಸ ಬಂದಿದ್ದಾನೆ
ಗುಂಡಬ್ರಹ್ಮಯ್ಯ ವಾಲಗದಿ ।
ದಂಡುಬಿಟ್ಟದು ಸ್ಥಾನಪತಿಗಳು ನಾವೆಂದು
ಮಂಡಲೇಶ್ವರಗರುಹಿದರು ||೬೨||

ಅರುಹಲಂಗಡಿಯ ಲಿಂಗಯ್ಯನು ರಾಯಗೆ
ಅರಸು ರಾಮನ ಸುದ್ದಿಯನು ।
ಭರದಿಂದ ತಮ್ಮ ತಂದೆಯ ಕೂಡೆ ವಾದಿಸಿ
ಇರದೆ ಬಂದನು ನಿಮ್ಮ ಬಳಿಗೆ ||೬೩||

ಹೇಳಿದ ಬಿನ್ನಹ ಕೇಳಿ ದೇವರದೇವ
ವೀಳೆಯನಿತ್ತನಾ ಕ್ಷಣದಿ ।
ನಾಳಿನ ದಿನಕೆ ಕಾಣಿಸಿಕೊಂಬೆವೆನ್ನುತಲಿ
ಬೀಳುಕೊಂಡನು ಸ್ಥಾನಪತಿಯ ||೬೪|| ೫-೨೦/...

ನಡೆತಂದು ರಾ[ಮನ] ಕಂಡು ಸ್ಥಾನಪತಿ
ಪೊಡವಿಯ ರಾಯರ ಗಂಡ ।
ನುಡಿಸಿದ ನುಡಿ ವಿವರವನು [ಹೇ]ಳಿದ ಇತ್ತ
ಕಡೆಗಂಡ ರವಿಯು ಪಶ್ಚಿಮಕೆ ||೬೫|| ೫-೨೧/...

ಉತ್ತಮ ಬಿನ್ನಹ ಕೇ[ಳಿ] ರಾಮಯ್ಯನು
ಮತ್ತೆ ಸ್ಥಾನಪತಿಯೊಡನೆ ।
ಕತ್ತಲೆ ಜಂಬುನೇರಿಲ ಹಣ್ಣಿನಂದದಿ
ಮುತ್ತಿತು ಧರೆಯನಾವರಿಸಿ ||೬೬|| ೫-೨೩/...

ಚೆನ್ನಿಗ ರಾಮ ಜಳಕ ಮಜ್ಜನ ಮಾಡಿ
ನಲಿವಿಂದಲಾರೋಗಿಸಿದನು ।
ಸುಲಿಲಿತ ಗುಂಡಬ್ರಹ್ಮನ ವಾಲ[ಗ]ದಿ
ಹಲವ ನೆನೆದು ಪವಡಿಸಿದ ||೬೭||

ಕದ್ದ ಕಳ್ಳರ ಹಿಂದೆ ಇಕ್ಕಿಕೊಂಡಿರಿ ಸ್ವಾಮಿ
ಬಿದ್ದಿರಿ ಶೂಲದ ಮೇಲೆ ।
[ಸದ್ಯ] ಫಲವನೀವ [ಶ]ರಣರಾಗಿದ್ದೀರಿ
ಉದ್ಧರಿಸುವುದೆನ್ನ ಮತಿಯ ||೬೮|| ೫-೨೫/...

ತಂದೆಯಾದರೆ ತನ್ನ ಪುತ್ರನ ಕಡೆಯಾದ
ಬಂಧು ಬಳಗ ಎನಗಿಲ್ಲ ।
ಇಂದು ಸೇರಿದೆ ನಿಮ್ಮ ಶ್ರೀಪಾದ ಗತಿಯೆಂದು
ಕುಂದದೆ ಎನ್ನ ರಕ್ಷಿಪುದು ||೬೯||

ಎಪ್ಪತಿರಾಜನ ಬೊಲ್ಲ ಸಿಕ್ಕಲಿ ಸ್ವಾಮಿ
ತಪ್ಪದೆ [ನಾ ಬಲಗೊಂಬೆ] ।
ಒಪ್ಪುವ ಶೂಲದ ಹಬ್ಬದ ಮಾಳ್ಪೆನು
ಛಪ್ಪನ್ನ ದೇಶವರಿಯಲು ||೭೦|| ೫-೨೭/...

ನೆಟ್ಟನೆ ನಿಮ್ಮ ಶೂಲ[ವು ಎ]ದೆವರೆಯೆಂದು
ಮುಟ್ಟಿ ಪೂಜಿಸುವೆ ಚಿತ್ತೈಸು ।
ಇಷ್ಟಾರ್ಥವನು ಬೇಡಿ ರಾಮ ಬಿನ್ನೈಸಿದ
ದಿಟ್ಟ ಪವಡಿಸಲಾ ಕ್ಷಣದಿ ||೭೧|| ೫-೨೮/...

ವರವ ನೋಡುವ ಧೈರ್ಯವ ನೋಡಬೇಕೆಂದು
ಶರಣರು ತಮ್ಮ ಮನದೊಳಗೆ ।

ಕರದ ಕಪಾಲವು ಹಿರಿಯ ಮರುಳ ತಂಡ
ನೆರೆದು ಬಂದರು ರಾಮನೆಡೆಗೆ ||೭೨||

ಶಿರದೊಳು ಮಾಲೆ ಬೊಬ್ಬಿರಿವ ಶೂಲದ ಹೆಣ
ನೆರೆದವು ಅದ್ಭುತವಾಗಿ ।
ಒರಗಿದ ವೇಳೆಯಲಿ ಮದನಾರಿ ಶರಣರು
ಬರೆ ಕದನಗಲಿ ಸ್ವಪ್ನದಲಿ ||೭೩||

ನಡೆದು ಅದ್ಭುತವಾಗಿ ತಡೆಯದೆ ಬಂದನು
[ಒಡನೆ] ಕೈಮುಗಿದು ವಂದಿಸಿದ ।
[ಮೃಡ]ಹರ ಜಯ ಜಯ ಎನುತ ವಂದಿಸಿದನು
[ಕಡು]ಗಲಿ ಚೆನ್ನಿಗರಾಮ ||೭೪||

ಉಟ್ಟ ಪಟ್ಟೆಯ ದಟ್ಟಿ ತೊಟ್ಟ ರುದ್ರಾಕ್ಷಿಯು
ಇಟ್ಟ ಹಣೆಯ ಭಸಿತಗಳು ।
ಮುಟ್ಟಿ ಹೊದ್ದ ದುಕೂಲ ಹಚ್ಚಡಗಳು ಈಗ
ನೆಟ್ಟನೆ ಮುಂದೆ ಬಂದಿರಲು ||೭೫|| ೫-೩೦/...

ಅಗಣಿತವಹ ರೂಪನ ಕಂಡು ರಾಮಯ್ಯ
ಮುಗಿದನು ಕರವನಾಕ್ಷಣದಿ ।
ಜಗವರಿಯಲು ನಿಮ್ಮ ಮೊರೆವೊಕ್ಕೆನು ಸ್ವಾಮಿ
ಒಗು ಮಿಗಿಲಾಗಿ ಪಾಲಿಪುದು ||೭೬|| ೫-೩೧/....

ಕೊಟ್ಟೇನು ಬೇಡಿನ ವರವ ಕೇಳೊ [ನೀನು]
ಕಟ್ಟಿದ ವೈರಿಗಳೆಲ್ಲ ।
ಬಟ್ಟ ಬಯಲಾಗಿ ಹೋಗಲಿ ದೆಸೆದೆಸೆಗೆಂ[ದ]
ದುಷ್ಟರಂಕುಶ ರಾಮ[ನಾಥ] ||೭೭|| ೫-೩೨...

ಸಿಕ್ಕಲಿ ಎಪ್ಪತಿರಾಜನ ಬೊಲ್ಲನು
ಒಕ್ಕಲಿ[ಕ್ಕೋದು] ವೈರಿಗಳ ।
ಕಕ್ಕಸವಾದ ವೈರಿಗಳ ಮುರಿಯೆಂದು
ದಿಕ್ಕನೆ ಮರವ ಪಾಲಿಸಿದ ||೭೮|| ೫-೩೩/....

ವರವ ಪಾಲಿಸಿ ಗುಂಡಬ್ರಹ್ಮಯ್ಯ ಹೋಗ[ಲು]
ತರಣಿ ಪೂರ್ವಾದ್ರಿಯನಡರೆ ।
ಭರದಿಂದ ಕೈರವ ನಾಚಿ ಮುಖವ ಮು[ಚ್ಚೆ]
ಸರಸಿಜ ನಗುತಿರ್ದನಾಗ ||೭೯|| ೫-೩೩/...

ಉದಯವಾಗಲು ರುದ್ರರಾಯ ಮಜ್ಜನ ಮಾಡಿ
ಸದ್ಗುರು ಲಿಂಗ ಜಂಗಮಕೆ ।
ಮುದದಿ ವಂದಿಸಿ ನಿರಾಸಿಮಠವ ಪೊಕ್ಕು
ಒದಗಿ ಶರಣ ಮಾಡಿದನು ||೮೦|| ೫-೩೪/...

ಪಂಚವರ್ಣದ ಕಂಥೆ ಪರಿ ಪರಿ ಚಿನ್ನದ
ಪಂಚಮುಖ[ನ] ರೂಪಿನವರು ।
ಪಂಚಬಾಣನ ಬಾಧೆಗಳುಪದ ಹಿರಿಯರು
ಪಂಚೈದು ಸಾವಿರವಿಹ[ರು] ||೮೧|| ೫-೩೬/...

ಉತ್ತಮ [ರಜತ]ಗಿರಿಯನೊಪ್ಪವಿಟ್ಟಂತೆ
ಹತ್ತು ಸಾವಿರ ಬೆಳ್ಳಿಗಂತೆ ।
ಕಿತ್ತು ತಾಮಸ ಕೋಪವನು ಲೆಕ್ಕಿ[ಸದಂ]ತೆ
ಸತ್ಯ ಜಂಗಮರು ಒಪ್ಪುತಿಹರು ||೮೨||

ಪಟ್ಟೆ ಕಂಥೆಗೆ ಸುತ್ತ ಮುತ್ತು ಕೆತ್ತಿಸಿದುವು
ಖಟ್ವಾಂಗಧರನಂದದಲಿ ।
ಕಟ್ಟಳೆಯಿಲ್ಲದ ಕಬ್ಬಿಣ ಕಂಥೆ[ಯ]
ಶ್ರೇಷ್ಠ ಜಂಗಮವೊಪ್ಪುತಿಹರು ||೮೩|| ೫-೩೯/...

ರುದ್ರಾಕ್ಷಿ ಕಂಥೆ ಹಿರಿಯರ ನೋಡಲು
ಇದ್ದ ಪಾಪವು ಪರಿಹರವು ।
ಅದ್ವೈತವನೋದುತ ಜಪಮಾಡುತ
ಉದ್ಧರಿಸುತ ಪಂಚಾಕ್ಷರಿಯ ||೮೪|| ೫-೪೦/...

ಕೂ[ಡೆ] ಬ್ರಹ್ಮೇತಿಯು ಓಡುವುದಾಕ್ಷಣ
ನೋಡಿದರೆ ಹಿರಿಯರನು ।
ಆಡರು ಹುಸಿಯ ನುಡಿಯರು ದೂಷಣದಲ್ಲಿ
ರೂಢಿಗೀಶ್ವರ [ಪಟ್ಟಣದಿ] ||೮೫|| ೫-೪೨/...

ಇಂತು ಶರಣು [ಮಾಡಿ] ಲಿಂಗಜಂಗಮಕಾಗ
ಕಂತು ಸಮನು ರುದ್ರರಾಯ ।
ಸಂತೋಷದಿಂದ ವಾಲಗ[ಕೆ] ನಡೆದು ಬಂದ
ಪಂಥವನೇನ ಹೇಳುವೆನು ||೮೬|| ೫-೪೭/...

ಪಟ್ಟೆಯ ಮೇಲು ಕಟ್ಟಿನ [ಸಿಂಗ]ರಕೆ ಇಳಿ
ವಿಟ್ಟ ಲವುಡಿ ಜಲ್ಲಿಗಳು ।

ಕಟ್ಟಾಣಿ ಮುತ್ತಿನ ಕುಂಚಗಳೆಸೆ[ದವು]
ದಿಟ್ಟ ರುದ್ರನ ಚಾವಡಿಯ ||೮೭|| ೫-೪೯/...

ಜಂಬುದ್ವೀಪಕೆ ಅಧಿಕ ಸಿಂಹಾಸನವದು
ಒಂಬತ್ತು ರತ್ನ [ಕೀಲ]ಣೆಯು ।
ಅಂಬರದಲಿ ಮಾಣಿಕದ ಚಾವಡಿಯೊಳು
ಸಂಭ್ರಮಿಸಿತು ಮನ್ನೆಯರು ||೮೮|| ೫-೫೦/...

ಕಂತುವ ಕಳೆಯ [ಹೀಯಾಳಿ]ಸುವ ಸೊಬಗುಳ್ಳ
ಕಾಂ[ತಿ]ಯ ಸೊಬಗುಳ್ಳಂತಿಹನು ।
ಮುಂತೆ [ಕಂಚು]ಕಿಯರುಗ್ಗಡಿಸುತಲೈತರೆ
ಸಂತೋಷದಲಿ ಎಯ್ತಂದ ||೮೯||* ೫-೫೧/...

[ಗೆಲವಿಂದ]ಪೂರ್ವ ಪ್ರತಾಪ ರುದ್ರರಾಯ
ಒಲವಿಂದ ರಾಮನ ನೆನೆದು ।
ಚೆಲುವ ರಾಮನ ಕರೆಯೆಂದು ಲಿಂಗನ ಕೂಡೆ
ಒ[ಲಿ]ದು ಪೇಳಿದನು ಆ ಕ್ಷಣದಿ ||೯೦|| ೫-೫೪/...

ತುರಗವನೇರಿದ ದೇವಿಶೆಟ್ಟಿಯ ಲಿಂಗ
ಬಿರಿದುಳ್ಳ ರಾಮನ ಕರೆಯೆ ।
ಭರದಿಂದ ವೈಹಾಳಿಯನು ಮಾಡುತ ಬಂದ
ಅರಸು ರಾಮಯ್ಯನ ಕಂಡ ||೯೧|| ೫-೫೫/...

ಚೆನ್ನಾಯಿತಿವನ ವೈಹಾಳಿ ಎನುತ ರಾಮ
ಹೊನ್ನ ಭಲ್ಲೆಯ ತರಿಸಿದನು ।
ತನ್ನ ಕುದುರೆ ವೈಹಾಳಿ ಸಾಧನೆ ಮಾಡಿ
ಬಿನ್ನಣದಿಂದಲಿ ಕಂಡ ||೯೨||

ಒಬ್ಬರ ಸಾಧನೆಗೊಬ್ಬರು ಮೆಚ್ಚುತ
ಒಬ್ಬರೊಬ್ಬರು ಕೈಯ ಮುಗಿದು ।
ಇಬ್ಬರು ತುರಗವನಿಳಿದು ನಡೆದು ಬಂದು
ತಬ್ಬಿಕೊಂಡರು ಹರುಷದಲಿ ||೯೩|| ೫-೫೯/...

ಒಡಗೊಂಡು ಲಿಂಗರಾವುತನು ರಾಮಯ್ಯನ
ನಡೆತಂದ ಬೀಡಾರಕಾಗಿ ।

* ಇಲ್ಲಿಂದ ಮುಂದೆ ೪-೮೯,೯೦,೯೧ ನೆಯ ಪದ್ಯಗಳು ಮತ್ತೆ ಕಾಣಿಸಿಕೊಂಡಿವೆ. ಅವುಗಳನ್ನು ಇಲ್ಲಿ ಕೈಬಿಡಲಾಗಿದೆ (ಸಂ.)

ತಡೆಯದೆ ಇಬ್ಬರು ಕುಳಿತು ಮಾತಾಡುತ
ನುಡಿಸಿ ಕೇಳಿದ ಕಾರ್ಯವನು ||೯೪|| ೫-೬೧/...

ಛಪ್ಪನ್ನ ದೇಶದ ರಾಯಕುಮಾರ ಮುಖ
ದರ್ಪಣ ರಾಮಯ್ಯ ಕೇಳು ।
ಒಪ್ಪುವ ರುದ್ರರಾಯನು ಎನ್ನ ಕಳುಹಿದ
ಪುಷ್ಪಬಾಣನೆ ನಿನ್ನ ಕರೆಯೆ ||೯೫|| ೫-೬೩/...

ಬಂದುದು ಲೇಸಾಯ್ತು ಅಣ್ಣ ಲಿಂಗಣ ಕೇಳು
ಮುಂದಣ ಕಾರ್ಯ ಧ್ಯೇಯವನು ।
ತಂದೆ ಕಂಪಿಲನೊಡನಾಡಿ ಮುನಿದು ಬಂದೆ
ಕುಂದನಾಡಿದ ಎನ್ನ ನುಡಿಯ ||೯೬|| ೫-೬೪/...

ಲೇಸನಾಡಿದೆ ರಾಮನಾಥ ನೀ ಕೇಳೆಲೊ
ಬೇಸರವುಂಟೆ ಈರ್ವರಿಗೆ ।
ಸಾಸಿರ ಕಾಲವು [ಕೂ]ಡಿದ [ಸ್ನೇಹವು]
ಈಸು ನುಡಿ[ಯೇಕೆ] ಚಿತ್ತೈಸು ||೯೭|| ೫-೬೫/...

ಜನಿಸಿದೆವಿಬ್ಬರು ಹರಿಯಲದೇವಿಗೆ
[ಬೆ]ನ್ನ ಬಿಡೆನೊ ನಿನ್ನನೆಂದ ।
ಚಿ[ತ್ತಜ] ಸಮರೂಪ ರಾಮಯ್ಯ ಕೇಳೆಲೊ
ಕರ್ತ ಶಿವನ ಪಾದದಾಣೆ ||೯೮|| ೫-೬೭/...

ಸತ್ತರೆ ನಿನ್ನ ಒಡನೆ ಸಾಯ್ವೆನು ಎಂದು
ಸತ್ಯ [ಮಾತನು ಆ]ಡಿದನು ।
ಕಂಪಿಲರಾಯನ ಮಗನು ಕೊಮರಾಮ
ದೇವಿಶೆಟ್ಟಿಯ ಲಿಂಗನೊಡನೆ ||೯೯|| ೫-೬೭/...

ಅಂಜಿದ ರಾಮನೇತರ ಬಂಟನೆಂದೆಂಬ
ಬಂಜೆ ನುಡಿಯನಾಡಬೇಡ ।
ರಂಜಿಪ ಭೂಮಿರಾಯರ ಗಂಡನೆನುತಲಿ
ಕಂಜದ ಕರವೆತ್ತಿ ನುಡಿದ ||೧೦೦|| ೫-೬೮/...

ಬಂಡಿ ಬಿರಿದ ಹೊತ್ತು ಕಂಡಿಲಿ ನುಸು[ಳುವ]
ಭಂಡತನವು ನಮಗಿಲ್ಲ ।
ಗಂಡು ರಾಯನ ವಾಲೈಸಿ ಬಂದುದುಯಿಲ್ಲ
ಗುಂಡಬ್ರಹ್ಮನ ಆಣೆ ಕೇಳು ||೧೦೧|| ೫-೭೦/...

ಅಪ್ಪ ಕಂಪಿಲನೊಡನಾಡಿದೆ ಬಲು ಮಾತ
ಲೆಪ್ಪತಿರಾಜ ಬೊಲ್ಲನನು ।
ಇಪ್ಪತು ದಿನದೊಳು ತರುವೆನೆಂದು ನಾ ಬಂದೆ
ಒಪ್ಪುವ [ಪಂಥ]ನಾಡಿದೆನು ॥೧೦೨॥ ೫-೭೧/...

ನುಡಿಯ ಕೇಳುತ ಲಿಂಗ ಪಿಡಿದೆತ್ತಿ ಇಂತೆಂದ
ಕಡುಗಲಿ ರಾಮಯ್ಯ ಕೇಳು ।
ಒಡಹುಟ್ಟಿದವನ ಪಂಥವು ಹಿಂದಕೆ ಹೋಹುದೆ
ತಡಬೇಡ ಏಳೆಂದು ನುಡಿದ ॥೧೦೩॥ ೫-೭೨/...

ನೇತ್ರಾವಳಿಯ ತೆಗೆದುಟ್ಟನು ರಾಮಯ್ಯ
ಗಾತ್ರದ ಕಂಠಮಾಲೆಯನು ।
ಧಾತ್ರಿಗೆ ಹೊಸತೆಂಬ ಪದಕವನಿಟ್ಟನು
ಅರ್ತಿಯಿಂದಲಿ ರಾಮಯ್ಯ ॥೧೦೪॥ ೫-೭೩/...

ಪಚ್ಚೆಯ ಕಡಗವನಿಟ್ಟಿಹ ರಾಮಯ್ಯ
ರತ್ನ ಮಾಣಿಕ ಮುತ್ತ ಸರವ ।
ನಿಚ್ಚಳವಹ ಒಂಟಿ ಮುತ್ತಿನ ಕಡುಕಿಕ್ಕಿ
ಅಚ್ಚ ಕಸ್ತುರಿಯ ಲೇಪಿ[ಸಿ]ದ ॥೧೦೫॥ ೫-೭೪/...

ಸಣ್ಣವನುಟ್ಟನು ಬಣ್ಣವ ಹೊದ್ದನು
ಬಣ್ಣಿಸಿ ಚಿಮ್ಮುರಿ ಸುತ್ತಿ ।
ಕಣ್ಣ ಹಬ್ಬವ ಮಾಡಿ ಆಳ ಶೃಂಗರಿಸೆಂದು
ಅಣ್ಣ ಕಾಟಣ್ಣನಿಗೆ ಹೇಳೆ ॥೧೦೬॥ ೫-೭೫/...

ಪಟ್ಟೆಯ ದಟ್ಟಿಯು ಪರಿಪರಿಗೊಂಡೆಯು
ಕಟ್ಟು ಬಣ್ಣಕೆ ಕಡೆಯಿಲ್ಲ ।
ಕಟ್ಟಾಳು ಹೊನ್ನ ಮೋಹದ ಎಕ್ಕಟಿಗರು
ದಿಟ್ಟರು ಶೃಂಗಾರವಾಗೆ ॥೧೦೭॥ ೫-೭೭/...

[ಇ]ತ್ತರದಲಿ ಬಿಲ್ಲು ಸರಗಳು ಬಾಪು[ರಿ]
ಮುತ್ತಿನ ಕಡುಕು ಪೊಂಗಲವು ।
ಮೊತ್ತದ ನಾಯಕವಾಡಿ ಬಂಟರಿಗೆಲ್ಲ
ಇತ್ತ ಕಾಟಣ್ಣ ಶೃಂಗರಿಸೆ ॥೧೦೮॥

ಪರಿವಾರವನು ನೋಡಿ ದೇವಿಶೆಟ್ಟಿಯ ಲಿಂಗ
ಶಿರವ ತೂಗಿದ ಸಂತೋಷದಲಿ ।

ಬಿರಿದುಳ್ಳ ರಾಮಯ್ಯ ಸಲುವುದು ನಿನಗೆಂದು
ತುರಗವನೇರಿದನಾಗ ||೧೦೯||

ತಂಬಟ ಭೇರಿ ನಿಸ್ಸಾಳ ಸೂಳೈಸಲು
ಕುಂಭಿನಿ ನಡುಗುವಂದದಲಿ ।
ಸಂಭ್ರಮದಿಂದ ಪಟ್ಟಣಕಾಗಿ ಬಂದನು
ಅಂಬುಜಸಖ ನಗುತಿಹನು ||೧೧೦||

ಶೃಂಗಾರ[ದಲಿ] ಮುಖ ಕಂಚಿನ ಬಾಗಿಲು
ಹೊಂಗಳಸಗಳೊಪ್ಪುತಿರಲು ।
ಅಂಗಜಸಮರೂಪ ನೋಡುತಲೈತಂದು
ಹಿಂಗದೆ ಹೊಕ್ಕ ಪಟ್ಟಣವ ||೧೧೧|| ೫-೮೩/...

ಚೆಲುವರ ಗಂಡ ರಾಮನ ನೋಡಬೇಕೆಂದು
ನಲಿದು ಶೃಂಗರಿಸಿ ಹೆಣ್ಣುಗಳು।
ಹಲವು ಮಾಳಿಗೆ ಭದ್ರ ಮಂಟಪದೊಳಗೆಲ್ಲ
[ನಲವಿಂದ] ನಿಂದು ನೋಡಿದರು ||೧೧೨|| ೫-೮೫/...

ನಟ್ಟ ಕಂಗಳ ಕೀಳಲಾರದೆ ಸತಿಯರು
ಉಟ್ಟ ಉಡಿಗೆ ಸಡಿ[ಲು]ತಲಿ ।
ಬಟ್ಟ ಕುಚದ ಮೇಲಣ ವಸ್ತ್ರ ಜಾರಲು
ದಿಟ್ಟ ರತಿಯರು ಕಳವಳಿಸೆ ||೧೧೩|| ೫-೮೭/...

ಮತ್ತೊಬ್ಬ ಸತಿಯು ರಾಮ[ನ] ಕಂಡು ಭ್ರಮಿಸಲು
ಚಿತ್ರದ ಬೊಂಬೆಯಂದದಲಿ ।
ಚಿ[ತ್ತಜ] ಕೈಸೆರೆ [ಸಿಕ್ಕು] ಬಾಯ್ ಕಣ್ಣುಗಳ
ಮುಚ್ಚದೆ ಮೂರ್ಛೆಯೊಳಿರಲು ||೧೧೪||

ಪರನಾರಿಯರೆಲ್ಲ ಅರಸು ರಾಮಯ್ಯಗೆ
ಹರಿಯಮ್ಮನ ಸಮನೆನಿ[ಸೆ] ।
[ವ]ರ ನಾರಿಯರೆಲ್ಲ ಅರಸು ರಾಮಯ್ಯಗೆ
[ಬಿ]ರಿದೆತ್ತಿ ಹರಸಿದಾಗ ||೧೧೫|| ೫-೯೪/...

ಕಾಮನ ಕಳೆ[ಯು] ವೆಗ್ಗಳಿಸಿ ಪುಟ್ಟಿಸಿದವ
ಭೂಮಿಯ ಚೆಲುವರ ಗಂಡ ।
ಯಾವ ಮಾನಿನಿ ಹೆತ್ತಳಾ ನಿನ್ನನು ಎಂದು
ಕೋಮಲೆಯರು ಕೊಂಡಾಡಿದರು ||೧೧೬|| ೫-೯೦/೮-೫೧

ಇತ್ತರದಲಿ ನಿಂ[ದ] ಸತಿಯರ ಸ್ತೋಮವ
ಮತ್ತೆ ಚೆನ್ನಿಗ ರಾಮ ಕಂಡು ।
ಹೆತ್ತತಾಯಿಗಳು ಮಗನ ನೋಡುತಾರೆಂದು
ಚಿತ್ತದ[ಲವನು] ಹಿಗ್ಗಿದನು ॥೧೧೭॥

ಒಂದೊಂದು ಪರಿ ಚಂದ್ರಸಾಲೆ ಉಪ್ಪರಿಗೆಯ
ಅಂದವ ಲಿಂಗ ತೋರಿದನು ।
ಮಂದಿ ಕುದುರೆ ಸಂಜೋಗಿ ಸಂಭ್ರಮಿಸೆ
ಕಂದರ್ಪರೂಪ ನೋಡಿದನು ॥೧೧೮॥ ..../೮-೫೬

ಗಳಿಯಾರದ ಬಾಗಿಲ ಹೊಕ್ಕು ರಾಮಯ್ಯ
ಒಳಯಕೆ ನಡೆದನಾ ಕ್ಷಣದಿ ।
ಇಳಿದ ಕುದುರೆಯ ಕನ್ನಡಿ ಗೋಡೆ ಮರೆಯಲಿ
ತಳುವದೆ ನಡೆದ ವಾಲಗಕೆ ॥೧೧೯॥ ..../೮-೫೮

ಧುರಧೀರ ವೀರ ಪ್ರತಾಪನೋಲಗವನು
ಇರವ ನಾನೇನ ಹೇಳುವೆನು ।
ಬಿರಿದುಳ್ಳ ಮನ್ನೆಯ ಮಗುಟವರ್ಧನರನು
ಅರಸು ರಾಮಯ್ಯನು ಕಂಡ ॥೧೨೦॥ ..../೮-೫೯

ಎಡವಂಕ ಬಲವಂಕ ರಾಯನ ವಾಲಗ
ಕಡುಗಲಿ ರಾಜಕುವರರು ।
ಧೃಡವುಳ್ಳ ಬತ್ತೀಸಾಯುಧ[ಗಳ] ರಾವುತರು
ಪೊಡವಿ ಪಾಲಕ[ನ] ವಾಲಗದಿ ॥೧೨೧॥ ೫-೧೦೪/೮-೬೦

ಇತ್ತರ ವಾಲಗದೊಳಗೆ ಚೆನ್ನಿಗರಾಮ
ಅರ್ತಿಯಿಂದಲಿ ನಡೆತಂದ ।
ಮತಿಯುಳ್ಳ ಕಾಟಣ್ಣ ಸಹವಾಗಿ ಬಂದನು
ಅರ್ತಿಯಿಂದಲಿ ವಾಲಗಕೆ ॥೧೨೨॥ ೫-೧೦೫/...

ತಾರಕಿಯೆಡೆಗೆ ಚಂದ್ರನು ಬಂದ ತೆರನಂತೆ
ಹಾರದೆಡೆಗೆ ಜೀವರತ್ನ ।
ಓರುಗಲ್ಲಿ[ನ] ರುದ್ರರಾಯನೋಲಗದೊಳು
ಸ್ಮೇರ ಚೆನ್ನಿಗರಾಮನೆಸೆದ ॥೧೨೩॥ ೫-೧೦೬/೮-೬೨

ಕಟ್ಟಳಿಲ್ಲದೆ ಮನ್ನೆ ಮಾಂಡಲಿಕರೆಲ್ಲ
ದಿಟ್ಟ ರಾಮನ ರೂಪ ನೋಡಿ ।

ನೆ[ಟ್ಟ]ನೆ ಬೆರಗಾಗಿ ವಾಲಗವೆಲ್ಲರು
ಬಟ್ಟನೊಲಿದು ಕೊಂಡಾಡಿದರು ||೧೨೪|| ೫-೧೦೭/೮-೬೩

ವಂದನೆ ಮಾಡಿ ಕಾಟಣ್ಣನು ರುದ್ರಗೆ
ತಂದ ಕಾಣಿಕೆಯನಿಕ್ಕಿದನು ।
ಚಂದ್ರನ ಕಳೆಯುಳ್ಳ ರಾಮಯ್ಯ ಕುಳ್ಳಿರಿಯೆಂದು
ಅಂದು [ರಾಯನು] ಕೈವಿಡಿದ ||೧೨೫|| ೫-೧೦೮/೮-೬೪

ನೋಡಿ ಕಂಡನು ರಾಯ ರಾಮನ ರೂಪನು
ಮಾಡಿದ [ಕಡು] ಸಂತೋಷವನು ।
ಕೂಡಿದನೆಪ್ಪತಿಯನು [ರಾಮನು ಇಂದು]
ರೂಢಿಗೀಶ್ವರ ಬಲ್ಲನೆನುತ ||೧೨೬|| ೫-೧೦೮/೮-೬೫

ಬುದ್ಧಿ ಸಾಲದು ನಿಮ್ಮ ಕಂಪಿಲರಾಯಗೆ
[ಮುದ್ದು] ಮುಖದ ಕುಮರರನು ।
ಎದ್ದು ಮುನಿದು ಬರಗೊಡಲಿಬಹುದೆಯೆಂದು
ರುದ್ರ ಮಂತ್ರಿಯೊಳು ಪೇಳಿದನು ||೧೨೭|| ೫-೧೦೯/೮-೬೬

ಇತ್ತ ಕಡಕು ಕಂಠಮಾಲೆಯುಡುಗೊರೆಯನು
ಅರ್ತಿಯಿಂದಲಿ ರಾಮನಿಗೆ ।
ಮೊತ್ತದ ಪಡಿ ಬಿಡಾರವ ಕೊಡಿಸಿದ ಬೇಗ
ಮತ್ತೆ [ಮನ್ನಿಸಿ] ಕಳುಹಿದನು ||೧೨೮|| ೫-೧೧೧/೮-೬೭

ಒಡೆಯನ ಕೈಲಿ ಕಳುಹಿಸಿಕೊಂಡು ರಾಮಯ್ಯ
ಇಳಿದ ರುದ್ರನ ಚಾವಡಿಯ ।
ಕಳಕಳಿಸುತ ನಗುತಿರ್ದನು ರಾಮಯ್ಯ
ನಳಿನನಾಭನೆ ಗತಿಯೆನುತ ||೧೨೯|| .../೮-೬೮

ಮುತ್ತಿನ ಸತ್ತಿಗೆ ಎತ್ತಿತು ರಾಮಗೆ
ಇ[ತ್ತರ]ದಲಿ ಮನ್ನೆಯರು ।
ಅರ್ತಿಯಿಂದಲಿ ಬಂದು ಅಂದಳವೇರಲು
ಮತ್ತೆ ಪಾಠಕರು ಕೊಂಡಾಡೆ ||೧೩೦||

ಆ ಸಮಯದಿ [ಭಟ್ಟ] ಬಿರಿದ ಕೊಂಡಾಡಲು
ಸಾಸಿರ ಕಳೆಯ ರಾಮುಗನ ।
ದೇಶಾಧಿಪತಿ ರಾಯರಗಂಡ ರಾಮಯ್ಯ
ಆಸೆಮಾಡನು ಪರಸತಿಯ ||೧೩೧|| ೫-೧೧೨/೮-೬೯

ಅದಿರಾಯ ಮರ್ದನ ಮೂರು ರಾಯರ ಗಂಡ
ಪರರಾಯ ಮಸ್ತಕಶೂಲ ।
ಅರಿಭಟ ಶರಭ ಭೇರುಂಡ ರಾಮುಗನೆಂದು
ಬಿರಿದ ಕೊಂಡಾಡಿ ಪಾಠಕರು ॥೧೩೨॥

ಕಳ್ಳತನದಿ ಬಿರಿದನು ಹೊಗಳಿಸಿಕೊಂಬ
ಅಳ್ಳೆದೆ ರಾಯರ ಗಂಡ ।
ಡಿಳ್ಳಿಯನಾಳುವ ಸುರಿತಾಳನ ಗಂಡ
ಬಲ್ಲಿದ ನೇಮಿಯ ಗಂಡ ॥೧೩೩॥ .../೮-೭೪

ಎತ್ತಳ ಗಾಳಿ ಬೀಸಿದರತ್ತ ಮಲೆತಿಹ
ಮೊತ್ತದ ರಾಯರ ಗಂಡ ।
ಸತ್ತಿಗೆ ನೆಳಲೊಳು ಬ[ರು]ವ ಮಂಡಲಿಕರ
ನೆತ್ತಿಯ ಶೂಲವೊ ರಾಮ ॥೧೩೪॥ .../೮-೭೫

ರಾಮದೇವರಾಯನೊಬ್ಬನೆ ತಪ್ಪಲು
ಭೂಮಿಯ ರಾಯರ ಗಂಡ ।
ಪ್ರೇಮದಿ ಡಿಳ್ಳಿಯ ಸುರಿತಾಳ[ನ] ನಿ
ಸ್ಸೀಮ[ನ] ಗಂಡನು ರಾಮ ॥೧೩೫॥

ಮಣಿವ ರಾಯರ ಕೊಂಡ ಮಲೆವ ರಾಯರ ಮತ್ತೆ
ಸೆಣಸುವ ರಾಯರ ಗಂಡ ।
ಢಣಢಣಿಸುವ ಗಂಟೆ ಭೋರೆಂದು ಉಲಿದವು
ಕಣಕಾಲದಲ್ಲಿ ರಾಮನಿಗೆ ॥೧೩೬॥

ಆಸೆಯ ಮಾಡಿ ದೇಶವನು ಆಳ್ವೆನೆಂಬ
ಭಾಷೆಹೀನರ ಗಂಡ ರಾಮ ।
ಹಾಸನೊರಗಿ ಕೂಸನೆತ್ತಿ ಮುಂಡಾಡುವ
ಹಾಸ್ಯ ಮಾನ್ಯರ ಗಂಡ ರಾಮ ॥೧೩೭॥ .../೮-೭೩

ಕೊಟ್ಟ ಹಣವ [ಗಂಟ ಕಟ್ಟಿಕೊಂಬರ] ಗಂಡ
ನೆಟ್ಟನೆ ಭಕ್ತ ಶಂಕರಗೆ ।
ಕುಟ್ಟುವ ವೀರ ರವುಡೆ ಕಾಂತಿ ಮಾಡುವ
ಸೃಷ್ಟಿಯ ರಾಯರ ಗಂಡ ॥೧೩೮॥ .../೮-೭೬

ಕಡಲ ಮಧ್ಯದಲಿಹ ನರಪತಿ ಹಯಪತಿ
ಗಡ ಗಜಪತಿಗಳ ಗಂಡ ।

ಕಡುಗಲಿ ನೇಮಿಯ ಗಂಡನೆಂಬುದು
ಎಡದ ಕಾಲಲಿ ತೊಡರುಲಿಯೆ ||೧೩೯||

ಮೂಡ ತೆಂಕಲ ಇದಿರಾಗಿ ಬಹರ ಕಾಣೆ
ಬೀಡಿನೊಳಗೆ ಬಲ್ಲಾಳ ।
ರೂಢಿಯೊಳಗೆ ಸುರಿತಾಳನಲ್ಲದೆ ಮತ್ತೆ
ಈಡಹ ರಾಯರ ಗಂಡ ||೧೪೦||

ಮಿಕ್ಕ [ವೈರಿಯ] ಶಿರಕೆ ಚಕ್ರಕೋದಂಡ
ರಕ್ಕಸ ಗಂಡ ಭೇರುಂಡ ।
ಧಿಕ್ಕನೆ ವೀರ ರಾಮಗೆ ಸರಿಯಿಲ್ಲೆಂದು
ಉಕ್ಕಡಗಾಳೆ ಸಾರಿದವು ||೧೪೧||

ಸಾರಿದವರ ಕಾಯ್ವ ಹೋರಿದವರ ಕೊಲ್ವ
ಧೀರನು ಕೋಳಾಹಳ [ರಾಮ] ।
ಭೋರನೆ ಮಂಡಳಿಕರು ಎಲ್ಲ ಪ್ರಜೆ ಪರಿ
ವಾರ ಬಿರಿದ ಸಾರಿದವು ||೧೪೨||

ನಮ್ಮ ಬಳಿಗೆ ರಾಮ ವಾಲೈಸಲು ಬಂದ
ಹಮ್ಮಿನ ಬಿರಿದನು ಹೊಗಳಿ ।
ಗಮ್ಮನೆ ಮಂಡಳಿಕರು ಗಜಬಜಿಸುತ್ತ
ಇಮ್ಮಡಿ ಬಿರಿದ ಸಾರಿದರು ||೧೪೩|| ೫-೧೧೫/೮-೮೨

ನಿಮ್ಮ ಪಾದವ ಲಿಂಗ ಕಾಣಿಸಲೊಲ್ಲದೆ
ನಮ್ಮೆಲ್ಲರಿಗೆ ಗಂಡನೆಂದ ।
ನಿಮ್ಮ ದರ್ಶನದಿ ಕುಳ್ಳಿರ್ದರೆ ಜಾತಿ
ವರ್ಮದ ಭೇದ ಬಡುವನೆ ||೧೪೪||

ಘುಡಿಘುಡಿಸುತ ರುದ್ರರಾಯ ಕೋಪವ ತಾಳಿ
ಹಿಡಿತನ್ನಿ ಲಿಂಗರಾವುತನ ।
ಒಡನೆ ಕಳುಹೆ ಕಂಚುಕಿಯರು ಐವರು
ನಡೆದು ಬಂದರು ಲಿಂಗನೆಡೆಗೆ ||೧೪೫|| ೫-೧೧೬/೮-೮೪

ಪರಿಪರಿ ಬೀಡಾರಗಳ ಮಾಡುತಿರಲಾಗ
ಅರಿದೆನಿಸಿತು ಅರಮನೆಯು ।
ಕ[ರ] ಬೇಗ ನಿನ್ನ ರಾಯನು ಬರ ಹೇಳಿದ
ಧುರಧೀರ ಲಿಂಗ ಬಾರೆನಲು ||೧೪೬|| ೫-೧೧೭/೮-೮೫

ನಡೆದು ಬಂದನು ಲಿಂಗರಾವುತ ವಹಿಲದಿ
ಒಡೆಯ ರುದ್ರನ ಕಂಡು ನಮಿಸೆ ।
ಕಿಡಿ ಕೆದರುತ ರುದ್ರರಾಯ ಕೋಪವ ತಾಳಿ
ಜಡಿದು ಗರ್ಜಿಸಿದ ಲಿಂಗಣನ ॥೧೪೭॥ ೫-೧೧೮/೮-೮೬

ಕೊಟ್ಟದ ಬೇಡನ ಕರೆತಂದೆ ಲಿಂಗಣ್ಣ
ಮುಟ್ಟಿ ಹೊಗಳಿಸಿದೆ ಬಿರಿದ ।
ಸೃಷ್ಟಿಯ ರಾಯರ ಗಂಡ ಚೆನ್ನಿಗ ರಾಮ
ಇಷ್ಟುಳ್ಳ ಬಂಟ ಬರಬಹುದೆ ॥೧೪೮॥ ೫-೧೧೯/೮-೮೭

ಬಂದನೇತನಕೆ ರಾಮ ನಮ್ಮನೋಲೈಸಲ್ಕೆ
ಗೊಂದಣ ಬಿರುದುಳ್ಳ ಬಂಟ ।
[ಹಿಂ]ದಣ ಪಂಥವೆಲ್ಲ ಬಿಟ್ಟು ಇರಹೇಳು
ಇಲ್ಲದಿರ್ದರೆ ಹೋಗ ಹೇಳು ॥೧೪೯॥ ೫-೧೨೦/೮-೮೮

ಬಲ್ಲಿದಗಲ್ಲದೆ ಬಿರಿದು ಕೇಳೆಲೆ ರಾಯ
ತಲ್ಲಣಿಸುವ ಯೋಧಗುಂಟೆ ।
ಅಲ್ಲಿ ಗುತ್ತಿಯ ಜಗತಪ್ಪನು ಮೊದಲಾದ
ಎಲ್ಲ ಮಾನ್ಯರ ಗೆದ್ದ ರಾಮ ॥೧೫೦॥ ೫-೧೨೧/೮-೮೯

ಹಳೆಬೀಡ ಬಲ್ಲಾಳರಾಯನ ಮುರಿದನು
ಬಲ್ಲಿದ ನೇಮಿಯ ಮುರಿದ ।
ಚಲದಿಂದ ಹುಳಿಯಾರ [ಮಾರ]ನ ಹಿಡಿದನೆಂ
ದೊಲಿದು ಹೇಳಿದ ರಾಯರೊಡನೆ ॥೧೫೧॥ .../೮-೯೦

ಉಂಟುಂಟು ಸಂಗಡಿಗನ ಬಿರಿ[ದೆಲ್ಲ] ಏ
ಳೆಂಟು ಬಗೆಯ ಹೊಗಳಿಸಿದೆ ।
ಬಂಟವಲ್ಲವೊ ಎನ್ನ ಹಗೆಯೊ ನೀ ಲಿಂಗಣ್ಣ
ಕಂಟಕ ನುಡಿ [ಲೇ]ಸೆಂದ ॥೧೫೨॥ ೫-೧೨೨/...

ಬಿರಿದ ಬಿಟ್ಟರೆ ರಾಮನಿರಲಿ ಕೇಳೆಲೊ ಲಿಂಗ
ಭರದಿಂದ ಪಂಥವಾಡಿದರೆ ।
ಮುರಿವೆನು ತನ್ನಯ [ಬಲತ[ನವೆಲ್ಲವ
ಕರ ಬೇಗ ಹೋಗಿ ಹೇಳೆಂದ ॥೧೫೩॥ ೫-೧೨೪/೮-೯೧

ಹೇಳಲರಿಯೆ ಸ್ವಾಮಿ ನಾ ಹೋಗಿ ರಾಮಗೆ
ಬೀಳಲಿರಿ[ದು] ಕೊಲ್ಲುವನು ।

ಆಳಿದೊಡೆಯ ರುದ್ರರಾಯ ಹೋಗೆಂದರೆ ಒಲ್ಲೆ[ನೆ]
ಕಾಲ ಹಿಡಿದು ಎಳಸುವೆನು ||೧೫೪||

ದುಗುಡವ ತಾಳಿದ ದೇವಿಶೆಟ್ಟಿಯ ಲಿಂಗ
ವಿಗಡ ರಾಮನ ಬಳಿಗೈದಿ ।
ಅಗಣಿತ ಬಿರಿದ ಬಿಟ್ಟರೆ ಇರ ಹೇಳಿದ
ಸುಗುಣ ರಾಮಯ್ಯ ಚಿತ್ತೈಸು ||೧೫೫|| ೫-೧೨೫/...

ಅಬ್ಬರಿಸುತ ರಾಮ ಕೋಪವ ತಾಳಿದ
ಉಬ್ಬಿದ ಕಾಟಣ್ಣನೆಂದ ।
ಹೆಬ್ಬುಲಿ ಕಂಪನ ಸುತನು ರಾಮಯ್ಯನು
ಹಬ್ಬಿದ ಬಿರಿದ ಬಿಡುವನೆ ||೧೫೬|| ೫-೧೨೬/೮-೯೩

ಕಟ್ಟಳಿಲ್ಲದ ದಂಡ ಕಡಿದು ಗುಪ್ಪೆಯನೊಟ್ಟಿ
ಸುಟ್ಟು ಬೊಟ್ಟಿಡುವೆ ಪಟ್ಟಣವ ।
ಮುಟ್ಟಿ ಕಾದಲು ರುದ್ರರಾಯನ ಹಿಡಿವೆನು
ರೂಢಿಯೊಳಗೆ ಹೊಸತೆನಿಸಿ ||೧೫೭|| ೫-೧೨೭/೮-೯೪

ಭಂಡಾರ ಬೊಕ್ಕಸ ಹೆಂಡಿರು ಮಕ್ಕಳು
ತಂಡ ತಂಡದ ಪಯಣದಲಿ
ದಂಡೆತ್ತಿ ರುದ್ರರಾಯನು ಬರೆ ಕೊಡೆ ನಿನ್ನ
ಗಂಡಾಳು ಲಿಂಗ ಹೇಳೆಂದ ||೧೫೮|| ೫-೧೩೦/೮-೯೫

ಬಂದು ಲಿಂಗನು ದೇವಿಶೆಟ್ಟಿಯರಿಗೆ ಹೇಳೆ
ಇಂ[ದಿನ] ರಾಮನ ಜಗಳವನು ।
ಇಂದು ಇಲ್ಲಿರ್ದರೆ ಕೆಡುವೆವು ನಾವೆಂದ
ಸಂದೇಹ ಬೇಡ ಏಳಯ್ಯ ||೧೫೯|| ೫-೧೩೧/೮-೯೬

ಮುತ್ತು ಮಾಣಿಕ ನವರತ್ನ ಭಂಡಾರವ
ಮತ್ತೆ ಪೆಟ್ಟಿಗೆಯ ತುಂಬಿಸಿದ ।
ಮೊತ್ತದ ನಾಯಕವಾಡಿ ಬಂಟರಿಗೆಲ್ಲ
ಇತ್ತ ಲಿಂಗಣ್ಣ ಶೃಂಗರಿಸಿ ||೧೬೦|| ೫-೧೩೨/೮-೯೭

ಕಾಲಕುಪ್ಪಸವ ಕೊಡಿಸಿ ಹೆಮ್ಮಕ್ಕಳಿಗೆಲ್ಲ
ಆಲಸ್ಯವಿಲ್ಲದೆ ಬೇಗ ।
ಮೇಲು [ಹ]ಕ್ಕರಿಕೆ ಐನೂರು ತೇಜಿಗಳನು
ಸಾಲು ಸಾಲಲಿ ಶೃಂಗರಿಸಿ ||೧೬೧|| ೫-೧೩೩/೮-೯೮

ಅತ್ತ ಹೋಗ[ಲು] ಲಿಂಗ ಇತ್ತ ಮನ್ನೆಯರೆಲ್ಲ
ಒತ್ತಿ ಚಾಡಿಯ ಹೇಳಿದರು ।
ಚಿತ್ರೈಸು ಸ್ವಾಮಿ ರಾಮನ ಲಿಂಗ ಹೊಗಳಿದ
ಅತ್ಯಂತ ಸ್ವಾಮಿದ್ರೋಹಿಕೆ[ಯು] ||೧೬೨|| ೫-೧೩೪/೮-೧೧೧

ಧರಣಿಯ ರಾಯರ ಗಂಡನು ತಾನೆಂದು
ಬಿರಿದನೆಲ್ಲವ ಹೊಗಳಿದ ।
ಇರಿ ಕಡಿ ಲಿಂಗನ ಹಿಡಿತನ್ನಿ ಎಂಬುತ
ಸೆರೆಯ ಮನೆಯ ಕೂಡಿಸೆಂದ ||೧೬೩||

ಹರಿದು ಬಂದರು ಹರಿಕಾರರು ಬೇಗದಿ
ಕರೆದು ಹೇಳಿದರು ಲಿಂಗಣಗೆ ।
ಭರದಿಂದ ರಾಯರು ಕೋಪಿಸಿ ನುಡಿದರು
[ಸೆರೆ]ಮನೆಯನು ಮುದ್ರಿಸೆಂದ ||೧೬೪|| ೫-೧೩೬/...

ಹೆಡಕ ಹಿಡಿದು ನೂಕು ನೂಕೆಂದು ಲಿಂಗನು
ಒಡೆಯ ರುದ್ರನು ನನಗಲ್ಲ ।
ಸುಡುವೆ ಪಟ್ಟಣವನು ದಂಡೆತ್ತಿ ಬಂದರೆ
ಕಡಿವೆ ಈ ಕ್ಷಣದಿ ಮನ್ನೆಯರ ||೧೬೫|| ೫-೧೩೭/೮-೧೧೩

ಕಟ್ಟಿಗೆ[ಕಾರ]ರು ಬಂದು ರಾಯಗೆ ಹೇಳೆ
ದಿಟ್ಟ ಲಿಂಗಣ್ಣಗೆ ಕೋಪಿಸಿದ ।
ಸೃಷ್ಟಿಪಾಲಕ ತನ್ನ ಒಡೆಯನಲ್ಲೆಂಬುತ
ಬಿಟ್ಟೋಡುತಾನೆ ಪಟ್ಟಣವ ||೧೬೬|| ೫-೧೩೮/೮-೧೧೪

ನಿಜವೇನೊ ಲಿಂಗ ಓಡುವ ಸುದ್ದಿಯೆಂಬುತ
ಸುಜನ ರುದ್ರನು ಕೇಳಿದನು ।
ಗಜ ತುರಗವ ಜೋಡು ಮಾಡುಯೆಂದೆನುತಲಿ
ಭುಜಬಲ ಮಂತ್ರಿಯೊಳೆಂದ ||೧೬೭||

ಬರುವ ಹುಯ್ಯಲ ಸುದ್ದಿಯ ಕೇಳಿ ಲಿಂಗಣ್ಣ
ತಾಯಿ ತಂದೆಗಳ ಒಕ್ಕಲನು ।
ಆಯತವನು ಮಾಡಿ ಕುದುರೆಯನೇರಿಸಿ
ಪಯಣದಿಂದಲಿ ತೆರಳಿಸಿದ ||೧೬೮|| ೫-೧೪೧/...

ಸುಟ್ಟನು ಪಟ್ಟಾವಳಿ ದಿಂಡನೆಲ್ಲವ
ಸುಟ್ಟನುಪ್ಪರಿಗೆ ಚಾವಡಿಯ ।

ಸುಟ್ಟನು ಬತ್ತದ ಕಣಜ[ವನೆಲ್ಲವ]
ಸುಟ್ಟು ಲಿಂಗನು ಹೊರಹೊಂಟ ||೧೬೯|| ೫-೧೪೨/೮-೧೦೦

ಉರಿ ಗಗನಕೆ ನೆಗೆಯಲು ಲಿಂಗ ಕಂಡನು
ಕರ ಬೇಗ ಹೇಳೆ ಹುಯ್ಯಲನು ।
ಭರದಿಂದ [ಬಂದ]ರು ರಾಮನ ಪರಿವಾರ
ತುರಗ ಕಾಲಾಳು ಮೇಲಾಳು ||೧೭೦|| ೫-೧೪೩/...

ಗುಂಡಿಗೆ ಒಡೆವಂತೆ ಲವುಡಿಲಿ ಹೊಡೆದರು
ಮುಂಡಗಳುರುಳೆ ಭೂಮಿಯಲಿ ।
ಅಂಡೆಲಿರಿಸಿಕೊಂಡನು ಲಿಂಗ ರಾವುತ
ಲೆಂಡ ರಾವುತ ಮನ್ನೆಯರನು ||೧೭೧|| ೫-೧೪೫/...

ತುರಗ ತುರಗ ಸಂದಣಿಸುತ ಕಾಲಾಳು
ಇರಿದಾಡಿತು ಹೊಣಿಕೆಯಲಿ ।
ಧುರಗಲಿ ದೇವಿಶೆಟ್ಟಿ ಲಿಂಗ ಕಂಡನು
ತುರಗ ಕಾಲಾಳು ಮೇಲಾಳು ||೧೭೨||

[ಬಡ] ಕುಮಾರನ ಗಂಡ ಕೇಳಿದ ರಾಮ
ಗುಡ್ಡದ ಬಳಿಯಿಂದ [ತೆ]ರಳಿ ।
ಅಬ್ಬರಿಸುತಲೇರಿತು ಮಾನ್ಯ ಮಾನ್ಯರು
ಬೊಬ್ಬೆಯನೇನ ಹೇಳುವೆನು ||೧೭೩||

ಕುಣಿಕಾಲ ಬೊಲ್ಲಗೆ ಮಣಿದು ಕಾಣಿಕೆಯಿಕ್ಕಿ
ಹಣೆಯನು ಹಿಡಿದು ಬೋಳೈಸಿ ।
ಎಣಿಕೆಯಿಲ್ಲದೆ ವೈರಿಯ ದಂಡನು ಬೊಲ್ಲ
ಕ್ಷಣಕೆ ಕೊ[ಲ್ಲೆಂದ] [ಕ್ಷೋಣೀ]ಶ ||೧೭೪||

ಮಚ್ಚರಿಸುವ ಮಾರ್ಬಲವದು ನಡೆಯಿತು
ಕಿಚ್ಚ ಹಾಯುವ ಹರೆಯಿಂದ ।
ಅಚ್ಚಂಬಿನ ರಾವುತ[ರ]ಡ್ಡಲೇರಿತು
ಎಚ್ಚರ ರಾಮನ ಮೇಲೆ ||೧೭೫||

ಹೊನ್ನಗಂಟೆಯ ಹರಿಗೆಯ ಮಂದಿ ಏರಿತು
ಚೆನ್ನರಾಮನ ಪರಿವಾರ ।
[ಸನ್ನೆ]ಯ ಬೆಸನ ಕೊಡೆನುತಲಿ ಏರಿತು
ಚೆನ್ನಿಗ ಮಾದಿಗ ಹಂಪ ||೧೭೬||

ಇಬ್ಬರ ಮೂವರ ಸವಡಿಸಿ ಹೊಡೆದರೆ
ಗರ್ಭ ಹರಿದು ತಲ್ಲಣಿಸಿತು ।
ಬೊಬ್ಬಿರಿದು ಮುಂಡ ಎದ್ದು ಕುಣಿದಾಡುತ
ನಿಬ್ಬರದಲಿ ಹೊಯಿದಾಡೆ ॥೧೭೭॥

ತಟ್ಟಿ ಮುಟ್ಟಿಯು ಕೋಲ ಕಟ್ಟಲಿ ಇರಿದರೆ
ಹೊಟ್ಟೆ ಹರಿದು ಕರುಳು ಕ್ಕಿ ।
ಬಿಟ್ಟರು ಪ್ರಾಣವ ಸತ್ತು ನೆಲಕೆ ಬೀಳೆ
ಕಟ್ಟಾಳು ರಾಮನ ಮಂದಿ ॥೧೭೮॥

ಜಾಳಿಗಿ ಬಂಡಿಲಿ[ರುವ] ಹೆಮ್ಮಕ್ಕಳ ಬ
ಹಳ ತವಕವ ಮಾಡಿಸಿದ ।
ಏಳುನೂರೆಕ್ಕಟಿಗ[ರ] ರಾಮನಾಥನು
ಹೇಳಿ ಕಾವಲನಿರಿಸಿದನು ॥೧೭೯॥

ಮುತ್ತು ಮಾಣಿಕದಂಗಡಿಯ ಸೂರೆಗೊಳ್ಳುತ
ಮತ್ತೆ ಲಿಂಗನು ಹೊರಹೊಂಟ ।
ಸುತ್ತಸುತ್ತಲಿ .... ಹೊರಹೊಂಟಿತು
ಮೊತ್ತದ ಮಂದಿ .... ॥೧೮೦॥

ಒಟ್ಟಿಲು ಚಕ್ರ ಬಹಳಗಳ ಮಾಡಿಸಿ
ಕಟ್ಟಾಳು ಲಿಂಗ ರಾವುತನು ।
ಪೆಟ್ಟಿ[ಗೆ]ಯನು ದೇವಿಶೆಟ್ಟಿಯ ಲಿಂಗನು
ನೆಟ್ಟನೆ ತಂದಿರಿಸಿದನು ॥೧೮೧॥ ೬-೭/...

ತಂದೆ ಶೆಟ್ಟಿಯ ದೇವಿ[ಯ]ರಿಗೆ ರಾಮಯ್ಯನು
ಹೊಂದಿಸಿ ಕೈಗಳ ಮುಗಿದು ।
ಕುಂದದೆ ಬಾಲಕರಿಬ್ಬರ ಜಗಳವ
ಇಂದೊಮ್ಮೆ ನೋಡಬೇಕೆನುತ ॥೧೮೨॥ ೬-೯/...

ಪೊಡವಿಯ ರಾಯರ್ಗೆ ಇದಿರಾಗಿ ರಾಮಯ್ಯ
ನಡೆಯಬೇಕಲ್ಲವೆ ಬೇಗ ।
ಜಡದೇಹಿ ಮನ್ನೇರ ಮೇಲೆ ಸಾಲವನಿತ್ತೆ
ಒಡೆಯ ಕಳುಹು ನಮ್ಮ ಬೇಗ ॥೧೮೩॥ ೬-೧೩/...

ಮತ್ತೆ ರಾಮನ ಜೊತೆ ಪರಿವಾರ ಎಲ್ಲರ್ಗೆ
ಚಿತ್ತದ ಬೆಸನಿತ್ತು ಕಳುಹೆ ।

ಕಿತ್ತ ಕಠಾರಿಯ ಕಟ್ಟಿಗೆ ಮನ್ನೆಯರೆಲ್ಲ
ಮುತ್ತಿತು ರುದ್ರನ ದಂಡು ॥೧೮೪॥ ೬-೧೪/೮-೧೦೯

ಚೆಲ್ಲಿತು ರುದ್ರನ ಬಲ ನಿಮಿಷ[ದೊಳಗೆ]
ಚೆಲ್ಲಿದ ಚಕ್ರದ ಭರಕೆ ।
ಗಲ್ಲಿಸಿ ಕುದುರೆಯ ಪವುಜ ಹೊಕ್ಕಿ[ರಿದರು]
ಬಲ್ಲಿದ ರಾಮನ ಮಂದಿ ॥೧೮೫॥ .../೮-೧೧೧

ಗಮ್ಮನೆ ಹಿಮ್ಮೆಟ್ಟಿ ಬರುವ ಪವುಜ ಕಂಡು
ಸುಮ್ಮಾನದಿ ನಸುನಗುತ ।
ಹಮ್ಮ ಮುರಿವೆ ರುದ್ರರಾಯನ ಬಲವನು
ಒಮ್ಮೆ ಲಿಂಗಣ್ಣ ನೀ ನೋಡೊ ॥೧೮೬॥ ೬-೧೭/೮-೧೧೪

ಎಡವಂಕ[ವ ಕಡಿ]ದನು ರಾಮನಾಥನು
ನಡೆದನು ಕಡು ವೇಗದಲ್ಲಿ ।
ನುಡಿದವು ಬಿರಿದಿನ ಕಾಳೆ ತಂಬಟ ಭೇರಿ
ಪೊಡವಿರಾಯರ ಗಂಡನೆಂದು ॥೧೮೭॥ ೬-೧೮/೮-೧೧೫

ಅಣ್ಣ ಕಾಟಣ್ಣ ದೇವಿಶೆಟ್ಟಿ ಲಿಂಗಣ್ಣ
ತನ್ನೆಪ್ಪತ್ತೆರಡು ನಾಯಕರು ।
ಚೆನ್ನಿಗರೊಡಗೂಡಿ [ಇದಿರಾಗಿ ತಾಕಿದ]
ಮನ್ನೆಯ ಮಗುಟವರ್ಧನರ ॥೧೮೮॥ ೬-೧೯/...

ಉರಗ ತಿಂತಿಣಿಗೆ ಗರುಡ ಬಂದ ತೆರನಂತೆ
[ಕ]ರಿಗಳೆಡೆಗೆ [ಮರಿ]ಸಿಂಹ ।
ಒರಲಿ [ಹೊಡೆಯೆ] ರುದ್ರರಾಯನ ಬಲವೆಲ್ಲ
ಮುರಿಯಿತು ರಣಭೂಮಿಯಲ್ಲಿ ॥೧೮೯॥ ೬-೨೦/...

ಕೊಂಗಗತ್ತಿಯ ಕೊ[ಲೆಗೀ]ಡ ಮಾಡಿದ ಹಂಪ
ಭಂಗಿಸಿ ಹರಿಗೆಯ ಭಟರ ।
ಹಿಂಗದೆ ತಲೆಗಳ ಕಡಿದು ನಿವಾಳಿಸಿ
ಲಿಂಗ ರಾವುತಗೆ ಎತ್ತಿದನು ॥೧೯೦॥ ೬-೨೩/...

ಅಟ್ಟೆಗೋಲಿನ ದೊರೆಗಳು ಎಯ್ತಂದರು
ಅಟ್ಟಿ ಕಾಲಾಳು ಮೇಲಾಳು ।
ನೆಟ್ಟನೆ ಗುಡಿಯ ಗೂಟಗಳನೆ ಕೈಕೊಂಡು
ದಿಟ್ಟರು ತಲೆ ಮುರಿ ಹೊಡೆಯೆ ॥೧೯೧॥ ೬-೨೪/...

ಬೀಸುವಗ್ಗದ [ಹೊರೆಗಳನ್ನೈ]ತಂದರು
ಬೀಸಿ ಕಾಲಾಳು ಮೇಲಾಳು ।
ಸಾಸಿರ ಮಂದಿಯ ಹಿಡಿಯಾಳ ಹಿಡಿದರು
[ಲೇ]ಸುಳ್ಳ ಲಿಂಗಗೆ ತೋರಿ ॥೧೯೨॥ ೬-೭೫/...

ಇತ್ತರದಲಿ [ತಲೆಗಳ] ಬೆಟ್ಟ ಒಟ್ಟುತ
ಮತ್ತೆ ರಾಮನ ಪರಿವಾರ ।
ತತ್ತರದರಿವುದ ಕಂಡು ರುದ್ರನ ಮಂದಿ
ಒತ್ತಿ ನಡೆದರಿದಿರಾಗಿ ॥೧೯೩॥ ೬-೭೬/...

ಕಕ್ಕಸದಲಿ ಕಡಿದರು ರಾಮನ ದಂಡ
ಒಕ್ಕಲಿ ಹಿಮ್ಮೆಟ್ಟಿಸಿದರು ॥೧೯೪॥*

ಅಹುದೊ ಅಲ್ಲವೊ ನೀ ಚೆನ್ನಿಗ ರಾಮಯ್ಯ ಚೆಲ್ವನೆ
ಧರೆಗೆ ನೀ ಬಿರಿದಂಕನಹುದೋ ॥೧೯೫॥

ಐದು ಸಾವಿರ ಗಜ ತುರಗವ ಹಿಡಿದರು
ಹೊಯಿದು ಕೆಡಹಿದ ಮನ್ನೆಯರ ।
ಐದು ತಲೆಯ ಕಟ್ಟೆಯನೊಟ್ಟಿಸಿದನು
ಎಯ್ದು ಹಿಡಿದ ಧರ್ಮಗಹಳೆ ॥೧೯೬॥

ಕೇಳಿದ ದಂಡ ಮುರಿದ ಸುದ್ದಿ ರುದ್ರನು
ತಾಳಿದ ಮನದಿ ಕೋಪವನು ।
ಕೋಳಾಹಳವ ಮಾಡಿ ಕಡಿವೆ ರಾಮನ ದಂಡ
ದಾಳಿಡುವೆನು ಹೊಸಮಲೆಗೆ ॥೧೯೭॥ ೬-೨೭/೮-೧೧೯

ಈ ನೆವದಲಿ ಕುಮ್ಮಟವ ನೋಡುವೆನೆಂದು
ಗಮ್ಮನೆ ಗದ್ದುಗೆ ಇಳಿದು ।
ಬಿದ್ದು ಚರಣದಲಿ ಕೊಮಾರ ಎಪ್ಪತಿರಾಜ
ರುದ್ರ ಬೆಸನ ಚಿತ್ತೈಸು ॥೧೯೮॥ ೬-೨೮/೮-೧೨೦

ಮನ್ನೇರು ಮಂಡಲಿಕರು ಹೋಗಿ ರಾಮಗೆ
ಬೆನ್ನಕೊಟ್ಟರು ಕಂದ ಕೇಳೋ ।
ನಿನ್ನ [ಹವಣೆ] ಸಮರಕೆ ಸಾಲುವವರಾರು
ಇನ್ನು ನಾ ಹೋಗುವೆನೆಂದ ॥೧೯೯॥ ೬-೨೯/೮-೧೨೧

---

* ೧೮೬ನೆಯ ಪದ್ಯ ಇಲ್ಲಿ ಮತ್ತೆ ಬಂದಿದೆ (ಸಂ).

ತಂದೆ ಚಿತ್ತೈಸು ರಾಮನ ದಂಡ ಮುರಿವೆನು
ಕುಂದ ಮಾಡಿದರೆನ್ನ ನುಡಿಯ ।
ಹಿಂದಳ ಪಂಥದ ಹುಯ್ಯಲ ಹಾಂಗಲ್ಲ
ತಂದೆ ನೀ ತರಿಸು [ತುರಗ]ವನು ॥೨೦೦॥

ಬೊಲ್ಲನ ತರಹೇಳಿ ಮಲ್ಲ ಸಾಳಿಯನಟ್ಟಿ
ಅಲ್ಲಿ ರುದ್ರನು ಬೇಗ ಕರೆಸೆ ।
ಮೆಲ್ಲನೆ [ಗೆಳೆಯರು ಅರುವತ್ತು] ಕೂಡಿ
ಮಲ್ಲ ಸಾಳಿಯು ತಾ ನಡೆದ ॥೨೦೧॥ ೬-೩೨/೮-೧೨೬

ಉನ್ನಂತ ವಜ್ರಗಾರೆಯ ಮಾಳಿಗೆ
ಚಿನ್ನದುಪ್ಪರಿಗೆಯ ಕೆಳಗೆ ।
ಬಿನ್ನಣ ಬೀಗಮುದ್ರೆಯ ತೆಗೆದೊಳಯಕ್ಕೆ
ಚೆನ್ನ ಮಲ್ಲಯ್ಯನೊಳಪೊಕ್ಕ ॥೨೦೨॥ ೬-೩೩/...

ಚಿನ್ನದ ಕಡಿವಾಣ ರನ್ನದ ಮಖರಂಬ
ಉನ್ನಂತ ವಜ್ರ ಹಲ್ಲಣವು ।
ಬಿನ್ನಣದಲಿ ಜೋಡಿಸಿ ಪವಾಡಿಗಳನು
ಹೊನ್ನಂದುಗೆ ಕಾಲೊಳಿಟ್ಟ ॥೨೦೩॥ ೬-೩೪/...

ತರಕಸ ಸಿಂಗಾಡಿ ಹಿರಿಯ ಲವುಡಿಯನು
ಕರದಲೆಸೆವ ಬಲ್ಲೆಯವನು ।
[ಧು]ರದೊಳು ವೈರಿಯ ಮುರಿವ ಮರುಳಗೈಯ
ಭರದಿ ಕಟ್ಟಿದರು ಪಾಯವನು ॥೨೦೪॥ ೬-೩೬/...

ಮಾಳಿಗೆಯಿಂದ ಪೊರವಡಿಸಿ ಬೊಲ್ಲನ
ಬಾಳ ಮನ್ನೆಯರೊತ್ತಿನಲ್ಲಿ ।
ಆಳಿದೊಡೆಯ ರುದ್ರರಾಯ ನೋಡೆಂದರು
ದಾಳಿಟ್ಟು [ದೆಸೆಗೆ] ಲೆಂಗಿಪುದು ॥೨೦೫॥ ೬-೩೮/...

ಬಾಧಿಸಿ ದೆಸೆಗೆ ದಾಳಿಡುವ ಬೊಲ್ಲನ ಕಂಡು
ವಿಸ್ಮಯಬಟ್ಟು ಮನದಲ್ಲಿ ।
ಕುಸುಮ ಮಲ್ಲಿಗೆ ಸೇವಂತಿಗೆ ಗಂಧಾಕ್ಷತೆ
ಹೊಸ ಬಗೆ ಪೂಜೆ ಮಾಡಿದರು ॥೨೦೬॥ ೬-೩೯/...

ಶೃಂಗಾರ ಬೊಲ್ಲಗೆ ಮಂಗಳಾರತಿಯನು
ಚಾಂಗು ಭಲರೆಯೆಂದೆನುತ ।
ಅಂಗನೆಯರು ಆರತಿಯನೆತ್ತಿದರಾಗ
ಹಿಂಗದೆ ಸಂತೋಷದಲಿ ॥೨೦೭॥ ೬-೪೦/...

ಪುಲ್ಲಿ ಪಟ್ಟೆಯ ದಟ್ಟಿ ಉಟ್ಟ ಎಪ್ಪತಿರಾಜ
ಮಲ್ಲೆಗಾಸೆಯನು ಹಾಕಿದನು ।
ನಿಲ್ಲದೆ ವೀರಜಡೆಯ ಹೆಣೆಸಿದರಾಗ
ಒಳ್ಳೆಯ ಶಾಲ ಸುತ್ತಿದರು ||೨೦೮|| ೬-೪೨/...

ಬೊಲ್ಲನ ಏರಿ ಕುಮಾರ ಎಪ್ಪತಿರಾಜ
ಅಲ್ಲಿ ರುದ್ರಗೆ ಕೈಯ ಮುಗಿದು ।
ನಿಲ್ಲದೆ ತುರಗವನೇರಿ [ಹೊಣಕೆಯನು]
ಮೆಲ್ಲನೆ ಕೊಟ್ಟನಾಕ್ಷಣದಿ ||೨೦೯||

ತಂಬಟೆ ಭೇರಿ ನಿಸ್ಸಾಳ ಸೂಳೈಸಲು
ಕುಂಭಿನಿ ನಡಗುವಂದದಲಿ ।
ಸಂಭ್ರಮದಿಂದ ಪಟ್ಟಣವನು ಹೊರಹೊಂಟ
ಅಂಬುಜಸಖ ನಗುತಿರ್ದ ||೨೧೦||

ರಣವ ಕಾಣುತ ಬೊಲ್ಲ ಕುಣಿದು ಕೇಕರಿಸುತ
ತೃಣಕೆ ಲೆಕ್ಕಿಸದು ಸುದ್ದಿಯನು ।
ಎಣಿಕೆ ಇಲ್ಲದೆ ಹಿಂದೆ ಮುಂದೆ ಕೊಲ್ಲುತ ಬರೆ
ಹೊಣಿಕೆಯಲಿ ಹೊಯ್ದಿತು ದಂಡ ||೨೧೧|| ೬-೪೮/...

ಕೆಲಬಲ ಹಿಂಗಾಲಿ ಒದೆದು ಕೊ[ಲ್ಲುತಲಿ]
ಕೆಲಬಲದವರ ಕಚ್ಚಿಡುತ ।
ಕೆಲವು ರಾವುತರ ಎಪ್ಪತಿರಾಜ ಕೊಲುತಿರೆ
ಬಲಮುರಿಯಲಿ ಲಿಂಗ ಕಂಡ ||೨೧೨||

ರಕ್ಕಸಿ ಬೊಲ್ಲನ ಕಂಡು ರಾಮಯ್ಯನು
ದಿಕ್ಕನೆ [ಲಿಂ]ಗನ ಕರೆದ ।
ಲೆಕ್ಕಿ[ಸದಿದು] ವೈರಿಯ ದಂಡ ಬೊಲ್ಲನು
ಸಿಕ್ಕಿದ ಪರಿಯ ಹೇಳೆಂದ ||೨೧೩|| ೬-೪೯/...

ಬೊಲ್ಲನ ವಿವರವ ಪೇಳುವೆ ರಾಮಯ್ಯ
ಬಲ್ಲಿದ ಮುಂಗುಲನಲ್ಲಿ ।
ಒಳ್ಳೆಯ ಮಂಗಳ ಬೊಲ್ಲಗೆ [ಹುಟ್ಟಲು]
ಹೊಲ್ಲದ ದಿನದಲ್ಲಿ ಪಗಲೆ ||೨೧೪||* ೬-೫೦/...

---

* ಕಥೆಗೆ ಸಂಬಂಧ ಕಲ್ಪಿಸುವ ಸಲುವಾಗಿ ಈ ಪದ್ಯವನ್ನು "ಹೊಸ ಕುಮಾರರಾಮನ ಸಾಂಗತ್ಯ" (೬-೫೦) ದಿಂದ ಎತ್ತಿಕೊಳ್ಳಲಾಗಿದೆ (ಸಂ).

[ಅಶ್ವಶಾಸ್ತ್ರವನು] ಕೇಳಿದನು ಮುಂಗುಲಿರಾಯ
ಎಸೆವ ಕುದುರೆ ಲಕ್ಷಣವ ।
ವಿಷಗಳಿಗೆಯಲಿ ಪುಟ್ಟಿದ ಬೊಲ್ಲನು ಇದು
ಹೊಸ ಪರಿ ಲಾಯಕ್ಕೆ ಸಲ್ಲ ||೨೧೫|| ೬-೫೧/...

ಪೊಡವಿಗೆ ಹೊಸ ಪರಿ ತೇಜಿಯ ಮರಿಯೆಂದು
ಒಡನೆ ಮುಂಗಲಗೆ ಹೇಳಿದರು ।
ತಡೆಯದೆ ಲಾಯದಿ ಇರಬಾರದುಯೆಂದು
ಒಡನೆ ಹೊ[ರ]ಗೆ ಕಟ್ಟಿಸಿದರು ||೨೧೬|| ೬-೫೨/...

ಅಂದಿನ ದಿನದಿ ನಮ್ಮವರು ಹೋಗಿರ್ದರು
ಒಂದು ಸಾವಿರ ಕುದುರೆಯಲಿ ।
ಚಂದ ಚಂದದ ವ್ಯವಹಾರ ಮಾಡಿಕೊಂಡು
ತಂದರು ನಮ್ಮ ಪಟ್ಟಣಕೆ ||೨೧೭|| ೬-೫೫/...

ಎಪ್ಪತಿರಾಜ ಬೊಲ್ಲನನೇರಿದಾಕ್ಷಣ
ತಪ್ಪದೆ ನಾಲ್ಕು ಬೀದಿಯಲಿ।
ತಪ್ಪಿಸಿ ನೆಗೆಯಿತು ಪಟ್ಟ[ನೆ] ಹಾರಿತು
ಒಪ್ಪಿತು ನನಗಿರಲೆಂದ ||೨೧೮|| ೬-೫೮/...

ಇತ್ತ ರಾಮನು ಲಿಂಗ ಮಾತಾಡುತಿರಲಾಗ
ಅತ್ತ ಜಗಳ ಮೋಹರಿಸಿ।
ಒತ್ತುವ ದಂಡನು ತತ್ತರಿದರಿವುತ
ಕತ್ತರಿ [ಬಾಣ]ಲೆಸೆವುತ ||೨೧೯||

ನೆತ್ತರ ಕಡಲ ಸುರಿದು ಕಾಲಾಳಿನ
ಮೊತ್ತ ಕೆಡೆದುದುನೇನೆಂಬೆ ।
ಮೊತ್ತ ಮೊತ್ತದ ಮನ್ನೆಯ ಬೇಗದಿ ಬಂದು
ಮುತ್ತಿತು ರಾಮನ ದಂಡ ||೨೨೦||

ಮಂದಮಾರುತ ಶರಧಿಯ ದಾಂಟುವಂದದಿ ಅ
ನಂದವಾಯಿತು ಸಮರದಲಿ ।
ಅಂದು ಲೆಂಕೆಯ ಸಂಹಾರ ಮಾಡಿ[ದ ರಾಮ]
ಚಂದ್ರನಲ್ಲವೆ ರಾಮ ನೀನು ||೨೨೧||

ಸಿಂಹದ ಮರಿ ರಾಮನೆ ನಿನ್ನ ಬಿರಿದನು
ಹಿಂಗದೆ ಕೊಂಡಾಡುವರು ।

ಸಿಂಗಾಡಿ ಸರ[ಳ ನೋಡೆನುತೆ]ಪ್ಪತಿರಾಜ
ಭಂಗವಿಲ್ಲದೆ ತೆಗೆದೆಚ್ಚ ||೨೨೨|| ೬-೯೦/...

ಹುಸಿ ಹುಸಿ ನಿನ್ನಯ ಬಾಣ ಎಪ್ಪತಿರಾಜ
ಕುಸುರಿದರಿವೆ ನಿನ್ನ ಒಡಲ ।
ಅಸಮ [ಬಲ್ಲಿದ ರಾಮ] ತೆಗೆದೆಸೆಯಲು ಬೇಗ
ಹೊಸ ಬಗೆ ಹೊಳೆದು ತಪ್ಪಿಸಿದ ||೨೨೩|| ೬-೯೧/...

ಕಡು[ಗಲಿಗಳ] ಬಾಣ ತೀರ್ದವು ಸರದಿಯ
ಒಡನೆ ಸಾಹಸ ತೀರಲಿಲ್ಲ ।
ಹಿಡಿದ ಕಂಡೆಯಲಿಂದ ಕಡಿದಾಡಲಿಬ್ಬರು
ಸಿಡಿಲು ಸಿಡಿಲು ತಾಗಿದಂತೆ ||೨೨೪|| ೬-೯೨/...

ಕಂಡೆಯ ಜಳಪಿಸಿ ಕಡಿದಾಡಲಿಬ್ಬರು
ಕಂಡೆಯಲಿಕ್ಕಡಿಯಾಗಿ ।
ಗುಂಡಬ್ರಹ್ಮಯಗೆ ರಾಮುಗ ಶರಣೆಂದು
ಗಂಡಾಳು ತಿರುಪಿ ಹೊಯಿದನು ||೨೨೫|| ೬-೮೨&೯೩/...

ಫಡ ಫಡ ನೋಡೆನುತೆಪ್ಪತಿರಾಜ[ನ]
ತಡೆದನು [ರಾಮ] ಲವುಡಿಯಲಿ ।
ಪೊಡವೀಶ ರಾಮ ಕೋಪದಿ ವೀರರಸವುಕ್ಕಿ
ಜಡಿದು ಹೊಯಿದ ತಲೆ ಮುರಿಯೆ ||೨೨೬|| ೬-೯೪/...

ಲವುಡಿಯ ಗಾಯಕೆ ಎಪ್ಪತಿರಾಜನು
ತವುಳಿಸಿ ನಿಂದು ಜಜ್ಜರಿಸೆ ।
ಬವಣೆ ಬಿಟ್ಟಂತೆ ಜಜ್ಜರಿದು ರಕ್ತವು ಕಾರಿ
ಭವಗೆಟ್ಟು ಮುರಿದು ಹಿಮ್ಮೆಟ್ಟಿ ||೨೨೭|| ೬-೯೫/...

ಎಲ್ಲಿ ನೋಡಲು ಶೂಲಗಳೆದ್ದು ತಿವಿಯಲು
ಎಲ್ಲಿ ನೋಡಲು ಸಬಳಗಳು ।
ಅಲ್ಲಿಗಲ್ಲಿಗೆ ಆನೆ ಕುದುರೆ ಮಂದಿಯ ಕೊಲೆ
ತಲ್ಲಣಿಸಿತು ಮಾರ್ಬಲವು ||೨೨೮|| ೬-೯೬/...

ಒಂದು ಕಡೆಯ ಲಿಂಗರಾವುತ ಕಾಟಣ್ಣ
ಒಂದು ಕಡೆಯಲಿ ಪರಿವಾರ
ಒಂದು ಕಡೆಯಲಿ ರಾಮಯ್ಯ ಕೊಲ್ಲುತ ಬರೆ
ಮುಂದುಗೆಟ್ಟನು ರುದ್ರಸುತನು ||೨೨೯|| ೬-೯೭/...

ಕಂಗೆಟ್ಟು ರುದ್ರಸುತನು ಕಳವಳಿಸಿದ
ಜಂಗುಳಿ ರಾಯರ ಗಂಡ ।
ಮುಂಗುರುಳನು ಕೈಯಿಂದಲಿ ಪಿಡಿಕೊಂಡ
ತುಂಗವಿಕ್ರಮ ರಾಮನಾಥ ॥೨೩೦॥ ೬-೯೮/...

ಹಿಡಿದು ಎಪ್ಪತಿರಾಜನ ಹೆಡಗೈಕಟ್ಟಿ
ಒಡನೆ ಲೆಂಗಿಸಿದ ಬೊಲ್ಲನಿಗೆ ।
ಬಿಡದಡಿಸು[ತ] ಬೊಲ್ಲನು ತನ್ನ ಹಿಂದಣ
ಜಡನ ಕೆಡಹಿ ಪುಟ ನೆಗೆದು ॥೨೩೧॥ ೬-೯೯/...

ಒಡನೆ ರಾಮನ ವೀರಕೆ ಬೊಲ್ಲ ಮೆಚ್ಚಿತು
ಬಿಡದೆ ನೆಗೆದು ರಣದೊಳಗೆ ।
ಕೆಡಹಿ ಬಿಟ್ಟಿತು ವೈರಿಗಳನು ಕಚ್ಚಿತು
ಕುಡಿಯಿತು ಬಿಸಿಯ ರಕ್ತವನು ॥೨೩೨॥ ೬-೧೦೦/...

ಹೆಡಗೈಯ ರುದ್ರಸುತನ ಸಹಿತಲಿ ರಾಮ
ಎಡಬಲ ರಣವ ನೋಡುತಲಿ ।
ಕಡುಗಲಿ ಹಿಂದಕ್ಕೆ ತಿರುಗಲಾಕ್ಷಣದಲ್ಲಿ
ಒಡನೆ ಲಿಂಗನು ಕೈಯ ಮುಗಿದ ॥೨೩೩॥ ೬-೧೦೩/...

ಕಂತುಸನ್ನಿಭ ರುದ್ರ[ರಾಯಸುತ]ನ ಬಿಡು
ಪಂಥ ಸಂದಿತು ಕುದುರೆಯ ।
ಅಂತು ತಿರುಗಿದ ಸಂತೋಷದಿ ರಾಮಯ್ಯ
ಮುಂತೆ ಲಿಂಗಗೆ ಕೈಯ ಮುಗಿದ ॥೨೩೪॥ ೬-೧೦೪/...

ಎಪ್ಪತಿರಾಜನ ಬಿಡಲು ಬೇಗದಿ ಪೋಗೆ
ತಪ್ಪದೆ ತಲೆ ಮುಸುಕಿನಲಿ ನಿ।
ಮ್ಮಪ್ಪಗೆ ಹೇಳಿ ಕಪ್ಪವನು ಕಳುಹೆಂದು
ಒಪ್ಪಾಗ ಮಾತನಾಡಿದನು ॥೨೩೫॥ ೬-೧೦೬/...

[ಎಪ್ಪತಿಗೊರೆದು] ಗುಂಡಬ್ರಹ್ಮಯ್ಯನೈದಿ
ಬಿಟ್ಟನು ಬೀಡಾರವನು ।
ಕತ್ತಲೆಗವಿಯಲು ಹೊತ್ತಿಸಿ ದೀಪವ
ಮೊತ್ತದ ಪಾಳೆಯದೊಳಗೆ ॥೨೩೬॥ ೬-೧೦೮/...

ಇತ್ತಲಿ ಗುಂಡಬ್ರಹ್ಮಯ್ಯನ ವಾಲ[ಗ]ದಿ
ಕರ್ತು ರಾಮನು ಮುಖದೊಳೆದ ।

ಅರ್ತಿಲಿ ಊಟ[ವ ಮಾಡಿ] ನಿದ್ರೆಯೊಳಿರೆ
ಮತ್ತೆ ಮಾರ್ತಂಡನುದ್ಭವಿಸೆ ||೨೩೭|| ೬-೧೦೮/...

ಬೊಲ್ಲನ ಏರಿ ಉದಯ ವೇಳೆಯದಿ ರಾಮ
ಅಲ್ಲಿ ಕದಲಿ ಹೊಸಮಲೆಗೆ ।
ಬಲ್ಲಿದ ದೇವಿಶೆಟ್ಟಿಯ ಲಿಂಗ ಮೊದಲಾದ
ಎಲ್ಲ ಪಾಳೆಯವ ತೆರಳಿಸಿ ||೨೩೮|| ೬-೧೦೯/...

ಬಿಡುತ [ಬರಲು] ಪಾಳೆಯವ ರಾಮಯ್ಯನು
ಒಡನೆ ಹೇಮರಡ್ಡಿ ಕೇಳಿ ।
ತಡೆಯದೆ ತನ್ನಯ ತಳತಂತ್ರ ಸಹವಾಗಿ
ಒಡನೆ ತಾಗಿದನು ರಾಮುಗನ ||೨೩೯|| ೬-೧೧೦/...

ಮದಗಜರಡ್ಡಿ ಮಾಚನರಡ್ಡಿ ಮೊದಲಾದ
[ಕದನ ಕರ್ಕಶ] ಕಲ್ಲಿರೆಡ್ಡಿ ।
ಮದನರಡ್ಡಿಯು ಮನ್ಮಥರಡ್ಡಿ ನಾಯಕ
ಕಾದುವ ಛಲದಂಕ ರಡ್ಡಿ ||೨೪೦|| ೬-೧೧೧/...

ದೇಶ ದೇಶದ ತೆಲುಗರು ಕೂಡಿತಲ್ಲಲ್ಲಿ
ಆಸೆಬಿದ್ದರು ತಮತಮಗೆ ।
ಸಾಸಿರ ಮುಖದಲೇರಿತು ತೆಲುಗರ ದಂಡ
ಕೇಸರಿ ಗಮನನ ನೆನೆದು ||೨೪೧||

ಬಿಡು ರುದ್ರಸುತ ಬೊಲ್ಲನನೆಂದು ತೆಲುಗರು
ಒಡನೆ ಗರ್ಜಿಸುತಲಿರಲು ।
ಕಡಿದು ಗುಪ್ಪೆಯನೊಟ್ಟಿ ತೆಲುಗರ ದಂಡನು
ಕೊಡೆಯಕಲ್ಲಿಯ ಬಯಲೊಳಗೆ ||೨೪೨|| ೬-೧೧೪/...

ಹೊಡೆದರೆ ಗಡಿಗಳು ಹರಿದವು ತೆಲುಗರು
ಒಡನೆ ನೆತ್ತಿಯ ಚಿಪ್ಪು ಹರಿದು ।
ಹಿಡಿದರು ದಿಕ್ಕಿ ದಿಕ್ಕಿಲಿ ಕಾಲಾಳನು
ಒಡೆದು ಒಡ್ಡದು ತಾ ಇರಲು ||೨೪೩||

ನಾಲ್ಕು ಕಾಲುಗಳು ಹರಿದು ಬಿದ್ದು ಧರೆಯೊಳು
ನೂಕಲಮ್ಮರು ಕುದುರೆಗಳ ।
ಸಾಸಿರ ಮಂದಿ ತೆಲುಗರ ಹಿಡಿದು ಬೇಗ
ಭಾಷೆಯ ಲಿಂಗಗೆ ತೋರೆ ||೨೪೪||

ಕೇಳಿದ ಕಂಪಿಲ ಮಗ ಬಂದ ಸುದ್ದಿಯ
ಆಳು ಕುದುರೆ ಮಂದಿ ಸಹಿತ ।
ಜೋಳದ ರಾಶಿ[ಯ ಬಯಲಲಿ] ಕಂಡನು
ಬಾಳ ಪಂಥದ ರಾಮುಗನ ॥೨೪೫॥ ೬-೧೨೭/...

ತಂದೆ ಚಿತ್ತೈಸು ಕಂಪಿಲ ರಾಜಕಾರ್‍ಯವ
[ದಂ]ದೊಡ್ಡಿದೆನು ಜಗವರಿಯೆ ।
ಮಂಡಲವರಿವಂತೆ ಹಿಡಿತಂದೆ ಬೊಲ್ಲನ
ನೆಂದು ತೋರಿದನು ಆ ಕ್ಷಣಕೆ ॥೨೪೬॥

ಯಾರು ಹೇಳೆಲೊ ನಿನ್ನ ಐವರು ಮಕ್ಕಳು
ಆರು ಬಂಟರು ಆದಂಥವರು ।
ತೋರಲೇತಕೆ ಮೂಗ ಕೊಯ್ದು ಕನ್ನಡಿಯನು
ಭಾರಿಯತನವಿರಬೇಕು ॥೨೪೭॥ ೬-೧೩೨/...

ಧರೆಯೊಳು ನಿನ್ನ ಪೊಗಳ[ಲಸದ]ಳವ[ಯ್ಯ]
ಸರಿ ಮಾಡುವರ್ತಿ ಐವರನು ।
ಬ[ಲು]ಗೈಯ ರುದ್ರನ ಕಾದಿ ಬೊಲ್ಲನ ತಂದೆ
ಧುರಗಲಿ ಕಂಪ ಕೊಂಡಾಡೆ ॥೨೪೮॥

ಕಂದನ ಸಂಭ್ರಮದಿಂದ ಕಂಪಿಲರಾಯ
ಬಂದು ಕುಳಿತ ಹಜಾರದಲಿ ।
ಬಂದವರಿವರಾರೆನುತ ಕಂಪಿಲರಾಯ
ಕಂದನ ಬೇಗ ಬೆಸಗೊಂಡ ॥೨೪೯॥

ಇವರೆನ್ನ ತಂದೆಗಳಿವರೆನ್ನ ಬಂಧುಗ
ಳಿವರೆನ್ನ ಛಲಕೆ ಸಂದವರು ।
ಇವರೀಗ ದೇವಿಶೆಟ್ಟಿಯು ಲಿಂಗಣ್ಣನುಯೆಂದು
ವಿವರವ ಪೇಳ್ದ ತಂದೆಯೊಳು ॥೨೫೦॥

ಪಟ್ಟಣಶೆಟ್ಟಿಗಳಿವರೋರುಗಲ್ಲಿನ
ದಿಟ್ಟನು ರುದ್ರರಾಯನಿಗೆ ।
ಮುಟ್ಟಿ ವೆಚ್ಚವ ನಡೆಸುವ ದೇವಿಶೆಟ್ಟಿಯ
ದಿಟ್ಟ ಲಿಂಗಣ್ಣನೆಂಬವನು ॥೨೫೧॥ ೬-೧೩೦/...

ಚಂದಚಂದದ ಪಡುವಲ ಬೀಡಾರವ
ಅಂದು ಕೊಟ್ಟರು ಲಿಂಗಣಗೆ ।

ಮಂದಿ ಕುದುರೆಯ ಸಂದಣಿಯ ಕಳು[ಹಿ] ಬೇಗ
ಬಂದನು ತನ್ನರಮನೆಗೆ ||೨೫೨||

ಭೂತಳದೊಳು ಮಹಿರಾವಳನೀತನು
ಸೀತೆಯರಸನಳಿಯನು ।
ಪಾತಕವಿಲ್ಲದೆ ಕ್ಷತ್ರಿಯ ರಾಮನು
ಭೂತಳದೊಳು ಜನಿಸಿದನು ||೨೫೩||

ಬರಡು ಪಶುಗಳೆಲ್ಲ ಕರೆಯೆ ಸುರಭಿಯಾಗಿ
ಹಿರಿಯ ಬಂಜೆಗೆ ಹೆಮ್ಮಗನು ।
ಕರೆವುದು [ಧರೆ] ಬೆಳೆವುದು ಕೇಳ್ವರಿಗೆಲ್ಲ
ಸಿರಿಯ ಕೊಡುವ ಚೆನ್ನರಾಮ ||೨೫೪||

ಬಾಣವ್ಯೆದುಳ್ಳನ ರಾಣಿಯಂದದಲಾಗ
ಜಾಣ ರಾಮನ ಹೆತ್ತ ಮಾತೆ ।
ಮಾಣದೆ ರನ್ನದಾರತಿಯನೆತ್ತಿದಳಾಗ
ಜಾಣ ಹೊಕ್ಕಲ್ಲಿಗೆ ಸಂಧಿ ||೨೫೫||

ಅಂತು ಸಂಧಿ ೫ ಕ್ಕಂ ಪುಟ ೬೫೩ (>೬೩೮)ಕ್ಕಂ ಮಂಗಳಮಹಾಶ್ರೀ.

❖❖

ಸಂಧಿ : ಆರು

❖

ಚಂಡಿನಾಟ - ರತ್ನಾಜಿಯ ವ್ಯಾಮೋಹ

ಗುರುವೆ ಎನಗೆ ಗತಿ ಗುರುವೆ ಎನಗೆ ಮತಿ
ಗುರುವೆ ಚರಣಕೆ ಶರಣೆಂಬೆ ।
ಗುರುವಿಂದಲಿ ಕೃತಿಯನು ಮೂಜಗದೊಳು
ವಿರಚಿಸುವೆನು ಮುದದಿಂದ ॥೧॥

ಗರಿಯಿಲ್ಲದಂಬನೊಂದ್ಯೆನೂರನೆಚ್ಚರೆ
ಗುರಿ ತಾಗುವುದೆ ಲೋಕದೊಳು ।
ಗರಿಗಣೆ ಸುದ್ದ ರಾಮನ ಕೃತಿಬಾಣದಿ
ಧುರಧೀರನೆಚ್ಚ ಗಂಗಯ್ಯ ॥೨॥

ಬಲ್ಲಂತೆ ಪೇಳುವೆನೆಲ್ಲ ಕವಿಗಳೊಳು
ಸೊಲ್ಲಡಗಿದರೆ ತಿದ್ದುವುದು ।
ಇಲ್ಲದಿದ್ದರೆ ಸುಖದಿಂದ ಕೇಳ್ವುದು
ಎಲ್ಲರು ರಾಮನ ಕೃತಿಯ ॥೩॥

ಹೊಸ ನುಡಿ ರಸಕಾವ್ಯ ನೀತಿಬಂಧವ ಕಂಡು
ನಸು ಕವಿಗಳು ಮಚ್ಚರಿಸೆ ।
ಒಸೆದು ಕೇಳ್ವರಿಗೆ ಕರ್ಜುರದ ಮಾವಿನಹಣ್ಣು
ರಸಿಕನಿಂತೆಂದ ಗಂಗಯ್ಯ ॥೪॥

ಕಡೆಯ ವೇಂಟೆಯನಾಡಲತ್ತ ಕಂಪಿಲರಾಯ
ಧೃಡಗಲಿ ರಾಮಯ್ಯನಿತ್ತ ।
ಸಡಗರದಲಿ ಮೈಹಾಳಿಯ ಬಯಲಿಂದ
ಕಡುಗಲಿ ಬಂದ ಪಟ್ಟಣಕೆ ॥೫॥

ವೀರ ರಾಮಯ್ಯ ಬೇಂಟೆಯನಾಡಲೊಲ್ಲದೆ
ಧಾರುಣಿಪುರದಿಂದ ತಿರುಗಿ ।
ಊರೊಳಗಣ ಹರಿಗೋಲನು ತರಿಸಿದ
ಲೋಲ ರಾಮುಗನು ಅರ್ತಿಯಲಿ ॥೬॥

ಊರೊಳಗಣ ಹರಿಗೋಲುಗಳನ್ನೆಲ್ಲ
ಧೀರ ರಾಮಯ ಕೂಡಿಕೊಂಡ।
ಭೇರಿಯ ಹೊಯಿಸಿಕೊಂಬುತ ಲೆಗ್ಗೆ ಮಾಡಿದ
ನೀರಾಟಕೆ ತೆರಳಿದನು ॥೭॥

ಕಂಪಿಲರಾಯನ ಸುತನು ರಾಮಯ್ಯನು
ಹಂಪೆಯ ಹೊಳೆಗೆ ತಾ ನಡೆದ ।
ಕಂಪರಾಜನು ಹಂಪರಾಜ ಕೊಂಡೆಯ ರಾಜ
ಸಂಪಿಗೆಗೇರಿ ಸಿಂಗರಾಜ ॥೮॥

ಕಡಹರಿ ಕಾಮನು ಹಡಪದ ಬೋಗನು
ನಡೆಕೋಟೆ ನಿಂಗ ಮಂಗಣನು ।
ಕಡುಗಲಿ ಗುಜ್ಜಮಲ್ಲ ಸಾಳುವ ತಿಮ್ಮ
ತಡೆಯದೆ ನೀರಾಟಕೈದಿ ॥೯॥

ಕಂಗಳು ಮೂರುಳ್ಳ ದೇವಗೊಂದನೆ ಮಾಡಿ
ಗಂಗೆಗಿಳಿದ ಚೆನ್ನರಾಮ ।
ತಂದು ಹಾಕಿದರಾಗಳೆ ಹರಿಗೋಲನು
ಬಂದೇರಿದನು ಚೆನ್ನರಾಮ ॥೧೦॥ ೯-೨೪/...

ಹೊನ್ನಂಡೆಯು ರನ್ನದ ಜೀರ್ಕೊಳವೆಯು
ಉನ್ನಂತ ಬೆಳ್ಳಿಯ ಕೊಂಬ
ಚೆನ್ನಿಗರಾಮ ಅಗ್ಗಣಿಯ ಮೊಗೆದುಕೊಂಡು
ಮಾನ್ಯರ ಮೇಲೆ ಚೆಲ್ಲಿದನು ॥೧೧॥ ೯-೩೦/೧೪-೧೧

ಅಬ್ಬರದಲಿ ನೀರ ಬಗ್ಗಿ ತೆಗೆದುಕೊಂಡು
ತ[ಬ್ಬಿಬ್ಬು]ಗೊಳುತೆ ಮನ್ನೆಯರು
ಒಬ್ಬೆಗೊಳ್ಳುವ ಬಲು ಲೆಗ್ಗೆಯ ಭರಕಿನ್ನು
ಹೆಬ್ಬೇರಿಗಾಳೆ ಸಾರಿದವು ॥೧೨॥

ಒತ್ತಿ ಬಂದನು ಕಾಟಣ್ಣನು ಬೇಗದಿ
ಮೊತ್ತದೈನೂರು ಹರಿಗೋಲು ।

ಹತ್ತಿರ ಸೇರಿ ರಾಮನ ಕಟ್ಟಿಕೊಂಬುತ
ಎತ್ತಿ ಹೊಯ್ದರು ನೀರೋಕುಳಿಯ ||೧೩|| ೯-೨೯/೧೪-೧೩

ಕಡುಗಲಿ ರಾಮಯ್ಯ ಒಡನೆ ನೀರ ಹೊಯ್ದು
ಕೆಡೆ ಮುರಿದೋಡೆ ಮನ್ನೆಯರು ।
ಸುಡುವ ಪೆಟಿಲು ಪೊಡೆವ ತಂಬಟ ಭೇರಿ
ನುಡಿವ ಕಾಳೆಯು ನಾಗಸ್ವರವು ||೧೪||

ಕೆಲರು ನೀರೋಕುಳಿ ಕೆಲರು ಬೇಂಟೆಯೊಳಿಂದ
ಬಲು ಮೀನುಗಳು ಬಗೆಬಗೆಯ ।
ಕಲಿ ಭಟರುಗಳು ಹಿಡಿದು ತಂದು ರಾಮಗೆ
ಸಲೆ ಬೇಗದಿಂದ ತೋರುವವರು ||೧೫|| ೯-೩೧/...

ಹರಲೆ ಗಿರಲೆ ಕೆಮ್ಮೀನು ಮಾಲಗ ಮೀನು
ಸರಿದೊಡ್ಡ ಬಾಳೆಯ ಮೀನು ।
ಮುರುಡುಗೋಡಿನ ಔಲು ಕುಂಚಾಳದ ಮೀನ
ಉರುವ ಬೇಡರು ಹಿಡಿದರು ||೧೬|| ೯-೪೧/...

ಕಡುಗಲಿ ನೀರಾಟವಾಡಿ ದಣಿದು ರಾಮ
ಕಡೆಗೆ ಮನ್ನೆರ ಕೂಡಿಕೊಂಡು ।
ಗಡಿಬಿಡಿ ಕೊಳಲು ಕಂಚಟ ಸಹಿತಲಿ ರಾಮ
ಕಡುಗಲಿ ಬಂದ ಪಟ್ಟಣಕೆ ||೧೭||

ನಡೆದು ಬಂದನು ಅರಮನೆಗೆ ರಾಮಯ್ಯನು
ಕಡುಗಲಿ ಮನ್ನೇರ ಕಳುಹಿ ।
ಸಡಗರದಲಿ ರಾಮಲಾದೇವಿ ಮನೆಯನು
ಕಡು ತವಕದಿ ಬಂದು ಹೊಕ್ಕ ||೧೮|| ೯-೫೧/...

ಪನ್ನೀರ ಜಳಕ ಮಜ್ಜನ ಮಾಡಿ ಸವಿದುಂಡು
ತನ್ನ ವಲ್ಲಭೆಯ ವಾಲಗದಿ ।
ರನ್ನದ ತೂಗು ಮಂಚದಿ ನಿದ್ರೆಗೆಯಿದೆದ್ದು
ಉನ್ನಿಸಿದನು ಮನದೊಳಗೆ ||೧೯||

ಹೊತ್ತು ಹೋಗದು ಚಂಡನಾಡಬೇಕೆನುತಲಿ
ಮತ್ತೆ ಮನ್ನೇರ ಕರೆಸಿದನು ।
ಮುತ್ತಿನ ಓಲೆ ಚಿಮ್ಮುರಿಯ ಬಿಗಿದು ಸುತ್ತಿ
ಮತ್ತಿಟ್ಟ ಹೊನ್ನ ನಾಮವನು ||೨೦|| ೯-೫೫/೧೫-೭

ನಿಲವುಗನ್ನಡಿಯ ನೆಳಲ ನೋಡಿ ರಾಮಯ್ಯ
ಇಳಿವಿಟ್ಟ ಲುಳಿ ಪದಕವನು ।
ಸುಲಲಿತವಹ ಕಂಠಮಾಲೆಯ ಧರಿಸಿದ
ಕಲಿಗೊರಳನು ಶೃಂಗರಿಸಿ ॥೨೧॥ ೧೫-೮/...

ಮಾಳವರಾಯರ ಗಂಡನೆಂದೆನಿಸುವ
ತೋಳ ಬಾಪುರಿಗಳನಿಟ್ಟ ।
ಸಾಳುವ ರಾಯರದಲ್ಲಣನೆನಿಸುವ
ಕೀಲ ಕಡೆ[ಯ]ವನಿಕ್ಕಿದನು ॥೨೨॥ ೯-೫೯/೧೫-೧೩

ಮುಂಗು[ಲಿ]ರಾಯರ ಗಂಡನೆಂದೆನಿಸುವ
ಮುಂಗಯ್ಯ ಮುರಿಗಳನಿಟ್ಟ ।
ಹಿಂಗದೆ ರಾಯರಾವುತರ ಗಂಡನೆಂಬ
ಹೊಂಗೆ[ಲ]ಸದೊಡ್ಡಣನಿಟ್ಟ ॥೨೩॥ .../೧೫-೧೪

ಕೊಟ್ಟ ಭಾಷೆಗೆ ತಪ್ಪುವ ರಾಯರ ಗಂಡ
ದಿಟ್ಟ ರಾಮನು ತನ್ನ ಕರಕೆ ।
ಇಟ್ಟನು ರತ್ನ ಮುತ್ತುಗಳುಂಗುರಗಳ
ಕಟ್ಟಾಳು ಕವಿ ವೀರ ರಾಮ ॥೨೪॥ ೯-೬೧/...

ಸಾಲು ಸಾಲಲಿ ಬಿರಿದನು ಹೊಗಳಿಸಿಕೊಂಬ
ಸಾಲು ಮನ್ನೆರ ಗಂಡನೆಂದು ।
ವಾಲೆ ಬಿಗಿದು [ಮಲ್ಲ]ಗಾಸೆಯ ಹಾಕಿದ
ಲೋಲ ರಾಮುಗನು ಅರ್ತಿಯಲಿ ॥೨೫॥

ಡಿಳ್ಳಿಯ ಗಂಡ ಡಿಳ್ಳಿಯನಾಳುವ
ಸುರಿತಾಳನ ಗಂಡನೆಂಬ ।
ಬಲ್ಲಿದ ನೇಮಿಯ ಗಂಡನೆಂದೆನಿಸುವ
ಮೆಲ್ಲನೆ ಕಡೆಯವಿಕ್ಕಿದನು ॥೨೬॥

ಇತ್ತ ರಾಮಯ್ಯ ಶೃಂಗರ ಮಾಡಿಕೊಳಲಾಗ
ಮತ್ತೆ ರಾಮಲದೇವಿ ಕಂಡು ।
ಮುತ್ತಿನಾರತಿಗಳ ರಚಿಸಿ ತಂದಳು ಬೇಗ
ಎತ್ತಿ ಚಾಂಗು ಭಲರೆಯೆನುತ ॥೨೭॥ .../೧೫-೧೮

ಗಂಧ ಕಸ್ತೂರಿಯು ಕುಂಕುಮ ಜವಾದಿಯ
ತಂದು ಪನ್ನೀರೊಳು ಬೆರೆಸಿ

ನಿಂದು ರಾಮಲೆ ಮರ್ದನವ ಮಾಡೆ ಬೀಳ್ಕೊಂಡು
ಮಂದಿರವನು ಹೊರಹೊಂಟ ||೨೮||

ಪಟ್ಟಸಾಲೆಗೆ ನಡೆದನು ಆಗ ರಾಮಯ್ಯ
ಕಟ್ಟಿಗೆಯವರನು ಕರೆದು ।
ಪಟ್ಟಣದೊಳಗುಳ್ಳ ಮನ್ನೆಯರೆಲ್ಲರ
ತೊಟ್ಟು ಶೃಂಗರವಾಗ ಹೇಳೊ ||೨೯|| ೯-೬೩/೧೫-೨೧

ಎಂದ ಮಾತನು ಕೇಳುತಲಿ ಕಟ್ಟಿಗೆಯರು
ಬಂದರು ಕೇರಿ ಕೇರಿಯಲಿ ।
ಮಂದಿಯ ಹೊರಡ ಹೇಳಿದರು ಶೃಂಗರವಾಗಿ
ಎಂದು ಸಾರಿದರು ಪಟ್ಟಣಕೆ ||೩೦|| ೯-೬೪/೧೫-೨೨

ಹಿಂದಣ ರಾಯರಾಡಿದ ಮುತ್ತಿನ ಚೆಂಡ
ಇಂದು ರಾಮಯ್ಯನಾಡೇನೆಂದ ।
ಮಂದಿಯ ಹೊರಡ ಹೇಳಿದನು ಶೃಂಗರವಾಗಿ
ಎಂದು ಸಾ[ರ]ಲು ಮುಂಚಿತಾಗಿ ||೩೧|| ೯-೧೮೪/...

ಚೆಲುವ ರಾಮಯ ಚೆಂಡಾಡುವ ಬಯಲಿಗೆ
ಲಲನೆಯರೆಲ್ಲ ಶೃಂಗರಿಸಿ ।
ಕಲೆಯ ವೇಶ್ಯೆಯರೆಲ್ಲ ಹೊರಡೆಂದು ಸೇವಕ
ರುಲಿಯೆ ಸೂಳೆಗೇರಿಯೊಳಗೆ ||೩೨|| ೯-೧೮೦/...

ಕಾಮನ ಪಟ್ಟದಾನೆಗಳರ್ತಿಯಿಂದಲಿ
ಹೇಮದಿ ಶೃಂಗರಿಸಿದರು ।
ಕೋಮಲೆಯರು ಬಗೆಬಗೆಯ ನಾಣ್ಯವನುಟ್ಟು
ಸೀಮೆಯ ಹೊರಹೊಂಟರಾಗ ||೩೩||

ಸೂಳೆ ಹಂಪಾಯಿ ಬಂದಳು ಬೇಗ ನಲವಿಂದ
ಮೇಲು ರವುಡೆ ಸೊಗಸುತಲಿ ।
ಭಾಳ ಪಂಥವನಾಡುವ ಜಾಣ ವಿಟರಿಗೆ
ಲಾಳ ಸಂಕೊಲೆ ಬೊಮ್ಮಿ ನಡೆಯೆ ||೩೪|| ೯-೧೮೧/...

ಕುಂಭಕೋಣೆಯ [ವಿರುಪಾಯ] ನಡೆದಳು
ಬೊಂಬೆ ಸರಪಳಿ ಕಾಲೊಳಿಕ್ಕಿ ।
ಸಂಭ್ರಮಿಸುತ ವೇಶ್ಯೆಯರ ಪಡೆ ನಡೆಯೆ
ಅಂಬು ತಾಗಿತು ವಿಟರೆದೆ[ಗೆ] ||೩೫|| ೯-೨೦೨/...

[ಕಿ]ರಿ ಹೊತ್ತಿಗೆ ಹಿಡಿ ಹೊನ್ನ ಕೊಂಬುವಳೊಬ್ಬ
ಸುರತದ ಸುಗ್ಗಿ ಎಂಬವಳು।
ಹೊರಟಳು ಪಿನುಗುಂಡಿ ಸೋಮಿಯೆಂಬವಳಾಗ
ಭರದಿಂದ ಚೆಂಡ ನೋಡುವರೆ ||೩೬|| ೯-೧೮೨/...

ಓರುಗಲ್ಲಿಂದ ಬಂದಳು ಸೂಳೆ ಯಲ್ಲಾಯಿ
ಭೋರನೆ ವಿಟರುಗಳೊಡನೆ ।
ಸೇರಿಸುವಳು ಸುರತದಲಿ ಸೂ[ರೆ]ಗಳನು
ಧೀರೆ ನಡೆದಳರ್ತಿಯಲಿ ||೩೭|| ೯-೧೮೬/...

ದೇವಿಶೆಟ್ಟಿಯ ಲಿಂಗ ಬೇವಿನ ಸಂಗಯ್ಯ
ಕೋವಿದ ಕೋಟೆಗರ ದೇಮ ।
ಹಾವಳಿಕಾರ ಹಂಪನು ರೂಪನಂದನು
ತೀವಿ ರಾಮನ ಬಳಿಗೈದಿ ||೩೮|| ೯-೬೬/...

ಚಿತ್ತಜ ಸಮರೂಪ ರಾಮನ ಕಾಣುತ
ಎತ್ತಿ ಕರಗಳ ಮುಗಿದು ।
ಒತ್ತಿಲಿ ಹೊನ್ನ ಬಟ್ಟಲೊಳು ವೀಳ್ಯವ
ಇತ್ತರೈವರು ಮಾನ್ಯರಿಗೆ ||೩೯|| ೯-೬೭/...

ಹೆಣ್ಣಿಂದಲಳಿವ ಕಂಟಕವುಂಟು ರಾಮಯಗೆ
ಹಣ್ಣಿತು ಲೆಗ್ಗೆ ಚೆಂಡಾಟ ।
ಕಣ್ಣ ಮುಂದೆಯು ಲೆಗ್ಗೆಯನಾಡಬೇಕೆಂದು
ಉನ್ನಿಸಿದನು ಮನದೊಳಗೆ ||೪೦||

ಹರುಷದಿ ರಾಮನು ದೊರೆಗಳೊಳು ನುಡಿದನು
ಹಿರಿದು ಲೆಗ್ಗೆಯನಾಡೇನೆಂದು ।
ಹರಿಯಮ್ಮನ ಚೆಂಡ ಬೇಡುವೆನೆನುತಲಿ
ಧುರಧೀರ ಅರಮನೆಗೈದಿದನು ||೪೧||

ರಾಜಬೀದಿಯೊಳಾಗ ನಡೆತಂದ ರಾಮನು
ಮೂಜಗದೊಳು ಕಲಿಧೀರ ।
ರಾಜವದನೆಯರು ಕಂಡು ಕಾಮಿಸಿ ಬೇಗ
ವಾಜೆಗೆಟ್ಟರು ಮನದೊಳಗೆ ||೪೨||

ಕಡುಗಲಿ ಇಮ್ಮಡಿ ಕಾಮುಸನ್ನಿಭನೆಂದು
ಒಡನಡುವೆಯರು ಕೊಂಡಾಡೆ ।

ತಡೆಯದೆ ಇವನಂಗ ಸೋಂಕಿದವರಿಗೆಲ್ಲ
ಪೊಡವಿಯನಾಳುವ ಪದವಿ ||೪೩||

ತಲೆಬೇನೆ ಕೆರಳಿತು ಕೆಲವು ಸ್ತ್ರೀಯರಿಗೆಲ್ಲ
ಚೆಲುವ ರಾಮನ ಮುಖ ನೋಡಿ ।
ಸಲೆ ಈತನ ಕೂಡುವ ಭಾಗ್ಯಯೆನುತಲಿ
ಹೊಲಬುಗೆಟ್ಟರು ತರಳೆಯರು ||೪೪||

ಹಿಡಿದ ಬಿಳಿಯೆಲೆ ಕರದಲ್ಲಿ ಪುಡಿಯಾದವು
ಕಡುಗಲಿ ರಾಮನ ಕಂಡು ।
ನುಡಿ ಮರೆದು ಮೋಹಿಸಿ ಹೆಣ್ಣುಗಳೆಲ್ಲರು
ಒಡೆದರು ಕಾಮನ ಕೆರೆಯ ||೪೫||

ಗಮ್ಮನೆ ರಾಮನ ಕಾಣುತ ಕೆಲಬರು
ತಮ್ಮೊಳು ತಾವೆ ಮಾತಾಡಿ ।
ಒಮ್ಮಿಗೆ ಈತನ ಒಲಿಸಬೇಕೆನುತಲಿ
ತಮ್ಮ ಪಣೆಗೆ ಮದ್ದನಿಟ್ಟು ||೪೬||

ಕಂತು[ಸನ್ನಿಭ] ರಾಮಯ್ಯನ ಕಾಣುತ
ಇಂತಿವನೊಲಿಸಬೇಕೆನುತ ।
ನಿಂತೊಬ್ಬ ಮುದಿಸೂಳೆ ರಾಜಬೀದಿಯೊಳಾಗ
ಮಂತ್ರಿಸಿಟ್ಟಳು ಹರಳಿನಲಿ ||೪೭||

ಇತ್ತರದಲಿ ನಿಂದ ಸತಿಯರ ಸ್ತೋಮವ
ಮತ್ತೆ ಚೆನ್ನಿಗರಾಮ ಕಂಡು ।
ಹೆತ್ತ ತಾಯಿಗಳು ಮಗನ ನೋಡುತಹರೆಂದು
ಚಿತ್ತ[ದಲವನು] ಹಿಗ್ಗಿದನು ||೪೮||

ಪತಿಗಳಲ್ಲದೆ ಅನ್ಯವರಿಯದ ಸತಿಯರ
ಗತಿಗೆಡಿಸುವನೀತ ಕಾಮ ।
ಮತಿಗೆಟ್ಟು ಪುರಜನ ಕಾಮಿಸುತಿಹರಿತ್ತ
ಚತುರ ನಡೆದನರಮನೆಗೆ ||೪೯||

ಚಿತ್ರಶಾಲೆಯ ಎಯ್ದು ಮುತ್ತಿನ ಬಾಗಿಲ
ಒತ್ತಿಲಿ ಹರಿಯಮ್ಮನಿರಲು ।
ತೆತ್ತಿಸಿದವು ರತ್ನ ಮಾಣಿಕದರಮನೆಗೆ
ಅರ್ತಿಯಲಿ ರಾಮಯ್ಯ ಬಂದ ||೫೦||

ಅಯಿವರು ಮನ್ನೆಯ ಸಹ ಬಂದು ರಾಮಯ್ಯ
ಕೈಯ ಮುಗಿದು ಹರಿಯಮ್ಮಗೆ ।
ಹುಯ್ಯಲ ಲಗ್ಗೆ ಕಲಿಯಬೇ[ಕೆನುತಲಿ]
ಒಯ್ಯನೆ ಬಿನ್ನೈಸಿದನು ||೫೧|| ೯-೬೯/೧೫-೨೬

ಬಗೆಯೇರಿತ[ವಳ]ಲ್ಲಿ ರತ್ನಗಂಧವ ಪೂಸಿ
ನಗುತ ಕನ್ನಡಿಯ [ತರಿಸಿ]
ಜಗದೇ[ಕ] ಮಗನೆ ಕನ್ನಡಿಯುಂ[ಟು ಕೋ ಎನುತ]
ಸುಗುಣೆ ಮಗನ ಕೊಂಡಾಡಿದಳು ||೫೨||

ಎಲ್ಲಿಗೆ ಪಯಣ ಎತ್ತಣ ಪಯಣ ರಾಮಯ್ಯ
ಸೊಲ್ಲಿಸೊ ಬೇಗ ಎನ್ನಾಣೆ ।
ಡಿಳ್ಳಿಯ ಸುರಿತಾಳನ ಮೇಲೆ ದಾಳಿ[ಯೊ]
ನಿಲ್ಲದೆ ಕೇಳಿದಳವಳು ||೫೩||

ಏನು ಬಂದೆಯೊ ಎನ್ನ ಚೆನ್ನಿಗ ರಾಮಯ್ಯ
ಭಾನುಸಖನ ಮುಖದವನೆ ।
ಏನ ಬೇಡಿದರೆ ಈವೆನೊ ಮನದಣೆಯಲಿ
[ಎನುತ ಹರುಷದಿ ಅಪ್ಪಿ ಮಗನ] ||೫೪||

ಹೆತ್ತ ತಾಯೆ ಕೇಳು ಹಂಪೆಯ ಹೊಳೆಯಲ್ಲಿ
ಮತ್ತೆ ಮನ್ನೆರ ಕೂಡಿಕೊಂಡು ।
ಇಂತು ನೀರಾಟವನಾಡಿ ದಣಿದು ಬಂದೆ
ಹೊತ್ತು ಹೋಗದು ಕಾಣಮ್ಮ ||೫೫|| ೯-೭೩/೧೫-೨೯

ಮುತ್ತಯ್ಯ ಮುಮ್ಮಡಿ ಸಿಂಗಯ್ಯನಾಡಿದ
ಮುತ್ತಿನ ಚೆಂಡಿದ್ದಿತಂತೆ ।
ಅರ್ತಿಯಿಂದಲಿ ಒಮ್ಮೆ ಆಡಿ ನೋಡುವೆ ತಾಯೆ
ಇತ್ತು ಎನಗೆ ಪಾಲಿಸೆಂದ ||೫೬|| ೯-೭೭/೧೫-೩೫

ನೆಟ್ಟನೆ ಆ ಮಾತ ಕೇಳ[ಲು] ಹರಿಯಮ್ಮ
ನಿಟ್ಟೆಲುವು ಮುರಿದಾಕ್ಷಣದಿ ।
ಕೆಟ್ಟೆಯೊ ಮಗನೆ ಎನಗೆ ಮಾರಿ ಬಂದಿತು
ಹುಟ್ಟಿದ ದಿನ ಬಂತು ನಿನಗೆ ||೫೭|| .../೧೫-೩೨

ಮರೆತು ಹೋದ ಚಂಡ ಅರಿಕೆ ಮಾಡುವರೇನೊ
ನೆರೆಗಲಿ ಚೆನ್ನಿಗರಾಮ ।

ಕೊರತೆ ಕೊಮಾರರು ಚಂಡನಾಡುವರೆಂದು
ಅರಿಕೆಯ ಮಗಗೆ ಹೇಳಿದಳು ॥೫೮॥ ೯-೭೮/೧೫-೩೩

ಆವ ಪಾಪಿಗಳು ಚೆಂಡಿದೆಯೆಂದು ಪೇಳಿದರೊ
ರಾಮನ ಜೀವಕೆ ಮುನಿದರೊ ।
ಏವೆನು ಇದಕಿನ್ನು ಹೇಂಗೆ ಮಾಡಲಿಯೆಂದು
ಬೇವುತಿರ್ದಳು ಹರಿಯಮ್ಮ ॥೫೯॥ ೯-೭೬/೧೫-೩೪

ರಾಜಲಕ್ಷಣವಾವುದು ಲೆತ್ತ ಚದುರಂಗ
ತೇಜಿ ಏರಾಟ ಜೂಜಾಟ ।
ರಾಜಬೀದಿ[ಯೊಳು] ಲೆಗ್ಗೆಯನಾಡಬೇಡೆಂದು
ವಾಜೆಯ ಮಗಗೆ ಹೇಳಿದಳು ॥೬೦॥ ೯-೧೧೯/...

ಟಗರೆ ಕಾದಿಸು ಹುಂಜ[ಕೆ] ಕತ್ತಿ ಕಟ್ಟಿಸು
ಮಿಗೆ ಮಲ್ಲರನು ಹೋರಿಸ್ಯಾಡು ।
ಜಗದೊಳು ಚಂಡಿನಾಟವು ಬೇಡ ರಾಮಯ್ಯ
ಮಿಗೆ ಮಾತ ಕೇಳೆನ್ನ ಕಂದ ॥೬೧॥

ತಾಯ ಮಾತನು ಕೇಳದೆ ಮೀರಿದವರಿಗೆ ಕಂದ
ನಾಯ ಬಾ[ಳು]ವೆಯ[ಹುದು] ।
ಮಾಯದ ವಿಧಿ ನಿನಗೇಕೆ ಬಂದಿತು ರಾಮ
ರಾಯ ಬೇಡವೊ ಚಂಡಿನಾಟ ॥೬೨॥

ಕಂದ[ನು] ನುಡಿಯನೆ ಕೇಳುತ [ಅ]ಮ್ಮನೆ
ಬಂದಿತು ಬ್ರಹ್ಮ[ಗೆ] ಸ್ಥಿತಿಯು ।
ಮಂದಾಸನದಲಿರ್ದಡೆ ವಿಧಿ ಬಿಡುವುದೆ
ಬಂದಿ[ದ್ದು] ಬಾರದೆ ಬಿಡದು ॥೬೩॥

ತಲೆಯು ಹೋಯಿತುಯೆಂದು ಶೂದ್ರಕವೀರನು
ಸಲೆ ತನ್ನ ಕೈಕಾಲ ಕೊಯಿಸಿ ।
ಇಳೆಯರಿಯಲು ದೇಗುಲದೊಳಗಿರ್ದರೆ
ತಲೆ ಕಂಬಾಲಕೆ ಕಟ್ಟಿತಮ್ಮ ॥೬೪॥ ೯-೧೧೦/೧೫-೫೮

ಪೊಡವಿಗೊಡೆಯ ಹರಿಶ್ಚಂದ್ರರಾಯನು ಸುಡು
ಗಾಡನು ಕಾಯಿದುದಿಲ್ಲವೆ ।
ಹೆಡತಲೆಯಲಿ ಇರ್ದ ವಿಧಿ ಬೆನ್ನ ಬಿಡುವುದೆ
ಕೊಡು ತಾಯೆ ಚಂಡ ಬೇಗದಲಿ ॥೬೫॥ ೯-೧೧೧/೧೫-೫೯

ಮುನ್ನ ಮಾಡಿದ ಫಲಭೋಗ ಕೀರ್ತಿಯು ಮತ್ತೆ
ಇನ್ನು ಮೀರೇನೆಂದರಳವೆ ।
ಪನ್ನಂಗಧರನಾಣೆ ಅದು [ಬೆನ್ನ] ಬಿಡುವುದೆ
ನನ್ನಾಣೆ ತಾರಮ್ಮ ಚಂಡ ||೧೬||

ಘಳಿಲನೆ ಆ ಮಾತ ಕೇಳುತ ಹರಿಯಮ್ಮ
ಕಳವಳಿಸಿಯೆ ಕಂದ ನಿನಗೆ ।
ಇಳೆಯರಿಯಲು ಪ್ರಾಣಕೆ ಬಹುದಲ್ಲದೆ
ಉಳಿವಿಲ್ಲ ರಾಮಯ್ಯ ನಿನಗೆ ||೧೭||

ಬೇಡ ಮಗನೆ ನಿನ್ನ ನೋಡಿದ ಸತಿಯರು
ಮಾಡರು ಮನೆಗೆಲಸವನು ।
ಕೂಡಿ[ಕೊಳ್ಳುವರೆಲ್ಲ] ನಿನ್ನ ಸತಿಯರು
ಈಡಾಡುವರು ಪ್ರಾಣವನು ||೧೮|| ೯-೯೩/...

ಅರ್ತಿ ಮಾಡುವರಿಲ್ಲ ನಿನ್ನ ಚಂಡಾಟಕೆ
ಮಿತ್ತು ಅಹರೊ ಕಂದ ನಿನಗೆ ।
ಅತ್ತ ರತ್ನಾಯಿ ಕಾಮುಕಹದಿ ನೊಂದು
ಸತ್ತಳು ನಿನ್ನ ಕಾಣುತಲಿ ||೧೯||

ಒದಗಿದ ಹುಯ್ಯಲ ಲಗ್ಗೆಯ ಕಲಿವರೆ
ಚದುರಂಗವನು ನೀನಾಡು ।
ಇದು ಚೆಂಡು ಮುಮ್ಮಡಿ ಸಿಂಗನ ಕೆಡಿಸಿತು
ಪದುಳದಿ ನೀನಾಡಬೇಡ ||೨೦||

ಹೇಳಲಳವೆ ಕಂದ ಈ ಚೆಂಡಿನಿರವನು
ಹಾಳು ಮಾಡಿತು ಪಾಂಡವರ ।
ದಾಳವಾಗಿಯೆ ಬಿದ್ದು ಲೆತ್ತದ ಮಣೆಯೊಳು
ಸೋಲಿಸಿತವರಾಟವನು ||೨೧||

ಕೃತಯುಗದಲಿ ಹೊಮ್ಮೃಗವಾಗಿ ಹುಟ್ಟಿತು
ಗತಿಗೆಡಿಸಿತು ರಾಮರನು ।
ಹತನಾದ ಮುಮ್ಮಡಿ ಸಿಂಗಯ್ಯನಿದರಿಂದ
ಮತಿವಂತ ನೀನಾಡಬೇಡ ||೨೨||

ಸೃಷ್ಟಿಯರಿಯೆ ಮುನ್ನಿನ ರಾಯರೀ ಚೆಂಡ
ನೆಟ್ಟನೆ ಹಿಡಿದಾಡಿದರು ।

ಕುಷ್ಟವಾಗಿಯು ಮೈ ಕೆಟ್ಟಿತು ರಾಮಯ್ಯ
ದಿಟ್ಟ ನೀನಾಡಬೇಡ ||೭೩||

ಘನ [ತಪಸಿಯ] ಮನದೊಳು ಮಾಯಾಂಗನೆ
ಬಿನುಗು ಸೂಕರಮಾಗಿ ಸುಳಿದು ।
ಧನುವಿಡಿದು ಹರಿಚಂದ್ರ ಕೊಲ್ಲಲು ಮತ್ತೆ
ಜನಿಸಿ ಮುತ್ತಿನ ಚಂಡಾಯ್ತು ||೭೪|| ೯-೧೦೦/೧೫-೫೦

ಒಂದು ರೂಪಿಲಿ ರತ್ನಿಯಾಗಿ ಜನಿಸಿತು ಮ
ತ್ತೊಂದು ರೂಪಿಲಿ ಚೆಂಡಾಯ್ತು ।
ಕಂದ ನೀ ಹಿಡಿದಾಡಲು ಮಾಯದಿ
ಸಂಧಿಸುವುದು ರತ್ನಿ[ಯೆಡೆ]ಗೆ ||೭೫||

[ಮತ್ತೊಂದು ಯು]ಗದಲ್ಲಿ ಹರಿಚಂದ್ರರಾಯನ
ಮಿತ್ತಾಗಿ [ಕಾಡಿತು ಚೆಂಡು]
ಇತ್ತಲಿ ಕಲಿಯುಗದಲಿ ಮಾಯವಾಗಿದೆ
ಮುತ್ತಿನ ಚೆಂಡಾಗಿ ಜನಿಸಿ ||೭೬|| ೯-೮೬/...

ಹತ್ತೊರುಷಕೆ ಒಬ್ಬ ರಾಯನ ತಿಂಬೋದು
ಮತ್ತೆ ರಕ್ಕಸ ಚೆಂಡು ಮಗನೆ ।
ಸತ್ತು ಹೋಗಲಿ ಬೇಡ ಹರಸಿ ಹೆತ್ತೆನೊ ಕಂದ
ಅತ್ತಳು ಹರಿಯಲದೇವಿ ||೭೭||

ಬ್ರಹ್ಮ ಜಟ್ಟಿಗನ ಕಾವಲು ಈ ಚೆಂಡಿಗೆ
ನಿಮ್ಮಯ್ಯನಾಡಲಂಜುವನು ।
ಮುಮ್ಮಡಿ ಸಿಂಗ ಲೆಗ್ಗೆಯನಾಡುವೆನೆಂದು
ನಿರ್ಮೂಲವಾಗಿ ಕೆಟ್ಟನವನು ||೭೮||

ಇನ್ನು ಚೆಂಡನಾಡುವರೆ ಎನ್ನ ಕಂದಯ್ಯ
ನಿನ್ನ ಪ್ರಾಣಕೆ ಇದು ಸರಿಯೆ ।
ಭಿನ್ನವಿಲ್ಲದೆ ಕೇಳು ಎನ್ನ ಮಾತನು ಎಂದು
ಚೆ[ನ್ನ] ರಾಮ[ಗೆ] ಬುದ್ಧಿ ಹೇಳೆ ||೭೯||

ಎಪ್ಪ[ತ್ತೆರಡು] ಮಂದಿ ದೊರೆಗಳಾಡೇವೆಂದು
ಒಪ್ಪುವರ ಬಾಗಿಲಲಿ ।
ತಪ್ಪದೆ ನಿಂದೆನ್ನ ಚಂಡಿಗಟ್ಟಿದರೀಗ
ಅಪ್ಪಾಜಿ ಆಣೆ ಚಿತ್ತೈಸು ||೮೦||

ಮುತ್ತಯ್ಯ ಮುಮ್ಮಡಿ ಸಿಂಗನಾಡಿದ ಚೆಂಡು
ಎತ್ತಲಿ ಮಿಸುಕದು ಮಗನೆ ।
ಇತ್ತ ನೀನಾದರೆ ಭೂತ ಬಲಿಯ ಕೊಟ್ಟು
ಮುತ್ತಿನ ಚೆಂಡೊಯ್ಯೊ ರಾಮ ॥೮೧॥

ಏನೇನು ಬಲಿ ಎನ್ನ ತಾಯೆ ಎನಗೆ ಹೇಳು
ನಾನು ಈ ಕ್ಷಣದಿ ತರಿಸುವೆನು ।
[ಐ]ನೂರು ಕುರಿ [ಏಳು] ನೂರು ಕೋಳಿಯ ತಂದು
ನೀನು ಬಲಿಗೊಟ್ಟೆಯ್ಯೋ ಮಗನೆ ॥೮೨॥ .../೧೫-೭೩

ಎಂದ ಮಾತನು ಕೇಳುತ ರಾಮಯ ತನ್ನ
ಮಂದಿಯ ಕರೆಸಿ ಹೇಳಿದನು ।
ಸಂದೇಹವಿಲ್ಲದೆ ದಿಕ್ಕು ದಿಕ್ಕಿಗೆ ಹೋಗಿ
ತಂದರೈನೂರು ಕೆಂಗುರಿಯ ॥೮೩॥

ಏಳು ನೂರು ಕೋಳಿ ಏಳುನೂರೆಳಗಾಯಿ
ಏಳು ನೂರುವೆ ರಸದಾಳಿ ।
ಏಳು ಗಳಿಗೆಯೊಳು ಚಂಡಿಗೆ ಬಲಿಕೊಟ್ಟು
ಲೋಲ ರಾಮುಗ ಕೈಯ ಮುಗಿದ ॥೮೪॥

ಗಂಧಾಕ್ಷತೆ ಧೂಪ ದೀಪ ನೈವೇದ್ಯವು
ತಂದೊಪ್ಪಿಸಿದೆ ಹರಿಯಮ್ಮ ।
ಕಂದನ ಕರೆದು ಮೈದಡವಿ ಬೋಳೈ[ಸಲು]
ತಂದು ಪ್ರಸಾದವ ಕೊಟ್ಟ ॥೮೫॥

ವೇಸಿ ದಾಸಿಯು ಪರಸತಿಯರೆಂಬುವರಿಗೆ
ಆಸೆ ಮಾಡಲು ಪಾದರವು ।
ಆಸೆ ಇಲ್ಲದ ಹಾಂಗೆ ಚೆಂಡು ಬೇಕಾದರೆ
ಭಾಷೆಯ ಮಾಡೊಯ್ಯೊ ಎನಗೆ ॥೮೬॥

ಎನ್ನ ತಾಯೆ ಕೇಳು ನಿನ್ನಯ ಸೊಸೆಯರು
ಇನ್ನು ಅವರ ಹೊರತಾಗಿ ।
ಭಿನ್ನವಿಲ್ಲದೆ ಪರಸತಿಯರೆಂಬವರೆಲ್ಲ
ನಿನ್ನ[ಯ] ಸರಿ ಎನಗಮ್ಮ ॥೮೭॥ ೯-೧೨೮/...

ಹರುಷದಿ ಆ ಮಾತ ಕೇಳುತ ಹರಿಯಮ್ಮ
ಹರಸಿ ಸುತಗೆ ಸೇಸೆನಿಡುತ ।

ಅರಸು ಮಕ್ಕಳು ಕಾಚ ಬಾಚಣ್ಣರೆಲ್ಲ[ರ]
ಬೆರಸಿ ಲೆಗ್ಗೆಗೆ ನಿಲ್ಲು ನೀನು ||೮೮||

ಗೆಲು ಹೋಗೊ ಲೆಗ್ಗೆಯ ಗೆಲು ಹೋಗೋ ಕಾಲಾಳ
ಗೆಲು ಹೋಗೊ ರಾಯ ಮನ್ನೆಯರ ।
ಕಲಿ ಹೋಗು ಹೊಯ್ ಲೆಗ್ಗೆ[ಯ]ನೆಂದು ಹರಿಯಮ್ಮ
ಒಲಿದು ಕೊಟ್ಟಳು ಚೆಂಡನಾಗ ||೮೯||

ಮುತ್ತಿನ ಚೆಂಡ ಪಿಡಿಕೊಂಡು ರಾಮಯ್ಯ
ಹೆತ್ತ ತಾಯ ಪಾದಕೆರಗಿ ।
ಅರ್ತಿಯಿಂದಲಿ ಲೆಗ್ಗೆಯನಾಡಿ ಬಹೆನೆಂದು
ಮತ್ತೆ ತಾಯಿಗೆ ಬಿನ್ನಯಿಸಿದನು ||೯೦|| ೯-೧೩೪/...

ನಾರಿಯರೊಂದೊಂದು ಪರಿಯ ಸೀರೆಯನುಟ್ಟು
ವೀರ ರಾಮಯ್ಯನ ಕಂಡರಾಗ ।
ಧೀರ ರಾಮನ ಚೆಂಡಿಗೆ ಕಾಣಿಕೆಯಿಕ್ಕಿ
ಭೋರನೆಲ್ಲರು [ಎ]ರಗಿದರು ||೯೧||

ಧೂಪಾರತಿಯು ಪಂಚಾರತಿಗಳು ಈಗ
ಒಪ್ಪುವ ಏಕಾರತಿಯು ।
ಕರ್ಪುರದಾರತಿ ಬೆಳಗಿಲಿ ನಿಂದು
ಚಿಕ್ಕ ರಾಮಗೆ ಬೆಳಗಿದರು ||೯೨||

ಮುತ್ತೆದೆಯರೊಂದು ಒಪ್ಪದಿಂದಲಿ ಬಂದು
ಚಿಕ್ಕರಾಮನ ಕಂಡರಾಗ ।
ಚೊಕ್ಕರಾಮನ ಚೆಂಡಿಗೆ ಕಾಣಿಕೆಯಿಕ್ಕಿ
ಗಕ್ಕನೆಲ್ಲರು ತಿರುಗಿದರು ||೯೩||

ಮಂದಿರವನು ಹೊರಡಲು ರಾಮಯ್ಯನು
ಬಂದು ತಾಯಡಿಗೆರಗಿದನು ।
ಕಂದನ ನೆಗಹಿ ಬುದ್ಧಿಯ ಹೇಳೆ ಹರಿಯಮ್ಮ
ಮಂದಿರವನು ಹೊರಹೊರಟ ||೯೪||

ಎತ್ತಿದವೆರಡು ಸತ್ತಿಗೆ ಎಡಬಲದಲಿ
ಸುತ್ತಲಿ ಬಳಸಿ ಮನ್ನೆಯರು ।
ಅರ್ತಿಯಿಂದಲಿ ಬಂದು ಅಂದಳವೇರಲು
ಮತ್ತೆ ಪಾಠಕರು ಕೊಂಡಾಡೆ ||೯೫||

ಹಿಂಗದೆ ಭಟರು ಕೊಂಡಾಡೆ ....
.......................। ॥೯೬॥

ಮಾಳವರಾಯ ಸಾಳುವರಾಯರ ಗಂಡ
ಲಾಳ ಗುಜ್ಜರರಾಯ ಗಂಡ ।
ಕಾಳಗ ಕದನದಲ್ಲಣ ರಾಮುಗನೆಂದು
ತೂಳ ಭಟರು ಕೊಂಡಾಡಿದರು ॥೯೭॥ ೯-೧೪೨/...

ಧರೆಯೊಳು ರಾಮದೇವನು ಒಬ್ಬ ತಪ್ಪಲು
ಸರಿಯೆಂಬ ರಾಯರ ಗಂಡ ।
ಬರಿದುಳ್ಳ ರಾಮಗೆ ಸರಿಯಿಲ್ಲವೆಂದರೆ
ಬಿದಿರಿನ ಕಾಳೆ ಸಾರಿದವು ॥೯೮॥

ಕಿರಿಯಮ್ಮ ರತ್ನಾಜಿ ಅರಮನೆಯೊತ್ತಿಲಿ
ತರವಾಗಿ ಅದೆ ರಾಜಬೀದಿ ।
ಕರಿಗಟ್ಟಿ ಚೆಂಡನಾಡ[ಲು] ಜನ ನೋಡಲಿ
ಹಿರಿಯುಪ್ಪರಿಗೆ ಬಯಲೊಳಗೆ ॥೯೯॥

ಒಳ್ಳಿತಾಯಿತು ನಡೆ ಚಿಕ್ಕಮ್ಮ ನೋಡಲಿ
ಅಲ್ಲಿ ಮಕ್ಕಳ ಅರ್ತಿಯನು ।
ಬೆಳ್ಳಿಯ ಹಲ್ಲೆ ಚಿನ್ನದ ಹಲ್ಲೆಯ ಕೊಂಡು
[ಅಲ್ಲಿಗೆ ಬಂದ ಕಾಟಣ್ಣ] ॥೧೦೦॥ ೯-೧೭೦/...

ಚಲ್ಲೆಗಂಗಳ ಕಾಟಣ್ಣಗೆ ರಾಮನು
ಎಲ್ಲ ಮುಂದಿಯ ಹಂಚಿಕೊ [ಟ್ಟ] ।
ನಿಲ್ಲದೆ ನೀ ಬೇಗ ನಡೆಯೆಂದ ರಾಮ[ನು]
ಎಲ್ಲ ಚೆಂಡಾಡಬೇಕೆನುತ ॥೧೦೧॥

ಬಂದನು ರತ್ನಾಜಿ ಇಹ ಅರಮನೆ ಮುಂದೆ
[ಅಂ]ದು ಸಂದಣಿಯಲಿ ನಿಂದು ।
ತಂದು ಲೆಗ್ಗೆಯ ಹೂಡಿ ಆಳನು ಹಂ[ಚಲು]
ರಾಮಗೆ ಕಾಟ ಬಿನ್ನೈಸೆ ॥೧೦೨॥

ಹೊನ್ನ ಮೋಹಳದ ಎಕ್ಕಟಿಗರು ಬಲು ಮಂದಿ
ನಿನ್ನ ಕಡೆಯಲೊ ಕಾಟಣ್ಣ ।
ಮನ್ನಿಸಿ ಉಡುಗೊರೆಗೊಂಬ ಮಕ್ಕಳೆಲ್ಲ
ತನ್ನ ಕಡೆಯ ಮಾಡಿಕೊಂಡ ॥೧೦೩॥ ೯-೧೭೩/...

ಮರಿಯಾನೆ ಮಾದಯ್ಯ ಉರಿಗೋಳಿ ಬೈಚಪ್ಪ
ಕಿರಿಯ ಮಲ್ಲನೆ ಸಂಗಯ್ಯ ।
ಕಿರುಬುಲಿ ನಾಗಣ್ಣ ನೊಳಗದೆಕ್ಕಟಿಗರು
ತಿರಿಬೇಕ ಕೊಂಡ ಕಾಟಣ್ಣ ॥೧೦೪॥ ೯-೧೬೫/...

[ಉದ್ದ]ಗೆರೆಯ ತಿಪ್ಪ ರಾವುತ ಚವುಡನು
ಕದನ ವಿಜಯ ಕೇ[ಶ]ವನು ।
ವೆಗ್ಗಳದಲಿ ಜೀತವಕೊಂಬ ಸಣ್ಣನು
ದುರ್ಗಿಸೆಟ್ಟಿಯನು ತೆಕ್ಕೊಂಡ ॥೧೦೫॥ ೯-೧೬೬/...

ಅಗಸರ ತಿಪ್ಪನು ನಾವಿದ ಬಸವನು
ಹೊಸಬೇಡರ ಕಂಪ ಕಸ[ವ] ।
ಮುಸುಕಿದ ಪೌಜಿಗೆ ಮುಂದಾಗಿ ಗೆಲುವನು
ಹೆಸರುಳ್ಳ ಕೊಳ್ಳಿಯ ನಾಗ ॥೧೦೬॥

ಅಂಗ ಮಂಗಣ್ಣ ಕೊಡೆಯಕಾರ ವಿರುಪನು
ಸಿಂಗನು ಚವುಲದ ಸಿಂಗ ।
ಸಂಗ್ರಾಮಧೀರರು ಕೊಮಾರರಾಮನು
[ಸಿಂಗಾರ]ದಿಂದೊದಗಿದರು ॥೧೦೭॥

ಕಾಳಂಜಿಯ ಕೆಂಪ ಕಡಹರಿ ವನಗನು
ಕಾಳಭೈರವನು ಕಾಟಣ್ಣ ।
ದಾಳಿಕಾರನು ಚವುಲದ ಸಂಗ ಅತಿಧೀರ
ಕಳಕಳವನು ಏನೆಂಬೆ ॥೧೦೮॥

ಏಳು ಪಂತಿಯ ಕೂಡುಂಬೊ ಬೇಡರ ಬೊಮ್ಮ
ಕಾಳಿಗೋಟೆಯ ರಾಮರನು ।
ಕಾಳಗಗಲಿಗಳೊಗ್ಗಿನಲಿ ನಡೆದರಾಗ
ಸೂಲದ ವೀರ ಮನ್ನೆಯರು ॥೧೦೯॥

ಕೊಮಾರ ರಾಮಯ್ಯ ದೇವಿಶೆಟ್ಟಿಯ ಲಿಂಗ
ಕಾಮನುಪ್ಪಲಿಕರ ಸಂಗ ।
ಸಮರಕ್ಕೆ ಗಜಸಿಂಹ ಅಕ್ಕಸಾಲೆಯ ಮುದ್ದ
ಸಮರದೊಳಿರುವ ಮನ್ನೆಯರು ॥೧೧೦॥

ತೂಗಾಡೆ ಬೈಚಪ್ಪ ಉಗ್ರಾಣದ ನಾಗ
ವೆಗ್ಗಳವೆನಿಪ ಚಿಂಪಿಗನು।

ದುರ್ಗಕ್ಕೆ ಗಜಸಿಂಹನೆಂದು ವಿಸ್ತರಿಸುವ
ಹೆಗ್ಗಾಳೆಗಳು ಸಾರಿದವು ||೧೧||

ಬಲವಂಕದೊಳು ಹೊಲೆಯರ ಹಾಳೆ ನಾಯಿಕ
ಹಲವು ಬಿರಿದುಳ್ಳ ನಾಯಿಕನು।
ಬಲುಗೈಯನು ದೊಡ್ಡ ಬಿಕ್ಕ ಬೈರುವ ನಾಗ
ಬಿಳಿಯ ಚ[ವುಲ] ಢಾಳಿಸುತ ||೧೨||

ಚಲದಂಕ ರಾಮಗೆ ಮಲೆವ ರಾಯರ ಗಂಡ
ಕೊಲೆಗೇಡಿ ಮಾದಿಗ ಹಂಪ।
ತೊಲಗದ ಕಂಬ ತಳವಾರ ಮಾಯಿದೇವನು
ತೆಲುಗ ಪಚ್ಚೆಯ ಬಾಬಣ್ಣ ||೧೩||

ನಲ್ಲ ನಾಗಯ್ಯನು ಕಲ್ಲುಕೋಟೆಯ ಚಿಕ್ಕ
ಬಲ್ಲಿದ ಸಾಯಿದೇವರನು।
ನಿಲ್ಲದೆ ರಣಸೂರೆಗೊಳವ ಬಾದುರಖಾನ
ರೆಲ್ಲಕ ತಾ ಹಂ[ಚಿ]ಕೊಂಡ ||೧೪||

ಗೆಲವಿಂದ ಇತ್ತೆರದಲಾಡುವ ಬೊಬ್ಬೆ [ಮಂ]ದಿ
ಸರವನಾಲಿಸಿ ನಾಗಾಯಿ।
ಕ[ರಚರ]ಣ [ಮೂ]ದಲೆ ನಿನಾ ಸುದ್ದಿಯ
ನೊರೆದಳು ರತ್ನಮ್ಮನೊಡನೆ ||೧೫||

ಸರ್ವ ಮನ್ನೆಯರ ಕೂಡಿಕೊಂಡು ರಾಮಯ್ಯನು
ಗರ್ವ ಬಂದನು ಚೆಂಡನಾಡೆ।
ಉರ್ವಿಯೊಳಗೆ ಹೊಸಪರಿಯೆಂದು ರತ್ನಿಗೆ
ತೆರನ ಪೇಳಿದಳು ನಾಗಾಯಿ ||೧೬||

ಎಂದ ಮಾತನು ಕೇಳುತಲಿ ರತ್ನಾದೇವಿ
ಮಿಂದು ಮಡಿಯನುಟ್ಟಳಾಗ।
ಇಂದು ತಮ್ಮನೆ ದೈವವ ಬೇಡುವೆನೆಂದು
ಬಂದಳು ದೇವರ ಮನೆಗೆ ||೧೭||

ಹರನೆ ಮೃಡನೆ ತ್ರಿಯಂಬಕ ಶರಣೆಂದು
ವರವ ಬೇಡಿದಳು ಶಂಕರನ।
ಧರೆಯೊಳು ಕುಶಲ ರಾಮನ ಚೆಂಡು ಬೇಗದಿ
ಬರುವಂತೆ ಮಾಡೆನ್ನ ಮನೆಗೆ ||೧೮||

ನೆಟ್ಟನೆ ಕಟ್ಟಿದಳಾಕ್ಷಣ ಹರಕೆಯ
ಕಟ್ಟಿದಳು ಪತ್ರವನು।
ದಿಟ್ಟ ರಾಮನ ಚೆಂಡು ಎನ್ನೊಶವಾದರೆ
ಕಟ್ಟಿಸುವೆನು ಮೇಲ್ಕಟ್ಟು ||೧೧೯||

ಸುರಹೊನ್ನೆ ಸಂಪಗೆ ಮರುಗ ಪಚ್ಚೆಯ ತೆನೆ
ಇರವಂತಿ ಮೊಲ್ಲೆ ಮಲ್ಲಿಗೆಯ।
ಸರಗಳ ಕಟ್ಟಿ ದೇವರನು ಅರ್ಚಿಸುವೆನು
ಪರಿಸರಿ ಪುಷ್ಪ ಜಾತಿಯಲಿ ||೧೨೦|| ೯-೨೬೨/...

ಕರ್ಪುರ ಜ್ಯೋತಿಯ ಬೆಳಗುತ ರತ್ನಾಯಿ
ಕಪ್ಪುಗೊರಳ ಜಯಯೆನುತ।
ಸರ್ಪಭೂಷಣಗೆ ನೈವೇದ್ಯ ವೀಳ್ಯವನಿತ್ತು
ಅರ್ಪಿಸಿ ಹಸ್ತವ ಮುಗಿದು ||೧೨೧||

ಅಕ್ಕನ ಮಗ ರಾಮ ಸಿಕ್ಕಿದನಾದರೆ
ಲೆಕ್ಕದುಪ್ಪರಿಗೆ ಕಟ್ಟಿಸುವೆ ।
ಲೆಕ್ಕವಿಲ್ಲದೆ ಕಪಿಲೆಯ ನಾನು [ಬಿಡಿಸುವೆ]
ಮುಕ್ಕಣ್ಣದೇವ ಪಾಲಿಪುದು ||೧೨೨|| ೯-೨೪೫/೧೬-೩೧

ಬಂಡಿಗಟ್ಟಿಸಿ ಬಂದು ಕೆಂಡದೋಕುಳಿ ಮಾಡಿ
ತಂಡತಂಡದಲಾಡುವೆನು ।
ದಿಂಡುದಿಂಡಿಲಿ ಸೀರೆಯ ಗೂಡಗಟ್ಟಿಸಿ
ಮಂಡೆಯ ಕುರುಳ ಕೊಡುವೆನು ||೧೨೩|| ೯-೨೫೭/...

ಚೆನ್ನರಾಮನ ಚೆಂಡು ಎನ್ನರಮನೆಗಾಗಿ
ಭಿನ್ನವಿಲ್ಲದೆ ಬೇಗ ಬರಲಿ।
ಇನ್ನು ಚಿನ್ನದ ಪ್ರಭಾವಳಿಯ ಕಳುಹುವೆ
ಪನ್ನಂಗಧರ ಕೃಪೆಯಾಗು ||೧೨೪|| ೯-೨೩೫/೧೯-೨೪

ಆಗ ಬೇಡಿದೊರಗಳನೀವಳು ಎಂಬ
ಬೇಗ ಉಚ್ಚಂಗಿ ಎಲ್ಲಮ್ಮ।
ಈಗ ರಾಮನ ಚೆಂಡು ಎನ್ನೊಶವಾದರೆ
ಹೋಗುವೆ ಬಾಯ ಬೀಗದಲಿ ||೧೨೫||

ಇನ್ನೂರು [ಕನ್ನೆ] ನಾನೂರು ಬೇವಿನ ಸೀರೆ
ಕನ್ನೇರು ಉಧೊ ಉಧೋ ಎನುತ।

ಮುನ್ನೂರು ಕಳಸ ಹೊನ್ನಿಲಿ ಮಾಡಿಸಿಕೊಂಡು
ಕನ್ನೆಮ್ಮಗೆಯು ಶರಣೆಂಬೆ ||೧೨೬||

ಚಿನ್ನದ ಪಾತ್ರೆ ಬೆಳ್ಳಿಯ ಪಾತ್ರೆ ಹತ್ತನು
ಭಿನ್ನವಿಲ್ಲದಲಿ ಇಪ್ಪತ್ತು।
[ಜ]ನ್ನಿಗೆ ಭೋಗೇರ ಕರೆಸಿ ಇದಿರ್ಗೊಂಡು
ನನ್ನ ಹರಕೆಯನೊಪ್ಪಿಸುವೆನು ||೧೨೭||

ಎನ್ನಯ ಪ್ರಾಣ ರಾಮ ಚೆಲ್ವನ ಚೆಂಡು
ಎನ್ನ ಕೈಗೆ ಸೇರಿದರೆ।
ಚಿನ್ನದ ಹಾವಿಗೆ ಕಾಸೆಯ ಸೀರೆ ಕಳುಹುವೆ
ಚೆನ್ನಿಗ [ಓ]ರ್ಗಲ್ಲ ವೀರ ||೧೨೮||

ಕುಶಲ ರಾಮಯನಿಟ್ಟ ಸಸಿನೆ ಮುತ್ತಿನ ಚೆಂಡು
ವಶವಾಗಿ ಬರಲೆನ್ನ ಮನೆಗೆ।
ವಸುಧೆ ಅರಿಯೆ ಹೊಸವೂರ ದೇವಗೆ ನಾನು
ಪಸರಿಸುವೆನು ಹೊಸ ಮಡಿಯ ||೧೨೯|| ೬-೨೫೫/...

ಚೆಲ್ಲೆಗಂಗಳ ರಾಮನಿಟ್ಟ ಮುತ್ತಿನ ಚೆಂಡು
ನಿಲ್ಲದೆ ಬರಲೆನ್ನ ಮನೆಗೆ।
ಪಲ್ಲಕ್ಕಿ ಇಕ್ಕುವೆ ಲಕ್ಷ ಹೊನ್ನಲಿ ನಿನಗೆ
ಬಲ್ಲಿದ ಹಂಪೆಯ ಲಿಂಗ ||೧೩೦||

ಬೆಟ್ಟದ ದೇವಿಗೆ ಮುಡುಹಿನ ಕಂಡವು।
ಬಿಟ್ಟ ಮಂಡೆಯು ಎನ್ನ ಹರಕೆ।
ಕಟ್ಟಿದ ಹೆಡಗೈಯ ಕಂಪಲಿರಾಯಗೆ
ದಿಟ್ಟ ರಾಮನ ಚೆಂಡು ಬರಲು ||೧೩೧||

ಧರೆಯೊಳು ದೃಷ್ಟ ಮೂರುತಿ ತಿರುಮಲರಂಗ
ಧುರಗಲಿ ರಾಮ ಸಿಕ್ಕಿದರೆ।
ಸುರತದೊಳಗೆ ಒಂದು ಶಿಶುವು ಆದರೆ ನಾನು
ತಿರುಮುಡಿಯನು ಬಿಡಿಸುವೆನು ||೧೩೨|| ೬-೨೫೨/...

ಬೆನ್ನ ಸಿಡಿಯ ಬಾಯ ಬೀಗ ಕಂಪಿಲನಿಗೆ
ಎನ್ನ ಹರಕೆ ಅಗ್ನಿಕೊಂಡ।

ಚೆನ್ನರಾಮನ ಚೆಂಡು ಬೇಗ ಬರಲಿ ಸ್ವಾಮಿ
ಹೊನ್ನಕಳಸದ ಮೈಲಾರ ||೧೩೩||*

ಜಾಣ ರಾಮಯನಿಟ್ಟ ಮುತ್ತಿನ ಚೆಂಡು
ಮಾಣದೆ ಬರಲೆನ್ನ ಮನೆಗೆ।
ಕಾಣಿಕೆಯನು ಕಳಹುವೆ ಹೊನ್ನತ್ತೆಮ್ಮಗೆ
ಜಾಣ ರಾಮನ ಚೆಂಡು ಬರಲು ||೧೩೪||

ಒತ್ತಿ ಒಲಿದು ಬಂದು ಇತ್ತ ಬರಲಿ.....
....................ನ್ನರಮನೆಗೆ ।
ಮುತ್ತಿನ ಉಡಿಯಕ್ಕಿ ಹೊಯ್ವೆನು ಐವರಿಗೆ
ಮುತ್ತೈದೆಯರಿಗೆ ಗುತ್ತೆಮ್ಮ ||೧೩೫||

ಹಿಡಿ ಹೊನ್ನ ಕಳಹುವೆ ಗುತ್ತಿಯ ಕನ್ನೆಗೆ
ಹಿಡಿವೆ ಒಪ್ಪತ್ತಿನೂಟವನು।
ಕಡಿಸುವೆ ಐನೂರು ಕುರಿಯನು ಬೇಗದಿ
ಕಡುಗಲಿ ರಾಮ ಸಿಕ್ಕದರೆ ||೧೩೬|| ೯-೨೪೧/೧೬-೨೭

ಹತ್ತು ಬಂಡಿಲಿ ವಸವಂತವನಾಡುವೆ
ಮತ್ತೆ ನಾಗಾಯಿ ಒಡಗೂಡಿ।
ಇತ್ತರದಲಿ ಧರ್ಮ ಸುರೆಯ ಬಿಡಿಸುವೆ
ಮತ್ತೆ ರಾಮನ ಚಂಡು ಬರಲಿ ||೧೩೭||

ಹೊಳೆವ ಕಂಗಳ ರಾಮನ ಮುತ್ತಿನ ಚೆಂಡು
ಬಳಲಿ ಬರಲಿ ಎನ್ನ ಮನೆಗೆ।
ತಳುವದುಪ್ಪರಿಗೆಯ ಮುಂದೆ ಬಿದ್ದರೆ ನಾನು
ಕಳಸವನೀವೆ ಪರ್ವತಕೆ ||೧೩೮|| ೯-೨೪೪/೧೯-೩೦

ಅರುವತ್ತು ಚಿನ್ನದ ಕಂಬಿಯ ಕಳುಹುವೆ
ಪರುವುತ ಮಲ್ಲಯ್ಯ ನಿನಗೆ।
ನೆರೆಗಲಿ ರಾಮನ ಚೆಂಡ ಪಾಲಿಸು ಎಂದು
ಕರಿಗೊರಳನ ಬೇಡಿದಳು ||೧೩೯|| ೯-೨೫೨/...

ಪೊಡವಿಯೊಳಗೆ ಜಟ್ಟಂಗಿಯ ರಾಮನು
ಬೇಡಿದ ವರಗಳನೀವ।

* ೧೪೨ನೆಯ ಪದ್ಯ (ಸುಗುಣ ಚೆನ್ನಿಗ ರಾಮ.......) ಇಲ್ಲಿಯೂ ಬಂದಿದ್ದು, ಕೈಬಿಡಲಾಗಿದೆ. (ಸಂ.)

ನುಡಿಯ ಲಾಲಿಸು ನಿಮ್ಮ ಪಾದವ ಪಿಡಿವೆನು
ಕೊಡು ರಾಮನ ಚೆಂಡ ಎನಗೆ ||೧೪೦||

ನಮ್ಮ ಅಪ್ಪನ ಅಜ್ಜನ ಮನೆ ದೈವವೆ
ನಿಮ್ಮ ಪಾದಕೆ ಒಮ್ಮೆ ಶರಣು।
ರುಮ್ಮನೆ ರಾಮನ ಚಂಡು ಬರಲಿ ಸ್ವಾಮಿ
[ಎಮ್ಮಯ್ಯ ಭೈರವದೇವ] ||೧೪೧|| ೯-೨೫೮/...

ಸುಗುಣ ಚೆನ್ನಿಗ ರಾಮನಿಟ್ಟ ಮುತ್ತಿನ ಚೆಂಡು
ನೆಗೆದು ಬರಲಿ ಎನ್ನ ಮನೆಗೆ ।
ಚಿಗಳಿ ತಂಬಿಟ್ಟು ಕಬ್ಬಿನ ಕೋಲು ಎಳೆನೀರು
[ಮುಗಿಲುದ್ದ ಒಟ್ಟುವೆ ಬೆನವ] ||೧೪೨|| ೯-೨೫೬/...

ಆರು ಲಕ್ಷಡಕೆಯು ನೂರು [ಕೊ]ತ್ತಲ ಎಲೆ
ಹೇರು ಹೇರಲಿ ಬೆಲ್ಲದಚ್ಚು।
ಬೇರೆ ಮುನ್ನೂರು ಮೂವತ್ತಾರು ದೇವರಿಗೆ
ಸುರೆ ವೀಳ್ಯವ ಬಿಡಿಸುವೆನು ||೧೪೩||

ಎಲ್ಲ ದೇವರಿಗೆ ಹರಕೆಯನೊಪ್ಪಿಸುವಾಗ
ಮೆಲ್ಲನೆ ಕಂಪಿಲರಾಯ।
ಎಲ್ಲಿಯ ಹರಕೆ ಎತ್ತಣದೆಂದು ಕೇಳಲು
ಮೆಲ್ಲನೆ ನಾನುಸುರುವೆನು ||೧೪೪||

ಇನ್ನು ಕಂಪಿಲರಾಯ ಕೇಳೆನ್ನ ಹರಕೆಯ
ಹೇಳುವ ಹರಕೆ ಸುದ್ದಿಯನು।
ಭಿನ್ನವಿಲ್ಲದೆ ನಿನ್ನ ಕರಡಿ ಕೊಂದಾವೆಂದು
ಹೊನ್ನತ್ತೆಮ್ಮನ ಬೇಡಿಕೊಂಡೆ ||೧೪೫||

ಸಟೆಗೊಂದು ಮಾತನು ಹೇಳುವೆ ರಾಯಗೆ
ದಿಟವೆಂದು ನಂಬುವ ಹಾಗೆ ।
ಪಟುತರದಲಿ ನಿನ್ನ ಹುಲಿಯು ಕೊಂದಾವೆಂದು
ಜಟಂಗಿಯಮ್ಮನ ಬೇಡಿಕೊಂಡೆ ||೧೪೬|| ೯-೨೫೯/...

ಎತ್ತಲೆಂದರಿಯದೆ ಗಿರಿಗಹ್ವರದೊಳು
ಒತ್ತಿ ಬೇಂಟೆಯನಾಡ ಹೋಗೆ ।
ಮೊತ್ತದಿ ಕರಡಿ ಕಾಡೆಮ್ಮೆ ಕೊಂದಾವೆಂದು
ಗುತ್ತಿಯಮ್ಮನ ಬೇಡಿಕೊಂಡೆ ||೧೪೭||

ನೀನು ಮೂರು ದಿನ ಬೇಂಟೆ ತಡೆಯಲಾಗಿ
ನಾನು ಕಂಗೆಟ್ಟು ಮನದಲ್ಲಿ।
ಏನಾದರೆ ಒಂದು ನೋವು ಬಾರದ ಹಾಗೆ
ನಾನಾ ದೇವರ ಬೇಡಿಕೊಂಡೆ ||೧೪೮||

ಎಂದು ಕಂಪಿಲರಾಯ ಕೇಳಲು ನಾಗಾಯಿ
ಚಂದದಿಂದಲಿ ಮರೆಸುವೆನು ||೧೪೯||

ಹರಸಿದ ಹರಕೆಯು ಕೈಗೂಡಿತಾದರೆ
ತರಿಸುವೆ ಪುಣುಗು ಕಸ್ತುರಿಯ ।
ಬೆರಸಿ ಪನ್ನೀರೊಳು ಬೆರಸಿ ಕಾದಂಬವ
ನೆರೆದು ಓಕುಳಿಯನಾಡುವೆನು ||೧೫೦||*

ಮುದ್ದು ರಾಮಯನಿಟ್ಟ ಮುತ್ತಿನ ಚೆಂಡು ತಾ
ಬಿದ್ದರೆನ್ನಯ ಅರಮನೆಗೆ।
ಉದ್ಧರಿಸುವೆ ನಿನ್ನ ಪಾದಕೆ ಎನುತಲಿ
ಬಿದ್ದಳು ಪಾ[ದಾಂ]ಬುಜಕೆ ||೧೫೧||

ಜಯಜಯ ಮೂದೇವ [ಸುರ]ರೊಡೆಯನೆ ಜಯ
ಜಯ ಕಾಮದಹನನೆ ಜಯತು।
ಜಯ ನಂಬಿಗೊಲಿದನೆ ದೇವನೆ ಜಯವೆಂದು
ಜಯ ರಾಮನ ಪಾಲಿಸೆನಗೆ ||೧೫೨||

[ಪಾರ್ವತಿ]ರಮಣನೆ ಉರ್ವಿ ಒಡೆಯನೆ
ಸರ್ವ ವಂದಿತ ಪಾದನೆ।
ಸರ್ವಪ್ರಾಣಿಯ ಸಲಹುವ ಸೂತ್ರಧಾರನೆ
ಗರ್ವ ರಾಮನ ಪಾಲಿಸೆನಗೆ ||೧೫೩||

ಭಾಳಾಕ್ಷಿಧರ [ತಾ]ನು ಬಾಲೆಯ ನುಡಿಗೇಳಿ
ಪಾಲಿಸಿದನು ಈ [ಬೇಡಿಕೆಯ]।
ಲೋಲಲೋಚನೆ ಪುಷ್ಪ ತೆಗೆದು ಧರಿಸಿಕೊಂಡು
ಆಲಯವನು ಹೊರಹೊಂಟೊ ||೧೫೪||**

---

* ಇಲ್ಲಿ "......... ರಾಮನ ಚೆಂಡು ಕೇಳು।ಬೇಡುವ ಪರಿಯ ಕೇಳಿ ಕೋವಿದರು" ಎಂಬ ಅಪ್ರಸ್ತುತ ಪಠ್ಯ ಸೇರಿಕೊಂಡಿದೆ. (ಸಂ.)

** ದೇವರ ಕೋಣೆಗೆ ಹೋಗಿ ಬೇಡಿಕೊಂಡ ಸೂಚನೆ ಇದಾಗಿದೆ (ಸಂ).

ಹರುಷದಿ ರತ್ನಿಗೆ ಮೆಚ್ಚಿ ದೇವರ ದೇವ
ಕರೆಸಿ ಹೇಳಿ[ದ ವಾಯು]ಗೊಡನೆ।
ಧುರಗಲಿ ರಾಮನ ಮುತ್ತಿನ ಚೆಂಡನು
ಅರಮನೆಗೊಯ್ಯೊ ಕಂಪಿಲನ ॥೧೫೫॥

ಪಟ್ಟಸಾಲೆಯ ಮುಂದೆ ಹಾಕು ನೀ ಚೆಂಡನು
ಕಟ್ವಾಳು ರಾಮನೆಂಬವನು।
ಮುಟ್ಟನು ಪರಸತಿಯರನೆಂಬ ಬಿರಿದನು
ದೃಷ್ಟವ ನಾ ನೋಡಬೇಕು ॥೧೫೬॥

ಸೋಮಧರನು ರಾಮಯ್ಯನ ನಿಜವನು
ಪ್ರೇಮದಿ ನೋಡಬೇಕೆಂದು।
ಭೀಮನ ಪಿತನ ಕರೆದು ಹೇಳಿದನು ನಿ
ಸ್ಸೀಮ ಕುಮ್ಮಟಕೆ ಹೋಗೆಂದು ॥೧೫೭॥

ಜೀಯ ಹಸಾದವೆನುತ ವಾಯುದೇವನು
ಕೈಯ ಮುಗಿದು ಬೀಳ್ಕೊಂಡು।
ಹುಯ್ಯಲಿಡುತ ಬಂದನು ಬೆಳ್ಳಿ ಬೆಟ್ಟದಿಂ
ದೊಯ್ಯನೆ ಕುಮ್ಮಟಕಾಗಿ ॥೧೫೮॥

ತರುಗಳ ಮುರಿದಿಡುತಲಿ ಭೋರ್ಮೊರೆಯುತ
ಪರಿದು ಭೂಮಿಯನೆಲ್ಲ ತುಂಬಿ।
ನೆರೆದು ಚೆಂಡಿನ ಬಲೆಯೊಳು ಭೋರ್ಗರೆಯುತ
ದೊರೆ ದೊರೆಗಳ ಕಂಡು ನಿಂದ ॥೧೫೯॥

ಒಂದು ಬಾರಿಗೆ ರತ್ನಿಗೆ ಚಂಡಕೊಟ್ಟರೆ
ಇಂದಿವರಾಟ ಕೆಡುವುದು।
ಕಂದರ್ಪರೂಪ ರಾಮಯ್ಯನ ಲೆಗ್ಗೆಯ
ಒಂದು ಭಾವದಿ ನೋಡಬೇಕು ॥೧೬೦॥

ಅಂಗನೆ ಸೆಜ್ಜೆಗೃಹಕೆ ನಡೆದಳು ಬಂದು
ಹಂಗುಳಿಕೆಯ ಮೇಲೆ ಕುಳಿತು।
ಬಂಗಾರದ ಪೆಟ್ಟಿಗೆಯ [ತ]ರಿಸಿದಳು
ಕಂಗಳಲತಿ ಕರ ಚೆಲುವೆ ॥೧೬೧॥

ನಳಿನಾರಿ ವದನದ ನಳಿನ ಮುಖಿಯರೆಲ್ಲ
ನಳಿ[ನದ] ಎಳೆ ಮೊಗ್ಗೆ [ಕುಚ]ದ।

ನಳಿನದೆಸಳಗಣ್ಣ ಹಂಸಗಮನೆಯರು
ಬಳಸಿದರು ರತ್ನಿಯೊಡನೆ ||೧೭೨||

ಮರಿದುಂಬಿ ಬಳಗ ಮೋಹರದ ತೆರನಂತೆ
ಮಿರುಪ ಕೇಶವ ತುರುಬಿಕ್ಕಿ।
ಮೆರೆಯುವ ಜಡೆಯ ಪಸರಮೊಪ್ಪೆ ಜಾತಿಯ
ತುರುಬಿ[ಗೆ] ಮುಡಿಸಿ[ಯೆ] ಮೆರೆದು ||೧೭೩||

ದಿಟ್ಟಗಲ್ಲನ ವೈರಿಯ ಮಾವನಾರ್ತನ
ನೆಟ್ಟನೆ ಪೊತ್ತ ಭಾವದಲಿ।
ಬಟ್ಟ [ಕುಚದ] ನಾಗಾಯಿ ವಿಲಾಸದಿಂ
ದಿಟ್ಟಳು ಮುತ್ತಿನ ಬೊಟ್ಟ ||೧೭೪||

ಕಾವನ ರೂಪ[ವೆ]ಚ್ಚಂತೆ ರತ್ನಿಯ ಮುಖ
ತಾವರೆ ಬಾಣ ಮೆಚ್ಚುದಕೆ।
ಬಾವನ್ನಗಂಧಿ ಕಜ್ಜಳದಲ್ಲಿ ಕರಿಯನು
ತೀವಿ ಕಟ್ಟಲು ರೇಖೆದೆಗೆದು ||೧೭೫||

ಫಣಿಪನ ಶಿರದ ಮಾಣಿಕ್ಯದ ಪ್ರಾಸುಕದ
ಎಣೆಯಹದೊಂದು ಮೂಗುತಿಯ।
ಗಿಣಿನುಡಿ ಶಬ್ದದೋರ್ವಳು ಹರುಷದಲಿ
ಗಿಣಿಯ ನಾಸಿಕಕಿಕ್ಕಿದಳು ||೧೭೬||

ನೀಲಕಂ[ಠ]ನ [ಬಾಲೆಯ] ವಾಲೆಯ ತೆರ
ಸೋಲಿಪ ತೇಜದೋಲೆಗಳ।
ನೀಲಕುಂತಳೆಯರೊಲಿದು ಕರಕಂಜದ
ಬಾಲೆಯ ಕರ್ಣಕಿಕ್ಕಿದರು ||೧೭೭||

ಅಚ್ಚರಿಯದ [ವ]ಜ್ರ ನೀಲ ಮುತ್ತಡಸಿದ
ಹೆಚ್ಚುಗೆಲಸದ ಚಿಂತಾಕ।
ಒಚ್ಚೆರೆಗಂಗಳ ಸ್ತ್ರೀಯರು ತೆಗೆದಿಡೆ
ಮುಚ್ಚಿತು ಕಂಬುಕಂಧರವ ||೧೭೮||

ಚೀರಣಗೆಲಸದ ಪದಕ ತ್ರಿಚವುಸರ
ಓರಣ [ಸ]ರಿಗೆಯ ನಡುವೆ।
ತೋರ ಮುತ್ತಿನ ಸರಮಾಲೆಯ ತೊಡಿಸುತ
ನಾರಿ ಶೃಂಗಾರ ಮಾಡಿದಳು ||೧೭೯||

ಸಿಂಧುರ ವೈರಿಯ ಬಗೆಗೊಳ್ಳದೆ ಜರಿ
ವಂದದಿ ನಡು ಮಧ್ಯದಲಿ।
ಚಂದನ ಗೆರೆಯೊ[ಲು] ಹರುಷದಿಂದಲಿ ತಾನು
ತಂದು ಒಡ್ಯಾಣನಿಕ್ಕಿದಳು ॥೧೭೦॥

ತೋಳ ಬಳೆಯ ರಂಗು ರನ್ನಗಳಡಸಿದ
ತೋಳ ತಾಯ್ತದ ಮಣಿಗಳನು।
ತೋಳ [ಮುತ್ತು]ಗಳಿಂದಲಿ ನಳಿ[ನಾಸ್ಯೆಯ]
ತೋಳ ಶೃಂಗಾರ ಮಾಡಿದಳು ॥೧೭೧॥

ಅಂತು ಸಡಗರದುಪ್ಪರಿಗೆ ಏರಿದಳು
ಚಿಂತೆಯಳಿದು ರತ್ನಾಯಿ ।
ಸಂತೋಷದಿಂದ ಪನ್ನೀರ ಮುಕ್ಕಳಿಸಿಯೆ
ಭ್ರಾಂತೆ ಹಿಗ್ಗನೆ ಹಿಗ್ಗಿದಳು ॥೧೭೨॥*

ಉರ್ವಿಯೊಳಗೆ ಪುಷ್ಪಬಾಣನ ಹೆದೆಗಳ
ಗರಿಯಂತೆ ನಿರಿಗಳ ಮೇಲೆ।
ತರುಗೆವೆಗಂಗಳ ಸ್ತ್ರೀಯು ಚಾತುರ್ಯದಿ
ಮೆರೆವಲೆಗಳವ ಹಾಕಿದಳು ॥೧೭೩॥

ಇಕ್ಕಿದ ಸ್ಥಾನ ಸ್ಥಾನದ ಬಂಗಾರವ
ಲೆಕ್ಕ ಮಾಡುವರಳವಲ್ಲ।
ಚಿಕ್ಕ ರಾಮಯ್ಯನ ನೋಡಬೇಕೆನುತಲಿ
ಧಿಕ್ಕನೆ ಹೊರಟಳು ಗೃಹವ ॥೧೭೪॥

ಪಳುಕಿನ ಹಾವಿಗೆಯನು ಮೆಟ್ಟಿ ರತ್ನಾಯಿ
ಎಳೆಮಿಂಚು ಹೊಳೆವಂತೆ ಹೊಳೆದು।
ಕಳಕಳಿಸುತಲಿ ರಾಮನ ಹಂಬಲಿಸುತ
ನಳಿನಸಖನ ತಾಪದಲಿ ॥೧೭೫॥

ಕಾಮನ ಸತಿಯೊ ಭಾವಕಿಯೊ ಭಾರತಿಯೋ
ಸೋ[ಮ]ನ ರಾಣಿ ರೋಹಿಣಿಯೋ।
ಭೂಮಿಯ ಮಗಳೊ ಎಂದೆನೆ ಕರ ಚೆಲುವಿನ
ಕೋಮಲೆ ಇರವು [ಕರಚೋದ್ಯ] ॥೧೭೬॥

* ಪದ್ಯ ೧೮೦ರ ತರುವಾಯ ಮತ್ತೆ ಬಂದಿದ್ದ ಈ ಪದ್ಯವನ್ನು ಅಲ್ಲಿ ಕೈಬಿಡಲಾಗಿದೆ (ಸಂ).

ಕುಡಿನೀರ ಗಿಂಡಿ ಹಡಪದ ಕಾಳಂಜಿಯ
ಮಡಿದಿಯರೆಡಬಲದಲ್ಲಿ।
ಬಿಡದೆ ಬೀಸುವ ಕುಂಚ [ಎಡಬಲ] ರತ್ನಿಗೆ
ನಡೆದು ಬಂದಳು ಭದ್ರದೆಡೆಗೆ ॥೧೭೭॥

ಅಲ್ಲಲ್ಲಿ [ಬಹಳ ಸುಯ್ಯು]ತಲಿ ವೀಳ್ಯವ ಕೊಂಡು
ಫುಲ್ಲಶರನ ತವಕದಲಿ।
ಬಲ್ಲಿದ ರಾಮನ ನೋಡುವ ಸಡಗರ
ಎಲ್ಲರುಪ್ಪರಿಗೆ ಏರಿದರು ॥೧೭೮॥

ಏಳು ನೆಲೆಯ ಜಾಳಿಂದ್ರಿ ಚಿನ್ನದ ಮೇರೆ
ಡಾಳಿಸಿ ನೋಳ್ಪ ಕಂಗಳಿಗೆ।
ಹೇಳಲರಿಯ ಮೂಗ ಉದದಲ್ಲಿಹ
ಸುಳಿವ ಇರುಹೆ ಕಾಣಬಹುದು ॥೧೭೯॥

ಚಿನ್ನದ ಕಳಸಕೆ ರನ್ನಮಾಣಿಕವಿಕ್ಕಿ
ಹೊನ್ನ ತಚ್ಚರ ಮೇಲೆ ಹೊದಿಸಿ।
ಕನ್ನೆ ರತ್ನಾಯಿ ಇಹ ಮಹ ಮೇರುವೆ
ಮನ್ಮಥ ವಶವಾದಂತಿಹುದು ॥೧೮೦॥

ಹೊನ್ನ ಕಾಲ ಸೆಳೆಮಂಚದಿ ಕುಳಿತಿರ್ದು
ಚೆನ್ನಾಗಿ ತಾನು ಕೇಳಿದಳು।
ಎನ್ನ ತನುವ ಸೂರೆಗೊಂಬ ರಾಮನ ತೋರೆ
ಹೊನ್ನ ಹೊಯ್ವೆನು ಬಾಯಿತುಂಬ ॥೧೮೧॥ ೯-೨೭೩/...

ಹರನುರಿಗಣ್ಣಿಂದ ಮಡುಹಿದ ಕಾಮನ
ಕರ ಚೆಲ್ವನೆಂದೆಂಬರವನು।
ದೊರೆ ಸಾಟಿಯಲ್ಲವೆ ಕಾಣ್ಬನ ಕಂಡೆನು
ಸ್ಮರ ನಿಂದು ಚೆಂಡನಾಡುವುದು ॥೧೮೨॥

ಏನ ಹೇಳುವೆನಕ್ಕ ರಾಮನ ರೂಪಿಗೆ
ಮಾನಿನಿಯರು ಸೋಲ್ಬುದರಿದೆ।
ಮೀನಕೇತನಗೆ ವೆಗ್ಗಳ ಪುಟ್ಟಿದ[ವ]ನಿವ
ಭೂಮಿಯ ರಾಯರ ಗಂಡ ॥೧೮೩॥

ದಿಕ್ಕುದಿಕ್ಕಿಲಿ ನಿಂದ ಮನ್ನೆಯ ಸಂ[ಘವು]
ಲೆಕ್ಕ ಮಾಡುವರಳವಲ್ಲ।

ಚಿಕ್ಕ ರಾಮಯ್ಯನ ತಪ್ಪದೆ ತೋರೆಲೆ
ಇಕ್ಕುವೆ ಕುದುರೆ ಸತ್ತಿಗೆಯ ||೧೮೪||

ಬಡನಡುವಿನ ಭಾವಕಿ ರತ್ನಿ ಕೇಳ್ದರೆ
ಕಡುಗಲಿ ರಾಮಯ್ಯನನು।
ತಡೆಯದೆ ದೊರೆಗಳ ನಡುವೆ ನಾ ತೋರುವೆ
ಉಡುಗೊರೆಯನು ಇಂದು ಕೊಂಬೆ ||೧೮೫||

ಬಾಲೆ ಕೇಳಿದಳು ತನ್ನೊಳಿಗದವಳನು
ಮೇಲಿರ್ಪ ಸತ್ತಿಗೆಗಳನು।
ಕಾಲನಾದರೆ ದಾಳಿ ಮಾಡುವ ವೀರರ
ಲೋಲೆ ಚಿತ್ತೈಸೊಂದು ನುಡಿಯ ||೧೮೬||

ಕನಕದ ತಬಕಿನ ಸತ್ತಿಗೆ ನೆಳಲೊಳು
ದಿನಪನ ಪ್ರಭೆಯುಳ್ಳನಾರೆ।
ವಿನಯದಿಂದಲಿ ಹರಿಯಮ್ಮ ಸಾಕಿದ ಮಗ
ಮನಸಿಜರೂಪ ಕಾಟಣ್ಣ ||೧೮೭||

ಅವನೀಗ ಚೆಂಡನಾಡುವನು ಕೊಮರ ಕಾಟ
ಜಮದಾಡಿಯ ಕಟ್ಟಿದವನು।
ಅವನೀಗ ಸರ್ವ ಭಂಡಾರಕ್ಕೆ ಒಡೆಯನು
ಅವನೀಗ ರಾಮಯ್ಯನಣ್ಣ ||೧೮೮||

ವಸವಂತ ಪಟ್ಟೆಯ ಸತ್ತಿಗೆ ನೆಳಲೊಳು
ಹಸುರಗುಪ್ಪಸದವನಾರೆ।
ದೆಸೆಗೆಡಿಸಯೆ ತುರುಕರನು ಕಡಿದು ಬಂದ
ಹೆಸರುಳ್ಳ ಬಾದುರಖಾನ ||೧೮೯|| ೯-೨೭೬/...

ಪಟ್ಟೆಯ ಸತ್ತಿಗೆ ಮೇಲೆ ಹೊಂಗಳಸವು
ಉಟ್ಟ ಚಂದ್ರಿಕೆಯ ಕಾಸೆಯನು।
ನೆಟ್ಟನೆ ರುಮಾಲ[ವ] ಹಾಕಿಸಿಕೊಂಬ
ದಿಟ್ಟ ಮನ್ನೆಯನಾರೆ ನಾಗಿ ||೧೯೦||

ದರವೇಸಿ ರೂಪಿಲಿ ಹೋಗಿ ಖಾನರನೆಲ್ಲ
ಹುರಿದ ಭಂಗಿಯ ಹಿ[ಟ್ಟಿನಂತೆ] ।
ಭರದಿಂದ ವಚನಾಭಯ ಕೊಟ್ಟು ಕೊಂದವ
ಧುರಧೀರ ಬೇವಿನ ಸಿಂಗ ||೧೯೧||

ಜಲಪಟ್ಟೆ ಸತ್ತಿಗೆ ಬಲು ಬಿರುದಿನ ಬೊಬ್ಬೆ
ಉಲಿವ ರವುಡೆ ಜಾಗಟೆಯು ।
ಬಲು ಮುಂಗೈಗೆ ಕಟ್ಟಿದ [ಭಾ]ಸೆಯಿಂದವ
ತೊ[ಲ]ಗದ ಕಂಬದವ[ನಾರೆ] ॥೧೯೨॥

ಒಂದು ಹುಯ್ಯಲಿಗೆ ಐವತ್ತು ತಲೆ ತಹ
ಚಂದ್ರಗಿರಿಯ ದುರ್ಗದವನು।
ಕುಂದಿಲ್ಲದಿರುವ ವಿಕ್ರಮವೀರನವನು ಗೋ
ವಿಂದನಾತನು ಕಾಣಮ್ಮ ॥೧೯೩॥

ಅಗಲನೆ ಸತ್ತಿಗೆ ಜಗುಲಿ ಮೈಯವನಾರೆ
ನಗೆಮುಖದ ಮನ್ನೆಯನಾರೆ।
ತಗುಳು ಮುಗುಳು ಮಾಡಿ ರಣದೊಳು ಕಡಿವನು
ನೆಗಳೂರ ತುಳುವರ ಹರಿಯ ॥೧೯೪॥

ಕುಸರಿಗೊಂಡೆಯಗಳ ಸತ್ತಿಗೆ ನೆಳಲೊಳು
ಹೊಸಮುತ್ತ [ಕಟ್ಟಿದ]ನಾರೆ।
ಮು[ಸು]ಕಿದ ಪವುಜ ಮೇಲೇರಿ ಕಡಿಯುವ
ಹಸಗರ ಮಾಳನೆಂಬವನು ॥೧೯೫॥

ಕರಿಯ ಸತ್ತಿಗೆ ಮೇಗೊರ[ಸಿದ] ಶ್ರೀಗಂಧ
ಧುರಧೀರನಾವನೆಲೆ ನಾಗಿ।
ಕರಿ [ಘಟೆ]ಗಳ ಮೇಲೊಡ ಹೊಯಿಸಿ ಇರಿವನು
ಬಿರಿದುಳ್ಳ ಚವುಲದ ನಾಗ ॥೧೯೬॥

ಹೊಂಬಟ್ಟೆ ಸತ್ತಿಗೆ ಹೊಂಬರೆಹದ ಕಾಸೆ
ಇಂಬಿಲಿ ಚವುಲ ಥಾಳಿಸುತ।
ತುಂಬಿದ ದೊರೆಗಳ ನಡುವೆ ನಿಂದಿರುವವ
ಬೆಂಬಳಿ ಮನ್ನೆಯನಾರೆ ॥೧೯೭॥

ಹೊಗಳಲಳವಲ್ಲಮ್ಮ ಅವನ ಸಾಹಸವನು
ಕಾಳಗದಲಿ ಗಜಸಿಂಹ।
ಲೋಲ ರಾಮನ ಸಂಗತಿಗನು ಡೊಂಬರ
ಸಾಳುವ ನಾಯಕನೆಂಬವನು ॥೧೯೮॥

ಎತ್ತಿಮುಂಡಾಡಿ ನಾಗಿಗೆ ವೀಳ್ಯದ ಕೊಟ್ಟು
ಮತ್ತೆ ಆಭರಣವ ಕೊಡಿಸಿ।

ಮುತ್ತಿನ ಸತ್ತಿಗೆ ನೆಳಲಲ್ಲಿ ನಿಂದವ
ಎತ್ತಣ ನಾಡ ಮನ್ನೆಯನೆ ||೧೯೯||

ಧರೆಯೊಳು ನಿನಗೆಣೆಗಾಣೆನೆ ರತ್ನಮ್ಮ
ಹರಿಣಾಕ್ಷಿ ಕೇಳು ಪೇಳುವೆನು|
ಧುರದೊಳಗಚ್ಚರಿಯ ಧೀರನವನೀಗ
ಉರಿಗೊಳ್ಳಿ ನಾಗನೆಂಬವನು ||೨೦೦||

ಕುಟುಕು ನೋಟದ ಬೇಟ ಕೂಟದ ಚಾಟಿನ
ಚಾಟುವೆಣ್ಣದಿರವನಾಗಿ|
ಘಾಟಿಸಿ ನಿಂದಿಹ ದೊರೆಗಳ ನಡುವಣ
ಮೀಟ ಸತ್ತಿಗೆಯವನಾರೆ ||೨೦೧||

ಮಂಡಲದೊಳು ಹೆಣ್ಣು ಕುಲಕೆ ಕಟ್ಟಾಣಿಯೆ
ಕಂಡು ತೊಲಗುವರಂಕುಶಕೆ|
ಚಂಡ ವಿಕ್ರಮ ಉದ್ದಂಡನೆಂದೆನಿಸುವ
ಕೆಂಡದ ಬಸವನೆಂಬವನು ||೨೦೨||

ಕಣ್ಣು ಕೊರೆವಂಥ ಸಣ್ಣ ತೋಪಿನ ಛತ್ರ
ತಣ್ಣೀರ ಗಿಂಡಿಯವನಾರೆ|
ಬಣ್ಣಿಸಿ ಲಾವಣಿಗೆ ಹೊಯಿದೆದೆದಾವನು
ಜಾಣ್ವೆಯ ವೀರ ಕಾಣಮ್ಮ ||೨೦೩||

ಸೋಮವರ್ಣದ ಪಟ್ಟೆ ಸತ್ತಿಗೆ ನೆಳಲೊಳು
ಹೇಮಗಾಸೆಯವನಾರೆ ನಾಗಿ|
ಭೀಮನ ಸಮತೂಕದ ಬಂಟನವನೀಗ
ಕೋಮಟಿಗರ ಮಲ್ಲನವನು ||೨೦೪||

ಕಡೆ ದಡಿ ಪಟ್ಟೆಯ ಸತ್ತಿಗೆ ನೆಳಲೊಳು
ಹಿಡಿದ ಕಾಳಂಜಿಯವನಾರೆ|
ಸಿಡಿಲು ಸರ್ಪಗೆ ಲೆಂಗಿಪಂತೆ ಪವುಜಿನ ಮೇಲೆ
ಕಡಿವನು ನಾವಿದ ಚೆನ್ನ ||೨೦೫||

ಪೆಂಡೆಯ ಬಿಗಿದ ಸತ್ತಿಗೆ ಮುತ್ತಿನ ಕೊಡೆ
ಡಿಂಡಿಮ ಹೊಯಿಸುವನ್ಯಾರೆ|
ಮಿಂಡಗುದ್ದಲಿಯ ಬೊಮ್ಮಣ್ಣನು ಅವನೀಗ
ಪುಂಡರೀಕಾಕ್ಷಿ ನೀ ಕೇಳು ||೨೦೬||

ಸುಲಿಪಟ್ಟೆ ಸತ್ತಿಗೆ ನೆಳಲಲ್ಲಿ ನಿಂದವ
ಬಲವಂತನ್ಯಾರೆ ನಾಗಮ್ಮ।
ಕಲಿಗಳರಸನವನೀಗಲೆ ಕೇಳಮ್ಮ
ಚೆಲುವನು ಅಕ್ಕಸಾಲೆ ಚೆನ್ನ ॥೨೦೭॥

ಗಮ್ಮನೆ ಪರಿವಾರ ಕರಿಯ ಛತ್ರದಿ ನಿಂದ
ಹೆಮ್ಮರದಾ ಮಾನ್ಯನಾರೆ।
ಡಮ್ಮನೆ ಟಮಕು ಮಾಡ[ಲು] ಮುನ್ನಲಿರಿವನು
ದುಮ್ಮಿಯ ಬಸವನೆಂಬವನು ॥೨೦೮॥

ಸತ್ತಿಗೆ ಮೇಲೆ ಎರಡು ನೆಲೆಯ ಛತ್ರ
ಒತ್ತಿಲಿ ಹೊಡೆವ ತಂಬಟವು।
ಬತ್ತೀಸಾಯುಧ ಎಡಬಲದಲಿ ನಿಂದಿಹ
ಕಸ್ತೂರಿ ಕೋಳಾಹಳನಾರೆ ॥೨೦೯॥

ಕತ್ತಲೆಯೊಳು ಕಗ್ಗೊಲೆಯ ಸುರಿತಾಳನ
ಮುತ್ತಿನ ಮುಡಿಯೆ ಚಿತ್ತೈಸು।
ಹೊತ್ತು ತಾಹನು ಸೀಮೆಯೊಳಗಿರ್ದ ದೊರೆಗಳ
ಚಿತ್ರದ ಕಳಬಂಟನವನು ॥೨೧೦॥

ಮಾದಲ ವರ್ಣದ ಸತ್ತಿಗೆ ನೆಳಲೊಳು
ಕುಂದಿನ ಒಡ್ಯಾಣವಿಟ್ಟು।
ಮುಂದೆ ಬಿರಿದಿನ ಜಾಗಟೆಯೊಳಗಿರ್ಪ
ಕಂದರ್ಪ ಸಮರೂಪನಾರೆ ॥೨೧೧॥

ಹೋಗದ ಕೋಟೆಗೆ ಸುರಿತಾಳನವನೀಗ
ನಾಗರ ಮರಿಯೆಂಬವನು।
ಕೂಗಿದರೊಮ್ಮೆಳ ಹೆದ್ದುವ ಧೀರನು
ಬೋಗಾರ ಕಳಸನೆಂಬವನು ॥೨೧೨॥

ಸುರಪಟ್ಟೆ ಸತ್ತಿಗೆ ನೆಳಲೊಳು ನಿಂದವ
ಸ್ಮರನ ಸನ್ನಿಭನಾರೆ ನಾಗಿ।
ಕಾರ್ಯವೆಂಬುದಕೆ ಕೋಳಾಹಳನವನೀಗ
ಹಾರುವ ಲಿಂಗನೆಂಬವನು ॥೨೧೩॥

ಹೊಂಬಣ್ಣ ಸತ್ತಿಗೆ ನೆಳಲಲ್ಲಿ ನಿಂದಿಹ
ಗಂಭೀರ ಮನ್ನೆಯನಾರೆ।

ಕೊಂಬೊಳು ಮಾಲೆಯ ಕಾಣಿಸಿಕೊಂಬವ
ಕುಂಬಾರ ಕಲ್ಲನೆಂಬವನು ||೨೧೪|| ೯-೨೭೯/...

ಚಿತ್ರದ ಸತ್ತಿಗೆ ಮುತ್ತಿನ ಕಾಸೆಯ
ಒತ್ತಿಲಿ ಸೂಳೆಯರುಗಳು|
ಕತ್ತಲೆ ಮನೆಯೊಳು ಜ್ಯೋತಿಯಂತೊಪ್ಪುವ
ಎತ್ತಣ ನಾಡ ಮನ್ನೆಯನೆ ||೨೧೫||

ಅವನೀಗ ರಾಮಯ್ಯನ ಸನಿಹದ ಬಂಟ
ಅವ ಗಡಿನಾಡ ಮನ್ನೆಯನು|
ಅವನೀಗ ತುರುಕ ಪೌಜಿಗೆ ಬರಸಿಡಿಲಮ್ಮ
ಅವನೀಗ ಮುದಗಲ್ಲ ಬೋಚ ||೨೧೬||

ಹಸುರಿನ ಸತ್ತಿಗೆ ಹೊಸ ಮೇಘವಣ್ಣಿಗೆ
ವಶದ ಕಾಸೆಯನಾರೆ ನಾಗಿ|
ಬಿಸಿಯ ಬೂದಿಯನೆಂಬ ಹೆಸರು ಕೊಟ್ಟನು ರಾಮ
ವಸುಧೆಗೆ ಚಿಪ್ಪಿಗ ಕಸವ ||೨೧೭||

ಹಳದಿಯ ಸತ್ತಿಗೆ ಕಾಲಲಿಕ್ಕಿದ ಕಡೆಯು
ರಕ್ಕಸ ಮನ್ನೆಯನಾರೆ|
ಇಳೆಯೊಳು ಆಶ್ಚರಿಯದ ಬಂಟನವನೀಗ
ಹಳೆಯ ಮಾದಿಗ ಹಂಪನವನು ||೨೧೮||

ಚಿಕ್ಕ ಸತ್ತಿಗೆ ಹೊಳೆವ ಚವುಲ ಕಾಲಿಲೆಳೆವ
ಸತ್ತಿಗೆಯವನಾರೆ ನಾಗಿ|
ಲಕ್ಷದಂಡಿಗೆ ಒಂದು ಲವುಡಿಯೆ ಸಾಕೆಂಬ
ಒಕ್ಕಲಿಗರ ಗೊಂಡ ಮುದ್ದ ||೨೧೯|| ೯-೨೮೦/...

ಹೂವಿನ ಸತ್ತಿಗೆ ನೆಳಲೊಳು ವೃಷಭನ
ಧ್ವಜ ಮುಂದೆ ನಿಂದಿಹನಾರೆ|
ನುಚ್ಚುಗುಟ್ಟಿಯೆ ನೇಮಿಯ ದಂಡ ಕಡಿವನು
ಮುಚ್ಚ್ಯಾಲಖಾನನೆಂಬವನು ||೨೨೦||

ಪಟ್ಟೆ ಸತ್ತಿಗೆ ಮೇಲೆ ಹೊಳೆವಗಳಸವು
ನಿಚ್ಚಟ ಮನ್ನೆಯನಾರೆ|
ಆವ ದೇಶಕೆ ಹೋದರೆ ದೆಸೆಮುಖವುಂಟು
ದೇವಿಶೆಟ್ಟಿಯ ಲಿಂಗಣ್ಣ ||೨೨೧||

ಏಳು ನೆಲೆಯ ಚಿತ್ರ ಏಳು ಬಣ್ಣದ ವಾಸೆ
ಏಳು ಸಾವಿರ ಮಂದಿ ಅವಗೆ ।
ಏಳು ಪೌಜಿಗೆ ಸಲ್ವ ಹೊರತಂತೆ ಕೊಲ್ವನು
ಕಾಳುಗಟ್ಟಿಯ ಯರಮಾರ ||೨೨೨||

ಕೊಡ[ಹಿ]ನ ಸತ್ತಿಗೆ ಹಿಡಿದ [ಹೊಳೆವೆಳೆ] ಕೈಯ
ಕಡುಗಲಿ ಮನ್ನೆಯನ್ಯಾರೆ
ಗಿಡುಗ ಬೂರಲಿ ಹೊಯಿದು ತೆಗೆವಂತೆ ಇರಿವನು
ಸಿಡಿಲಕಲ್ಲ ಸಿಂಗನವನು ||೨೨೩||

ಮಝು ಭಾಪುರೆ ನಾಗಿ ಹಿಡಿ ಕರ್ಪೂರವೀಳ್ಯ
ಗುಜ್ಜ ಸತ್ತಿಗೆಯವನಾರೆ।
ಮಝು ಭಾಪುರೆ ಡೊಳ್ಳು ಢಮ್ಮೆಂದು ಇರಿವನು
ಗುಜ್ಜಲ ಹರಿಯನೆಂಬವನು ||೨೨೪|| ೯-೨೭೭/...

ಮೇಗರಂಜಿಯ ಪಟ್ಟೆ ಸತ್ತಿಗೆ ನೆಳಲೊಳು
ಭೋಗ ಮನ್ನೆಯವನಾರೆ।
ಹೋಗಲೀಸದೆ ಬಂದ ದಂಡನು ಬರಿಕೆಯ್ವ
ಭೋಗ ಬಂಟರ ಭಾವ ಹನುಮ ||೨೨೫||

ಪೀಲಿಯ ಸತ್ತಿಗೆ ನೆಳಯೊಳು ಥಾಳಿಪ
ಸುಲಿಪಲ್ಲ ಕಾಲಾಂತಕನಾರೆ।
ಕಾಲು ಮುಂತಾಗಿ ಹುಟ್ಟಿದನವನೀಗಲಿ
ಲೋಲು ಮೀಸೆಗ ತಿಮ್ಮನವನು ||೨೨೬||

ದಂಡವಳಿಯ ಪಟ್ಟೆ ಸತ್ತಿಗೆ ನೆಳಲೊಳು
ಚಂಡ ವಿಕ್ರಮನಾರೆ ನಾಗಿ।
ಬಂಡಿಯ ತುಂಬಲಿ ಕವಣೆಯನಿಡುವನು
ದ್ದಂಡ ಸಾದರ ಮಲ್ಲನವನು ||೨೨೭||

ಪರಿಪರಿ ಸತ್ತಿಗೆ ನೆಳಲಲ್ಲಿ ನಿಂದಿಹ
ಕರಿವಲ್ಲಿ ಸತ್ತಿಗೆಯನಾರೆ।
ಧರೆಯೊಳು ತಿರುಗಿ ಬೇಸತ್ತು ರಾಮನ ಕಂಡ
ಪರದೇಶಿ ಭೈರನೆಂಬವನು ||೨೨೮||

ಜಗಳವೆಂಬುದು ಸೀಮೆಯೊಳಗಿಲ್ಲದಿರ್ದಡೆ
ಮಿಗೆ ಗಡಿನಾಡಿಗೆ ಹೋಗಿ।

ಬಗೆದು ಕಣ್ಣವನಿಕ್ಕಿ ಊರ ಸುಡುತಲವ
ತೆಗೆತಹನವನು ಹುಯ್ಯಲನು ||೨೯||

ಪಟಿಕದ ಸತ್ತಿಗೆ ನಟಣೆ ಪಚ್ಚೆಯ[ಲವ]
ಪುಟಿಯುಳ್ಳ ಮನ್ನೆಯನಾರೆ।
ಕಟಕದಿಂದಲೆ ಬಂದ ಕೊಟೆಗರ ಮಲ್ಲನು
ಸಟೆಯಲ್ಲ ದಿಟದ ವಿಕ್ರಮನು ||೩೦||

ಮೀನ ಟೆಕ್ಕೆಯನೆತ್ತಿ ಹೊಳೆವ ರತ್ನದ ಛತ್ರ
ಭಾನುವಿನಂತಿಹನಾರೆ।
ಜೇನಕಲ್ಲದುರ್ಗದ ಭೈರನಾಯಕ[ನವ]
ಹೀನವಿಲ್ಲದ ಮನ್ನೆಯನು ||೩೧||

ಬೆಳ್ಳಿ ಕಾವಿನ ಛತ್ರ ಗುಳ್ಳಗಾವಿಯ ಕಾಸೆ
ಬೆಳ್ಳಿಯ ಗಡ್ಡದವನಾರೆ।
ಡಿಳ್ಳಿಯಿಂದಲಿ ಬಂದ ಬಾದೂರನ ಕೂಡೆ
ಮಲ್ಲೂಕಖಾನನೆಂಬವನು ||೩೨||

ಜಗಜಂಪಿನ ಛತ್ರ ನೆಗಹಿ ಬೀಸುವ ಚವರಿ
ನಗೆಮುಖ ಮನ್ನೆಯನಾರೆ।
ಹಗಲುಗನ್ನಕೆ ಸುರಿತಾಳನು ಅವನೀಗ
ಜಗುರ ರಾಮನೆಂಬವನು ||೩೩||

ಚಿನ್ನದೊರೆಯ ಛತ್ರ ಹೊನ್ನೊರೆ ವಂಕುಡಿ
ಮನ್ನೆಯನಾವನೆಲೆ ನಾಗಿ।
ಉನ್ನಂತ ಇರುಳಗನ್ನಕೆ ಸುರಿತಾಳನು
ಮನ್ನಾಲ ಮಾಚನೆಂಬವನು ||೩೪||

ಕಪ್ಪನೆ ಸತ್ತಿಗೆ ಒಪ್ಪುವ ಕಾಸೆಯು
ಪುಷ್ಪ[ಚಾ]ಪನ [ತೂ]ಕನಾರೆ।
ಉಪ್ಪಲಿಕರ ಸಂಗಯ್ಯನು ಅವನಿಗೆ
ತಪ್ಪದೆ ನೋಡೆ ನನ್ನಮ್ಮ ||೩೫||

ಭೃಂಗವಳ್ಳಿಯ ಪಟ್ಟೆ ಸತ್ತಿಗೆ ನೆಳಲೊಳು
ಹಿಂಗದೆ ಚವುರಿ ಢಾಳಿಸುತ।
ಹೊಂಗೆಲಸದ ಪದಕವನಿಟ್ಟು ನಿಂದಿಹ
ಸಂಗ್ರಾಮಧೀರನವನಾರೆ ||೩೬||

ಒಂದು ದಿನಕೆ ಹತ್ತು ಹುಂಜಿನ ಕಾಳಗ
ಕಂಡುದಲ್ಲದೆ ಉಣಲಿಲ್ಲ।
ಬಂದ [ಬಂಟ]ರನು ಬರಿ ಕೈಯುವ ಚೂಣಿಲಿ
ಮಂದಲ ಮಾರನೆಂಬವನು ॥೨೩೭॥

ಕೊಂಕಿದ ಕುರುಳೋಳೆ ಕಿಂಕಿದ ಕುಚದೋಳೆ
ಪಂಕಜಮುಖಿಯೆ ನಾಗಾಯಿ ।
ಸಂಕದ ಸತ್ತಿಗೆ ನೆಳಲೊಳು ನಿಂದವ
ಬಿಂಕದ ಮನ್ನೆಯನಾರೆ ॥೨೩೮॥ ೯-೩೦೩/...

ಉಬ್ಬೆದ್ದ ದಂಡಿಗೆ ಒಬ್ಬನೆ ಸಾಕೆಂಬ
ಹೆಬ್ಬುಲಿಯೆಂದೆಂಬರವನ ।
ಹುಬ್ಬಳ್ಳಿ ಸೀಮೆಯ ತಿಮ್ಮನವನೀಗ
ಗಬ್ಬೆನಾಯಿಕನು ಕಾಣಮ್ಮ ॥೨೩೯॥

ಮಿಸುಕಿನ ಸತ್ತಿಗೆ ಕನಕ ನೇತ್ರದೆಸಕ
ತನು ಹೇಮದಂತಿಹನಾರೆ ।
ಮುನಿದ ವೈರಿಯ ತಲೆಗಳ ಚೆಂಡನಾಡುವ
ಪಿನುಗುಂಡಿ ಸೋಮನೆಂಬವನು ॥೨೪೦॥

ಮೆರೆವ ಕಾವಿನ ಛತ್ರ ಕುರುಹಿನ ಚವುರವು
ಮರಿಯಾನೆ ಇವನಾರೆ ನಾಗಿ।
ಉರುಲು ಹಾಕಿಯೆ ರಣದೊಳು ಹಿಡಿದೆಳೆತಹ
ನೆರೆ[ಗಲಿ] ಹಗ್ಗದ ಮಲ್ಲ ॥೨೪೧॥

ಬಿಳಿಯ ಸತ್ತಿಗೆ ಮೇಲೆ ಹೊಳೆವ ಹೊಂಗಳಸವು
ಇಳಿಬಿಟ್ಟ ಮಲ್ಲಗಾಸೆಗಳು।
ಬೆಳುಗಾವಿಂದಲಿ ಬಂದ ಮಲ್ಲನಾಯಿಕನೆಂದು
ಕೆಳದಿ ರತ್ನಿಗೆ ಉಸುರಿದಳು ॥೨೪೨॥

ಕಾಗಿನ ಸತ್ತಿಗೆ ಮೇಗವಣ್ಣಿಗೆ ಕಾಸೆ
ನಾಗಿ ನಿಂದಿಹನವನಾರೆ।
ಕೂಗಿದ ಹುಯಿಲ ದನಿಯ ಕೇಳಿ ಎಚ್ಚತ್ತು
ಕೂಗುವ ಬೈರನೆಂಬವನು ॥೨೪೩॥

ಅರ್ಧನಾರಿಯ ಸತ್ತಿಗೆ ಕಾಲು ಕಡಗವು
ಮುದ್ದು ಮುಖದವನಾರೆ ನಾಗಿ।

ರುದ್ರನ ಅವತಾರ ಬಂಟ ಅವನೀಗ
ಸಿದ್ಧರಾವುತನು ಕಾಣಮ್ಮ ॥೨೪೪॥

ಸಿಡಿಲ ಬಳಗ.... ದಂತಿಹ ವರವೀರನು
ತಡೆಯದೆ ವಾಲೈಸಿಕೊಂಬ।
ಕಡಗಲಿ ರಾಮನ ತೋರದಿರ್ದರೆ ನಾನು
ಬಿಡುವೆನು ಪ್ರಾಣದಾನವನು ॥೨೪೫॥

ಇಂತಿವರನು ವಾಲೈಸಿಕೊಂಬುವನು ತಾ
ನೆಂಥ ನಾಡ ವಿಕ್ರಮನೆ।
ಕಂತುಸನ್ನಿಭ ರಾಮಯ್ಯನ ತೋರೆನ್ನ
ಚಿಂತೆಯನೀಡಾಡುವೆನು ॥೨೪೬॥

ಎಪ್ಪತ್ತು[ಎರಡು] ಮನ್ನೆಯರ ಸತ್ತಿಗೆಗಳು
ತಪ್ಪದೆ ಉರಿಯಲೆ ನಾಗಿ।
ಕಪ್ಪುಗೊರಳ ಪೆಸ[ರಿನ] ಸತ್ತಿಗೆ ರಾಮನ
ತಪ್ಪದೆ ತೋರೆ ನಾಗಮ್ಮ ॥೨೪೭॥ ೯-೩೦೮/೧೬-೯೭

ತಳಿತ ಪಲ್ಲವದ ಸತ್ತಿಗೆಗಳ ನೆಳಲೊಳು
ತಳುಕಿನವೆರಡು ಸತ್ತಿಗೆಯು।
ಇಳೆಗತಿ ಬಿರಿದಿನ ಸತ್ತಿಗೆ ನೆಳಲೊಳು
ಹೊಳೆವ ಮುತ್ತುಗಳ ಥಾಳಿಸುವ ॥೨೪೮॥

ಅವನೀಗ ನಾಲ್ಕು ಸತ್ತಿಗೆಯ ನೆಳಲೊಳಗಿಹ
ಅವ ಮೂರು ರಾಯರ ಗಂಡ।
ಅವನೀಗ ತುರುಕ [ಸೇ]ನೆಯ ಕಾದಿ ಗೆದ್ದವ
ಅವನೀಗ ಚೆನ್ನಿಗ ರಾಮ ॥೨೪೯॥

ರಾಮನೆಂಬುದ ಕೇಳಿ ಭೂಮಿಗೆ ಬಿದ್ದಳು
ಆ ಮಾಹಾವಿನ ತಾಗಿದಂತೆ।
ಕಾಮನೆಚ್ಚನು ಪಂಚಬಾಣದ ಸರಳಿಂದ
ಕಾಮಿನಿ ಉಳಿದುದೆ ಚೋದ್ಯ ॥೨೫೦॥

ಮೆಲ್ಲನೆ ಅರೆಗಣ್ಣ ತೆರೆದ ರತ್ನಮ್ಮಗೆ
ನಿಲ್ಲದೆ ಜೀವ ಸಂಚಲಿಸಿ।
ತಲ್ಲಣಿಸುತಲೆ ಭೂಮಿಯ ಮೇಲೆ ಬಿದ್ದಳು
ಪುಲ್ಲಶರನ ತವಕದಲಿ ॥೨೫೧॥

ಪುಷ್ಪದ ಬ್ರಹ್ಮವು ಹೊಡೆಯಿತು ರತ್ನಿಗೆ
ತಪ್ಪದೆ ಬೀರ ಜಟ್ಟಿಗನ।
ಒಪ್ಪುವ ರಾಮನ ಹಂಬಲ ನಾಟಿತು
ಪುಷ್ಪಗಂಧಿನಿ ಬಿದ್ದಳೆನುತ ॥೨೫೨॥

ಕೆಟ್ಟೆ ಇದೇನು ಎಲ್ಲಿಯ ವಿಧಿಯೆನುತಲಿ
[ನೆಟ್ಟ]ನೆ ಮನದಲ್ಲಿ ಮರುಗಿ।
ಸೃಷ್ಟಿಗೀಶ್ವರ ಬಲ್ಲ ಎನುತ ಬೇಗದಿ [ನಾಗಿ]
ಮುಟ್ಟಿ ನೋಡಿದಳು ನಾಡಿಯನು ॥೨೫೩॥

ನನೆಗೋಲ ಗಾಯ ತಾಗಿದ ರತ್ನಮ್ಮನ
ವನಿತೆಯರೊಳ್ಗೆಯ್ಯ ಕೊಟ್ಟು।
ಅನುಮಾನವಿಲ್ಲದೆ ರತ್ನಿಯ ಕರಕೊಂಡು
ಕನಕ ಮಂಚ[ದಲು]ಪಚರಿಸಿ ॥೨೫೪॥

ಎಳೆ ದಳ[ದ]ಲರ್ಗಳ ಪಸರಿಸಿ ಎಡೆಯಲ್ಲಿ
ತಳಿದರು ಸಕಲಲರ್ಗಳನು।
ನಳಿನಾರಿಕಾಂತದ ಜಲವ ಚಳಿಯ ಕೊಟ್ಟು
ಕೆಳದಿಯ ಮೇಲೆ ಒರಗಿಸಲು ॥೨೫೫॥

ಘನ ಬದ್ಧ ಮಂಟಪದಿಂದ [ಇ]ಳುಹಿ ತಂದು
ಕನಕ ಮಂಚದೊಳು ಕುಳ್ಳಿರಿಸಿ।
ತನು ಕಂದಿ ಕುಂದಿದ ರತ್ನಿಯ ತಂದೀಗ
ವಿನಯವಳಿದು ಚಿಂತಿಸುತ ॥೨೫೬॥

ಶಿರಪಟ್ಟೆಯೊಳು ಪನ್ನೀರ್ಗಿಂಡಿ ಕಣ್ಕಟ್ಟಿ
ಇರದೆ ಬಾವನ್ನವ ಹೂಸಿ।
ಪರಿಮಳದಾಲವಟ್ಟವನಿಕ್ಕಲು ತಾಪ
ಮರೆಸಿತು ಸರಸಿಜಮುಖಿಗೆ ॥೨೫೭॥

ಮರೆದೊರಗಿದ ರತ್ನಿಯ ಕಂಡು ನಾಗಾಯಿ
ಮರುಗಿದಳ್ ಮನದೊಳಿಂತೆಂದು ।
ಕರಿಗೊರಳಗೆ ಅರ್ಚಿಸಿದಲರ್ಗಳ ತಂದು
ತುರುಬಿಗೆಚ್ಚಲು ಕಣ್ದೆರೆಯೆ ॥೨೫೮॥

ಮೆಯ್ದ್ದೆಗೆದಳು ಮೂರ್ಚೆ ತಿಳಿದು ರತ್ನಾ
ದೇವಿ ಮುಖವ ಕಳೆಗುಂದಿ ।

[ಕಂದರ್ಪ] ರೂಪನ ಪ್ರಿಯ ಸಲೆ ಸರಸ
ಹೊದ್ದಿ ಇನ್ನೆಂತು [ಕೂ]ಡುವೆನು ॥೨೫॥

ಉರ್ವಿಯೊಳಗೆ ಕವತಾಚಲಗೊಂಡನು
ಮರೆಮಾಡಿ ಎಸೆಯಲುಬಹುದೆ।
ಮರುಗಿ ಮನದಲತಿ ನೋಯುತ ನಾಗಾಯಿ ಎ
ಚ್ಚರಿಸಿದಳು ರತ್ನಾಯಿಗೆ ॥೨೬೦॥

ಘಳಿಲನೆ ರಾಮ ಸಿಕ್ಕುವುದುಂಟೆ ಎಲೆ ಸ್ವಾಮಿ
ಉಳಿಯಲರಿಯೆನು ನಾಗಾಯಿ।
ಬಳಲಿ ಬಾಯಾರುತ ಭ್ರಮೆಗೊಂಡು ರತ್ನಾದೇವಿ
ತಳಮಳಗೊಂಡಾಳಾ ಕ್ಷಣದಿ ॥೨೬೧॥

ತಡೆಯಲಾರೆನು ತನುವಿನ ತಾಪಾಗ್ನಿಯ
ಇಡಿಕಿರಿದಿಹ ಕುಚಗಳನು।
ಕೊ[ಡು]ವೆನು ಕೈಯಗಾಣಿಕೆಯ ರಾಮಗೆ ಎಂದು
ನುಡಿದಳೂಳಿದವಳೊಡನೆ ॥೨೬೨॥

ಹೊಲಬುಗೆಡಲಿ ಬೇಡ ಎಲೆ ಕೇಳು ನನ್ನಮ್ಮ
ಚೆಲುವ ಚೆನ್ನಿಗನು ರಾಮುಗನ।
ಒಲಿಸಿ ನಿನಗೆ ಕೈಗಾಣಿಕೆಯ ಮಾಡುವೆನೆಂದು
ತಿಳಿಯದೆ ಭಾಷೆ ಮಾಡಿದಳು ॥೨೬೩॥

ಮುಪ್ಪಿನ ಕಂಪಿಲರಾಯನು ತರವಲ್ಲ
ಒಪ್ಪುವ ಎಳೆಯ ಜವ್ವನಕೆ।
ಅಪ್ಪಿಕೊಳ್ಳುತ ಸುಖವನು [ಪಡೆ]ವೆನು ಕಂ
ದರ್ಪ ರಾಮನೊಳಗೆಂದು ॥೨೬೪॥

ಚಿಕ್ಕಂದು ರಾಮಗಿಕ್ಕಿದೆ ಸೇಸೆಯ ನಾನು
ತರ್ಕೈಸಿ ಮುಂಡಾಡಿದೆನು।
ಕಿಕ್ಕಿರಿದಿಹ ಜವ್ವನಕೊಡು [ಘು]ರಿಲೆಂದು
ಇಕ್ಕಿದೆ ಗಲ್ಲದಿ ಉಗುರ ॥೨೬೫॥

ಪ್ರಾಯವುಳ್ಳವಳು ಮುಪ್ಪಿನ ಗಂಡನೊಳು
ಭೋಗದಾಯದಿ ಕೂಡುಕಿಂತ।
ಸಾಯಬಹುದು ನನಗಿದು ಭಾಳ ಕರಕಷ್ಟ
ರಾಯ ರಾಮುಗನ ತೋರೆನಗೆ ॥೨೬೬॥

ಅಂದು ರಾಮುಗನ ನಾ ಕಂಡಂದು ಮೊದಲಾಗಿ
ಕಂದಿ ಕುಂದಿಯು ಬಡವಾದೆ।
ಇಂದು ಅವನ ತಂದು ತೋರದಿರ್ದರೆ ನಾಗಿ
ನಿಂದು ಪ್ರಾಣವ [ಹಾಳುಗೊಂ]ಬೆ ||೨೬೭||

ಇನ್ನು ನೀನಂಜಬೇಡವೆ ಕೇಳು ರತ್ನಮ್ಮ
ಹೊನ್ನು ಬಂಗಾರವ ಕೊಟ್ಟು।
ಭಿನ್ನವಿಲ್ಲದಲಂದು ಜನವಶ್ಯವ ತಂದು
ಚೆನ್ನರಾಮುಗನ ಮಚ್ಚಿಸುವೆ ||೨೬೮||

ಎಲ್ಲಿಗಾದರೆ ಹೋಗಿ ತಹೆನೊಂದು ತಿಲಕವ
ಒಲ್ಲದನೊಲಿಸುವ ಮದ್ದ।
ಬಲ್ಲಿದ ರಾಮನ ನಿನ್ನೊಶಮಾಡಿನ್ನು
ಎಲ್ಲ ಹೆಂಡಿರಿಗೆ ತೋರಿಸುವೆ ||೨೬೯||

ಯಾತಕಂಜುವೆ ಬಾಲೆ ಮಾತು ಹೊದ್ದದರಾರು
ಭೂತಳದೊಳು ಯತಿಗಳಿಗೆ।
ಸೋತು ಮನವ ನಿಶ್ಚಯಿಸಿಕೊಂಬುದು ನಿನ್ನ
ಗತಿಗೆ ಸಿಕ್ಕುವನ್ನಕ[ವು] ||೨೭೦||

ದನದಲಿ ಮಾತನಾಡುವ ಯಿಗಾದಿ
ಬೆರಸುವ ಭಾಗ್ಯವೆಂಬುದನು ।
ತರಹರಿ[ಸ]ಲಾರೆ ತನು ತಾಪಾಗ್ನಿಯ
ಸರಿಸಿಜಮುಖಿ ಎನ್ನನುಳುಹೆ ||೨೭೧||

ಕಾಲನು ಕಟ್ಟಿಕೊಂಡತ್ತಳು ನಾಗಾಯಿ
ಪಾಲಿಸಿ ಪ್ರಾಣವನುಳು[ಹು] ।
ಬಾಲೆ ನಿನ್ನ ಬಸುರಲಿ ಬಂದೆ ನಾಗಮ್ಮ
ಹೇಳಬಾರದೆ ಒಂದು ಮಾತ ||೨೭೨||

ನಿಲ್ಲು ಸೈರಿಸು ಮತ್ತೆ ಯಾತಕೆ ಅಳಲುವೆ
ಬಲ್ಲೆ ನಾನಿದಕೊಂದು ಪರಿಯ।
ಚೆಲ್ವ ರಾಮನ ತಂದು ನಿನಗೊಪ್ಪಿಸುವೆನೆಂದು
ಬುಲ್ಲೈ[ಸಿ]ದಳು ನಾಗಾಯಿ ||೨೭೩||

ಎಂದ ಮಾತನು ಕೇಳುತಲಿ ರತ್ನದೇವಿಯು
ನೊಂದು ಆಡಿದಳೊಂದು ಮಾತ।

ಇಂದು ನಿನ್ನಯ ಬಸುರಲಿ ಬಂದೆನಮ್ಮ
ಕಂದ ನಿನಗೆ [ಪ್ರತಿ]ಯಲ್ಲ ||೨೭೪||

ಭೂತಳದೊಳಗಿಲ್ಲ ಈ ಪರಿ ಚೆಂಡಾಟ
ಸೋತಳು ತನ್ನ ಮನವನು|
ಜಾತಿ ವೀರನ ಕೂಡಿ ಗತಿವಡೆವೆನೆಂದು
ಪಾತಕಿ ಆಗಲಾಡಿದಳು ||೨೭೫||

ಭೋರೆಂದು ಕೂಚ ಮಾಡಿತು ಸರ್ವವಾದ್ಯವು
ತೋರಿತು ಕಾಲಾಳ ಬೊಬ್ಬೆ|
ಧೀರ ರಾಮಯ್ಯನ ಲೆಗ್ಗಿಯ ನೋಡ[ಲು]
ಸಾರಿದರಾ ರಾಮನೆಡೆಗೆ ||೨೭೬||

ಭೇರಿ ಹೆಗ್ಗಾಳೆ ಕುಡುಮು ಡೊಳ್ಳು ಬುರುಗುಗಳ
ಭೋರೆಂದು ನಾದ ಮಾಡಿದರು|
ವೀರ ರಾಮನ ಚೆಂಡನಾಡುವ ಪರಿಯನು
[ಚಾರಣೆಯವರು] ಲಾಲಿಪುದು ||೨೭೭||

ಕೊಂಡು ಜಾಗಟೆಯು ಡಿಂಡಿಮ ಕಾಳೆ
ಚೆನ್ನ ನೂಪುರಿ ಪಿನಾಕಿ|
ಜಾಬಿಡಿ ನಿಸ್ಸಾಳವು ತಂಬಟೆ ಭೇರಿ
ಇಂಬಿಲಿ ಹೊಡೆದಾಡಿದರು ||೨೭೮||

ಸೃಷ್ಟಿಯರಿಯೆ ಕಾಟಣ್ಣ ಮುತ್ತಿನ ಚೆಂಡು
ನೆಟ್ಟನೆ ಹಿಡಿದುದ ಕಂಡು|
ಪಟ್ಟದಾನೆಯೆ ಕಾಟಣ್ಣ ಚೆಂಡನು [ತೂರೊ]
ಇಟ್ಟು ನೋಡುವೆನೊಂದು ಬಾರಿ ||೨೭೯||

ಬೇಡ ಚೆಂಡಾಡು ಉಪಾಯವ ನೀನರಿಯೆ
ನೋಡು ನಾನಾಡುವ ಪರಿಯ|
ರೂಢಿಗಧಿಕ ಕಾಟ ಬೊಬ್ಬಿರಿಯುತ ಬಂದು
ಈಡಾಡಿ ಇಟ್ಟ ಲೆಗ್ಗೆಯನು ||೨೮೦||

ಗಮ್ಮನೆ ಪುಟಿದು ಲೆಗ್ಗೆಯು ನುಗ್ಗೆದ್ದು
ಉರುಳಿತು ಚೆಂಡು ಭೋರ್ಮೊರೆದು |
ಹಿರಿಯಣ್ಣನ ಚೆಂಡು ತಡೆಯಬಾರದುಯೆಂದು
ಕರವ ಮುಗಿದು ದಾರಿ ಕೊಟ್ಟ ||೨೮೧||

ಹಲ್ಲೆಯ ಮಾಡಿ..............ಸಂದಿಕ್ಕಿ
ಎಲ್ಲ ಮನ್ನೇರು ನಿಮಿಷದಲಿ ।
ನಿಲ್ಲದೆ ಕಾಳೆ ಊದಿಯು ಲೆಗ್ಗೆ ಮಾಡಿತು
ಬಲ್ಲಿದ ರಾಮನ ಮಂದಿ ||೨೮೨||

ನೆಗೆದ ಚಂದನು ಕಂಡು ಜಗಲೂರ ರಾಮನು
ಬಿಗಿದು ಚೆಂಡನು ಕೈಲಿ ಹಿಡಿದ ।
ನೆಗೆದ ಚೆಂಡನ್ನಿಡಲಬ್ಬರಿಸಿತು ಚೆಂಡು
ಮಿಗೆ ಚೆಲ್ಲವಿಟ್ಟ ಲೆಗ್ಗೆಯನು ||೨೮೩||

ಗುಡುಗುಡಿಸುತ ಚೆಂಡು ಕಿಡಿಯುಗುಳುತಲಿರೆ
ಕಡೆಗೆ ಓಡಿತು ಪರಿವಾರ।
ಹೊಡೆವ ತಂಬಟ ಭೇರಿ ಒದರುವ ಕಾಳೆ ದನಿ
ಕಡು ಬೇಗ ಲೆಗ್ಗೆ ಮಾಡಿದರು ||೨೮೪||

ಬರಸಿಡಿಲಂತೆ ಮೊರೆವ ಚೆಂಡನು ಬೇಗ
ನೆರೆಗಲಿ [ಬೇವಿನ] ಸಿಂಗ ।
ಭರದಿಂದ ಬಂದು ಲೆಗ್ಗೆಯ ನೋಡಿ ಇಟ್ಟರೆ
ಮುರಿಯಿತು ರಾಮನ ಮಂದಿ ||೨೮೫||

ಹತ್ತುಸಾವಿರ ಮನ್ನೆರು ಬಂದು ಬೇಗದಿ
ಹಿಡಿದರು ರಾಮನ ಕಾಳೆ।
ತಡೆಯದೆ ನೂರು ಕಂಚಿನ ಡೊಳ್ಳು ಬೇಗದಿ
ಕಡುಗಲಿಗಳು ಲೆಗ್ಗೆ ಇಡಲು ||೨೮೬||

ಕೆಡದಿರೊ ಕಾಟನ ಮಂದಿಯೆನುತ ಮತ್ತೆ
ಬೊಬ್ಬಿರಿದು ಬಗ್ಗಿದರು।
ಇತ್ತರದಲಿ ಹೊಡೆದವು ಸರ್ವ ವಾದ್ಯವು
ಮತ್ತೆ ಹಿಡಿದ ನಲ್ಲನಾಗ ||೨೮೭||

ಅಬ್ಬರಿಸುತ ಚೆಂಡು ಬೊಬ್ಬಿರಿಯುತಲಿದೆ
ಇಬ್ಭಾಗವಾಗಿ ಮನ್ನೆಯರು।
ನಿಬ್ಬರದಲ್ಲಿ ಕಾಟಣ್ಣ ಮುರಿದು ಓಡೆ
ಕಬ್ಬಿಲ ನಾಗ ಚಂಡ ಹಿಡಿದ ||೨೮೮||

ಒದಗಿಲಿ ಮುರಿದೋಡಿತು ಪರಿವಾರವು
ಮುರಿದು ಬೊಬ್ಬಿರಿದು ಭೋರೆನುತ ।

ಸದೆದವ್ಯೆನೂರು ತಂಬಟೆ ಜಗ್ಗಿನ ಹರೆ
ಚದುರ ವಿಕ್ರಮ ಚಂಡನಿಡಲು ॥೨೮೯॥

ಗದುಗಪ್ಪುಗೊಂಡು ರಾಮನ ಮಂದಿ ಮುರಿಯಿತು
ಬೆದರಿ ನಾಲ್ಕು ದಿಕ್ಕಿಗಾಗಿ ।
ಮದದಾನೆ ಮಾರಿ ಮುಖದ ಬಾದುರಖಾನ
ಕದುಬಿ ಕೋಪದಿ ಚಂಡ ಹಿಡಿದ ॥೨೯೦॥

ಗಮ್ಮನೆ ನಾನೂರು ಕೊಂಬು ದಿಮ್ಮೆಂದವು
ರುಮ್ಮನೆ ಭೇರಿ ಹೊಡೆದವು ।
ಗಮ್ಮನೆ ಸರಬತ್ತಿ ಬಾಣದ ಭರಕೋವಿ
ಬ್ರಹ್ಮಮಂಡಲವು ತಲ್ಲಣಿಸೆ ॥೨೯೧॥

ದಿಟ್ಟ ಬಾದೂರನು ಚೆಂಡ ಹಿಡಿದುದ ಕಂಡು
ಬಿಟ್ಟೋಡಿತು ಪರಿವಾರ ।
ಕೆಟ್ಟೆ[ನೆ]ನುತ ಸೂರ್ಯ ತಲ್ಲಣಿಸಿದ
ಬೆಟ್ಟವಂಜೊದರೋಡಿದವು ॥೨೯೨॥

ಡಿಂಡಿಮ ಡಿಮಕೆಂದು ವಾದ್ಯಗಳ್ಳೊಳಗೆ
ಡಂಡಮ ಡಮಕೆಂದು ಉಲಿಯೆ ।
ಕಂಡು ಬಾದುರಖಾನ ಲೆಗ್ಗೆಯನಿಡಲು ಭೂ
ಮಂಡಲ ಒದರಿತಾಕ್ಷಣದಿ ॥೨೯೩॥

ಗುದ್ದು ಗುದ್ದನೆ ಹೊಕ್ಕುಕೊಂಡು ರಾಮನ ಮಂದಿ
ಬಿದ್ದರು ತಲೆ ಕೆಳಗಾಗಿ ।
ಎದ್ದು ನೋಡಲು ಬಿದ್ದಿತು ಮನ್ನೆಮನ್ನೆಯರು
ಸದ್ದು ಮಾಡು[ತ] ಚೆಂಡು ಬರಲು ॥೨೯೪॥ .../೧೬-೧೪೧

ಆ ಸಮಯದಿ ದೇವಿಶೆಟ್ಟಿಯ ಲಿಂಗನು
ಕೇಸರಿ ಕೆರಳಿದಂದದಲಿ ।
ಸಾಸಿರ ತುಡುಮು ಹೊಡೆದವು ಲೆಗ್ಗೆ ಮಾಡುತ
ಕೋಪದಿ ಚೆಂಡು ಹಿಡಿದನು ॥೨೯೫ ॥ .../೧೬-೧೪೨

ಕಡು ತವಕದಿ ಬಂದು ದೇವಿಶೆಟ್ಟಿಯ ಲಿಂಗ
ಹಿಡಿದನು ಮುತ್ತಿನ ಚೆಂಡ ।
ತಡೆಯದೆ ಲೆಗ್ಗೆಯ ನೋಡಿ ಇಡಲು
ಕೆಡಹಿತ್ಯೆವರ ಮನ್ನೆಯರನು ॥೨೯೬॥ .../೧೬-೧೪೩

ಮನ್ನೂಲ ಮಾಚ[ಯ್ಯ]ನ ಮೂಗು ಬಿಚ್ಚಿತು
ಚೆನ್ನ ಕಂಪನ ಕಾಲ ಒಡೆದು ।
ಚಿನ್ನದ ಕಾಸೆಯ ವಿರುಪನ ಒಡಲು
ಕೆನ್ನೆ ಹರಿಯಿತು ಆ ಕ್ಷಣದಿ ॥೯೭॥ .../೧೬-೧೪೪

ಇತ್ತ ಮನ್ನೆಯರು ನೊಂದುದ ಕಂಡು ರಾಮಯ್ಯ
ಮತ್ತೆ ಕೋಪವನು ತಾಳಿದನು ।
ತೆತ್ತಿಸಿದವು ರೋಮ ಸರಳು ತೆತ್ತಿಸಿದಂತೆ
ಮತ್ತೆ ರಾಮನ ಮೈಗಳಲಿ ॥೯೮॥ .../೧೬-೧೪೫

ಭರದಿಂದ ಬಂದನು ಧುರಧೀರ ರಾಮಯ್ಯ
ಬರುವ ಮುತ್ತಿನ ಚೆಂಡಿಗಾಗಿ
ಭರದಿಂದ ಕೋಪದಿ ಚಂಡು ಹಿಡಿವುದ ಕಂಡು
ಹಿರಿದು ಭೂತಗಳತ್ತವಾಗ ॥೯೯॥ .../೧೬-೧೪೬

ಇತ್ತ ರಾಮನು ಲೆಗ್ಗೆಯ ನೋಡಿ ಇಡದ ಮುನ್ನ
ಓಡಿತು ನಾಲ್ಕು ದಿಕ್ಕಿನಲಿ ।
ನೀಡಿರೊ ಚೆಂಡ ಬೇಗದಿಯೆನುತ ಹೇಳೆ
ಹೂಡಲಮ್ಮದೆ ಹೊರಹೊರಗೆ ॥೧೦೦॥

ಇತ್ತ ರಾಮನ ಲಗ್ಗೆಯ ಸಂಭ್ರಮವನು
ವಿಸ್ತರಿಸುವಡಳವಲ್ಲ ।
ಮೃತ್ಯು ಬಂದಿತು ರಾಮಯ್ಯನ ಕೊರಳಿಗೆ
ಸತ್ಯ ಜನರು ಲಾಲಿಪುದು ॥೧೦೧॥ .../೧೬-೧೪೭

ಧುರಧೀರ ಕಾಟಣ್ಣ ದೇವಿಶೆಟ್ಟಿಯ ಲಿಂಗ
ಸರಿಯು ಆದರು ಇದಿರಾಗಿ ।
ಉರವಣೆಸಿಯೆ ಬಂದು ದಿಕ್ಕುದಿಕ್ಕಲಿ ಹೊಕ್ಕು ।
ಕರ ಬೇಗ ಲೆಗ್ಗೆ ಹೂಡಿದರು ॥೧೦೨॥

ಲಗ್ಗೆಯನು ಹೂಡಿ ಬಂದನು ಕಾಟಣ್ಣ
ನುಗ್ಗು ಮಾಡಿದನು ರಾಮಯ್ಯ ।
ಲೆಗ್ಗೆಯ ಬಿಟ್ಟು ಓಡಿದ ಲಿಂಗ ಕಾಟಣ್ಣ
ನುಗ್ಗಾಗಿ ನಾಲ್ಕು ದಿಕ್ಕಿನಲಿ ॥೧೦೩॥

ಭರದಿಂದ ಬಂದನು ಧುರಧೀರ ರಾಮಯ್ಯ
ಬರುವ ಮುತ್ತಿನ ಚೆಂಡಿಗಾಗಿ ।

ಮೊರೆವ ಚೆಂಡನು ಹಿಡಕೊಂಡನು ಕಾಟಣ್ಣ
ಭರದಲಿಟ್ಟನು ಲೆಗ್ಗೆಯನು ||೩೦೪||

ಚೆಲ್ಲನೆ [ಚೆ]ದರಿತು ರಾಯ ರಾವುತರೆಲ್ಲ
ನಿಲ್ಲದೆ ದೆಸೆದೆಸೆಗೆ ಓಡಿ ।
ಬಲ್ಲಿದ ಕಾಟಣ್ಣನಿಟ್ಟ ಮುತ್ತಿನ ಚೆಂಡು
ಚೆಲ್ಲೆಗಂಗಳ ರಾಮ ಹಿಡಿದ ||೩೦೫||

ಹಿಡಿ ಬೇಗ ಲೆಗ್ಗೆಯ ಕೆಡಹುವೆ ಕಾಲಾಳ
ಹೊಡೆವೆ ಕಾಟಣ್ಣನ ಎದೆಯ ।
[ಬಿ]ಡನು ಬಲ್ಲಂತೆ ಭೋರ್ಮೊರೆವನು ರಾಮಯ್ಯ
ಬಿಡು ಬೇಗ ಕೈಯಿಂದಲೆನ್ನ ||೩೦೬||

ಮುಂದರಿಯದೆ ಕಾಟಣ್ಣನು ತಾ ಬಂದು
ಒಂದು ಕೈಯಿಂದಲಿ ತನ್ನ ।
ಹಿಡಿವಾಗಲು ನಾನು ಚಂದದಿಂದಲಿ ಬಂದು
ಹಿಂದೆ ಹತ್ತುವೆ ಭೂತವಾಗಿ ||೩೦೭||

ಅಕ್ಕಸಾಲೆಯ ಚೆನ್ನ [ಏರಮಲೆ] ಕಾಟನು
ಬೊಕ್ಕನು ಬಾಳೆ ನಾಯಿಕನು ।
ಒಕ್ಕಲಿಗರ ಮುದ್ದ ಐವರು ಮರನೇ[ರೆ]
ಸೊಕ್ಕ ಮುರಿದಲ್ಲದೆ ಬಿಡೆನು ||೩೦೮||

[ಎಂದು] ಚೆಂಡು ಬಿನ್ನಹವ ಮಾಡಲು ರಾಮ
ಮಂದಿಯ ನೋಯಿಸಬೇಡ ।
ಹಿಂದ ಮುಂದಣ ಪವುಜೊಂದ ಮಾಡುವೆ
ಚೆಂದಗೆಡಿಸುವೆ ಮನ್ನೆಯರ ||೩೦೯|| .../೧೬-೧೫೨

ನೆಗೆವೆ ಆಕಾಶವ ಬಗೆವೆನು ಭೂಮಿಯ
ಹೊಗುವೆ ಕಾಟಣ್ಣನ ಎದೆಯ ।
ಉಗಿದು ಬೀಳುವೆನು ಮನ್ನೆಯರ ಕೈಯಿಂದಲಿ
ಖಗರಾಜಪತಿಯೆ ನಿನ್ನಾಣೆ ||೩೧೦|| .../೧೬-೧೫೩

ಮುತ್ತಿನ ಚೆಂಡನಿಡಲು ರಾಮಯ್ಯನು
ಅತ್ತ ವಾಯುವು ಒಯ್ವ ಪರಿಯ ।
ಚಿತ್ತ ಒಲಿದು ಕೇಳುವುದು ಕೋವಿದರೆಲ್ಲ
ಪೃಥ್ವಿಯೊಳಗೆ ಹೊಸಪರಿಯ ||೩೧೧|| .../೧೬-೧೫೪

ಕೇಳಿರೊ ಸುಗುಣ ಸುಜಾಣ ಕೋವಿದರೆಲ್ಲ
ಕೇಳಿರೊ ಕೌತುಕದ ಬಗೆಯ ।
ಕೇಳಿರೊ ಚೆಂಡು ರತ್ನಿಗೆ ಸಿಕ್ಕಿದಂದವ
ಕೇಳಿ ವಾಯು ಒಯ್ದ ಪರಿಯ ||೩೧೨|| .../೧೬-೧೫೫

ಭೋರು ಭುಗಿಲು ಭುಗಿಲುಯೆಂದು ಬೇಗದಿ
ಭೂರಿ ಹೆಬ್ಬೆಟ್ಟದಿಂದಿಳಿದು ।
ಸೇರಿದನಾಗಳೆ ರಾಮನ ಚೆಂಡಿಗೆ
ಘೋರ ಹೆಗ್ಗಾಳಿಯಂದದಲಿ ||೩೧೩|| .../೧೬-೧೫೬

ಮುಂಗಡೆಯಲಿ ಸರ್ವ ವಾದ್ಯ ಮೊಳಗಿದವು
ಬಂದನು ರಾಮ ಬೊಬ್ಬಿರಿದು ।
ಚೆಂದದಿಂದಲಿ ರಾಮ ಲೆಗ್ಗೆಯನಿಟ್ಟರೆ
ಕೆಂಧೂಳಿ ಕವಿಯಿತಾಕ್ಷಣಕೆ ||೩೧೪|| .../೧೬-೧೫೭

ಸಿಡಿಲು ಸರ್ಪಗೆ ಸಾರ್ಚಿದಂತೆ ಪರ್ವತ[ವಿಳಿದು]
ಹಿಡಿದೊಯಿದನು ವಾಯುದೇವ ।
ತಡೆಯದೆ ರತ್ನಿಯಂಗಳದಲ್ಲಿ ಬೀಳಲು
ಕೆಡಹಿದ ಮುತ್ತಿನ ಚೆಂಡ ||೩೧೫|| .../೧೬-೧೫೮

ದಿಟ್ಟ ರಾಮನ ಕೈಯ ಸೆಳಕೊಂಡು ರತ್ನಿಯ
ಪಟ್ಟಸಾಲೆಯ ಮುಂದೆ ಹಾಕೆ ।
ಉಟ್ಟ ಉಡಿಗೆ ಕಳೆಯಲರಿಯದೆ ರತ್ನದೇವಿ
ದಿಟ್ಟೆ ಚಂಡಿನ ಮೇಲೆ ಬೀಳೆ ||೩೧೬|| .../೧೬-೧೫೯

ಗಳಿಲನೆ ಅರಮನೆ ಒಳಯಿಕೆ ತೆಕ್ಕೊಂಡು
ಹೊಳೆವ ಕಂಗಳಿಗೊತ್ತಿಕೊಂಡು ।
ತರಿಸಿ ಪನ್ನೀರ ಉದಕವ ಚಳೆಯ ಕೊಟ್ಟು
ವರವಿತ್ತ ಶಿವ ಚಂಡೆನಗೆ ||೩೧೭|| .../೧೬-೧೬೦

ಧುರಗಲಿ ರಾಮನ ಸಮವೆಂದು ಚೆಂಡನು
ಉರದಲ್ಲಿ ತೆಗೆದು ಅಪ್ಪಿದಳು ।
ಭರವಸದಲಿ ರತ್ನಾಯಿ ಚೆಂಡಿನ ಮೇಲೆ
ತಾರ ತವಕದಿ ಬಿದ್ದು ಹೊರಳೆ ||೩೧೮|| .../೧೬-೧೬೧

ಮುದ್ದು ರಾಮನ ಸಮವೆಂದು ಮುತ್ತಿನ ಚೆಂಡು
ನಿರ್ಧಾರದಲಿ ತೆಗೆದಪ್ಪಿ ।

ಸದ್ಯ ಫಲದಿ ರಾಮ ಸಿಕ್ಕಿದನೆನುತಲಿ
ಬಿದ್ದಳು ಚೆಂಡಿನ ಮೇಲೆ ||೩೧೯|| .../೧೬-೧೬೩

ಮುತ್ತಿನ ಚೆಂಡ ಪಿಡಿದುಕೊಂಡು ರತ್ನಾಯಿ
ಮತ್ತೆ ರಾಮನ ಸಮವೆಂದು ।
ಒತ್ತಿ ನಖರೇಖೆಯನು ಚೆಂಡಿನ ಮೇಲೆ
ಚಿತ್ತಿನಿ ಜಾತಿಯ ಚದುರೆ ||೩೨೦|| .../೧೬-೧೬೪

ಕುಶಲ ರಾಮನ ಸಮವೆಂದು ಚಂಡಿನ ಮೇಲೆ
ಗಂಧಲರ್ಗಳನು ಹಾಕಿದಳು ।
ವಸುಧೆಯೊಳಗೆ ಎನ್ನ ಭಾಗ್ಯ ಬಂದಿತು ಎಂದು
ಕುಶಲೆ ತಾನುಬ್ಬಿ ಹೆಚ್ಚಿದಳು ||೩೨೧|| .../೧೬-೧೬೫

ಹೊಳೆವ ಕಂಗಳಿಗೊತ್ತಿಕೊಂಡು ಚಂಡನು ತನ್ನ
ಕಳಸ ಕುಚದೊಳವಚಿದಳು ।
ಕಲಿ ಮಾಡಿಯೆ ಚಂಡ ಚುಂಚನ ಮಾಡಿ ತ
ನ್ನೊಳದೊಡೆಯೊಳಗೆ ಅವುಚಿದಳು ||೩೨೨||

ಅಳಿ ಪದ್ಮವ ಸೋಂಕಿದಂತೆ ರತ್ನಿಯ ಮುಖ
ಕಳೆಯನೇರಿತು ಚಂಡು ಬರಲು ।
ಹೊಳೆವ ಕಂಗಳ ರಾಮಯ್ಯ ಬಂದನು ಎಂದು
ಗಳಿಲನೆ ನೆರೆ ಹೆಚ್ಚಿದಳು ||೩೨೩|| .../೧೬-೧೬೬

ಎದೆಯಿಂದಲೊತ್ತಿ ಬದಿಯಲೊತ್ತಿ ಚೆಂಡನು
ಮುದದಿ ಮುದ್ದಿಸಿದಳು ಚಂಡ ।
ಚದುರ ರಾಮನ ಸಮವೆನುತ ಮುತ್ತಿನ ಚೆಂಡ
ಮದನಗೃಹಕೆ ಹೊಂದಿಸಿದಳು ||೩೨೪|| ೯-೩೬೨/೧೬-೧೬೭

ಚೆನ್ನಿಗ ವಿಟ ಬೇಗ ತನ್ನ ಸಂಗಡಿಗನ
ತನ್ನೊಳು ಮುನಿದ ಮಾನಿನಿಯ ।
ಭಿನ್ನವಿಲ್ಲದೆ ಸಂತವಿಡು ಮುಂದೆ ನಡೆಯೆಂದು
ನಿನ್ನನಟ್ಟಿದ ರನ್ನ ಚೆಂಡೆ ||೩೨೫||

ಗಂಡುಗಲಿ ರಾಮನ ಸಮವೆಂದು ಆ ಚಂಡ
ಮಂಡೆಯ ಮೇಲಿಟ್ಟು ಕುಣಿಯೆ ।
ಇದು ದೈವದ ಹರಕೆಯ ಫಲವಿದು ಎಂದು
ಕೊಂಡಾಡಿದಳು ಹರುಷದಲಿ ||೩೨೬||

ಹರಸಿದ ಹರಕೆಯು ಕೈಗೂಡಿತೆನುತಲಿ
ಪುರುಷ ರತ್ನವು ಬಂದಿತೆನುತ ।
ತರಿಸಿ ಕಸ್ತುರಿ ಪುಣುಗ ಜವ್ವಾದಿಯ
ಸರಸಿಜಮುಖಿ ಲೇಪಿಸಿದಳು ||೩೨೭|| .../೧೬-೧೬೮

ಪಟ್ಟೆ ದೇವಾಂಗವು ವಸ್ತ್ರ ಈ ಚೆಂಡಿಗೆ
ಇಟ್ಟಳು ಕಸ್ತುರಿ ಬೊಟ್ಟ ।
ದಿಟ್ಟ ರಾಮನು ಇಂದು ಕೈಸೇರಿದನು ಎಂದು
ನೆಟ್ಟನೆ ಮನದಲ್ಲಿ ನಲಿದು ||೩೨೮|| .../೧೬-೧೬೯

ಚೆನ್ನಿಗನಾಗಿ ನೀ ಹೋಗೆಂದು ಮಣಿಹವ
ಕನ್ನೆವೆಣ್ಣುಗಳೊಡಗೂಡಿ ।
ಭಿನ್ನವಿಲ್ಲದೆ ಮುತ್ತಿನಾರತಿ [ತ]ರಲೆಂದು
ತನ್ನೊಳಿಗದವಳ ಅಟ್ಟಿದಳು ||೩೨೯||

ಅರಿದು ಬಂದಳು ಅರಮನೆಗೆ ಗಿಂಡಿಯ ನಾಗಿ
ಭರದಿ ತಾನೆಲ್ಲ ಶೃಂಗರಿಸಿ ।
ತರತರದಲ್ಲಿ ಮುತ್ತಿನಾರತಿ [ತ]ರಲೆಂದು
ತೆರಳಿ ಇಟ್ಟಳು ಮಂಚದೊಳಗೆ ||೩೩೦||

ಇತ್ತ ಚೆಂಡಾಟದ ಮನ್ನೆಯರೆಲ್ಲರು
ಮತ್ತೆ ಸ್ವೈವೆರಗಾಗಿ ನಿಲಲು ।
ಮೃತ್ಯು ಬಂದಿತು ನಮಗೆನುತ ಕಾಟಣ ರಾಮ
ನೊತ್ತಿಗೆ ಬಂದನಾಕ್ಷಣದಿ ||೩೩೧||

ಅಲ್ಲಿಗಲ್ಲಿಗೆ ನಿಂದಿತು ಮನ್ನೆ ಮನ್ನೇರು
ಎಲ್ಲರು ಹವ್ವನೆ ಹಾರಿ ।
ಎಲ್ಲರ ಜೀವಕೆ ಬಾಧೆ ಬಂದಿತು ಎಂದು
ತಲ್ಲಣಿಸಿದರು ತಮ್ಮೊಳಗೆ ||೩೩೨||

ಗುಂಪು ಗುಂಪಲಿ ನಿಂತ ಮನ್ನೆಯರು ತಾವು
ಸುಮ್ಮನೆ ಏಕಾಂತವಾಡಿ ।
ಕಂಪಿಲರಾಯ ಕೇಳಿದರೆ ಏನೆಂಬನು
ಕಾಟಣ್ಣ ಲಿಂಗ ಕಂಗೆಡುತ ||೩೩೩|| .../೧೭-೩

ಬೇಡವೆಂದರೆ ಕೇಳೆ ರಾಮ ಚೆಂಡಾಟವ
ಆಡಬಂದೆಯೊ ನಿಲ್ಲಗೊಡದೆ ।

ಬೇಡಿದರೇನು ಎಂಬಳು ತಾಯಿ ಚಿಕ್ಕಮ್ಮ
ರೂಢಿ ಅರಿಯೆ ಚೆಂಡ ಕೊಡಳು ||೩೩೪|| .../೧೭-೩

ಚೆಂಡನೇತಕೆ ಕೊಡಳೊ ತಾಯಿ ಚಿಕ್ಕಮ್ಮ
ಬಂಡಾಟದ ಮಾತು ಬೇಡ ।
ಕಂಡು ತಾಯಿಯ ಪಾದಕ್ಕೆ ಶರಣೆಂದು
[ಕೊಂಡು ನೀ ಬಾರೊ ಕಾಟಣ್ಣ] ||೩೩೫|| .../೧೭-೪

ನೀತಿಯಿಂದಲಿ ಹೋಗಿ ಚಿಕ್ಕಮ್ಮನಲ್ಲಿಗೆ
ಓತು ಅಮ್ಮನ ಪಾದಕೆರಗಿ ।
ಮಾತೆಯಿಂದಲಿ ಚೆಂಡನು ತಂದು [ನೀ ನಮ್ಮ]
ಭೀತಿಯನೆಲ್ಲ[ವ] ಬಿಡಿಸು ||೩೩೬|| .../೧೭-೫

ಒಂದು ಬಾರಿಗೆ ಹೋಗಿ ಬೇಡು [ನೀ ಚೆಂಡನು]
[ಕೊಂಡು ಬಾ ಕಾಟಣ್ಣ ನೀನು]
ಕಂದನು ನಿಮ್ಮ ಚೆನ್ನಿಗ ರಾಮನಿಟ್ಟರೆ
ಬಂದಿತು ಕೈತಪ್ಪಿಯೆನುತ ||೩೩೭|| .../೧೭-೬

[ಮತ್ತೆ] ರಾಮಯ್ಯ[ನ] ನುಡಿಗೇಳಿ ಕಾಟಣ್ಣ
ಮುತ್ತಿನಾಭರಣವ ತೆಗೆದು ।
ಸುತ್ತಿದ ತಲೆಯ ಚಿಮ್ಮುರಿಯನಳಿದು ಸುತ್ತಿ
ಮತ್ತೆ ಚೆಂಡಿಗೆ ನಡೆಗೊಂಡ ||೩೩೮||

ಕಡು ತವಕದಿ ಕಾಟಣ್ಣ ಚೆಂಡಿಗೆ ಬರೆ
ತಡೆದರು ಹೊರ ಬಾಗಿಲವರು ।
ಹಿಡಿದು ನೂಕುತ ಒಳಹೊಕ್ಕು ಬೇಗದಿ ಬಂದ
ತಡೆಯದೆ ತಾಯ[ರಮನೆಗೆ] ||೩೩೯||

ಅಲ್ಲಿಂದ ನಿಲ್ಲದೆ ಬಂದ ಕಾಟಣ್ಣನು
ಮೆಲ್ಲನೆ ತಾಯ ಬೇಡಿದನು ।
ಬಲ್ಲಿದ ರಾಯರಾ[ಟ] ಕೆಟ್ಟಿತೆಂದು
ನಿಲ್ಲದೆ ಚೆಂಡ ಬೇಡಿದನು ||೩೪೦||

ಚೆಂಡ ಬೇಡುವ ಇವನಾರೆಲೆ ನಾಗಾಯಿ
ಗಂಡರಿಲ್ಲದ ಅರಮನೆಗೆ ।
ಚಂಡ ವಿಕ್ರಮ ನಿಮ್ಮ ಹಿರಿಯ ಮಗನು ಕಾಟ
ಚೆಂಡ ಬೇಡಿದನು ಕಾಣಮ್ಮ ||೩೪೧|| .../೧೭-೧೦

ಎದ್ದು ಬಂದಳು ಬೇಗ ಕಂಡಳು ಕಾಟನ
ನಿರ್ಧಾರದಲಿ ಕೈಯ ಮುಗಿದ ।
ಮುದ್ದಿನ ನಿಮ್ಮ ರಾಮನಿಟ್ಟರೆ ಚಂಡು
ಬಿದ್ದಿತು ಕೈತಪ್ಪಿಯೆಂದ ||೩೪೨||

ಚೆಲ್ಲೆಗಂಗಳ ರಾಮನಿಟ್ಟ ಮುತ್ತಿನ ಚೆಂಡು
ಅಂಗಳದೊಳು ಬರಲಿಲ್ಲ ।
ಶೃಂಗಾರ ತೋಟದೊಳಗೆ ನೋಡು ಎನುತಲಿ
ಅಂಗನೆ ನಡೆದಳರ್ತಿಯಲಿ ||೩೪೩|| ೯-೩೯/೧೭-೧೫

ಕಾಟಣ್ಣನು ನಾಗಿ ರತ್ನಿ ಸಹಿತ ಬಂದು
ತೋಟಕೈದಿದ[ರು] ಶೃಂಗರದ ।
ಪಾಟಿಸಿ ಬೆಳೆದ ಪುಷ್ಪದ ಗಿಡದಡಿಯಲಿ
ನಾಟಕಿ ಚೆಂಡ ನೋಡಿದಳು ||೩೪೪|| .../೧೭-೧೬

ಬಲ್ಲಿದ ರಾಮಯ್ಯನಿಟ್ಟ ಮುತ್ತಿನ ಚೆಂಡು
ಮಲ್ಲಿಗೆ ಗಿಡಗಳಡಿಯಲಿ ।
ಅಲ್ಲಿ ಅರಸಿ ಕಾಣದೆ ರತ್ನದೇವಿ
ಎಲ್ಲಿ ಹೋಯಿತು ಮಗನೆ ಚೆಂಡು ||೩೪೫|| .../೧೭-೧೭

ಒಚ್ಚೆರೆ ಗಂಗ[ಳ] ರಾಮನಿಟ್ಟ ಚೆಂಡು
ಪಚ್ಚೆಯ ಗಿಡನಡಿಯಲಿ ।
ಚುಚ್ಚುಗೊಳಿಸಿ ಕಾಟನು ಕೈಯಲರಸಿದ
ಅಚ್ಚರಿ ಇದು ಹೊಸತಾಯಿತು ||೩೪೬|| .../೧೭-೧೮

ಕಂಪಿಲರಾಯನ ಮಗನಿಟ್ಟ ಚಂಡನು
ಸಂಪಿಗೆ ಗಿಡಗಳಡಿಯಲಿ ।
ಕಂಪಿತ ಉಳ್ಳ ಚೆಂಗಣಗಿಲ ಗಿಡದಲ್ಲಿ
ಇಂಪಾಗಿ ಅರಸಿ ನೋಡಿದಳು ||೩೪೭|| .../೧೭-೧೮

ಕೋವಿದ ರಾಮಯ್ಯನಿಟ್ಟ ಮುತ್ತಿನ ಚೆಂಡು
ಬಾವಿಯ ಕಡೆಯಲ್ಲಿ ನೋಡಿ ।
ಆವ ಕಡೆಗೆ ಚೆಂಡು ಹೋಯಿತು ಕಾಟಣ್ಣ
ಆವರು ಕಂಡು ಮಾಜಿದರು ||೩೪೮|| .../೧೭-೧೯

ಗಂಭೀರ ರಾಮಯ್ಯನಿಟ್ಟ ಮುತ್ತಿನ ಚೆಂಡು
ನಿಂಬಿ ಕಂಚಿನ ಮರದಡಿಯ ।

ಬೆಂಬಳಿಯಲಿ ಕಾಟಣ್ಣ ನಾಗಿ ಸಹ
ತುಂಬಿದ [ಬನವ] ನೋಡಿದಳು ||೩೪೯|| .../೧೭-೨೦

ನಾನಾ ಪುಷ್ಪದ ಜಾತಿಯ ಗಿಡುವಿನಲಿ
ಅರಸಿ ಚೆಂಡನು ಕಾಣದಲಿ ।
ಸಂತೋಷವಳಿದನು ಕಾಟನು ಮನಸಿಗೆ
ಚಿಂತೆ ಹೊಕ್ಕಿತು ನಿಮಿಷದಲಿ ||೩೫೦||

ಧುರಗಲಿ ರಾಮಯನಿಟ್ಟ ಮುತ್ತಿನ ಚೆಂಡ
ಮರುಗದ ಮಡಿಯಲ್ಲಿ ನೋಡಿ ।
ಭರದಿಂದ ಅರಸಿ ಕಾಣದೆ ಬೇಗ ರತ್ನಿಯು
ತಿರುಗಿದಳರಮನೆಗಾಗಿ ||೩೫೧|| .../೧೭-೨೧

ಬಂದ ಕಾಟಣ್ಣಗೆ ಗಂಧವೀಳ್ಯವ ಕೊಟ್ಟು
ಚೆಂದ ಚೆಂದದಲಿ ಉಡುಗೊರೆಯ ।
ಕಂದನ ನೋಡಲಿ ಬೇಕು ನೀ ಬರ ಹೇಳೊ
ಎಂದು ನುಡಿದಳವನೊಡನೆ ||೩೫೨|| .../೧೭-೨೨

ಚೆಂಡಿನ ನೆವದಲಾದರೆ ಎನ್ನ ಮಗನನು
ಕಂಡು ಸಂತೋಷವಹುದೆನಗೆ ।
ಕೊಂಡೊಯ್ಯಲಿ ತನ್ನ ಮಗ ಬಂದು ಚೆಂಡನು
ಗಂಡು ರಾಮನ ಬರ ಹೇಳೋ ||೩೫೩|| .../೧೭-೨೪

ಇಮ್ಮಡಿ ರಾಮಯ್ಯನ ಸಮನಲ್ಲವೆ
ನಿಮ್ಮ ಹಿರಿಯ ಮಗ ಕಾಟ ।
ತಮ್ಮ ರಾಮನು ಬರಲರಿಯ ಮುತ್ತಿನ ಚೆಂಡ
ಗಮ್ಮನೆ ತಾರೆಂದನಾಗ ||೩೫೪|| ೯-೪೦೨/೧೭-೨೩

ಮಗ ಬಂದಲ್ಲದೆ ಕೊಡೆ ಹೋಗು ಮುತ್ತಿನ ಚೆಂಡ
ನಗೆಮುಖದವನೆ ಕಾಟಣ್ಣ ।
ಜಗದೊಳು ತಾ[ಯಿ] ಮಕ್ಕಳಿಗೆ ನಾಚಿಕೆಯುಂಟೆ
ಹಗೆಯೆ ರಾಮಗೆ ಎನ್ನ ಮನೆಯು ||೩೫೫|| .../೧೭-೨೬

ತಲೆಯು ಇದ್ದಂತೆ ಮುಂಡಕೆ ಶೇಷೆಯನೀಗ
ಒಲಿದು ಇಡುವರೆ ಚಿಕ್ಕಮ್ಮ ।
ಚೆಲುವ ರಾಮನು ಬರಲರಿಯ ಮುತ್ತಿನ ಚೆಂಡ
ಲಲನೆ ನೀ ಬೇಗ ತಾರಮ್ಮ ||೩೫೬|| .../೧೭-೨೭

ಎನ್ನ ಮೋಹದ ಮಗ ಬಂದಲ್ಲದೆ ಚೆಂಡ
ನಿನ್ನಾಣೆ ಕೊಡೆನೊ ಕಾಟಣ್ಣ ।
ರನ್ನ ತೂಗು ಮಂಚದಿ ಪೂಜೆ ಮಾಡಿದೆ
ತನ್ನನೊಯ್ಯುರೆ ಬರ ಹೇಳು ||೩೫೭|| .../೧೭-೨೮

ಎಂದ ಮಾತನು ಕೇಳಿ ಬಂದನು ನಿಮಿಷದಿ
ನಿಂದು ರಾಮಗೆ ಹೇಳಿದನು ।
ಕುಂದುಬಹುದು ಚೆಂಡಿನಾಟದಿಂದಲಿಯೆಂದು
ನಿಂದು ರಾಮಗೆ ಹೇಳಿದನು ||೩೫೮||

ನಮ್ಮ ಚೆಂಡಿನಾಟವು ಉರಿಯಿತು ರಾಮಯ್ಯ
ತಮ್ಮ ನಿನಗೆ ಮಾರಿ ಬಂತು ।
ಧರ್ಮದಿಂದಲಿ ಚೆಂಡ ನಾನು ಬೇಡಿದೆ ಕಾಣು
ವರ್ಮದಿಂದಲಿ ಕೊಡಳೆಂದ ||೩೫೯||

ತಡೆಯದೆ ನೀ ಚಂಡ ತರುವಾಗ ರಾಮಯ್ಯ
ಉಡಿಕೆಯಾಯಿತು ಮುಖ ಹೊಯಿದು ।
ಕಡುಗಲಿ ಹಿಂದಕ್ಕೆ ತಿರುಗೆಂದು ಹೇಳಿದೆ
ಬಿಡಲಿಲ್ಲ ನೀನಡ್ಡ ಬಂದೆ ||೩೬೦||

ಒಂಟಿ ಸೀನನು ಸೀತರೆ ದಾಂಟಿ ಬಂದೆಯೊ
ಕಂಟಕ ಬಂತು ರಾಮಯ್ಯ ।
ಮಂಟೆಯವಾಯಿತು ನಮ್ಮ ಚೆಂಡಾಟ ಕಂ
ಗೆಟ್ಟ ಕಾಟಣ್ಣನಾ ಕ್ಷಣದಿ ||೩೬೧|| ೯-೩೮೧/...

ತಾಯಿ ಹೇಳಿದ ಮಾತು ತಲೆಯ ತಾಗಿತು ರಾಮ
ಮಾಯದ ವಿಧಿ ಬಂತು ನಿನಗೆ ।
ಆಯುಧವನು ಹಾಯ್ದು ಸಾಯ್ವೆನೆನುತ ಕಾಟ
ದುಃಖವನು ತಾಳಿದನು ||೩೬೨|| ೯-೩೮೨/...

ಮಾಯಕಾತಿ ಚೆಂಡಕೊಡದಿರೆ ರಾಮಯ್ಯ
ರಾಯ ಬೇಡವೊ ಚೆಂಡಿನಾಟ ।
ತಾಯಿ ಚೆಂಡನು ಬೇಡಿದರೆ ಕೊಡದಿದ್ದರೆ
ದಾಯ ಲೆತ್ತವನು ಆಡುವೆವು ||೩೬೩||

ಸಂದ ಮಗನು ಅರಮನೆಗೆ ಹೋ[ಗುವೆ ಎನೆ]
ಅಂದವಳಿ[ಯೊ] ಮೈದೊಡಿಗೆಯ ।

ಎಂದ ಕಾಟಣ್ಣನ ನುಡಿಗೇಳಿ ರಾಮಯ್ಯ
ಅಂದವಗೆಡಿಸಿದನಾಗ ||೩೬೪||

ಚಂದದಿಂದಲಿ ತಮ್ಮಣ್ಣನ ಕೈಯಲಿ
ಒಂದೊಂದು ತಾ ಕೊಟ್ಟನಾಗ ।
ಕುಂದಿಲ್ಲದೆ ರಾಮಚಂದ್ರನಂದದಿ ರಾಮ
ನಿಂದು ಹಾರನು ತೆಕ್ಕೊಟ್ಟ ||೩೬೫||

ಪಡುವಲರಾಯರ ಗಂಡನೆಂದೆನಿಸುವ
ಕಡುಕ ಪೊಂಗಲವ ತೆಕ್ಕೊಟ್ಟ ।
ಕಡಗ ಕಂಕಣ ಕಂಠಮಾಲೆ ಪೆಂಡೆಯಗಳ
ಎಡರು ಇಲ್ಲದಲಿ ತೆಕ್ಕೊಟ್ಟ ||೩೬೬||

ಮಲೆವ ರಾಯರ ಗಂಡನೆನಿಸುವವ್ಯೆದು
ಚೆಲುವೆನಿಸುವ ಪಂಚಸರವು ।
ಕಲಿಗಳರಸ ರಾಮಯ್ಯ ತೆಕ್ಕೊಟ್ಟ
ಸುಲಲಿತ ಕಾಟನ ಕೈಯ್ಗೆ ||೩೬೭||

ತೆಂಕಣರಾಯರ ಗಂಡನೆಂದೆನಿಸುವ
ಬಿಂಕದ ಕಂಠಹಾರಗಳ ।
ಅಂಕಕಾರನು ರಾಮಯ್ಯನು ತೆಕ್ಕೊಟ್ಟ
ಶಂಕೆಯಿಲ್ಲದೆ ಕಾಟಣಗೆ ||೩೬೮||

ಸೃಷ್ಟಿಯ ರಾಯರ ಗಂಡನೆಂದೆನಿಸುವ
ಇಟ್ಟ ಬಾಪುರಿಗಳ ತೆಗೆದ ।
ತೊಟ್ಟ ಹೊಂಗೆಲಸದ ಪದಕವ ತೆಗೆದನು
ಕಟ್ಟಾಳು ಕಲಿ ರಾಮನಾಥ ||೩೬೯||

ಇನ್ನು ಮುನ್ನಿಲಿ ರಾಮದೇವಯ್ಯನಲ್ಲದೆ
ಚೆನ್ನ ರಾಮಗೆ ಸರಿಯಿಲ್ಲ ।
ಭಿನ್ನವಿಲ್ಲದೆ ರಾಯರಗಂಡನೆನಿಸುವ
ರನ್ನದ ಕಡಗವ ತೆಗೆದ ||೩೭೦||

ಸುತ್ತಲ ರಾಯರ ಗಂಡನೆಂದೆನಿಸುವ
ಸುತ್ತಿರ್ದ ವಾಲೆ ಬಿಚ್ಚಿದನು ।
ಚಿತ್ತಜ ಸಮರೂಪ ರಾಮಯ್ಯ ಮಂಡೆಯ
ಒತ್ತಿ ಬಿಗಿದ ಎಣ್ಣೆಗಂಟ ||೩೭೧|| …/೧೭-೪೭&೫೩

ಹೊನ್ನ ನಾಮವನು ತೆಗೆವುತ ರಾಮಯ್ಯ
ರನ್ನದ ಕಡಗವ ತೆಗೆದ ।
ಭಿನ್ನವಿಲ್ಲದೆ ತಮ್ಮಣ್ಣಿಗೆ ಶರಣೆಂದು
ಚೆನ್ನ ರಾಮುಗ ನಡೆಗೊಂಡ ॥೩೭೨॥ .../೧೭-೫೪

ಮಂಡಲದೊಳು ನೆರೆ ಗಂಡುಗಲಿಯು ರಾಮ
ಚೆಂಡ ಬೇಡಲು ನಡೆಗೊಂಡ ।
ಕಂಡರು ಹೊರ ಬಾಗಿಲಗಾಯ್ವ ದೂತರು
ಚಂಡವಿಕ್ರಮ ಬಹ ಬರವ ॥೩೭೩॥

ಹರಿದು ಬಂದು ಹೇಳಿದಳು ಒಡತಿಯ ಕೂಡೆ
ಧುರಧೀರ ಬಹ ಸುದ್ದಿಯನು ।
ಭರದಿಂದಲಿ ಬರುತನೆ ವಿಕ್ರಮ ರಾಮ
ಉರವಣಿಸಿಯೆ ಚೆಂಡ ಬೇಡೆ ॥೩೭೪॥

ಪಟ್ಟದಾನೆಯು ಹಾರಿಕೊಂಡಂತೆ ರಾಮನು
ದಿಟ್ಟ ಬಂದನು ಚೆಂಡ ಬೇಡೆ ।
ಗಟ್ಟಿಸಿ ಹಿಡಿಯೆಂದು ರತ್ನಿಯ ಕೂಡೆ
ದಿಟ್ಟ ನಾಗಾಯಿ ಹೇಳಿದಳು ॥೩೭೫॥

ಆಟ ಕೆಟ್ಟಿತು ರಾಮ ಭೀತಿಗೊಳ್ಳುತ ಬರೆ
ನಾಟಕ ಶಾಲೆಗೆ ಬಂದ ।
ಪಾಟಿಸಿಗೆಯ್ದಿದ ಚಿನ್ನದ ಅಗುಸೆ[ಗೆ]
ಓಟದಿ ಬಂದ ರಾಮಯ್ಯ ॥೩೭೬॥

ಒಪ್ಪುವ ಚೆನ್ನಿಗ ಕೊಮಾರ ರಾಮಯ್ಯನು
ಉಪ್ಪರಿಗೆಯೊಳು ಬಂದು ನಿಂದ ।
ಪುಷ್ಪಚಾಪನ ಸಮರೂಪನವನ ಕಂಡು
ಕೋಪಿಸಿದುದು ಅರಗಿಣಿಯು ॥೩೭೭॥

ಬಂದ ರಾಮನ ಕಂಡು ನುಡಿಯಿತು ಅರಗಿಣಿ
ಚಂದ್ರಲೋಕದ ಚೆನ್ನಿಗನೆ ।
ಇಂದು ಕಂಪಿಲರಾಯನಿಲ್ಲದ ಬಳಿಕಲಿ
ಬಂದವನಾರೆಲೊ ಪಾಪಿ ॥೩೭೮॥ ೯-೪೩೫/೧೭-೬೧

ಅರಸಿಲ್ಲದರಮನೆ ಹೊಕ್ಕವನಾರೆಲೊ
ಸರಸವೆ ಕಂಪಿಲನೊಡನೆ ।

ಅರಸನ ರಾಣಿ ಚಿಕ್ಕಮ್ಮಗೆ ಹೇಳಿ
ಬೆರಸಿ ಕಟ್ಟುವೆ ಹೆಡಗಯ್ಯ ||೩೭೯|| ೯-೪೩೬/೧೭-೬೨

ಹುಳಿಯಾರ ಮಾರಗೊಂಡನ ಮೇಲೆ ದಾಳಿಯ
ಘಳಿಲನೆ ನಾನು ಹೋಗಿದ್ದು ।
ತಳುವದೆ ನಿನ್ನ ಕಪ್ಪವ ಕೊಂಡು ಬಂದವ
ಚೆಲುವ ರಾಮಯ್ಯನೆಂದರಿಯಾ ||೩೮೦|| ೯-೪೩೯/೧೭-೬೫

ನಾನೀಗ ಕಂಪಿಲರಾಯನ ಮಗನೀಗ
ನಾನು ಮನ್ನೆರ ಕೂಡಿಕೊಂಡು ।
ಆನಂದದಿಂದಲಿ ಚೆಂಡನಾಡಿದೆ ಕೇಳು
ನಾನೀಗ ಚೆನ್ನಿಗ ರಾಮ ||೩೮೧|| ೯-೪೪೦/೧೭-೬೬

ನಿನ್ನ ಚೆಂಡಿನ ಮನೆ ಮಂಟೆಯವಾಯಿತು
ನಿನ್ನ ಜೀವಕೆ ಮಾರಿ ಬಂತು ।
ಭಿನ್ನವಿಲ್ಲದೆ ನೀನು ಹಿಂದಕೆ ತಿರುಗೆಂದು
ಚೆನ್ನ ರಾಮಗೆ ಬುದ್ಧಿ ಹೇಳೆ ||೩೮೨|| ೯-೪೪೩/೧೭-೬೯

ಹಿಡಿದರೆ ನೀನೊಲ್ಲದಿದ್ದರೆ ಚಿಕ್ಕಮ್ಮ
ಕಡಿಸುವೆನೆಂದು ತಮ್ಮೊಳಗೆ ।
ಮಡದೇರ ಕೂಡೆ ಮತ್ತಾಲಿ[ಸ]ಲಿತ್ತ
ನುಡಿಯ ಕೇಳಿದೆ ಚೆನ್ನರಾಮ ||೩೮೩||

ಚಂಡು ಹೋದರೆ ಒಂದು ಸಾವಿರ ಚೆಂಡು ಆದಾವು
ಗಂಡು ನಿನ್ನನು ಪೋಲ್ವ[ರ]ರಿದು ।
ಬಂಡಾಗಲಿ ಬೇಡ ಹಿಂದಕ್ಕೆ ತಿರುಗೆಂದು
ಗಂಡು ರಾಮಗೆ ಹೇಳಿತಾಗ ||೩೮೪|| ೯-೪೪೫/೧೭-೭೧

ಎಂದ ಮಾತನು ಕೇಳುತ ಅರಗಿಳಿಯ
ಕಂಡುದ ಕಾಬೆನೆಂದೆನುತ ।
ಮುಂದಕ್ಕೆ ನಡೆದು ಬಂದನು ಅಲ್ಲಿಂದ
ಕಂದರ್ಪಹರ ಬಲ್ಲನೆನುತ ||೩೮೫||

ಚೆನ್ನರಾಮನು ಹೊರ ಬಾಗಿಲನು ಹೊಯಿದು
ಚಿನ್ನದ ಅಗುಸೆಗೆ ಬಂದ ।
ಕನ್ನೆವೆಣ್ಣಿಗೆ ಸನ್ನೆ ಮಾಡುತ ರತ್ನಾಯಿ
ರನ್ನ ಹುಡಿ[ಯ] ಸಾರಿದಳು ||೩೮೬||

ಮೆಲ್ಲನೆ ರಾಮನು ರತ್ನಿಯೊಳ್ನುಡಿದನು
ತಲ್ಲಣಿಸುತ ಚೆಂಡಬೇಡೆ ।
ಬಲ್ಲಿದ ಮನ್ನೇರ ಆಟ ಕೆಟ್ಟಿತುಯೆಂದು
ನಿಲ್ಲದೆ ತಾಯ ಬೇಡಿದನು ॥೩೮೭॥

ರಾಮ ಕೇಳೆಲೊ ನಿನ್ನ ಚೆಂಡು ಬೇಕಾದರೆ
ಪ್ರೇಮವ ಪರಿಹರಿಸೆನಗೆ ।
ಕಾ[ಮದ] ಕಣ್ಣು ನೆಟ್ಟಿತು ಚಿಕ್ಕಂದು ಕೇಳ್
ಸೋಮಧರನ ಪಾದದಾಣೆ ॥೩೮೮॥

ಹೆತ್ತ ತಾಯೆ ನೀನಪ್ಪನ ರಾಣಿಯೆ
ಚಿತ್ತದೊಳಿದನೆಣಿಸುವರೆ ।
ಉತ್ತಮ [ಮ]ಗ ನಿನ್ನ ಬಸುರಲಿ ನಾ ಬಂದೆ
ಮುತ್ತಿನ ಚೆಂಡು ತಾರಮ್ಮ ॥೩೮೯॥

ತೆಲುಗರ ಕುಲತಿಲಕ[ವು] ಧರೆಯೊಳು ನಾ
ಬಲು ಬೇಡತಿಯು ನಿಮ್ಮವ್ವ ।
ಚೆಲುವ ರಾಮ[ನೆ] ಪಾಪವು ಇಲ್ಲವೊ ನಿನ್ನ
ಒಲಿದು ನಾ ಬೇಗ ಕೂಡುವುದು ॥೩೯೦॥

ಚಿಕ್ಕಮ್ಮ ಈ ಮಾತನಾಡಬೇಡವೆ ತಾಯಿ
ಧಿಕ್ಕನೆ ನಿನ್ನೊಡಲೊಳಗೆ ।
ಸಿಕ್ಕು ಇಲ್ಲದೆ ಜನಿಸಿದ ಕಂದನು ನಾನು
ಮುಕ್ಕಣ್ಣನ ಪಾದದಾಣೆ ॥೩೯೧॥

ಸುರಲೋಕದೊಳಗೆ ಬ್ರಹ್ಮನು ತನ್ನ ಮಗಳನು
ನೆರೆದುದಿಲ್ಲವೆ ಜಗವರಿಯೆ ।
ನರರಿಗಿನ್ನೆಲ್ಲಿಯ ಪಾಪವು ಧರೆಯೊಳು ।
ಹರುಷದಿ ಕೂಡೆನ್ನನೊಲಿದು ॥೩೯೨॥

ಸಾವ ಮದ್ದನಿಕ್ಕಿ ಕೊಲ್ಲಿಸುವೆನು ಕಂಪನ
ಹಾವು ಮೆಕ್ಕೆಯ ಹಾಕಿಸುವೆನು ।
ಭುವನದೊಳಗೆ ನಾ ಹೆಂಡತಿ ನೀ ಗಂಡ
ರಾಜಪಟ್ಟವ ಕಟ್ಟಿಸುವೆನು ॥೩೯೩॥ ೯-೫೧೧/...

ಹರಹರ ಎನುತಲಿ ಕರವ ಕರ್ಣಕೆ ಮುಚ್ಚಿ
ಸರಸ ಬೇಡವು ಮಗನೊಡನೆ ।

ಹರಿಯಲದೇವಿಯೋಪಾದಿಯಲ್ಲವೆ ಅಪ
ಹರಿಸುವರೆ ಪಾತಕವ ||೩೯೪|| ೯-೪೭/೧೭-೯೪ &೯೬

ಧರೆಯೊಳಗೀ ಮಾತ ಕೇಳಬಹುದೆಯೆಂದು
ತಿರುಗಿದನಲ್ಲಿಂದ ರಾಮ ।
ಉರವಣಿಸಿಯೆ ಪೋಗಲೀಸದೆ ರಾಮನ
ತರುಣಿ ಹಿಡಿದಳು ಮುಂಗೈಯ್ಯ ||೩೯೫||

ಕೊಂದು ಹೋಗೆಲೊ ರಾಮ ನಿಂದು ಸೈರಿಸಲಾರೆ
ಮುಂದುಗೆಟ್ಟೆನು ವಿರಹದಲಿ ।
ಅಂದಿನ ದಿನ[ದಿಂದ] ನಿನಗೆ ತ[ಡೆ]ದ ಹೆಣ್ಣು ೯-೪೮೬&೫೧೯/
ಸಂದೇಹ ಮಾಡಬೇಡೆಂದೊ ||೩೯೬|| ೧೭-೧೦೬&೧೩೧

ಅಲ್ಲವೆ ಚಿಕ್ಕಮ್ಮ ತಾ ಹೆತ್ತಮಕ್ಕಳು ತಾ
ಯಲ್ಲಿ ಕೂಡುವುದುಂಟೆ ।
ಸಲ್ಲದು ನಿನಗಿಂಥ ಮಾತೆಂದು ರಾಮಯ್ಯ
ಮೆಲ್ಲನೆ ಜಾರಿದನಾಗ ||೩೯೭|| .../೧೭-೧೨೯

ತಂದೆಗಳೇರುವ ದಂಡಿಗೆ ಪಲ್ಲಕ್ಕಿ
ಕಂದರೇರರೆ ಧರೆಯೊಳಗೆ ।
ಕುಂದು ಕೊರತೆಯಿಲ್ಲ ನಿನಗೆ ಚೆನ್ನಿಗ ರಾಮ
ಸಂದೇಹ ಮಾಡದೆ ಕೂಡೊ ||೩೯೮|| .../೧೭-೧೨೯

ಕೆಟ್ಟೆನು ಎಲೆ ಅಮ್ಮ ಇಂತಿಹ ದ್ರೋಹಕೆ
ಮುಟ್ಟಿ ಎನ್ನೊಳು ನೀನು ನುಡಿದೆ ।
ಖಟ್ವಾಂಗ[ಧರ] ಬಲ್ಲನೆನುತ ರಾಮಯ್ಯ
ನಿಟ್ಟೆಲು ಮುರಿದು ಚಿಂತಿಸಿದ ||೩೯೯||

ಇನ್ನು ನಿನ್ನನು ಬಿಡುವಳೆ ಕೇಳು ಎಲೆ ರಾಮ
ನನ್ನ ಹರಕೆ ಕೈಸೇರೆ ।
ರನ್ನದ ತೂಗು ಮಂಚದಲಿ ನೆರೆದು ಬೇಗ
ನನ್ನ ಹರಕೆಯನು ಕಳೆವೆ ||೪೦೦|| .../೧೭-೧೧೯

ಹರಕೆಯ ಕಳೆವೆನು ಮನಸಿನ ತಾಪದ
ಅರಸ ನಿನ್ನಾಣೆ ಸಟೆಯಲ್ಲ ।
ನೆರೆಗಲಿ ರಾಮ ನೀನಂಜಬೇಡವೊ ಇಂದು
ತೆರನರಿದೆನ್ನ ಕೂಡುವುದು ||೪೦೧|| .../೧೭-೧೨೦

ಬೇಡವೊ ಚಿಕ್ಕಮ್ಮ ಆಡಬಾರದು ಮಾತು
ಕೇಡುಬಹುದು ಇದರಿಂದ ।
ಬೇಡ ಕೇಳ್ ಧರೆಯೊಳು ಮಾಡಬಾರದ ಪಾಪ
ಬೇಡ[ವು] ಇನ್ನು ನಾನರಿಯೆ ॥೪೦೨॥ .../೧೭-೧೨೧

ಬೇಡವೊ ರಾಮಯ್ಯ ಚೆನ್ನಿಗ[ನೆನುತಲಿ]
ಕಾಡಿ ಬೇಡಿಯೆ ಮರುಗಿದಳು ।
ಕೆಡಬೇಡ ರಾಮಯ್ಯ ಸತಿಯರ ಪಾಪವು
ಕಾಡದೆ [ಎ]ನ್ನ ನುಡಿಗೇಳು ॥೪೦೩॥ .../೧೭-೧೨೨

ಧನುವ ಪಿಡಿದು ಸರಳನು ಹೂಡಿ ಸುರಲೋಕ
ವನು ಸಹವಾಗಿಳುಹಿದನು।
ಅನುನಯದಿಂದ ಕೈಯಿಗೆ ಬಳೆ ಬಂದವು
ಘನ ಸತಿಯರ ಶಾಪದಿಂದ ॥೪೦೪॥

ಸತಿಯರ ಶಾಪದಿ ಷಣ್ಮುಖನೆಂಬನ
ಪಿತನ ಶಿರವು ಹೋದುದರಿಯಾ ।
ಅತಿಶಯದಿಂದ [ಜೀಯರು] ಹತವಾದರು
ಮತಿವಂತ ನೀನಂಜಬೇಡ ॥೪೦೫॥

ಕಲ್ಯಾಣದೊಳಗೆ ರಾಮಯ್ಯನ ಹೆಂಡತಿ
ಅಲ್ಲಿ ಚಿಕ್ಕಯ್ಯಗೆ ಭ್ರಮಿಸೆ ।
ಒಲ್ಲದೆ ಹೋದರೆ ತಲೆಯು ಹೋಯಿತು ರಾಮ
ಮೆಲ್ಲನೆಚ್ಚತು ಮುಂದರಿಯಾ ॥೪೦೬॥ ೯-೫೨೨/೧೭-೧೩೦

ಅಂಜೆನು ಕರಿ ಸಿಂಹ ಶಾರ್ದೂಲ ಭಯದಲ್ಲಿ
ನಂಜುಂಡ [ಶಿವ ಕ]ರುಣದಲಿ ।
ಅಂಜುವೆ ಪರನಾರಿ ಪರಸತಿಯರಿಗೆ ನಾ
ಕುಂಜರಗಮನೆ ಚಿತ್ತೈಸು ॥೪೦೭॥

ಹರನ ರಾಣಿಯು ಕೇಳು ಹರಿಯಮ್ಮನೋಪಾದಿ
ಹಿರಿಯರು ತಪ್ಪನಾಡುವರೆ ।
ಪರಸತಿಗೆಯು ತಪ್ಪಿ ಸತ್ವಹೀನನು ಆಗೆ
ಬೆರಸಿ ಭೀಮನು ಕೊಂದುದರಿಯಾ ॥೪೦೮॥

ಪಾತಕಿಯೇ ತಾಯಿ ಇಂಥ ಕರ್ಮಗಳನು
ಭೂತಳದೊಳಗೆ ಆಡುವರೆ ।

ಸೋತೆನು ನಿನ್ನ ರೂಪಿಗೆ ಮನವನು ಇಕ್ಕಿ
ಕಾತರವನು ತಗ್ಗಿಸಯ್ಯ ||೪೦೯||

ಕಡುಕೋಪದಿಂದ ನೂಕಿದ ರಾಮ ರತ್ನಿಯ
ಒಡನೆ ಮುರುಹಿ ಕೊಡಹಿದನು ।
ಜಡಿದ ಕುಚಗಳಲಗುತಲಿ ರತ್ನಾದೇವಿ
ಬಿದ್ದಳು ಭೂಮಿಯ ಮೇಲೆ ||೪೧೦||

ಕೆದರಿದ ಕೇಶವು ಬೆದರಿದ ಕಂಗಳು
ಒದಗಿದ ಆತ್ಮದಿ ಕೋಪ ।
ಮದನನವ್ಯೆದು ಬಾಣಕೆ ಗುರಿಯಾದಳು
ಹದನರಿಯಳು ಇ......... ||೪೧೧||

ಅಲ್ಲಿಂದ ಬೇಗ ಹೊರಟು ಬಂದು ರಾಮಯ್ಯ
ಎಲ್ಲಿಯ ಪಾಪವೆಂದೆನುತ ।
ಬಲ್ಲಂತೆ ಮಾಡು ಜಟ್ಟಂಗಿ[ಯ] ರಾಮನೆ
ಕೊಲ್ಲೆನ್ನ [ಕಾಯೊ ಎಂದೆನುತ] ||೪೧೨|| ೯-೫೨೭/...

ಭೂಮಿ[ದೇವತೆ ಬಲ್ಲಳು ನಾನಿದಕಂಜೆ]
ಸೋಮಧರನು ಶಿವ ಬಲ್ಲ ।
ಪ್ರೇಮದಿ ಪಂಚೈವರು ಬಲ್ಲರೆನುತ ನಿ
ಸ್ಸೀಮ ರಾಮನ [ನ]ಡೆಗೊಂಡ ||೪೧೩|| ೯-೫೨೮/...

ಹರಿಯಮ್ಮನ ಮಗ .... ನೆಂದರೆ
ಪರಿಹರಿಸುವುದು ಪಾತಕವು ।
[ಪರ]ನಾರಿ ಸೋದರನೆಂಬ ಬಿರಿದ ತಾನು
ಒರೆದು ನೋಡಿದನಾಗ ಶಿವನು ||೪೧೪||

ಬಂದನು ರಾಮಯ್ಯ ಚಿನ್ನದ[ಗು]ಸೆಗೆ
ಸಂದಿಸಿ ಬೀಗವಿಕ್ಕಿರಲು ।
ಕಂದರ್ಪಹರ ಬಲ್ಲನೆನುತ ಬೇಗದಿ ಬಂದು
ಚೆಂದದಿ ಮುರಿದ ಬೀಗವನು ||೪೧೫|| ೯-೫೩೪/...

ಅದರಿಂದ ಬೆಳ್ಳಿಯ ಅಗುಸೆಗೆ ಬಂದನು
ತೆಗೆಯಲಾರದ ಬಲು ಕದವ ।
ಮದನಾರಿ ಹರ ಬಲ್ಲನೆನುತ ಬೀಗವ ಮುಟ್ಟೆ
ಕದವು ಬಿದ್ದವು ನಾಲ್ಕು ದೆಸೆಗೆ ||೪೧೬|| ೯-೫೩೫/...

ಇತ್ತ ಬಂದನು ಹೊರ ಬಾಗಿಲನು ಹೊಯಿದು
ಸುತ್ತ ನೋಡಲು ಯಾರು ಇಲ್ಲ ।
ಮೃತ್ಯುಂಜಯ ಬಲ್ಲೆನೆನುತ ರಾಮಯ್ಯನು
ಸತ್ಯಸಾಗರ ನಡೆಗೊಂಡ ||೪೧೭|| ೯-೫೩೭/...

ಮೆಲ್ಲನೆ ಕಣ್ದೆರೆದೆದ್ದು ಕುಳಿತು ನೋಡಿ
ಎಲ್ಲಿ ಹೋದೆಯೋ ರಾಮನೆನುತ ।
ಕಲ್ಲ ಎದೆಯಾ ರಾಮ ನಿಲ್ಲದೆ ಹೋಗುವರೆ
ನಿಲ್ಲದು ಮನಸಿನ ತಾಪ ||೪೧೮|| ೯-೫೪೦/...

ಕಟ್ಟಾಳು ರಾಮನು ನಿರ್ದಾಟತನದಲ್ಲಿ
ಬಿಟ್ಟು ಹೋದರೆ ಹೆದರುವೆ[ನೆ] ।
ಮೆಟ್ಟಿ ಕೊರಳ ಕೊಯಿಸುವೆ ರಾಮನಾಥನ
ಸೃಷ್ಟಿಯೊಳಗೆ ಹೊಸತೆನಿಸಿ ||೪೧೯||

ಹಿಡಿದು ಹಿಡಿಯಲಾರದೆ ನಾನು ಬಿಟ್ಟೆನು
ಕಡು ಪಾಪಿಗವನು ಸಿಕ್ಕುವನೆ ।
ಸುಡು ಇನ್ನು ಯಾತಕೆ ರಾಮನ ಹಂಬಲ
ಕೆಡಹಿ ಕೊರಳ ಬಿಡಿಸುವೆನು ||೪೨೦|| ೧೦-೧೭/...

ಬಾಳ ತಾಪವು ಹೆಚ್ಚಿ ಬಿದ್ದಳು ರತ್ನಾದೇವಿ
ಕೊಳ[ನೇ]ಕೆಂದು ಕುಳಿತಳು ।
ಲೋಲ ರಾಮಗೆ ನಿಂದು ನೋಡಬೇಕೆನುತಲಿ
ವಾಲಗ ಶಾಲೆಗೆ ಬಂದು ||೪೨೧||

ಚಿತ್ರಸಾಲೆಗೆ ಬಂದು ರಾಮನ ಹೋಲ್ವಂಥ
ಚಿತ್ರವುಂಟೆಂದು ನೋಡಿದಳು ।
ಅತ್ತು ಬೆದರಿ ಕಂಗೆಡುತಲಿ ರತ್ನಾಯಿ
ಮತ್ತೆ ತಾಪದಿ ಮರುಗಿದಳು ||೪೨೨||

ಎ[ದೆ]ಯನೊತ್ತಲು ಕಂಬ ಬೆದರಿ ಹವ್ವನೆ ಹಾರಿ
ಅದುರಿ ಬಿದ್ದಳುತ ಭೂಮಿ ಮೇಲೆ ।
ಚೆದುರ ಚೆನ್ನಿಗ ರಾಮ ಎಲ್ಲಿ ಹೋದೆಯೊ ಎಂದು
ಕುದಿದಳು ವಿರಹಾಗ್ನಿಯಲಿ ||೪೨೩||

ಪಚ್ಚೆಯ ರೂಪ ರಾಮಯ್ಯನ ಪೋಲ್ವಂಥ
ಪಚ್ಚೆಯ ಕಂಬವ ಕಂಡು ।

ಒಚ್ಚೆರೆಗಂಗಳ ರಾಮ ಸಿಕ್ಕಿದನೆಂದು
ಬೆಚ್ಚಿ ಬಿಗಿದು ತಬ್ಬಿದಳು ||೪೨೪||

[ಕ]ಲ್ಲ ಚುಂಬಿಸೆ ಬೇಗದಲ್ಲಿ ರತ್ನಾಯಿಗೆ
ನಿಲ್ಲದೆ ತುಟಿಯೆಲ್ಲ ಬಾತು ।
ಬಲ್ಲಿದ ರಾಮ ನೀನೆಲ್ಲಿ ಹೋದೆಯೊ ಎಂದು
ನಿಲ್ಲದೆ ಹುಡಿಯಲ್ಲಿ ಹೊರಳಿ ||೪೨೫||

ಬೆದರಿ ಬಿದ್ದಳು ರತ್ನಾಯಿ ಧರೆಯ ಮೇಲೆ
ಬೆದರಿದ ಹುಲ್ಲೆಯಂದದಲಿ ।
ಕದಪು ಕುಚವು ನಡುದೊಡೆಯೆಲ್ಲ ಮದವೇರಿ
ಮದನ ಕಾಮಗೆ ಸಿಕ್ಕಿದಳು ||೪೨೬||

ದುಗುಡವ ತಾಳಿ ಕೋಪದಿ ಮಂಡೆಯ ಕಟ್ಟಿ
ಅಗಡು ಮಾಡಿಯೆ ಮೈಯ ಕೆಡಿಸಿ ।
ತೆಗೆದು ಚಿನ್ನದ ಪುತ್ಥಳಿಯಂತೆ ಬೇಗದಿ
ಸುಗುಣೆ ಸ್ತನವ ಕೆಡಿಸಿದಳು ||೪೨೭|| ೧೦-೨೫/...

ಮುತ್ತಿನ ಹಾರವ ಇತ್ತರದಲಿ ಹರಿದು
ಹಸ್ತದ ಬಳೆಯೆಲ್ಲ ಸೀಳಿ ।
ಒತ್ತಿಕೊಂಡಳು ಉರಸ್ಥಾನಕೆ ರೇಖೆಯ ಮಾಡಿ
ಮತ್ತೆ ಹೂಸಿದಳರ್ಧಮರ್ಧ ||೩೨೮|| ೧೦-೨೩/...

ತನ್ನ ತುಟಿಯ ತಾನೆ ಕಡಕೊಂಡು ರತ್ನಾಯಿ
ತನ್ನ ಗಲ್ಲವ ತಾನು ಸೀಳಿ ।
ಭಿನ್ನವಿಲ್ಲದೆ ಗಾಯಗಳು ಎದ್ದು ಉಲಿದವು
ಚೆನ್ನಿಗ ವಿಟ ನೆರೆದಂತೆ ||೪೨೯||

ತೋರ ಕುಚದ ಮೇಲೆ ಸೇರಿದ ನಖರೇಖೆ
ನಾರಿಯ ತೋಳ್ತೊಡೆಗಳಲಿ ।
ಧೀರೆ ತಾ ಬಳೆಯನೊಡೆದುಕೊಂಡಳು
ನೀರೆ [ಹೀ]ನಾಯಿತಾ ಕ್ಷಣದಿ ||೪೩೦||

ಮುಂದಲೆ ಕುರುಳ್ಕೊಯಿಕೊಂಡು ರತ್ನಾದೇವಿ
ಕುಂದಿದ ಮುಖ ದುಗುಡದಲಿ ।
ಇಂದು ಕೊಮರ ರಾಮನ ತಲೆಯನು ಮೆಟ್ಟಿ
ಮಿಂದುದಲ್ಲದೆ ಉಣ[ಲೊಲ್ಲೆ] ||೪೩೧||

ಅರಮನೆಯೊಳಗಿರ್ದ ಹೆಣ್ಣೊಡತಿಯ ಕಂಡು
ತರತರದಲಿ ಚಿಂತಿಪರು ।
ಇರಲಿತ್ತ ಕಂಪಿಲರಾಯನ ಬೇಟೆಯ
ಪರಿಯ ಕೇಳ್ವುದು ಕೋವಿದರು ||೪೩೨||

ಭೇರಿ ಮೃದಂಗ ತಂಬಟ ಹೆಗ್ಗಾಳೆಯು
ಭೋರೆಂದು ನಾದ ಮಾಡಿದವು ।
ಭಾರಿ ಮಂದಾಸದೊಳಗಿರ್ದ ಹೆಬ್ಬುಲಿ
ಊರ ಹೊಗುವ ಸಂಭ್ರಮವು ||೪೩೩|| .../೧೮-೧೯

ತುಡುಮು ತಮ್ಮಟ ಗಿಡಿಬಿಡಿ ನಿಸ್ಸಾಳ
ಬಿಡದೊದರುವ ಹೆಗ್ಗಾಳೆ ಬಿಲ್ಲ ।
ಬಿಡುವ ಬೊಬ್ಬೆಗಳು ನುಡಿವ ಪೆಟಲು
ನಡುಗಿತು ಹೊಸಮಲೆ ದುರ್ಗ ||೪೩೪|| .../೧೮-೧೯

ಕೆಲರ ಕೈಯಲಿ ಉಡ ಕೆಲರ ಕೈಯಲಿ ಮೊಲ
ಕೆಲರ ಕೈಯಲಿ ನವಿಲುಗಳು ।
ಎಲ್ಲರ ಕೈಯಲಿ ಎಕ್ಕಲಗಳ ಹೊರೆ
ಚೆಲುವೆನಿಸಿತು ಚಲವೇಂಟೆ ||೪೩೫|| .../೧೮-೨೦

ಸೊಂಪಿಲಿ ಬೇಡರು ಸತ್ತ ಮೃಗವ ತರೆ
ತಂಪಿನ ಮರಕಾಗಿ ಬರಲು ।
ಕಂಪಿಲರಾಯ ಮನ್ನೆಯರು ಸಹಿತಲಿ ಇತ್ತ
ಬಿಂಕದಿ ಪೊಕ್ಕ ಪಟ್ಟಣವ ||೪೩೬|| .../೧೮-೨೦

ದೇವ ಕಂಪಿಲನು ಬೇಂಟೆಯನಾಡಿ ಬಂದರೆ
ಭಾವಕಿ ಹರಿಯಲದೇವಿ ।
ತೀವಿದ ಮುತ್ತಿನ ಹರಿವಾಣದಿ ತಂದು
ಭಾವೆ ಎತ್ತಿದಳು ಆರತಿಯ ||೪೩೭|| ೧೦-೩೩/...

ಚಿತ್ತದೊಲ್ಲಭೆ [ಬಾರ]ಳೇಕೆಂದು ಕಂಪಿಲ
ಮತ್ತೆ ಮನದಲಿ ಅತಿ ನೊಂದು ।
ಒತ್ತಿಲಿ ಇರ್ದ ಮಂತ್ರಿ ಮನ್ನೆರುಗಳ
ಕರ್ತು ನೃಪನು ಕೇಳಿದನು ||೪೩೮|| ೧೦-೩೫/೧೮-೨೨

ಚೆನ್ನಿಗರಾಮನ ಕತೆಯ ಪೇಳಲು ಮುಂದೆ
ಭಿನ್ನವಿಲ್ಲದೆ ಕೇಳ್ವರಿಗೆ ।

ಮುನ್ನಲಿ ಕೈಲಾಸನಿವಾಸ ಶ್ರೀಕಾಂ
ತನ ಬಳಿ ಮಗನು .... ||೪೫೯||

ಕರವಾರ ಬೆಳೆವುದು ಕೇಳಿದವರಿಗೆಲ್ಲ
ಶ್ರೀಯ ಕೊಡುವ ಚೆನ್ನರಾಮ ||೪೬೦||

ಬಾಣವ್ಯೆದುಳ್ಳನ ರಾಣಿಯಂದದಲಾಗ
ಜಾಣೆ ರಾಮನ ಹೆತ್ತ ಮಾತೆ ।
ಮಾಣದೆ ರನ್ನದಾರತಿಯನೆತ್ತಿದಳಾಗ
ಜಾಣ ಹೊಕ್ಕಲ್ಲಿ ಸಂಧಿ ಮುಗಿಯೆ ||೪೬೧||

ಅಂತು ಸಂಧಿ ೬ಕ್ಕಂ ಪದನು ೧೧೦೧ (> ೧೦೭೯)ಕ್ಕಂ ಮಂಗಳಮಹಾಶ್ರೀ

❖❖

ಸಂಧಿ : ಏಳು

❖

ನೆಲಮಾಳಿಗೆಯಲ್ಲಿ ಕುಮಾರರಾಮ

ತನ್ನ ವಲ್ಲಭೆಯ ಮಾತನು ಕೇಳಿ ಕಂಪಿಲ
ಚೆನ್ನರಾಮನ ಕೊಲ್ಲೆಂದ ।
ಭಿನ್ನವಿಲ್ಲದೆ ಮಂತ್ರಿ ನೆಲಮಾಳಿಗೆಯ[ಲಿಟ್ಟ]
ಇನ್ನು ಕೇಳುವುದು ಕೋವಿದರು ॥೧॥

ನಡೆದು ಬಂದನು ಅರಮನೆಗೆ ಕಂಪಿಲರಾಯ
ಮಡದಿಯ ಮನೆಗೈತಂದ ।
ಹಡಪದ ನಾಗಾಯ ಕರೆದು ಕೇಳಿದನಾಗ
ಕಡು ದುಗುಡದ ಸುದ್ದಿಯನು ॥೨॥

ಮಾನಿನಿ ಮಲಗಿದಳೇಕೆಂದು ಕಂಪಿಲರಾಯ
ಆಗಲೆ ಬಂದು ಬೇಗದಲಿ ।
ಏನು ಬೇಡಿದರೆ ಈವೆನು ಮನದಣಿಯಲಿ
ಭಾನುಸಖನ ಮುಖದವಳೆ ॥೩॥ ೧೦-೩೭/೧೮-೨೮

ಮುತ್ತಿನ ಹಾರ ಹರಿದು ತುರುಬವು ಕೆಡೆ
ಹಸ್ತದ ಬಳೆ ಒಡೆದಿದೇಕೋ ।
ಒತ್ತಿದ ನಖರೇಖೆ ಏಕೆಂದ ಎ ಕಂಪಿಲ
ಮತ್ತೆ ಕೇಳಿದನು ರತ್ನಿಯನು ॥೪॥ .../೧೮-೩೨

ಎಲೆ ಪ್ರಿಯಳೆ ಮಾಜಲಿಬೇಡ ಈ ಮೈಯ
ಕಲೆಗಳೆಲ್ಲಿಯವೆ ನಿನ್ನಾಣೆ ।
ಸಲೆ ಗೂಢದಿ ಮಲಗಿದ ಪರಿಯೇನೆಂದು
ಒಲಿದು ಕೇಳಿದನು ಅಂಗನೆಯ ॥೫॥ .../೧೮-೩೩

ಸುಮ್ಮನಿರಲು ಬೆರಗಾಗಿ ಕಂಪಿಲರಾಯ
ಗಮ್ಮನೆ ಮುಖವ ನೋಡಿದನು ।
ಬ್ರಹ್ಮ ಜಟ್ಟಿಗನ ಸೋಂಕಾಯಿತೆ ಶಿವ ಎಂದು
ಹಮ್ಮಯಿಸಿಯೆ ಮಾರ್ನುಡಿದ ॥೬॥ .../೧೮-೩೩

ಸತಿ [ಕು]ಹಕವ ನುಡಿದಳು ಗಂಡನ ಕೂಡೆ
ಹಿತವನು ಮಗ ನೀನೆಂಬೆ ।
ಕತೆಯ ಮಾಡಿದ ನನ್ನ ಬದುಕನು ನಾನೀಗ
ಸತ್ತು ಕಳೆವೆನು ಪ್ರಾಣವನು ॥೭॥ .../೧೮-೩೪

ಗಂಡನೊಡನೆ ಹೇಳೆ ಕೊಂಡೆಯೆಂಬರು ಈಗ
ಭಂಡಾದೆನು ಲೋಕದೊಳಗೆ ।
ಚೆಂಡ ಬಿದ್ದ ನೆವದಲಿ ನಿನ್ನ ಮಗ ಬಂದು
[ಬಂಡು ಮಾಡಿದ] ಮೈಕೆಡಿಸಿ ॥೮॥ ೧೦-೪೧/...

ಬೇಡವೆಂದರು ಕೇಳದಲೆ ರಾಮಯ್ಯನು
ಗಾಢದಿ ತಾ ಬಂದು ಹೊಕ್ಕ ।
ನೀಡಿ ಮುಂಜೆರಗ ಹಿಡಿದು ಎನ್ನ ಕಾಡಿದ
ರೂಢಿಯೊಳಗೆ ಪಾತಕನು ॥೯॥

ಮಂಡೆಯ ಹಿಡಿದೆಳೆದರೆ [ನಾನೊರಲಿದೆ]
ಗಂಡರಿಬ್ಬರೆ ಧರೆಯೊಳಗೆ ।
ಅಂಡಲೆದೆನ್ನ ಕಾಡಿದನು ರಾಮುಗನು ಭೂ
ಮಂಡಲದೊಳು ಪಾತಕನು ॥೧೦॥ ೧೦-೪೨/...

ಭರದಿಂದಲಾ ಮಾತ ಕೇಳುತ ಕಂಪಿಲ
ಉರಿದೆದ್ದನು ದಿಟವೆನುತ ।
ಶಿರವ ಕೊಯಿಸಿ ಕರುಳನು ತೆಗೆಸುವೆನೆಂದು
ನರಿ [ನಾಯಿ]ಗೆ ಹಾಕಿಸುವೆನು ॥೧೧॥

ಎಂದ ಮಾತನು ಕೇಳಿ ಕಂಪಿಲರಾಯನು
ಕಂದನ ಕೊಲಿಸಬೇಕೆನುತ ।
ಸಂದೇಹವಿಲ್ಲದೆ ಬೈಚಪ್ಪನ ಕರೆಸಿ
ಅಂದವನೆಲ್ಲ ಹೇಳಿದನು ॥೧೨॥ ೧೦-೫೨/...

ಕಡೆಸಿದಿರೇಕೆಂದು ಪ್ರಧಾನ ಎನುತಲಿ
ಹೊರೆಯಲಿ ಬಂದು ಬಿನ್ನಯಿಸೆ ।

ಧರೆಯೊಳಗಿಲ್ಲದ ಪಾಪವ ಮಾಡಿದ
ಹಿರಿಯಾಕೆಯ ಮಗ ರಾಮ ॥೧೩॥ ೧೦-೫೩/೧೮-೫೧

ಹೆತ್ತ ಮಗನು ಕೊಮರ ರಾಮಯ್ಯನು
ಚಿತ್ತದಲಿದ ಎಣಿಸುವನೆ ।
ಎತ್ತಳ ವಿಧಿ ಬಂದಿತೆನುತ ಪ್ರಧಾನನು
ಮತ್ತೆ ಕೇಳಿದ ಒರೆದೊರೆದು ॥೧೪॥ ೧೦-೫೪/೧೮-೫೩

ತಂದೆಯ ಕಾಲದ ಹಳೆಯ[ನಲ್ಲವೆ ನೀನು]
ಬಂದು ನೋಡರಮನೆ[ಯೊಳಗೆ] ।
ಕೊಂದು ರಾಮನ ಅಂಗವ ತರದಿರ್ದರೆ
ನಿಂದ್ಯವ ನೀ ಮಾಡಿಸಿದೆಯೋ ॥೧೫॥ ೧೦-೬೧/೧೮-೫೪

ಮಂಡಲಪತಿರಾಯ ಕೇಳು ಬಿನ್ನಹವನು
ಕಂಡರೆ ಕೊಲ್ಲುವುದು ಸಹಜ ।
ಕೊಂಡೆಯ ಮಾತಿಗೆ ರಾಮನ ಕೊಲ್ವಾ ಭೂ
ಮಂಡಲವೆಲ್ಲ ಕೆಡುವುದು ॥೧೬॥

ಹೆಣ್ಣಿಂದ ರಾವಣ ಕೆಟ್ಟನು ಎಲೆ ರಾಯ
ಹೆಣ್ಣಿಂದ ಕೀಚಕ ಕೆಟ್ಟ ।
ಹೆಣ್ಣಿಂದ ವಾಲಿ ಸುಗ್ರೀವರು ಕೆಟ್ಟರು
ಹೆಣ್ಣಿನ ಮಾತ ಕೇಳುವರೆ ॥೧೭॥

ಯಾತರ ಮಾತನಾಡಿದೆಯೊ ಪ್ರಧಾನನೆ
ಕೀರ್ತಿಯಾಯಿತು ನಮ್ಮ ಬದುಕು ।
ಹಿತವನು ಮಗನೆಂದು ಕತೆಮಾಡಿ [ಕೆಡಿ]ಸಿದ
ಸುತನ ಕೊಂದರೆ ನೀನು ಹಿತನು ॥೧೮॥

ಹೇಳಿದ ಮಾತ ಕೇಳಿಯು ಕಿವಿಯನು [ಮುಚ್ಚಿ]
ಹಾಳಾಯಿತು ಹೊಸದುರ್ಗ ।
ನಾಳೆ ಇಷ್ಟೊತ್ತಿಗಂಗವನು ತೋರುವೆನೆಂದು
ಹೇಳಿಕೊಂಡನು ಕಂಪಿಲಗೆ ॥೧೯॥ .../೧೮-೫೫

ನಿರ್ದಯದಲಿ [ರಾಯ]ನಾಡುವುದನು ಕೇಳಿ
ಎದ್ದನು ಚಾವಡಿಯಿಂದ ।
ಹೊದ್ದಿತು ರಾಮಗೆ ದ್ರೋಹಿಕೆಯೆಂದು ಅ
ಲ್ಲಿರ್ದ ಮಂತ್ರಿಯ ಕೂಡಿಕೊಂಡ ॥೨೦॥

ಆರು ಮಂದಿ ಪ್ರಧಾನರ ಕೂಡಿಕೊಂಡು
ಬೇರೆ ಏಕಾಂತವನಾಡಿ ।
ದೂರಿಂದ ತಲೆ ಮರೆಯಿಡುವರೆ ರಾಮನ
ದೂರ ಹೇಳಿದ ಮಂತ್ರಿಯೊಡನೆ ॥೨೧॥

ಅಲ್ಲಿಂದ ನಡೆದು ಬಂದನು ಬೈಚಪ್ಪನು
ಬಲ್ಲಿದ ರಾಮನಿದ್ದೆಡೆಗೆ ।
ಎಲ್ಲ ಮಂದಿಯ ಕುದುರೆಯ ಹೊರಡಿಸಿದ
ನಿಲ್ಲದೆ ತಾನೊಳಪೊಕ್ಕ ॥೨೨॥

ಚೆನ್ನಿಗ ರಾಮನ ಕರಕೊಂಡು ಬೈಚಪ್ಪ
ಉನ್ನತ ದುಃಖವ ಮಾಡಿ ।
ಹೊನ್ನಂಬ ನೀರೊಳೆ[ಚ್ಚುವ]ರುಂಟೆ ಧರೆಯೊಳು
ತನ್ನೊಳು ತಾ ಮರುಗಿದನು ॥೨೩॥

ಘಾತಗಿತ್ತಿಯ ಮನೆಗೇತಕೆ ಹೋದೆಯೊ
ಓತು ಬಲಿದ ಚೆಂಡನಿಡಲು ।
ಮಾತೆಯ ಅರಮನೆಯೊಳು ಚೆಂಡು ಬೀಳಲು
ಭೀತಿಗೊಳ್ಳುತ ತರಹೋದೆ ॥೨೪॥

ಧುರ[ಧೀರ] ಮನ್ನೇರು ಲಗ್ಗೆಯನಿಟ್ಟರೆ
ಮೊರೆದು ಚೆಂಡ ಪುಟ ನೆಗೆದು ।
ಭರದಿಂದ ಚಿಕ್ಕಮ್ಮನರಮನೆಯೊಳು ಬೀಳೆ
ಪ್ರೇಮದಿ ನಾ ತರಹೋದೆ ॥೨೫॥

ಅಣ್ಣಾ ಕಾಟಣ್ಣಾ ಲೆಗ್ಗೆಯ ನೋಡಿ ಇಟ್ಟರೆ
ಚಿಣ್ಣೆಗೆದು ಚೆಂಡು ಹಾರಿ ।
ಬಣ್ಣಿಸಿ ತಾಯರಮನೆಗೆ ಬೀಳಲು ಮು
ಕ್ಕಣ್ಣನಾಣೆಯು ತರಹೋದೆ ॥೨೬॥

ಸಲ್ಲದು ಚೆಂಡಿನಾಟವು ಎಂದು ತಾಯಿ ಪೇಳೆ
ನಿಲ್ಲದೆ ನಾನಾಡ ಹೋದೆ ।
ಇಲ್ಲದ ಮಾತನಾಡುವನಲ್ಲ ಬೈಚಪ್ಪ
ಬಲ್ಲಿದ ಪಶುಪತಿ ಬಲ್ಲ ॥೨೭॥

ಒಬ್ಬಳಿದ್ದಾಳೆಂದರಿಯೆ ಚಿಕ್ಕಮ್ಮ
ಉಬ್ಬಸದಲಿ ತರಹೋದೆ ।

ತಬ್ಬಿಕೊಂಡು ಬಿಡದಿರೆ ನೂಕಿ ಬಂದೆನು
ದುರ್ಭಿಕ್ಷೆ ಕೊಲೆಗೆಣಿಸಿದಳು ||೨೮||

ಹೆತ್ತ ತಂದೆಯು ತಾಯಿ ಕೊಲ್ಲೆಂದು ಕಳುಹಲು
ಒತ್ತಿ ಬಿಡಿಸಲಳವಲ್ಲ ।
ಸುತ್ತಿರ್ದ ವಿಧಿ ಕೊಲ್ಲಿಸಿತು ಬೈಚಪ್ಪ
ಒತ್ತೆ ಕಟ್ಟಿತು [ವಿಧಿತನ] ||೨೯||

ತಂದೆ ತಾಯಿಗಳು ಕೊಲ್ಲಲಿಯೆಂದು ಗ್ರಹಿಸಲು
ಬಂಧುಜನರು ಕಾಯಬಹುದೆ ।
ನಿಂದೆ ವಂದ್ಯತನ ತ[ನಗೇ]ಕೆನುತಲಿ
ಕೊಂದು ತೋರೆಂದ ಕಂಪಿಲಗೆ ||೩೦||

ಅಪ್ಪನ ರಾಣಿಗೆ ತಪ್ಪಿದೆನಾದರೆ
ಸರ್ಪಭೂಷಣ ಶಿವ ಬಲ್ಲ ।
ಚಿನ್ನದೊರೆಯ ಅಲಗನು ಕಿತ್ತು ರಾಮಯ್ಯ
ಎನ್ನ ಜೀವವ ಮಡಿಯೆಂದ ||೩೧|| ೧೦-೧೧೬/೧೯-೨೨

ತಪ್ಪು ಆದರೆ ಕೊಲ್ವೆನು ನಿನ್ನ ಎಲೆ ರಾಮ
ತಪ್ಪಿದರೆ ಪರಸತಿಗೆ ।
ತಪ್ಪೆನೊ ನಿನ್ನ ಜೀವಕೆಯೆಂದು ಬೈಚಪ್ಪ
ಅಪ್ಪಿಕೊಂಡನು ರಾಮುಗನ ||೩೨|| ೧೦-೧೧೭/೧೯-೨೩

ಉಪ್ಪಲಿಕರ ಸಿಂಗನ ಕರೆಸಿದನಾಗ
ತಪ್ಪದೆ ಏಕಾಂತವಾಡಿ ।
ಒಪ್ಪದಿಂದಲಿ ಬೆಳಗಾಗದ ಮುನ್ನವೆ
ಇಪ್ಪಂತೆ ಮಾಡೊಂದು ಗೃಹವ ||೩೩|| .../೧೯-೨೪

ತುರುಕರ ದಂಡು ಬರುತಿದೆ[ಯೆಂ]ದು ಬೈಚಪ್ಪ
[ಸ]ರಕನಿಂ[ಬಿ]ಡಲಿಕೆನುತ ।
ಹರುಷದಿ ಕಳುಹಿದ ಕರ ಬೇಗದಿಂದಲಿ
ಪರಿ ಹೊಸತಾಗಿರಬೇಕು ||೩೪||

ಕಡು ತವಕದಿ ನೀನು ನೆಲಮಾಳಿಗೆಗಳನು
ತಡೆಯದೆ ಮಾಡಬೇಕೆನುತ ।
ಉಡುಗೊರೆಯನು ಕೊಟ್ಟು ಕಳುಹರೆ ಹರಿತಂದು
ಕ[ಡು] ಬೇಗದಲಿ ಕಾಮಟಿಗರು ||೩೫||

ಮುನ್ನೂರು ಹಾರಿ ಗುದ್ದಲಿಗಳ ತೆಕ್ಕೊಂಡು
ಚೆನ್ನಾಗಿಯೆ ತೋಡಿ ಬೇಗ ।
ಬನ್ನವಿಲ್ಲದ ಗಾರೆ ಸುಣ್ಣಗಾರೆಯನಿಟ್ಟು
ಚೆನ್ನ ಮಂತ್ರಿಯ [ಬಳಿ]ಗೈದ ॥೩೬॥

ಕೂಳ [ಹೊತ್ತಿಗೆ] ವೇಳೆದಿ ನೆಲಮಾಳಿಗೆ
ಜಾಳಿಂದ್ರ ಬೆಳಗನುವಾಗೆ ।
ಹೇ[ಳಿ]ದ ಮುನ್ನ .... ಹರುಷದಿ
ತಾಳಿ ರಾಮನ ಬಳಿಗೈದಿ ॥೩೭॥

ತಲೆ ಕೊಡುವೆನು ಎನು[ತಿಹ] ಹದನನು
ಬಲ್ಲಿದ ಕೃತಕದ ಕೊಲೆಯನು ।
ಉಲಿವಾಗದ ಮುನ್ನ ನೆಲಮಾಳಿಗೆಯಲಿ ತಾ
ಕಲಿ ರಾಮನ ಸಂತವಿಟ್ಟ ॥೩೮॥ ೧೦-೧೧ಳ/...

ಏಳು ತಿಂಗಳು ಸಣ್ಣಕ್ಕಿ ಕಡಲೆ ಗೋದಿ
ಬೇಳೆ ಬೆಲ್ಲವು ಮೊದಲಾಗಿ ।
ಹೋಳಿಸಿದಷ್ಟ ಭೋಗವು ಬಿಳಿ ಎಲೆಗಳು
ಮೇಳದಿ ತಂದಿರಿಸಿದನು ॥೩೯॥

ದೀಪದ ಎಣ್ಣೆ ಹೂಸುವ ಎಣ್ಣೆ ಕುಪ್ಪೆಯು
ಒಪ್ಪುವ ನೆಲಮಾಳಿಗೆಯಲಿ ।
ಉಪ್ಪು ಮೆಣಸು ಹಿಂಗು ಜೀರಿಗೆ ಮೊದಲಾದ
ತಪ್ಪದೆ ತಂದಿರಿಸಿದರು ॥೪೦॥ .../೧೯-೨೯

ಮರೆದೆದ್ದು [ಮಹಾದೇವ] ಎನುತ ರಾಮಯ್ಯನು
ಅರುವುಳ್ಳ ಸಂಗತಿಗಳನು ।
ಹೊರೆಯಲಿರಿಸಿ ಇಳೆಯೊಳಗೊಬ್ಬರರಿಯದೆ
ತರನರಿವವರ ಕೂಡಿದನು ॥೪೧॥

ಅಂಗಮಂಗನು ಕೊಂಡೆಯಕಾರ ವಿರುಪನು
ಸಿಂಗನು ಚವುಲದ ಸಂಗ ।
ಸಂಗಡಿಗರ ಐವರ ಕೂಡಿ ಅ[ವ]ರಿಗಾರು
ತಿಂಗಳ ಸಂಬಳಗೊಟ್ಟ ॥೪೨॥ ೧೦-೧೧ಚ/...

ಭೀತಿ ಬೇಡವೊ ರಾಮ ಪಾಂಡವರೊನ[ವಾಸ]
ಸೀತೆ ವನದೊಳಗಿರ್ದುದಿಲ್ಲವೆ ।

ಕೃತಿಯಿಂದಲಿ ವರ ರಾಯರ ಕಾದಿಸಿ
ಭೀತಿಯ ಬಿಡಿಸಿ ಕಾಣಿಸುವೆ ||೪೩||

ಬೀಗಮುದ್ರೆಯನಿಕ್ಕಿ ಬಂದ ಬೈಚಪ್ಪನು
ಬೇಗ ಬೇಹಿನವರಿಗರುಹಿ ।
ರಾಗದಿಂದಲಿ ಏಕಾಂತದಿ ಹೇಳಿನ್ನು
ಸಾಗಿದನಾ ಹೊಸಮಲೆಗೆ ||೪೪||

ಮಾಯಕಾರನು ಬೈಚಪ್ಪನು ಬೇಗ
ರಾಯಗಂಗವ ತೋರಬೇಕು ।
ಕಾಯ[ಜ] ಸಮರೂಪ ಕಳ್ಳರಾಮನು ಇದ್ದ
ಲಾಯದ ಮನೆಗೆಯ್ದಿದನು ||೪೫||

ಕಳು[ಹಿಸಿದ]ನು ಕೊಲ್ಲಲಿಪ್ಪಾ[ತನ]ನು
ಉಳಿಹಿಸಿ [ಕೋಣೆ]ಗೆ ಹಾಕಿದ ।
ಕಲಿಗಳರಸ ಬೈಚಪ್ಪ ಬಂದನು ಬೇಗ
ಕಳಬಂಟ ರಾಮನಿದ್ದೆಡೆಗೆ ||೪೬||

ಬಂದು ಹೇಳಿದ ಕಳ್ಳಬಂಟ ರಾಮನ ಕೂಡೆ
ಒಂದು ಮಾತನು ಬೈಚಪ್ಪ ।
ಇಂದು ಚೆನ್ನಿಗ ರಾಮಯ್ಯನ ತಲೆಯನು
ಕೊಂಡು ತಾರೆಂದ [ಕಂಪಿಲನು] ||೪೭||

ಆತನ ತಲೆಯನೇತಕೆ ತರ ಹೇಳಿದ
ಭೂಮಿಯೊಳಗೆ ಸತ್ಯನವನು ।
ಸೋಮಧರನು ಬಲ್ಲನೆನುತ ಮಂತ್ರಿಯೊಳು
ಕಳ ರಾಮನು ಕೇಳಿದನು ||೪೮||

ತಡೆಯದೆ ಚಂಡನಿಡಲು ಅತ್ತ ಬೀಳಲು
ನಡುಗುತ ಚೆಂಡ ಬೇಡಿದರೆ ।
ಕಡು ತವಕದಿ ಮುಂದಲೆಯ ಹಿಡಿ[ಯೆ] ರತ್ನಿ
ಒಡನೆ ಕೆಡಹಿ ರಾಮ ಬಂದ ||೪೯||

ಬಲವಂತವ ತಾಳಲಾರದೆ ಮೈಯನು
ಬಳೆಯನೊಡೆದು ಸೀಳಿಕೊಂಡು ।
ಬಲು ಕೃತಕದಲಿ ಕಂಪಿಲಗೆ ತೋರಲು ಮುನ್ನ
ಚೆಲುವ ರಾಮನ ಕೊಲಿಸೆಂದ ||೫೦||

ಎನ್ನೊಡೆಯನ ನೀನು ಕೊಲಬೇಡ ಬೈಚಪ್ಪ
ಚೆನ್ನ ರಾಮನ ಪ್ರಾಣ ಉಳುಹೊ ।
ತನ್ನ ತಲೆಯ ಶೃಂಗರ ಮಾಡಿ ಕಂಪಿಲಗೆ
ಭಿನ್ನವಿಲ್ಲದೆ ತೋರೆಂದ ॥೫೧॥

ಹಿಂದಕೆ ನನ್ನ ಪ್ರಾಣ[ವುಳಿಸಿದ] ಮಂತ್ರಿ
ಇಂದು ರಾಮುಗ ಇದ್ದ ತಲೆಯೋ ।
ಚೆಂದದಿಂದಲಿ ಎನ್ನ ಶೃಂಗಾರಿಸಿ
ಮುಂದೆ ತೋರಯ್ಯ ರತ್ನಾಯಿಗೆ ॥೫೨॥

ಕಡುಗಲಿ ರಾಮಗೆ ಕೊಲ್ಲದ ಹಾಗೆಯು
ಕೊಡು ಮಂತ್ರಿ ಎನಗೆ ನಂಬುಗೆಯ
ತಡೆಯದೆ ನನ್ನ ತಲೆಯ ನಾನು ಕೊಯಿದೀವೆ
ಕೊಡುವೆನು ನಿನ್ನ ಕೈಯೊಳಗೆ ॥೫೩॥

ಒಬ್ಬರೊಬ್ಬರಿಗೆ ನಂಬುಗೆಗೊಟ್ಟು ಬೈಚಪ್ಪ
ನಿಬ್ಬರದಲಿ ತೆಗೆದಪ್ಪಿ ।
ಹಬ್ಬಿತೆನಗೆ ಕರ್ಮವೆನುತಲಿ ಎಂದಾಗ
ಉಬ್ಬಿಯೆ ಅಳತೊಡಗಿದನು ॥೫೪॥

ಸಂಕೋಲೆಯನು ಕಡಿಸಿ[ಯ]ನುವಾದನು
ಅಂಕಕಾರನು ರಾಮುಗನ ।
ಬಿಂಕದಿಂದಲಿ ಹೊಸರೂಪು ಚೆಲ್ವಿಕೆಯನು
ಅಂಕುರಿಸಿದನು ಆ ಕ್ಷಣಕೆ ॥೫೫॥

ಬೊಗ್ಗರಿ ಪೊನ್ನೆಯಗೆಯಿಸಿದ ಬಿಳಿಗಡ್ಡವ
ವಿವರಿಸಿ ಹುಬ್ಬ ತಿದ್ದಿಸಿದ ।
ತವಕದಿಂದಲಿ ಮಜ್ಜನಮಾಡಿ ಅಮೃತ
ಸವಿದು ದರ್ಶನೆ ತೇಗಿದನು ॥೫೬॥

ಹೊತ್ತು ಹೋಗುತಲಿದೆ ಎನುತ ಪ್ರಧಾನಿಗೆ
ಮತ್ತೊಂದು ಬುದ್ಧಿಯನೆಣಿಸಿ ।
ಕತ್ತರಿಸೆನ್ನ ತಲೆಯನು ಎಂದೆನುತಲಿ
ಮತ್ತೆ ಆಯತವಾಗಿ ನಿಂದ ॥೫೭॥

ಹುಟ್ಟು ಬಾ[ಳ್ವ]ರ [ತಾಯ]ಲಿಯೆಂದು ಬೈಚಪ್ಪ
ಕುಟ್ಟಿದ ಕರದ ಖಂಡೆಯಲಿ ।

ನೆಟ್ಟನೆ ಗೋಣು ಹರಿದು ಕಳ ರಾ[ಮುಗ]
ಬಿಟ್ಟನು ಬೇಗ ಕಂಗಳನು ||೫೮||

ಗರಿಗರಿಲು [ಎನ್ನುತ] ಬೈಚಪ್ಪನು
ಅರಿದನು ಕಿತ್ತ ಕತ್ತಿಯಲಿ ।
ಚೆನ್ನಿಗ ರಾಮನ ಕಡುಕು ಪೊಂಗಲವನು
ತಂದು ಕರ್ಣಿಕಿ[ಕ್ಕುತಲಾಗ] ||೫೯||

ಹೊನ್ನ ನಾಮವ ನೊಸಲೊಳಗಿಕ್ಕಿ ಕಿವಿಯಲ್ಲಿ
ಉನ್ನಂತ ಪುನುಗ ತುಂಬಿದನು ।
ಚೆನ್ನ ಚಂದ್ರಿಕೆ [ರುಮಾ]ಲನು ತಂದು ತಲೆಗಾಗ
ಬಣ್ಣಿಸಿ ಸುತ್ತಿ ಚಿಮ್ಮುರಿಯ ||೬೦||

ತಡೆಯದೆ ಗಂಧ ಕಸ್ತುರಿಯ ಕುಂಕುಮವನು
ಸಡಗರದಿಂದ ಲೇಪಿಸಿದ ।
ನಿಚ್ಚಟ ಕಳ್ಳರಾಮನ ತಲೆ ಬೇಗದಿ
ಮುಚ್ಚಿ[ಸಿದ್ದಿತು] ಬಾಯಿದೆರೆಯ ||೬೧||

ಅಚ್ಚರಿಯ ವೀರನೆನುತ ಪ್ರಧಾನನು
ಮುಚ್ಚಿ ಹಮ್ಮೈಸಿದನಾಗ ।
ಸರ್ವದೋಷವು ನನಗಾಯಿತೆನುತ ಮಂತ್ರಿ
ಉನ್ನಂತ ದುಃಖ ಮಾಡಿದನು ||೬೨||

ಚಿನ್ನದ ಹರಿವಾಣದಿ ತಲೆಯನು ಬೇಗ
ಭಿನ್ನವಿಲ್ಲದೆ ಹೊತ್ತುಕೊಂಡು ।
ಚೆನ್ನ ಕಂಪಿಲನ ವಾಲಗಕೆ ತಂದನು ಮಂತ್ರಿ
ತನ್ನ ಭಟರ ಕೂಡಿಕೊಂಡು ||೬೩||

ಕೊಂಡು ಬಂದನು ತಲೆಯನು ಮಂತ್ರಿ ಬೇಗದಿ
ಗಂಡು ಕಂಪಿಲನ ವಾಲಗಕೆ ।
[ಕೊಂ]ಡೆನು ಚೆನ್ನ ರಾಮನ ತಲೆಯೆಂಬುದ
ಮಂಡಲಪತಿಯೆ ಕಂಪಿಲ[ನೆ] ||೬೪||

ಇದು ರಾಮನ ತಲೆ ಇದು ದೇವಿಶೆಟ್ಟಿಯ ಲಿಂಗ
ಇದು ನಲ್ಲ ನಾಗನ ತಲೆಯೊ ।
ಇದು [ಮಾದಿಗ ಹಂಪನ ಕಾಟನ ತಲೆಯೊ]
ಇದು ಸಿಂಗಮಂಗನ ತಲೆಯೋ ||೬೫||

ಉರುವ ಮನ್ನೆ[ಯ]ನ ತಲೆಯ ಹೊಯಿದು ಬೇಗದಿ
ಮುರಿದು ಹಾಕಿದೆನು ಗೋಣುಗಳ ।
ಕೊರೆದು ತಂದೆನು ಚೆನ್ನ ರಾಮನ ತಲೆಯ
ಕುರುಹಿದೆ ನೋಡಿ ಚಿತ್ತೈಸು ||೬೬||

ಕೆಟ್ಟನು ಕುರುಹ ಕಂಡನು ಕಂಪಿಲರಾಯ
ಇಟ್ಟೆರ್ದ ಕಡುಕು ಪೊಂಗಲನು ।
ದಿಟ್ಟ ರಾಮನ ಕುರುಹ ಕಾಣಿತ ಕಂಪಿಲ
ಕುಟ್ಟಿಕೊಂಡನು ಎದೆಬದಿಯ ||೬೭||

ಕಂದನ ಕೊಲ್ಲಬಹುದೆ ಪಾಪಿ ಬೈಚಪ್ಪ
ಒಂದು ಮಾತಿಗೆ ನೀನು ಬೇಗ ।
ಎಂದು ಹುಟ್ಟುವ ನನ್ನ ಮಗನು ರಾಮುಗನೆಂದು
ನೊಂದು ಗದ್ದುಗೆಯಿಂದ ಬಿದ್ದ ||೬೮||

ನೇಮಿಯ ಸುರಿತಾಳನ ಗಂಡ [ರಣರಂಗ]
ಭೀಮನಳಿದ ಚೆನ್ನರಾಮ ।
ಭೂಮಿಯೊಳಗೆ ಎನ್ನನಾರು ಲೆಕ್ಕಿಪರೆಂದು
[ಪ್ರಾ]ಮರನಂದೊರಗಿದನು ||೬೯||

ಹೆಸರು ಅಡಗಿತು ಕೊಮಾರ ರಾಮಯ್ಯನ
ದೆಸೆಯು ಹೋ[ಯಿ]ತು ಕಂಪಿಲನ ।
ಅಸುರರ ದಾಳಿ ಬಂದರೆ ಕಾದುವವರಾರು
ದೆಸೆಯ ಮನ್ನೆಯರಂಜರೆಂದ ||೭೦|| ೧೦-೧೬೧&೧೬೨/೯೭೮

ಆಡಬಾರದ ಮಾತು ನೋಡಬಾರದ [ಕಂ]ಡೆ
ಕೆಡಿಸಿದರೇನೊಬ್ಬರಳವೆ ।
ಬೇಡವಿನ್ನೇತಕೆ ರಾಮನ ಹಂಬಲ
ಬೇಡಿಕೊಂಡನು ಕಂಪಿಲನ ||೭೧||

ನನ್ನ ಘಾತಕಿಯು ರತ್ನಿ[ಗೆ] ಈಗ ಬೇಗದಿ
ಚೆನ್ನ ರಾಮಯ್ಯನ ತಲೆಯ ।
ಬನ್ನವಿಲ್ಲದೆ ತೋರೆಂದು ಕಂಪಿಲರಾಯ
ತನ್ನ ಮಂತ್ರಿಯ ಕಳುಹಿದನು ||೭೨|| .../೧೯-೮೦&೮೧

ಕೊಂಡು ಬಂದನು ಹರಿವಾಣದಿ ತಲೆಯನು
ದಿಂಡೆಯ ರತ್ನಿಯ ಬಳಿಗೆ ।

ಬಂಡುಮಾಡಿದ ತಲೆಯೆಂದು ರಾಮಯ್ಯ[ನ]
ಮಂಡೆಯ ಹಿಡಿದು ನೋಡಿದಳು ||೭೩|| .../೧೯-೮೨

[ಮೋ]ಸದಿಂದಲಿ ಬಂದೆನ್ನ ಮನೆಯ ಹೊಕ್ಕು
ಲೇಸಿನಿಂದಲಿ ಹಿಡಿದೆಳೆದ ।
ಗಾಸಿ ಮಾಡಿದ ತಲೆಯೆಂದು ರಾಮಯ್ಯನ
ಮೀಸೆಯ ಹಿಡಿದು ನೋಡಿದಳು ||೭೪|| .../೧೯-೮೩

ದಿಗಿಲನೆ ರತ್ನಾಯಿ ರಾಮಯ್ಯನ ಗಲ್ಲ
ದುಗುರ ಕುರುಹ ನೋಡೇನೆಂದು ।
ಮಿಗೆ ತವಕದಿ ಎದ್ದು ನೋಡಿದಳಾಗಲೆ
ಜಗದೊಳು ಹೊಸಪರಿಯೆನುತ ||೭೫||

ಬಲ್ಲಿದ ಹೆತ್ತ ತಂದೆಯ ಅಭಿಮಾನಕ್ಕೆ
ನಿಲ್ಲದೆ [ಎಳೆ]ಸಿದ ದ್ರೋಹಿ ।
ಒಲ್ಲದಿರ್ದರೆ ಎನ್ನ ಎದೆಗೆಡಿಸಿದನಾಗ
ಗಲ್ಲವ ಹಿಡಿದು ನೋಡಿದಳು ||೭೬||

[ಮೆಟ್ಟದಿರಲ]ಮ್ಮ ಪಾದದಿ ತಲೆಯನೆಂದು
ನೆಟ್ಟನೆ .... ।
[ಮೆ]ಟ್ಟೊದು ನಿನಗೆ ದೋಷಗಳೆಂದು ಬೈಚಪ್ಪ
ಸಿಟ್ಟುಗುಟ್ಟಿಯೆ ಗಜರಿದನು ||೭೭||

ಜಗದೊಳು ಇವ ನನ್ನ ಚಿಗುರಿ ಕಾಡಿದನೆಂದು
ಜಗಿದು ತಲೆಯ ಮೆಟ್ಟಿನಿಂದು ।
ತೆಗೆದು ಹಾಕಿಸಿದ[ಳು] ರಾಮನ ತಲೆಯನು
ಅಗಳಿನೊಳಗೆ ಆ ಕ್ಷಣದಿ ||೭೮|| ../೧೯-೮೫

ಬೊಬ್ಬಿಟ್ಟು [ಅರು]ತಲಿರಲು ರಾಮನ ತಲೆ
ಗಬ್ಬಿ ರಾಮುಗ ನಿಜವೆಂದು ।
ಉಬ್ಬಿದಳಾಗ ರತ್ನಾಯಿ ಮನದಲ್ಲಿ
ತಬ್ಬಿಬ್ಬುಗೊಂಡಳಾಕ್ಷಣದಿ ||೭೯|| ../೧೯-೮೬

ನೆರೆಗಲಿ ರಾಮನ ಕೊಂದರೆಂದೆನುತಲಿ
ಹಿರ್ರನೆ ಹಿರಿದು ಹಿಗ್ಗಿದಳು ।
ಉರ್ವಿಯೊಳಗೆ ಎನ್ನ ಛಲವು ಗೆದ್ದಿತು ಎಂದು
ಕರಿಗೊರಳಗೆ ನಮಿಸಿದಳು ||೮೦|| ../೧೯-೮೭

ಎನ್ನನಾದರೆ ಒಂದು ಬಾರಿಗೆ ನೆರೆದರೆ
ತನ್ನ ರಾಜ್ಯದಿ ಸುಖವಿರಲು ।
ಹಿಂದೆ ಮುಂದರಿಯದೆ ಸತ್ತನೆನುತಲಿ ರತ್ನಿ
ತನ್ನೊಳು ತಾ ಮರುಗಿದಳು ॥೮೧॥

ಅಲ್ಲಿಗಲ್ಲಿಗೆ ಹುಟ್ಟಿತು ಹೊಸ ಸುದ್ದಿಯು
ಎಲ್ಲರು ಕಡು ದುಃಖದಲಿ ।
ಬಲ್ಲಿದ ರಾಮನ ಮೆಲ್ಲನೆ ಕೊಂದರು
ಸಲ್ಲದು ಅವಗದು ಸಾ[ವು] ॥೮೨॥

ಹರಿಯಲದೇವಿಯು ಮಗನ ಸುದ್ದಿಯ ಕೇಳಿ
ತರಹರಿಸದೆ ಬಿದ್ದು ಹೊರಳಿ ।
ಸರಸದಿ ಕೊಂದಳು ರತ್ನಿ ಈ ಘಾತಕಿ
ಹರುಷವಾಯಿತೆ ಕಂಪಿಲಗೆ ॥೮೩॥

ಜರಿಯಲ್ಲಿ ನೂಕಿಸಿದರೊ ರಾಮಯ್ಯನ
ಮರೆಯ ಕೊರಳ ಕಾಯಿದಾರೋ ।
ಹೊರಯಿಕೆ ಹೊರಟು ರಾಮನ ಹೆಂಡಿರು ಕೇಳಿ
ಮೊರೆಯಿಟ್ಟರು ಕಂಪಿಲಗೆ ॥೮೪॥

ಸೂಲಕ್ಕೆ ತೆಗೆದರೊ ಚೆನ್ನ ರಾಮಯ್ಯನ
ಕಾಳ ಕತ್ತಲೆಯೊಳಗೊಯಿದು ।
ಹಾಳ ಹಗೆಯವ ನೂಕಿದರೊ ಕಂದನ ಎಂದು
ಗೋಳಿಟ್ಟಳು ಹರಿಯಮ್ಮ ॥೮೫॥

ಸಾವಾಗಲಾರ ನೆನೆದೆಯೊ ಕಂದಯ್ಯನೆ
ಕಾಯ್ವರಿಲ್ಲದೆ ಮಡಿದಾ ।
ಆವ ಪರಿಯಲಿ ನಾ ಮರೆಯಲೊ ರಾಮಯ್ಯ
ಬೇವುತಿರ್ದಳು ಹರಿಯಮ್ಮ ॥೮೬॥

ಹಡೆದ ಒಡಲು [ಸುಡುತಿದೆ]ಯೆಂದು ಹರಿಯಮ್ಮ
ಕಡುಗಲಿ ರಾಮಯ್ಯ ನಿನ್ನ ।
ಅಡಿಗಡಿಗೊಮ್ಮೆ ಕರೆವ ಬಾಯಿ ಅಡಗಿತು
ಮೃಡ ಕೊಡು ಸಾವನೆಂದೆನುತ ॥೮೭॥

ನಿರ್ಮಳವಾಯಿತೆ ಕಂಪಿಲರಾಯಗೆ
ಧರ್ಮದ ಕೊಲೆಯ ಕೊಲ್ಲಿಸಿದ ।

ಕರ್ಮವಾಸದಿ ರಾಮ ಹೋದನೆಂದತ್ತಳು
ದುರ್ಮುಖಿ ಕೊಲೆಗೇಣಿಸಿದಳು ||೮೮||

ನಿನ್ನ ಮುಂದೆ ಎನಗೆ ಸಾವು ಬಂತು ಎಂದು
ನನ್ನನು ಇರಿಸಿ ನೀ ಹೋದೆ ।
ಭಿನ್ನವಿಲ್ಲದಲಿ ಕೆಟ್ಟೆನೆಂದೆನುತಲಿ
ಉನ್ನಂತವಾಗಿ ಮರುಗಿದ[ಳು] ||೮೯||

ಸೆಳೆನಡುವಿನ[ಬ್ಬ]ರಕೆ ಮುರಿವಂತಾ[ದಳು]
ಉಳಿಯಳು ರಾಮನ ನೆನೆದು ।
ಪ್ರಳಯದ ಮಾರಿ ಬಂದಿತು ನಮಗೀಗಲೆ
ಹೊಳೆವ ಕಂಗಳ ಚೆನ್ನಿಗ ರಾಮ ||೯೦||

ಬಲ್ಲಿದ ರಾಮ ನೀನೆಲ್ಲಿ ಹೋದೆಯೊ ಎಂದು
ನಿಲ್ಲದೆ ಹುಡಿಯಲ್ಲಿ ಹೊರಳಿ ।
ಕಲ್ಲು ಮರನ [ಹಾ]ಯಿದು ಅತ್ತಳು ಹರಿಯಮ್ಮ
ವಲ್ಲಭನರಮನೆಯೊಳಗೆ ||೯೧|| ೧೦-೧೮೬/೧೯-೯೫

ಹೊನ್ನ ಕಳಸ ಮುರಿವುದ ಕಂಡೆ ಕನಸಿಲಿ
ಮೊನ್ನೆ ಇಂದಿಗೆ ಮೂರು ದಿನವು ।
ಇನ್ನಾರಿಗ[ಳಿ]ವು ಬಂದಿತು ಎಂದು ಇದ್ದೆನು
ಚೆನ್ನರಾಮಗೆ ಬಂತು ಮರಣ ||೯೨|| ೧೦-೧೮೯/...

ಬೇರೊಂದು ಮನೆಯಲಿ ರಾಯನ ಸ್ತ್ರೀಯರು
ಬಾರಿಬಾರಿಗೆ ಚಿಂತಿಸುತ ।
ಧೀರ ಕುಮಾರ ರಾಮನು ಎಮ್ಮರಮನೆಗೆ
ಬಾರದ ಕಾರಣವೇನು ||೯೩||* ೧೦-೨೧೫/೧೯೧೦೫

ಇಂದಿಗೆ ನಾಲ್ಕು ದಿನದೊಳೆನ್ನರಮನೆ
ನಿಂದ ಕಂಬಗಳುರಿವುತಲಿ ।
ಅಂದು ನಮ್ಮಮ್ಮಾಜಿ ಕಳುಹಿದ ಕರಬೋನ
ಒಂದುವಿಲ್ಲದೆ ಒಡೆದವುಕೋ ||೯೪|| ೧೦-೨೧೬/೧೯-೧೦೬

ರಾಮಗೆ ಹಿಡಿವ ಸತ್ತಿಗೆ ಮುರಿವುದ ಕಂಡೆ
ಪ್ರೇಮದಿ ನಾನಿಟ್ಟ ವಾಲೆ ।

---

* ಕಥೆಗೆ ಸಂಬಂಧ ಕಲ್ಪಿಸುವುದರ ಸಲುವಾಗಿ ಈ ಪದ್ಯವನ್ನು "ಹೊಸಕುಮಾರರಾಮನ ಸಾಂಗತ್ಯ"(೧೦-೨೧೫) ದಿಂದ ಎತ್ತಿಕೊಳ್ಳಲಾಗಿದೆ.

ಭೂಮಿಗೆ ಬಿದ್ದು ಕಳೆವುದ ಕಂಡೆ ಕನಸಿಲಿ
[ಕಾಮಾಯಿ] ಶಕುನ ಹೇಳಿದಳು ||೯೫|| ೧೦-೨೧೬/೧೯-೧೦೯

ಕಿರಿಯ ಹೆಂಡತಿ ಹೇಳಿದಳೊಂದು ಶಕುನವ
ಚಿತ್ತಜ ಸಮರೂಪ ರಾಮ ।
ಅರ್ತಿಯಿಂದಲಿ ಏರುವ ಮಂಗಳ ಬೊಲ್ಲ
ಸತ್ತುದ ಕಂಡೆ ಕನಸಿನಲಿ ||೯೬|| ೧೦-೨೧೭&೧೮/೧೯-೧೧೦

ಕೆಟ್ಟ ಮನದ ರತ್ನಿಯ ಮಾತನು ಕೇಳಿ
ಪಟ್ಟದಾನೆಯ ಕೊಲ್ಲಬಹುದೆ
ಮುಟ್ಟೋದು ಅಳಲು ಕಂಪಿಲ ಮಾವಗೆನುತಲಿ
ನಿಷ್ಠುರದಲಿ ಅಳಲಿದರು ||೯೭||

ಕೋವಿದ ರಾಮಯ್ಯ ತೀರಿದ ಬಳಿಕ ಸಾವು
ಜೀವಿಸಬಹುದೆ ಲೋಕದೊಳು ।
ಸಾವು ತಪ್ಪದು ಕಾಲಕೆಯೆಂದೆನುತಲಿ
ತೀವಿ ಶೃಂಗರವಾದರಾಗ ||೯೮||

ಹಿಡಿದು ಕಠಾರಿಯ ಬಲಗೈಯಲಿ ಅವರು
ಎಡದ ಕೈಯಲಿ ಕನ್ನಡಿಯು ।
ನಡೆದರು ಕಂಪಿಲನೋಲಗಕೆಯು ಬೇಗ
ತಡೆಯದೆ ಕಿಚ್ಚು ಬೇಡುವರೆ ||೯೯|| ೧೦-೨೩೫/೧೯-೧೧೭

ಬಂದರು ರಾಯ ಕಂಪಿಲನ ವಾಲಗದೊಳು
ನಿಂದು ಬಿನ್ನಹವ ಮಾಡಿದರು ।
ಇಂದು ರಾಯನ ಯಾವ ಮನ್ನೇನ ಮೇಲಟ್ಟಿ
ಕೊಂದೆಯೊ ಕಂಪಿಲ ಮಾವ ||೧೦೦|| ೧೦-೨೩೫/...

ಆವ ದೇಶಕೆ ಠಾಣ್ಯವಿಕ್ಕಿದೆ ರಾಯನ
ಆವ ಮನ್ನೆನ ತರಹೇಳಿ ।
ಆವ ದೇಶವ ಸಾಧ್ಯಮಾಡು ಎನುತಲಿ
ತೀವಿ ಹೇಳಿದೆಯೊ ಕಂಪಿಲನೆ ||೧೦೧|| ೧೦-೨೩೧/೧೯ ೧೨೨

ಮಲೆವ ರಾಯರುಗಳ ತರಹೇಳಿ ಬೇಗದಿ
ಒಲಿದು ಹೇಳಿದೆ ಕಂಪ ಮಾವ ।
ಚೆಲುವ ರಾಮ[ಗೆ ಏನ] ತರಹೇಳಿದೆ ಮಾವ
ಸಲೆ ಐವರು ಕೇಳಿದರು ||೧೦೨|| .../೧೯-೨೨೩

ಅಂಬಲಿಗಾಗಿ ಅಮೃತವ ಕೆಡಿಸುವರೆ
ಡೊಂಬಿತಿಗಾಗಿ ರಾಮುಗನ ।
ಕಂಬಳಿಗಾಗಿ ದೇವಾಂಗವ ಕೆಡಿಸುವರೆ
ನಂಬುಬಹುದೆ ಮಾವ ನಿನ್ನ ||೧೦೩|| ೧೦-೨೫೫/೧೯-೧೨೬

ಕಕ್ಕೆಗಾಗಿ ಕಲ್ಪತರುವ ಕೆಡಿಸುವರೆ
ಎಕ್ಕೆಗಾಗಿ ಬಾವನ್ನವನು ।
ಚಿಕ್ಕ ಹೆಂಡತಿಯ ಮಾತನು ಕೇಳಿ ರಾಮನ
ಧಿಕ್ಕನೆ ನೀನಿರಿಸುವರೇ ||೧೦೪|| ೧೦-೨೫೬/೧೯-೧೩೩

ಕಾಗೆಗಾಗಿ ಕೋಗಿಲೆ ಕೊಲ್ಲಿಸುವರೆ
ಗಂಗೆಗಾಗಿ ಗಿಣಿ ಮರಿಯ ।
ತೇಗಕೆ ಆಗಿ ಚಂದನವ ಕೆಡಿಸುವರೆ
ಹೀಗೆ ರಾಮನ ಕೊಲ್ಲಬಹುದೆ ||೧೦೫||

ಕಾಗೆಗಾಗಿ ಕೋಗಿಲೆಯ ಕೊಲ್ಲಿಸುವರೆ
ಗುಬ್ಬಿಗಾಗಿ ಸಾಳುವನ ।
ಕೊಬ್ಬಿದ ರತ್ನಿಯ ಮಾತ ಕೇಳುತ ಮಾವ
[ಗಬ್ಬಿ] ರಾಮನ ಕೊಲ್ಲಬಹುದೆ ||೧೦೬||

ಕತ್ತೆಗೆ ಆಗಿಯು ಉತ್ತಮದ ತೇಜಿಯ
ಮತ್ತೆ ಏರುವರುಂಟೆ ಮಾವ ।
ಎತ್ತಲೆಂದರಿಯದೆ ರಾಮನ ಕೊಲ್ಲಿಸಿದೆ
ಮತ್ತೆ ಕುಮ್ಮಟ[ಕು]ಳಿವುಂಟೆ ||೧೦೭||

ದಿಟ್ಟ ರಾಮನು ಸತ್ತ ಸುದ್ದಿಯನೆಲ್ಲವ
ನೆಟ್ಟನೆ ನೇಮಿ ಕೇಳಿದರೆ ।
ಬಿಟ್ಟಲ್ಲಿ ಬಿಡದೆ ಬಂದು ಹೊಸದುರ್ಗವ
ಸುಟ್ಟು ಸೂರೆಯ ಹೊಯಿಸುವನು ||೧೦೮||

ಕಾರಣವಿಲ್ಲದೆ ಕೊಂದೆ ಕಂಪಿಲ ಪಾಪ
ಬಾಣವಾಗಿಯೆ ತಾಗುವುದು ।
ಪ್ರಾಣಗಂಟಕಿಯು ರತ್ನಿಯ ಮಾತನು ಕೇಳಿ
ಜಾಣ ರಾಮನ ಕೊಲ್ಲಬಹುದೆ ||೧೦೯||

ಕಿರಿಯ ಹೆಂಡತಿಯ ಮಾತನು ಕೇಳಿ ರಾಮನ
ಇರಿಸುವರೆ ಅಯ್ಯೋ ಎಂದು ।

ಒರಲಿ ಬಿದ್ದ[ರು] ಪಾಪವು ತಾಗುವುದೀಗ
ತೆರನನರಿಯದ ಕಂಪ ಮಾವ ||೧೧೦||

ಕಣ್ಣಲಿ ಕರ ಚೆಲ್ವ ರಾಮನ ಕೊಲ್ಲಿಸಿದೆ
ತಣ್ಣಗಾಯಿತೆ ಕಂಪಮಾವ ।
ನುಣ್ಣಾದ ಕರುಳನುಣ್ಣೆಸಿದಳೊ ರತ್ನಿ
ತಣ್ಣಗುಳಿದಳು ನಿನ್ನರಸಿ ||೧೧೧|| ೧೦-೨೬೪/...

ನಿಚ್ಚಟ ರಾಮನು ಮುಂಚಿ ಹೋಗುತಲಾನೆ
ಅಚ್ಚರಿಯಾಗಿಸಲು ಬೇಗ ।
ಉಚ್ಚಾಹದಲಿ ಗಂಡನ ಕೂಡಿಕೊಳಬೇಕು
ಕಿಚ್ಚ ಪಾಲಿಸು ಕಂಪ ಮಾವ ||೧೧೨|| ೧೦-೨೬೬/೧೯-೧೩೪

ಬೇಡ ನಿಮ್ಮತ್ತೆಯ ಕೂಡಿಕೊಳ್ಳಿರಿ ನೀವು
ನಾಡನು ಹಂಚಿ ಕೊಡುವೆನು ।
ರೂಢಿಗಧಿಕ ರಾಮನ ಬಿಟ್ಟಿಹುದಿನ್ನು
ಖೋಡಿಯಲ್ಲವೆ ಕಂಪ ಮಾವ ||೧೧೩|| ೧೦-೨೭೪/೧೯-೧೩೫

ಮುಂಡೆತನಕೆ ಬೇರೆ ರಾಜ್ಯವ ಕೊಡಿಸು[ವೆ]
ಚಂಡಿತನವು ಬೇಡಮ್ಮಗಳೇ ।
ಗಂಡುಗಲಿ ರಾಮನ ಬಿಟ್ಟು ಇಹುದಿನ್ನು
ಭಂಡ ಅಲ್ಲವೆ ಕಂಪ ಮಾವ ||೧೧೪|| ೧೦-೨೭೫/೧೯-೧೩೬

ಆನೆ ಸಾಯ್ವಾಗ ಆನೆಯ ಮೇಲೆ ಇರುತಿಹ
ಹೇನು ಸಾಯ್ವುದು ಅರಿದಲ್ಲ ।
ಆನೆ ರಾಮನ ಬಿಟ್ಟು ನಾವು ಇಲ್ಲಿಹುದಿನ್ನು
ಹೀನವಲ್ಲದೆ ಕಂಪ ಮಾವ ||೧೧೫||

ಎಂದ ಮಾತನು ಕೇಳಿ ಬಂದ ಬೈಚಪ್ಪನು
ನಿಂದು ರಾಯಗೆ ಹೇಳಿದನು ।
ಸಂದೇಹವೇತಕೆ ಕಳುಹಿಕೊಡಿವರನು
ಇಂದು ರಾಮನ ಕೂಡಿಕೊಳಲಿ ||೧೧೬||

ಗಚ್ಚಿನ ಚಾವಡಿಯೊಳಗೆ ಕಂಪಿಲರಾಯ
ನಿಚ್ಚಟ ಮನ್ನೇರು ಸಹಿತ ।
ಅಚ್ಚರಿಯಾಗಿ ತನ್ನ ಸೊಸೆಯರಿಗೆಯು ಬೇಗ
ಕಿಚ್ಚ ಪಾಲಿಸಿದ ಕಂಪ[ಯ್ಯ] ||೧೧೭||

ವೀಳ್ಯವನು ಕೊಟ್ಟು ಸೊಸೆಯರ ಕಳುಹಿದ
ದಾಳಿಗೊಂಬಂತೆ ಸ್ವರ್ಗವನು ।
ಮೇಳೈಸಿಯೆ ನಡೆದರು ಅರಮನೆಗಾಗಿ
ಲೋಲೆಯರು......... ॥೧೧೮॥

ಚಿಪ್ಪಿಗರನು ಕರೆದನು ಕಂಪಿಲರಾಯ
ಕರ್ಪೂರ ವೀಳ್ಯವ ಕೊಡಿಸಿ ।
ತಪ್ಪದೆ ಐದು ಕುಪ್ಪಸಗ[ಳ ಗೆಯ್ಯೆಂದು]
ಕರ್ಪೂರ ವೀಳ್ಯವ ನೀಡಿ ॥೧೧೯॥

ವಿಶ್ವಕರ್ಮನು ನಿರ್ಮಿಸಿದಂತೆ ಕುಪ್ಪಸವು
ಹೊಸ ಪರಿಯಾದವು ಕ್ಷಣದಿ ।
ಎಸೆವ ಕೆಲಸದಿ ರವಿಕೆಯು ಟಿಬ್ಬಿಗಳ[ವು]
ಹಸನಾಗಿರ್ದವು ನಿಮಿಷದಲಿ ॥೧೨೦॥

ಗಳಿಲನೆ ಚಿಪ್ಪಿಗ ಕಾಲಕುಪ್ಪಸವನು
ಕಳೆಯುಳ್ಳ ವಾಲಗದೊಳಗೆ ।
ತಳುವದೆ ತಂದು ಒಪ್ಪಿಸಲು ಕಂಪಿಲ ಮೆಚ್ಚಿ
ಹೊಳೆವ ತೇಜಿಯ ಕೊಟ್ಟನಾಗ ॥೧೨೧॥

ತವಕದಿ ಕುಳ್ಳಿರ್ದ ಮನ್ನೆಯರೆಲ್ಲರು
ಪರಬಿ ಪವಾಡವ ಬಿಟ್ಟು।
ಭುವನದೊಳಗೆ ನೀನು ಕುಶಲ[ನೆ]ನಿಸಿಯೆಂದು
ಅವನ ಮನ್ನಿಸಿ ಕಳುಹಿದರು ॥೧೨೨॥

ರವಿಕೆ ಕುಪ್ಪಸವು ಪ್ರಧಾನ ಬೈಚಪ್ಪಗೆ
ಅವಧಾನದಲಿ ಒಪ್ಪಿಸಿದನು ।
ಭುವನದೊಳಾಶ್ಚರಿಯಾಗೆನ್ನ ಸೊಸೆಯರ
ಕಳುಹು ಹೋಗೆಂದ ಕಂಪಿಲನು ॥೧೨೩॥

ಎಂದು ಹೇಳಿಯೆ ಬೈಚಪ್ಪನ ಕಳುಹಲಿ
ಬಂದ ರಾಮನ ಅರಮನೆಗೆ ।
ನಿಂದು ರಾಮನ ಹೆಂಡಿರು ಮಂತ್ರಿಯ ಕಂಡು
ಒಂದಾರು ಭುಜವಾದರಾಗ ॥೧೨೪॥

ಕನ್ನಡಿ ಕಾಲ ಕುಪ್ಪಸ ನಿಂಬೆಯ ಹಣ್ಣು
ಚೆನ್ನರಾಮನ ರಾಣಿಯರಿಗೆ ।

ಭಿನ್ನವಿಲ್ಲದಲಿ ಕೊಟ್ಟನು ಬೈಚಪ್ಪನು
ತನ್ನ ಮನೆಗೆ ಕರೆದೊಯ್ದು ॥೧೨೫॥

ಕಮ್ಮೆಣ್ಣೆಯ ಹೂಸಿದರು ಐವರು ತಾವು
ನಿರ್ಮಳ ಪನ್ನೀರ ಬೆರಸಿ ।
ಸುಮ್ಮಾನದಿಂದ ಮಜ್ಜನವಾಗಲನುವಿಂದ
ಗಮ್ಮನಾರತಿಯನೆತ್ತಿದರು ॥೧೨೬॥

ಉಡುಗೊಟ್ಟ ವಸ್ತ್ರ ಪ್ರಧಾನಿ ಬೈಚಪ್ಪನು
ತೊಡಿಗೆ ಮುತ್ತಿನ ಹಾರಗಳ ।
ಸಡಗರದಲಿ ದೇವಾನ್ನವು ಎಡೆಯಾಗೆ
ತಡೆಯದೆ ಉಂಡು ತಿರುಗಿದರು ॥೧೨೭॥

ಪರಿ ಪರಿ ಪುಷ್ಪ ಜಾತಿಗಳನು ತಂದರು ಬೇಗ
ತರತರದಲಿ ಸೇವಕರು ।
ಸರಸರವನು ಮಾಲೆಗಳ ಕಟ್ಟಿದರಾಗ
ವರ ಮಾಸ್ತಿಯರಿಗೆ ಆ ಕ್ಷಣದಿ ॥೧೨೮॥

ಕಾಲಕುಪ್ಪಸ ಉಟ್ಟು ರವಿಕೆಯ ತೊಟ್ಟರು
ಮೇಲೆ ಹೊಂಗರಿಗಳ ಮುಡಿದು ।
ಮೇಳೈಸಿದ ಮುಡಿದಂಡೆ ಸೂಸಕದಲಿ
ಲೋಲ ಮಾಸ್ತಿಯರಿಗೊಪ್ಪಿದವು ॥೧೨೯॥

ಗಂಧ ಕಸ್ತುರಿ ಕುಂಕುಮ ಜವಾದಿಯ
ಸಂಧಿಸಂಧಿಗೆ ಲೇಪಿಸಿದರು ।
ಚೆಂದದಿಂದಲಿ ರಾಮನಾಥನ ರಾಣಿಯರೆಲ್ಲ
ನಿಂದರು ಮಾಸಾಳಿನಂತೆ ॥೧೩೦॥

ಹರುಷದಿ ವಾದ್ಯವ ತರಿಸಿ ಬೈಚಪ್ಪ
ಹಿರಿಯ ಹೆಗ್ಗಾಳೆ ಮದ್ದಳಿಯ ।
ಭರದಿಂದ ಹೊಡೆವ ತಂಬಟ ಡೊಳ್ಳು ಬುರುಗನು
ನೆರೆಯಿತು ಧರೆ ಹೊರದಂತೆ ॥೧೩೧॥

ಆಗ ಪ್ರಧಾನ ಬೈಚಪ್ಪ ತೇಜಿಗಳನು
ಬೇಗದಿಂದಲಿ ತರಿಸಿದನು ।
ಸಾಗಿಸಿ ತಂದು ರಾಮನ ರಾಣಿಗೊಪ್ಪಿಸೆ
ರಾಗದಿಂದಲಿ ಏರಿದರು ॥೧೩೨॥

ಹಿಡಿದ ಪಲ್ಲವದ ಸತ್ತಿಗೆಯ ನೆಳಲೊಳು
ತಡೆಯದೆ ಧೀರ ಮಾಸ್ತಿಯರು ।
ನಡೆದರು ಬೈಚಪ್ಪನರಮನೆಯಿಂದಲಿ
ಸಡಗರವನು ಏನೆಂಬೆ ||೧೩೩||

ಕಿಚ್ಚ ಹೊಯಿವ ಹರೆ ಬಾರಿಸಿದವಲ್ಲಲ್ಲಿ
ಹೆಚ್ಚಿತು ವಾದ್ಯದ ರಭಸ ।
ಅಚ್ಚರಿಯಿಂದ ಪ್ರಧಾನಿ ಮಾಸ್ತಿಯರನು
ಬಚ್ಚಿಟ್ಟ ಪರಿಯ ಹೇಳುವೆನು ||೧೩೪||

ಭೂಮಿಗಧಿಕ ವೀರ ನೇಮಿಯ ದಂ[ಡಿನ]
[ಸಮರ ವೀರ] ಹೆಸರವನೆ ।
ಪ್ರೇಮದಿ ನಮ್ಮ ಬಿಟ್ಟಿಹುದು ಗುಣವೆ ಎಂದು
ರಾಮಲೆ ವಾಲಾಡಿದಳು ||೧೩೫||

ಹತ್ತು ಲಕ್ಷವು ನೇಮಿಯ ದಂಡು ಬಂದರೆ
[ತತ್ತರ]ದುಳಿದು ಕಾದುವೆಯೊ।
ಇತ್ತ ರತ್ನಿಯ ಬಾಯ ತುತ್ತಾ[ದಿ ಮಗನೆಂ]
ದತ್ತಾಳ ಹರಿಯಲದೇವಿ ||೧೩೬||

ಡಿಳ್ಳಿಯ ಸುರಿತಾಳಗೆ ಎದೆದಲ್ಲಣ
ಬಲ್ಲಿದ ಪ್ರತಾಪರುದ್ರನ ।
ತಲ್ಲಣಿಸಿಯೆ ಬಂದ ಧುರಗಲಿ ವಿಕ್ರಮ
ಎಲ್ಲಿ ಹೋದೆಯೊ ನಮ್ಮನಗಲಿ ||೧೩೭||

ಜಗದೊಳು ನಿನ್ನ ಕೀರ್ತಿಯ ಕೇಳಿದವರಿಗೆ
ಧಿಗಿಲೆಂಬುದು ವೈರಿ ಎದೆಯು ।
ನಗೆಮುಖದವನೆ ನೀನೆಲ್ಲಿ ಹೋದೆಯೊ ಎಂದು
ಮಿಗಿಲಾಗಿ ವಾಲಾಡಿದಳು ||೧೩೮||

ವಿಧಿಯ ಗಂಡನು ಎಂ[ಬ] ಚೆನ್ನಿಗ ರಾಮ[ನೆ]
ವಿಧಿಯ ಕೈಯಲಿ ಸಾಯಬಹುದೆ ।
ಇದು ವೀರತನಕೆ ಹಿಮ್ಮಡಿಯಲ್ಲವೆ [ಇಂ]ದು
ಇದಿರ ಬಾರೋ ನಮ್ಮಾಣೆ ||೧೩೯||

ಮಂಡಲದೊಳು ನಿಮ್ಮ ಗಂಡುಗಲಿಗಳೆಂದು
ಕೊಂಡಾಡುವರು ಧರೆಯೊಳಗೆ ।

ಹೆಂಡಿರಿಗಂಜಿ ಮಡಿವುದು ಗುಣವೇ ಎಂದು
ಗಂಡ ರಾಮನ ಹಾಡಿದರು ||೧೪೦||

ಘಳಿಲನೆ ರಾಮನ ಹೆಂಡಿರು ಐವರು
ನಿರಿಗಳ[ನವ] ಉಡುತ ಹಾ[ಕೆ]
ತಳವೆಳಗಾಗಿ ಪಟ್ಟಣವೆಲ್ಲ ದುಃಖದಿ
ಅಳತೊಡಗಿತು ನಿಮಿಷದಲಿ ||೧೪೧||

ಸುಮ್ಮನೆ ಇರಿ ನೀವು ನಿಮ್ಮನೆ[ಗಳೊ]ಳು
ನಮ್ಮ ರಾಮಗೆ ದೇವಲೋಕ |
ಗಮ್ಮನೆ ತೆರವಾಗಿ ಕೊಟ್ಟಿತೆಂಬುದ ಕೇಳಿ
ನಮ್ಮ ಕರೆಯ ಕಳುಹಿದನು ||೧೪೨||

ಸಂತವಿಟ್ಟಳು ಅಳುವುದನು ರಾಮಲದೇವಿ
ನಿಂತು ಅಲ್ಲಲ್ಲಿಗಾಕ್ಷಣದಿ |
ಕಂತುಹರನ ಪುರಕೈದು ಹೋಗುತೆವೆಂದು
ಮಂತಣದಲಿ ಓಲಾಡಿದರು ||೧೪೩||

ಇತ್ತರದಲಿ ಕರ[ದಿರ್ದ] ಕಂಚಿ ನಿಂಬೆಯ ಹಣ್ಣ
ಮತ್ತೆ ಸೂರೆಯ ಬಿಡಿಸಿದರು |
ಒತ್ತೊತ್ತಿ ಬಗ್ಗಿ ತೆಗೆವರನು ಕಂಡಿನ್ನು
ಚಿತ್ತದೊಳತಿ ಹಿಗ್ಗಿದರು ||೧೪೪||

ಭರದಿಂದ ಬಂದನು ಧುರಧೀರ ಕಾಟಣ್ಣ
ಇರವ ಕಂಡನು ನಾದುನಿಯರ |
ತರಹರಿಸ[ದೆ] ದುಃಖದಲಿ ಇಕ್ಕಡಿಯಾಗಿ
ಹೊರಳಿ ಮನದಲಿಂತೆಂದ ||೧೪೫||

ಎನ್ನ ತಮ್ಮನ ರಾಣಿಯರಿರ ನಿಮಗೆ ಈಗ
ಇನ್ನಾವ ರಾಜ್ಯ ಕೊಟ್ಟಿತೆಂದು |
ನನ್ನನ್ನು ಇರಿಸಿ ಹೋದನೆ ಚೆನ್ನ ರಾಮನು
ಉನ್ನಂತವಾಗಿ ಹೊರಳಿದ ||೧೪೬||

ಭರದಿಂದ ಕಾಟಣ್ಣ ರಾಮನ ಸತಿಯರ
ಕರೆದೊಯಿ[ದ]ನು ಅರಮನೆಗೆ |
ಭರದಿಂದ ಅಕ್ಕ ತಂಗಿಯರು ಆರೋಗಿಸಿ
ಹಿರಿದು ಸಂತೋಷದೊಳಿರುತ ||೧೪೭||

ಹೊತ್ತು ಹೋಗುತಲಿದೆ ಎನುತ ಪ್ರಧಾನನು
ಮತ್ತೊಂದು ಬುದ್ಧಿಯನೆಣಿಸಿ ।
ಕತ್ತಲೆಯೊಳು ರಾಮನ ಸತಿಯರ ರಾಮ
ನೊತ್ತಿಲಿ ಇರಿಸಬೇಕೆನುತ ||೧೪೮||

ಉಪ್ಪಲಿಕರ ಸಿಂಗನ ಕರೆಸಿದನಾಗ
ಕರ್ಪೂರ ವೀಳ್ಯವ ಕೊಡಿಸಿ ।
ತಪ್ಪದೆ ಕೊಂಡವಾಗಲಿಯೆಂದು ಬೈಚಪ್ಪ
ಒಪ್ಪವನಿಟ್ಟು ಹೇಳಿದನು ||೧೪೯||

ಅಗಲಾದ ಕೆಂಡವಾಗಲಿ ಹನ್ನೆರಡು ಮಾ[ರು]
ಮಿಗಿಲುದ್ದ ಮೂರು ಮಾರುಗಳು।
ತೆಗೆಸು ಹೋಗು ಬೇಗನೆಂದು ಪ್ರಧಾನನು
ಸುಗುಣ ಸಿಂಗನ [ಕಳಿಸಿದನು] ||೧೫೦||

ಹರುಷದಿಂದಲಿ ಕಳಿಹಿಸಿಕೊಂಡು ಸಿಂಗನು
ಕರೆಸಿದ ಕಾಮಾಟದವರ ।
ನೆರೆಯಿತು ಮುನ್ನೂರು ಹಾರಿ ಗುದ್ದಲಿ ಸಹ
ತರತರದಲಿ ಕಟ್ಟಿ ಹೊತ್ತು ||೧೫೧||

ತಡೆಯದೆ ಮುನ್ನೂರು ಹಾರಿ ಗುದ್ದಲಿ ಸಹ
ನಡೆದನುಪ್ಪಲಿಗರ ಸಿಂಗ ।
ಸಡಗರದಲಿ ರುದ್ರಭೂಮಿಗೆ ಬಂದರು
ಬಿಡದೆ ಹಂಚಿಕೊಂಡ[ರಾ]ಗ ||೧೫೨||

ಹೊಕ್ಕಿತು ಕಮ್ಮಾಟದವರು ಕೊಂಡು ತಗುವರೆ
ರಕ್ಕಸ ದಡಿಗರಂದದಲಿ ।
ಧಿಕ್ಕನೆ ಭೂಮಿ ಇಬ್ಭಾಗವ ಮಾಡಿದರು
ಮುಕ್ಕಣ್ಣ ಶಿವ ಬಲ್ಲನೆನುತ ||೧೫೩||

ಕೊಂಡವಾಯಿತು ಬೇಗ ಎರಡು ಗಳಿಗೆಯೊಳು
ಕಂಡನುಪ್ಪಲಿಗರ ಸಿಂಗ ।
ಗಂಡುಗಲಿಯು ನಡೆದು ಬಂದನು ಬೇಗ ಪ್ರ
ಚಂಡ ಮಂತ್ರಿಗೆ ಹೇಳಿದನು ||೧೫೪||

ಕೊಂಡೆಯರ ಗಂಡ ಪ್ರಧಾನ ಬೈಚಪ್ಪ[ನ]
ಕಂಡು ಕೈಮುಗಿದು ಬಿನ್ನೈಸೆ ।

ಕೊಂಡವಾಯಿತು ಸ್ವಾಮಿ ಎರಡು ಗಳಿಗೆಯೆಂದು
ಮಂಡಲಪತಿಗೆ ಹೇಳಿದನು ॥೧೪೫॥

ಕಡೆಯ ಮಾತನು ಕೇಳಿ [ಮಂತ್ರಿ] ಬೈಚಪ್ಪನು
ಉಡಕೊಟ್ಟನಾ ಸಿಂಗ[ಣನಿ]ಗೆ ।
ಕಡಗ ಕಂಠಮಾಲೆ ಪೆಂಡೆದ ಸರಗಳ
ಬಿಡದೆ ಮನ್ನಿಸಿ ಕಳುಹಿದನು ॥೧೪೬॥

ಹೊತ್ತು ಹೋಗುತಲಿದೆ ಎನುತ ಪ್ರಧಾನನು
ಮತ್ತೆ ಕಟ್ಟಿಗೆಯರ ಕರೆ[ಸೆ] ।
ಇತ್ತರದಲಿ ಕೇರಿ ಕೇರಿಲಿ ಸಾರಿತು
ಹೊತ್ತಿತು ಕೊರಡು ಕುಂಟೆಯ[ದು] ॥೧೪೭॥

ಎಣ್ಣೆಯ ಕೊಡ ತುಪ್ಪದ [ಕೊಡ] ಹಾಕಿತು
ಬಣ್ಣ[ದ] ರಾಶಿ ಎಳ್ಳುಗಳ ।
ಸಣ್ಣ ಶ್ರೀಗಂಧವ ಕಡಿದು ಹಾಕಿಸೆ ಬೇಗ
ಹಣ್ಣಿತು ಕೊಂಡಕೆ ಕಿಚ್ಚು ॥೧೪೮॥

ಗೇರೆ ಹಾಕಿತು ಗಗನಾಂಗಳ ತುಡುಕಿತು
ಮೂರು ಸುತ್ತಲಿ ಕೆಂಡವಾಗೆ ।
ಸೀರೆ ಸುತ್ತಿತು ಒಳಸುತ್ತ ಕೊಂಡಕೆ
ಯಾರು ಕಾಣದ ಹಾಂಗೆ ಬೇಗ ॥೧೪೯॥

ಒಂದು ತಾಳೆಯ ಮರನುದ್ದಕ್ಕೆ ಕೊಂಡವು
ನಿಂದುರಿವುದ ಕಂಡು ಬೇಗ ।
ಬಂದನು ಮಣಿಹಾರ ಮಲ್ಲೆಯನು ಬೇಗ
ನಿಂದು ಮಂತ್ರಿಗೆ ಹೇಳಿದನು ॥೧೫೦॥

ಕರ ಮುಗಿದುಕೊಂಡು ಮಣಿಹಾರ ಮಲ್ಲಯ್ಯನು
ಒರೆದನು ಬೈಚಪ್ಪನೊಡನೆ ।
ಭರದಿಂದ ಕೊಂಡ ಕೆಂಡವಾಯಿತು ಸ್ವಾಮಿ
ಕರೆಸು ರಾಮನ ರಾಣಿಯರನು ॥೧೫೧॥

ಎಂದ ಮಾತನು ಕೇಳಿದನು ಬೈಚಪ್ಪನು
ಬಂದ ಕಾಟಣ್ಣನರಮನೆಗೆ ।
ನಿಂದು ರಾಮನ ಹೆಂಡಿರ ಕಂಡು ಬೈಚಪ್ಪ
ವಂದಿಸಿ ಕರಗಳ ಮುಗಿದು ॥೧೫೨॥

ಏಳಿ ಚಿತ್ತೈಸಿ ತಳಹುವಿನ್ನೇತಕೆ
ಭಾಳಾಕ್ಷನ ಸೀಮೆಯೊಳಗೆ ।
ವೇಳೆಯಾಯಿತು ರಾಮನ ಬೀಡಾರ
[ತೋ]ಳುಗೊಂಬ[ರೆ] ಬಿಜಮಾಡಿ ॥೧೬೩॥

ಗಳಿಲನೆ ಆ ಮಾತ ಕೇಳುತ ಐವರು
ಕಳೆಯೇರುತಲಿ ಹರುಷದಲಿ ।
ತಳಮಳವಾಗಿ ದುಃಖವನು ಮಾಡುತಲಾಗ
ಕಾಟನ ಸತಿ ಅಳಲಿದಳು ॥೧೬೪॥

ಅಕ್ಕಗಳನು ಸಂತೈಸಿ ರಾಮಲದೇವಿ
ದುಃಖವ ಮಾಡಲಿ ಬೇಡ ।
ಚಿಕ್ಕ ರಾಮಯ್ಯನ ಕೂಡಿಕೊಂ[ಬೆ]ವು ನಾವು
ಮುಕ್ಕಣ್ಣ ಬಲ್ಲನೀ ಪರಿಯ ॥೧೬೫॥

ಅಲ್ಲಿ ಎಲ್ಲರನು ಸಂತೈಸಿ ರಾಮಲದೇವಿ
ಮೆಲ್ಲನೆ ಹೊರಟಳು ಗೃಹದಿ ।
ನಿಲ್ಲದೆ ನಡೆದು ಬಂದಳು ಹರಿಯಮ್ಮನ
ವಲ್ಲಭನರಮನೆಗಾಗಿ ॥೧೬೬॥

ಅತ್ತೆಯ ಕಾಣುತ ಮತ್ತೆ ಪಾದಕೆ ಬಿದ್ದು
ಎತ್ತಿ ಕೈಮುಗಿದು ಕಂಪಿಲಗೆ ।
ಹೆತ್ತ ಮಗನು ನಿಮ್ಮ ಚೆನ್ನಿಗರಾಮ ತ
ನ್ನೊತ್ತಿಗೆ ಕರೆಯ ಕಳುಹಿದನು ॥೧೬೭॥

ಹರುಷದಿ ನಮ್ಮ ಬಿಟ್ಟಿರಲಾರನು ಎಂದು
ಕರೆಯಲಟ್ಟಿದನು ಅಗ್ನಿಯನು ।
ಭರದಿಂದಲೆ ನಾವು ಹೋದೇವು ನೀವಿತ್ತ
ಸ್ಥಿರರಾಜ್ಯ[ವಾ]ಳಿಯೆಂದು ॥೧೬೮॥

ಗಮ್ಮನೆ ಆ ಮಾತ ಕೇಳುತ್ತ ಹರಿಯಮ್ಮ
ಮುಮ್ಮೊನೆ ಮೊಳೆ [ಒಳ ಎ]ದೆಯ ।
ಗಮ್ಮನೆ ತಾಗಿ ತಟ್ಟು[ಗಿ]ಯಿತು ಆ ಕ್ಷಣ
ಹಮ್ಮಯಿಸಿದಳು ಮನದೊಳಗೆ ॥೧೬೯॥

ಹರಹರಹರನೆ ಜಟ್ಟಂಗಿಯ ರಾಮ[ನ]
ವರ ಪಿಂಡವಳಿಯಲುಬಹುದೆ ।

ಹರಸಿ ಹೆತ್ತ ಹೊಟ್ಟೆ ಹಾಳಾಯಿತೆನುತಲಿ
ಸೊರಗಿ ಕರಗಿ ಮರುಗಿದಳು ||೧೭೦||

ನಾನು ಮಗನೆ ಇನ್ನು ಮಾನಿನಿಯರ ಕಂಡು
ಕಾನನದ ಬೇಗೆಯಂತೆ ।
ನಾನು ಸುಟ್ಟು ಬೇಯಲಾರೆನೋ ಕಂದಯ್ಯ
ನೀನೆನ್ನ ಬಿಟ್ಟು ಪೋಗುವುದೆ ||೧೭೧||

ಚೆದುರ ಚೆನ್ನಿಗರಾಮ ಚಂಡಾಟ ಬೇಡೆಂದು
ಒದಗಿ ಹೇಳಿದೆನು ಬುದ್ಧಿಯನು ।
ಹದುಳದಿ ಮಡಿಯಬಹುದೆಯೆಂದು ಹರಿಯಮ್ಮ
ಸದೆದುಕೊಂಡಳು ಎದೆಬದಿಯ ||೧೭೨||

ಸೆಕೆಯು ಹೆಚ್ಚಿತು ಕಾಯದಿ ಸೆರೆ ಉರಿಯಿತ್ತು
ರಾಮನ ಸೀರೆ ಕದರಿತು ನಿಮಿಷದಲಿ ।
ಅಂಗದ ಎಲೆ ಸಿಕ್ಕಿತು ಕಂದನ ತಾಪ
ಹಿಂಗದೆ ಬಿರಿದಾಗುತಿರಲು ||೧೭೩||

ಕಡುಗಲಿ ಬೈಚಪ್ಪನು ಹರಿಯಮ್ಮನ
ಬಿಡದೆ ಅಳುವ ದುಃಖವನು ।
ಪೊಡವಿಯೊಳಗೆ ಜಟ್ಟಂಗಿಯ ರಾಮನ
ಬಿಡದೆ ಹೊಂದಿದ ನಿಮ್ಮ ಮಗನು ||೧೭೪||

ಕಂತುಹರನ ಪುರದೊಳು ನಿಮ್ಮ ಮಗ ರಾಮ
ಸಂತೋಷದಿ ಸುಖವಿಹನು ।
ಚಿಂತೆಮಾಡಲಿ ಬೇಡ ನಂಬೆಂದು ಬೈಚಪ್ಪ
ಮುಂತೆ ನಂಬುಗೆ ಕೊಟ್ಟನಾಗ ||೧೭೫||

ಎಂದ ಮಾತನು ಕೇಳಿ ಹರಿಯಮ್ಮನು ಬೇಗ
ಕಂದನ ಮೋಹವ ಬಿಟ್ಟು ।
ಚೆಂದದಿ ಚಿತ್ರ ನಾಣ್ಯವನುಡಗೊಟ್ಟಳು
ಅಂದಿನ ದಿನ ಸೊಸೆಯರಿಗೆ ||೧೭೬||

ಆಗಲೆ ಹರಿಯಮ್ಮನು ಬೇಗ ನಾಣ್ಯವ
ಭೋಗವಣ್ಣಿಗೆಯ ಸೀರೆಗಳ ।
ಶೋಧಿಸಿ ತೆಗೆದುಡಕೊಟ್ಟು ಬಂಗಾರವಿತ್ತು
ಬೇಗದಿ ಕೂಡೆನ್ನ ಮಗನ ||೧೭೭||

ಕರವ ಮುಗಿದು ಕಳುಹಿಸಿಕೊಂಡು ಐವರು
ತುರಗವನೇರಿದರಾಗ ।
ದಿಟ್ಟ ರಾಮನ ಐವರು ಹೆಂಡಿರುಗಳು
ಪಟ್ಟದಾನೆಗಳು ಪಾಡಿದರು ॥೧೭೮॥

ರಾಮನ ಹಳೆಯ ಮಂದಿಗಳು ಎಕ್ಕಟಿಗರೆ
ಪ್ರೇಮದಿ ನಿಮ್ಮೂರ ಬಿಟ್ಟು ।
ಸೋಮಧರನ ಪುರಕೆಯು ಪೋಗುತವೆಯೆಂದು
ರಾಮಲಾ ವಾಲಾಡಿದಳು ॥೧೭೯॥

ದಿಕ್ಕನೆ ಆ ಮಾತ ಕೇಳುತ ಹಳೆಯರು
ದುಃಖಗೊಂಡರು ನಿಮಿಷದಲಿ ।
ಚಿಕ್ಕ ರಾಮನ ಪೋಲ್ವ ದೊರೆಯುಂಟೆ ಎನುತಲಿ
ಬಿಕ್ಕಿ ಬಿಕ್ಕಿಯೆ ಅಳುತಿರಲು ॥೧೮೦॥

ಕೇರೆಯ ಬೊಬ್ಬೆಯು ವೀರಮಾಸ್ತಿಯರಿಗೆ
ವೀರವರೆಯು ಮೊಳಗಿದವು ।
ಭೋರನೆ ಹೆಣ್ಣುಗಳಿಗೆ ಕಟ್ಟಾಣೇರು
ಸೇರಿ ಹಿರ್‍ರನೆ ಹಿಗ್ಗಿದರು ॥೧೮೧॥

ಆಗ ಪ್ರಧಾನ ಬೈಚಪ್ಪನು ಕೃತಕದಿ
ಬೇಗದಿ ಐದು ದಂಡಿಗೆಯ ।
ಸಾಗಿಸಿ ತೆಗೆದು ಪನ್ನಂಗವ ಮುಚ್ಚಿರೆ
ಸಾಗಿಸಿದನು ಮುಂಗಡೆಯ ॥೧೮೨॥

ಕಟ್ಟಿಗೆಕಾರರ ದಂಡಿಗೆ[ಗಳ] ಮುಂದೆ
ಪಟ್ಟದ ಸತಿ[ಗಳೈವರು] ।
ನೆಟ್ಟನೆ ಬರುತಾ[ರೆಯ್ದೆ] ರಾವುತರೆಲ್ಲ ಹಿ
ಮ್ಮೆಟ್ಟಿ ಹಿಂದಕೆ ಸಾರೆನಲು ॥೧೮೩॥

ಬಂದ ದಂಡಿಗೆ ಕೂಡಿ ಐವರು ಮಾಸ್ತೇರು
ಚಂದದಿ ಹೊರಡೆ ಪಟ್ಟಣವ ।
ಮಂದಿ ಕುದುರೆ ಸಂದಣಿಸಿತು ಸಂಭ್ರಮ
ಮುಂದೆ ನೋಡಲು ತೆರಹಿಲ್ಲ ॥೧೮೪॥

ನೆರೆಗಲಿ ರಾಮನ ಹೆಂಡಿರು ಬೇಗದಿ
[ಕೆ]ರೆಯ ಬಾಗಿನಕೆ ಸಾಗಿದರು ।

ಭರದಿಂದಲಿ ಗಂಗೆಯ ಕಂಡರು ಶರಣೆಂದು
ದುರುಳ ರಾಮನ ಕೂಡಿಸೆಮಗೆ ||೧೮೫||

ಏಳೇಳು ಜನ್ಮದಿ ರಾಮನಾಥನೆ ಗಂಡ
ಮೇಳವಾಗಲಿ ಗಂಗಮ್ಮ ।
ಲೋಲ ಕಂಪಿಲ ಮಾವನಾಗಲಿ ಹರಿಯಮ್ಮ
ಬಾಲೆಯಾಗಲಿ ಬಿಡದತ್ತೆ ||೧೮೬||

ಮತ್ತೆ ಮಳಲಗೌರಿಯ ಗುಡ್ಡೆಯ ಮಾಡಿ
ಮುತ್ತಿನಕ್ಷತೆ ಗಂಧವೆರಸಿ ।
ಮು[ತ್ತೈ]ಲವಿಡಿದ ಮುತ್ತೈದೇರ ಕರೆಸಿಯೆ
ಮತ್ತೆ ಬಾಗಿನ ಕೊಟ್ಟರಾಗ ||೧೮೭||

ಬಾಗಿನವನು ಕೊಟ್ಟು ಮಳಲಗೌರಿಗೆ ತಾವು
ರಾಗದಿಂದಲಿ ಕೈಯ ಮುಗಿದು ।
ಬೇಗ ರಾಮನ ಕೂಡಿಕೊಳ್ಳಬೇಕೆನುತಲಿ
ಸಾಗಿದರಾ ಕೊಂಡದೆ[ಡೆ]ಗೆ ||೧೮೮||

ಒದಗಿದ ಮಂದಿ ಹರಿಯಲೆಂದು ಬೈಚಪ್ಪ
ಕುದುರೆಯ ಬೀದಿ ಮಾಡಿದನು ।
ಕಂದನಡಿಧಾನೊಟ್ಟಕಜನದೆತೆಗಾಗ
ಚದುರ ಮಂತ್ರಿಯ ಭರವಸೆ ||೧೮೯||

ನಿಂದುಕೊಂಡ[ನು] ಬಾಗಿಲಲ್ಲಿ ಬೈಚಪ್ಪನು
ಸಂದಣಿಯನು ತೊಲಗಿಸಿದ ।
ಹಿಂದಕೆ ಸಾರಹೇಳಿದ ದೊರೆಗಳನೆಲ್ಲ
ಸಂದಣಿ ಮಾಡಬೇಡೆಂದ ||೧೯೦||

ನೆಟ್ಟನೆ ಆ ಮಾತ ಕೇಳುತ ಕಟ್ಟಿಗೆಯರು
ಇಟ್ಟಣಿಸುವ ಪುರಜನರ ।
ಸಿಟ್ಟುಗುಟ್ಟುತ ನೋಡಿ ಗುದುಗೆಲಿ ಹೊಡೆಯುತ
ಹಿಮ್ಮೆಟ್ಟಿ ಹಿಂದೆ ಸಾರೆನುತೆ ||೧೯೧||

ನೆರೆಗಲಿ ರಾಮನ ಹೆಂಡಿರು ಐವರು
ನಿರಿದೆಗೆ[ದು] [ಉ]ಡುತಾರೆ ।
ಹಿರಿ ಸಣ್ಣ ರಾವುತ ರಾಣೇರೆಲ್ಲರು
ಮರೆಗೊ[ಳೆ] ಗೆರೆಯ ಸುತ್ತಿನಲಿ ||೧೯೨||

ಹತ್ತೆಂಟು ಹಳೆಯ ಮಂದಿಯ ಕರೆಸಿದ ಮಂತ್ರಿ
ಮತ್ತೆ ರಾಮನ ರಾಣಿಯರ ।
ಇತ್ತೆರದಲಿ ಕೆಂಡ ಕಾಣಬಾರದ ಹಾಗೆ
ಮತ್ತೆ ತೆರೆಯ ಹಿಡಿಸಿದನು ॥೧೯೩॥

ಕೂಗು ಬೊಬ್ಬೆಯ ಕೊಟ್ಟಿತು ಪರಿವಾರವು
ಆಗ ರಾಮನ ರಾಣಿಯರಿಗೆ ।
ರಾಗದಿಂದಲಿ ಬಂದು ಮೆಟ್ಟುಗಲ್ಲಲಿ ನಿಂದು
ಬೇಗ ಕೊಂಡಕೆ ಕೈಯ ಮುಗಿದು ॥೧೯೪॥

ಅಲ್ಲಿ ಎಣ್ಣೆಯ ನೆಳಲನು ನೋ[ಡೆ] ಐವರು
ಇಲ್ಲಿ ರಾಮನ ಸುಳುವಿಲ್ಲ ।
ಎಲ್ಲಿ ಬಯಲು ಆದೆ ಧುರಗಲಿ ವಿಕ್ರಮನೆಂದು
ಮೆಲ್ಲನೆ ತಿಳಿದ[ರು] ಆಗ ॥೧೯೫॥

ಘಳಿಲನೆ ರಾಮನು ಸತ್ತುದುಂಟಾದರೆ
ಸುಳುವದೋರುವ ಎಣ್ಣೆಯೊಳಗೆ ।
ಹೊಳೆವ ಕಂಗಳ ರಾಮ ಸತ್ತುದು ಹುಸಿಯೆಂದು
ತಳುವದೆಲ್ಲೆಯು ಮಡಗಿದೆಯಾ ॥೧೯೬॥

ಕಡಿದು ಕಳ್ಳಬಂಟ ರಾಮನ ತಲೆಯನು
ಹಡೆದ ಮಗನ ಕೊಂದು ।
ಒಡೆಯ ಕಂಪಿಲನೆ ಅಂಗವ ತೋರಬೇಕೆಂದು
ಮಡಹಿದೆ ಚೆನ್ನ ರಾಮುಗನ ॥೧೯೭॥

ಎಂದ ಮಾತನು ಕೇಳುತಲಿ ಆ [ಐ]ವರು
ಬಂದು ಮಂತ್ರಿಯ ಪಾದಕೆರಗೆ ।
ತಂದು ಹಾಕಿಸಿದ ದಂಡಿಗೆಯೊಳು ಐವರ
ಮುಂದೆ ಸಾಗಿಸಿ ಅರಮನೆಗೆ ॥೧೯೮॥

ಕುರಿಯ ಕೊಂಡಕೆ ಹಾಕಿ ತರಿ ಮರನ ಒಟ್ಟಿಸಿ
ಬರಿದೆ ಮಂತ್ರಿಯು ಮರುಗಿದನು ।
ನೆರೆಗಲಿ ರಾಮನ ಹೆಂಡಿರೆಂದೆನುತಲಿ
ಅರಿದರು ಪುರಜನರಾಗ ॥೧೯೯॥

ಒತ್ತಿ [ಕಾ]ವ[ಳ] ಕೊಟ್ಟ ಪಟ್ಟಣವೆಲ್ಲವು ಕ
ತ್ತಲೆ ಆಯಿತಾ ಸಮಯ ।

ಮತ್ತೆ ಪ್ರಧಾನನು ಸುತ್ತ ಜನರನೆಲ್ಲ
ಅರ್ತಿಯಿಂದಲಿ ಸಾಗಿಸಿದ ||೨೦೦||

ಉರಿಯಿತು ಕೊಂಡವು ಗಗನವ [ಸೋಂ]ಕುತ
ಮೆರೆದು [ಕೇಸುರಿ] [ಗ್ರಾಮದಲಿ ತಾ]
ತಿರುಗಿದನಲ್ಲಿಂದ ಧುರಗಲಿ ಬೈಚಪ್ಪ
ಭರದಿಂದ ತನ್ನರಮನೆಗೆ ||೨೦೧||

ಬಂದ ಪ್ರಧಾನ ಬೈಚಪ್ಪನು ಬೇಗದಿ
ಒಂದು ಬುದ್ಧಿಯನೆಣಿಸಿದನು ।
ಇಂದು ರಾಮನ ಸತಿಯರನೊಯಿ[ದು] ಬೇಗ
ಒಂದುಗೂಡಲಿ ಬೇಕು ಎನುತ ||೨೦೨||

ತನ್ನ ಪ್ರಾಣಕೆ ಸಮವೆನಿಪ ಹಳೆಯರನು
ಮನ್ನಿಸಿ ಕರಕೊಂಡು ಬೇಗ ।
ಚೆನ್ನ ರಾಮನ ರಾಣಿಯರನು ಕೂಡಿಕೊಂಡು
ಭಿನ್ನವಿಲ್ಲದೆ ತೆರಳಿದನು ||೨೦೩||

ಉಲಿವಿಲ್ಲದ [ಸರಿ] ಹೊತ್ತಿಲಿ ಬೈಚಪ್ಪ
ನೆಲ ಮಾಳಿಗೆಗೆಯ್ತಂದ ।
ಕಲಿಗಳರಸ ರಾಮನ ಕರೆದು ನಿನ್ನ
[ಲಲನೇರು] ಬಂದರೇಳೆನುತ ||೨೦೪||

ಕಾಮದಹನ ಜಟ್ಟಂಗಿಯ ರಾಮನ
ಪ್ರೇಮದ ವರದಿಂದ ನಿನ್ನ ।
ರಾಮಲೆ ಪಟ್ಟದರಸಿ ಬಂದಳೆನುತ
ರಾಮನ ಕರೆದು ಎಬ್ಬಿಸಿದ ||೨೦೫||

ಬೀಗಮುದ್ರೆಯ ತೆಗೆದನು ಬೈಚಪ್ಪನು
ಬೇಗದಿ ನೆಲಮಾಳಿಗೆಯ ।
ರಾಗಮಂಟಪಕಿಳಿದು ಬೈಚಪ್ಪನು
ಆಗ[ಲೆ] ಕೆಲಗೂಡಿ[ಸಿ]ದನು ||೨೦೬||

ಚೆಲುವ ರಾಮನ ಹೆಂಡಿರ ರಾಮಗೆ ಬೇಗ
ತಳುವದೆ ಒಂದುಗೂಡಿಸಿದ ।
ಘಳಿಲನೆ ಬಂದು ಪಟ್ಟಣವನು ಹೊಗಲಾಗ

ಬೆಳಕು ಆಯಿತು ಆ ಕ್ಷಣದಿ ||೨೦೭||

ಹೆತ್ತ ಮಗನ ಸೊಸೆಯರು ಸತ್ತ ಸುದ್ದಿಯ
ಮತ್ತೆ ಕಂಪಿಲರಾಯ ಮರೆದು ।
ಚಿತ್ತವಲ್ಲಭೆಯ ಮೇಳದಲಿರುತಿರಲಿತ್ತ
ಚಿತ್ರ ಸಂಧಿಯು ಸಮಾಪ್ತ ||೨೦೮||

ಅಂತು ಸಂಧಿ ೭ಕ್ಕಂ ಪದನು ೧೩೧೬ (>೧೨೮೭)ಕ್ಕಂ ಮಂಗಳಮಹಾಶ್ರೀ.

❖❖

ಸಂಧಿ : ಎಂಟು

❖

ನೇಮಿಯ ಕಾಳಗ-ಸೋಲು

ಪ್ರೇಮದಿಂದಲಿ ನೆಲಮಾಳಿಗೆ ಸಂಧಿಯು
ನೇಮಿ ಬಂದುದ ಲಾಲಿಪುದು ।
ಭೂಮಿಯೊಳಾಶ್ಚರಿಯಹುದೀ ಕೃತಿಯ ನಿ
ಸ್ಸೀಮ ಕೋವಿದರು ಕೇಳುವುದು ॥೧॥

ರಾಮನಾಥನ ಕಥೆಯನು ಕೇಳಿದವರಿಗೆ
[ಭೀ]ಮ ಸೋಮ ಸುಖಧಾಮ ।
ಕಾಮಿತ ಫಲಭೋಗ ಪುಣ್ಯವನೀವನು
ರಾಮನ ಕೃತಿ ಕೇಳ್ದರಿಗೆ ॥೨॥

ರಾಮ ಸತ್ತನು ಎಂದು ದೇಶದೊಳಗೆ ಕೀರ್ತಿ
ಹತ್ತೆಂದು ಗಾವುದದೊಳಗೆ ।
ಸುತ್ತಣ ದೇಶದ ರಾಯ ಮಂಡಲಿಕರು
ಮತ್ತೆ ಕಪ್ಪವ ತಡೆವಿಡಿದು ॥೩॥

ಜೀನಗೆಲಸದ ಕುಪ್ಪಸವೇಳು ಸಾವಿರ
ಮಾನಿನಿಯರ ಮುಖ [ತೊಳಗೆ] ।
ದಾನವ ಚಕ್ರೇಶ್ವರ ಸುರಿತಾಳ[ನಾ]
ಸ್ಥಾನ ಮಂಟಪಕೈತಂದ ॥೪॥

ಕುಶಲದ ಕೆಲಸಗಳಿಕ್ಕಿಹ ವಾ[ಲಗ]
ಎಸೆದಿಹ ಭದ್ರ ಮಂಟಪವು ।
ಹೊಸ ಹೊನ್ನ ಮುತ್ತಿನ ಚಿತ್ರ ಚಾವಡಿಯೊಳು
ಅಸುರ ಕುಳಿತ ಸುರಿತಾಳ ॥೫॥

ಒಳಗಣ ಚಾವಡಿಯಲ್ಲಿ ಸುರಿತಾಳನು
ನಳಿನಮುಖಿಯರ ವಾಲಗವು ।
ಕಳಹಂಸೆಗಮನ ಕೋಮಲ ಮುದ್ದುಮುಖಿಗಳ
ಹೊಳೆವ ಕಂಗಳ ಬಿಬ್ಬಿಯರು ॥೬॥

ಸೆಳೆ ನಡುವಿನ ಮೇಲೆ ಹೊಳೆವ ಕಾಂಚನ ದಾಮ
ನಳಿನದಳ[ದ] ನೇತ್ರೆಯರು ।
ಹೊಳೆವ ಕುಚವು ಗಜಕುಂಬದಂತಿಹುದಲ್ಲಿ
[ನೀ]ಳ ಮುಡಿಯ ಬಿಬ್ಬಿಯರು ॥೭॥

ಹೇಮವರ್ಣದ ಗಿಂಡಿ ಹಡಪದ ಚಾಮರ
ಡಾಳಿಸಿಕೊಳುವ ಒತ್ತಿನಲಿ ।
ಕಾಮನ ಪಂಚಬಾಣಕೆ ಎಣೆ[ಯೆಂ]ಬಂತೆ
ಕಾಮಿನಿಯರ ಕಡೆಗಣ್ಣು ॥೮॥

ತೋರಭುಜದಿ ಮುತ್ತಿನ ಮುಡಿ ರಂಜಿಸೆ
ಮಿಂಚಿನೋಲೆಯ ಮುದ್ದುಮುಖದ ।
ವಂಚಿಸಿ ಮಾತನಾಡುವ ಕಡೆಗಂಗಳು
ಸಂಚರಿಸುವ ಸನ್ನೆಗಳು ॥೯॥

ಮಿಡಿ ಬಿಲ್ಲಿನವರು ಸಿಂಗಾಡಿ ಕಠಾರಿಯು
ಪಿಡಿದು ಕೆಲರು ಕಂಸೆಯನು ।
ನಿಡು ಜಡೆಯರು ಬಟ್ಟ ಮೊಲೆಯವರ್ನಿಂತಿರೆ
ಎಡಬಲದೂಳಿಗದವರು ॥೧೦॥

ಶೃಂಗಾರವನು ಮಾಡಿದನು ಸುರಿತಾಳನು
ಅಂಗಹಾರದ ತೊಡಿಗೆಗಳ ।
ಅಂಗಿಯು ಕಾಲಕುಪ್ಪಸವು ಕುಂಚಿಕೆಯನು
ಅಂಗನೆಯರು ತೊಡಿಸಿದರು ॥೧೧॥

ಇತ್ತರದಲಿ ಮನ್ನೇರು ಮಂಡಲಿಕರು
ಮುತ್ತಿನ ಚಾವಡಿಯೊಳಗೆ ।
ಒತ್ತಿ ಕುಳ್ಳಿರ್ದನು ನೇಮಿಖಾನನು ಸಹ
ಕರ್ತ ನೃಪನು ವಾಲಗದಿ ॥೧೨॥

ಕೊಂಗ ಕೊಂಕಣ ಹೊಯಿಸಣ ಮಲೆಯಾಳನು
[ಸಿಂ]ಗಳ ತುಳುವ ಸಾವಂತ ।

ಮುಂಗುಲಿಗನು ಅರಬೆಯ ಕೂರಸಾಲೆಯ
ಜಂಗುಳಿಯರು ಮರಾಟೆಯರು ||೧೩||

ಮೊರಸ ಮಲವ ಕೊಂಕಣ ವಾರ ಕನ್ನಡ
ತುರುಕ ತುಳುವ ಒಡೆಯರು ।
ಕರಟ ಕಾರಹಜಿನ ಕಾಂಭೋಜರುಗಳು
ನೆರೆದು ವಾಲಗದಿ ನಿಂದಿಹರು ||೧೪||

ರಾಮನಳಿದ ಸುದ್ದಿ ಡಿಳ್ಳಿಗೆ ಮುಟ್ಟಿತು
ಆ ಮಹಾಪತಿ ಸುರಿತಾಳ ।
ಕೋಮಲೆಯರ ಕೈಯ ಹೊಯ್ದು ನಗುತಲಿರೆ
ರೋಮಪುಳಕ ಹರುಷದಲಿ ||೧೫||

ಇತ್ತ ರಾಮನು ಸತ್ತ ಸುದ್ದಿಯನು ಕೇಳಿ
ಮತ್ತೆ ದಂಡನು ಕಳುಹಿದನು ।
ಸುತ್ತಲಿ ಕುಳ್ಳಿರ್ದ ಖಾನಖಾನರಿಗೆಲ್ಲ
ಅರ್ತಿಯಿಂದಲಿ ಹೇಳಿದನು ||೧೬||

ಬಂದು ಕುಳ್ಳಿರ್ದ ಸುರಿತಾಳ ಗದ್ದುಗೆಯೊಳು
ಮುಂದೆ ಇತ್ತರದ ವಾಲಗದಿ ।
ಚೆಂದ ಚೆಂದಲಿ ಖಾನಖಾನರ ಸಿರಿಯನು
ಅಂದವನೇನ ಹೇಳುವೆನು ||೧೭||

ಸೂಸಿದ ಸೂಸಕನೆಳಲಿಕ್ಕಿ ಬೆಳ್ಪಂದದಿ
ಆ ಸುರಿತಾಳನೋಲಗದಿ ।
ದೇಶಾಧಿಪತಿ ರಾಯರು ಮಂಡಲಿಕರು
ಲೇಸಿನಿಂದಲಿ ಕುಳಿತಿರಲು ||೧೮||

ಸುದ್ದಿಯಾಗಿರೆ ರಾಮ ಸತ್ತನು ಎನುತಲಿ
ನಿರ್ಧಾರವೆ ಎಂದು ಎನಲು
ಇದ್ದ ಖಾನರು ಎಲ್ಲ ಹೋಗಿ ಬಂದಿರಿ ನೀವು
ಹೊದ್ದಲಮ್ಮದೆ ಕುಮ್ಮಟವ ||೧೯||

ಅಲ್ಲಿಗಲ್ಲಿಗೆ ರಾಮ ಸತ್ತಾನು ಎಂಬುದು
ಎಲ್ಲ ದೇಶಕೆ ಹರಿ ಹರಿದು ।
ಎಲ್ಲಿ ನೋಡಲು ನಿರ್ಧಾರ ಕಾಣೆವು ಎಂದು
ಮೆಲ್ಲನೆ ನೇಮಿ ಬಿನ್ನೈಸೆ ||೨೦||

ಸ್ತ್ರೀಯ ಮಾತಿಗೆ ಕೊಲ್ಲಿಸಿದನೆ ಕಂಪಿಲರಾಯ
ಬಯಲು ಆಯಿತು ಕುಮ್ಮಟವು
.... ಎನುತಲಿ ಸುರಿತಾಳನು
ನೇಮಿಯ ಕೂಡೆ ಹೇಳಿದನು ॥೨೧॥

ಕಡುಗಲಿ ಕಂಪನ ಹಿಡಿತಹೆನೆನುತಲಿ
ಒಡೆಯನಿಗೆ ನಿಂದು ಹೇಳಿದನು ।
ತಡವು ಮಾಡದೆ ಹೋಗಿ ಹಿಡಿತಹೆನೆನುತಲಿ
ಪೊಡವಿಪಾಲಗೆ ಬಿನ್ನೈಸೆ ॥೨೨॥

ಲೋಲ ರಾಮನು ಸತ್ತನು ಎಂದು ಸುರಿತಾಳ
ಆಳೋಚನೆಯ ಮಾಡಿದನು ।
ಗೌಳಿ ಆಗಲು ರಾಮ ಸತ್ತುದಿಲ್ಲವು ಎಂದು
ಆಳ ಬೇಹಿಗೆ ಕಳುಹಿದನು ॥೨೩॥

ಅಲ್ಲಲ್ಲಿ ಕೇಳುತ ಅಲ್ಲಲ್ಲಿ ನೋಡುತ
ಅಲ್ಲಲ್ಲಿ ಜಗಜಂಪುಗೊಳುತ ।
ಅಲ್ಲಲ್ಲಿ ಸುದ್ದಿ ನಿರ್ಧಾರವಾಗುತ
ಅಲ್ಲಿ ಹೊಕ್ಕರು ಕುಮ್ಮಟವ ॥೨೪॥ ೧೦-೨೦/...

ಮನೆ ಮನೆಯಲಿ ಅಂಗಡಿ ರಾಜಬೀದಿಲಿ
ಜನವು ಬಹುಜನವು ಇದ್ದೆಡೆಯ ।
ತನಗೆಲ್ಲ ರಾಮ ಸತ್ತನು ಎನುತ ಜಗ
ಜನಿತವಾಗಿಯು ಕೇಳಿದನು ॥೨೫॥ ೧೧-೨೧/೨೦-೧೮

ಏನಾಗಿ ಸತ್ತನು ರಣಧೀರ ರಾಮನು
ಹೆಗ್ಗಡತಿಯರ ಕೇಳಿದನು ।
ಮಾನಿನಿ ಮಾಡಿದ ವೃತ್ತಾಂತ[ಗಳನನು]
ಮಾನವಿಲ್ಲದೆ ಹೇಳಿದಳು ॥೨೬॥

ಬೀಡಿಲಿ ರತ್ನಾದೇವಿಯು ಎಂಬವಳುಂಟು
ಆಡುವ ಚೆಂಡ [ತೆಕ್ಕೊಂ]ಡು ।
ಬೇಡ ಹೋದನು ಚೆಂಡ ಅವಳ ಮಗನು ರಾಮ
ನೋಡಿ ಸೈರಿಸಲಾರದೆ ಪಿಡಿದು ॥೨೭॥

ಪಿಡಿಯಲು ಅವ ಮೊರೆಯಿಡುತ ತನ್ನರಮನೆ
ಗೋಡಲು ಗಂಡಗುಸುರಿದಳು ।

ಕಾಡಿದ ರಾಮನ ಕೊಲ್ಲಲೆಂದು ರತ್ನಿ
[ಗಂಡ] ಕಂಪಿಲರಾಯಗುಸುರೆ ||೨೮||

ಮಂದಿ ಕುದುರೆ ಸಹಿತಲಿ ಕಂಪಿಲ ಮುತ್ತಿ
ಕೊಂದು ರಾಮನ ತಲೆ ತಂದು।
ಅಂದವುಳ್ಳಂಥ ರಾಮಯ್ಯನ ಸುದ್ದಿಯ
ನಿಂದು ಕೇಳಿದನು ಸುರಿತಾಳ ||೨೯||

ನಿರ್ಧರದಲಿ ಕೇಳಿದ ಸೂಚನೆಯಲ್ಲಿ
ಮತ್ತೊಬ್ಬ[ರು]ಸುರಿಕೊಂಡು।
ಗಬ್ಬಿ ರಾಮನ ಕೊಂದುದು ದಿಟವೆನುತಲಿ
ಉಬ್ಬಿ ನಲವಿಂದಲೆಯ್ದಿದರು ||೩೦||

ಹಲವು ಕಡೆಗೆ ಉಲಿಯುಲಿದು ಹೋಹೋಯೆಂದು
ಬಲಿದು ಹೇಳಿದನು ಸುದ್ದಿಯನು।
ಬಲು ರಾಯರ ಗಂಡ ಸುರಿತಾಳನೆನುತಲಿ
ಒಲಿದು ಚಾರಕ ಕೇಳಿದನು ||೩೧||*

ನಿರ್ಧರ ರಾಮ ಸತ್ತುದು ಕುಮ್ಮಟವ
ನಿರ್ಧೂಮ ಮಾಡಬೇಕೆನುತ।
ಹೆಬ್ಬುಲಿ ಕಂಪನ ಹಿಡಿತಹೆನೆಂದು ನೇಮಿ
ಸರ್ಬ ದಂಡನು ತೆರಳಿಸಿದ ||೩೨|| ** ೧೧-೩೯/...

ಬಿಟ್ಟನು ಹೊರಬೀಡನು ನೇಮಿಖಾನನು
ಕಟ್ಟಿಸಿ ಡೊಳ್ಳು ಭೇರಿಗಳ।
ದಿಟ್ಟ ಕಂಪನ ಹಿಡಿತಹೆನೆಂದು ತೆರಳಿದ
ಸೃಷ್ಟಿಪಾಲಗೆ ಬೆನ್ನೈ[ಸಿ] ||೩೩||

ಲಕ್ಕಿನ ಹರಹಿಲಿ ಮುತ್ತಿನ ಗುಡಿ ಹೊಯಿದು
ಲಕ್ಷ ಕುದುರೆ ಹೊರಬೀಡ।
ಸೊಕ್ಕಿದ ರಾಯನು ಕಾಣಿಸಿಕೊಳುತಲಿ
ದಿಕ್ಕನೆ ಕುಮ್ಮಟಕಾಗಿ ||೩೪||

---

* ಇಲ್ಲಿ ಪುನರುಕ್ತವಾಗಿದ್ದ ೨೭ ಮತ್ತು ೨೮ನೆಯ ಪದ್ಯಗಳನ್ನು ಕೈಬಿಡಲಾಗಿದೆ. (ಸಂ.)
** ಇಲ್ಲಿ ಪುನರುಕ್ತವಾಗಿದ್ದ ೯-೨೨ರ ಪದ್ಯವನ್ನು ಕೈಬಿಟ್ಟಿದ್ದೇವೆ. (ಸಂ.)

ಕಳುಹಿಸಿಕೊಂಡನು ಆ ನೇಮಿಖಾನನು
ಹಳೆಯ ಮಾವಿನ ತೋಪಿಗಾಗಿ ।
ತಳತಳಿಸುವ ಕೈದೀವಿಗೆ ಬೆಳಕಲಿ
ತೆರಳಿದ ಆ ನೇಮಿಖಾನ ||೩೫||

ಕೆಂಧೂಳು ಮುಸುಕಿ ನಿಂದಿರೆ ಕಾಣಬಾರದು
ಒಂದು ಸಾವಿರ ನಿಸ್ಸಾಳ ।
ಚಂದ ಚಂದದ ವಾದ್ಯದ ಕಲಾಳಿನ
ಸಂದಣಿಯಲಿ ನೋಡಿದರೆ ||೩೬||

ಅಲ್ಲಿಂದ ತೆರಳಿ ಬಿಟ್ಟನು ನೇಮಿಖಾನನು
ಕಲ್ಲಿಕೋಟೆಯ ಬಯಲೊಳಗೆ ।
ಅಲ್ಲಿಗಲ್ಲಿಗೆ ಕುದುರೆಯ [ರೆಂ]ಚೆಗಳನಿಕ್ಕಿ
ನಿಲ್ಲದೆ ದಾಳಿ ಮಾಡಿದರು ||೩೭||

ಕೊಪ್ಪಳ ಕೊ[ಲ್ಲೂರ] ಮಾಯಸಮುದ್ರವು
ದುಪ್ಪಿಗಡ್ಡೆಯು ಹುಳಿಕಳ್ಳಿ ।
ಅಪ್ಪರಾಜನ ಬೀಡು ನೇಮಿಖಾನನೃಪ
ಬಿಟ್ಟಲ್ಲಿ [ಬೀಡು] ಬಿಡುತಿಹನು ||೩೮||

ಸರ್ಬ ದಳವೆಬ್ಬಿಸಿ ಬೇಗ ತೆರಳೆಂದು
ಹೆಬ್ಬುಲಿ ಸುರಿತಾಳನುಸುರೆ ।
ಉಬ್ಬುತ ಹರುಷದಿಂದಲಿ ನೇಮಿ ಹೊರಹೊಂಟ
ಗರ್ಬವ ಮುರಿವೆ ಕಂಪಿಲನ ||೩೯||

ಹಿಂದು ಮುಂದಳ ದಳವ ಕೂಡಿಕೊಂಡು ತಾ
ಬಂದುಬಿಟ್ಟನು [ಕುಮ್ಮಟ]ದಲಿ।
ಇಂದು ಕಂಪಿಲರಾಯನ ಹಿಡಿ ತಹೆನೆಂದು
ಬಂದನು ಈ ನೇಮಿಖಾನ ||೪೦||

ಏಳು ತಿಂಗಳಿಗೆ ಬಂದಿತು ತುರುಕರ ದಾಳಿ
ಹಾಳಮಾಡಿಯು ನಾಡ ಸುಡುತ ।
ಕೋಳು ಹೋ[ಹು]ದು ಹೊಸದುರ್ಗ ಕುಮ್ಮಟವೆಂದು
ಪಾಳ್ಯವನು ಬಿಡಿಸಿದನು ||೪೧|| ೧೧-೨೧ &೧೧೬/...

ಉದಕವಿಲ್ಲದ ತಾವರೆಯಂತೆ ಪಟ್ಟಣ
ಗದಗಮಿಕೊಂಡು ತಲ್ಲಣಿಸಿ ।

ಇದಿರಾಗಿ ಕಾದುವರಾರೆಂದು ಪುರಜನ
[ಚದರಿ] ಹೇಳಿದರಡಿಗಡಿಗೆ ||೪೨|| ೧೧-೧೩೧/...

ಎಡೆ ಎಡೆಗಲ್ಲಿ ಬಿಡಿಸಿ ಖಾನಖಾನರ
[ಹೂ]ಡಿಸಿದನು ತಳಿಗೆಗಳ ।
ಬೀಡ ಬಿಡಿಸಿ ಕೊಲುವಾತ[ನೆಂ]ದುದೀಗ
ಹೂಡೆಯಗಳ ಕೆಡೆಯೆನುತ ||೪೩||

ಬಂದ ದಂಡನು ಕೇಳಿದನು ಕಂಪಿಲರಾಯ
ಕಂದನ ನೆನೆದು ಚಿಂತಿಸಿದ ।
ನೊಂದ ನೋವನು ಒಳಗಿಟ್ಟು [ಕಾತ]ರಿಸುತ
ಬಂದು ಕುಳಿತ ಹಜಾರದಲಿ ||೪೪|| ೧೧-೧೩೬/...

ಇಂದು ತೆರಳಿಸುವೆ ಖಾನಖಾನರ ದಂಡ
ಒಂದು ಬುದ್ಧಿಯನೆಣಿಸುವೆನು ।
ಇಂದಿನಿರುಳೆ ಕಗ್ಗೊಲೆ [ಬಡಿ]ವೆನೆಂದು
ಮಂದಿಯ ಕರೆಸಿ ಹೇಳಿದನು ||೪೫|| ೧೧-೧೪೩/...

ಪಡುವಣಾದ್ರಿಯ ದಿನನಾಯಕನಡರೆ
ಉಡುಪತಿ ಮುಖವದೋರಿದನು ।
ಕಡೆ ಸಾರಿತು ತಾರೆಗಳ ಶೃಂಗಾರವು
ಕೂಡೆ ನೆಗೆದವು ಕುಮುದಗಳು ||೪೬|| ೧೧-೧೫೬/...

ಚೋರಗಂಡಿಯಲಿಳಿಯಿತು ಹೊಣಕೆಯ ಮಂದಿ
ಕಾರುಗತ್ತಲೆ ನಡುವಿರುಳು ।
ಸೇರುತಾಗಳೆ ತುರುಕರ ಪಾಳೆಯಕೆ
ವೀರರು ಕೈದು ಮಾಡಿದರು ||೪೭|| ೧೧-೧೫೮/೨೦-೧೨೦ &೧೨೧

ಒತ್ತಿ ಬೀಳಿಸಿಕೊಂಡು ಗೆರೆಯನು ಒಳಪೊಕ್ಕು
ಮತ್ತೆ ನಡೆದರು ಕಗ್ಗೊಲೆಗೆ ।
[ಬ್ಬ]ಟ್ಟಿ ಅಳಿದು ದೊಡ್ಡ ಮಲ್ಲುಕರೆಲ್ಲರು
ಸತ್ತಂಗೆಯು ಬಿದ್ದಿರಲು ||೪೮||

ಒತ್ತುತೆಡದ ಕೈಯಲಿ ಖಾನರ ಬಾಯ
ಸುತ್ತಿ ಕೊರಳ ಬಿಡಿಸಿದರು ।
ರಕ್ತದ ಕಡಲುವರಿದು ರಣದೊಳಗೆಲ್ಲ
ಸತ್ತರು ದೊಡ್ಡ ಮಲ್ಲುಕರು ||೪೯||

ಇರಿವರು ಆನೆಯ ಇರಿವರು ಒಂಟೆಯ
ಇರಿವರು ಮಂದಿ ಕುದುರೆಯ ।
ಕೊರೆದರು ಗುಡಾರದ ನೇಣನು ಹೊಕ್ಕು
ಇರಿದರು ದೊಡ್ಡ ಮಲ್ಲುಕರ ॥೫೦॥

ಬೆತ್ತಲೆ ಓಡಿಹೋಗುವ ಖಾನಖಾನರ ಕಂಡು
ಅರ್ತಿಯಿಂದಲಿ ನಗುನಗುತ ।
ಕತ್ತಿಲಿ ಕಂಪನ ಪರಿವಾರವೆಲ್ಲವು
ತತ್ತರದರಿಯೆ ಖಾನರನು ॥೫೧॥

ಹಿಡಿದರು ನೂರು ಕುದುರೆ ಕಾಲಾಳನು
ನಡು ಪಾಳೆಯವನು ಹೊಕ್ಕು ।
ಗುಡಿಯ ಬಿಟ್ಟೋಡಿ ಖಾನರು ಕಂಗೆಟ್ಟರು
ಕಡಿದಾಡಿದರು ತಮ್ಮೊಳಗೆ ॥೫೨॥ ೧೧-೧೫೯/೨೦-೧೩

ಸಗರದ [ನಡು ಸೀಮೆಗೆ ಓಡಿ ಹೋದರು]
ಬೇಗ ಹಿಂದಕೆ ತೆ[ರಳಿ]ದ[ರು] ।
ಹೋಗಲಮ್ಮದೆ ಖಾನಖಾನರು ಕಂಗೆಟ್ಟು
ಬೇಗ ಕರೆಸಿ ಹೊಲಬಿಗರ ॥೫೩॥ ೧೧-೧೬೬/...

ಬೆಳಗಾಗೆ ಬಂದು ಬಿಟ್ಟರು ಗಾವುದವನ್ನು
ಉಳಿದೆವಿಂದೊಂದು ಕಂಟಕವ ।
ದಳದುಳವಾಗಿ ಹೋಯಿತು ನೂರು ಕುದುರೆಯ [ಮಂದಿ]
ಎಳೆದೊಯ್ದರು ಹಿಡಿಯಾಳ ॥೫೪॥ ೧೧-೧೬೭/...

ಮತ್ತೆ [ಮರಳಿ] ಪವುಜನಿಕ್ಕಿ ತುರುಕರು ಬಂದು
ಒತ್ತಿ ನಡೆದರಿದಿರಾಗಿ ।
ಸತ್ತರಿನ್ನೇನು ದುರ್ಗದ ಹಿಂದುವ ಮಂದಿ
ಕತ್ತಿಗಳಿಗೆ ಹಬ್ಬವೆನುತ ॥೫೫॥ ೧೧-೧೬೮/...

ಸೂಲಂಗಿ ಇಕ್ಕಿದ ಆನೆ ಸಾವಿರ ಆಗ
ಮೇಲೆ ನೆಲೆಯ ಪವುಜಿನಲಿ ।
ಬಾಳ ಸೇನೆಯ ಕಂಡು ಕಂಪಿಲ ತನ್ನಯ
ಬಾಲನ ನೆನೆದು ಚಿಂತಿಸಿದ ॥೫೬॥

ಹಿಂದುವ ರಾಯದಲ್ಲಣ ನೇಮಿಯ ದಂಡ
ಅಂ[ದು] ಬಿಟ್ಟಿತು ಪಾಳ್ಯೆ ಹೊಯಿದು ।

ಮಂದಿ ಕುದುರೆ ಪರಿವಾರವು ಗಜಸೇನೆ
ಸಂದಣಿಸಿತು ಅಲ್ಲಿಗಲ್ಲಿ ||೫೭||

ಧರೆಯೊಳಗೆಲ್ಲವು ಹಿರಿಯ ಪಾಳ್ಯವ ಬಿಡೆ
ದುರುಗದ ಎಡಬಲದಲ್ಲಿ ।
ಹರಿದರು ಕೂಡಿದ ದಾನವರಲ್ಲಲ್ಲಿ
[ಭರದಲೇರುವ] ಕುದುರೆಗಳು ||೫೮|| ೧೧-೧೭೩/...

ಲಕ್ಷ ಸಂಖ್ಯೆಯ ಮಂದಿ [ಹೊತ್ತು] ದುಮ್ಮಾನವ
ಲಕ್ಷ ಲಕ್ಷದ ಗುಡಿ ಹೊಯಿದು ।
ದಿಕ್ಕು ದಿಕ್ಕಿಲಿ ಪಾಳ್ಯವನು ಬಿಟ್ಟರು ಬೇಗ
ರಕ್ಕಸರಾಯರ ದಂಡು ||೫೯|| ೧೧-೧೭೪/೨೦-೧೩೪

ಮುತ್ತಿನ ಗುಡಿ ಪಚ್ಚೆಯ ಗುಡಿ ಎತ್ತಿತು
ತತ್ತರ ತೋಪಿನ ಗುಡಿಯು ।
ಚಿತ್ರದ ಚಿನ್ನ ರನ್ನದ ಕಳಸಗಳೊಪ್ಪಿ
ಎತ್ತ ನೋಡ್ಯೆಸಿರಿ ಎಲ್ಲ ||೬೦|| ೧೧-೧೭೫/೨೦-೧೩೫

ಹಗಲೊಡೆಯನು ಪಡುವಲ ತಿರುಗಿದನಿತ್ತ
ಖಗ ಜಾತಿ ಗೂಡ ಸೇರಿದವು ।
ಸೊಗಸು ಬೀರುವ ಸೋಮನ ಕಡೆ ಎಸೆದವು
ಮುಗಿದ [ಕುಮುದ] ಮುಖದೆಗೆದು ||೬೧||

ಮಂದ ಮಾರುತನೋಡಿ ಚಂದ್ರಗಿರಿಯನೇರೆ
ಕಂದರ್ಪನಾಳು ಝೇಂಕರಿಸೆ ।
ಚಂದ್ರಗಿರಿಯನಡರಿದ ದಿನನಾಯಕ
ಮುಂದೆ ವಿಟರು ಕೊಂಡಾಡೆ ||೬೨||

ಕರ್ತನಿಗೆಯು ವಂದಿಸಿ ನೇಮಿಯಖಾನ
ಮುತ್ತಿನ ಗದ್ದುಗೆ ಮೇಲೆ ।
ಸುತ್ತ ವಾಲ್ಯೆಸುವ ಮಲ್ಲುಕರೆಲ್ಲರು
ಮಿತ್ತು ಆದರು ಕಂಪಿಲಗೆ ||೬೩||

ತೂಳು ಕಾವಣವಾಯಿತು ಪರಿವಾರಕ್ಕೆ
ಹೇಳಿ ಸಾರಿರೊ ಡಂಗುರವ ।
ಡೊಳ್ಳು ಹೊಯಿದು ನಿಸ್ಸಾಳ ಸೂಳೈಸಲು
ಪಾಳೆಯವೆಲ್ಲ ತಲ್ಲಣಿಸೆ ||೬೪||

ದುರಗದ ಸುತ್ತಲೆಲ್ಲರು ಲಗ್ಗೆ ಮಾಡಿತು
ದೊರೆದೊರೆಗಳ ಪವುಜಿನಲಿ ।
ಧರಣಿ ನಡುಗಿ ತಲ್ಲಣಿಸಲು ನೇಮಿಯು
ಪಿರಿದು ಕೋಪದಿ ಮುನಿದೆದ್ದ ॥೬೫॥

ಕರಿಘುಟೆ ತುರುಗ ಕಾಲಾಳು ಮೋಹರಿಸಿತು
ಮೊರೆದು ಲಗ್ಗೆಯ ಮಾಡಿದರು ।
ತರತರದಲಿ ವಾದ್ಯದ ರಭಸದಲಿರೆ
ಬರ ಸಿಡಿಲಂತೆ ಭೋರ್ಮೊರೆದು ॥೬೬॥

ಶರಧಿಯೊ ಸಾಗರದ ತೆರೆ[ಗಳೊ] ನೊರೆಗಳೊ
ಪಿರಿದಪ್ಪ ಮೇಘದೊಡ್ಡಣೆಯೊ ।
ಕಾರ ಕತ್ತಿಯೊ ಕಾರ ಮಿಂಚೊ ರಂಜಿಸುತಿರೆ
ಪಿರಿದು ಬೆಟ್ಟಗಳೊದರಿದವು ॥೬೭॥

ಲಕ್ಷ ಕುದುರೆ[ಯು] ಸುತ್ತ ಲೆಗ್ಗೆಯ ಮಾಡಿತು
ಲೆಕ್ಕವಿಲ್ಲದೆ ಕಾಲಾಳು ।
ದಿಕ್ಕಿ ದಿಕ್ಕಿಲಿ ಕವಿದರು ರಾವುತರೆಲ್ಲ
ಹೊಕ್ಕರು ತಮತಮಗಾಗ ॥೬೮॥

ತಲ್ಲಣಿಸುತ ತಳವೆಳಗಾಗಿ ಪಟ್ಟಣ
ನಿಲ್ಲಬಾರದು ಮನೆಮನೆಗೆ ।
ಅಲ್ಲಲ್ಲಿ ನಿಂದಿತು ಜನ ಗುಜುಗುಜಿಸುತ
ಎಲ್ಲರು ಬಾಯ ಬಿಡುತಲಿ ॥೬೯॥

ಇದ್ದ ಮನ್ನೆಯರೆಕ್ಕಟಿಗರೆಲ್ಲರು ಬಂದು
ಬುದ್ಧಿ ಆವುದು ಕಾದುವರೆ ।
ನಿರ್ಧಾರವಾಯಿತು ಅಂದು ಹೇಳಿದ ಮಾತು
ಅದ್ದು ಹೋಯಿತು ರಾಜಕಾರ್ಯ ॥೭೦॥

ಮಗ ಸತ್ತ ಸುದ್ಧಿಯು ಮಿಗಿಲಾಯ್ತಿಂದಿಗೆ
ಹೊಗಲಾಯಿತು ಕುಮ್ಮಟವು ।
ನಗೆಯು ಆದೆವು ಪರರಾಯರೆಡೆಗೆಂದು
ದುಗುಡವ ತಾಳಿ ಚಿಂತಿಸಿದ ॥೭೧॥ .../೨೦-೧೩೮

ತುತ್ತು ಆದೆವು ತುರುಕರ ಬಾಯಿಗೆ ನಾವು
ಮಿತ್ತು ಆದಳು ತನ್ನ ರತ್ನಿ ।

ಹೆತ್ತಾಗಲೆ ರಾಮ ಸತ್ತನಾದರೆ ನಾವು
ಮತ್ತೆ ದುಃಖವ ಕಾಣೆನಯ್ಯಾ ||೬೨|| .../೨೦-೧೩೯

ದಳ ಬಂದು ಮುತ್ತಿದುದ ಕಂಡು ಬೈಚಪ್ಪ
ಹೇಳಿದ ಕಂಪಿಲನೊಡನೆ ।
ಹಾಳಹುದು ಹೊಸದುರ್ಗ ಕುಮ್ಮಟವೆಂದು
ಹೇಳಿದೆ ನಿಮ್ಮೊಡನಾಗ ||೬೩|| .../೨೦-೧೪೦

ಕುಡುಮು ನಿಸ್ಸಾಳ ಡೊಳ್ಳು ಬೊಬ್ಬೆಯ ಧ್ವನಿ
ಅಗಲಕೆ ಚೀರುವ ಕಾಳೆ ।
ನೆಗೆದು ಹತ್ತಿತು ಮುತ್ತಿತು ಕುಮ್ಮಟವನು
ತಗುವು ಬಿಟ್ಟಂತೆ ಭೂಜನವು ||೬೪||

ಕಬ್ಬಕ್ಕಿಯು ಕಾನನದೊಳು ಕವಿದಂತೆ
ಬೊಬ್ಬಿಡುತಿದೆ ಬೇಡ ಪಡೆಯು ।
ಗರ್ಭ ತಲ್ಲಣಿಸಿ ಅಬ್ಬರಕೆಲ್ಲ ಪಟ್ಟಣ
ಕೊಬ್ಬಡಗಿತು ಕಂಪಿಲನ ||೬೫|| ೧೧-೨೦೮/...

ಮಂದಿ ಕುದುರೆಯ ಕರೆಸಿದ ಕಂಪಿಲರಾಯ
ನೊಂದು ನುಡಿದ [ಮನದೊಳಗೆ] ।
ಕಂದನಳಿದನು ವಿಭವ ಬಯಲಾಯಿತು
ಸಂದೇಹವೇ ಕೇಳು ಎಂದ ||೬೬|| ೧೧-೨೦೬/...

ಮುಂದರಿಯದೆ ರಾಮನ ಕೊಂದೆನೆಲೊ ಕಂದ
ನಿಂದೆ ಬಂದಿತು ಸತಿಯಿಂದ ।
ಬಂದಂಥ ದಂಡಿಗೆ ಕಡಿವರೊಬ್ಬರ ಕಾಣೆ
ಎಂದು ನುಡಿದ ಬೈಚಪ್ಪ ||೬೭||

ಹರಿದು ವಾಡೆಯನ್ನು ಹರಿತ[ನುಜ] ಬರಹೋ[ಗೆ]
ಧುರಗಲಿಯನು ಕೊಲ್ಲಿಸುವರೆ ।
ಕರೆಸು ನಿನ್ನರಸಿಯ ತರಿಸು ವಾರುವನ
ತೆಗೆಸು ದುರ್ಗದ ಮುತ್ತಿಗೆಯ ||೬೮||

[ಕನ್ನೆ ತಾ] ಮನಸೋತು ಚೆನ್ನರಾಮನ ಕಂಡು
ತನ್ನೊಳಿಗದವಳ ಕಳುಹಿ ।
ಅನ್ನೆವ ಹೇಳಲು ಕೇಳದಿರ್ದರೆ ನಿನ್ನ
ಮಗನ ಕೊಲ್ಲಿಸಿದಳು ಪಾಪಿ ||೬೯|| .../೨೦-೧೪೩

ಕೃತಯುಗದಲಿ ರೇಣುಕೆ ಹುಟ್ಟು ಕಾರ್ತ್ಯನು
ಹತವಾದನು ವಂಶವಡಗಿ ।
ಸತಿಯಾಗಿ ದ್ರೌಪದಿ ಹು[ಟ್ಟಲು] ಪಾಂಡು
ಸುತರು ಕೆಟ್ಟರು ನೀನರಿಯಾ ||೮೦|| ೧೧-೨೦೯/೨೦-೧೪೨

ಹಿತವೆಂದು ಹೆಂಡತಿಗೆಯು ನೀನು ಒಲಿದರೆ
ಕಥೆಗಳನಿಕ್ಕಿ ಕೊಲಿಸಿದಳು ।
ಸುತ ರಾಮನಾಥನ ಹತಮಾಡಿಯೆ ನೀನು
ಕಥೆಯಾದೆ ಮೂರು ಲೋಕದಲಿ ||೮೧|| ೧೧-೨೦೯/೨೦-೧೪೯

ರಾಮನಿಲ್ಲದೆ ನೇಮಿ ಸೀಮೆಯ ಹೊಕ್ಕನು
ಭೂಮಿಯೊಳಪ್ರತಿ ವೀರ ।
ತಾಮಸ ದಳವ ಕಂಡರೆ ನಿಲುವನೆ ಚೆನ್ನ
ರಾಮನೆಂದಿಗೆ ಹುಟ್ಟುವನು ||೮೨|| ೧೧-೨೧೬/೨೧-೧೫೦

ಸತ್ತವರೆದ್ದು ಬಹರೆ ಕಂಪಿಲರಾಯ
ಮೃತ್ಯು ನಿನಗೆ ಸುತ್ತಿದಳು ।
ಹೆತ್ತ ಮಗನ ಕೊಲಿಸಿದ ಅಪಕೀರ್ತಿಯಾ
ದಿತ್ಯನು ಚಂದ್ರರುಳ್ಳನಕ ||೮೩|| ೧೧-೨೧೭/೨೦-೧೫೨

ಅರಸಿಯರನು ಕೊಂಡು ತೆರಳೊ ಹೊಸಮಲೆಗಾಗಿ
ಕರುಬಿ ಕಾದುವೆನು ದುರ್ಗದಲಿ ।
ಇರಿದು ಮೊರೆದು ತುರುಕರ ಕೂಡ ಕಾದುವೆ
ಬರಿಯ ಮಾತೇಕೆ ಪ್ರಧಾನ ||೮೪|| ೧೧-೨೧೮/...

ಆಡಿದ ರಾಯ ಮಂತ್ರಿಯೊಡನೆ ಮಾತ
ಕೂಡಿ ಏರುವೆ ಕುದುರೆಯನು ।
ರೂಢಿಯೊಳಗೆ ಹೆಸರನು ಹೇಳಿ ಕಡಿದಾಡಿ
ನೋಡು ನೀ ಎನ್ನಾ[ಯುಧವ] ||೮೫||

ಅರವರಿಸದೆ ಕಳುಹಿದ ಮಂದಿ ಕುದುರೆಯ
ಅರಸಿಯರಿಗೆ ಹೇಳದನು ।
ಧರೆಯೊಳಗತಿ ಹೊಸತೆನಿಸಿ ಕಾದುವೆ ನಾನು
ಭರದಿ ನೀವೇ[ಳಿ] ಕುಮ್ಮಟಕೆ ||೮೬|| ೧೧-೨೧೯/...

ಅರಸಿಯರೆಲ್ಲರು ಹರುಷದಿಂದಲಿ ಬಂದು
ತರಿಸಿ ಮುತ್ತಿನ ಸೇಸೆಯಿತ್ತು ।

ಹರಿಸಿ ನೇಮಿಯ ದಳವನು ಮುರಿಯಿರಿಯೆಂದು
ಧರೆಯೊಡೆಯನ ಹರಸಿದರು ||೮೭|| ೧೧-೨೧೯/...

ಕಾದುವ ದಿನವೆ ಕಂಪಿಲ ಮಂಡಲೇಶ್ವರ
ಭೂದೇವತೆ ಬಲ್ಲಳಿದನು ।
ಹೊಯ್ದು ಹೊಯ್ದು ಕಾಳಗದತ್ತ[ಲಳಿದರೆ]
ವಿಧಿ ನಿಮ್ಮ ನಾವು ಕೂಡುವೆವು ||೮೮|| ೧೧-೨೩೪

ರಾಯ ರಾಣಿಯರಾಡಿದ ಮಾತನು ಕೇಳಿ
ಕಾಯದೊಳಗೆ ಮನನೊಂದು ।
ಮಾಯಕಾರ್ತಿಯ ಮಾತಿಗೆ ಕೊಂದು ಮಗನನು
ಬಾಯ [ಬಿಡುವುದೆ] ಬಯಲಿಗೆ ||೮೯|| ೧೧-೨೩೫/...

ಏಕೆ ಬೈಚಪ್ಪ ನೀ ಕಾಕು ಮಾಡಲಿಬೇಡ
ಸಾಕು ಮೂಗಿನ ಮೇಲೆ ಸುಣ್ಣ ।
ನೂಕು ತಾಕಿಲಿ ಕಡಿದಾಡಿ ಕಾದುವೆ ನಾನು
ಆ ಕಂಪಿಲರಾಯ ನುಡಿದ ||೯೦|| ೧೧-೨೧೩/೨೦-೧೪೭

ಮುಗುಳು ನಗೆಯ ನಗುತಲಿ ಬೈಚಪ್ಪನು
ಬಗೆಯ ತಿಳಿಯಬೇಕು ಎನುತ ।
ತಗೆ ತಂದು ಕಾದಿಸಿ ಕಂಪರಾಯನಿಗೆ
ಮಗನ ಸಮ್ಮುಖ ಮಾಡಬೇಕು ||೯೧|| ೧೧-೨೩೭/...

ರಾಮನಾಥಗೆ ಇಮ್ಮಡಿ ರಾಯ ರಾವುತ
ಭೂಮಿಯೊಳಗೆ ಹುಟ್ಟಿಹನು ।
ರಾಮನ ಪೋಲ್ವರ [ಭೂಮಿ]ಯೊಳಗೆ ಕಾಣೆ
ಹೇಮಕೆ ಹಿತ್ತಾಳೆ ಸರಿಯೆ ||೯೨|| ೧೧-೨೩೮/...

ನೇಮಿಯನಲ್ಲದೆ ಹೊಯಿಸುವೆ ತುರುಕರ
ಸೀಮೆಯ ಬಿಟ್ಟು ಓಡಿಸುವೆ ।
ಸೋಮಧರನೆ ಬಲ್ಲ ರಾವುತನಿರವನು
ಭೂಮಿಪಾಲಕನೆ ಚಿತ್ತೈಸು ||೯೩|| ೧೧-೨೩೮/...

ಅವನೀಗ ಮಗಯೆನ್ನ ಅವನೀಗ ತಾಯಿತಂದೆ
ಅವನೀಗ ಕುಲತಿಲಕವನು ।
ಅವನೀಗ ಹರಿಯಲದೇವಿಯ ಬಸುರಲಿ
ಬಿಡದೆ ಬಂದವ ಅವ ರಾಮ ||೯೪|| ೧೧-೨೩೯/...

ಒಮ್ಮೆ ತುರುಕ ನೇಮಿಯ ಕಾದಿ ಗೆದ್ದರೆ
ಇಮ್ಮಡಿ ರಾಮ[ನೆನಿಸುವನು]।
ಬ್ರಹ್ಮಲೋಕವ ಹೊಕ್ಕರೆ ಕಾದಿಗೆಲುವನು
ನಿಮ್ಮ ಮಗನ ಸರಿ ಇಹನು ॥೯೫॥ ೧೧-೨೪೦/...

ಆವ ದೇಶದ ರಾಯರ ಮಗ ಬೈಚಪ್ಪ
ಆವ ದೇಶದ ಮನ್ನೆಯನೆ ।
ಆವ ಕಾಲದಲಿ [ಸ್ನೇಹವ] ಮಾಡಿ ಇದ್ದೆಯೊ
ಎಂದು ಕಂಪಿಲನು ಕೇಳಿದನು ॥೯೬॥ ೧೧-೨೪೧/...

ಕಟಕದಿಂದಲಿ ಬಂದ ದಿಟವುಳ್ಳ ರಾವುತ
ಸಟೆಯ ಬಳಕೆಯಲ್ಲನಿವನು ।
ಕಟಕಟಿ ತುರುಕರ ಮೇಲೇರಿ ಕಡಿವನು
ನಿಟಿಲಾಕ್ಷನೆ ತಾ ಬಲ್ಲ ॥೯೭॥ ೧೧-೨೪೨/...

ತಂದು ತೋರುವೆನೀಗ ಹಿಂದೆ ನೆನೆಯದಿರು
ಮುಂದಿನ ರಾಜಕಾರ್ಯವನು ।
ಚೆಂದ[ಗೊಳಿ]ಸುವೆ ತುರುಕರ [ಕೊಲಿಸುವೆ]
ಎಂದು ಬೈಚಪ್ಪ ಹೇಳಿದನು ॥೯೮॥ ೧೧-೨೪೬/...

ಆದರೆ ಚಿತ್ತೈಸು ಎನುತ ಪ್ರಧಾನನು
[ಮೋದದಿ] ಕೊಂಡಾಡುತಿರಲು ।
ಮೇದಿನಿಯೊಳು ಹೊಸಪರಿಯ ಕಾದಿಸುವೆನು
ಬಾದುರಖಾನನೆ ಕೇಳು ॥೯೯॥ ೧೧-೨೪೭/...

ರಾಮನಾಥನು ಸತ್ತನೆಂದೀಗ ಕಂಪಿಲನೆ
ಭಾವಿಸದಿರು ಮನದೊಳಗೆ ।
ಕಾಯಕೆ ನೆಲೆಯಿಲ್ಲ ಕಂಗೆಡದಿರು ನೀ[ನು]
ರಾಯ ದಳವ ಮುರಿಸುವೆನು ॥೧೦೦॥

ಲಾಯಕೆ ಎದ್ದು ಬಂದನು ಬೈಚಪ್ಪನು
ಒಯಿದ ಬೇಗದಿ ತೇಜಿಯನು ।
ರಾಯ ರಾಮುಗ ಸತ್ತವೆಂಬುದ ಕೇಳಿಯು
ರಾಯಮನವು ನೋಯುತಿಹುದು ॥೧೦೧॥

ಬೊಲ್ಲನ ನೋಡಿ ತಲ್ಲಣಿಸಿ ಪ್ರಧಾನನು
ಕೊಲ್ಲಬಹುದೆ ರಾಮುಗನ ।

ಬಲ್ಲಿದ ರಾಮನು ಸತ್ತನೆಂಬುದ ಕೇಳಿ
ಮೆಲ್ಲನೆ ಮಗ ನೋಯುತಿರಲು ||೧೦೨||

ಬೆಟ್ಟದ ಹಾಗಿರ್ದ ಬೊಲ್ಲ ತಾ ಮೈಗೆಟ್ಟು
ಬಟ್ಟನಂದದಲಿ .... ।
ದಿಟ್ಟ ರಾಮನು ಸತ್ತ ಸುದ್ದಿಯಾಗೆ ಕುದುರೆ
ಬಿಟ್ಟಿತು ಕೂಳ ಕವಣವ ||೧೦೩||

ಕುದುರೆಯ ಬಿ[ಚ್ಚಿ] ತಂದರೆ ಕಿಚ್ಚು ಘನವಾಗಿ
ಹದುಳಿಸಲರಿಯ ಕಂಪಿಲನು ।
ಒದಗಿದ ಕಾಳಗಕೇನ ಮಾಡಲಿ ನನ್ನ
[ಮದಕರಿ] ರಾಮನ ಕಾಣೆ ||೧೦೪|| ೧೧-೨೫೫/...

ಬಾಸೆಯ ಕೊಂಡು ಬಂದನು ಬೈಚಪ್ಪನು
ಮೀಸರ ಗಂಡನ [ಬಳಿಗೆ] ।
ಆ ಸಮಯದಿ ಬಂದನು ಮುನ್ನಿರಿಸಿದ
ವಾಸಕೆ ಬಂದನುಚ್ಚಹದಿ ||೧೦೫|| ೧೧-೨೫೯/...

ಮಂದಿ ಕುದುರೆಯನು ಒಂದು ಠಾವಿಲಿ ನಿಲಿಸಿ
ಬಂದನು ನೆಲ ಮಾಳಿಗೆಗೆ ।
ಅಂದಳವಿಳಿದು ಬೀಗವ ತೆಗೆಸಿದ ಮಂತ್ರಿ
[ಇಂದುಧರನೆ] ಬಲ್ಲನೆನುತ ||೧೦೬|| ೧೧-೨೫೭/...

ತಳುವದೆ ತಳು ಬೀಗವ ತೆಗೆಸಿದ ಮಂತ್ರಿ
ನಳನಳಿಸುವ [ಮುಖದವನು]
ಕಳಕಳಿಸುತ ನಗುತಿರ್ದನು ರಾಮಯ್ಯ
ಹೊಳೆವ ಕಂಗಳ ಚೆನ್ನಿಗನು ||೧೦೭|| ೧೧-೨೬೩/...

ಎದ್ದು ಬರುವ ರಾಮಯ್ಯನ ಬೈಚಪ್ಪ
ಮುದ್ದು ಮುಖ[ನ] ತೆಗೆದಪ್ಪಿ ।
ಕದ್ದಯಿಸದೆ ಕಳವಳಿಸದವವನಾವಾ
ಗಿದ್ದೆಯೊ ಚೆನ್ನಿಗ ರಾಮ ||೧೦೮||

ತಂದೆ ತಾಯಿಯು ನೀನೆ ಬಂಧು ಬಳಗವು ನೀನೆ
ಕೊಂದು ತೋರೆಂದ ಕಂಪಿಲನು ।
ಬಂದ ತಾಪನು ಕಾಯ್ದು ಎನ್ನ ರಕ್ಷಿಸಿದೆಯೊ
ಇಂದು ಕಂಪಿಲನನುಳುಹಿದೆ ||೧೦೯|| ೧೧-೨೭೬/...

ಅಪ್ಪನ......... ತಪ್ಪಿಸಲರಿಯದೆ
ಮುಪ್ಪು ತಂದಳು ರತ್ನಮ್ಮ ।
ತಪ್ಪಿದರೆ ಬಿಡುವುದೆ ವಿಧಿಲಿಖಿತವು......
.... ತಪ್ಪಿಸಬಹುದೆ ||೧೧೦||

ಉಡಕೊಟ್ಟು ಮನ್ನಿಸಿ ಒಡೆಯ ನೀ ಸ್ವಾಮಿಯು
.... ಕುಪಾಯದಿಂದ ।
ತಡೆಯದೆ ಹರಿಯಲದೇವಿಯ ಬಸುರಲಿ
ಬಿಡದೆ ಬಂದವನೀಗ ರಾಮ ||೧೧೧||

ಚಲದಂಕ ಮಲೆವರ ಗಂಡನೆ ರಾಮಯ್ಯ
ನೆಲಮಾಳಿಗೆಯಿಂದ ರಾಯ ।
ಬಲವಾಗಿದೆ ನೇಮಿಯ [ದಂಡು ಖುರಪುಟ]
ತಲೆಗೊಡೆಯನೆ ನೀನು ಏಳೊ ||೧೧೨|| ೧೧-೨೭೭/...

ರಾಮನು ಸತ್ತ ಸುದ್ದಿಯ ಕೇಳಿ ಸುರಿತಾಳ
ನೇಮಿಯ ದಂಡ ಕಳುಹಿದ ।
ಭೂಮಿ ಹಿಡಿಯದು ನೇಮಿ ಸೇನೆ ಕುದುರೆಯ
ಕಾಮಸನ್ನಿಭ ನೀನು ಏಳೊ ||೧೧೩|| ೧೧-೨೭೮/...

ಏಳು ಮನ್ನೆಯ ನೀನು ತಂದೆ ಕಂಪಿಲನಾಣೆ
ಕುಲಗುರುವಿನ ಪಾದದಾಣೆ ।
ಬಲಪಟ್ಟದ ಹರಿಯಮ್ಮನಾಣೆಯನಿಟ್ಟ
ಲೋಲ ರಾಮಯನೇಳದಿರಲು ||೧೧೪|| ೧೧-೨೬೯/...

ಪರಿವಾರದಾಣೆ ಏಳೆಲೊ ಚೆನ್ನರಾಮಯ್ಯ
ದುರುಬಲವಾಯ್ತು ಕುಮ್ಮಟವು ।
ಅರಿರಾಯರು ಬಂದು ಕಂಪಿಲರಾಯನ
ಕೊರಳಿಗೆ ಬಾ[ಣ] ಹೂಡಿದರು ||೧೧೫||

ಆ ನುಡಿಗೇಳುತಲುರಿದೆದ್ದನು ರಾಮ
ದಾನವರಿಂತು ಮಾಡಿದರೆ ।
ನೀನಿದ ಕೇಳು ಬೈಚಪ್ಪ ಅವರನು
ನಾನು ನೇಮಿ[ಯ] ಓಡಿಸುವೆನು ||೧೧೬||
[ಮಾತು ಮುಂಚದ] ಮುನ್ನ ಆತ ಗರ್ಜಿಸುತೆದ್ದು
[ದಾತನರಿದು ಕಣ್ದೆರೆದು] ।

ಭೂತ ಪ್ರೇತಕೆ ಉಣಲಿಕ್ಕುವೆ ನಾನೀಗ
ಭೀತಿ ಮುತ್ತಿಗೆ ಬಿಡಿಸುವೆನು ||೧೧೭|| ೧೧-೨೮೮/...

[ತ]ಳುಹು ಇನ್ನಾತಕೆ ಉಳುಹಿದೆ ಪ್ರಾಣವ
ಹಳೆಯ ಕಾಲದ ದಂಡ ಬಿಟ್ಟು ।
ಇಳಿ[ದಂತೆ] ಮಳೆ ಮೇಘದ ಮೋಡ ಮುಗಿಲನು
ಚಳಿಯಂತೆ ಬಳಸಿ ಕೊಲ್ಲುವೆನು ||೧೧೮||

ಉಟ್ಟ ಪಟ್ಟೆಯ ದಟ್ಟಿ ಹೊನ್ನ ವಂಕುಡಿಯ ತಾ
ಬಿಟ್ಟ ಜಡೆಯ ಗೊಂಡೆಯವು ।
ತೊಟ್ಟ ಮುತ್ತಿನ ತೊಡಿಗೆಯು ಏಕಸರದಿಂದ
ಕಟ್ಟಾಳು ರಾಮಯ್ಯನೆದ್ದ ||೧೧೯|| ೧೧-೨೯೦/...

ಮೃಗಮದ ಸಾದು ಕಸ್ತುರಿಯ ಜವಾದಿಯ
ಅಗಿಲು ಕುಂಕುಮ ಲೇಪನವು ।
ತೆಗೆದು ಹೇಮದ ಬಟ್ಟಲಿಂದಲಂಕರಿಸಿದ
ನಗುತಲಿ ಇದ್ದ ರಾಮಯ್ಯ ||೧೨೦||

ಆಗ ಪ್ರಧಾನ ಬೈಚಪ್ಪ ರಾಮಯ್ಯಗೆ
ಬೇಗ ವಜ್ರಾಂಗಿಯ ತೊಡಿಸಿ ।
ರಾಗ[ವ]ಳಿಯ ತಲೆ [ಟವಳೆ ಗುಬ್ಬಿಯ ಜೋಡು]
[ಬೇಗಲೊಪ್ಪಿದ ರಾಮನಾಥ] ||೧೨೧|| ೧೧-೨೯೨/೨೧-೩೯

ಕಾಯವ ವಂಚಿಸಿದನು ರಾಮನಾಥಗೆ
ಮಾಯಕಾರನು ಬೈಚಪ್ಪ ।
ರಾಯ ರಾವುತನೆಂಬ ಹೆಸರನಾತಗೆ ಕೊಟ್ಟು
ಆಯತದಲಿ ನಡೆತಂದ ||೧೨೨|| ೧೧-೨೯೫/೨೦-೪೦

ನಡೆಯ ಕಂಡರಿಯಿತು ರಾಜವಾಹನವಾಗ
ಒಡೆಯ ಚೆನ್ನಿಗ ರಾಮನೆಂದು ।
[ಜ]ಡಿದು ಮುಂಗಾಲ ಕೆದರಿ ಅನುಮಾನಿಸಿ
[ತೊಡಕಿ ನಾಸಿಕವರ್ತಿಯಿಂದ] ||೧೨೩|| ೧೧-೨೯೭/...

ನೆಲದ ಮೇಲೆಯು ನಿಲ್ಲದು ರಾಜವಾಹನ
ಒಲಿದು ನಲಿದು ಉಳಿಯೆದ್ದು ।
ತಳುವದೊಕ್ಕಲ ಕಿತ್ತು ದಾಂಟಿತು ಬೊಲ್ಲನು
ಕಲಿ ಕಂಧರಕೆ ಕೈನೀಡೆ ||೧೨೪|| ೧೧-೩೦೦/೨೧-೬೩

ಎತ್ತಲೊತ್ತಿದರತ್ತಲು ಮದ ಮುರಿಯಿತು
ಮತ್ತೆ ರಾಮಯ್ಯನ ತೇಜಿ ।
ಕತ್ತಿ[ಯ ಕಿತ್ತು ಜಡಿದು] ಬುಲ್ಲಯಿಸಿದ
ಮೃತ್ಯುವ ಗೆಲಿಸಿ ಕಂಪಿಲಗೆ ||೧೨೫|| ೧೧-೩೧೧/೨೦-೬೪

ಹೊಸತಾಗಿ ಬಂದ ರಾವುತರಾಯ ಮನ್ನೆಗೆ
ವಶಮಾಡಿ ಹಳೆಯ ಮಂದಿಯನು ।
[ದೆಸೆ]ಯುಳ್ಳ ಕುದುರೆಯ ಕೊಟ್ಟು ಪವುಜನಿಕ್ಕಿ
ಸಸಿ[ನೆ] ಮಾವಿನ ತೋಪಿನಡಿಯ ||೧೨೬|| ೧೧-೩೦೪/೨೧-೪೨

ಹರಿದು ಬಂದನು ಪ್ರಧಾನ ಬೈಚಪ್ಪನು
ಅರಸು ಕಂಪಿಲನು ಇದ್ದೆಡೆಗೆ ।
ಬೆರಸಿ ಲೆಗ್ಗೆ[ಯ] ಹುಯ್ಯಲ ಹಿಡಿಯಿತು ಬೇಗ
ಅರಿರಾಯಸುರ ನೇಮಿ ಮೇಲೆ ||೧೨೭|| ೧೧-೩೦೮ & ೩೧೭/...

ಬರಹೇಳೊ ನಿನ್ನ ಪವುಜನೆಂದು ಕಂಪಿಲ
ಅರಸು ಮಂತ್ರಿಗೆ ಹೇಳಿದನು ।
ಭರದಿಂದ ಬಂದ ಬೈಚಪ್ಪ ರಾಮಗೆ ಹೇಳಿ
ಕರೆದ ಸನ್ನೆಯ ಮಾತಿನಲ್ಲಿ ||೧೨೮|| ೧೧-೩೧೭/...

ಕೋಲ ಕಠಾರಿ ಹರಿಗೆ ಬಿಲ್ಲು ಬಲ್ಲೆಯ
ಮೇಲೆ ಇರಿವ ಈಟಿಗಳು ।
ಕಾಲಾಳು ಕವಿದೆಸೆಯಿತು ರಾಮನ ಮಂದಿ
[ಮೇಲೆ ಹುಯ್ಯಲ] ತಾಗಿದರು ||೧೨೯|| ೧೧-೩೧೯/...

[ಫಡ] ಹುಸಿ ಪೋಗದಿರೆನುತಲಿ ಪಚಾರಿಸಿ
ಕಡುಗಲಿ ರಾಮನ ಮಂದಿ ।
ಹಿಡಿದು ಚೆಂ[ಡಿಕೆಯ ಹಿಂ]ದಕೆ ಬರಸೆಳೆದರು
ಕೆಡಹಿ ಕೊರಳ ಬಿಡಿಸಿದರು ||೧೩೦|| ೧೧-೩೨೭/...

ವನ ಬೆಸಲಾಯಿತೊ ಘನ ಮೇಘ ಉಕ್ಕಿತೊ
[ದಿನಕರ]ನೆಯ್ದಿದಂದದಲಿ ।
ಮೊನೆ ಮಾಡಿತು ಹತ್ತು ಸಾವಿರ ಕುದುರೆಯು
ಅನುವಾಗಿ ಕೈಗೆ ಸಿಕ್ಕಿದರು ||೧೩೧|| ೧೧-೩೩೦/...

ನೋಡು ಕಂಪಿಲರಾಯ ಆಡಿದ ಮಾತನು
ಮಾಡಿದ ಬಿನ್ನಹವಹುದೆ ।

ಕೂಡೊದಗಿತು ಕಲಿ ಕಂಪರಾಯನ ಮಂದಿ
ಕೋಡ ಕೊ[ಯ್ದನು] ಬಾದುರನು ||೧೩೨|| ೧೧-೩೯/...

ಖಗರಾಜಗೆ ಮುನಿದೆರಗುವ ಗಿಡುಗನೊ
ಮೃಗರಾಜನ ಹೊಸ ದಾಳಿ।
ಹೊಗೆ ನೆಗೆದುರಿದಪ್ಪಳಿಸಿ ನುಂಗುವವೊಲು
ಬಗೆಯ ತೋರುವ ಮಹಾರಾಯ ||೧೩೩|| ೧೧-೩೩೧/...

ಮಿಕ್ಕ ಪವುಜ ಕವಿದೆರಗಲು ರಾಮನು
ಸಿಕ್ಕಿದನಿವನೆಂದೆನುತ।
ಇಕ್ಕೈಯಲಿ ಪಟ್ಟೆಯವ ತೆಗೆದುಕೊಂಡು
ಹೊಕ್ಕು ಹೊಯಿದನು ದಾನವರ ||೧೩೪|| ೧೧-೩೩೨/...

ಸಿಡಿಲ ತಡೆಗಳೊಡೆದಂತೆ ಸಿಂಗಾಡಿಯು
ಕಡುಗಲಿ ಸೂಸೆ ಕಾರ್ಮುಳೆಯ।
ಹಿಡಿದು ಭಲ್ಲೆಯ ಕಂಡೆ ತಲವಾರಗಳ
ಆಕಡೆಗಾಳು ಏರಿದರು ||೧೩೫|| ೧೧-೩೩೩/...

ಇದಿರಾಗಿ ಬಂದೆರಗಿದನು ದುಂಬುರಖಾನ
ಸದೆದು ಹಿಂದುವನ ಮಂದಿಯನು।
ಹೆದರಿ ಬಿದ್ದರು ಮನ್ನೆಯ ಮಂಡಲಿಕರು
ಮದದಾನೆ ರಾಮನೆಂದಂಜಿ ||೧೩೬||

ಹೊಕ್ಕನು ರಾಯ ರಾವುತನು ಅಬ್ಬರದಿಂದ
ಇಕ್ಕೈಯಲಿ ಸವರಿದನು।
ಸಿಕ್ಕಿದ ಬಿಡು ಮುನ್ನಿಲಿವನೆಂಬುತಲಿ
ಒಕ್ಕುತ ಶಿರ ಕೊಲ್ಲಿಸಿದನು ||೧೩೭|| ೧೧-೩೩೫/...

ಇಬ್ಬರನೊಂದಾಗಿ ಸವಡಿಸಿ ಹೊಡೆದನೀಗ
ಬೊಬ್ಬರಖಾನನ ಹಿಡಿದ।
ಅಬ್ಬುಗೆಯಲಿ ತಿವಿದನು ಜಾಯಿ ಮಲ್ಲುಕನ
ಅಬ್ಬರ ರಾಯ ರಾವುತನು ||೧೩೮||

ಕಿಬ್ಬದಿ ಹರಿದು ನಿಟ್ಟೆಲು ತುಂಡುತುಂಡಾಗಿ
ನಿಬ್ಬರದಲಿ ಹೊಯಿದಡೆ।
ಉಬ್ಬಿ ಏಳುವ ಮುಂಡ ತುಂಡಾಗಿ ರಣದೊಳು
ಬೊಬ್ಬೆಗಳೆಲ್ಲ ನೋಡಿದರೆ ||೧೩೯||

ತುರಗ ಒಂದೆಸೆಯಲಿ ಕಚ್ಚಿ ಕೊಲ್ಲುತಲಿರೆ
ಬೆರಸಿ ತಿವಿದ ಜವದಾಡೆ ।
ಪರಬಲಾಸುರ ತುಂಬುರಖಾನನೆಂಬನ
ಮುರಿದು ಹೊಯಿದನು ಲವುಡಿಯಲಿ ॥೧೪೦॥ ೧೧-೩೪೦/...

ಕತ್ತಿಯ ಗಾಯಕೆ ಬೆಚ್ಚಿ ತಮ್ಮೊಡೆಯಗೆ
ಬಿಚ್ಚಿ ಹಾಕುವ ಕುದುರೆಗಳು ।
ಒತ್ತಿ ಹರಿವ ರಕ್ತಕೆ ನಿಲಲಾರದೆ
ಮತ್ತೆ ಮುಖವ ನೆಲಕೂರಿ ॥೧೪೧॥ ೧೧-೩೩೮/...

[ಒದರುತ] ರಾಮನಾಥನು ಪರಿದನೆಂದು
ವಾದಿಸುವರು ಜೀಬಿನಲ್ಲಿ ।
ಬೆದರಿಸಿ ನೋಡಿ ಮಾತಾಡಿಸಲರಿಯದೆ ಮೇಲೆ
ಕದುವಾಮುಕಗಾಯ ಜೋಡಿ ॥೧೪೨॥

ಕಾಲು ಒಡೆದು ಗುಂಡಿಗೆ ಹತಹತವಾಗಿ
ಹೋಳು ಹೋಳಾಗಿ ಹೊಯ್ದಾಡಿ ।
ಬೀಳುತೇಳುತ ಮುಂದಲೆ ಹಿಡಿದೆಳೆದಾಡಿ
ಆಳು ಬಿದ್ದಿತು ಜಾಳಿನಲಿ ॥೧೪೩॥

ಎಳೆದಾಡುವ [ವಿ]ವಸ್ತ್ರಗಳಲ್ಲಲ್ಲಿ
ಎಳೆದಾಡುವ ಭೂತಗಳು ।
ಕಳವಳಿಸಿ ಎದ್ದಾಡುವ ಹದ್ದಿನ
ಪ್ರಳಯಕಾಲದ ಬಹುತೆಗವು ॥೧೪೪॥

ತಲೆ ಹರಿದವು ಜೊ[ತ್ತೊಡೆ]ದು ಟವುಳಿಗಳು
ಅಳಿಯುತ ಭಟರಿರಿದಾಡಿ ।
ನುಗ್ಗೆದ್ದು ಹೊಯಿದು ಕೊಂದರು ತಮತಮಗೆಲ್ಲ
ಸುಗ್ಗಿಯಾಯಿತು ಭೂತಗಳಿಗೆ ॥೧೪೫॥

ತಮತಮಗೇರಿ ಕೊಂದರು [ವಾಸಪಂಥದಿ]
ಕ್ರಮಗೆಡಿಸಿದರಸುರರನು ।
ನಿಮಿಷ ಮಾತ್ರಕೆ ಕೊಂದನು [ರಾಯರಾವುತ]
ಸಮರಂಗಕೆಣೆಕಾರನಹುದು ॥೧೪೬॥ ೧೧-೩೫೩/...

ರಾಮನೆಂಬವ ಸತ್ತವೆಂಬುತ ಬಂದೆವು
ಭೂಮಿಯ ಮೆಟ್ಟದಿರುವೆವು ।

ಸೀಮೆಯ ಒಳಪೊಕ್ಕರೆ ಕೊಲೆ ಘನವೆಂದು
ನೇಮಿ ಚಿಂತಿಸಿ ತಿರುಗಿದನು ||೧೪೭|| ೧೧-೩೭೪/...

ರಣದೊಳಗೆಲ್ಲವು ಹೆಣಮಯವಾಯಿತು
ನೆಣ ನೆತ್ತರವು ಕೆಸರೊಳಗೆ ।
ಸೆಣಸುವರಿಲ್ಲೆಂದು ತಿರುಗಿದ ರಾಮಯ್ಯ
ಹೊಣಕೆಯ ಪರಿವಾರ ಸಹಿತ ||೧೪೮|| ೧೧-೩೭೬/...

ಧರ್ಮಗಾಳೆಗ ಹಿಡಿಸಿದ ರಾಮನಾಥನು
ಡಮ್ಮೆಂದು ಟಮಕು ಮಾಡಿಸಿದ ।
ತಮ್ಮ ಮಂದಿಯ ಕರೆದಂತೆ ಹೆಗ್ಗಾಳೆಯ
ಸನ್ನೆದೋರಿದವು ಆ ಕ್ಷಣದಿ ||೧೪೯|| ೧೧-೩೭೫/...

ತುರುಗಿದ ಅಂಬು ಹಕ್ಕರಿಕೆಯ ಮೇಲೆಲ್ಲ
ತೆರಹಿಲ್ಲ ಮೈಜೋಡಿನೊಳಗೆ ।
[ಹರ]ಕೆಯ ಪಾವು ಉಣ್ಣೆಗಳುಣ್ಣೆಯಂದದಿ
ಗರಿ ಮೆರೆದವು ತುರಗದಲಿ ||೧೫೦|| ೧೧-೩೮೧/...

ತುರಗವೇರಲು ಪರಿವಾರ ಮುಸುಕಲು
ಅರರೆ ಭಟರು ಕೊಂಡಾಡೆ ।
ಭರದಿಂದ ಬಂದು ಕಂಪಿಲನ ವಾಲಗದೊಳು
ಹಿರಿದಾಗಿ ಪವುಜನಿಕ್ಕಿದರು ||೧೫೧|| ೧೧-೩೭೮/...

ಕತ್ತಿಗಳೆರಡು ಕೈಯಲಿ ರಕ್ತದ ಸರಿ
ಮತ್ತೆ ವಜ್ರಾಂಗಿಯ [ಜೋಡು] ।
ಮುತ್ತಿ ನೋಡಲು ರಾಯ ರಾವುತನಲ್ಲವು
ಹತ್ತು ಮಡಿಯ ರಾಮನೆನುತ ||೧೫೨|| ೧೧-೩೮೩/...

ಎತ್ತಣ ಸುದ್ದಿ ಎನುತಲಿ ರತ್ನಾದೇವಿ
ತೊತ್ತು ಕಳಿಹಿಸಿ ನೋಡಿದಳು ।
ಮಿತ್ತು ಬಂದಿತು ಎನುತ ಹರಿದು ಹೋಗಿ
ಸತ್ತ ರಾಮನು ಬಂದಹನೆ ||೧೫೩|| ೧೧-೪೪೫/...

ನೋಡು ನೋಡೆಲೆ ಕಂಪಿಲ ಮಾಯದಿ ಮರೆ
ಮಾಡಿದ ಮಾಟವನೆನಗೆ ।
ಹೂಡಿಕೊಂಡಳು ನೇಣನು ಕೊರಳಿಗೆ ಮತ್ತೆ
ಈಡಾಡಿಗಳು ಪ್ರಾಣವನು ||೧೫೪|| ೧೧-೪೫೨/೨೧-೧೦೯

ಆಗಳೆ ಸತ್ತಳೆನುತ ಕೇಳಿ ಕಂಪಿಲ
ಹೋಗಲಿ ಅವಳು ಪಾತಕಿಯು ।
ಹೋಗಿಸದೆ ಪ್ರಾಣವ ದೇವ ಮಂತ್ರಿಯ
ಭಾಗ್ಯದಿಂದಲಿ ನಾನುಳಿದೆ ||೧೫೫|| ೧೧-೪೫೫/...

ತೆಗೆದು ಹಾಕಿಸು ಹೊರಯಿಕೆಯೆಂದು ಕಂಪಿಲ
ಮಗನ ಹಗೆಯ ಮಾಡಿದವಳ ।
ಸಿಗಿದು ತೋರಣವ ಕಟ್ಟಿಸುವೆನೆಂದಿರ್ದೆನು
ಬಗೆಯನರಿದು ಮುಂಚಿದಳು ||೧೫೬||

ಯಾತಕೆ ಸತ್ತಳೆನುತ ರಾಮನಾಥನು
ಮಾತನಾಡಿದ ಮಂತ್ರಿಯೊಡನೆ ।
ಭೀತಿಯಾಯಿತು ತನ್ನಿಂದಲಿ ತಾ ಬರಿ
ಮಾತಿನಿಂದಲಿ ಸತ್ತಳೆನುತ ||೧೫೭|| ೧೧-೪೫೭/...

ಈ ಈ ಪರಿಯಿಲ್ಲದಿದ್ದರೆ ರಾಮನಾಥಗೆ
ಪಾಪವು ನೆಲೆಗೊಳ್ಳದಿಹುದೆ ।
ಕಾಪಾಲಿಯ ಕರುಣವು ಇಲ್ಲದಿದ್ದರೆ
ಭೂಪನು ಇದನುಳುಹುವನೆ ||೧೫೮|| ೧೧-೪೫೭/...

ಕುಳಿಯ ತೆಗೆದು ಹೂಳಿಸಿದ ಪ್ರಧಾನನು
ಕಲಿ ರಾಮನ ಕೊಲ್ಲಿಸಿದವಳ ।
ಇಳೆಯೊಳು ಅಪಕೀರ್ತಿಯಾಯಿತು ಎಂದು
ಸಲೆ ಮಂತ್ರಿಯು ಮರುಗಿದನು ||೧೫೯|| ೧೧-೪೫೮/...

ಅಂತು ಸಂಧಿ ೮ಕ್ಕಂ ಪದನು ೧೪೮೦ (>೧೪೪೬)ಕ್ಕಂ ಮಂಗಳಮಹಾಶ್ರೀ.

❖❖

ಸಂಧಿ : ಒಂಬತ್ತು

❖

ಮಾದಿಗಿತ್ತಿಯ ಕಾಳಗ

ಛಪ್ಪನ್ನ ದೇಶಕೆ ಕೋಳಾಹಳ ದಾನವ
ಕಪ್ಪದ ರಾಯವಿಭಾಡ ।
ಎಪ್ಪತ್ತೆರಡು ನಿಯೋಗದ ಮಧ್ಯದಿ
ಒಪ್ಪಿ ಕುಳಿತ ಸುರಿತಾಳ ॥೧॥ ೧೨-೧/...

ನಡೆಯಿತು ದಂಡು ಕೆಂಧೂಳೇಳೆ ಸುರಿತಾಳ
ಹಿಡಿತರ ಹೇಳೆ ಬಾದುರನ ।
ತಡೆಹಿದ ನೇಮಿ ಎಂದೆನುತ ದಾನವಪತಿ
ನುಡಿದನು ಚಾವಡಿಯೊಳಗೆ ॥೨॥ ೧೨-೩/...

ಬಂದಿತು ದಂಡಾಗಲೆ ನೇಮಿಯ ಸುದ್ದಿ
[ಸಂ]ದಿತು ಸುರಿತಾಳನಿಗೆ ।
[ಇಂದು ರಾಮನು ಸಿಕ್ಕದೆ] ತುರುಕರ ಕೊಂದ
ಮಂದಿಯ ಕುಮ್ಮಟದೊಳಗೆ ॥೩॥ ೧೨-೪/...

ಕೇಳಿದ ಹುಸಿ ತಾಗಿದ ಮಾತೆನುತಲಿ ಸುರಿತಾಳ
ಹೇಳಿದನವ ಬೆಸಗೊಂಡ ।
ದಾಳಿಯಾಗಿ ಬಂದು ತಾಗಿದ ರಾಮಯ್ಯ
ಪಾಳೆಯ ಕಟ್ಟೆಲ್ಲ ಕೆದರೆ ॥೪॥ ೧೨-೫/...

ತಂದೆ ಮಗನ ಕೊಲ್ಲಿಸಿದನೆಂಬ ಸುದ್ದಿಯು
ಸಂದಿತು ಭೂತಳದೊಳಗೆ ।
ಇಂದು ಬಂದು ರಾಮ ಕಾದಿದ ಪರಿ ಹೇ
ಗೆಂದು ಕೇಳಿದ ಸುರಿತಾಳ ॥೫॥ ೧೨-೬/...

ಸತ್ತನು ಎಂದು ಹೋಯಿತು ರಾಮನ ಸುದ್ದಿ
ಮತ್ತೆ ಮಂತ್ರಿಯು ಮದ್ದನಿರಿಸಿ।
ಕರ್ತು ರಾಮನ ತಂದು ಆತನ ಕಾದಿಸಿ
ಹೆತ್ತ ತಂದೆಯನು ಕಾಣಿಸಿದ ||೬|| ೧೨-೭/...

ಭಾಪು ಭಾಪುರೆ ಹಿಂದುವ ರಾಯನ ಮಂತ್ರಿ
ಭೂಪ ಮೆಚ್ಚಿದನು ಸುರಿತಾಳ।
ಈ ಪರಿ ಬುದ್ಧಿ ಪ್ರಧಾನ ನಮಗಿಲ್ಲೆಂದು
ಕೋಪದಿ ನೇಮಿಯ ಬೈದು ||೭|| ೧೨-೮/...

ಸುದ್ದಿ ಬಂದಿತು ರಾಮ[ನು] ಕೊಂದನೆಂಬುತ
ನಿರ್ಧಾರವೆ ನೇಮಿಯಿಂದ।
ಇದ್ದವರೆಲ್ಲರು ಗಾಯವಾದರು ಮಂದಿ
ಹೊದ್ದಲಮ್ಮದೆ ತಿರುಗಿದರು ||೮||

ಡಿಳ್ಳಿಯ ಹೊದ್ದಲಮ್ಮದೆ ಖಾನಖಾನರು
ಮೆಲ್ಲಮೆಲ್ಲನೆ ಹುದುಗುತಲಿ।
ಕಳ್ಳತನದಿ ಹೊಕ್ಕನು ನೇಮಿ ಇರುಳಲಿ
ಉಳ್ಳವರೆಲ್ಲರ ನೀಗಿ ||೯|| ೧೨-೯/...

ಬಂದು ಸಮ್ಮುಖವಾದನು ನೇಮಿ ಒಡೆಯಗೆ
ನಿಂದನು ಭಯಭಕ್ತಿಯಲಿ।
ಒಂದಾಗಿ ಮಾತನಾಡನು ಮೋರೆಯ ನೋಡಿ
ನಿಂದಿರ್ದರೆ ಕುಳ್ಳಿರೆನ್ನ ||೧೦|| ೧೨-೧೦/...

ಭೂಮಿಯೊಳಗೆ ದಾನವರ ಕೈದಿಗಳಗಾಗಿ
ನೇಮಿಸಿ ಹಿಡಿಯದ ಹಾಗೆ।
ಹೇಮದಿಂದಲೀ ಅರಿರಾಯ[ನ] ಗೆಲವೆಂದು
ನೇಮಿ ಹೇಳಿದನು ಶಾಸ್ತ್ರವನು ||೧೧|| ೧೨-೧೧/...

ಮಲೆವ ಮಾಳವ ತೆಂಕಲೆಯ ಮುಂಗಲಿಗನು
ಮಲೆಯ ರಾಯರೊಳು ಬಲ್ಲಾಳ
ನೆಲೆಯಾದನು ರಾಮಯ್ಯ [ಕುಮ್ಮಟದೊಳು]
ಬಲುಹ [ನಾನೇನ ಬಣ್ಣಿಪೆನು] ||೧೨|| ೧೨-೧೨/...

ಬಾದೂರಖಾನನ ಸದೆಸಿ ತಹೆನೆಂದು
ಮೂದಲಿಸಿಯೆ ಹೋದರೆಲ್ಲ।

ಹೋದಲ್ಲಿ ಹುಲ್ಲ ಹುಟ್ಟದೆ ಓಡಿಬಂದಿರಿ
ಕಾದುವ ಖಾನರಿನ್ನಾರೋ ||೧೩||

ಕೊಟ್ಟದ ಬೇಡನೆಂಬಿರಿ ಜಗವೆಲ್ಲ
ಮುಟ್ಟಲಮ್ಮದೆ ತಿರುಗಿದಿರಿ ।
ದಿಟ್ಟನು ಹಿಂದುವ ರಾಯರೊಳಧಿಕನು
ಗಟ್ಟಿಯಹುದೊ ಕಂಪಿಲನು ||೧೪|| ೧೨-೧೩/೨೪-೧೭

ಹತ್ತು ಲಕ್ಷವು ಮಂದಿ ಲಕ್ಷ ಕುದುರೆಯು ಹೋಗಿ
ಮುತ್ತೆ ಕಲ್ಲು ಕುಮ್ಮಟವನು ।
ನೆತ್ತರ ಕಡಲುವರಿಯೆ ರಾಮ ಕೊಂದನು
ಹತ್ತು ತಲೆಯ ರಾವಳನು ||೧೫||

ಮುಗಿಲ ಸೆರಗಿನಂತೆ ಮಿಗಿಲಹ ದುರ್ಗದ
ಬಗೆಯನಿನ್ನಾರು ಬಲ್ಲವರು ।
ನಗೆಯಾದೆವು ಪರರಾಯರೆಡೆಗೆ ಎಂದು
ದುಗುಡವ ತಾಳಿ ಚಿಂತಿಸಿದ ||೧೬|| ೧೨-೧೬/೨೪-೨೧

ಹೊಗಬಾರದು ಕುಮ್ಮಟವ ಎಂದೆಂಬಿರಿ
ನಗುತ [ಎಂದನು] ಸುರಿತಾಳ ।
ಮುಗಿಲುದ್ದ ನೆಗೆವೆನು ಎಂಬವರಾಗಲೆ
ಮಿಗಿಲುಂಟು ಡಿಳ್ಳಿಯ ಒಳಗೆ ||೧೭||

ರಾಮನೆಂದರೆ ನಿಲ್ಲದೆ ದಂಡು ಮುರಿವುದು
ನೇಮಿ ತಾನೊಬ್ಬನೆಯಹನೋ ।
ಭೂಮಿಯೆಲ್ಲವು ತರುಗಿರಿ ನೆಲೆ ಕುಮ್ಮಟ
ಸೀಮೆಯ ಸುತ್ತಲಿ ದುರ್ಗ ||೧೮|| ೧೨-೧೫/...

ಪೊಡವಿಯೊಳಗೆ ಓರುಗಲ್ಲ ಪ್ರತಾಪನು
ಮಡಿದನು ಹಮ್ಮೀರರಾಯ ।
ಹಿಡಿತಂದೆವು ರಾಮಿದೇವನ ಪಾಂಡ್ಯನ
ನಡುವೆ ಕಂಪಿಲನು ಬಲ್ಲಿದನು ||೧೯|| ೧೨-೧೪/...

ಹೊಂಗುಸಾದೆಯೊ ನೇಮಿ ಹಿಂದುವ ರಾಯಗ
ಭಂಗ ಕಂಪಿಲನು ಅವನಿಗೆ ।
ಭಂಗಬಡಿಸಿ ಕೊಂದನು ತುರುಕರ ಅವ
ನಂಗವ ಪೋಲ್ವರಿನ್ನಿಲ್ಲ ||೨೦|| ೧೨-೧೭/...

ಎಲ್ಲಿಗಾದರು ದಂಡ ಕಳುಹು ನಮ್ಮನು ಈಗ
ಬಲ್ಲಿದ ರಾಯರ ಮೇಲೆ ।
ಇಲ್ಲಿಗೆ ಕಪ್ಪವ ತರಿಸುವೆ ಕುಮ್ಮಟ
ದಲ್ಲಿಗೆ ಕಳಿಹಿಸಬೇಡ ॥೨೧॥ ೧೨-೧೮/೨೪-೨೩

ಕಳುಹು ಗುಜ್ಜರ ಮೇಲೆ ಕಳುಹು ತಿಗುಳರ ಮೇಲೆ
ಕಳುಹು ಬಲ್ಲಾಳರ ಮೇಲೆ
ಕಳುಹು ಕೊಂಕಣ ಆರೆ ರಾಯರ ಮೇಲೆ
ಕಳುಹಬೇಡವೊ ಕುಮ್ಮಟಕೆ ॥೨೨॥ ೧೨-೧೯/೨೪-೨೪

[ಅಂತು ಹೇಳಿದರು] ಬಲ್ಲಿದನು ಕಂಪಿಲರಾಯ
ಚಿಂತೆಯಾದನು ಸುರಿತಾಳ ।
ಪಂತವನಾಡಿ ಹೋದಿರಿ ತರಲಾರದೆ ಕಾ
ಲಾಂತಕನವನಹುದಹುದೊ ॥೨೩॥ ೧೨-೨೦/೨೪-೨೬

ಹೋದ ಹೋದವರೆಲ್ಲ ಕಾದಿ ನುಗ್ಗಾದರು
ಬಾದೂರಖಾನನ ಕೂಡೆ ।
ಸಾಧಿಸಿ ಕುಮ್ಮಟದುರ್ಗವ ಕೊಳಲೆಂದು
ಮಾದಿಗಿತ್ತಿಯ ಕರೆಸಿದನು ॥೨೪॥ ೧೨-೨೧/೨೪-೨೭

ಇಂದು ಕುಮ್ಮಟವನು ಮುಂದುವರಿದು ಹೊಕ್ಕು
ಕೊಂದು ಕೂಗುವೆನೆಲ್ಲರಿಗೆ ।
ಹಿಂದುವ ಕಂಪಿಲ[ಗಿಂ]ದು ಒ[ಕ್ಕಲಿ]ಕ್ಕಿ
ತಂದಿರಿಸುವೆ ನಿಮ್ಮ ಮುಂದೆ ॥೨೫॥

ಬಾದುರಖಾನನ ಹಿಡಿದು ತಹೆನೆಂಬುವ
ಮಾದಿಗಿತ್ತಿಯು ಹೊರ ಹೊ[ರಡೆ] ।
ಮೇದಿನಿಪತಿ ಪೊಸತೆನಿಸುವ ದುರ್ಗವ
ಕಾದಿ ಸೋಲಿಸುವೆನೆಂದೆನುತ ॥೨೬॥

ಎಡಬಲದಲಿ ತುರುಕರ ಖಾನಖಾನರು
ನಡೆದಳು ನಡುರಾಜ್ಯಗಳನು ।
ಗಡಿಕೋಟೆಯ ಕಾವ ಕಾಟನಾಯಕ ಕಾಣುತ
ಕಡುಗಲಿ ಬೇಗ ತೆರಳಿದನು ॥೨೭॥*

* ಕಥೆಗೆ ಸಂಬಂಧ ಕಲ್ಪಿಸಲು ಈ ಪದ್ಯವನ್ನು "ಹೊಸಕುಮಾರನ ಸಾಂಗತ್ಯ"ದಿಂದ ತೆಗೆದುಕೊಳ್ಳಲಾಗಿದೆ. (ಸಂ).

ಕಬ್ಬಿಲ ನಾಗ ಹೆಬ್ಬುಲಿ ಕಾಟ ಚಿಕ್ಕನು
ಹಬ್ಬೆಯ ನಾಯಕನವರು ।
ನಿಬ್ಬರದಲಿ ಕಾಣುತವೇರಿ ತಿವಿದರು
ಒಬ್ಬರೊಬ್ಬರು ಮೊದಲಿಸಿ ॥೨೮॥ ೧೨-೪೭/...

ಹೊಕ್ಕಿರಿದರು ಕೆಲಕೆಲದಲ್ಲಿ ಸುಭಟರು
ಮುಕ್ಕಿರಿದಿಕ್ಕಿ ಮಾರ್ಬಲವ ।
ಕಕ್ಕಸ ರಾವುತರುಕ್ಕ [ಮುರಿದು]
ದಿಕ್ಕುದಿಕ್ಕಿಲಿ ಕವಿದೆಚ್ಚು ॥೨೯॥

ತಡೆವುತಲೆಚ್ಚು ಕೆಡಹಿ ರಾಮಯ್ಯನು
ಬಿಡದೆ ಹುಯ್ಯಲ ಹೇಳಿ ಕಳುಹಿ ।
ಹಿಡಿದ ಕುದುರೆ ಜಡೆದಲೆ ಸಹಿತಲಿ ಬಂದು
[ಕಡೆಯ] ಪಟ್ಟಣವ ಸಾರಿದರು ॥೩೦॥

ಜೇನಕಲ್ಲಿನ ಹರಹಿಲಿ ಮಾದಗಿತ್ತಿಯ
ಸೇನೆ ಬಿಟ್ಟಿತು ಪರಿವಾರ ।
ದಾನವ ಪತಿಯ [ಕಡಿವೆನೆ]ನ್ನುತ ರಾಮ
ತಾನಾಗ ಬಂದು ನೋಡಿದನು ॥೩೧॥ ೧೨-೫೦/...

ಹತ್ತು ದಿನಕೆ ಹೋಗಿ ಸುತ್ತಮುತ್ತಲಿ ಬಿಟ್ಟು
ಹತ್ತಬೇಕೆನುತ ಕುಮ್ಮಟವ ।
ಇತ್ತರದಿಂದಲಿ ಖಾನಖಾನರ ದಂಡನು
ಸುತ್ತ ನಡುವೆ ಬಿಡಿಸಿದನು ॥೩೨॥

ಹಿಂದಣ ಭಾವವ ಮರೆದು ತುರುಕರು ತಾವು
ಬಂದರು ಹೆಂಗುಸ ನಂಬಿ ।
ನಿಂದರು ಚೋರಗಂಡಿಲಿ ಆರು ಸಾವಿರ
ಮಂದಿ ಕೆಲದ ಕುದುರೆಗಳು ॥೩೩॥

ಸೊಕ್ಕಿದಾನೆಯ ಹಿಂಡುಗಟ್ಟಿ ಹತ್ತು ಸಾವಿರ
ಹೊಕ್ಕು ದೇಶವ ನಡೆಸುತ ।
ಗಡಿಯ ದಾಂಟಿದಳಾಗಳೆ ಮಾದಗಿತ್ತಿಯು
ಹಿಡಿತಹೆನೆನುತ ಬಾದುರನ ॥೩೪॥

ಕಡುಗಲಿ ರಾಮನ ಕಾಳಗ ಕನಸಿಲಿ
ಬೀಡು ಬಿಡುತಲಿ ಪಯಣದಲಿ ।

ಎಡಬಲದಲ್ಲಿ ಹ[ಲವು]ಗುದುರೆ ಹೇರೆ
ಸುಡಿಸುತ ನಾಡು ಬೀಡುಗಳ ॥೩೫॥

ಗಡಿಯ ಕಾವಲ [ಕಾ]ಟೆನಾಯಕ ಕಂಡನು
ಹಿಡಿದನು ಮೂಗಾಳೆಗಳ ।
ಅಟ್ಟುತ ಭರದಿಂದ ಕಾದು ಕಾದುರುಳುತ
ಕಾಟೆನಾಯಕನು ಮಾರ್ಮಲೆತ ॥೩೬॥

ನಾಟಕವಲ್ಲ ರಾಮನ ಕಾಳಗವಿನ್ನು
ತೋಟಿ ಬೇಡವೊ ನಮ್ಮೊಡನೆ ।
ರಾಯ ಸೊಕ್ಕಿಲಿ ಮದದಲಿ ಇದಿರಾದರೆ
ಎಂದು ಬೆರಸಿದರು ಬೇಗ ॥೩೭॥ ೧೨-೪೬/...

ಒಡೆಯನಿಲ್ಲದ ಕಾಳಗವನು ಕಾದುತ
ನಡೆಸಿದನಾ ಗೂಳೆಯವನು ।
ಕುಡುಕುವ ಕುದುರೆಯನೆಚ್ಚು ಕೆಡಹುತಲಿ
ಒಡೆಯಗೆ ಹೊಯ್ಯ ಕಳುಹಿಸಿ ॥೩೮॥

ಸುದ್ದಿಯ ಕೇಳಿ ರಾಮನ ಪರಿವಾರವು
ಎದ್ದು ನಿಂದರು ಬಿನ್ನವಿಸಿ ।
ಹೊದ್ದಲೀಸಲು ಬಾರದು ಕೊಪ್ಪಣವೀಗ
ಮಧ್ಯಾಹ್ನಕೆ ಗೆಲ್ಲಬೇಕು ॥೩೯॥

ಸುದ್ದಿ ಒಕ್ಕಲ ಕೊಂಡಿತು ನಾಡದೆ ನಾವು
ಒಕ್ಕಲ ಹೋಗುವೆವೆನುತ ।
ಬಡವ ಬಿನುಗರೆಲ್ಲ ಹೆಡಿಗೆ ಮೊರನ ಹೊತ್ತು
ನಡೆಯಿತು ಹೊಸಮಲೆಗಾಗಿ ॥೪೦॥

ಪೊಡವಿ ಜಡಿಯೆ ಕಮಠನ ಬೆನ್ನು ಉರಿಯಿತು
ಕಡುಗಲಿ ನೇಮಿ ಎಚ್ಚರಕೆ ।
ಓಡಿತು ನಾಡೆಲ್ಲ ಬೆದರಿ ಬೇಗದಿ ತಾವು
ವಧುವನು ಶಿಶುಗಳು ಬಿಡುತ ॥೪೧॥

ಕಾಣಲಿ ಬಂದಿತು ಮಾದಿಗಿತ್ತಿಯ ದಂಡು
ಜಾಣ ಕಂಪಿಲನು ಇದ್ದೆಡೆಗೆ ।
ಹೂಣೆಯಕಾರ ಜಟಂಗಿಯ ರಾಮನ
ತ್ರಾಣಗುಂದಿತು ನಾಡ ಪ್ರಜೆಗೆ ॥೪೨॥

ಪೂರ್ವ ಪಶ್ಚಿಮ ದಕ್ಷಿಣ ಭಾಗವನೀಗ
ಸೆರೆ ಹಿಡಿದನು ಸುರಿತಾಳ ।
ತುರುಬು ಹಿಡಿದು ಮನ್ನೆರುಗಳ ಹೆಂಡಿರ
ಮುರುಕಿದೊತ್ತಿಯರ ಮಾಡುವೆನು ॥೪೩॥

ಬಿಟ್ಟಲ್ಲಿ ಬಿಡದೆ ಬಂದಳು ಮಾದಿಗಿತ್ತಿಯು
ಬೆಟ್ಟವಹುದು ಕುಮ್ಮಟದ ।
ಹಟ್ಟಿ ರಾಮನ ಒಯ್ದು ಹೆಡಗೈಯನೇ ಬೇಗ
ಕಟ್ಟಿ ಕಳುಹುವೆ ಸುರಿತಳಗೆ ॥೪೪॥

[ತೆಂ]ಕಣ ದೇಶದ ಹಾದಿಯ ಹರಹಿಲಿ
ಶಂಕೆಯಿಲ್ಲದೆ ದಂಡು ಬಿಟ್ಟು ।
ಬಿಂಕದ ರಾಮನ ಹೆಂಡಿರ ತಹೆನೆಂದು
ಹೂಂಕಾರದಿ ಹೊರಹೊಂಟ ॥೪೫॥

ಹತ್ತು ಸಾವಿರ ಖಲಿಂದರ ಕಾಲಾಳು
ಇಪ್ಪತ್ತು ಸಾವಿರ ಬಿಲ್ಲು ।
ಹತ್ತು ಸಾವಿರ ಸಿಂಗಾಡಿಯ ತುರುಕರು
ಒತ್ತಿಲಿ ನೇಮಿಯ ಪವುಜು ॥೪೬॥ ೧೨-೪೦/...

ಎಲ್ಲಿ ನೋಡಿದರಲ್ಲಿ ಕಾಲಾಳು ಕುದುರೆಯು
ಡಿಳ್ಳಿಯ ಖಾನ ಮಲ್ಲುಕನ ।
ತಲ್ಲಣಿಸುತ ದಿಕ್ಕುದಿಕ್ಕಿನ ರಾಯರು
ಬಲ್ಲಿದ ನೇಮಿಯ ಭರಕೆ ॥೪೭॥

ಮುಗಿಲಗಲದ ಮಂದಿ ಹೊಗಬಾರದ ಪಾಳ್ಯ
ದಗಲಕೆ ಹರಿದಿರಿವುತಲಿ ।
[ಗದುಮುವ] ಡೊಳ್ಳು ನಿಸ್ಸಾಳ ಬೊಬ್ಬೆಯ ಧ್ವನಿ
ಹೊಗಬಾರದೆಲ್ಲಿ ನೋಡಿದರೆ ॥೪೮॥

ಗಿಡಿಬಿಡಿ ರವುಡಿ ರವುಡೆಯ ಹೊಡೆವು[ತ]
ಬಡಿವ ಲಗ್ಗೆಯ ತಂಬಟವು ।
ನುಡಿವ ಕಾಳೆಯ ನಾಗಸರವು ಹೆಗ್ಗಾಳೆಯು
ಗಡಣಹುದಿರ[ದ]ಡಿಗಡಿಗೆ ॥೪೯॥

ಲಕ್ಷದ ಮಾದಿಗಿತ್ತಿಯು ಹೊರಹೊಂಟಳು
ದಿಕ್ಕುದಿಕ್ಕಿಲಿ .... ।

.... ಕೊಟ್ಟಿಗೆ ಕೊಲ್ಲರಿಯ ಬಂಡಿ
ಬಿಟ್ಟಲ್ಲಿ ಪೊಯಿದ ಗುಡಾರ ||೫೦||

ಮೊಟ್ಟೆ ಮೊಳಿಗೆ ಅಡ್ಡೆ ಹೊರೆಗಾಡಿ ಸರಿವಂತೆ
ಕಟ್ಟಣೆಲ್ಲದೆ ತೆರಳಿದರು ।
ಕಲ್ಲ ಹೂಟಿ .... ಯಳು ಲಕ್ಷ
ಚಲ್ಲದ ಕುಣಿಕಾಲ ಮಂದಿ ||೫೧||

ಹುಲ್ಲ ಕಂಪಣಗಳೆಪ್ಪತ್ತೇಳು ಸಾವಿರ
ಎಲ್ಲಿ ಬಂದರು ಪಾಳ್ಯದೊಳಗೆ ।
ಕಲ್ಲುಕುಟಿಗರು [ಮೂರು ಸಾವಿರವಾಗ]
ಎಲ್ಲರು ಪಾಳೆಯೊಳಿರಲು ||೫೨||

ಬಿಲ್ಲನು [ಸೋ]ವ ಸರವತಿಗರ ಪಾಳೆಯ
ಎಲ್ಲಿ ನೋಡಲು ತೆರನಿಲ್ಲ ।
ಕಡಲೆ ಹುರುಳಿಯ ಕೊಟ್ಟಿಗೆ ಏಳು ಸಾವಿರ
ಒಡನೆ ಕೊಲ್ಲಾರಿಯ ಬಂಡಿ ||೫೩||

ಬಿಡದೆ ಅಂಬಿನ ಬಂಡಿಗಳು ಹತ್ತು ಸಾವಿರ
ತಡೆಯದೊಂಟೆಯ ಮೇಲೆ ಹೇರಿ ।
ಗಂಗಾಸಾರದ ಕೊಟಿಗೆ ಏಳು ಸಾವಿರ
ಬಂಗಿಯ ಹೇರು ಯಾಲಕ್ಕಿ ||೫೪||

ಅಂಗಡಿಯೊಳು ಐವತ್ತಾರು ಸಾವಿರ
ತುಂಗ ಕುಚದ ಲೇಸಿಯರು ।
ನಾಡ ಬಿಟ್ಟಿಯ ಬಂಡಿಯು ಕೊಟ್ಟಿಗೆ ಹೇರು
ಜೋಡಿಸಿ ಹೊರಗುಡಿ ಹೊಯಿದು ||೫೫||

ಬಿನ್ನಾಣ ಚಿನ್ನದ ತೊಡಿಗೆಗಳನು ತೊಟ್ಟು
ಮನ್ನಣೆಯಲ್ಲಿ ಸುರಿತಾಳ ।
ಚೆನ್ನಾಗಿ ಮನದಣಿಯಲಿ ತೊಟ್ಟು ಮನ್ನಿಸಿ
ಇನ್ನು ತೆರಳು ಬೇಗದಲಿ ||೫೬||

ಬಾಸೆಯ ಕೊಟ್ಟಳು ಆ ಸುರಿತಾಳಗೆ
ದೇಶವರಿವೆ ಕಂಪಿಲನ ।
ಗಾಸಿಯ ಮಾಡಿ ಇಂದಿರಿದು ರಾಮನ ನಾಳೆ
ಈಸು ಹೊತ್ತಿ[ಗೆ] ಮರಳುವೆನು ||೫೭|| ೧೨-೩೪/೨೪-೩೭

ಸಿಂಗಾಡಿ ತರಕಸ ಹೊಂಗೆಲಸದ ಜೋಡು
ಮಂಗಳ ನೀಲನ ಮೇಲೆ ।
ಸಂಗ್ರಾಮ ಸೂರೆಗಾರತಿ ಹೊರಹೊಂಟಳು
ಹಿಂಗಬಾರದ ಬಲಸಹಿತ ||೫೮|| ೧೨-೩೫/...

ಲಕ್ಕಿಯ ಹರಹಿಲಿ ಮುತ್ತಿನ ಗುಡಿಹೊಯಿದು
ಲಕ್ಷ ಕುದುರೆ ಹೊರಬೀಡು ।
ಸೊಕ್ಕಿದ ರಾಯರ ಕಾಣಿಸಿಕೊಳುತಿಹ
ದಿಕ್ಕನೆ ಕುಮ್ಮಟಕಾಗಿ ||೫೯||

ಮುತ್ತಿನ ಗುಡಿ ಸಾವಿರ ಮಾದಿಗಿತ್ತಿಗೆ
ಒತ್ತಿಲಿ ಸಾವಿರ ಆನೆ ।
ಚಿತ್ರದ ಗುಡಿ ಹಳದಿಯ ತೋಪಿನ ಗುಡಿ
ಸುತ್ತ ಗಾವುದ ತೆರಹಿಲ್ಲ ||೬೦|| ೧೨-೩೯/೨೪-೩೯

ಕೆಂಧೂಳು ಮುಸುಕಿ ನಿಂದರೆ ಕಾಣಬಾರದು
ಒಂದು ಸಾವಿರ ನಿಸ್ಸಾಳ ।
ಚಂದಚಂದದ ವಾದ್ಯದ ಕಾಲಾಳಿನ
ಸಂ[ದಣಿ]ಯಲ್ಲಿ ನೋಡಿದರೆ ||೬೧||

ತುರುಕರ ಸಿಂಗಾರಕೊಪ್ಪುವ ಹೊನ್ನ ಸರ
ತರಿಸಿ ಹತ್ತು ಲಕ್ಷ ಮಂದಿ ।
ಬಿದ್ದಳು ಸುರಿತಾಳನ ಪಾದದ ಮೇಲೆ
ಬುದ್ಧಿಗಲಿಸಿ ಜೀಯ ಎನುತ ||೬೨||

ಹೊದ್ದಲಮ್ಮದೆ ನೀನು ತಿರುಗಿದೆಯಾದರೆ
ಇದ್ದಲ್ಲಿ ಹರಿಯ ಹೊಯಿಸುವೆನು ।
ಹಿಂ[ದಿನ]...... ಹಾನಿಯು ತಿರುಗಿ ಬಂದಿರಿ ನೀವು
ಕುಂದ ತಂದಿರಿ ನಮ್ಮ ಕುಲಕೆ ||೬೩||

ಇಂದು ಬಾದುರಖಾನನ ತಾರದಿದ್ದರೆ
ನಿಂದೆ ನಮ್ಮನು ಬಿಡದೆಂದ ।
ಮುತ್ತಿನಹಾರವು ಚಿತ್ರದ ಜ........
[ಸು]ತ್ತಿರ್ದ ವಾಲು ಚಿಮ್ಮುರಿಯು ||೬೪||

ಅರ್ತಿಯಿಂದೇರುವ ಚಿತ್ರದ ನೀಲನ
ಇತ್ತು ಮನ್ನಿಸಿ ಕಳುಹಿದನು ।

ರನ್ನದ ಹಾರ ಚೆಲುವ ಮಾದಿಗಿತ್ತಿಗೆ
ಚಿನ್ನ ಸರವು ಸಹವಾಗಿ ||೬೫||*

ಶ್ಯಾಮವರ್ಣದ [ಸರಸಿಜ]ಮುಖ ಚೆಲುವಿನ
ಹೇಮ ಕಳಸ ಕುಚಯುಗದ ।
ಕಾಮಿಸಿ ನೋಡಲು ಪದ್ಮಿನಿಜಾತಿಯ
ಕೋಮಲೆಯಿಹ ಮಾದಿಗಿತ್ತಿ ||೬೬|| ೧೨-೨೪/...

ತುಂಬಿಗುರುಳ ಮಾದಿಗಿತ್ತಿಯ ಸಂಭ್ರಮ
ಇಂಬಿನ ಜಡೆಯ ಸೂಸಕದ ।
ಬಿಂಬಾಧರೆ ಕುಂಭ ಕುಚದ ಬಡನಡುವಿನ
ಅಂಬುಜದಳ ಲೋಚನೆಯ ||೬೭|| ೧೨-೨೩/...

ಇಟ್ಟ ಕಸ್ತುರಿ ತಿಲಕದ ಬಟ್ಟ ನೊಸಲಿನ
ತೊಟ್ಟ ಮುತ್ತಿನ ಕಂಠಿಸರದ ।
ಉಟ್ಟ ಉಡಿಗೆ [ತು]ರುಕಂಗಾ[ಗ]ತವಾಗಿ
ಬಿಟ್ಟಳು ಹೊರಬೀಡ ಹೊಯಿದು ||೬೮||

ಇತ್ತನು ಸುರಿತಾಳನು ಪಟ್ಟೆ ನಾಣ್ಯವ
ಮುತ್ತಿನೋಲೆಯ ಮೇಲು ಕಟ್ಟು ।
ಮತ್ತೆ ಲಕ್ಷವು ಕುದುರೆಯನಿತ್ತು ಮನ್ನಿಸಿ
ಹೆತ್ತ ಮಗಳು ನೀನೆ ಎಂದು ||೬೯||

ಮರಕತ ಮೈಗುಪ್ಪಸ ಮಾದಿಗಿತ್ತಿಗೆ
ತರಕಸ ಜೋಡು ಸೂಸಕವು।
ತುರುಕರ ದಳಕೆ ಒಪ್ಪುವ ಹೊನ್ನಾಯುಧ
ಸರಪಳಿ ಕೈ ಜಮದಂಡೆ ||೭೦|| ೧೨-೨೫/...

ಬಂದಿತು ದಂಡೆನುತಲಿ ರಾಮನಾಥನು
ತಂದೆಗೆ ಹೇಳಿ ಕಳುಹಿದ ।
[ಒಂದು] ದಿನಕೆ ಹತ್ತು ಸಾವಿರ ಹೊನ್ನನು
ಮಂದಿ ಎಲ್ಲಕೆ ಕೊಡ ಹೇಳಿ ||೭೧||

ವಸುಧೆಯು ಬೆಸಲಾದಂತೆ ತುರುಕರ ದಂಡು
ದೆಸೆದೆಸೆಯಲಿ ಪವುಜಮಾಡಿ

---

* ೬೨-೬೫ ವರೆಗಿನ ಪದ್ಯಗಳು ಮಿಶ್ರಣಗೊಂಡಂತಿವೆ (ಸಂ.)

ಹಸನಲ್ಲವೆಂದು ಕಂಪಿಲರಾಯ ರಾಮನ
ಹೊಸದುರ್ಗಕೆ ಬರಹೇಳೆ ||೭೨|| ೧೨-೫೪/...

ಹರಿದು ಬಂದವ ಹೇಳಿದ ಒಡೆಯನ ಕೂಡೆ
ಅರಸು [ಕಂಪಿಲನ] ಮಾತುಗಳ ।
ದುರುಗ ಸಣ್ಣದು ಕುಮ್ಮಟ ರಾಮನಾಥ ನಿಂ
ದಿರಬೇಡ ಬೇಗ ಬರಹೇಳೆಂದ ||೭೩||

ಅಂತೆಂಬ ಮಾತನು ಕೇಳುತ ರಾಮನು
ಕಾಂತಿ ಮಿಗಲು ಕಳವಳಿಸಿ ।
ಸಂತೆಯ ತಗರಂತೆ ಹಳಚಿ ಕಾದುವೆನೆನ್ನ
ಪಂಥವ ನೋಡ ಹೇಳೆಂದ ||೭೪|| ೧೨-೫೫/...

ದೇಶದಿಂದಲಿ ದೇಶಕೆ ಬಂದ ಬಾದೂರ
ಆಸೆ ಮಾಡಿಯೆ ಮರೆಹೊಕ್ಕ ।
ಮೀಸಲು ತಲೆ ಸುರಿತಾಳಗೆ ಎಂದೆಂಬ
ಬಾಸೆಯ ಬಿಡೆನೆಂದ ರಾಮ ||೭೫|| ೧೨-೫೬/...

ದುರುಗ ಸಣ್ಣದುಯೆಂದು ಬರಹೇಳಲೇತಕೆ
ಅರಸು ಕಂಪಿಲ ಬೇಗದಲಿ ।
ದುರುಗಕೆ ತನಗೆ ಮದುವೆಯೆಂದು ರಾಮಯ್ಯ
ಬಿದಿರಿನ ಮಾತನಾಡಿದನು ||೭೬||

ದುರುಗವು ಸಣ್ಣದಾದರೆ ರಾಮನಾಥನ
ಬಿರಿದು ಸಣ್ಣದೆ ಕಂಪಿಲನೆ ।
ಧರೆಯೊಳು ಹುಟ್ಟಿದ ಅರಿರಾಯರು ತಮ್ಮ
ಬಿರಿದ ಬಿಟ್ಟು ಬದುಕುವರೆ ||೭೭||

ಗಾಳಿಗೂಳಿಯೆಂಬ ಬಿದಿರಿನ ಜೀವಕೆ
ಆಳಹುದೆ ನಾನೋಳಿನಲ್ಲಿ ।
ಆಯತದಿಂದಿರ ಹೇಳು ಕಂಪಿಲಗೆ
ಸಾವು ತಪ್ಪದು ಎಂದು ಹೇಳು ||೭೮||

ಮಂಡಲದೊಳು ಜಟ್ಟಂಗಿಯ ರಾಮನ
ಪಿಂಡದ ವರಸುತ ನಾನು ।
[ತುಂಡುತುಂಡಾಗಿ] ಬಿದ್ದಲ್ಲದೆ ಹೆಸರಿಲ್ಲ
ಗಂಡುಗಲಿಯು ರಾಮ ನುಡಿದ ||೭೯||

ಕಳುಹಿದ ಕಂಠಮಾಲೆಯ ಹೆತ್ತಾಯಿಗೆ
ಸೆಣಸುವ ರಾಯರ ಗಂಡ ।
ತಳತಂತ್ರ ಬಲ ಸಹಿತಲಿ ರಾಮನಾಥನು
ಉಳಿದಾನೆಂಬುದ ಹೋಗಿ ಹೇಳು ||೮೦||

ಬಂದವ ಹೇಳಿದ ರಾಮನಾಡಿದ ಮಾತ
ಹಿಂದುವ ಕಂಪಿಲನೊಡನೆ ।
ದಾಳಿ ಬಂದಿತು ಹಾಳಾಯಿತು ಕುಮ್ಮಟ
ಹೇಳಲೇನೆಂದಳಲಿದ[ನು] ||೮೧||

ಹಿಂದು ಚಿಂತೆಯ ತಾಳಿದನು ಕಂಪಿಲರಾಯ
ಇರಬಾರದು ನಾವು ಇನ್ನು ।
ಶರಧಿಯಂತೆ ಸರ್ವ ದಂಡು ಬಂದಿದಿರಾಗೆ
ತೆರಳಬೇಕೆಂದ ಬೇಗದಲಿ ||೮೨||

ಕಂಡೆಯ[ದಿಂದಲಿ] ಬಾದೂರಖಾನನ
ದಂಡಿಸದೆ ಹೋ[ಗ]ರವರು ।
ಹೆಂಡಿರ ಮಕ್ಕಳೆಲ್ಲರ ಕೊಂದು ಬೈಚಪ್ಪ
ಭಂಡಾರವನು ತೆಗೆಯೆಂದ ||೮೩||

ಹೊಕ್ಕುಳ ಗಂಟೆಯ ಮುನ್ನೂರು ಕುದುರೆಯ
ದೊಕ್ಕನೆ ಕಳುಹಿದರಾಗ ।
ಒಕ್ಕಲು ಮಕ್ಕಳು ಎಲ್ಲರು ದುರ್ಗವ
ಹೊಕ್ಕರು ಕಂಪಿಲ ಸಹಿತ ||೮೪|| ೧೨-೬೧&೬೨/...

ಹರಿಯಲದೇವಿಗೆ ಹರಿತಂದು ಸುದ್ದಿಯ
ಹಿರಿದಪ್ಪ ರಾಜಕಾರ್ಯವನು ।
ಅರಸಿನ ಭಾಂಡಾರದೆರಡು ಬಿಂದೆಗೆ ಹೊನ್ನ
ತರಿಸಿ ಮಗಗೆ ಕೊಟ್ಟು ಕಳುಹಿ ||೮೫|| ೧೨-೬೩/...

ಚಿನ್ನದ ಹರಿವಾಣವ ಕೊಟ್ಟು ಕಳುಹಿ ತಾ
ಚೆನ್ನಾಗಿ ಕಾದ ಹೇಳೆಂದು ।
ಇನ್ನು ಮಂದಿಯ ....
ಸನ್ನದ್ಧನಾದ ಕಾಳಗಕೆ ||೮೬||

ತನ್ನರಸಿಯರೆಲ್ಲ ಮುನ್ನವೆ ಅನುವಾಗಿ
ಇನ್ನು ಆ ಕುಮ್ಮಟದೊಳಗೆ ।

ಹೊನ್ನಕಟ್ಟಿನ ಬಿಲ್ಲಿನ ಪರಿವಾರವು
ಚೆನ್ನ ರಾಮ .... ||೮೭||

..... ಮನ್ನೆಗುದುರೆಯ ಮಾಂಡಲಿಕರು
ಅಸುವೋದರು ಮಹಿಲದಲಿ ।
ತನಗೆ ನನಗೆ ವೀಳ್ಯವ ಮುಂಚೆ ತಾಯೆಂಬ
ಘನ ತೇಜದ ಭಟರುಗಳು ||೮೮||

ಬಿಲ್ಲ ಮಂದಿಯು ಹರಿಗೆಯ ಮಂದಿ [ಸಹವಾಗಿ]
ಅಲ್ಲಿರ್ದ ತಳವಾರ ಮಂದಿ ।
ಎಲ್ಲಿ ನೋಡಲು ಸಬಳದ ಕುದುರೆಯ ಮಂದಿ
ಬಲ್ಲಿದ ಕುಮ್ಮಟದೊಳಗೆ ||೮೯|| ೧೨-೬೭/...

ಕೊಬ್ಬಿದ ಹೆಗ್ಗಾಳೆಯು ಮಾದಿಗಿತ್ತಿಗೆ
ಸರ್ಬದಂಡಿಗೆ ಇದಿರಾಗಿ ।
.... ತೆಗೆಸೆನುತಾಗ ಸೇರುವ
ಗಬ್ಬಿ ರಾಮಗೆ ಬಾಸೆಗೊಡುತ ||೯೦|| ೧೨-೬೫/...

ನಳಿನ ಮಿತ್ರನು ಅಸ್ತಮಾನಕೆ ಬಂದರೆ
ಕಳೆಯೇರಿತು ಕುಮ್ಮಟಕೆ ।
[ತಳೆದವು] ಕೈದೀವಿಗೆ ಹೂಡೆದ ಸುತ್ತ
[ಹೊಳೆಯಿ]ತು ಕಾವಲ ಮಂದಿ ||೯೧|| ೧೨-೬೬/...

ಅಟ್ಟಳೆ ಆಳವೇರಿಯ ಮೆಟ್ಟಿ ಮೆಟ್ಟಿಯು
ಕಟ್ಟಿ ನಿಂದರು ಸಬಳಿಗರು ।
ಕಟ್ಟಿ ಇಡುವ ರಾಯ ಗುಂಡಿನ ಡೆಂಕಣಿ
ಮೆಟ್ಟಿ ಇಡುವ ಪೆಟ್ಟ[ಲಗಳು] ||೯೨||

ತಿರುಗಿ ಬಡಿವರೆಗಳು ಕಕ್ಕಡಗಳು
ಬಿರಿದ ವಿಸ್ತರಿಸುವ [ಭಟರು] ।
ತರತರದಲಿ ಕಾವಲ ಮಂದಿ ದುರ್ಗದ
ಸಿರಿಯನಿನ್ನೇನ ಹೇಳುವೆನು ||೯೩|| ೧೨-೬೮/...

ಈ ಪರಿಯಲಿ ಬೈಗಾಯಿತು ದುರ್ಗದ
ಭೂಪನೆದ್ದನು ರಾಮನಾಥ ।
ಶ್ರೀಪತಿಗೆಯು ಶರಣೆನುತಲಿ ರಾಮಯ್ಯ
ಭಾಪುರೆ ಪರಿವಾರವೆಂದ ||೯೪|| ೧೨-೬೯/...

ತನ್ನ ಮನೆಗೆ ತಿರುಗಿದ ರಾಮನಾಥನು
[ಮನ್ನೆಯರೆಲ್ಲರ] ಕರೆಸಿ ।
ಚೆನ್ನಾಗಿ ಊಟವ ಮಾಡಿಸಿ ಉಡಗೊಟ್ಟು
ಮನ್ನಿಸಿದನು ರಾಮನಾಥ ॥೯೫॥ ೧೨-೭೦/...

ತಂದರು ವಸ್ತು ಆಭರಣವ ರಾಮಗೆ
ಮುಂದಿಸಿರಿದರೇನೆಂಬೆ ।
ಗಂಧ ಕಸ್ತುರಿ ಕುಂಕುಮ ಜವಾದಿಯ
ಚೆಂದ ಚೆಂದದಲಿ ರಚಿಸಿದರು ॥೯೬॥ ೧೨-೭೧/...

ಚಿತ್ರದ ಕಡುಕು [ಪೊಂ]ಗಲ ಕಂಠಮಾಲೆಯ
ಉತ್ತಮ ರತ್ನದ ಹಾರ ।
ಮುತ್ತಿನ ಕಡೆಯ ಪೆಂಡೆಯ ಉತ್ತರಿಗೆಯು
ಹಸ್ತ ಕಡಗ ಬಾಪುರಿಯು ॥೯೭॥

ಎಡದ ಕಾಲಲಿ ಕಡೆಯವು ರನ್ನ ಬೊಂಬೆಯು
ಉಡಿಗೆ ಒಡ್ಯಾಣ ಮಾಣಿಕವು ।
ಜಡೆಯ ಮುಂಗೊಂಡೆಕೆ ಅಳವಡಿಕೆಯ ಮಾಡಿ
ಜಡಿಸಿ ಮೆರೆವ ಪೊಂಬಟ್ಟೆ ॥೯೮॥ ೧೨-೭೨/...

ಮುತ್ತಿನ ಹಾರದೊಳಗೆ ಹೊರಗೆನಿಸುವ
ಉತ್ತಮ ವಸ್ತು ಪೈರಣಿಯ ।
ಹಸ್ತದಿ ಮೆರೆವ ಗುಜ್ಜರಿ ಪಟ್ಟೆ ರಾಮಗೆ
ಮೃತ್ಯುಂಜಯಗೆ ಶರಣೆನುತ ॥೯೯॥ ೧೨-೭೪/...

ಕರೆದು ಮಂದಿ ಕುದುರೆಯನೆಲ್ಲವ ರಾಮ
ತರಿಸಿದ ತನ್ನ ವಾರುವನ ।
ತಾರದ ಕುಂಕುಮ ಪಚ್ಚೆಕಾರನ
ಪಿರಿದು ಸಿಂಗಾರ ಮಾಡಿದರು ॥೧೦೦॥

ಪರಬಲ ವೈರಿ[ಯ] ಹುರುಮಂಜಿ ತೇಜಿಯ
ಸುರಿತಾಳ ನೀಲ ಕುಂತಳನ ।
ಅರಿರಿಪು ರಾಯವಿಭಾಡಕ ನೀಲನ
ಪಿರಿದು ಶೃಂಗಾರ ಮಾಡಿದರು ॥೧೦೧॥

ಹರಳ ಕಡಗ ಕೊರಳಲಿ ಕಂಠಮಾಲೆಯು
ಬೆರಳಲ್ಲಿ ಮುದ್ರೆಯುಂಗುರವು

ಧರಣಿಯ ರಾಯರ ಗಂಡ [ಬಿರಿದವು]
ಧು[ರಗಲಿಯ] ಚರಣದಲಿ ||೧೦೨|| ೧೨-೭೩/...

ಮುತ್ತಿನ ಜೋಡು ಚಿನ್ನದ ಜೋಡು ಪಚ್ಚೆಯ
ಚಿತ್ರದ ಜೋಡು ವಜ್ರಾಂಗಿ ।
ಸುತ್ತ ಮೇಗವು ಮೆರೆದಿಹ ಜಲ್ಲಿ ಕುದುರೆಗೆ
ಮಸ್ತ[ಕ ಮೆರೆವ ಲಲಾಟ] ||೧೦೩|| ೧೨-೭೬/...

ಸಂಗ್ರಾಮ ಸೂರೆಗೊಂಬುವ ಕುದುರೆಯ
ಶೃಂಗಾರವನು ಮಾಡಿದರು ।
ಹೊಂಗೆಲಸದ ಸಂಜೋಡು ಮುತ್ತಿನ ಜೋಡು
ತೊಂಗಲು ಮು .... ||೧೦೪||

ತುರಗದ ಮುಖವ ನೋಡಿದ ರಾಮನಾಥನು
ಕರವ ಮುಗಿದು ಗಹಗಹಿಸಿ ।
ಹರುಷದಿ ಬಲವಂದು ಎರಗಿದನಾಗಲೆ
ಪಿರಿದ .... ||೧೦೫||

ಬೇಂಗವಾಯಿತು [ಚಾಂಗುಭಲಾ]ಯೆಂದು ತೇಜಿಯ
ಸಂಗ್ರಾಮಧೀರನು ರಾಮ ।
ಸಿಂಗಾಡಿ ಹೊನ್ನ ಕರ್ಕಶಗಳು ಸಹವಾಗಿ
ಸಿಂಗಾರ [ಮಾಡಿ] ಅನುವಾದ ||೧೦೬||

ಬಿಟ್ಟು ಹೋಗ[ದ ಸಂ]ಗಡಿಗರೆಲ್ಲಕೆ ರಾಮ
ಕೊಟ್ಟನು ಆಭರಣಗಳ ।
ಮುಟ್ಟಿದ ಮಹದ ಕಾಟಣ್ಣಗೊಲಿದು ಪೊಂ
ಬಟ್ಟಲೊಳಿತ್ತ ವೀಳ್ಯವನು ||೧೦೭|| ೧೨-೭೭/...

ಮುತ್ತಿನ ಸತ್ತಿಗೆ ಎತ್ತಿತು ರಾಮಗೆ
[ಮತ್ತೆ] ಬಿರಿದು ಟೆಕ್ಕೆಯವು ।
ಚಿತ್ರದ ಸತ್ತಿಗೆ ಎತ್ತಿ ಬರುವುದನು
ಮತ್ತೆ ಕಂಡಳು ಮಾದಿಗಿತ್ತಿ ||೧೦೮|| ೧೨-೮೦/...

ಅರರೆ ರಾಮುಗ ರಾಮುಗ ಎಂದು ಕೊಂಡಾಡಿ
ಧುರಧೀರ ನೀನಹುದೆಂದು ।
ಅರಿರಾಯರನೆಣಿಸದ ಚೌದಂತನು
ದುರ್ಗವನಿಳಿವ ಸಘಾಟ ||೧೦೯|| ೧೨-೮೧/...

ಜಟ್ಟಂಗಿ ರಾಮನ ಕರುಣವು ಬೇಗದಿ
ದಿಟವು ಆಯಿತು ಇಂದಿನಲಿ
.... ಒಲಿದನು ಇಂದು ನೀ ಹೋಗಿಯೆ ।
ಕುಟಕವ ಗೆಲಿವ ಕಂಟಕವು ॥೧೧೦॥

ಬಲವು ಆಗಿದೆ ಕಾಳಗವಿನ್ನು ಕಾಟಣ್ಣ
ಉಳುಹಬೇಡವೊ [ಹೆಮ್ಮ]ಕ್ಕಳನು ।
ನೆಲೆಯಾಗಿದೆ ಹರಿಯಮ್ಮಗೆ ಹೇಳೆಂದು
ನಲಿದು ಎದ್ದನು ರಾಮಯ್ಯ ॥೧೧೧॥ ೧೨-೭೯/...

ಬಿಲು ಬಾಣವನು ಕೈಕೊಂಡನು ಕಾಟಣ್ಣ
.... ।
ಬಂದರು ಬಿರಿದಿನ ಮಂದಿ ಕುದುರೆ ಸಹ
ನಿಂದರು ರಾಮನ ಮುಂದೆ ॥೧೧೨॥ ೧೨-೭೮/...

ಇಂದು ಬಾಗಿಲ ತೆಗೆದೇರುವೆನೆನುತಲಿ
ನಿಂದು ಬಿನ್ನಹವ ಮಾಡಿ[ದಳು] ॥೧೧೩॥

ಕರೆದಳೆಲ್ಲ ಖಾನರ ಮಾದಿಗಿತ್ತಿಯು
ತರತರದಲ್ಲಿ ಪವುಜ[ವು] ।
[ತೆರೆ ತೆರೆ] ಅಡರುವಂದದಿ ಮಾದಿಗಿತ್ತಿಯು
ತರತರ ಎಡದೆರಹಿಲ್ಲ ॥೧೧೪॥

ಸಾವಿರ ಡೊಳ್ಳು ಸಾವಿರ ನಿಸ್ಸಾಳವು
ಸಾವಿರ ಲೆಗ್ಗೆವರೆಗಳು ।
ಸಾವಿರ[ದೇಳ್ನೂರು ವಾದ್ಯವು ಮೊಳಗುತ]
ಸಾವಿರ ಕಾಳೆ ಹೆಗ್ಗಾಳೆ ॥೧೧೫॥

ವಾದ್ಯದ ರಭಸಕೆ ಮೇದಿನಿ ನಡುಗಿತು
ಆದರಿಸುವರು ಇನ್ನಾರು ।
ಸಾಧ್ಯವಾಯಿತು ಕುಮ್ಮಟ ಹೊ...........
.... ದುವರನುವಾದ ಮಂದಿ ॥೧೧೬॥

ಸಿಂಗಾಡಿಯ ಚೆಂಕಿನ ಡೊಳ್ಳಿನ ಧ್ವನಿ
ಅಂಗಳದಲಿ ನಿಲಬಹುದೆ ।
ಸಂಗ್ರಾಮ ಬೊಲ್ಲನ ತರಲೆಂದು ರಾಮ ಭು
ಜಂಗಕ .... ॥೧೧೭॥

ಅಬ್ಬರದಿಂದಿಳಿದನು ರಾಮಯ್ಯನು
ಹೆಬ್ಬಾಗಿಲ ತೆಗೆಸಿದವು ।
ನಿಬ್ಬರದಲಿ ಕಾಣುತಲೇರಿ ನಿಂದರು
ಒಬ್ಬರೊಬ್ಬರು ಮೂದಲಿಸಿ ॥೧೧೮॥ ೧೨-೮೨/...

[ಆಳುಗಳೆಲ್ಲ] ಪಿಳ್ಳಂಗೋಟೆಯನೇರಿ
ಕಾಲಾಳು ಕೂಡೆ ಕಗ್ಗೊಲೆಗೆ ।
ಡಿಳ್ಳಿಸುತಿದೆ ಮೂದಿಗಿತ್ತಿಯ ದಂಡೆಲ್ಲ
ಕೊಳ್ಳೆಯಾಯಿತು [ಚೋದ್ಯ]ವರಿಯ ॥೧೧೯॥ ೧೨-೮೫/...

ಹಿಂದೆ [ಕಟ್ಟಿತು ಕುಣಬಿಯ] ಮಂದಿ ಖಾನರು
ಮುಂದೆ ರಾಮನ ಸಬಳಿಗರು ।
ಸಂಧಿಸಿ ಒಳಗೆ ಸಿಕ್ಕಿಸಿಕೊಂಡು ತುರುಕರ
ಕೊಂದರು ಮೂರು ಕಂಡಿಯಲಿ ॥೧೨೦॥ ೧೨-೮೬/...

[ಹೋದ ಮಂದಿಯು] ತಿರುಗದುಯೆಂದು ಖಾನರು
ಮೂದಲಿಸುತಲಿ ಏರಿದರು ।
ಅಂದು ಕೊಂದರು ಹಿಂದುವನ ಮಂದಿ [ತುರುಕರ]
ಮಾದಿಗಿತ್ತಿಯು ಬೆರಗಾಗೆ ॥೧೨೧॥ ೧೨-೮೭/...

ಆನೆ[ಯನೇರಿ] ಕುಳಿತು ಮಾದಿಗಿತ್ತಿಯು
ಖಾನರೆಲ್ಲರಿಗೆ ಕೈಮುಗಿದು ।
ನಾನಾ ಮುಖದಲೇರಿತು ಹೊಸಖಾನರು
ಏನ ಹೇಳುವೆ ಪಟುಭಟರ ॥೧೨೨॥

ತಾಗೀತು ತಮತಮಗೇರಿತು ಇಕ್ಕೆ[ಲ]
ಕೂಗಿ ಬೊಬ್ಬಿರಿದಾಡಿ ಹಳಚಿ।
ಅಗಲೆ ಲಕ್ಷ ಕುದುರೆ ಹಿಂದು ಮುಂದಾಗಿ
ಬೇಗ ತೆಗೆಸಿ ಕುದುರೆಯನು ॥೧೨೩॥

ವಡಬಾನಳನಂತೆ ಹೊಡೆವ ಸಿಡಿಲಿನಂತೆ
ತಡೆಯೊಡೆದುರುಗನಂದದಲಿ ।
ಕಡುಗಲಿ ಖಾನರ ದಳ[ವ] ಕಾಣುತ ಮಂದಿ
ಬಿಡದೆ ಏರಿತು ಸಮರದಲಿ ॥೧೨೪॥

ಹೊಡೆಯ ಒಳಗಿಂದ ಜೋಡಿಸಿ ಎಚ್ಚರೆ
ಕೂಡಿಸಿ ...... ಕ ಜೋಡು ಪರಿದು ।

ನೋಡಲಮ್ಮರು ತಲೆಯೆತ್ತಿ ಕುಮ್ಮಟವನು
ಬೇಡರು ಕವಿದೆಸೆವಾಗ ||೧೨೫|| ೧೨-೮೮/...

ಭಲ್ಲೆಯ ಲವುಡಿಯೆಲ್ಲವ ಅನುಮಾನಿಸಿ
ನಿಲ್ಲದೆ ಜೋಡ ಮಾಡಿ[ದನು] ।
ಬಲ್ಲಂತೆ ಕೈಕೊಳ್ಳಿ ಎನುತ ರಾಮಯ್ಯ
ಎಲ್ಲಕ್ಕೆ ಕೈಬೀಸಿದನು ||೧೨೬|| ೧೨-೮೯/...

ಹೊಣಕೆಯ ಮಂದಿ ಅಂಕವನೇರಿ ಕವಿದರು
ಒಳಹೊಕ್ಕರು ರಾಹುತರು ।
ತ[ಳುವಿಲ್ಲದೆ ಕು]ದುರೆಯನೆಚ್ಚು ಕೆಡಹುತ
ಇಳೆಯೊಡೆಯಗೆ ಹೇಳಿದರು ||೧೨೭|| ೧೨-೯೦/...

ಅಣೆಯಲಿ ಹೊಕ್ಕು ಹೊಯಿದು ಕಡಿದಾಡಲು
[ಚೂ]ಣಿಗೆಡಿಸಿ ಕೊಲ್ಲುತಿರಲು ।
ತ......... ಳಿದರು ಎಕ್ಕಟಿಗರು ಬೇಗದಿ
ಕೇಣವಿಲ್ಲದೆ ಹೆಣಗಿದರು ||೧೨೮|| ೧೨-೯೨/...

ನುಗ್ಗೆದ್ದು ಹೊಯಿದು ಕೆಡಹಿದರು ಕಣೆವೆಯ
ಕಗ್ಗೊಲೆಯಲಿ ಹಲಕೆಲರ ।
ಬೊಗ್ಗಿ ಬೊಗ್ಗಿಯು ಮೇಳಗಳು ಹೊಗುವದ ಕಂಡು
ಸುಗ್ಗಿಯನೇನ ಹೇಳುವೆನು ||೧೨೯||

ಸುತ್ತಲಿ ಕವಿದು ರಾಮನ ಮಂದಿ ಸಬಳರು
.... ಕುದುರೆಗಳು ।
ಇತ್ತರದಲ್ಲಿ ನಿಂದ ಆನೆಯ ಪವುಜಿನ
ಮೊತ್ತದ ಮೇಲೇರಿದರು ||೧೩೦||

ದೆಸೆದೆಸೆವರಿದೆಚ್ಚರು ಹೊಸ ಬಾಣದಿ
ಬಿಸಿಯ ರಕ್ತದ ಕೆಸರಾಗೆ ।
ಪೆಸರೆನಿಸುವ ಖಾನಖಾನರೆಲ್ಲರು ಬಿದ್ದು
ಹೆಸರಾಯಿತು ಸಂಗ್ರಾಮದಲಿ ||೧೩೧|| ೧೨-೯೫/...

ಹರಿಗೆ ಹಲಗೆ [ಕುರುಷಾಣ] ತೋಮರ ಗದೆ
ಪರಸು ಪಟ್ಟೆಯು ಪಿಂಡಿವಾಳ ।
ಬೆರಸಿ ಹೊಯ್ದಾಡುವ ವಜ್ರಮುಷ್ಟಿಯಲಿ
ಧುರಧೀರನ ಕಾಳಗವು ||೧೩೨|| ೧೨-೯೭/...

ಅಬ್ಬರ ಬೊಬ್ಬೆಗೆ ಅಬ್ಧಿ ಬ್ರಹ್ಮಾಂಡವು
ಗರ್ಭದ ಶಿಶು ನಡುಗಿದವು ।
ಸರ್ಬ ದಂಡು ..... ಗೆಟ್ಟವು
ಗಬ್ಬಿ ರಾಮನ ಕೊಲೆಯೊಳಗೆ ||೧೩೩||

ಅಟ್ಟಿ ಮುಟ್ಟಿಯು ಹೋಗಿ ಇಟ್ಟರೆ ಕಾಲಾಳು
ಹೊಟ್ಟೆ ಹರಿದು ಕರುಳುಗಿಯೆ ।
ಬಿಟ್ಟರು ಬೇಸತ್ತು ಪ್ರಾಣ ....
[ಕಟ್ಟಾ]ಳು ರಾಮನ ಮಂದಿ ||೧೩೪||

ಅಟ್ಟಿ ಬಂದರೆ ರಾಮ ಮುಟ್ಟಿ ಕೊಲ್ಲುವನೆಂದು
ಬಿಟ್ಟೆದ್ದು ಹಿಂದೆ ನೋಡುತಲಿ ।
ಕೆಟ್ಟೋಡಿತು ಮಾತಂಗಿಯ ಕಾಲಾಳು
ಅಷ್ಟದಿಕ್ಕಿಗೆ ಮುಂದುವರಿದು ||೧೩೫|| ೧೨-೯೪/...

ನಾಲ್ಕು ಕಾಲುಗಳು ಹರಿದು ಬಿದ್ದು ನೆಲದೊಳು
ನೂಕಲಮ್ಮವು ಕುದುರೆಗಳು ।
ಬೇಕಾದ ಮಾದಿಗಿತ್ತಿಯು ಬಂದು ಕೊಂದರೆ
ತರ್ಕೈಸಿಕೊಂಡು ಏರಿದನು ||೧೩೬|| ೧೨-೯೬/...

ಎಚ್ಚರೆ ಕುದುರೆಯ ಪಚ್ಚಳದೊಳು ಮೂಡಿ
ಬಿಚ್ಚಿ ಹಾಕುವ ಕುದುರೆಗಳು ।
[ಒಚ್ಚೊ]ತ್ತಿಗೆ ಧೂಳಿಪಟವ ಮಾಡಿದರಾಗ
.... ಸಿ ದಾನವರ ||೧೩೭||

ಕುದುರೆಯ ಪವುಜು ಸಂದಣಿಸಿ ರಾಮನ ಮೇಲೆ
ಗದುಬೆ ಕತ್ತಿಯ ಗಾಯಗಳು ।
ಕದಳಿಯ ವನವನು ಮದಕರಿ ಹೊಕ್ಕಂತೆ
[ಎದೆಗೆಡಿಸಿದನು ತುರುಕರನು] ||೧೩೮|| ೧೨-೯೯/...

ತೆರಳಿಸಿ ಎಚ್ಚರೆ ಉರುಳಿತು ರಣದಲ್ಲಿ
ಹೊರಳಿತು ಕುದುರೆಯ ಪವುಜ ।
ಮರಳಿತು ಮಾದಿಗಿತ್ತಿಯ ದಳ ಬೇಗದಿ
ದುರು[ಳ ರಾ]ಮನ ಕೊಲೆಯೊಳಗೆ ||೧೩೯||

ಕಂಡಿಸಿ ಹೊಯಿದರೆ ತುಂಡಾಗಿ ಕುದುರೆಯು
ಮಂಡೆಯ ಸೂಸಕ ಹರಿದು ।

ದಿಂಡುದರಿದು ರಕ್ತವು ಕೋಡಿವರಿದವು
ಗಂಡು ರಾಮನ ಕೊಲೆಯೊಳಗೆ ||೧೪೦||

ಕೋಳಾಹಳವ ಮಾಡಿದನು ರಾಮನಾಥನು
ಸಾಲೇರಿ ತರಿತರಿದೊಟ್ಟಿ|
ಮೂಲೋಕವ ಹೊಕ್ಕರೆ ಬಿಡೆನೆಂಬುತ
ಮೂಲೆ ಮೂಲೆಯ ಸೇರಿಸಿದ ||೧೪೧||

ಎರಡು ಲಕ್ಷವು ಕುದುರೆಯು ಕವಿದೇರಲು
ದುರುಳ ರಾಮನ ಕವಿದಿರಲು ।
ಉರುಳಿ ಬಿದ್ದರು ರಣದೊಳಗೆ ಮನ್ನೆಯರೆಲ್ಲ
ಕರೆ .... ರಿಸುತ ರಾಮನಾಥ ||೧೪೨||

ಕತ್ತಿಕತ್ತಿಯ ಹೊಯ್ಲಿಗೆ ಕಿಡಿ ಕಿಡಿ ಕಾರಿ
ಒತ್ತಿದ ಅರೆಗಾಯಗಳು ।
ಬತ್ತಲೆ ಕುದುರೆಯ ಹೊದ್ದರೆ ತುಂಡಿಸಿ
ರಕ್ತದ ಕಡಲ ಹರಿದವು ||೧೪೩||

ಕೆರೆಯೊಡೆದಂತೆ ಮುರಿದು ತಮತಮಗೆಲ್ಲ
ಉರುಬಿತು ರಾಮನ ಮಂದಿ ।
ಇರಿದು ಮೂದಲಿಸಿ ರಾಮನ ಎಕ್ಕಟಿಗರು
ಬರಿಕೈದರು ದಾನವರ ||೧೪೪||

ಸರಿಬರಿಯಾಗಿ ಬಿದ್ದರು ದುರುಗದ ಸುತ್ತ
ತುರಗ ಕಾಲಾಳು ಸಂದಣಿಸಿ ।
ಕರಿಘಟೆಗಳ ಕೆಡವುತ ಅಲ್ಲಿ ನಿಂದರು
ಧುರಧೀರ ರಾಮನ ಮಂದಿ ||೧೪೫||

ಸರಸದಿ ಹರಿದು [ಬಿದ್ದರು] ಖಾನಖಾನರು
ಕೊರಗುತಿರ್ದರು ರಣದೊಳಗೆ ।
ನರಳುತಿರ್ದರು ಬಲುಗಾಯದ ಖಾನರು
ಹೊರಳುತಿರ್ದರು ರಣದೊಳಗೆ ||೧೪೬||

ತೋರಿದ ಮುಖಧಾರೆಯಿಂದ ರಾಮ .....
..... ಬಿರಿದ ಅಸುರರ ತಲೆಯ ।
ತುಂಡುಗಳಾದವು ಮೈಕಟ್ಟು ಉಗಿದವು
ಸೂರೆಯ ದುಃಖವೇನೆಂಬೆ ||೧೪೭||

ಪಿಂಡಿವಾಳದ ಹೊಯಿಲಿಗೆ ಗುಡಿ ಹೊಯಿದವು
.... ಸುತ ಪರಿವಾರ ।
ತಂಡ ತಂಡದಿ ನವ ಕಂಡಗಳಾಡಿದ
ಹಿಂಡು ಭೂತವ ತಣಿಸಿದನು ॥೧೪೮॥

ಬೀದಿವರಿದು ಕೊಂದನು ರಾಮನಾಥನು
ಹಾದಿಗುಂದಿಸಿ ರ .... ।
ತೊಡರಾಗುತಿದ್ದ ಉಡಿಗೆ ಸಹಿತಲಿ ರಾಮ
ಕೆಡವುತಿರ್ದನು ಅಸುರರನು ॥೧೪೯॥

ಆರುನೂರು ಕುದುರೆ ಎಲ್ಲವು ಅಸುವಳಿದವು
ಮರಳಿದನು [ತಾ] ಕೈಕೊಂಡು ।
ವರೆ...... ಯಗಿದು ಬೊಬ್ಬಿರಿದನು
ತುರುಗಿತು ರಾಮನ ಮಂದಿ ॥೧೫೦॥

ಕರುಳ ತಕ್ಕೈಸಿ ಹೊರಳುತ ಒಂದೆಸೆಯಲಿ
ನರಳುತಿಹುದು ರಣದೊಳಗೆ ।
ದುರುಳ ರಾಮನ ಕೊಲೆಯೊ........
ಪರಿಯ ನಾನೇನ ಹೇಳುವೆನು ॥೧೫೧॥

ಕಂಡವ ಕಚ್ಚಿ ಹಾ[ರು]ವ ಕಾಗೆ ಕರುಳಿನ
ದಂಡೆಯನೆಳೆವ ಜಂಬುಕನು ।
ಮುಂಡವನೆತ್ತಿ ಹೊ.............
.... ವಿಕ್ರಮನೆಂಬ ಬಿರಿದ ॥೧೫೨॥ ೧೨-೧೦೨/...

ಒಂದರ ಬಾಯ ಕಂಡವನೊಂದು ಸೆಳೆಯುತ
ಸಂದಳ ಮರುಳ ತಿಂಥಿಣಿಯು ।
ಮುಂದಲೆವಿಡಿದು ಶಾಕಿನಿ [ಡಾ]ಕಿನಿಯರ
.... ದ ॥೧೫೩॥

ಬೆನ್ನು ಹತ್ತಿದ ಬಸುರಿನ ಕೆಂಗಣ್ಣಿನ
ಕೆನ್ನೆತನಕ ಪೆರ್ಬಾಯಿ ।
ಬೆನ್ನೊಳಗಣ ಪೇರೊಡಲಿನ ಮರುಳಿನ
ವರ್ಣ ನಡೆದುದೇನೆಂಬೆ ॥೧೫೪॥ ೧೨-೧೦೬/...

ಹರಿದ [ಕೋರೆ ದಾಡೆಯ] ಬರಿಯೊಡಲಿನ
ಅರಪಾಣಿಯೆಂದೆಂಬ ಮರುಳು ।

ದುರುದುರಿಸುವ ನೆಣ ನೆತ್ತರ ಸುರಿಯುವ
ಅರಟಿ ತಿಂತ್ರಿಣಿಯೆಂಬ ಮರುಳು ||೧೫೫||

ಎಲ್ಲ ಮರುಳು ತಂಡ ನೆರಹಿ ......
ಎಲ್ಲರು ಕೊರಳಪ್ಪಿ ನಗುತಲಿ ।
ಬಲ್ಲಿದ ಜಟ್ಟಿ ಕುಂಜರನೆಂಬ ಮರುಳಂದು
ಅಲ್ಲಿ ರಾಮನ ಹೊಗಳಿದವು ||೧೫೬||

ಶಾಕಿನಿ ಡಾಕಿನಿಯೆಂಬ ಮರುಳ ತಂಡ
ಬೇಕೆಂಬ ಸ ...... ಲಿ ।
ನಾಲ್ಕುದಿಕ್ಕಿಲಿ ಮುಂಡ ಕಂಡವ ಕಚ್ಚುತ
ನೂಕುತ ಕಿಲಿವ್ಡುಣುತಿಹವು ||೧೫೭||

ಈ ಪರಿ ಉಂಬುವರೆಡೆಗೊಂಡು ಬಂದಿತು
ಹೇಪಯನೆಂದೆಂಬೆ ಮರುಳು ।
ತೋಪಿಗೆಯಿತ್ತು ತಂದಿಕ್ಕೆಂಬುತಲೀಗ
ಚಪ್ಪರಿವುತ ಬರಿ ಬಾಯಿ ||೧೫೮|| ೧೨-೧೦೮/...

ಲೋಕದ ಮರುಳ ತಂಡವು ನೆರೆದಿಹವಲ್ಲಿ
ಅಕ್ಕೆವರಿಯುತ ಬಿದ್ದಿರಲು ।
ಕುಕ್ಕಿಲಿ .... ಬ್ಬೆಯಿಕ್ಕಿತು ತುರುಕರು
ನಾಲ್ಕು ಮುಖದಲಿ ಏರಿತು ||೧೫೯||

ಹೊಡೆದರೆ ತುಂಡಾಗಿ ಮಡಿದರು ಬೇಡರು
ಕಡೆಯಿಲ್ಲದ ಸಮರದಲಿ ।
ಒಡನೆ ಏರಿತು ರಾವುತರೆಲ್ಲ ಬಿದ್ದಿತು
ಕಡಿದಾಡಿದ ರಾಮನಾಥ ||೧೬೦||

ನಲ್ಲ ನಾಗನು ಬಿದ್ದ ಬಿಲ್ಲ ಸಿಂಗನು ಬಿದ್ದ
ಅಲ್ಲಿಪ್ಪ ನಗೆ ತಿಮ್ಮ ಬಿದ್ದ ।
ಜಲ್ಲಿಬುಲ್ಲಿಯ ಬುಕ್ಕಿ ನಾಯಕ ಬಿದ್ದನು
ಕಲ್ಲಕೋಟೆಯ ಚಿಕ್ಕ [ಬಿದ್ದ] ||೧೬೧|| ೧೨-೧೩೯/...

ಕಂಡೆಯಕಾರ ತುಳುವರ ಮಂದಿ ಬಿದ್ದಿತ್ತು
ಗಂಡು ರಾಮನ ಮುಂಗಡೆಗೆ ।
ಕೊಂಡು ಬಂದು ಜಗಳವ ಹಾಕುವ ಪ್ರ
ಚಂಡ ಕೊಳ್ಳಿಯ ನಾಗ ಬಿದ್ದ ||೧೬೨|| ೧೨-೧೪೨/...

ಕತ್ತಿಗ .... ನಾರು
ಒತ್ತರಿಸುತ ರಾಮನು ।
ನೆತ್ತರು ಮುಖದ ಖಾನರು ಒತ್ತರಿಸುತ
ಹತ್ತು ಮುಖದಲೇರಿದರು ॥೧೬೩॥

ದಿಕ್ಕನೆ ಕುದುರೆ ಸಿಕ್ಕಲು ಒಳಹೊಕ್ಕರು
ಇಕ್ಕಿತು ದುರುಗ .... ।
..... ಏರಿತು ಭೂರಿವರಿದು ಕೊಂದ
ಲೆಕ್ಕವಿಲ್ಲದ ಗಾಯಗಳು ॥೧೬೪॥

ಕಣಿಕಟ್ಟಿ ಡಣಿರೆಂಬ ರಭಸಕೋಟೆಯ ಸುತ್ತ
ಹಣೆ ಮುಖ ಒಡೆದ ಗಾಯಗಳು ।
ಹೆಣ[ಮಯ] ರಣಮಯ [ಆಳವೇರಿಯ ಸುತ್ತ]
ರಣವನಿಕ್ಕಿದರು ಕುಮ್ಮಟಕೆ ॥೧೬೫॥ ೧೨-೧೧೩/...

ಒತ್ತಿಬಂದರು ಸುಭಟರು ದಗಲೆಯ ತೊಟ್ಟು
ಹತ್ತಿದರು ಕೋಟೆಯನು ।
ಚಿತ್ರದ ಕೊಲೆಯ ಕೊಲ್ಲುವ ಡೆಂಕಣಿಗಳು
ಎತ್ತಿಹ .... ॥೧೬೬॥

ಕಾದೆಣ್ಣೆಯ ಜೀರ್ಕೊಳವೆಯಲೆಸೆವುತ
ಬಾಧೆಗಳಿಗೆ ನಿಲ್ಲಬಹುದೆ ।
ಕಾದುವ ಪರಿ ಹೇಗೆನುತ ಮಾದಿಗಿತ್ತಿ
ಮೂದಲಿಸುತಲೆದ್ದಳಾಗ ॥೧೬೭॥ ೧೨-೧೧೫/...

........ಚಿಲುಕಿನ ಗಾಯಗೆಲತಾಗೆ
ಹಲವು ಹಂಬಲಿಸುತ ಬಿದ್ದು ।
ತೊಲಗಿತು ಕೆಲ ಖಾನರು ಸಾಗಿ ಸಾಗಿತು
ತಲೆ ಬೇಡರು ಕಡಿದೆಸೆಯೆ ॥೧೬೮॥

ಹೋಯಿತು ಕುಮ್ಮಟ ಬಯಲೆ ....
...... ತೆನುತ ತಾವು ಭಯದಿ ।
ಸಾವು ಘನವು ಎರದೊಡ್ಡಿಲಿ ಇರಿದಾಡಿ
ಗಾಯ ಬಲುಹು ಚಿಲುಗಾಳ ॥೧೬೯॥

ದೊರೆ ಹೋದೆಡೆಗಾರು ಉಳುಹಿಲ್ಲದಳಿದರು
ಹರಿ[ದೆ]ದ್ದು ಬೀಳುವರಲ್ಲಿ ।

ಎರ[ಗಿ] ಇಕ್ಕೆಡೆಯಲಿ ತುರುಕರ
[ಕೊರೆ] ಹಾಕಿತು ರಾಮನವರು ||೧೭೦||

ಕಾಲಾಳು ಹೊದ್ದಬಾರದು ಕುಮ್ಮಟವನು
ನಿಲ್ಲಬಾರದು ನಮಗೆನುತ ।
ಬಲ್ಲಿದ ಖಾನರೆಲ್ಲರು ಮಡಿದರುಯೆಂದು
ಜಲ್ಲರಿಖಾನ ಹೇಳಿದನು ||೧೭೧||

ಮುಟ್ಟಿ ಕಾದುವರಿಲ್ಲ ಎನುತ ಮಾದಿಗಿತ್ತು
ದಟ್ಟಿಸಿ ಖಾನರ ಬೈದು ।
ಬೆಟ್ಟವ ಮುತ್ತು[ವೆ]ನೆಂಬುತ ಬಂದರೆ
ಕೊಟ್ಟದ ಬೇಡರ ಬರಿಸು ||೧೭೨||

ಡೆಂಕಣಿ ಮರುಳಗ್ಗೆ ಸಿಡಿಲಂಬಿನ ಬರೆ
ಕಿಂಕಿ ಬಿಡುವ ಕವಣೆಗಲ್ಲು ।
ಶಂಕೆಯಿಲ್ಲದೆ ಎಸೆವರ ಕಂಡು ತುರುಕರು
ಅಂಕೆ ಇಲ್ಲದೆ ತಿರುಗಿದರು ||೧೭೩|| ೧೨-೧೧೨/...

ಕೋಟೆ[ಗೆ ದಿಗುಬಲಿ] ಕೊಟ್ಟರು ತುರುಕರ
ಕಟೆನುತಲಿ ತಿರುಗಿದರು ।
ನಾಟಕವೇನೊ ರಾಮನ ಕಾಳಗಿವಿನ್ನು
ತೋಟಿ ಬೇಡವೊ ನಮ್ಮ ಒಡನೆ ||೧೭೪|| ೧೨-೧೧೩/...

ಹಿಂದಕೆ ತಿರುಗಿಬಿಟ್ಟಳು ಮಾದಿಗಿತ್ತಿಯು
[ಒಂದು ಗಾವುದ ದಾರಿಯನು]
ಅಂದು ನೇಮಿಯ ಕೇ[ಡು ತನಗಾಯಿತು ಎಂದು]
ನಿಂದು ಪಚಾರಿಸಿದಳು ||೧೭೫|| ೧೨-೧೧೭/...

ಈ ಕಥೆಯನು ಕೇಳ್ವ[ರಿಗೆ] ಪೇಳ್ವರಿಗೆ
ಶ್ರೀಕೈಲಾಸ ನಿವಾಸ ।
ಶ್ರೀಕಾಂತನಾಗಲಿ .... ದುವರೆಂದು
ಲೋಕದೊಳಗೆ ನಿಶ್ಚಯವು ||೧೭೬||

ಬರಡು ಪಶುಗಳೆಲ್ಲ ಕರೆವ ಸುರಭಿಯಾಗಿ
ಹಿರಿಯ ಬಂಜೆಗೆ ಹೆಮ್ಮಗನು ।
ಧರೆ ಬೆಳೆವುದು ....
ಸಿರಿಯ ಕೊಡುವ ಚೆನ್ನರಾಮ ||೧೭೭||

ರಾಮ ರಾಮ ಎಂಬ ನಾಮವ ನೆನೆದರೆ
ಕಾಮಿತ ಫಲಗಳನೀವ ।
ರಾವಣಗಂಜಿ ವಿಭೀಷಣದೇವರು ಶ್ರೀ
ರಾಮ .... ಮುಗಿಯೆ ||೧೭೮||

ಅಂತು ಸಂಧಿ ೯ಕ್ಕಂ ೧೬೫೮ (>೧೬೨೪)ಕ್ಕಂ ಮಂಗಳ ಮಹಾಶ್ರೀ.

❖❖

ಸಂಧಿ : ಹತ್ತು

❖

ತೆಲುಗರ ಸಂಚು - ಕುಮಾರರಾಮನ ವೀರಮರಣ

ಕಡೆಯ ಸಂಧಿಯ ಪ್ರಸಂಗವ ಕೇಳ್ದರೆ
.... ಕೈಲಾಸ ತುರುಕರ ।
ಕಡೆಯಿಲ್ಲದ ಸ... ಕಡಿದು ದಿಕ್ಕಿಗೆ ಬಲಿಯನು
ಕೊಟ್ಟು ....ರನ ಪಾದವ ಕಂಡ ||೧||

ಬಲ್ಲಿದಳೆಂದು ನಿಮ್ಮೊಡನೆಲ್ಲ ಬಂದೆವು
ಕೊಲ್ಲದ ಕೊಲೆಗಳ ಕೊಲಿಸಿ ।
ನಿಲ್ಲಬಾರದು ಛಲವುಳ್ಳರೆ ಕೊಲ್ಲೆಂದು
ಜಲ್ಲರಿಖಾನ ಹೇಳಿದನು ||೨||

........ಳ ದಂಡ ಇಲ್ಲಿ ಮಾಡುವೆ
ಮುತ್ತಿ ರಾಮನ ಹಿಡಿ ತರುವೆ ।
ಸತ್ತು ಬದುಕಿ ಹೋರುವೆ ಈ ದುರ್ಗವ
ಚಿತ್ತ ದಣಿಯೆ ಬೆಳತನಕ ||೩||

ಇಲ್ಲಿ ತಮ್ಮೊಳು ತಾವು ಗುಜುಗುಟ್ಟಿ ಕುಮ್ಮಟ
ದಲ್ಲಿ ತೆಲುಗ ಮನ್ನೆಯರು ।
ಬಲ್ಲಿದ ರಾಮನ ಕೊಲ್ಲಿಸಬೇಕೆನುತ
[ಎಲ್ಲ ರಾಯರುಗಳ ಕರೆಸಿ] ||೪|| ೧೨-೧೧೮/...

ಹೋಗಬೇಡವು ಎಂದು ಆಗ ಮಾತಂಗಿಗೆ
ಬೇಗದಿಂದಲಿ ಮನ್ನೆಯರು ।
ಬಾಗಿಲ ತೆಗೆದು ಕೊಟ್ಟೆವು ಬರಹೇಳೆಂದು
ಆಗ ವಾಲೆಯ ಕಳುಹಿದರು ||೫|| ೧೨-೧೨೦/...

ಹೇಳಿದ ಮಾತ ಕೇಳುತ ಮಾದಿಗಿತ್ತಿಯು
[ದಾಳಿಯನಿಕ್ಕಿ ಕುಮ್ಮಟಕೆ] ।
ಧೂಳಿ ಮಾಡುವೆನೆಂದು ಮುತ್ತಿತು ದುರ್ಗವ
ಕಾಳಗ ಗಂಟಿಕ್ಕಿತಾಗ ||೬|| ೧೦೨-೧೨೨/೨೫-೪

ನೆಲೆಯಿಲ್ಲದಗಳನು ಮಾಡಿ ಹೂಡೆದಿ ನಿಂದು
ಈಡಾಡಬೇಕು .... ।
....
ಬೇಡರೊಡನೆ ಹೇಳಿದಳು ||೭||

ಬೆನ್ನನು ಮೆಟ್ಟಿ ಕಾದುತ ಮಾದಿಗಿತ್ತಿಯು
ತನ್ನ ಕೋಪದಿ ಹಲ್ಲ ಮೊರೆದು
ಚೆನ್ನಾಗಿ ಕಾದಿದವರಿಗೆ ....
.... ಹಿದಳು ||೮||

ಇತ್ತ ಕಂಪಿಲರಾಯನ ಸುತ ರಾಮಯ
ಚಿತ್ತದುಮ್ಮಳಿಕೆಯ ಬಿಟ್ಟು ।
ಅತ್ತಿಮ[ರದ] ಕೊಟ್ಟಳಿಗೆಲಿ ಕುಳಿತಿನ್ನು
.... ಲೆತ್ತ .... ||೯||

ಭರದಿಂದ ಹರಿದು ಬಂದನು ಕಾಟಣ್ಣನು
[ಅರಮನೆಗಾಗ] ತಿರುಗಿದ ।
ಅರಸಿಲ್ಲದಂತೆ ಕಾಳಗ ಸಮವಪ್ಪುದೆ
ಧುರಧೀರ ರಾಮ ನೀ ಏಳು ||೧೦|| ೧೦೨-೧೨೩/೨೫-೫

[ಆಳ ಕಾದಿಸಿ] ನೋಡುವ ರಾಯರ ಗಂಡ
ಕೇಳಿದ ಕಾಟನ ಮಾತ ।
ಕಾಳಗಕನುವಾಗಿ ಎಲ್ಲರು ಎನುತಲಿ
ಹೇಳಿದನಾಗವರೊಡನೆ ||೧೧|| ೧೦೨-೧೨೪/೨೫-೬

ಕಾ[ಲ]ನ ಕಾಲಾಟವಾಯಿತು ಕುಮ್ಮಟ
[ಲೀಲೆಯಾಗಿದೆ ದುರ್ಗ]ದೊಳಗೆ ।
[ಬಾಲಕರೆಲ್ಲರ] ಇದಿರಲಿರಿದಾಡಿದ
ಹೇಳಲೆಸುತ ಪಟುಭಟರ ||೧೨|| ೧೦೨-೧೨೫/೨೫-೭

ಏನ ಮಾಡಿಯಾರು ಮುಮ್ಮಡಿ ಸಿಂಗನ ಮ
ತ್ತೇನ ಮಾಡಿಯಾರು ಮನ್ನೆಯರು ।

ಹೀನವಲ್ಲವೆ ಮಾನಿನಿಯ ಕೂಡಣ ತೋಟಿ
ನೀನೆ ಕಾದಿಸು ಕಾಟಣ್ಣ ||೧೩||

ಒಳಕೋಟೆ ಹೋಯಿತಿನ್ನೇಕೋ ದೇವರದೇವ
ಬಳಿಕ ನೀ ಮಾಡುವುದೇನು ।
[ಒಳಗು] ಕೊಟ್ಟರು [ತೆಲುಗ] ಮನ್ನೆಯ ಸಂಚವು
ಇಳುಹು ಲೆತ್ತವನು ಏಳೆಂದ ||೧೪|| ೧೨-೧೨೬/೩೪೮

ಹಾಸಂಗಿಯ[ನು] ನೂಕಿದ ರಾಮನಾಥನು
ಕೇಶವ ಮುರಿದು ಸುತ್ತಿದನು ।
ಪಾ[ಶ]ವ ತೆಗೆದುಕೊಳ್ಳುತ ರಾಮ [ಎದ್ದನು]
[ಈಶ]ನೆ ಗತಿಯೆನುತೆದ್ದ ||೧೫|| ೧೨-೧೨೭/...

ತಿರುಗಿದನರಮನೆಗಾಗಿ ರಾಮಯ್ಯನು
ಕರೆಸಿದ ತನ್ನರಸಿಯನು ।
ತರಿಸಿ ಮುತ್ತಿನ ಗದ್ದುಗೆಯ [ಮೇಲೆ] ಕುಳ್ಳಿರುತಿರ್ದು
ಧುರಗಲಿ ರಾಮನಿಂತೆಂದ ||೧೬||

ಕಿಚ್ಚವ ಕಂಡು ಮನವ [ಒಳಗುಂದದಿರಿ]
[ಒಚ್ಚೆಯ ತಂದುಕೊಳ್ಳೆನಲು]
ನಿಶ್ಚಯಿಸಿದ ಮನವನು ನೀ ನೋಡೆಂದು
ಮೆಚ್ಚಿನ ಮಡದಿ ನುಡಿದಳು ||೧೭|| ೧೨-೧೩೧/೩೫೧

ಮಡದಿಯರೆಲ್ಲರ್ಗೆ [ಉಸುರಿದ ರಾಮಯ್ಯ]
ಮಡಿ[ದೆ]ನೆಂದರೆ [ತನ್ನೊಳಗೆ]
ಬಿಡಿ ಪ್ರಾಣವನೆನುತಲಿ ವೀಳ್ಯವನಿತ್ತು
ಕಡುಗಲಿ ಕಳುಹಿಸಿಕೊಂಡ ||೧೮|| ೧೨-೧೩೩/೩೫೩

ಉಟ್ಟ ದೇವಾಂಗವ ಕಟ್ಟಿ ವಂಕುಡಿಯನು
ನೆಟ್ಟನೆ [ಏಕಾಂಗವೀರ] ।
ಪಟ್ಟದ ರಾಣಿ ಪೊಂಬಟ್ಟಲೊಳೈತರೆ
ಮುಟ್ಟಿದಮೃತಾನ್ನವನು ||೧೯|| ೧೨-೧೩೪/೩೫೪

ತನ್ನೊಡನಿರ್ದಾ ನಾಲ್ಕು ಸಾವಿರ ಮಂದಿ
ಹೊನ್ನ ಕಟ್ಟಿನ ಬಿಲ್ಲಿನವರು ।
ಮನ್ನಿಸಿ [ಕರ್ಪುರ ವೀಳ್ಯವ ಕೊ]ಡುತಿರೆ
ಚೆನ್ನ ರಾಮುಗ ಅನುವಾದ ||೨೦|| ೧೨-೧೩೬/೩೫೬

ಸಂಭ್ರಮದಿಂದಿಳಿದನು ರಾಮ ದುರ್ಗವ
ಕೊಂಬಿನ ರಭಸ ಚಿನಗಾಳೆ ।
ತಂಬಟೆ ಡೊಳ್ಳು [ನಿಸ್ಸಾಳ ಧ್ವನಿಗಳು]
[ಕುಂಭಿನಿ] ದಂಡು ಕಂಗೆಡುತ ॥೨೧॥ ೧೨-೧೩೭/೫-೭೭

ಆರಾರು ಬಿದ್ದರೆನುತಲಿ ರಾಮಯ್ಯ
ದಾರವಟ್ಟದಿ [ನಿಂದು ಕೇಳೆ] ।
ವಾರಿಯ ಮಂದಿ ಬಿದ್ದಿತು ಹೊರಬಾಗಿಲು
ಸೂರೆಯಾದುದನೇನೆಂಬೆ ॥೨೨॥ ೧೨-೧೩೮/...

ಎಕ್ಕಟಿಗರು ಬಿದ್ದರು ರಾಮನಾಥನೆ
ಅಕ್ಕಸಾಲೆಯ ಚಿಕ್ಕ [ಬಿದ್ದ] ।
ಹೊಕ್ಕು ಹೊಯಿದು ಹೆಸರೆನಿಪ ಪಲ್ಲಯಖಾನ
ಎಕ್ಕತುಳ [ಮನ್ನೆಯ ಬಿದ್ದ] ॥೨೩॥ ೧೨-೧೩೯/೫-೨೨

[ಮೂದಲಿಸುವ] ಮಾದಿಗ ಹಂಪ ಬಿದ್ದನು
ಕಾದಿದ ಕುದುರೆ ಕಾಲೊಳಗೆ ।
ಸಾಧಿಸಿ ಒಳಪೊಕ್ಕು ಕುದುರೆಯ ತಿವಿದನು
ಬಾಧೆಯನೇನ ಬಣ್ಣಿಸುವೆ ॥೨೪॥ ೧೨-೧೪೦/...

.... [ಎಕ್ಕ]ಟಿಗರು ಬಿದ್ದರು
ಅಸುರರೊಡನೆ ಹೊಯಿದಾಡಿ ।
ಅಸಮಸಿ ಇಲ್ಲ ಏರಿ ಕೊಂದವರೆ........
.... ॥೨೫॥

....
ಬೇಗ ಮಂದಿಯನು ಕೈಕೊಂಡು ।
ನೂಕುತ ಕಿರಿ ಕಾಳಗವನು ಕೊಡುಯೆಂದು
ಜೋಕೆವಿಡಿದು ಪೇಳಿದನು ॥೨೬॥

ಚೂಣಿಯ ....
.... ಹೊಕ್ಕರಾಗ ।
ಕೇಣವಿಲ್ಲದೆ ಕಾಣಿಸಿಕೊಂಡು ಎಚ್ಚರು
ಬಾಣದ ಮಳೆಗರೆದಂತೆ ॥೨೭॥

ಭರದಿಂದ ದುರ್ಗವನಿಳಿದನು ರಾಮಯ್ಯ
[ಅರಿಗಳು ನೋಡಿ ಬೆದರಿದರು]

[ಸರಸಿಜ]ನಾಭನ ಚರಣವ ನೆನೆಯುತ
[ಸರಳ] ನೇವರಿಸಿ ಜಡಿದನು ||೨೮|| ೧೨-೧೪೭/...

ಎಡಬಲದಲಿ ಸಿಡಿಲಂಬಿನ ರಭಸವು
ಕಡಲ ಕರೆಯ ಗಡಣದಲಿ ।
ಕಡು ಹಸಿರ ....ಂದದಿ
ಪೊಡವಿ ಅದುರೆ ಬೊಬ್ಬಿಡುತ ||೨೯||

ಹ[ರಿ]ದ ಬಾಣವನೆಡಗೈಯಲಿ ತಕ್ಕೊಂಡು
ಸರಳ ಕೆನ್ನೆಲಿ ಕಟವಾಯ್ದು ।
ಬಾದೂರ ಮಲುಕನ ....
.... ದವು ಕೋಲು ತಟ್ಟುಗಿದು ||೩೦||

ಕಟ್ಟಿದ ಸುರಗಿಯ ಕಿತ್ತು ಬೇಡರು ಬೆನ್ನ
ಅಟ್ಟಿ ನಡೆದರಿದಿರಾಗಿ ।
ಕಟ್ಟಾಳು ರಾಯ ರಾವುತರನಿರಿದು ಬೇಗ
ಅಟ್ಟಿ ಆಡಿದ ಸಾವ .... ||೩೧||

ಹಿಡಿದ ಬಿಲ್ಲಂಬನೊಕ್ಕೈಯಲಿ ಪಿಡಿಕೊಂಡು
ಉಡಿಗೆ ಸುರಗಿಗಳ ತಳೆದು ।
ತುಡುಕಿ ತೇಜಿಯನಿರಿದು ಕೊಂದು ಬೇಗದಲಿ
ಕಡುಗಲಿ ರಾಮನ ಮಂದಿ ||೩೨||

ಅಂಬಿನ .... ರೂಟಾಟವು ರಾಮಯ್ಯಗೆ
ನಂಬಿದ ಬೇಡರ ಬಿಲ್ಲು ।
ಮುಂಬೆವಿಡಿದು ತಲೆಗಳ ಬಣಬೆಯನೊಟ್ಟಿ
ಸಂಭ್ರಮ ದುರ್ಗದ ಕೆಳಗೆ ||೩೩||

ಕಂಡಕಂಡಲ್ಲಿ ತೆಗೆದ ಅಂಬಿ ....
ಚಂಡವಿಕ್ರಮನ ಬೋಳೆಗದು ।
ಮುಂದಣ ಜಲ್ಲಿಬಿಲ್ಲಿಯ ಬೇಡರೆಚ್ಚರೆ
ಅಂದಗೆಡಿಸಿ ತುರುಕರನು ||೩೪||

ನೆಲ[ನೊಡ್ಡಿ] ಹಾ[ಕು]ವ ಬಾಣದೆಗೆಯ ....
ಕಲಿಗಳ ತಲೆ ಚಿಬುಕಗಳು ।
ಕೊನೆವೆರಳೊಡೆದವು ರಾಮನಾಥನ
ಘನತರ ಭರದೆಸಗೆಯಲಿ ||೩೫||

ಕಲಿಯು ಹೆಚ್ಚಿತು ಕಲಿತನಗಳೆಗ್ಗಳಿಸಿತು
ಮನಕೆ ....ಚ್ಚುವ ಬಾಣಗಳು ।
ಕನಲಿ ಜಗಳವ ತರುವ ಲಿಂಗನಾಯಕ
ಅನುವಾದು .... ವಹಿಲದಲಿ ||೩೬||

ಚರಕಿ ಚಿತ್ರಾಂಗಿ ಕಾರ್ತಿವೀರ ಅರ್ಜುನ
ಚರಮವುಳ್ಳನು ಅಮುಂಜುರನು ।
ಸರಿಗಟ್ಟಿ ......ಳೆಂದೆಚ್ಚು ಕೊಂದರು
ಭೂರಿಯಾಯಿತು ರಣದೊಳಗೆ ||೩೭||

ಕೋಲುಗಳನೆ ಎಚ್ಚರೆ ರಣದೊಳಗೆಲ್ಲ
ತೋಳು ನೊಂದವು ಬೆರಳೊಡೆದು ।
ಕಾಲಭೈರವನು ಬಂದಂತೆ ರಾಮಯ್ಯನು
[ಮೇಲಾ]ಯುಧವ ತಕ್ಕೊಂಡು ||೩೮|| ೧೨-೧೪೯/...

ಹರಿಗೆ ಜಲ್ಲಿಗೆ ಪಟ್ಟೆಯ ಕಳೆದು ರಾಮಯ್ಯನು
ಪರಿವಾರವನು ಬೋಳೈಸಿ ।
ಧುರಧೀರರಾದವರೊಳು ಹೊಯ್ದಾಡಿ[ದ]
ಸರಿಮಂದಿ .... ||೩೯||

ಹಿಂಡಿನೊಳಗೆ ಹುಲಿ ಹೊಕ್ಕಂತೆ ರಾಮನು
ಖಂಡೆಯ ಹಲಗೆ ತಕ್ಕೊಂಡು ।
ದಿಂಡಿದರಿದು ಚಿಲುಕಂಡ ಮಾಯವ ಮಾಡಿ
ಹಿಂಡು ಭೂತವ ತಣಿ[ಸಿದನು] ||೪೦||

[ಸ]ಮರದೊಳಗೆ ಒಬ್ಬ ಕೊಮರ ಕಾಟಣ್ಣನು
ಅಮಮಾಮ ಮಜ ಭಾಪೆನುತ ।
ಕ್ರಮಗೆಡಿಸಿದ ಖಾನಖಾನರ ಕುದುರೆಯ
ಭ್ರಮೆಗೆಡಿಸಿದ ಅಸುರರನು ||೪೧|| ೧೨-೧೬೩/...

[ಕೆಣಕಲು ಕಿಚ್ಚಿನ ರೋಷದ] ಕಾಟನು
ರಣಮಯ ಹೆಣ ಸೂರೆಗಾರ ।
ಬಣಬೆಗೆ ಬಸವನು ಕವಿ ಕವಿದಂದಲಿ
ಹಣೆದಾಡಿದ ಸಮರದಲಿ ||೪೨|| ೧೨-೧೬೪/...

ಹೆಬ್ಬುಲಿ [ಪಶುವಿನ ಹಿಂಡಿನೊಳಗೆ ಪೊಕ್ಕು]
[ಅಬ್ಬರಿ]ಸುವ ತೆರನಂತೆ ।

ಕಬ್ಬಿಲ ನಾಗನು ಬೊಬ್ಬಿರಿದಾಲುತ
ಬೊಬ್ಬೇರಿಖಾನನ ಹೊಯಿದ ||೪೩|| .../೧೨-೪೫

ಅಚ್ಚಗಿಚ್ಚಿಗೆ [ಮರು ಮೊನೆ]ಗಂಡ ಗಾಯಕ್ಕೆ
.... ।
.... ಕರೆಜಾ ಕವಿದೇರಿ
ಕೊಚ್ಚಿದರೊಬ್ಬರೊಬ್ಬರನು ||೪೪||

ಮಾದಿಗಿತ್ತಿಯ ಪವುಜೇರಲು ರಾಮನು
ಕಾದುತ .... ।
....
.....................ಲ್ಲಿಸಿದರು ||೪೫|| ೧೨-೧೫೧/...

ಹುಲಿ ಮುಖದಲಿ [ಕವಿದೇರಲು] ಖಾನರು
ಕಲಿ ರಾಮನ ಮುಸುಕಿದರು ।
ಅಲಗಿನ ತಡೆಯೊಡೆದಂತೆ ಕೊಟ್ಟಿಗ ......
[ತಲೆ]ಗಳ ಚೆಂಡಾಡುತಿರಲು ||೪೬|| ೧೨-೧೬೭/೨೫-೪೭

.... ರಿದು ತೋಳು ಮಿಗೆ ಕಾಲು ತುಂಡಾಗಿ
ಬಿಗಿದೊಡಲಿನ ತೆಕ್ಕೆಗರುಳು।
ಮಿಗೆ ಹು[ಲಿ]ಮುಖದಲ್ಲಿ [ತೋ]ಟಿಕರೆಲ್ಲ
ಒಗುವುದು ಓಕುಳಿಯೊಳಗೆ ||೪೭||

[ಇಟ್ಟಣಿಸುತ ಬಾಗಿಲ ಮುಂದೆ ತುರುಕರು]
ಒಟ್ಟಿತು ಪೆಣನ ಬಣಬೆಯ ।
ಅಟ್ಟಿ ಮುಟ್ಟಿ ಕೊಂದನು ರಾಮನಾಥನು
ಕಟ್ಟಾಳು ರಾಯರಾವುತರ ||೪೮|| ೧೨-೧೬೬/...

ಕೊಂದನು ಕೈ ಹೇಸಲು ಮನ ದಣಿಯಲಿ
ಬಂದು ಬಿಟ್ಟ .... ।
...... ದು ಬೇಗ ಡೆಂಕಣಿಯಿಂದಲಿಟ್ಟನು
ಸಂದಣಿಸುವ ಕಾಲಾಳು ||೪೯||

ಕಣಿವೆಯ ಬಾಗಿಲೊಳಗೆ ಹೆಣ ಒಟ್ಟಿತು
ಎಣಿಕೆಯಿಲ್ಲದೆ ಕಾಲಾಳು ।
ಕುಣಿ .... ನಿಪ್ಪ [ತೋಟಿ]ಗಾರರು
ಹೆ[ಣ]ಮಯವಾದರಲ್ಲಲ್ಲಿ ||೫೦||

ಜೋಡಿಸಿ ಕವಿದೆಸೆಯುತ ರಾಮನಾಥನು
ನೋಡಿ ನಗುತ ಪರಬಲವ ।
ಕೂಡೆ ಬೊಬ್ಬಿರಿದಾಲಿ [ಸೋಂಕಲು ಗೂಗೆಗಲ್ಲಿನ]
[ಅಡಿಯಲಿರಿದ] ರಕ್ಕಸರ ॥೫೧॥ ೧೨-೧೬೯/...

ಎಚ್ಚರು ರಾಮನ ಮೇಲೆ ದಾನವರೆಲ್ಲ
ಸುತ್ತ ನೋಡಲು ತೆರಹಿಲ್ಲ ।
ನೆತ್ತರ ಬಳಿದು ಬೀಸಾಡುತ ರಾಮಯ್ಯ
ಮತ್ತೆ ಬಾಣಕೆ ಗುರಿಯಿ[ಟ್ಟ] ॥೫೨॥

ಕಾಟನಾಯಕನೊಂದು ಕಡೆಯಲಿ ಕಾದುತ
ನೋಟ ರಾಮನ ಮೇಲಿಹುದು ।
ಕೂಟದ ಮಂದಿಯ ಬಿಟ್ಟು ರಾಮನ ಕಂಡು
ದಾಟಿದ ಹೊರ ಕೋಟೆಯನು ॥೫೩॥ ೧೨-೧೭೦/...

ಹರಿ[ದು ಬಂದು] ಹೊರಳಿದನು ಕಾಟಣ್ಣನು
ಧುರಧೀರ ರಾಮನ ಮುಂದೆ ।
ಪರಬಲಾಂತರ [ವೈರಿಯ ಗಂಡನೆಂಬುವ]
ಬಿರಿದು ಸಂದಿತು [ರಾಮ ನಿನಗೆ] ॥೫೪॥ ೧೨-೧೭೧/...

[ಕಡುಗಲಿ ಕಾಟನ] ಕರೆದು ಕಡೆಯವಿತ್ತು
ಧುರಗಲಿ ರಾಮನಿಂತೆಂದ ।
ಪಡೆ ಮುಗಿ ಬರುತಿದೆ ನಡೆ ನೀನು ಎಂದರೆ
ಹಡಪದ ತಿಪ್ಪನ ಕರೆದು ॥೫೫॥ ೧೨-೧೭೨/...

ಕಡೆಯವ ಕೊಂಡೊ[ಯ್ದು]........ ರವನಲ್ಲ
ಸುಡು ಸಂಸಾರವಿನ್ನೇಕೆ ।
ಮೃಡನು ಮೆಚ್ಚಲಿ ಕಡಿದಾಡುವೆ ನಿನ ಮುಂದೆ
ಪೊಡವಿಯಲಿ ರಾಮ ಚಿತ್ತೈಸು ॥೫೬॥

ಕಡೆಯವು ಸಿಕ್ಕಲು ಅಪಕೀರ್ತಿ ಘನವಲ್ಲ
.... ಗುದೆಯೆಂದು ನುಡಿದ ।
ಅಡಿಗೆರಗಿಯು ಕಡೆಯವ ಕೊಟ್ಟು ಬಾಯೆಂದ
ಒಡೆಯ ಕಂಪಿಲನೆಡೆಗೈದಿ ॥೫೭॥

ಅಂಗವ ಕೊಡದಿರು ಭಂಗ ನಿನ್ನದು ಕಂಡೆ
ಸಂಗ .... ಕಾದಿದರೆ ।

ಅಂಗನೆಯರು ಮಣಿಪುಷ್ಪಕದೊಳಿಟ್ಟು
ಲಿಂಗನಲ್ಲಿಗೆ ಎ[ಯ್ದುವರು] ||೫೮|| ೧೨-೧೮೮/...

ತಂದೆಯ ವಂಶಕೆ ಕುಂದ ತಂದವನಲ್ಲ
[ಅಂದೆ ಕೊಂದಳು ನಿನ್ನ] ರತ್ನಿ ।
ಎಂದು ನುಡಿದ ಕಾಟಣ್ಣನ ಕಳುಹಿದ
ನೊಂದು ನುಡಿದನು ಬೇಗದಲಿ ||೫೯|| ೧೨-೧೮೫/...

ತಲೆಯು ಬಂದಲ್ಲದೆ ಕೊಲಬೇಡ ಹೆಂಡಿರ
ನೆಲೆಯೆ .... ಲಗೆ ।
ಒಲಿದು ನಿನ್ನ ಹೆತ್ತಳು ಹರಿಯಲದೇವಿ
ಲಲನೆಯರೆಂತು ಸೈರಿಪರು ||೬೦||

ಎಡದ ಕಾಲಿನ ಕಡೆಯವನಿತ್ತು ....
.... ।
ಒಡೆಯನು ಎನ್ನ ಪ್ರಾಣಕೆ ಅಭಿಮತ
ತಡೆಯದೆ ಕೊಲ್ಲು ಹೋಗೆಂದ ||೬೧||

ಹರಿಯಲದೇವಿಗೆ ಬಿನ್ನಹ ಮಾಡೆಂದು
.... ।
.... ಗಂಡ ಕಂಪಿಲಗೆ
ಬಿರಿದನೊಪ್ಪಿಸು ಕಡೆಯವನು ||೬೨||

ಜೀವ ತಿಂತಿಣಿ[ಗೋಸರಿಸಿ] [ವೈರಿಗೆ] ಕೊಟ್ಟು
ಸವಿದ .... ।
ದೇವಿ ಕಂಪಿಲನ ಕುಮಾರ ನಿನ್ನ ಮುಂದೆ
ಸಾವೆನಲ್ಲದೆ ಹೋಗೆನೆಂದ ||೬೩||

ಎಲವೊ ಕಾಟಣ್ಣ ಎನಗೆ ಬಲು ಗಾಯವೊ
ಕೊಲುವರಿನ್ನಾರೊ ಹೆಂಡಿರನು ।
.... ಕೊಂಡು ಮುಂಡಾಡಿ ಕಾಟನ
ನಿಲಬೇಡ ಕೊಲ್ಲು ಹೋಗೆಂದ ||೬೪||

ಸರಸರನೆ ಹತ್ತಿದ ಕಾಟಣ್ಣ ದುರ್ಗವ
ಭರದಿಂದ ಬರುವುದ ಕಂಡು ।
ಅರಸಿಯ .... ಕಾಟನ
ಧುರಧೀರ ರಾಮನೇನಾದ ||೬೫|| ೧೨-೧೮೯/...

ಅಂಬಿನ [ಮ]ಳೆಯಲಿಕ್ಕಡಿ[ಯಾ]ದ ರಾಮನು
ತುಂಬಿತು ಸರಳ ಮೈಯೊಳಗೆ ।
ಬೆಂಬಲಾದ .... ರಾಮನಾಥನು
ನಂಬಿದ ವೈಕುಂಠವನು ॥೬೬॥ ೧೨-೧೯೦/...

ಕೊಬ್ಬಿರಿದರೆ [ಕು]ಮ್ಮಟ ನಡೆದಂದದಿ
ಉಬ್ಬೇರಿ ನಗುತನಾರ್ತಿಯನು ।
ಸಬ್ಬ .... ವಾದಂತೆ ರಾಮಯ್ಯನು ನೀ
ಒಬ್ಬನೆ ಪರಿವಾರ ಸಹಿತ ॥೬೭॥

ಕಿಚ್ಚನಿಕ್ಕಿನ್ನು ಬೊಕ್ಕಸ ಭಂಡಾರಕೆ
ಒಚ್ಚೊತ್ತಿಗೆಲ್ಲ ಅರಮನೆಯ ।
ಒಟ್ಟೈಸಿ ಕಿಚ್ಚಿನೊಳೆಲ್ಲರ ನೂಕಿಸಿ
ನಿಶ್ಚಯಿಸಿ ತಿರುಗಿದನು ॥೬೮॥ ೧೨-೨೦೧/...

ಇತ್ತರದಲಿ ಚಲ್ಲಿವರಿದ ಕಾಟಣ್ಣನು
ತತ್ತರದರಿದು ಕೇರಿಯನು ।
ಸುತ್ತ ಕಿಚ್ಚನಿಕ್ಕಿ ಸುಟ್ಟ ಪಟ್ಟಣವನು
ಹತ್ತಿದನಾ ಹೊಸಮಲೆಗೆ ॥೬೯॥

ಒಡೆಯ ಕಂಪಿಲರಾಯನ ಕೈಗೆ ಕಾಟಣ್ಣ
ಕಡೆಯವನವನು ಒಪ್ಪಿಸಿದ ।
ಕಡುಗಲಿ ಕಾಟಣ್ಣ ಏನಾದನೊ ರಾಮ
ಪಡೆಯೊಳಗೊಪ್ಪಿಸಿ ಬಂದೆ ॥೭೦॥

ಹಡೆದ ಮಗನು ಎಂದೆನೊ ನಿನ್ನ ಕಾಟಣ್ಣ
ಕಡೆಯಲಿ ಗುಣವ ತೋರಿದೆಯೊ ।
ಕಡೆಯು ಸಿಕ್ಕೀತೆಂಬುತ ನಾನು ಬಂದೆನು
ಬಿಡುನುಡಿ ಏಕೆನ್ನ ತಂದೆ ॥೭೧॥

ಎಂದು ಕಂಪಿಲರಾಯಗೆ ಹೇಳಿ ಕಾಟಣ್ಣ
ಮುಂದಕೆ ನಡೆದನಲ್ಲಿಂದ ।
ಬಂದ ಕಾಟಣ್ಣನ ಕಾಣುತ ಹರಿಯಲದೇವಿ
ಕಂದ ರಾಮನ ಕೇಳಿದಳು ॥೭೨॥

ಚೆನ್ನಿಗ ಕಾಟಣ್ಣ ಭಿನ್ನವಿಲ್ಲದೆ ನಾನು
ನಿನ್ನ ಕಂಡೆನು [ರಾ]ಮನೆಂದು ।

ಎನ್ನ ಮಗನ ರಣದೊಳಗೆ ಒಪ್ಪಿಸಿ ಕಾಟ
ಚೆನ್ನ ರಾಮನ ಕೊಲ್ಲಿಸುವರೆ ॥೭೩॥

ಎನ್ನ ತಾಯೆ ಕೇಳೆನುತ ಬಿನ್ನಹ ಮಾಡೆ
ಇನ್ನು ಈ ಮಾತೇಕಮ್ಮಾ ।
ಎನ್ನ ಪ್ರಾಣಕೆ ಇ .... ಕಾಟಣ್ಣ
ತನ್ನ ವಂಕುಡಿ ಎತ್ತಿ ಬಿಗಿದ ॥೭೪॥

ಭರದಿಂದ ಬೀಳ್ಕೊಂಡು ಹರಿದು ತಾ ಬಂದನು
ಧುರಧೀರ ರಾಮನ ಬಳಿಗೆ ।
ಸುರಲೋಕವನು ತಾ ....
ಧುರಧೀರ ಕಾಟ ಚಿತ್ತೈಸು ॥೭೫॥

ನನ್ನ ಪ್ರಾಣ [ಹೀನ]ಜಾತಿಗೆ ಹೋಯಿತು
ನಿನ್ನ ಕಾಳಗವ ನೋಡುವೆನು ।
ಚೆನ್ನಿಗನೊಡೆಯ ನೀ ನೋಡೆಂ[ದು ಕಾಟಣ್ಣ]
ಗಮ್ಮನೆ [ಮಾ]ಡಿದ ಹುಯ್ಯಲನು ॥೭೬॥

ಕಡಿದು ಮುನಿದೇರಿತು ಕಿಡಿ ತರಿದೊಟ್ಟಿತು
ತಡವು ಇಲ್ಲದೆ ಎಡಬಲವ ।
ಕೆಡೆ ಹುಸಿ ಹೋಗದಿರೆನುತ.................
.... ಮುಸುಕಿ ಒಬ್ಬನನು ॥೭೭॥

ನಿರ್ಧಾರವೆ ರಾಮ ಬಿದ್ದನೆ ಎನ್ನುತ
ಹೊದ್ದಲಮ್ಮದೆ ಕುಮ್ಮಟವ ।
ಬಿದ್ದವರೆಲ್ಲರ ತಲೆಗಳ ಕೊಯ್ ಕೊಯ್ದು
ಅರ್ಧ.................... ಳಾ ॥೭೮॥

ಅಬ್ಬರ ಅಡಗಿತೆನುತ ಖಾನರೆಲ್ಲ
ಉಬ್ಬಿ ಹೆಬ್ಬಾಗಿಲ ತೆಗೆದು ।
ಅಬ್ಬರ ರಾಮನ ಬೊಬ್ಬೆಗೆ ನಿಲಲಂಜಿ
ಒಬ್ಬರೊಬ್ಬರ ಮೇಲೆ ಬಿದ್ದು ॥೭೯॥

.... ತಾವೆ ತಿವಿದನು
ಅಬ್ಬರದಲಿ ಹೊಯಿಹೊಯಿದು ।
ಬೊಬ್ಬಿರಿವುತ ಕುದುರೆಯ ತಿವಿದನು
ಸರ್ಬ ದಳವು ಒಕ್ಕಲಿಕ್ಕಿ ॥೮೦॥

ಅಂಗ ....ನು
...............................।
ಸಂಗ್ರಾಮದಿಂದ ಕಾದುತ ಮರಳುತ ಬಂದು
ಬಂಗಾರ ರಾಮನ ಮುಂದೆ ॥೮೧॥

ಮೋಹರಿಸಿದ ಪವುಜಿನ ಮೇಲೆ ಗರ್ಜಿಸಿ
ಆ ಹೊಂ............. ।
.... ನೆಲ್ಲ ಹೊಯಿದಾಗ
ಬೇವಿನ ಲಿಂಗಣ್ಣ ಬಿದ್ದ ॥೮೨॥

ನಿಂದು ಪವುಜಿನ ಮೇಲೆ ಸಂದೇಹವಿಲ್ಲದೆ
ಹಿಂದೆ ಮುಂದೆ ಸವರಿದನು ।
ಸ[ವರಿದ] ವೀರ ರಾಮಯ್ಯ
.... ಯ ತಾ ಬಿದ್ದ ॥೮೩॥

ಹೊಳೆವ ಕುದುರೆಯ ಮೇಲೆ [ತಳು]ವಿಲ್ಲದೇರಿದ
ದಳಪತಿ ರಾಮ ನೋಡೆಂದ ।
ತಳುವಿಲ್ಲದೆ ಖಾನರ ಮೇಲೆ ಹೊಯ್ದಾಗ
ತುಳುವರ ಹರಿಯ ತಾ [ಬಿದ್ದ] ॥೮೪॥

[ಬಿಸಿ] ರಕ್ತವ ಕಂಡು ಹೊಸತಾಗಿ ಹೆಚ್ಚುವ
ವಿಷಕಂಠನ ಕರುಣದಲಿ ।
ವಸುಧೆಪಾಲಕ ರಾಮ ನೋಡೆಂದು ಕವಿದೇರಿ
ಅಗಸರ ಮಾಳ ತಾ ಬಿದ್ದ ॥೮೫॥

.... ರ ಶಿರವ ಕಡಿದನಿವ
ಪರಿವಾರ ತಾ ಬಲವೆನುತ ।
ಹರಿಯ ಕರುಣದ ರಾಮಯ್ಯ ನೀ ನೋಡೆಂದು
ಭರದಿ ಚೌರದ ನಾಗ ಬಿದ್ದ ॥೮೬॥

ತುರಗ ದಳವ ತಾ .... ಗ
ಬಿರಿದುಳ್ಳ ಖಾನರ ತಿವಿದ ।
ಹರನೊಲುಮೆಯು ನಮಗಯ್ತೆಂದೆನುತಲಿ
ಉರಿಗೊಳ್ಳಿ ಲಿಂಗ ತಾ ಬಿದ್ದ ॥೮೭॥

ದಂಡ ತಾ[ಗ]ಲಾಗ ಒಂದಾರು ಭುಜವಾದ
ಕಂಡೆಯವ ..... ಜಳಿಸಿ ಜಡಿದ ।

ಹಿಂಡು ಭೂತವು ತಾವು ಕಡಿದಾಡಿ ಉಣಲೆಂದು
.... ||೮೮||

ತನ್ನ ಕೋಪದಿ ಮೀಸೆಯ ತಿರುವುತ ಬಂದು
ಸನ್ನರ್ದ ಖಾನರ ಕೊಂದು ।
ಉನ್ನತವಹ ಕಾಳಗದಲ್ಲಿ ಹೊಯಿದಾಡಿ
ದೊಣ್ಣೆಯ ವೀರ ತಾ ಬಿದ್ದ ||೮೯||

ಹಮ್ಮಿನಿಂದಲಿ ಬಂದ ಖಾನರ ತಲೆಗಳ
ಸುಮ್ಮಾನದಲಿ ಹೊಯಿದಾಡಿ ।
ಗಮ್ಮನೆ ಗಾಯದಿ ಶ್ರೋಣಿತ ಸುರಿವುತ
ಕೋಮಟಿಗರ ಮಲ್ಲ ಬಿದ್ದ ||೯೦||

ಖಾನರುಗಳು ಮೇಲೆ ಮೂದಲಿಸುತಲಿರೆ
ಕೇಣವಿಲ್ಲದೆ ತರಿದೊಟ್ಟಿ ।
ತ್ರಾಣಗುಂದಿಸಿ ಇಕ್ಕಡಿ ಮಾಡಿ [ಕಡಿವಂಥ]
ನಾವಿದ ಚೆನ್ನ ತಾ ಬಿದ್ದ ||೯೧||

ಗುಂಡು ಸಿಡಿದು ಹೊಗೆ ಹೋದಂತೆ ಖಾನರು
ಖಂಡತುಂಡನೆ ಮಾಡಿ ಹೊಯಿದು ।
ಹಿಂಡು ಖಾನರು ಕವಿದೇರಲು ಬೇಗದಿ
ಮಿಂಡಗುದ್ದಲಿ ಬೊಮ್ಮ ಬಿದ್ದ ||೯೨||

ಲಕ್ಷ ಕುದುರೆಯ ಮೇಲೆ ಹೊಕ್ಕು ತಾ ಕಡಿದಾಡಿ
ಲೆಕ್ಕವಿಲ್ಲದೆ ಕಡಿದೊಟ್ಟಿ ।
ಸಿಕ್ಕಿಸಿಕೊಂಡು ಆ ಖಾನರು ಕಡಿದರೆ
ಅಕ್ಕಸಾಲೆಯ ಮುದ್ದ ಮಡಿದ ||೯೩||

[ದಳಪ]ತಿಗಳ ಮೇಲೆ ಹೊಳೆದು ಏರಿದನಾಗ
ತಳುವದೆ ತರಿತರಿದೊಟ್ಟಿ ।
ತಳುಗುವೆಳಗು ಮಾಡಿ ತಿವಿದುರೆ ಖಾನರ
ಕಳಬಂಟ ದೇಪ ತಾ ಬಿದ್ದ ||೯೪||

ಕಾಳಗವೆಂದರೆ [ಏಳು ಮಡಿಯು ಹೆಚ್ಚಿ]
ಜೋಳಿ ಜೋಳಿಲಿ ತಿವಿದೊಟ್ಟಿ ।
ಕಾಳಗದೊಳು ಖಾನರು ಕವಿದೇರಲು
ಜೋಗೇರ ಕಾಳ ತಾ ಬಿದ್ದ ||೯೫||

ಸಂಗ್ರಾಮವೆಂದರೆ ಹಿಂಗದೆ ಕಲಿಯಹ
ಕಂದ .... ।
ಸಿಂಗಾಡಿಯಲಿ ಕವಿದೆಚ್ಚರೆ ಬೀಳುವ
ಲಿಂಗ ತಾನೊಲಿದು ಮನ್ನಿಸಿದ ॥೯೬॥

ಹಿಂದಣ ಕಾಳಗವೆಂದರೆ ರಣಕಾಗ
ಹೊಂದೊಳನಿಕ್ಕಿ ನಡೆ[ವ]ನು ।
ಬಂದು .... ದೇರಲು
ಸಂದನು ಕಂಬರ ಕಲ್ಲ ಬಿದ್ದ ॥೯೭॥

ಕದನವೆಂದರೆ ತಾನು ಮದವೆದ್ದು ನಡೆವನು
ಸದೆವೆನೆನುತ ಖಾನರನು ।
ಮುದದಿಂದ ಖಾನರ ಕವಿ ....
.........................ಬಿದ್ದ ॥೯೮॥

ವಸುಧೆಯೊಳಗೆ ಹೆಸ[ರ]ಹೆನೆಂದೆನುತಲಿ
ಮುಸುಕಿದ ಮಾರಿಯೆಂದೆನುತ ।
ಶಶಿಧರ ಶಿವ ಬಲ್ಲ ....
.... ॥೯೯॥

(ಇಲ್ಲಿ ಗರಿಗಳು ಕಳೆದಿವೆ)

ಸಂಪಿಗೆ ಶಾವಂತಿಗೆ ಮೊಲ್ಲೆ ಮಲ್ಲಿಗೆ ಜಾಜಿ
ಸೊಂಪುಳ್ಳ ರಾಮನ ತಲೆಗೆ ।
ಕಂಪಿಲ ಸುತನ ರಾಮಯ್ಯನ ತಲೆ ಕಂ
.... ॥೧೪೦॥

.... ಮ ತಲೆ
ಮುಂದುಗೆಟ್ಟಿತು ಪಟ್ಟಣವು ।
ಸಂದುದು ಅಸ್ತಮಾನವು ಕೂಡೆ ಇರುಳಿಗೆ
ಬಂದವು ಅದ್ಭುತಗಳು ॥೧೪೧॥

....
.... ।
ಇಲ್ಲಿ ಇದ್ದರೆ ಪಟ್ಟಣವೆಲ್ಲ ಕೆಡುವುದು
ಎಲ್ಲ ಶಾಸ್ತ್ರಿಕರು ಹೇಳಿದರು ॥೧೪೨॥

ತಲೆ ಹೀಗೆ ಬೊಬ್ಬಿಡುತಿರೆ ರಾಮನ

.... ।
.... ಕೊಟ್ಟು ಕಳಿಹಿರೊ
ಕಲಿವೀರ ರಾಮನ ತಲೆಯ ॥೧೪೩॥

ಎನುತ ಬಿದ್ದನು ಸುರಿತಾಳನು ಆಗಳೆ
ತಮತಮಗೆಲ್ಲ .... ।
....
ಮನೆಗೊಂದು ಕುರಿಯ ॥೧೪೪॥

ಬಿಬ್ಬಿ ತನ್ನರಮನೆಯೊಳಗಿರ್ದ ಪರಿಮಳ
.... ।
....
.... ಮುಂಡಾಡಿದಳು ॥೧೪೫॥

ಹೊನ್ನ ರಾಶಿಯ ತಂದು ಚೆನ್ನರಾಮನ ಮುಂದೆ
ಉನ್ನಂತವಹ ಹರುಷದಲಿ ।
....
ಚೆನ್ನಿಗ ರಾಮ ನೋಡೆಂದ ॥೧೪೬॥

ದೇಶದೊಳುಳ್ಳ ವಸ್ತುವನೆಲ್ಲವ ತಂದು
ರಾಶಿಯನು ಮಾಡಿಸಿ ।
ಭೂಸುರರಿಗೆ ಇತ್ತ [ದಾನ ಧರ್ಮವನು
ಮೀಸರ ಗಂಡ ಬಹನೆಂದು] ॥೧೪೭॥ ೧೨-೨೩೦/...

ಎಂದು ನಿನ್ನಯ ರೂಪನರ್ಚಿಸುವರುಯೆಂದು
ಅಂದವ ಮಿಗೆ ಕೊಂಡಾಡಿ ।
ಅಂದಿನ ದಿನ ಮೊದಲಾಗಿ ನಾ ನಿನಗಾಗಿ
,........................... ॥೧೪೮॥

.... ತಬ್ಬಿಕೊಂಡು ಹೊರಳಿದಳಾಗ
ಘನ ಮೋಹದಿಂದ ಒಟ್ಟೆದಲ್ಲಿ।
ತನುಮನಧನವನು ನಿನಗೆ ಇತ್ತೆನು ರಾಮ
ಎನುತಲಿ ಬಿದ್ದಳು ....,.... ॥೧೪೯॥

.... ತನುಜೆಯ
ಮಾಡಿದ ಕಡು ಚಿಂತೆಯನು ।
ಬೇಡ ಮಗಳೆ ರೂಢಿಯೊಳು ಹಾಸ್ಯಬಹುದೆಂದು

.... ||೧೫೦||

.... ಸುರಹೊನ್ನೆಯ ಮರದಿಂದ
ಕೊಟ್ಟು ಕಳುಹು ಕುಮ್ಮಟಿಕೆ ।
ನೆಟ್ಟನೆ ಕುದುರೆಗಳಂಚೆಗಳನು ಇಕ್ಕಿ
ಕೊಟ್ಟರು ತಲೆಯ... ||೧೫೧||

........................ಯೆಂದು
ದೊರೆದೊರೆಗಳು ಕೇಳಿದರು ।
ಪುರ ಬೆದರಿತು ಸುರಿತಾಳ ಕಪ್ಪವ ತೆತ್ತ
ಮರಳಿ ಇಲ್ಲಿಗೆ ಕಳುಹಿದನು ||೧೫೨||


ಕೊಂಡು ....
.........................।
ದಂಡೆ ಪುದಿಸಿ ಕಸ್ತುರಿಗಳ ದಂಡೆಯ
ಹಿಂಡೆ ಲೇಪವ ಕಳುಹಿದರು ||೧೫೩||

ಸುರಭಿ ಪಸುರ ಚರ ಸುರಬಂಗದಾಹನನೆ
.... ।
ಸುರಭಿ .... ಕಾಂತೇಶ
ಸುರಭಿಯೊಕ್ಕದಿ ಕಾಂತೇಶ ||೧೫೪||

ಅಂತು ಸಂಧಿ ೧೦ಕ್ಕಂ ಪದನು ೧೮೧೨(>೧೭೫೭)ಕ್ಕಂ ಮಂಗಳ ಮಹಾಶ್ರೀ*

❖❖

* +............ಳು ಧೂ । ಅರಿತು ಬರದವರಿಗೆ ಹರಿತು ಬರದವರಿಗೆ ದುರಿತಗಳಾ । ಸಂಹರಿಸುವ ಕಂಣ್ವಪುರಗೋಪ ಕುಲ್ಲಾಪುರ ....ನ ಚಾರಿತೆಯ ಪಸ್ತುಕಾ ಸಂಪೂರ್ಣ ಮಹಾಶ್ರೀ ಕೊಲ್ಲಂಪುರದು ಮುಕಾಂಭೆಕೆಯಂಮನವರ ಶ್ರೀ ಚೆರಣಾಂಧವೆ ಗತಿ ಶ್ರೀಶ್ರೀಶ್ರೀ .... ಬರದು ಮುಗಿಯಿತ್ತು, ಯಿಂತ್ತಿ ಪಸ್ತುಕಕೆ ಸುಭವಸೂ । ಪುಸ್ತಕ ಹೆಗ್ಗರೆಯ ಯಲ್ಲನಾಯಕ ಪಸ್ತುಕಕೆ ಸುಭಮಸ್ತು ರಾಮ ....(ಮೂ)



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ

ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ – ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ : 97390 67359